ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕಾದಂಬರಿ

ಡಾ. ಕೆ. ಶಿವರಾಮ ಕಾರಂತ

# ಮೂಕಜ್ಜಿಯ ಕನಸುಗಳು



ಸಪ್ನ

ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕಾದಂಬರಿ

# ಮೂಕಜ್ಜಿಯ ಕನಸುಗಳು

ಡಾ. ಕೆ. ಶಿವರಾಮ ಕಾರಂತ

ವಿತರಕರು :

ಸಪ್ನ ಬುಕ್ ಹೌಸ್®

3ನೇ ಮುಖ್ಯ ರಸ್ತೆ, ಗಾಂಧಿನಗರ, ಬೆಂಗಳೂರು - 560 009
ದೂರವಾಣಿ : 40114455

**Mookajjiya Kanasugalu** : A novel in Kannada by **Dr. K. Shivarama Karanth** and published by Deepak S. Shah on behalf of **SBS Publishers' Distributors,** Railway Parallel Road, K.P. East, Bangalore - 01.

ISBN : 81-7285-062-X

**ಹಕ್ಕುಗಳು : ಶ್ರೀಮತಿ ಬಿ. ಮಾಲಿನಿ ಮಲ್ಯ**

| | | |
|---|---|---|
| ಪ್ರಥಮ ಮುದ್ರಣ | : | 1968 |
| ಇತ್ತೀಚಿನ ಮುದ್ರಣ | : | ಏಪ್ರಿಲ್, 2009 |
| ಒಂದನೇ ಮುದ್ರಣ | : | ಜುಲೈ, 2009 |
| ಎರಡನೇ ಮುದ್ರಣ | : | ನವೆಂಬರ್, 2009 |
| ಮೂರನೇ ಮುದ್ರಣ | : | ಮಾಚ್, 2010 |
| ನಾಲ್ಕನೇ ಮುದ್ರಣ | : | ಸೆಪ್ಟೆಂಬರ್, 2010 |
| ಐದನೇ ಮುದ್ರಣ | : | ಜನವರಿ, 2011 |
| ಆರನೇ ಮುದ್ರಣ | : | ಮಾರ್ಚ್, 2011 |
| ಏಳನೇ ಮುದ್ರಣ | : | ಜುಲೈ, 2011 |
| ಎಂಟನೇ ಮುದ್ರಣ | : | ಅಕ್ಟೋಬರ್, 2011 |
| ಒಂಬತ್ತನೇ ಮುದ್ರಣ | : | 2012 |
| ಹತ್ತನೇ ಮುದ್ರಣ | : | ಮಾರ್ಚ್, 2012 |
| ಹನ್ನೊಂದನೇ ಮುದ್ರಣ | : | ಜೂನ್, 2012 |
| ಹನ್ನೆರಡನೇ ಮುದ್ರಣ | : | ಅಕ್ಟೋಬರ್, 2012 |
| ಹದಿಮೂರನೇ ಮುದ್ರಣ | : | 2013 |
| **ಹದಿನಾಲ್ಕನೇ ಮುದ್ರಣ** | : | **ಫೆಬ್ರವರಿ, 2013** |

ಪುಟಗಳು **:viii + 272 = 280**

| | | |
|---|---|---|
| **ಪ್ರಕಾಶಕರು** | : | ಎಸ್‌ಬಿಎಸ್ ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್<br>ರೈಲ್ವೆ ಪ್ಯಾರಲಲ್ ರೋಡ್, ಕುಮಾರ ಪಾರ್ಕ್ ಈಸ್ಟ್<br>ಬೆಂಗಳೂರು - 560 001, ದೂರವಾಣಿ : 22268956 |
| **ಅಕ್ಷರ ಜೋಡಣೆ** | : | **ಡೇಟಾ ಲಿಂಕ್, ಬೆಂಗಳೂರು** |
| **ಮುದ್ರಣ** | : | **ಪ್ರಿಂಟೆಕ್ ಪ್ರಿಂಟರ್ಸ್, ಬೆಂಗಳೂರು** |

# ಮುನ್ನುಡಿ

ಮನೋಜೀವಿಯಾದ ಮಾನವ ಕುಲವು ಈ ಭೂಮಿಯ ಮೇಲೆ ನೆಲೆಸಿದ ಅಲ್ಪಾವಧಿಯಲ್ಲಿ ಅಮಿತ ವಿಶ್ವಗಳಿಂದ ಕೂಡಿರುವ, ಬಿಲಿಯಗಟ್ಟಲೆ ವರ್ಷಗಳಿಂದ ಕಾಣಿಸಿಕೊಂಡು ಬಂದ ಮಹಾ ಮಹಾ ಜಗತ್ತಿನ ಬರಿಯ ಸೆರಗೊಂದರ ಸೂಕ್ಷ್ಮ ಎಳೆಯನ್ನು ಕೂಡ ಚೆನ್ನಾಗಿ ಕಂಡಿರಲಾರದು. ಆದರೆ ಆತ ತನ್ನ ಅಲ್ಪಮತಿಗೆ ಗೋಚರಿಸಿದ ಅದ್ಭುತ, ಆಶ್ಚರ್ಯಗಳಿಂದ ಚಕಿತಗೊಂಡು - ಈ ಜಗತ್ತೇನು? ಯಾರು ಅದನ್ನು ಸೃಷ್ಟಿಸಿದರು, ಯಾಕೆ, ನಾನು ಎಂಥವ, ಯಾತಕ್ಕಿದ್ದೇನೆ - ಎಂಬ ಪ್ರಶ್ನೆ ಕೇಳತೊಡಗಿದ. ಬರಿದೆ ಪ್ರಶ್ನೆ ಕೇಳಿದರೆ ಸಾಲದಲ್ಲ; ತನ್ನ ಎಟುಕಿಗೆ ಸಿಗದಂಥ ವಿಷಯವನ್ನು ಸಿಕ್ಕಿದಂತೆಯೇ ನೆನೆದು, ಮನಸ್ಸನ್ನು ಕಲ್ಪನಾಲೋಕಕ್ಕೆ ಹರಿಯಗೊಟ್ಟು, ಅಲ್ಲಿ ಕಂಡ ಕನಸನ್ನು ನಿಜ, ಸತ್ಯ ಎಂದು ಸಾರುತ್ತಲೂ ಬಂದ!

ಅವರವರ ಕಲ್ಪನೆ ಎಷ್ಟೆಷ್ಟು ಬೆಡಗಿನದೋ, ಭವ್ಯವೋ, ಅದರ ಮೇಲಿಂದ ಅವರು ಹೇಳಿದ್ದೇ ಸತ್ಯವೆನಿಸಿತು. ಅಷ್ಟೊಂದು ವಿಸ್ತಾರಕ್ಕೆ ಕಲ್ಪನೆಯನ್ನು ಬೆಳೆಯಿಸಲಾರದವರು, ಅಂಥದನ್ನು ಮೂಕ ಮೌನದಿಂದ ಹಿರಿಯರಾಡಿದ ಒಂದೊಂದು ಸೊಲ್ಲೂ ಅಕ್ಷರಶಃ ಸತ್ಯವೆಂದೂ ತಿಳಿದು, ನಂಬಿ ಬಂದರು. ಸಾವಿರ ಜನರು ಸಾವಿರ ಬಗೆಗಳಿಂದ ಹರಿಯಿಸಿದ ಈ ಕಲ್ಪನಾವಿಲಾಸಗಳು ಪರಸ್ಪರ ಘರ್ಷಣೆಗೆ ಕಾರಣವಾದುದೂ ಉಂಟು.

ಭಾರತ ದೇಶ, ಇಲ್ಲಿಯೇ ಇದ್ದ ಜನರು, ಆಮೇಲೆ ಬಂದ ಜನರು ಸಹ ಇದಕ್ಕೆ ಆಕ್ಷೇಪವಲ್ಲ. ಇಲ್ಲಿನ ಜನರು ಪರಂಪರೆಯಿಂದ ಪಡೆದು ಬಂದ ಕಲ್ಪನಾವಿಲಾಸಗಳನ್ನು ಈ ಕಾದಂಬರಿಯ ಮೂಕಜ್ಜಿ ತನ್ನ ಕಲ್ಪನಾವಿಲಾಸದಿಂದ ಕೆದಕಿ ನೋಡುತ್ತಿದ್ದಾಳೆ.

ಈ ಕಾದಂಬರಿಗೆ ಕಥಾನಾಯಕನಿಲ್ಲ; ನಾಯಕಿಯಿಲ್ಲ. ಮೂಕಜ್ಜಿಯೂ ಇಲ್ಲಿ ಕಥಾನಾಯಕಿಯಲ್ಲ. ಸಾಂಪ್ರದಾಯಿಕತೆಯಿಂದ ಹೆರೆಗಟ್ಟಿದ ಮನಸ್ಸುಗಳನ್ನು ತುಸು ತುಸುವಾಗಿ ಕಾಯಿಸಿ, ಕರಗಿಸುವ ಕೆಲಸ ಅವಳದ್ದು. ಅಂಥ ಅಜ್ಜಿಯೊಬ್ಬಳು ಇದ್ದಾಳೆಯೇ ಎಂಬ ಸಂಶಯ ಬಂದರೆ, ನಮ್ಮ ಸಂಸ್ಕೃತಿಯ ನಂಬಿಕೆಗಳ ಕುರಿತಾದ ಸಂಶಯ ಪಿಶಾಚಿಯ ರೂಪವೇ ಅವಳೆಂದು ತಿಳಿದರಾಯಿತು. ಆದರೂ ಅವಳು ನಮ್ಮಲ್ಲನೇಕರಲ್ಲಿ ಪಿಶಾಚಿಯಂತಲ್ಲ, ಪ್ರಾಮಾಣಿಕ ಸಂದೇಹಗಳ ರೂಪದಲ್ಲಿ ಬದುಕಿಕೊಂಡೇ ಇದ್ದಾಳೆ. ಅವಳ ದೊಮ್ಮಗನಾದ ಸುಬ್ಬರಾಯನಂಥವರು ಹಲವರಿದ್ದಾರೆ.

ಆ ಅಜ್ಜಿ, ಮೊಮ್ಮಗ್ರ ಇಬ್ಬರೂ ಸೇರಿ ನಾಲ್ಕೈದು ಸಾವಿರ ವರ್ಷಗಳಿಂದ ಹರಿದು ಬಂದಿರುವ 'ಸೃಷ್ಟಿಸಮಸ್ಯೆ'ಯೊಂದನ್ನು ಮಥಿಸಲು ಇಲ್ಲಿ ಯತ್ನಿಸುತ್ತಾರೆ. ಅವಾಸ್ತವಿಕಳೆನಿಸುವ ಅಜ್ಜಿ, ಅನೇಕ ವಾಸ್ತವಿಕ ಇತಿಹಾಸಾಂಶಗಳನ್ನು ತನ್ನ ಒಳದಿಳಿವಿನಿಂದ ನಮ್ಮ ಮುಂದಕ್ಕೆ ಇರಿಸುತ್ತಾಳೆ.

ಕಾದಂಬರಿಯ-ನಾಗಿ, ರಾಮಣ್ಣ, ಜನ್ನ ಮೊದಲಾದವರು ಸೃಷ್ಟಿ ಶಕ್ತಿಯನ್ನು ಅವಹೇಳನ ಮಾಡುವ ಮನೋಧರ್ಮಕ್ಕೆ ವಾದಿಗಳೋ, ಪ್ರವಾದಿಗಳೋ, ಸಾಕ್ಷಿದಾರರೋ ಆಗಿ ಕಾಣಿಸುತ್ತಿದ್ದಾರೆ.

ತಂತಮ್ಮ ಅಪಕ್ವ ನಂಬುಗೆಗಳನ್ನು ಪರರ ಮೇಲೆ ಹೊರಿಸಿದ ಜನರ ಕಥೆಯೂ ಇಲ್ಲಿದೆ; ಅದರಿಂದಾಗಿ ಇಂದಿನ ನಮಗೆ ಕೇಳಿಸದೆ ಹೋದ ಕೆಲವು ಯಾತನೆಯ ಧ್ವನಿಗಳನ್ನೂ ಕೇಳುವಿರಂತೆ.

ಅಕ್ಟೋಬರ್ 10, 1968 — ಇತಿ

ಪುತ್ತೂರು, ದ.ಕ. — ಡಾ ॥ ಶಿವರಾಮ ಕಾರಂತ

# ಮರು ಮುದ್ರಣಕ್ಕೆ ಮುನ್ನುಡಿ

ಮರು ಮುದ್ರಣಗಳಿಗೆ ಇಂದು ನನ್ನ ಹಲವಾರು ಬರಹಗಳ ಸಲುವಾಗಿ ಮುನ್ನುಡಿ ಬರೆಯಬೇಕಾಗಿ ಬಂದಿದೆ. ಕಳೆದ ವರ್ಷ ನನ್ನ ಲಂಡನ್ನಿನ ಮಿತ್ರರೊಬ್ಬರು 'ನಿಮ್ಮ ಯಾವತ್ತು ಬರಹಗಳ ಪ್ರತಿ ಒದಗಿಸಿ' ಎಂದು ಕೇಳಿದರು. ಆಗ ಅಚ್ಚಾದ ನನ್ನ ಬರಹಗಳನ್ನು ನಾನೇ ಹುಡುಕಬೇಕಾಯಿತು; ಮುದ್ರಣ ಮುಗಿದ ಬರಹಗಳ ಕ್ಸೆರೋಕ್ಸ ಪ್ರತಿ ಮಾಡಿ ಅವರಿಗೆ ಒದಗಿಸಲು ಐದು ಸಾವಿರ ರೂಪಾಯಿಗಳನ್ನು ವ್ಯಯಿಸಿದೆ.

ಇದೇ ವರ್ಷದ ಆರಂಭದಲ್ಲಿ ಬೆಳಗಾವಿಯ ಸಾಹಿತ್ಯಾಭಿಮಾನಿಗಳು ನನ್ನವೇ ಆದ ಪುಸ್ತಕಗಳನ್ನು ಪ್ರದರ್ಶನಕ್ಕೆ ಇರಿಸಿದ್ದನ್ನು ನೋಡಿದೆ. ಅವರು 200 ಬರಹಗಳ ಪಟ್ಟಿಯಲ್ಲಿ, ನೂರು ಬರಹಗಳನ್ನು ಪ್ರದರ್ಶಿಸಿದ್ದರು. ನನ್ನ ಬರಹಗಳ ಪಟ್ಟಿಯಲ್ಲಿ ಅಚ್ಚು ಮುಗಿದ ಪುಸ್ತಕಗಳೇ ನೂರಕ್ಕಿಂತ ಹೆಚ್ಚಾಗಿ ಇದ್ದವು.

ಇಂದು ಪ್ರಕಾಶಕರೂ ಕೂಡ ಲೇಖಕನ ಬೆಂಬಲಕ್ಕೆ ಬರುವ ಸ್ಥಿತಿ ಇಲ್ಲ. ನನ್ನೊಬ್ಬರು ಮಿತ್ರರು, ನನ್ನೆಲ್ಲ ಬರಹಗಳನ್ನು ಹೊರತರಲು ಕಂಕಣಬದ್ಧರಾದರು. ಮೂರು ವರ್ಷಗಳಲ್ಲಿ ಮೂರು ಕಾದಂಬರಿಗಳು ಅಚ್ಚಾದವು. ಅವುಗಳು ವಿಕ್ರಯಗೊಂಡುದು ಮಾತ್ರ - ಹತ್ತರ ಸಂಖ್ಯೆಯಲ್ಲಿ!

ಹೀಗಿರುತ್ತ - ಬೆಂಗಳೂರಿನ ಸಪ್ನಾ ಪುಸ್ತಕಾಲಯದವರು - ಇಂಗ್ಲೀಷ್ ಭಾಷೆಯ ಬಲು ಸಮೃದ್ಧ ಪುಸ್ತಕಾಲಯವನ್ನು ತೆರೆದು, ಕನ್ನಡದ ಅಪೂರ್ವ ಕೃತಿಗಳನ್ನು ಪ್ರದರ್ಶಿಸಿದಾಗ ಅವರ ಸಾಹಸವನ್ನು ಮೆಚ್ಚಿಕೊಂಡೆ. 'ನಿಮ್ಮ ಕಾದಂಬರಿಗಳನ್ನೋ, ಇತರ ಬರಹಗಳನ್ನೋ ನಾವು ಅಚ್ಚು ಹಾಕಿಸುತ್ತೇವೆ' ಎಂದರು. 'ಆಗಲಿ' ಎಂದೆ. ನನ್ನ ಪಾಲಿಗಂತು ಹಿಂದಿನ ಎಲ್ಲ ಪ್ರಕಾಶಕರೂ ಸದುದ್ದೇಶದಿಂದ ನನ್ನ ಬರಹಗಳನ್ನು ಅಚ್ಚು ಹಾಕಿಸಿದರೂ, ಆ ಪುಸ್ತಕಗಳನ್ನು ಕೊಳ್ಳುವವರ ಸಂಖ್ಯೆ ಏನೇನೂ ಆಶಾದಾಯಕವಾಗಿರಲಿಲ್ಲ.

ಹಾಗೆಂದು, ಕನ್ನಡದಲ್ಲಿ ಓದುಗರ ಸಂಖ್ಯೆ ಕಡಿಮೆಯೇ? ತರಂಗ, ಸುಧಾ, ಕಸ್ತೂರಿಯಂತಹ ನಿಯತಕಾಲಿಕಗಳು ಲಕ್ಷ, ಲಕ್ಷ ಪ್ರತಿಗಳನ್ನು ಅಚ್ಚು ಹಾಕಿಸುತ್ತಿವೆ. ಹೊಸ, ಹೊಸ ಬರಹಗಾರರೂ, ಸಾಹಿತಿಗಳೂ ಬರುತ್ತಲೇ ಇದ್ದಾರೆ.

ಆದರೆ - ತನ್ನ ಬರಹವನ್ನು ಸಾಹಿತಿ ನಂಬಿ ಬದುಕುವ ಕಾಲ ಬಂದಿದೆ - ಎಂದು ಎಣಿಸಿದ ನನಗೆ, ಬಂದಿಲ್ಲ ಅನಿಸುತ್ತಿದೆ. ಪ್ರಾಯಶಃ ವಯಸ್ಸಾದ ಬರಹಗಾರರು ಕನ್ನಡ,

ಕನ್ನಡ ಎಂದು ಬದುಕುವ ಕಾಲ ಒಬ್ಬಿಬ್ಬರ ಪಾಲಿಗೆ ಬಂದಿರಬಹುದು. ಬಹು ಮಂದಿ ಸ್ವತಂತ್ರ ಲೇಖಕರ ಪಾಲಿಗೆ ಅದು ಬಂದಿಲ್ಲ.

ಕನ್ನಡಿಗರ ಬರಹ ಅನ್ಯ ಭಾಷೆಗಳಲ್ಲಿ ಅಚ್ಚಾದರೆ ಪ್ರಾಯಶಃ ಮಲಯಾಳಮಿನ ಹೊರತು ಅನ್ಯರು ಬರಹಗಾರರ ಹಕ್ಕನ್ನು ಮನ್ನಿಸಲು ಕಲಿತೇ ಇಲ್ಲ.

ಇಂತಹ ಪರಿಸ್ಥಿತಿಯಲ್ಲಿ ಸಪ್ನಾ ಪುಸ್ತಕಾಲಯದವರು 'ನಿಮ್ಮ ಬರಹಗಳನ್ನು ಅಚ್ಚು ಹಾಕುವೆವು' ಎಂದಾಗ 'ನಿಮ್ಮ ಅದೃಷ್ಟ' ಎಂದು ಒಪ್ಪಿದ್ದೇನೆ. ಕನ್ನಡ, ಕನ್ನಡ - ಚಳುವಳಿಯ ಕೂಗು, ಅದರ ವ್ಯವಸಾಯಿಗಳಿಗೆ ಪೋಷಣೆ ಕೊಡಲಾರದೆ ಹೋದರೂ ಭಾಷಣಗಳಿಗೆ, ಭಕ್ತಿ ಸಮರ್ಪಣೆಗೆ, ಬೇಕಷ್ಟು ಬೆಂಬಲ ಕೊಡುತ್ತಿದೆ.

ನಮ್ಮ ನಾಡಿನಲ್ಲಿ, ಇಡಿಯ ಭಾರತದಂತೆ ಹೊಸ, ಹೊಸ ಜನರು ಜನಿಸುತ್ತಲೇ ಇದ್ದಾರೆ. ಜನಿಸಲೇ ಬೇಕು. ಆದರೆ, ಅವರ ಅನ್ನ ಕನ್ನಡ ಬರಹಗಳಿಂದ ಸಿಗಬೇಕಾಗಿಲ್ಲವೋ ಏನೋ!

ಎಸ್.ಬಿ.ಎಸ್. ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್ - ಈ ಪ್ರಕಾಶಕರು, ಕನ್ನಡ ಭಕ್ತಿಯ ಮಹಾಪೂರದ ಲಾಭ ಪಡೆಯುವರಾದರೆ - ಹಳೆಗನ್ನಡಕ್ಕಲ್ಲವಾದರೂ, ಹಳೆಯ ಕನ್ನಡ ಲೇಖಕರಿಗೆ ಒಂದಿಷ್ಟು ನೆಮ್ಮದಿ ದೊರೆತೀತು.

5-2-1991 ಇತಿ

ಸಾಲಿಗ್ರಾಮ. ದ. ಕ ಡಾ। ಶಿವರಾಮ ಕಾರಂತ

# ಅಧ್ಯಾಯ 1

ಕಥೆಗಳನ್ನು ಕೇಳುವುದೆಂದರೆ ಪ್ರತಿಯೊಬ್ಬರಿಗೂ ಇಷ್ಟವೇ. ಅದನ್ನು ಓದುವುದರಲ್ಲಿ ಅನೇಕ ವಿದ್ಯಾವಂತರು ಸಮಯ ಕಳೆಯುತ್ತಾರೆ. ಬರೆದ ಕಥೆಗಳಲ್ಲಿ ಬರೆದಾತನ ಹೆಸರೂ ಇರುತ್ತದೆ. ಕಥೆ ಬರೆದು, ಬರೆದು ಅವನಿಗೆ ಒಂದಿಷ್ಟು ಪ್ರಸಿದ್ಧಿ ಬಂದಿತಾದರೆ, ಅವನು ಹೇಳಿದ್ದೆಲ್ಲ ವೇದವಾಗುತ್ತದೆ. ನಾನೂ ಒಬ್ಬ ವಿದ್ಯಾವಂತನೇ. ಅಂದರೆ, ಶಾಲೆಗೆ ಹೋದವನು; ಕಾಲೇಜಿನ ಹೊಸ್ತಿಲನ್ನೂ ಒಂದಿಷ್ಟು ತುಳಿದು ಬಂದವನು. ನನ್ನ ಎಳೆತನದಲ್ಲಿ ಸಾಕಷ್ಟು ಕಥೆ ಓದಿದ್ದೇನೆ. ಓದುವಾಗ ಕಿವಿ ನಿಮಿರುತ್ತಿತ್ತು. ಅದು ಬತ್ತೀಸ ಪುತ್ಥಲಿ ಕಥೆಯಾದರೂ ಸರಿಯೆ; ಯಮಯಾಮಿನಿ ಕಥೆಗಳಾದರೂ ಸರಿಯೆ, ಮನಸ್ಸಿಗೆ ಸಂತೋಷವಾಗುತ್ತದೆ. ಓದುತ್ತಿದ್ದಷ್ಟು ಕಾಲ, ಆಮೇಲೆ ನೆನಪು ಉಳಿದಷ್ಟು ಸಮಯ, ಆ ಕಥೆಯ ಪಾತ್ರಗಳು, ಘಟನೆಗಳು, ಅದ್ಭುತಗಳು, ಆಶ್ಚರ್ಯಗಳು ನಮ್ಮ ತಲೆಯಲ್ಲಿ ಸುಳಿಯುತ್ತಲೇ ಇರುತ್ತವೆ. ಆ ನೆನವರಿಕೆಯಲ್ಲಿ ಊಟಕ್ಕೆ ಕುಳಿತರೆ ಬಡಿಸಿದ್ದೂ ತಿಳಿಯುವುದಿಲ್ಲ! ಉಂಡದ್ದೂ ಗೊತ್ತಾಗುವುದಿಲ್ಲ. ಮನಸ್ಸು ಕಥೆಯಲ್ಲೇ ತೇಲಿ, ಮುಳುಗುವುದರಿಂದ ಹೀಗಾಗುವುದು ಸಹಜ. ಅನಂತರ, ಓದಿದ ಕತೆಗಳ ವಿವರ ಮರವೆಯಾಗುತ್ತ ಸರಿದಂತೆ, ಕೆಲವಾದರೂ ಮುಖ್ಯ ಪ್ರಶ್ನೆಗಳು ಕಾಡತೊಡಗುತ್ತವೆ, ಮನಸ್ಸನ್ನು. "ಸೂಸಮ್ಮ ಸೂಸಮ್ಮ ಬಾಗಿಲು ತೆರೆ" ಅಂದರೆ ಗವಿಯ ಬಾಗಿಲು ತೆರೆಯುವುದು ಸಾಧ್ಯವೇ? ಆಲಿಬಾಬ ನಿಜಕ್ಕೂ ಇದ್ದನೇ? ಇಲ್ಲ; ಆ ಒಂದು ಗುಹೆಯು ಬಾಗಿಲನ್ನಲ್ಲಾಡಿಸಿ ಮಾತನಾಡಿದ್ದು ನಿಜವೇ? ಮಂತ್ರವಾದಿ ಕಲ್ಲನ್ನು ಕೈಯಲ್ಲಿ ಹಿಡಿದು ಮಾಟ ಮಾಡಿದರೆ ಕಲ್ಲಿನ ಬದಲು ವಜ್ರ ಕಾಣಿಸುವುದು ಶಕ್ಯವೇ? ಇಂಥ ಸಂಶಯಗಳು ಹುಟ್ಟಿಕೊಳ್ಳುತ್ತವೆ. "ಅಲ್ಲ, ಅದು ಅಸಾಧ್ಯ" ಎಂಬ ಪ್ರಾಯ ಆಗ ನನ್ನದಾಗಿರಲಿಲ್ಲ. ಆದರೆ, ಹಾಗೆ ಅನ್ನಬೇಕು ಎಂದು ಕಾಣಿಸುವುದೂ ಸಾಧ್ಯವಿರಲಿಲ್ಲ. ಹಿರಣ್ಯಕಶಿಪು ಕಂಬಕ್ಕೆ ಒದೆಯನ್ನು ಕೊಟ್ಟಾಗ ನರಸಿಂಹ ಬಂದದ್ದು-ಅಲ್ಲ-ಎನ್ನಲೇ? ಧ್ರುವ ನೆಟ್ಟಗೆ ನಕ್ಷತ್ರಲೋಕಕ್ಕೆ ಹೋದದ್ದು ಅಲ್ಲ ಎನ್ನಲೇ? ದೇವರು ಅವನಿಗೆ ವರವನ್ನು ಕೊಡಲಿಲ್ಲ ಅನ್ನಲೇ? ದೂರ್ವಾಸರಂಥ ಮಹಾಋಷಿಗಳು ಶಾಪವನ್ನು ಕೊಡಲಿಲ್ಲ, ಕೊಟ್ಟರೂ ಹಾಳಾಗಲಾರದು ಎನ್ನಲೇ? ಈ ಪುರಾಣ ಕತೆಗಳೆಲ್ಲವೂ ಸುಳ್ಳಲ್ಲವಾದರೆ, ಬತ್ತೀಸಪುತ್ಥಲಿ, ಆಲಿಬಾಬಾ,

ಅಷ್ಟೇ ಅಲ್ಲ, ಅಂಗಳ ದುಗ್ಗುವಿನಂಥ ಕಥೆಗಳು ಯಾತಕ್ಕೆ ಸುಳ್ಳಾಗಿ ಕಾಣಿಸಬೇಕು - ಎಂಬ ಮನಸ್ಸಿತ್ತು ನನ್ನದು.

ಮುಂದೆ ನಾನು ಒಂದಿಷ್ಟು ಹೆಚ್ಚಿಗೆ ಓದಿಕೊಂಡೆ, ಆಚೆ, ಈಚೆ ನಡೆಯುತ್ತಿರುವುದನ್ನು ಕಂಡೆ. ಕಂಡದ್ದು ಹೆಚ್ಚಾದಂತೆ - ಇಂಥ ಕತೆಗಳನ್ನು ನಂಬಿದರೆ ನಷ್ಟವಿಲ್ಲ - ಎಂದು ಕಾಣಿಸಿತು. ಅವಕ್ಕಿಂತ ಹೆಚ್ಚಿನ ಚಮತ್ಕಾರ ನಮ್ಮ ಊರು ಮನೆಗಳಲ್ಲೇ ನಡೆಯುತ್ತದೆ. ಒಂದೆರಡು ಹೆಸರುಗಳನ್ನು ಹೇಳುತ್ತೇನೆ. ಹೇಳಿದರೆ, ಅದೇ ಹೆಸರಿನವರು ಇದ್ದರು - ಎಂದು ನೀವು ತಿಳಿಯದಿದ್ದರಾಯಿತು. ನಮ್ಮ ಊರಿನ ಸಮೀಪದ ತಿಪ್ಪಯ್ಯನವರು ಗೊತ್ತು. ಗುರುತಿನ ವಿಧವೆಯರಿಗೆ ಸುಳ್ಳುಪಳ್ಳು ಹೇಳಿ ಹೇಳಿ, ಭರವಸೆ ಕೊಟ್ಟು ಅವರ ಆಸ್ತಿಪಾಸ್ತಿಗಳನ್ನು ನುಂಗಿದರಂತೆ. ಅವರು ತುಂಬ ಶ್ರೀಮಂತರಾಗಿರುವುದು ನಿಜ. ದುಡಿದದ್ದನ್ನು,ಮಾಡಿದ್ದನ್ನು ಕಾಣೆ. ಅವರ ಒಕ್ಕಲು ಹುಡುಗನೊಬ್ಬ ಅವರ ಹಿತ್ತಿಲಿಂದ ಮಾವಿನಮಿಡಿಯೊಂದನ್ನು ಕದ್ದಾಗ ಅವನನ್ನು ಕಂಬಕ್ಕೆ ಬಿಗಿಯಿಸಿ, ಬಾರು ಕೋಲಿನಿಂದ ಹೊಡೆಸಿದರಂತೆ. ವಿಧವೆಯರ ಆಸ್ತಿ ನುಂಗಿದಷ್ಟೇ ನಿಜ, ಇದೂ. ನನ್ನ ತಾರುಣ್ಯದಲ್ಲಿ ಕೇಳಿದ್ದೇನೆ ಈ ಕತೆಗಳನ್ನು. ಅದನ್ನು ಕೇಳಿದಾಗ ನಂಬಲಾಗದ ಒಂದೆರಡು ವಿಷಯಗಳು ಮಾತ್ರ ನನ್ನನ್ನು ಕಾಡುತ್ತಿದ್ದುವು. ನಮ್ಮ ಊರಿನ ಸುತ್ತುಮುತ್ತಿನಲ್ಲಿ ಹಲವರು ಹಿರಿಯರಿದ್ದಾರೆ; ಮರ್ಯಾದೆವಂತರಿದ್ದಾರೆ. ಅವರೆಲ್ಲರೂ ಯಾಕೆ ತೆಪ್ಪಗೆ ಅದನ್ನೆಲ್ಲ ಕಂಡು ಕುಳಿತರೆಂಬುದು ಅರ್ಥವಾಗುವುದಿಲ್ಲ. ಅಷ್ಟೇ ಅಲ್ಲ, ತಿಪ್ಪಯ್ಯನವರು ತಮ್ಮ ಮನೆಗೆ ಬಂದರೆ, "ಸ್ವಾಮಿ, ತಾವು ಬಂದದ್ದು ಭಾಗೀರಥಿಯೇ ಬಂದ ಹಾಗಾಯಿತು" ಎಂದೆನ್ನುತ್ತಿದ್ದರು. ಯಾಕೆ ಅನ್ನುತ್ತಿದ್ದರು?

ನಾನು ನಮ್ಮಜ್ಜಿಗೆ ಇದೇ ಪ್ರಶ್ನೆಯನ್ನು ಕೇಳಿದ್ದೆ ನನ್ನ ಚಿಕ್ಕಂದಿನಲ್ಲಿ. ತಿಪ್ಪಯ್ಯನವರ ವಿಚಾರದಲ್ಲಿಯೇ ಕೇಳಿದ್ದೆ. ಅವರು ಮಾತ್ರ "ಅವನನ್ನು ಸುಡು, ಅವನ ಹೆಸರು ಕೇಳಿದರೆ ಮಿಂದು ಬರಬೇಕು" ಎಂದಿದ್ದರು. ಅಂಥವರು ಒಬ್ಬರಾದರೂ ನಮ್ಮ ಮನೆಯಲ್ಲೇ ಇದ್ದಾರಲ್ಲ - ಎನಿಸಿತ್ತು ನನಗೆ.

ಇನ್ನೊಮ್ಮೆ ನಮ್ಮ ಊರಲ್ಲಿ ಒಂದು ರಾತಾರಾತ್ರಿ ಖೂನಿ, ದರೋಡೆಗಳಾದುವು. ತಿಪ್ಪಯ್ಯನವರ ದಾಯವಾದಿಗಳಲ್ಲೊಬ್ಬರ ಮನೆಯನ್ನು ಸುಟ್ಟರು; ಸೂರೆ ಮಾಡಿದರು. ಅವರು ಊರಲ್ಲಿರಲಿಲ್ಲ. ಆ ವೇಳೆಗೆ, ಕಾಶಿಗೆ ಹೋಗಿದ್ದರು. ಅವರು ಇರುತ್ತಿದ್ದರೆ ಅವರಿಗೂ ಮನೆ ಕಾವಲಿನ ಸುಬ್ಬನ ಗತಿಯೇ ಬರುತ್ತಿತ್ತು. ಆ ಸುಬ್ಬ ದರೋಡೆಗೆ ಬಂದವರನ್ನು ಬಿಡಲಿಲ್ಲ. ಬಂದವರ ಧ್ವನಿಯಿಂದ ಅವರು ಯಾರೆಂಬುದನ್ನು ಗುರುತಿಸಿದ; ಕೂಗಿದ ; ಆಟಕಾಯಿಸಿದ. ಅವನನ್ನೇ ಕೊಂದರು. ಅವನ ಮಗ್ಗುಲಿಗೆ ಮಲಗಿದ್ದ ಅವನ ಹುಡುಗ ಹೆದರಿ ಓಡಿಹೋದ. ಅವನು ಈ ಯಾವತ್ತು ಅನ್ಯಾಯವನ್ನು ಕಂಡಿರಬೇಕು. ಅವನು

ಮಾತ್ರ ಒಡೆಯರು ಊರಿಗೆ ಬರುವ ತನಕವೂ ಅಡಗಿಕೊಂಡೇ ಇದ್ದ. ಇದಾದ ಮೂರು ದಿನಗಳ ಮೇಲೆ ಯಾತ್ರೆಗೆ ಹೋದ ಮನೆಯವರು ಬಂದರು. ಆಗ ಆ ಹುಡುಗ ಅವರಿಗೇನಾದರೂ ಹೇಳಿದ್ದರೆ ಹೇಳಿರಬಹುದು.

ಇತ್ತಲಾಗಿ, ಊರಲ್ಲಿ ಸಾವು, ಸುಲಿಗೆ ಆದಮೇಲೆ ಕುಂದಾಪುರದಿಂದ ಪೊಲೀಸಿನವರು ಬಂದರು. ದೊಡ್ಡ ದೊಡ್ಡ ಆಫೀಸರುಗಳೂ ಬಂದರು. ಭರ್ಜರಿ ತನಿಖೆಯಾಯಿತು. ಊರ ಜನರ ಮನಸ್ಸಿನಲ್ಲಿ ಇದು ತಿಪ್ಪಯ್ಯನವರ ಕಾರುಭಾರ ಎಂದೇ ಇತ್ತು. ಆದರೆ, ಪೊಲೀಸರು ಬಂದು ತನಿಖೆ ನಡೆಯಿಸಿ, ರಿಪೋರ್ಟ್ ಬರೆದದ್ದು ತಿಪ್ಪಯ್ಯನವರ ಮನೆ ಹೆಬ್ಬಾಗಿಲಿನಲ್ಲಿ ಕುಳಿತುಕೊಂಡೇ. ಯಾತ್ರೆಯಿಂದ ಮರಳಿ ಬಂದ ಪೂರ್ಣಯ್ಯನವರು ಏನು ಮಾಡಿದರೂ ದರೋಡೆ, ಕೊಲೆಗಳು ತುಬ್ಬು ಆಗಲಿಲ್ಲ. ಸುಬ್ಬ ಸತ್ತವ ಸತ್ತನೇ! ಎಲ್ಲ ಬಿಡಿ ; ಅವನ ಮಗ - ತಾನು ಆ ಮೂರು ದಿನವೂ ಊರಲ್ಲಿರಲಿಲ್ಲ - ಎಂದು ಹೇಳಿದನಂತೆ. ಜನ ಗುಸು ಗುಸು ಅಂದರು. ತಿಪ್ಪಯ್ಯನವರಿಗೆ ತಿಳಿಯದೆ ಇದು ಆಗಿರಲಿಕ್ಕಿಲ್ಲ, ಅಂತ. ಮೊದಲು ಗುಸು ಗುಸು ಅಂದವರೂ ತಮ್ಮನ್ನು ತಿದ್ದಿಕೊಂಡರು. ಆ ಕಾಲದಲ್ಲಿ ನಮ್ಮ ಅಜ್ಜಿ ಅನ್ನುತ್ತಿದ್ದಳು ; "ಪರವೂರಿನ ದರೋಡೆಕೋರರು ನಮ್ಮ ಊರಿಗೆ ಬಾರದೆ ಶತಮಾನ, ಶತಮಾನವಾಯಿತು" ಅಂತ.

ಇನ್ನೊಂದು ಸಣ್ಣಕತೆ ಹೇಳುತ್ತೇನೆ. ಅದೆಂದರೆ, ರಾಮಣ್ಣನ ಹೆಂಡತಿ ನಾಗಿಯ ಕತೆ. ರಾಮಣ್ಣ ಎಣ್ಣೆ ಮಾರಿ ಜೀವಿಸುವವನು. ಮನೆಯಲ್ಲೇ ಗಾಣವುಂಟು. ಅವನು ಮಾಡಿದ ಒಂದೇ ಒಂದು ತಪ್ಪು ಕೆಲಸವೆಂದರೆ - ಲಕ್ಷಣವಾದ ಒಂದು ಹುಡುಗಿಯನ್ನು ಮದುವೆಯಾಗಿ ತನ್ನ ಮನೆಗೆ ಕರೆದುತಂದದ್ದು. ಅದು ನಮ್ಮ ಅಜ್ಜಿ ಹೇಳಿದ ಮಾತು. ನನಗೆ ಅದೆಂದೂ ಮರವೆಯಾಗದು. ಅವಳ ಹೆಸರು ನಾಗಿ. ಹಾರಿಸಿಕೊಂಡು ಹೋದವರು ನಾಲ್ಕು ವರ್ಷಗಳ ಮೇಲೆ ಅವಳನ್ನು ಎಂಜಲೆಲೆಯ ಹಾಗೆ ಉಂಡು, ಹೊರಗೆ ಎಸೆದರಂತೆ. ಆಮೇಲೆ ಒಂದು ದಿವಸ - ನನ್ನ ಗೆಳೆಯನೊಬ್ಬಾತ ನಮ್ಮೂರಿನ ಜಾತ್ರೆಗೆ ಬಂದವನು, ಅವಳನ್ನು ನನಗೆ ಕೈಮಾಡಿ ತೋರಿಸಿದ; "ರಾಮಣ್ಣನ ಹೆಂಡತಿ, ರಂಭೆ, ಅವಳೇನೆ ! ಈಗ ಹೇಗಿದ್ದಾಳೆ ನೋಡು; ಒಣಗಿದ ಪ್ರೇತ" ಎಂದ. ನನಗೆ ನಾಲ್ಕು ವರ್ಷಗಳ ಹಿಂದಕ್ಕೆ ಕೇಳಿದ ಅವಳ ಕತೆಯ ನೆನಪಾಯಿತು. ನಾನು ಕೇಳಿದೆ - "ಯಾರು ಅಷ್ಟಕೆಲ್ಲ ಕಾರಣರು?" ಎಂದು. ನನ್ನ ಸ್ನೇಹಿತ "ರೂಪ" ಎಂದ.

ಆಗ, ಹಿಂದೆ ಅಜ್ಜಿ ನುಡಿದ ಮಾತು ನನ್ನ ನೆನಪಿಗೆ ಬಂದಿತು. ಆದರೂ ಕೆದಕಿ ಕೇಳಿದೆ: "ಯಾರಿಂದಾಯಿತು, ಅದನ್ನು ಹೇಳು" ಎಂದು.

ಅವನು ನಗುತ್ತ "ರಾಮಣ್ಣನಂತು ಅಲ್ಲ, ಇವಳೂ ಅಲ್ಲ ಅನ್ನುತ್ತಾರೆ.

"ಹಾಗಾದರೆ!"

"ಅವಳ ತವರುಮನೆಯವರೇ ಮನೆಗೆ ಬರಹೇಳಿದರಂತೆ. ಚಿನ್ನ ಬೆಳ್ಳಿ ಆಸೆಯನ್ನು ತೋರಿಸಿ ಪುಸಲಾಯಿಸಿದರಂತೆ. ಅವಳನ್ನು ನಾಲ್ಕು ದಿನ ಅಲ್ಲೆಲ್ಲೋ ಅಡಗಿಸಿಟ್ಟರಂತೆ. ಆಮೇಲೆ"ಹೊಳೆಗೆ ಇಳಿದ ಮೇಲೆ ಚಳಿ ಇಲ್ಲ" ಎಂಬ ಗಾದೆ ಆಯಿತು. ಇಷ್ಟೆಲ್ಲ ಉಪಾಯ ಮಾಡಿದವರು ಅವಳನ್ನು ಇರಿಸಿಕೊಂಡರು. ಒಡವೆ, ಆಭರಣ ಕೊಟ್ಟು ಅವಳು ಆ ಬಡವನನ್ನು ಮರೆಯುವ ಹಾಗೆಯೂ ಮಾಡಿದರು. ಅದು ಸಮನಲ್ಲವೇ? ಗಂಡನ ಮನೆಯಲ್ಲಿದ್ದರೆ ಅವಳು ಗಾಣದ ಎತ್ತಾಗಬೇಕಿತ್ತು. ಎಳೆಯ ಪ್ರಾಯ; ಎಷ್ಟು ಬುದ್ಧಿ ಇದ್ದೀತು? ಅವನನ್ನು ಬಿಟ್ಟು ಓಡಿ ಬರುವುದಕ್ಕೆ. ಅಲ್ಲಿಯೂ ಏನಾದರೂ ಒಂದಿಷ್ಟು ಚೂರು ಪಾರು ಕಸರು ಬಂದಿರಲೂಬಹುದು. ಈಗ ನೋಡಬಾರದೇ? ತೆಗೆದುಕೊಂಡು ಬಂದವರಿಗೆ ಇವಳು ಬೇಡವಾದಳು. ಎರಡು ಮಕ್ಕಳಾದವು. ಹೇಗೆ ಉಳಿದೀತು ದೊದಲಿನ ಚಂದ?" ಎಂದ.

ನಾನು ಎಷ್ಟು ಒತ್ತಾಯಿಸಿದರೂ ಆ ವ್ಯಕ್ತಿಯು ಹೆಸರನ್ನು ಆತ ಹೇಳಲು ಒಡಂಬಡಲಿಲ್ಲ. ನಾನು ಹೆಚ್ಚಿಗೆ ಮಾತನಾಡಿಸಲಿಲ್ಲ. ನನ್ನ ಮಿತ್ರ ಮಾತನ್ನು ಮುಂದುವರಿಸುತ್ತ "ಇವಳು ಬಾಡಿದ ಮಾವಿನಮಿಡಿಯಾದಳು. ಅವರ ಮನಸ್ಸು ಮತ್ತೆಲ್ಲೆಲ್ಲೋ ಹರಿಯಿತು. ಇನ್ನು ಅವಳು ಸಾಕು ಅನಿಸಿತೋ, ಬೇಡ ಅಂತ ಅನಿಸಿತೋ - ಗೊತ್ತಿಲ್ಲ. ಒಂದು ದಿವಸ ಅವಳಿಗೆ ಕೊಟ್ಟ ಚಿನ್ನಗಿನ್ನಗಳನ್ನು ಮುರಿಸಿ, 'ಹೊಸತು ಮಾಡುವ' ಎಂಬ ಆಸೆ ತೋರಿಸಿ ತಂದಿಟ್ಟುಕೊಂಡರು. ಮತ್ತೆ ಅಲ್ಲಿಗೆ ಹೋಗುವುದನ್ನು ನಿಲ್ಲಿಸಿದರು. ಅವಳಿಗೆ ಊಟಕ್ಕೆ ಕೊಡುವುದನ್ನು ನಿಲ್ಲಿಸಿದರು. ಅವಳು ಕಂಗಾಲುಗೊಂಡು ಅವರ ಮನೆಯ ಬಾಗಿಲಿಗೆ ಹೋಗಿ ಅತ್ತಳಂತೆ. ಅದಕ್ಕವರು "ರಂಡೆ, ನಮ್ಮ ಮನೆ ಅಂಗಳಕ್ಕೆ ಕಾಲಿಟ್ಟರೆ ಸೊಂಟ ಮುರಿಸಿಯೇನು" ಎಂದರಂತೆ. ಅಷ್ಟು ಮಾಡಿಸುವವರೇ! ಅವರು ಚಿಲ್ಲರೆ ಜನವಲ್ಲ. ಈಗ ಅವಳ ಸ್ಥಿತಿ ಹೇಳುವುದಕ್ಕಿಲ್ಲ. ಸಣ್ಣ ಎರಡು ಮಕ್ಕಳಿದ್ದಾವೆ. ಊರಲ್ಲಿ ಚೂರುಪಾರು ಕೂಲಿ, ನಾಲಿ ಮಾಡಿ ಬದುಕುತ್ತಿದ್ದಾಳೆ. ಇಷ್ಟೆಲ್ಲ ಕತೆ ನಡೆದ ಮೇಲೆಯೂ, ರಾಮಣ್ಣ ಇವಳ ಹತ್ತಿರ ಹೋಗಿ "ಬಾ" ಎಂದು ಬೇಡಿದನಂತೆ. ತನ್ನ ಅಮ್ಮನ ಶಾಪವನ್ನು ಕೇಳಿಯೂ ಹೋಗಿ ಬೇಡಿದನಂತೆ ಅವಳನ್ನು. ಅವಳು ನಾಚಿ, ಅತ್ತು, "ಬೇಡ, ನಿಮಗೆ ಈ ಎಂಜಲು ಜೀವ" ಎಂದು ಮಾತಿಗೆ ನಿಲ್ಲದೆ ಓಡಿಯೇ ಹೋದಳಂತೆ.

"ತುಂಬ ದೊಡ್ಡವಳು!"

"ಅವಳೇ?"

"ಅವಳೂ, ಅವನೂ ಸಹ" ಎಂದೆ ನಾನು. ನನಗೆ ಹೆಚ್ಚಿನ ವಿಚಾರ ತಿಳಿಯಲು ಕುತೂಹಲವಾದರೂ, ನನ್ನ ಸ್ನೇಹಿತ ಇದಕ್ಕೆ ಸಂಬಂಧಪಟ್ಟ ವ್ಯಕ್ತಿಯ ಹೆಸರನ್ನು ಮಾತ್ರ ಹೆದರಿ ಹೇಳಲಿಲ್ಲ - ಎಂದು ಕಾಣಿಸುತ್ತದೆ. ಆಗ ನನಗೇನಾದರೂ ಬರಿ ಹದಿನಾರು ವರ್ಷ

ಪ್ರಾಯವಿರಬಹುದು. ಲೋಕಾನುಭವ ಏನೇನೂ ಸಾಲದು. ನನ್ನ ಮನಸ್ಸು ಅವಳ ವಿಷಯದಲ್ಲಿ ಮರುಕಗೊಂಡಿತು. 'ಎರಡು ಚಿಕ್ಕ ಮಕ್ಕಳಿದ್ದಾರೆ' ಎಂಬುದನ್ನು ಕೇಳಿ ನನಗೆ ಮತ್ತಷ್ಟು ಬೇಸರ. ಹೆಣ್ಣು ಗಂಡಿನ ಹಿಂದೆಯೋ, ಗಂಡು ಹೆಣ್ಣಿನ ಹಿಂದೆಯೋ ಓಡಿಹೋಯಿತು - ಎಂದ ಮಾತ್ರಕ್ಕೆ ನನಗೆ ನಗು ಬರುತ್ತಿರಲಿಲ್ಲ. ಅಂಥ ಕತೆಗಳು ನೂರಾರಿವೆ. ನಿಜ ಕತೆಗಳಲ್ಲೂ ಉಂಟು; ಅದು ಬದುಕಿನಲ್ಲೂ ಉಂಟು. ಆಗ ನನಗೆ ಕಾಣಿಸಿದ ವಿಷಯುವೆಂದರೆ, ಗಂಡನ ಮನೆಯಿಂದ ಅವಳನ್ನು ಬರಮಾಡಿದ್ದು, ಪುಸಲಾಯಿಸಿದ್ದು. ಅದರಲ್ಲಿ ಆಕೆಯ ತವರುಮನೆಯ ಪಾತ್ರವೂ ಇರಬಹುದಾದದ್ದು. ಅವಳು ಜಾತಿಯಿಂದ ಹೊರಗಾದದ್ದು, ಮಕ್ಕಳನ್ನು ಸಾಕುವ ಭಾರ ಹೊತ್ತದ್ದು. ಅಷ್ಟಿದ್ದರೂ ತಾನು ರಾಮಣ್ಣನ ಜೊತೆಗೆ ಹೋಗದೆಯೇ, ಅವನ ಗೌರವ ಉಳಿಸಿದ್ದು. ಇಂಥ ವಿಚಾರಸರಣಿ ನನ್ನಲ್ಲಿ ಮೂಡಿ, ಅವಳ ವಿಷಯದಲ್ಲಿ ಮರುಕವನ್ನು ಹುಟ್ಟಿಸಿತು.

ನನ್ನ ಮಿತ್ರ ಸರಿದು ಹೋದ ಮೇಲೆ, ದೂರದಿಂದ ಕಂಡ ಅವಳನ್ನು ಹತ್ತಿರದಿಂದ ಹೋಗಿ ಮಾತನಾಡಿಸಬೇಕೆಂಬ ಚಪಲ ನನ್ನಲ್ಲಿ ಮೂಡಿತು. ಕಪಾಲೇಶ್ವರ ದೇವಾಲಯದ ಸುತ್ತಲೂ ನೆರೆದ ಜಾತ್ರೆಯಲ್ಲಿ ಅವಳೆಲ್ಲಿ ಕಣ್ಮರೆಯಾದಳು ಎಂದು ಕುತೂಹಲದಿಂದ ಹುಡುಕಾಡಿದೆ. ಒಂದೆಡೆ ಕಾಣಸಿಕ್ಕಿದಳು. ಮಂಡಕ್ಕಿ ಮಾರುವ ಒಂದು ಅಂಗಡಿಯ ಮುಂದೆ, ತನ್ನೆರಡು ಮಕ್ಕಳನ್ನು ಕಟ್ಟಿಕೊಂಡು ಅರ್ಧಾಣೆ ಬೆಲೆಯ ಮುಂಡಕ್ಕಿ ಖರೀದಿ ಮಾಡುತ್ತಿರುವುದನ್ನು ಕಂಡೆ. ಅದನ್ನು ಕೊಂಡಾದ ಮೇಲೆ, ಮಕ್ಕಳನ್ನು ಕರೆದುಕೊಂಡು, ಜನರ ಗದ್ದಲ್ಲವಿಲ್ಲದ ಒಂದು ಮರದ ಕೆಳಕ್ಕೆ ಹೋಗಿ ಕುಳಿತುಕೊಂಡದ್ದನ್ನು ಕಂಡೆ. ನೇರವಾಗಿ ಹಿಂಬಾಲಿಸಿದೆ. ಸುತ್ತಿ, ಬಳಸಿ ನಾನು ಅವಳಿದ್ದ ಕಡೆಗೆ ಹೋಗಿ ನಿಂತು ನೋಡಿದೆ. ನಾನು ಹಬ್ಬಕ್ಕೆ ತಂದಿದ್ದ ಎರಡಾಣೆ ಪಾವಲಿಯನ್ನು ಅವಳ ಕಡೆಗೆ ಎಸೆದು "ಆ ಮಕ್ಕಳಿಗೇನಾದರೂ ತೆಗೆಯಿಸಿ ಕೊಡು" ಎಂದೆ. ಅವಳು ಆಗ ಮಾಡಿದ ಕಣ್ಣನ್ನು ನೆನೆದರೆ ಈಗಲೂ ಅಂಥ ಭಯವಾಗುತ್ತದೆ.

"ನಾನು ನಿಮ್ಮ ನಾಯಿಯಲ್ಲ" ಎಂದಳು.

"ಏ ಮಹಾರಾಯಿತಿ, ಯಾಕೆ ಸಿಟ್ಟಾಗುತ್ತೀಯಾ? ಈ ಸಣ್ಣ ಮಕ್ಕಳ ಬಗ್ಗೆ ಪಾಪ ಕಂಡು ದುಡ್ಡನ್ನೆಸೆದೆ; ಬೇಡವಾದರೆ ಬಿಡು. ನಿನ್ನ ಬಡತನ, ಕಷ್ಟದ ಕತೆಯನ್ನು ಕೇಳಿದ್ದೆ. ನಮ್ಮ ಊರವಳು ನೀನು; ಅಯ್ಯೋ ಪಾಪ... ಅಂಥ ಅನಿಸಿ..."

ಅವಳು ಮಾತನಾಡಲಿಲ್ಲ. ನಾನಾಗಿಯೇ "ನಾನು ಈ ಊರಿನವನೇ; ಅಡಿಗಳ ಮನೆಯವನು. ಅಡಿಗಳ ಮೂಕಜ್ಜಿಯ ಮೊಮ್ಮಗ" ಎಂದೆ.

ಆಕೆ ನನ್ನನ್ನೇ ಬಿರಬಿರನೆ ನೋಡಿದಳು. "ಅಯ್ಯಾ, ನಾನು ಮಾಡಿದ ಪಾಪವನ್ನು ನಾನೊಬ್ಬಳೇ ಅನುಭವಿಸಿ ತೀರಿಸುತ್ತೇನೆ. ನನಗೆ ಯಾರೊಬ್ಬರ ಕಾಸೂ ಬೇಡ" ಎಂದಳು.

"ಪಾಪದ ಮಕ್ಕಳನ್ನು ನೆನೆದು ಕೊಟ್ಟೆ. ಬೇಡವಾದರೆ ಬಿಡು. ಬೇಸರ ಕಂಡಿತು. ಆ ಮಕ್ಕಳು ಒಂದುಕ್ಷಣ ತಿಂದು ಸಂತೋಷಪಡಲಿ ಎಂದು ಕೊಟ್ಟೆ. ಕೊಟ್ಟದ್ದು ನಿನಗಂತೂ ಅಲ್ಲ. ಆ ಎಳೆಯ ಮಕ್ಕಳನ್ನು ಕಂಡು."

ಅವಳ ಕಣ್ಣುಗಳಲ್ಲಿ ಒಂದು ತೊಟ್ಟು ನೀರು ಹನಿದ ಹಾಗೂ ಕಾಣಿಸಿತು. ಆದರೂ ಧಿಮಾಕಿನಿಂದಲೇ ಕಣ್ಣರಳಿಸಿ "ಅಯ್ಯಾ, ಕಾಸು ಬೇಡ, ಯಾರದ್ದೂ ನನಗೆ. ಅದು ಈ ನನ್ನ ಮಕ್ಕಳಿಗೂ ಬೇಡ. ನನ್ನ ರಟ್ಟೆ ಗಟ್ಟಿಯಿದೆ; ದುಡಿಯುತ್ತೇನೆ; ನಾಳೆ ಅವ್ರೂ ದುಡಿದಾವ್ರು" ಎಂದಂದು, ಆ ಮಕ್ಕಳನ್ನು ಕಟ್ಟಿಕೊಂಡು ಅಲ್ಲಿಂದ ಹೊರಟೇ ಹೋದಳು. ಹೋಗುತ್ತ ಅವಳಾಡಿದ ಒಂದು ಮಾತು ಮಾತ್ರ ನನಗೆ ಅಂಬಿನಂತೆ ನಾಟಿತು; "ಅಯ್ಯಾ, ನೀವು ದೊಡ್ಡವರ ಮನೆಯವರು. ನಿಮ್ಮ ಅಜ್ಜಮ್ಮ ದೇವರ ಹಾಗಿದ್ದವರು. ಆದರೂ, ನನಗೆ ಯಾರೊಬ್ಬರ ಹಂಗೂ ಬೇಡವೆನಿಸಿ ಹಾಗೆಂದೆ. ಸಿಟ್ಟು ಮಾಡಬೇಡಿ."

"ನನಗೆ ಯಾಕೆ ಸಿಟ್ಟು? ನಿನ್ನ ಧೈರ್ಯ ಕಂಡರೆ ಮಾತ್ರ ಆಶ್ಚರ್ಯ ಆಗುತ್ತದೆ."

"ನಾನು ಒಂದು ಶಿಖಂಡಿಯ ಹಾಗೆ, ಒಡೆಯಾ."

"ಅಂದರೆ!"

"ಆಟದ ಪ್ರಸಂಗದಲ್ಲಿ ಭೀಷ್ಮಾಚಾರ್ಯರ ಎದುರಿನಲ್ಲಿ ಶಿಖಂಡಿ ನಿಂತ ಹಾಗೆ- ಒಡೆಯಾ! ನನ್ನದೊಂದು ಹಟ. ಅದನ್ನು ನಾನು ಬಿಡುವವಳಲ್ಲ. ಈ ಮಕ್ಕಳನ್ನು ದೊಡ್ಡದು ಮಾಡಿ, ನನ್ನ ದುಡಿತದಿಂದಲೇ ದೊಡ್ಡದು ಮಾಡಿ, ಅವರನ್ನು ಆ ಒಡೆಯರ ಮುಂದಕ್ಕೆ ನಿಲ್ಲಿಸಿ 'ನೋಡಿ ಇವನ್ನು; ನೋಡಿದ ಮೇಲೆ ಬಾವಿಗೆ ಹಾರಿಕೊಳ್ಳಿ' ಎಂದು ಅಂದು ಬರುವವಳು ನಾನು."

"ನನಗೇನೂ ತಿಳಿಯುವುದಿಲ್ಲ ಈ ನಿನ್ನ ಮಾತು. ನನ್ನ ಹತ್ತಿರ ಏನು ಪಂಥ ನಿನ್ನದು? ಶಾಲೆಗೆ ಹೋಗುವ ಹುಡುಗ ನಾನು."

"ನಿಮಗೆ ಹೇಳಿದ್ದಲ್ಲ ಆ ಮಾತು. ನಿಮ್ಮ ಮಾವನ ಕಿವಿಗೆ ಹಾಕಿ- ಆ ಮಾತನ್ನು- ಎಂದು ಅಂದದ್ದು ನಾನು" ಎಂದು ಹೇಳಿ ಸರಿದುಹೋದಳು.

ಶಿಖಂಡಿಯ ಶಾಪವೇ ನನಗೆ ತಟ್ಟಿದಂತಾಯಿತು. ಜಾತ್ರೆಯೂ ಬೇಡ, ಏನೂ ಬೇಡ, ಏನೋ ಪ್ರಮಾದವಾಯಿತು ನನ್ನಿಂದ- ಎಂಬ ಭಯವಾಗಿ ನೆಟ್ಟಗೆ ಮನೆಗೆ ಹೋದೆ. ಅಲ್ಲಿ ಅಜ್ಜಿಯನ್ನು ಸಂಧಿಸಿದವನೇ "ಅಜ್ಜಿ, ನನಗೆ ಯಾತಕ್ಕೋ ತುಂಬ ಬೇಸರ. ಕಟ್ಟೆಗೆ ಹೋಗಿ ಕುಳಿತುಕೊಳ್ಳುವ; ಏನಾದರೂ ಒಂದು ಕತೆ ಹೇಳಿ" ಎಂದೆ. ಮನೆಯ ಮುಂಗಡೆಯ ಅಶ್ವತ್ಥಕಟ್ಟೆಯ ಬಳಿಗೆ ಹೋಗಿ ಕುಳಿತೆವು. ಅಜ್ಜಿ ನನ್ನ ಮುಖವನ್ನೇ ನೋಡುತ್ತಿದ್ದರು. ಅವರ ಮಸುಕು ಕಣ್ಣುಗಳಿಗೂ ನನ್ನ ಬೇಸರ ತಿಳಿಯುವ ಹಾಗಾಯಿತು.

"ಏನು ಬೇಸರ? ಹಬ್ಬದ ದಿನವಲ್ಲವೇ ಇವತ್ತು?" ಎಂದು ಪ್ರಶ್ನಿಸಿದರು. ನನಗೆ ದುಃಖ ಮಗುಚಿ ಬಂದಿತು. ನನ್ನ ಕಿಸೆಯೊಳಕ್ಕೆ ಕೈಯನ್ನು ತುರುಕಿ, ಅದೇ ಎರಡಾಣೆ ಪಾವಲಿಯನ್ನು ಹೊರಕ್ಕೆ ತೆಗೆದು, ಅವರ ಕೈಯಲ್ಲಿಟ್ಟು ಹೇಳಿದೆ: "ಅಜ್ಜಿ, ಈ ಪಾವಲಿ ನನ್ನ ಹತ್ತಿರ ಬಂದದ್ದೇ ತಪ್ಪಾಯಿತು. ನಾನು ಅದನ್ನು ಯಾರಿಗೋ ಕೊಡುವುದಕ್ಕೆ ಹೋಗಿ, ಬೈಸಿಕೊಂಡು ಬಂದೆ. ನನಗೂ ಮಂಗಳಾರತಿಯಾಯಿತು; ನಮ್ಮ ಮಾವನಿಗೂ ಆಯಿತು" ಎಂದೆ.

ಅಜ್ಜಿ ಪಾವಲಿಯನ್ನು ಕೈಯಲ್ಲಿ ಹಿಡಿದವರು ಏನೂ ಮಾತನಾಡಲಿಲ್ಲ. ನಾನು "ಅಜ್ಜಿ, ನನಗೆ ಎಷ್ಟು ಮಂದಿ ಮಾವಂದಿರು? ಯಾರ್‍ಯಾರು? ನನ್ನ ಅಮ್ಮನಿಗೆ ಅಣ್ಣ ತಮ್ಮಂದಿರಿಲ್ಲ" ಎಂದು ಹೇಳುತ್ತಲೇ, ಅವರು "ಇದನ್ನು ಒಂದು ಹೆಂಗಸಿಗೆ ಕೊಟ್ಟೆಯಾ? ಅವಳು ಅದನ್ನು ಹಿಂದಕ್ಕೆ ಕೊಟ್ಟಳೇ? ಯಾತಕ್ಕೆ ಕೊಟ್ಟೆ?" ಎಂದು ಕೇಳಿದ್ದರಿಂದ, ನಾನು ನಡೆದ ಯಾವತ್ತು ಪ್ರಕರಣವನ್ನು ಬಿಡಿಸಿ ಹೇಳಿದೆ.

ಅವರಾಗ "ಈ ಪಾವಲಿಯನ್ನು ಅವಳು ಮುಟ್ಟಿರಬೇಕಲ್ಲವೇ? ಅದು ಇನ್ನೂ ಬಿಸಿಯಿಂದ ಕುದಿಯುತ್ತಿದೆ. ನಾಗಿ ಮುಟ್ಟಿದ್ದಾದರೆ ಹಾಗೆಯೇ. ಅವಳ ಜೀವನದ ಕುದಿಯೆಲ್ಲ ಅದಕ್ಕೂ ಬಂದಿದೆ" ಎಂದರು.

"ಅವಳು ನನ್ನ ಮಾವನನ್ನು ಬಯ್ದದ್ದು ಶಪಥ ಮಾಡಿದ್ದು..."

"ನಿನಗೆ ಆ ನಾಗಿಯ ಕತೆ ಗೊತ್ತಿಲ್ಲ. ಅವಳ ರೂಪವೇ ಅವಳಿಗೆ ಮೃತ್ಯುವಾಯಿತು. ಅವಳು ಒತ್ತಾಯಕ್ಕೋ, ಆಸೆಗೋ, ಮತ್ತೊಂದಕ್ಕೋ ಬಲಿಯಾದಳು, ಸಣ್ಣದರಲ್ಲಿ. ಈಗಂತು ಜ್ಞಾನ ಬಂದಿದೆ; ಹಟವೂ ಬಂದಿದೆ; ತಾನು ಎಂಜಲು ತಿನ್ನಬಾರದಿತ್ತು-ಎಂದೂ ಅನ್ನಿಸಿದೆ."

"ಅವಳು ಎರಡು, ಎರಡು ಸಾರಿ "ಎಂಜಲು" "ಎಂಜಲು" ಎಂಬ ಮಾತನ್ನೇ ಆಡಿದಳು."

"ಗಂಡನನ್ನು ಬಿಟ್ಟು ಅವಳು ಓಡಿಹೋದವಳಲ್ಲವೇ? ಎಂಜಲಾದಳಲ್ಲ. ಆದದ್ದು ನಿನ್ನ ಮಾವನಿಂದಲೇ... ಬಿಡು ಆ ವಿಚಾರ... ಅವರವರ ಪಾಪ ಅವರವರಿಗೆ."

"ಅವಳ ಮಕ್ಕಳು ಬೆಳೆದು ದೊಡ್ಡವಾದ ಮೇಲೆ ಅವಳು ಹೇಳಿದ ಹಾಗೆ ಮಾಡಿಯಾಳೇ?"

"ಮಾಡಿಯಾಳು. ಒಂದು ಲೆಕ್ಕಕ್ಕೆ ಸತ್ಯವಂತೆ; ದಿಟ್ಟೆಯೂ ನಿಜ."

"ಅವಳೇ? ಗಂಡನನ್ನು ಬಿಟ್ಟವಳೇ? ತಿರುಗಿ ಅವನು ಕರೆದರೂ ಹೋಗಲಿಲ್ಲವಂತೆ ಅವಳು?"

"ಸತ್ಯವಂತಳಾದುದರಿಂದಲೇ ಹೋಗಲಿಲ್ಲ. ಆದರೆ ಮಗು, ಸತ್ಯ ಯಾರಿಗೆ ಬೇಕು ಈಗಿನ ಕಾಲದಲ್ಲಿ? ಅದೆಲ್ಲ ಹಿಂದಕ್ಕಾಯಿತು. ಅಲ್ಲ, ಹಿಂದೆಯೂ ಹೀಗೆಯೇ ಇತ್ತೋ ಏನೋ, ಯಾರು ಬಲ್ಲ? ನಾಳೆ ಅವಳೂ ಬದುಕಿ, ಆ ಮಕ್ಕಳೂ ದೊಡ್ಡವರಾದರೆ, ನಿನ್ನ ಮಾವನೂ ಬದುಕಿ ಉಳಿದರೆ, ಹೋಗಿ, ಅವನ ಮುಂದೆ ನಿಲ್ಲಿಸಿ 'ನೀವು ಕೈಬಿಟ್ಟು ನನ್ನನ್ನು ದಾರಿಯಲ್ಲಿ ಕೆಡೆದರೇನಾಯಿತಂತೆ? ಅವುಗಳ ಅಪ್ಪ ನೀವೇ ಅಂತ ಹತ್ತುಮಂದಿ ಹೇಳದೆ ಇರುತ್ತಾರೆಯೇ?' ಎಂದು ಅವನನ್ನು ಕೇಳಿಯೂ ಕೇಳಿಯಾಳು."

"ಅದೇನು ಪಂಥ? ಆ ಮಕ್ಕಳಿಂದ ಅವರನ್ನು ಕೊಲ್ಲಿಸದಿದ್ದರೆ ಸಾಕು. ನನಗೆ ಹೆದರಿಕೆ ಬಂದಿದೆ."

ಅಜ್ಜಿ ಅದನ್ನು ಕೇಳಿ ನಕ್ಕರು. "ಮರುಳ ನೀನು. ಸಾವೊಂದು ದೊಡ್ಡದೇ ಮಾನಕ್ಕಿಂತ?" ಎಂದರು. ಅನಂತರ, ತುಸು ವಿರಾಮದಲ್ಲಿ ಕುಟುಂಬದ ಹಳೆಯ ಕತೆಯೊಂದನ್ನು ನನಗೆ ಹೇಳತೊಡಗಿದರು. ನಮ್ಮ ಊರಿನಿಂದ ತುಸು ದಕ್ಷಿಣಕ್ಕೆ, ಇರಿಗೆ ಎಂಬ ಹಳ್ಳಿಯಲ್ಲಿ ವಾಸಿಸುತ್ತಿದ್ದ ಆ ಮಾವನ ವಿಚಾರವನ್ನು ಹೇಳಿದರು. ಅದನ್ನೆಲ್ಲ ಕೇಳಿದ ಮೇಲೆ ನನ್ನ ಮನಸ್ಸಿಗೆ ತುಸು ಸಮಾಧಾನವಾಯಿತು. ಏಕೆಂದರೆ, ಇಷ್ಟೆಲ್ಲ ಕತೆಗೆ ಕಾರಣನಾದ ಮಾವ, ನನ್ನ ಖಾಸಾ ಮಾವನಲ್ಲ - ಎಂಬುದರಿಂದ. ನನ್ನ ತಂದೆಗೆ ಎರಡೆರಡು ಮದುವೆಯಾಗಿತ್ತು ಎಂಬ ವಿಚಾರವೇ ನನಗೆ ತಿಳಿದಿರಲಿಲ್ಲ. ನನ್ನ ತಾಯಿ ಎರಡನೆಯ ಹೆಂಡತಿಯಂತೆ. ಅವಳನ್ನು ಮದುವೆಯಾಗುವ ಮೊದಲೇ ಇನ್ನೊಬ್ಬಳನ್ನು ಮದುವೆಯಾಗಿದ್ದರಂತೆ. ಆಕೆ ಮಕ್ಕಳನ್ನು ಹಡೆಯುವ ದೊದಲೇ, ಹಡೆಯುವ ಕಾಲಕ್ಕೇ ಎಂದು ಕಾಣುತ್ತದೆ, ತೀರಿಹೋದಳಂತೆ. ಅವಳ ಒಬ್ಬ ತಮ್ಮನೇ ಈ ನಾಗಿಯ ಕತೆಗೆ ಕಾರಣರಾದ ವ್ಯಕ್ತಿ - ಎಂಬುದು ತಿಳಿಯಿತು. ಅಂಥ ಮಾವನ ನೆನಪು ನನಗೆ ಬರುವಂತಿರಲಿಲ್ಲ. ಅಜ್ಜಿ ಹೇಳಿದ ಕತೆಯಿಂದ ಬಂತು; ಈ ಉಪದ್ವ್ಯಾಪಕ್ಕೆ ಕಾರಣನಾದ ವ್ಯಕ್ತಿ ಆ ಮಾವ, ಈಗ ಹೇಗಿದ್ದಾರೋ, ಯಾವ ಊರಿನಲ್ಲಿದ್ದಾರೋ! ಆ ಸಂಗತಿ ಏನೇ ಇದ್ದರೂ, ನಾಗಿಯ ಕೋಪ, ತಾಪ ನನ್ನನ್ನು ಬಾಧಿಸಬೇಕಾಗಿಲ್ಲ - ಎಂಬ ಸಮಾಧಾನವಾಯಿತು.

ನಾನು ಆರಂಭದಲ್ಲಿಯೇ ಕತೆಗಳ ವಿಚಾರವನ್ನು ಹೇಳಿದ್ದು - ಒಂದು ಉದ್ದೇಶಕ್ಕಾಗಿ. ಕತೆ ವಾಸ್ತವಿಕವಾಗಿದ್ದರೆ, ಎಲ್ಲಾದರೂ ಅದರ ಸೆರಗೊಂದು ದೂರದಿಂದ ನಮಗೆ ಬಂದು ಬಡಿದರೂ ಬಡಿಯಬಹುದು ; ಅದರ ಸೋಂಕು ಸ್ವಲ್ಪವಲ್ಲ ಸ್ವಲ್ಪ ನಮಗೆ ಬಡಿಯಬಹುದು - ಎಂಬುದರಿಂದ. ಆದುದರಿಂದ ಕಟ್ಟುಕತೆಗಳನ್ನು ಕೇಳುವುದೇ ವಾಸಿ. ಅದರಿಂದ ಭಯಭೀತಿ ಕಡಿಮೆ. ನನ್ನ ಅಜ್ಜಿಯೂ ಬಹಳ ಹಿಂದೆ, ನನಗೂ ನನ್ನ ತಮ್ಮನಿಗೂ, ಹತ್ತಾರು ಕತೆಗಳನ್ನು ಹೇಳಿದ್ದಾರೆ. ಅವುಗಳ ಚೆಲುವಿಗೆ, ಸ್ವಾರಸ್ಯಕ್ಕೆ, ಅದ್ಭುತಕ್ಕೆ ತೇಲಾಡಿದ್ದೇನೆ.

ಮುಂದೆ ಶಾಲೆಗೆ ಹೋಗುತ್ತ, ಬರುತ್ತ ದೊಡ್ಡವನಾದಂತೆ ಪುಸ್ತಕಗಳಿಂದಲೂ ಹಲವಾರು ಕತೆ ಓದಿದ್ದೇನೆ. ಆದರೆ, ಅಜ್ಜಮ್ಮ ಹೇಳುತ್ತಿದ್ದ ಕತೆಗಳ ಸ್ವಾರಸ್ಯ ಅವುಗಳಲ್ಲಿರುತ್ತಿರಲಿಲ್ಲ. ಬುದ್ಧಿ ಬಲಿಯುತ್ತ ಹೋದಂತೆ ಆಲಿಬಾಬನಂತಹ ಅದ್ಭುತ ರಮಣೀಯ ಕಥೆಗಳು ನನಗೆ ಹಿಡಿಸದಾದವು. ನಮ್ಮ ರಾಮಾಯಣದ ಕತೆಗಳು ಕೂಡ ಅಂಥವೇ ಎಂದು ಎನಿಸತೊಡಗಿತು. ಕತೆಗಳನ್ನು ಬರೆಯುವವರು ತಂತಮ್ಮ ಊರಿನಲ್ಲಿಯೋ, ನೆರೆಕರೆಯಲ್ಲಿಯೋ ಕಟ್ಟುಕತೆಗಳಿಗಿಂತ ಸ್ವಾರಸ್ಯಕರವಾದ ಕತೆಗಳಿರುತ್ತ, ಯಾಕೆ ಇಂಥ ಕತೆ ಬರೆಯುತ್ತಾರೋ - ಎನಿಸಿದ್ದುಂಟು. ದೊದಲು ಕನ್ನಡದಲ್ಲಿ, ಆಮೇಲೆ ಇಂಗ್ಲೀಷ್‌ನಲ್ಲಿಯೂ ಹಲವಾರು ಕತೆ ಕಾದಂಬರಿಗಳನ್ನು ಬಿಡಿಸಿ ಓದತೊಡಗಿದೆ. ಬರೆದವರು ಅವನ್ನು ವಾಸ್ತವಿಕವೆಂದರೂ, ಯಾಕೋ ಬೇಸರ ಬರುತ್ತಿತ್ತು. ಈ ಸಂದರ್ಭದಲ್ಲಿ ನನ್ನ ಸಹಪಾಠಿಯೊಬ್ಬನ ನೆನಪನ್ನು ತಂದುಕೊಂಡರೆ ತಪ್ಪಾಗಲಾರದು. ಅವನೆಂದರೆ - ನನ್ನ ಜನಾರ್ದನ. ಪುಸ್ತಕ ನುಂಗುವುದರಲ್ಲಿ ಬಕಪಕ್ಷಿ. ಅವನು ನುಂಗಿ, ಮೆಚ್ಚಿದ ಪುಸ್ತಕಗಳನ್ನು ನನಗೆ ತಂದುಕೊಡುವ. ನಾನು ಓದಿದ ಬಳಿಕ, ನನ್ನ ಅಭಿಪ್ರಾಯವನ್ನು ಸಹ ಕೇಳುವವ, ಚುಟುಕಿನಲ್ಲಿ ಅವನ ವಿಚಾರವನ್ನು ಹೇಳುತ್ತೇನೆ.

ನಾನೂ ಅವನೂ ಒಂದೇ ಊರಲ್ಲಿ ಹುಟ್ಟಿ ಬೆಳೆದವರು, ಬಾಲ್ಯ-ಮಿತ್ರರು. ಅವನ ಪಾಲಿಗೆ ಸುಬ್ರಾಯನಾದ ನಾನು ಬರಿಯ ಸುಬ್ಬ. ನನ್ನ ಪಾಲಿಗೆ ಜನಾರ್ದನನಾದ ಅವನು ಬರಿಯ ಜನ್ನ. ನಮ್ಮ ಊರಲ್ಲಿ ಪ್ರಾಥಮಿಕ ಶಾಲೆ ಮುಗಿಸಿ, ಅನಂತರ ಪರವೂರುಗಳಲ್ಲಿ ಹೈಸ್ಕೂಲು, ಕಾಲೇಜುಗಳನ್ನು ಜತೆಯಲ್ಲಿ ಓದಿ ಕಳೆದಿದ್ದೇವೆ. ಅಣ್ಣ ತಮ್ಮಂದಿರಿಗಿಂತ ಹೆಚ್ಚು ನಂಟು, ಬಳಕೆ ನಮ್ಮದು. ರಜೆಯ ವೇಳೆಗೆ ಊರಿಗೆ ಬಂದರೆ ಅವನ ಮನೆಗೆ ನಾನು, ನನ್ನ ಮನೆಗೆ ಅವನು ಬಾರದ ದಿನವಿಲ್ಲ. ಕಾಲೇಜಿನಲ್ಲಿ ಅವನು ಆರ್ಟ್ಸ್ ಮುಗಿಸಿದ; ನಾನು ಚರಿತ್ರೆಯನ್ನು ತೆಗೆದುಕೊಂಡು ಹಾಗೂ ಹೀಗೂ ಪಾರಾದೆ. ಅದು ಚಿಲ್ಲರೆ ವಿಷಯ. ನಮ್ಮ ಉಭಯತರ ಭಿನ್ನದೃಷ್ಟಿಗಳನ್ನು ಕುರಿತು ಹೇಳುವುದು ಮುಖ್ಯ ವಿಷಯ. ಒಂದು ಸಾರಿ ಅವನು ನನಗೆ ಒಂದು ಕಾದಂಬರಿಯನ್ನು ತಂದುಕೊಟ್ಟ. ಹೆಸರು ಗೊತ್ತೇ? 'ಕೊಕ್ಕೆ ಕಣ್ಣು!' ಕತೆಯ ನಾಯಕಿ ಬಹಳ ಚೆಲುವೆ. ಇನ್ನಿಲ್ಲದಂಥ ಚೆಲುವೆ. ಅವಳ ಕಣ್ಣಿನ ಕೊಕ್ಕೆಗೆ ಇನ್ನೊಬ್ಬ ಚೆಲುವ, ಬರಿಯ ಚೆಲುವ ಮಾತ್ರವಲ್ಲ, ಶ್ರೀಮಂತ, ಸದ್ಗುಣಿಯಾದ ಚೆಲುವ ಸಿಕ್ಕಿಬೀಳುತ್ತಾನೆ. ಅವಳು ಒಂದು ಕವನವನ್ನು ಪತ್ರದ ರೂಪದಲ್ಲಿ ಬರೆದು ಅವನ ಕಡೆಗೆ ಎಸೆದಳಂತೆ. ಅವರಲ್ಲಿ ಪ್ರೇಮ ದೊಳೆತು, ಚಿಗುರಿ, ಮೂರು ದಿನದಲ್ಲೋ ಮೂರು ತಿಂಗಳಲ್ಲೋ ಹೆಮ್ಮರವಾಯಿತು. ಆತ ತನ್ನ ಊರಿಗೆ ಮರಳಿದಾಗ ಬುದ್ಧಿಯಿಲ್ಲದ ಹಿರಿಯರ ಒತ್ತಾಯಕ್ಕೆ ಬಲಿಯಾಗಿ, ಚಾಚೂ ಎನ್ನದೆ, ತಾನೊಂದು ಮದುವೆಯಾದ. ಆದರೆ? ಅವನ ಹೆಂಡತಿ ಅವನನ್ನು ದೇವರೆಂದು ಪೂಜಿಸಿದರೂ ಆತ ಉದಾಸೀನ. ಅವನ ಪೂರ್ವ ಪ್ರೇಯಸಿ

ಇದಕ್ಕೆ ಕಾರಣವೆಂದು- ಆ ಮೊದ್ದು ಹುಡುಗಿಗೆ ಗೊತ್ತಿರಲಿಲ್ಲ. ಅವನಿಗೆ ಬೆಂಗಳೂರಿನಲ್ಲಿ ಒಂದು ಒಳ್ಳೆಯ ಕೆಲಸವೂ ಸಿಕ್ಕಿತಂತೆ. ತನ್ನ ಕೊರಳಿಗೆ ಬಿದ್ದ ಆ ಹೆಂಡತಿಯನ್ನು ಕರೆದುಕೊಂಡು ಹೋಗಿ ಅಲ್ಲಿ ಬಿಡಾರ ಹೂಡಿದ. ಗ್ರಹಚಾರವಶಾತ್ (ನನ್ನಂಥ ಓದುವವನ) ಅವನ ಮೊದಲ ಪ್ರೇಯಸಿಯ ತಂದೆಗೂ ಅದೇ ಬೆಂಗಳೂರಿಗೆ ವರ್ಗವಾಗಿ, ಅವಳೂ ಬೆಂಗಳೂರಿಗೆ ಬಂದಳು. ಅವಳ ಮನಸ್ಸಿನಲ್ಲಿ ತಾನು ಮದುವೆಯಾಗುವುದಾದರೆ ಅವನನ್ನೇ ಮದುವೆಯಾಗಬೇಕೆಂಬ ಹಟವೂ ಇದ್ದಿತ್ತಂತೆ. ಅವನಿಗೆ ಮದುವೆಯಾದದ್ದು ತಿಳಿದುಬರುತ್ತಲೇ, ನಾನು ಎಣಿಸಿದಂತೆಯೇ ಅವಳು ವಿಷ ತಿಂದಳು. ಅವಳನ್ನು ಆಸ್ಪತ್ರೆಗೆ ಸೇರಿಸಿದರು. ಅವಳು ಅಲ್ಲಿ ಹುಷಾರಾಗುತ್ತಿದ್ದ ಕತೆ ಅವಳ ಚಿಕಿತ್ಸೆ ನಡೆಯಿಸುತ್ತಿದ್ದ ವೈದ್ಯ ಮಿತ್ರರಿಂದ ಈತನಿಗೆ ತಿಳಿಯಿತು. ಅದ್ಯಾರು ಇರಬಹುದೆಂದು ತಿಳಿಯಲು ಆ ವೈದ್ಯರ ಜೊತೆ ಆಸ್ಪತ್ರೆಗೆ ನೋಡಲು ಹೋದರೆ, ಸದರಿ ವಿಷ ತಿಂದವಳು ತನ್ನ ಪ್ರೇಯಸಿಯೇ ಎಂದು ತಿಳಿದಾಗ, ಉಂಟಾದ ಆಶ್ಚರ್ಯ ಅಷ್ಟಿಷ್ಟಲ್ಲವಂತೆ.

ಮುಂದೆ ಒಂದು ದಿನ ಆಕೆಯನ್ನು ಆ ವೈದ್ಯ ಮಿತ್ರನೇ ಕನಿಕರದಿಂದ ಮದುವೆಯಾದನಂತೆ. ಅದು ಇವನಿಗೂ ಅನುಕೂಲವಾಯಿತು. ಅಂತರಂಗದಲ್ಲಿ ಅವರಿವರನ್ನು ಬೆಸೆಯಿತು. ಈತ ತನ್ನ ದಿವ್ಯ ಪ್ರೇಮಕ್ಕೆ ಕಟ್ಟುಬಿದ್ದು, ತಾನು ಕೈಹಿಡಿದವಳನ್ನು ಊರಿಗೆ ರವಾನಿಸಿದ. ಮುಂದೆ ಅವರೀರ್ವರಲ್ಲಿ ಪ್ರಣಯ ಬೆಳೆಯಿತು. ಆ ವೈದ್ಯಮಿತ್ರನಿಗೂ ಈ ಸಂಗತಿ ತಿಳಿಯಿತು. ಮುಂದೆ ಏನೇನೋ ಕತೆ ಬೆಳೆಯುತ್ತದೆ - ಎಂದಿಟ್ಟುಕೊಳ್ಳಿ. ಮುಖ್ಯವಾಗಿ,ಅವರಿಬ್ಬರ ದಿವ್ಯ ಪ್ರೇಮದ ಚಿತ್ರವನ್ನು ಕಾದಂಬರಿಕಾರ ಪುರೂರವ ಊರ್ವಶಿಯರ ಪ್ರಣಯಕ್ಕಿಂತ ಹಿರಿದಾಗಿ ಬಣ್ಣಿಸಿದ್ದಾನೆ. ಪುರೂರವನ ಹೆಂಡತಿಯ ಸ್ಥಾನವನ್ನು ಮಾತ್ರ ತನ್ನ ಗಂಡನಿಂದ ಓಡಿಸಲ್ಪಟ್ಟ ಹುಡುಗಿಗೆ ಅವನು ಕೊಡಲಿಲ್ಲ. ಅಲ್ಲದೆ ಅವಳು ಬಹಳ ಕುರೂಪಿ, ಹಟಮಾರಿ - ಎಂಬಿತ್ಯಾದಿ ದೋಷಗಳನ್ನು ಸಹ ಅವಳ ಮೇಲೆ ಸಾಕಷ್ಟು ಹೊರಿಸಿದ್ದಾನೆ. ನನಗೆ ಈ ಕಾದಂಬರಿಯನ್ನು ಅರ್ಧದಷ್ಟೂ ಓದಲು ಸಹನೆಯಾಗಲಿಲ್ಲ. ಉಳಿದ ಭಾಗವನ್ನು ನನ್ನ ಮಿತ್ರ ಜನಾರ್ದನ ಬಣ್ಣಿಸಿದ್ದರಿಂದ ಪೂರ್ಣ ಓದದೆ ನಷ್ಟವಾಗಲಿಲ್ಲ ಎನಿಸಿತು. ಆಗ "ಹೇಗಿದೆ ಕತೆ! ಅದ್ಭುತವಾಗಿದೆ. ಕಥಾನಾಯಕಿ ಇರಬೇಕು ಹೀಗೆ" ಎಂದಾಗ, ನಾನು ತಾಳ್ಮೆಗೆಟ್ಟು "ಸುಮ್ಮನಿರಯ್ಯ" ಎಂದೆ.

"ಯಾಕೆ?"

"ಲೊಟ್ಟೆ, ಲಸ್ಕು!" ಜೀವಂತ ಪಾತ್ರಗಳು ಎಂದೆಂದೂ ನಿನ್ನ ಈ ಕಾದಂಬರಿಕಾರ ಹೇಳಿದ ಹಾಗೆ ಕುಣಿಯಲಾರವು. ಅವಕ್ಕೆ ಸ್ವಂತ ಬುದ್ಧಿ ಇದ್ದ ಹಾಗೆಯೇ ನನಗೆ ಕಾಣಿಸುವುದಿಲ್ಲ. ಇದೆಲ್ಲ ಆಗಿ ಹೋಗುವ ಸಂದರ್ಭಗಳಲ್ಲ" ಎಂದೆ.

"ಆಗಲಾರದು ಎನ್ನುತ್ತೀಯಾ? ಅವು ಎಲ್ಲೆಲ್ಲೂ ನಡೆಯುವ ಕತೆಗಳೇ. ಗಂಡು ಹೆಣ್ಣು ಅಂದರೆ ಹಾಗೆಯೇ."

"ಗಂಡು ಹೆಣ್ಣುಗಳು ಬಹಳ ಸಮೀಪ ಎಂಬುದು ನಿಜವೇ; ಏನೇನೂ ಆಗಬಹುದು. ಆದರೆ, ನಿನ್ನ ಕಾದಂಬರಿಕಾರ ಬಣ್ಣಿಸಿದ ಗಂಡು ಹೆಣ್ಣುಗಳ ರೀತಿ, ವ್ಯವಹಾರ ಮಾತ್ರ ಏನೇನೂ ಸಹಜವಾಗಿ ಕಾಣಿಸುವುದಿಲ್ಲ."

"ಆಗಲಿ ಬಿಟ್ಟುಬಿಡು. ನಮ್ಮೊಳಗಿನ ಅಭಿಪ್ರಾಯ ಭೇದ ಅಂತ ಇಟ್ಟುಕೊಳ್ಳೋಣ. ನಾವು ಯಾಕೆ ಜಗಳಾಡಬೇಕು?" ಎಂದು, ತರ್ಕಕ್ಕೆ ಹೋಗದೆ ಅಲ್ಲೇ ಬಿಟ್ಟ. ಅಲ್ಲಿಂದ ಮುಂದೆ ಮಾತ್ರ ಆತ ನನಗೆ ಹಾಗೆಲ್ಲ ಓದುವುದಕ್ಕೆ ಪುಸ್ತಕ ತಂದುಕೊಡುವ ತಾಪತ್ರಯ ವಹಿಸಲಿಲ್ಲ. ಅವನ ಮನಸ್ಸಿನಲ್ಲಿ ನಾನು ಜೀವನದ ಲಲಿತ ವಿಲಾಸಗಳನ್ನು ಅರಿಯಲಾರದವನು; ಚರಿತ್ರೆಯನ್ನು ಓದಿ, ಓದಿ, ಬೇಕಷ್ಟು ಅರಸರ ಹುಟ್ಟುಸಾವುಗಳ ತಾರೀಖು, ದಿನಗಳನ್ನಷ್ಟೆ, ಹೇಳಬಲ್ಲವ; ಶಹಜಹಾನನ ಗೋರಿ ಕಟ್ಟಿದ ತಾರೀಖು ಹೇಳಬಲ್ಲನಾದರೂ, ಮಮ್‌ತಾಜ್ ಶಹಜಹಾನರ ರೋಮಾನ್ಸ್ ಅರ್ಥವೇ ಆಗದ ದಪ್ಪ ತಲೆಯವನು- ಎಂಬ ಅಭಿಪ್ರಾಯ ಪ್ರಕಟಿಸಿದ. ನಾನೂ ಅದನ್ನು ಒಪ್ಪಿ ಸುಮ್ಮನಾದೆ.

ಈಗಲೂ ಆ ಮಿತ್ರ ನನ್ನ ಪಾಲಿಗೆ ಸ್ನೇಹಿತನಾಗಿಯೇ ಇದ್ದಾನೆ. ಎಳೆತನದಿಂದಲೂ ಬೆಳೆದುಬಂದ ಸ್ನೇಹವನ್ನು ಮರೆಯುತ್ತೇವೆಯೇ? ಅವನು ಹೇಳಿದ್ದನ್ನೆಲ್ಲ ನಾನು ಕೇಳುತ್ತಿರುತ್ತೇನೆ. ಆದರೆ ವಾದಿಸಲು ಹೋಗುವುದಿಲ್ಲ. ಯಾರ ಸಲುವಾಗಿ ಹಾಗೆ ವಾದಿಸಬೇಕು? ನಾನೇನಾದರೂ- ಊರಲ್ಲಿ ನಡೆದ ಕತೆಯನ್ನು ಕೇಳಿ, ಅವನಿಗೆ ಹೇಳಿದರೆ 'ಇರಬಹುದು ಹಾಗೆ' ಅನ್ನುತ್ತಾನೆ. ಉದ್ದೇಶಪಟ್ಟು ಏನಾದರೂ ಸುಳ್ಳು ಕಂತೆ ಹೇಳಿದರೂ, 'ಇರಬಹುದು ಹಾಗೆ' ಅಂದಾನು. ಹಾಗೆ ಅವನನ್ನು ಹೆಡ್ಡನನ್ನಾಗಿ ಮಾಡಿ ತೋರಿಸಲು ನಾನು ಎಂದೂ ಉದ್ದೇಶಪಟ್ಟು ಸುಳ್ಳು ಹೇಳಿದವನಲ್ಲ. ಅವನ ಮುಖ್ಯ ಕೊರತೆ ನನಗೆ ತಿಳಿದಿದೆ. ನಾಲ್ಕು ಸುತ್ತಿನವರು 'ಇಂಥದು ಸರಿ, ಇಂಥದು ಅಲ್ಲ; ಇದು ಆದರ್ಶ; ಇದು ಹೇಯ' ಎಂದು ಹೇಳುವುದಕ್ಕೆ ಬಣ್ಣ ಸವರಿ, ಅವನೊಡನೆ ಯಾರಾದರೂ ಒಂದು ಕತೆಯ ಹಾಗೆಯೋ, ವರ್ತಮಾನದಂತೆಯೋ ತಿಳಿಸಿದರೆ - ನಿಜವೇ? ಹಾಗಿದ್ದರೆ ಅವರದು ಬಹಳ ದೊಡ್ಡ ತ್ಯಾಗ! ಏನು ಧೈರ್ಯ!' ಎಂದು ಉದ್ಗರಿಸುತ್ತಾನೆ. ಅದರ ಬದಲು, ನಿತ್ಯಜೀವನದ ಯಾವುದೇ ತೊಡಕು, ತೊಂದರೆ, ನಡವಳಿಕೆ, ವಂಚನೆಗಳನ್ನು ಮುಂದಕ್ಕಿರಿಸಿ 'ಇಂಥವೆಲ್ಲ ಏಕೆ ಆಗುತ್ತವೆ? ನಾವು ಇವನ್ನು ಹೇಗೆ ಸರಿಪಡಿಸಬಹುದು?' ಎಂದು ಕೇಳಿದರೆ, 'ನಮಗೆ ಯಾಕೆ ಬೇಕು ತಲೆಹರಟೆ' ಎನ್ನುತ್ತಾನೆ, ಅವನು. ಅವನ ಮನಸ್ಸಿಗೆ ಮುಖ್ಯವಾಗಿ ಬೇಕಾಗಿರುವುದು ನೆಮ್ಮದಿ. ಅಂಥ ನೆಮ್ಮದಿ ಕೊಡುವ ಮಾತು ಹೇಳಿದರೆ ಸಾಕು. ಅದು ಜೀವನದಲ್ಲಿ ನಡೆಯಬೇಕಾದ ಮಾತು ಆಗಿರಬೇಕಿಲ್ಲ. ಮುಖ್ಯವಾಗಿ, ಕೇಳಿದ ಕಥೆ

ರುಚಿಯಾಗುವುದಕ್ಕೆ ಒಳತೋಟಿ, ಕುತಂತ್ರ, ಮಸಲತ್ತು - ಇಷ್ಟೇ ಸಾಕಾದರೂ, ಕೊನೆಯಲ್ಲಿ ಅವನಿಗೆ ಪ್ರಿಯವಾದ ತೀರ್ಮಾನವೇ ಸಿಗಬೇಕು.

ಬಾಯಿ ಕತೆಗಳು, ಬಾಳಿನ ಕತೆಗಳು, ಬರಹದ ಕತೆಗಳು- ಹೀಗೆ ಬೇರೆ ಬೇರೆ ವಿಷಯಗಳನ್ನು ನಾನು ಇಲ್ಲಿ ಹೇಳುವುದಕ್ಕೆ ಒಂದು ಕಾರಣವಿದೆ. ಇವುಗಳಲ್ಲಿ ವಾಸ್ತವಿಕವೆನಿಸದ ಎಷ್ಟೋ ಕತೆಗಳು ನಮ್ಮ ಮನಸ್ಸಿಗೆ ತುಂಬ ತೃಪ್ತಿಯನ್ನು ತಂದುಕೊಡುತ್ತವೆ. 'ರಾಮ ರಾವಣನನ್ನು ಕೊಂದುದು ಯಾತಕ್ಕಾಗಿ? ಆತ ಸೀತೆಯನ್ನು ಕದ್ದೊಯ್ದುದಕ್ಕಾಗಿ. ಹದಿನಾಲ್ಕು ವರ್ಷಗಳ ಕಾಲ ಅವಳಿಗಾಗಿ ಅಲೆದಾಡಿ, ಯುದ್ಧ ಮಾಡಿದ; ರಾವಣನನ್ನು ಕೊಂದ, ಸೀತೆ ಕಾಣಸಿಕ್ಕಿದಳು- ಎಂಬ ಹೊತ್ತಿನಲ್ಲಿ ಆ ರಾಮ ಏನು ಮಾಡಿದ? ಅವಳ ಗೋಳನ್ನು ಹನುಮಂತನಿಂದ ಕೇಳಿ ತಿಳಿದೂ, ತಿಳಿದೂ, ಆತ ಮಾಡಿದ ಕೆಲಸವೇನು? 'ನೀನು ಪರರ ಮನೆಯಲ್ಲಿ ಇದ್ದವಳು. ನಿನ್ನ ಶುಚಿಯನ್ನು ಉಳಿಸಿಕೊಂಡಿದ್ದೀಯೆಂದು ಹೇಗೆ ತಿಳಿಯಲಿ?' ಎಂದಂದು ಅಗ್ನಿಪರೀಕ್ಷೆಗೆ ಹೊರಟ. ಕತೆ ಆ ಹಂತಕ್ಕೆ ಬಂದಾಗ ಯಾರಿಗೂ ಸಂಕಟವಾಗುತ್ತದೆ. ಅಸಹ್ಯ ಹುಟ್ಟೀತು ರಾಮನ ವಿಚಾರದಲ್ಲಿ 'ಅಗ್ನಿಪರೀಕ್ಷೆ ನಡೆಯಿತು. ಸೀತೆ ಪಾರಾಗಿ ಬಂದಳು' ಎಂದೊಡನೆಯೇ ನಮಗೆಲ್ಲವೂ ಮರೆತು ಹೋಗುತ್ತದೆ. ರಾಮನ ಮೂರ್ಖತನ ಮರವೆಯಾಗುತ್ತದೆ. ಸೀತೆ ಉಳಿಯಬೇಕಾಗಿದೆ. ನಮ್ಮ ಮನಸ್ಸು ಬೇಡುವುದು ಅದನ್ನು. ಕತೆ ಬರೆದವನು ಹಾಗೆ ಉಳಿಸಿಕೊಟ್ಟ. ಬೆಂಕಿಯಲ್ಲಿ ಅವಳನ್ನು ಕಾಯಿಸಿ, ಅವಳು ಶುಚಿವಂತಳು ಎಂದು ಜಾಹೀರುಪಡಿಸಿ, ನಮ್ಮ ಕಣ್ಣಿಗೆ ಒಂದಿಷ್ಟು ಮಣ್ಣು ಹಾಕಿಬಿಟ್ಟ.

ನಿತ್ಯಜೀವನದಲ್ಲಿ ಇರುವುದು ಕೂಡ ಹೀಗೆಯೇ. ವಿಪತ್ತಿನಿಂದ ನಮ್ಮನ್ನು ಪಾರುಮಾಡುವವರು ಇಲ್ಲದೆ ಹೋದರೂ, ಉಂಟುಮಾಡಬೇಕು. ಆಗ ರಾಮನ ಸಂಶಯಗ್ರಸ್ತ ಮನಸ್ಸು ನಮಗೆ ಸಹನೆಯಾಗುತ್ತದೆ. ಅದರ ಬದಲು ನಾಗಿ ತನ್ನೆರಡು ಮಕ್ಕಳೊಡನೆ ಅನಾಥಳಾದಾಗ, ಅವಳ ಮೇಲೆ ಕನಿಕರಪಟ್ಟು ಗಂಡ ಅವಳನ್ನು ಕರೆಯಲು ಹೋದ ಎಂದರೆ, ಅವನ ಹೆಣ್ಮರುಳುತನಕ್ಕಾಗಿ ನಾವು ನಗುತ್ತೇವೆ. ನನ್ನ ದೂರದ ಆ ಮಾವನ ಹೆಣ್ಮರುಳುತನಕ್ಕಾಗಿ ಯಾರೇನು ಮಾಡಿದರು? ಹೊಸ ಹೂವು ಸಿಗುತ್ತಲೇ ಬಾಡಿದ ಹೂವನ್ನು ಬಿಸುಟ ಅವನ ವಿಚಾರದಲ್ಲಿ ಯಾರೂ, ಏನನ್ನೂ ಅಂದಿರಲಾರರು.

ಇಷ್ಟೆಲ್ಲವನ್ನು ಹೇಳಿದ ಬಳಿಕವೂ- ಒಂದಿಷ್ಟಾದರೂ ನನ್ನ ಕತೆಯ ಹಂಬಲ ಎಂಥದು- ಎಂಬುದು ನಿಮಗೆ ತಿಳಿಯುತ್ತದೆಯೋ, ಇಲ್ಲವೋ! ನನಗೆ ವಾಸ್ತವಿಕ ಜೀವನ ಅವಾಸ್ತವಿಕವಾಗಿ ಕಾಣಿಸುತ್ತದೆ. ಅವಾಸ್ತವಿಕತೆ ವಾಸ್ತವಿಕವಾಗಿಯೂ ಕಾಣಿಸುತ್ತದೆ. ಇವೆರಡರೊಳಗಣ ಮೇರೆ, ಅಂತರ, ಬಹಳ ಕಡಿಮೆ-ಎನಿಸುತ್ತದೆ. ಸತ್ಯ, ಅಸತ್ಯಗಳ ಮೇರೆಯಷ್ಟೇ ಕಡಿಮೆ ಅಂತರ ಅವುಗಳಲ್ಲಿ. ಒಂದು ಇನ್ನೊಂದರ ಹಾಗೆಯೇ ಇರುತ್ತದೆ.

ಒಂದು ಇನ್ನೊಂದಕ್ಕೆ ಸಮೀಪವಾಗಿರುತ್ತದೆ. ಈ ಸಮೀಪಸ್ಥ ವಸ್ತುಗಳ ನಡುವೆ ಎಷ್ಟೊಂದು ದೂರವಿದೆಯಲ್ಲ- ಎಂಬ ಬೆರಗು ಉಂಟಾಗುತ್ತದೆ. ನನ್ನಲ್ಲಿ ಅನೇಕ ಸಮಸ್ಯೆಗಳನ್ನು ಕುರಿತಾದ ಬೆರಗು, ಅಂದಿನಿಂದ ಇಂದಿನ ತನಕ ಚೆನ್ನಾಗಿ ಬಲಿತು ಬಂದಿದೆಯಾವರೆ, ಅದಕ್ಕೆ ಕಾರಣಳು ನನ್ನ ಅಜ್ಜಿ, ಅವರ ಹಲವಾರು ಕನಸುಗಳು. ಅವಾವುವೂ ರಾತ್ರಿ ಕನಸುಗಳಲ್ಲ, ಯಾವುದೇ ಅಪೇಕ್ಷೆಯಿಂದ ಬೆಳೆಯಿಸಿಕೊಂಡ ಹಗಲುಗನಸುಗಳೂ ಅಲ್ಲ. ನನಗೂ ನಿಮಗೂ ಕಾಣಿಸದಿರುವ, ಅವರಿಗಷ್ಟೇ ಕಾಣಿಸುತ್ತಿರುವ ವಿಚಿತ್ರ ತೆರನ ಕನಸುಗಳು. ಆ ಕನಸುಗಳನ್ನು ನಿಮ್ಮೊಡನೆ ಹಂಚಿ ಉಣ್ಣುವ ಮೊದಲು ನನಗೆ ಅಪೂರ್ಣವಾಗಿ ತಿಳಿದ ನಮ್ಮ ಅಜ್ಜಿಯ ಪೂರ್ವಕತೆಯನ್ನು ಹೇಳಲು ಪ್ರಯತ್ನಿಸುತ್ತೇನೆ. ಈ ತನಕ ನಾನು ಹೇಳಿದ ವಿಚಾರಗಳೆಲ್ಲವೂ ನಡೆದು, ಇಂದಿಗೆ ಸುಮಾರು ಹದಿನೈದು ವರ್ಷಗಳಾದರೂ ಸಂದಿರಬಹುದು. ಇನ್ನು ಮುಂದಿನವು ಹಾಗಲ್ಲ.

ಈ ನಮ್ಮ ಅಜ್ಜಿ ನನಗೆ ನೇರಾದ ಅಜ್ಜಿಯಲ್ಲ. ನನ್ನ ಮುತ್ತಜ್ಜನ ಮಗಳು ಅವರು-ಎಂದರೆ, ತಂದೆಯ ತಂದೆಯ ತಂಗಿ ಅವರು. ವಾಸ್ತವಿಕವಾಗಿ ಅವರು ನಮ್ಮ ಮನೆಯಲ್ಲೇ ಹುಟ್ಟಿದವರಾದರೂ, ಅನಂತರ ಈ ಮನೆಯ ಎದುರು ಸಾಕಷ್ಟು ಸಮೀಪದಲ್ಲೇ ಬೆಳೆದು ನಿಂತಿರುವ ಅಶ್ವತ್ಥ ಮರದಂತೆ ಬೇರೂರಿ ಬೆಳೆಯಬೇಕಾದ ಕಾರಣವಿರಲಿಲ್ಲ. ಅವರು ಮದುವೆಯಾಗಿ, ದೂರ ಹೋಗಿ, ಇನ್ನೊಂದು ಗೋತ್ರವನ್ನು ಸೇರಿ, ಗಂಡನ ಜತೆಯಲ್ಲಿ ಹುಣಿಸೆಮರದಂತೆಯೋ, ಹಲಸಿನ ಮರದಂತೆಯೂ ಬೆಳೆಯುಬಹುದಿತ್ತು. ಅವರ ಕದಲದ ಜೀವನವನ್ನು, ದೀರ್ಘ ಬಾಳನ್ನು ಕಂಡು-ಹುಣಿಸೆಮರ-ಹಲಸಿನಮರ ಎಂದು ಅಪಾಲಾಪಿಸಿದೆ. ಎರಡು ಮರಗಳೂ ದೀರ್ಘಕಾಲ ಬೆಳೆಯುವಂಥವು. ಹಲಸಿನ ಮರದ ಮೋಪು ನೂರಾರು ವರ್ಷಕಾಲ ಬಾಳುತ್ತದೆ. ಹುಣಿಸೆ ಒನಕೆ ಕುಟ್ಟಿದಷ್ಟೂ ಸವೆಯುವುದಿಲ್ಲ. ಒಂದು ರೀತಿಯಿಂದ ನೋಡಹೋದರೆ, ನಮ್ಮ ಅಜ್ಜಿ ಹುಣಿಸೆಗೆ ಸಮ. ಅವರ ಮಾತುಗಳು ಹುಳಿ ಸಿಹಿ ಬೆರೆತ ಮಾತುಗಳು. ಆದರೆ ಅವರು ಹಾಗೆ ಬೇರೆ ಕಡೆ ಬೆಳೆದು ಬೇರೂರುವ ಬದಲು, ನಮ್ಮ ಮನೆಯ ಮುಂದಿನ ಅಶ್ವತ್ಥವೃಕ್ಷದ ಬೀಳಲುಗಳಂತೆ ಹುಟ್ಟಿದ ಕುಲಕ್ಕೇ ಹೆಣೆದುಕೊಂಡು ಬದುಕಿದ್ದಾರೆ.

ನಮ್ಮ ಮುತ್ತಜ್ಜ, ಕೊಲ್ಲೂರು ಮೂಕಾಂಬಿಕೆಯ ನೆನಪಿಂದಲೋ ಏನೋ, ಅವರಿಗೆ ಚಿಕ್ಕಂದಿನಲ್ಲಿ ಮೂಕಾಂಬಿಕೆಯೆಂದೇ ಹೆಸರನ್ನಿಟ್ಟರು. "ಮೂಕಿ" ಎಂದೇ ಅವರನ್ನು ಅವರ ಹಿರಿಯರು ಕರೆಯುತ್ತಿದ್ದರಂತೆ. ಆ ಹಿರಿಯರ ಹೆಸರನ್ನೆಲ್ಲ ಹೇಳಿ, ನಿಮ್ಮನ್ನು ದಣಿಸುವುದಿಲ್ಲ. ನನ್ನ ಅಜ್ಜನಿಗಿಂತ ಮೂಕಿ ಒಂದೆರಡು ವರ್ಷಕ್ಕೆ ಕಿರಿಯವರಿರಬೇಕು. ಹತ್ತು ತುಂಬುವ ಮೊದಲೇ ಅವರಿಗೆ ಲಗ್ನವಾಯಿತು, ಶಾಸ್ತ್ರೋಕ್ತವಿಧಿಯಿಂದ. ನನಗೆ ನನ್ನ ಅಜ್ಜನನ್ನು ಕಂಡ

ನೆನಪೇ ಬರುವುದಿಲ್ಲ. ಅವರು ತೀರಿಕೊಂಡು ಬಹಳ ಕಾಲವಾಯಿತು. ಅವರಿರುತ್ತಿದ್ದರೆ ಎಷ್ಟೋ ವಿಷಯಗಳಲ್ಲಿ ಅಜ್ಜಿ ಹೇಳಿದ ವಿಷಯಗಳು ನನಗೆ ಅರ್ಥವಾಗದಾಗ, ಅವರಲ್ಲಿಗೆ ದೂರನ್ನೊಯ್ದು ಸರಿಪಡಿಸಿಕೊಳ್ಳುತ್ತಿದ್ದೆ. ನನಗೆ ಈ ಅಜ್ಜಿಯ ಬಾಲ್ಯವನ್ನು ಕುರಿತು ತಿಳಿದುಬಂದ ಸಂಗತಿ ನೇರವಾಗಿ ಬಂದುದಲ್ಲ. ಅವರು ತಮ್ಮ ಸೊಸೆಗೆ ಹೇಳಿ, ಆಕೆಯ ಅರ್ಧಮರ್ಧ ನೆನಪಿನಿಂದ ನನಗೆ ಬಂದುದು. ಎಳೆಯನಾಗಿದ್ದಾಗ ಕಿವಿಯ ಮೇಲೆ ಬಿದ್ದ ಅಂಥ ಎಷ್ಟೋ ಸಂಗತಿಗಳನ್ನು ಕುರಿತು, ನನಗೆ ಸ್ವಲ್ಪ ಬುದ್ಧಿ ಬಂದ ಮೇಲೆ ಅವರನ್ನೇ ಕೇಳಿ ತಿಳಿಯಲು ಹಂಬಲಿಸಿದ್ದೆ. ಆದರೆ, ಅವರು ತಮ್ಮ ವಿಷಯದಲ್ಲಿ ಹೆಚ್ಚಿಗೆ ಏನನ್ನು ಹೇಳುವುದಕ್ಕೂ ಇಷ್ಟಪಡುವುದಿಲ್ಲ ಎಂಬುದು ಗೊತ್ತಾಯಿತು.

ಮೂಕಾಂಬಿಕೆ ಮದುವೆಯಾಗಿ ಗಂಡನ ಮನೆ ಸೇರಿದಳು. ನಮ್ಮ ಊರಿಂದ ಮೂರು ಹರದಾರಿ ದೂರದ ಚಂಬೂರು, ಮಾವನ ಮನೆಯಂತೆ. ಅವರಿಗೆ ಆಗ ಹತ್ತು ಪೂರ್ಣ ಆಗಿರಲಿಲ್ಲ ಎಂದೆ. ಗಂಡನಿಗೆ ಹದಿನಾಲ್ಕೋ, ಹದಿನೈದೋ, ಅಷ್ಟೇ. ಅಷ್ಟು ಕಡಿಮೆ ವಯಸ್ಸು. ಮದುವೆಯಾಗಿ ಆರೋ, ಮೂರೋ ತಿಂಗಳಲ್ಲಿ ಆತ ಸನ್ನಿಪಾತದಿಂದ ತೀರಿಕೊಂಡ. ಹತ್ತು ತುಂಬದೆ ಹೋದರೂ ವಿಪತ್ತು ಮಾತ್ರ ತುಂಬಿಬಂದಿತು. ಆಮೇಲೆ ಮುತ್ತಜ್ಜ ಅವಳನ್ನು ತಮ್ಮ ಮನೆಗೆ ಕರೆದುಕೊಂಡು ಬಂದರು. ನಾನು ಈ ಕಥೆಯನ್ನು - ನಮ್ಮ ಮನೆ, ನಮ್ಮ ಮನೆ - ಅನ್ನುತ್ತಿದ್ದೇನೆ, ಅದು ಹಿಂದಿದ್ದ ಸ್ಥಳದಲ್ಲಿಯೇ ಇದೆ. ಈ ದೀರ್ಘಾವಧಿಯಲ್ಲಿ ಅದರ ಆಕಾರ ಮಾತ್ರ, ನಾಲ್ಕಾರು ಬಾರಿ ಬದಲುಗೊಂಡಿದೆ. ಅದೇ ದೀರ್ಘಾವಧಿಯಲ್ಲಿ ಅಜ್ಜಿಯು ಜೀವನ ಯಾವ ಆಕಾರ, ವಿಕಾರಗಳಿಗೆ ಗುರಿಯಾಯಿತೆಂದು ಮಾತ್ರ ಹೇಳಲಾರೆ. ಆದರೆ, ಅವರ ಬಾಲ್ಯದಲ್ಲಿ ಬಂದ ವಿಪತ್ತಿನಿಂದಾಗಿ, ತಂದೆ ಇರಿಸಿದ ಹೆಸರು ಅನ್ವರ್ಥವಾಯಿತು. ಬಹಳ ಕಾಲವೂ ಕರೆಯುತ್ತಿದ್ದ ಹೆಸರಿನಂತೆ - ಅವರು ಮೂಕಿಯೇ ಆದರು - ಅನ್ನುತ್ತಾರೆ. ಮನೆಗೆಲಸಗಳಲ್ಲಿ ಎಂದೂ ಆಲಸ್ಯ ತೋರಿಸಿದವರಲ್ಲವಾದರೂ, ಯಾರೊಡನೆಯೂ ಅವರು ಮಾತುಕತೆ ಇಚ್ಛಿಸಲಿಲ್ಲವಂತೆ. ಉಂಟು-ಇಲ್ಲ, ಬೇಕು-ಬೇಡ-ಎಂಬುದಕ್ಕಿಂತ ಹೆಚ್ಚಿಗೆ ಆಡಿದವರಲ್ಲವಂತೆ. ಈಗ ನೆನೆದರೆ ನನಗೆ ಅದೊಂದು ಆಶ್ಚರ್ಯವಾಗಿ ಕಾಣಿಸುವುದಿಲ್ಲ. ಅಂಥ ಎಳೆವಯಸ್ಸಿನಲ್ಲಿ ಅವರ ಮೇಲೆ ಯಾವ ಬಗೆಯ ಮೋಹ ಬೆಳೆದುಬರುವುದಕ್ಕೆ ಸಾಧ್ಯ? ಮುಂದೆ ಅವರು ಈ ಗ್ರಾಮದ ಗಡಿಯನ್ನು ಬಿಟ್ಟುಹೋದವರೂ ಅಲ್ಲ - ಅನ್ನುತ್ತಾರೆ.

ನಮ್ಮ ಅಜ್ಜನಿಗೆ ಮುಪ್ಪು ಸಮೀಪಿಸಿದಾಗ, ಕಾಶೀಯಾತ್ರೆ ಮಾಡುವ ಇಚ್ಛೆಯಾಗಿ "ಬಾ, ಒಂದು ಯಾತ್ರೆಯನ್ನು ಮಾಡಿ ಬರುವ" ಎಂದರಂತೆ. ಅದಕ್ಕೆ ಇವರು "ಒಲ್ಲೆ" ಎಂದರಂತೆ. "ಅಲ್ಲಿ ಇರುವ ದೇವರು ಇಲ್ಲಿಯೂ ಇದ್ದಾನೆ" ಎಂದು ಹೇಳಿ, ಒಳಕ್ಕೆ ಹೋಗಿ ಕುಳಿತರಂತೆ.

ನಮ್ಮ ಅಜ್ಜನ ಕಾಲ ಸಂದಿತು. ಅವರ ಸ್ಥಾನದಲ್ಲಿ ಅಜ್ಜಿ ಮನೆಯ ಒಂದು ಗೋಡೆಯಷ್ಟು ಆಧಾರವಾಗಿ ಇಲ್ಲೇ ಬಾಳಿ ಬದುಕಿದರು. ಅಜ್ಜ ತೀರಿಕೊಂಡ ಸ್ವಲ್ಪದರಲ್ಲಿ ನನ್ನ ನಿಜದ ಅಜ್ಜಿಯೂ ತೀರಿಕೊಂಡರಂತೆ. ಸಂಸಾರದಲ್ಲಿ ಇನ್ನೂ ನಾಲ್ಕಾರು ಹುಟ್ಟು ಸಾವುಗಳು ಆದವು. ನನ್ನ ತಂದೆ ಅವರ ತೊಡೆಯ ಮೇಲೆ ಬೆಳೆದರು. ಜೀವನದ ಹಿಗ್ಗು, ಕುಗ್ಗುಗಳು ಅವರ ಕಣ್ಮುಂದೆ ನಲಿದಾಡಿದವು. ನಮ್ಮ ತಂದೆ ತೀರಿಕೊಂಡ ಕಾಲದಲ್ಲಿ, ಅವರ ಬಾಯಿಯಿಂದ ಬಂದ ಒಂದು ಚಿಕ್ಕ ಕಹಿ ಮಾತನ್ನು ಚಿಕ್ಕವನಾದ ನಾನು ಕೇಳಿದ್ದೆ; 'ಎಲ್ಲರಿಗೂ ಕಾಲ ಬರುತ್ತದೆ, ಒಂದೊಂದು ದಿನ. ಬಾರದವಳೆಂದರೆ ನಾನೇ' ಎಂದರು. ಆ ಮಾತನ್ನು ಕೇಳಿದಾಗ ನನ್ನ ಮೈ ಜುಮ್ಮೆಂದಿತು. ನನ್ನ ತಂದೆಯ ಮರಣದಿಂದ ನಾನು ತಬ್ಬಲಿಯಾಗಿ ನಡುಗುತ್ತಿದ್ದಾಗ ಅವರಾಡಿದ ಮಾತದು.

ಆ ದಿವಸ ಅವರ ವರ್ತನೆ, ಮಾತುಗಳು ಎಲ್ಲವೂ ನನಗೆ ಅದ್ಭುತವಾಗಿ ಕಾಣಿಸಿದುವು. ಅವರು ಶವದ ಬಳಿಗೆ ಬಂದು ನಿಂತರು, ಕುಳಿತರು; ಆದರೂ ಕಣ್ಣೀರಿಡಲಿಲ್ಲ. 'ನೀನು ಒಂದು ಕೆಲಸ ಒಳ್ಳೆಯದು ಮಾಡಿದ್ದೀಯ. ಅವಳನ್ನು ಮೊದಲೇ ಕಳುಹಿಸಿಕೊಟ್ಟೆ. ಈ ಮಕ್ಕಳ ಚಿಂತೆ ನಿನಗೆ ಬೇಡ. ನಾನು ನೋಡಿಕೊಂಡೇನು; ನೀನು ಹೋಗಿ ಬಾ' ಎಂದರು. ಕಂಬನಿಯಿಂದ ಥರಥರಿಸುತ್ತಿದ್ದ ನನ್ನನ್ನು ಕಂಡು 'ಇದೇ ಏನು ನಿನ್ನ ಗಂಡಸುತನ?' ನೀನೇನು, ನಾನೇನು, ಯಾರೇನು? ಯಾರು ಶಾಶ್ವತ? ಹೋಗಿ ಕೊಳ್ಳಿ ಇಟ್ಟು, ಉರಿಸಿ ಬಾ. ಇದೆಲ್ಲ ಒಂದು ಆಟ. ಕನಸು ಅಂದರೆ ಕನಸು, ನಾವು ಕಟ್ಟಿಕೊಂಡ ಹಾಗಿರುತ್ತದೆ ಕನಸು. ಒಳ್ಳೆಯದು ಎಂದರೆ ಒಳ್ಳೆಯದು; ಕೆಟ್ಟದು ಎಂದರೆ ಕೆಟ್ಟದು. ಇದು ಭ್ರಮೆ ಎಂದರೆ ಭ್ರಮೆ; ನಿಜ ಅಂದರೆ ನಿಜ.

ನಿನಗೆ ಹೇಳುತ್ತೇನೆ. ನಮಗೆ ಕನಸು ಗಿನಸು ಎಂಬುದಿರುವ ತನಕವೂ ಇದೂ ಅಷ್ಟೇ ನಿಜ. ಸಂಸಾರವೂ ಹಾಗೆಯೇ, ಸುಖ-ದುಃಖಗಳೂ ಹಾಗೆಯೇ, ಈ ಜಗತ್ತು ಕೂಡ ಹಾಗೆಯೇ, ದೇವರೂ ಹಾಗೆಯೇ, ದಿಂಡರೂ ಹಾಗೆಯೇ, ಅವು ಎಲ್ಲವೂ ನಾವು ಕಟ್ಟಿಕೊಂಡ ಹಾಗೆ. ಗಟ್ಟಿಮಾಡಿಕೊ ಮನಸ್ಸನ್ನು.

"ಯಾಕೆ ಹೆದರುತ್ತೀಯಾ? ಹೋಗು. ಕಳುಹಿಸಿಕೊಟ್ಟು ಬಾ. ಗಂಡು ಮಗ ನೀನಲ್ಲವೇ" ಎಂದರು. ನಾನು ತೀರ ನಾಚಿ, ತಗ್ಗಿ, ಕುಗ್ಗಿ ಮುಂದಿನ ವಿಧಿಗಳನ್ನು ಮುಗಿಸಿ ಮನೆಗೆ ಬಂದೆ. ಮುಂದೆ ಬಹಳ ಕಾಲದ ತನಕವೂ ಅವರ ಬಾಯಿಯಿಂದ ಇಂಥ ದಿಟ್ಟ ಮಾತುಗಳನ್ನು ನಾನು ಕೇಳಿದ ನೆನಪಾಗುವುದಿಲ್ಲ. ಆ ಒಂದು ಕ್ಷಣಕ್ಕೆ ಮಾತ್ರ ನಮ್ಮ ಅಜ್ಜಿ ಇನ್ನೊಂದೇ ವಿಚಿತ್ರ ವ್ಯಕ್ತಿಯಾಗಿ ಕಾಣಿಸಿದರು ನನಗೆ.

ತಂದೆಯವರು ತೀರಿಕೊಂಡರೂ, ಮನೆಯ ಭಾರ ನನ್ನ ಮೇಲೆ ಬೀಳುವುದಕ್ಕೆ ಬಿಡಲಿಲ್ಲ. ನನ್ನ ಮತ್ತು ನನ್ನ ತಮ್ಮನ ಓದು, ಬರಹಗಳನ್ನು ಹಾಳುಗೆಡೆಯಲು ಅವಕಾಶ

ಕೊಡಲಿಲ್ಲ. ನಾನು ಓದನ್ನು ಮುಗಿಸಿ, ಮನೆಗೆ ಬಂದ ವರ್ಷವೇ, ನನಗೆ ಪ್ರಾಯ ಬಹಳವಾಗಿರದಿದ್ದರೂ, ಒಲಿಸಿ, ಒತ್ತಾಯ ಮಾಡಿ, ಮನೆಗೆ ಒಂದು ಹೆಣ್ಣನ್ನು ಬರಮಾಡಿಕೊಂಡರು. ಅಲ್ಲಿಯ ತನಕ ಅವರು ಹೇಗೆ ಮನೆವಾರ್ತೆ ನಿರ್ವಹಿಸಿದರು-ಎಂಬ ಸಂಗತಿಯೊಂದೂ ನನಗೆ ತಿಳಿಯುವುದಿಲ್ಲ. ಅಲ್ಪಸ್ವಲ್ಪ ಮನೆಯ ಬೇಸಾಯ ಮಾಡಿಸಿದ್ದೂ ಉಂಟು. ಅವರ ಪ್ರೀತಿ, ಆದರ, ಪೋಷಣೆಗಳಲ್ಲಿ ಬೆಳೆದ ತಮ್ಮನನ್ನೂ ನನ್ನನ್ನೂ ಕುಳ್ಳಿರಿಸಿ ಕೊಂಡು, ಹಲವಾರು ಕಥೆಗಳನ್ನು ಹೇಳಿದ ನೆನಪು ಬರುತ್ತದೆ. ಕಥೆ ಹೇಳಿ ನಗಿಸಿದರು, ಕಣ್ಣೀರು ಕರೆಸಿದರು; ಕಣ್ಣೀರು ಬಂದ ತಕ್ಷಣ ಇನ್ನೊಂದು ಕಥೆ ಹೇಳಿ ನಗಿಸಿದರು. ಕೆಲವೊಮ್ಮೆ ನಾನು "ಅಜ್ಜಿ, ಅದು ನಿಜವೇ? ನಿಜಕ್ಕೂ ಹಾಗಾಯಿತೇ?" ಎಂದು ದೀನಮುಖದಿಂದ ಕೇಳಿದರೆ,

"ಮಗು, ಕತೆ ಕತೆಯೇ" ಅನ್ನುತ್ತಿದ್ದರು.

"ನಿಜ ಅಲ್ಲ ಅನ್ನುತ್ತೀರಾ?" ಎಂದು ನಿರಾಶೆಯಿಂದ ಪ್ರಶ್ನಿಸಿದರೆ,

"ನಿನಗೆ ಏನಾಗಬೇಕೀಗ? ಪುಣ್ಯಕೋಟಿ ದನ ಹುಲಿಯ ಬಾಯಿಗೆ ಬೀಳಬೇಕೆಂದಿದೆಯೋ?"

"ಇಲ್ಲ."

"ಹುಲಿ ಮೇಲಕ್ಕೆ ಹಾರಿ ಪ್ರಾಣ ಬಿಡಬಾರದು ಎಂದಿದೆಯೋ?"

"ಇಲ್ಲ."

"ಹಾಗಿದ್ದ ಮೇಲೆ! ಒಂದನ್ನು ಒಂದು ತಿಂದೇ ಬದುಕಬೇಕು ಈ ಜಗತ್ತಿನಲ್ಲಿ. ಹುಲಿಯಿದ್ದರೆ ದನವಿಲ್ಲ; ದನವಿದ್ದರೆ ಹುಲಿಯಿಲ್ಲ."

"ಎರಡೂ ಬದುಕಲಿ" ಎಂದೆ ನಾನು.

"ಮತ್ತೆ? ಹುಲಿ ಏನು ತಿನ್ನಬೇಕು, ಹುಲ್ಲನ್ನೇ? ಹುಲ್ಲಿಗೂ ಜೀವ ಇದೆಯಲ್ಲ. ಹಾಗೆ ಕತೆ ತಿರುಗಿಸಿದರೆ ಹುಲ್ಲನ್ನು ತಿನ್ನಲು ಬಂದ ದನವನ್ನು ಕಂಡು, ಹುಲ್ಲು ಹೆದರಿ ತನ್ನ ಮರಿಯ ಹತ್ತಿರ ಹೋಗಿಬರುತ್ತೇನೆ ಎನ್ನಬೇಕಾದೀತು."

ನನ್ನ ಅಜ್ಜಿ ನನಗೆ ಹೇಳಿದ ಇಂತಹ ನೂರಾರು ಕಥೆಗಳನ್ನು ನಮ್ಮ ಮನೆಗೆ ನನ್ನ ಕೈಹಿಡಿದ ಸೀತೆ ಬಂದುದರ ಹೊಸತಿನಲ್ಲಿ ಹಲವಾರು ಬಾರಿ ಹೇಳಿದ್ದೆ. ಅವಳು ತವರುಮನೆಯಿಂದ ನಮ್ಮ ಮನೆಯನ್ನು ಸೇರಿದ ಮೇಲೆ ಅಲ್ಲಿನ ಸುದ್ದಿ, ಸೂರುಗಳನ್ನು ಕೇಳಿ ದುಃಖಪಟ್ಟಾಗ, ಅವಳನ್ನು ಸಮಾಧಾನ ಪಡಿಸುವುದಕ್ಕಾಗಿ ಅಜ್ಜಿಯ ಸೋಗನ್ನು ತೊಟ್ಟವನ ಹಾಗೆ, ಏನೇನೋ ಹೇಳಿದ್ದುಂಟು. 'ಜೀವನ ಕನಸು, ನಿಜ. ಅದೊಂದು ನಾಟಕವೂ ಇರಬಹುದು. ಆದರೂ ಅದು ಇರುವಷ್ಟು ಕಾಲ, ಅದರೊಳಗೆ ವೇಷ ಹಾಕಿ

ಕುಣಿಯುವ ಕೆಲಸವಷ್ಟೇ ನಮ್ಮದು. ನಮಗೆ ಒಪ್ಪುವ ವೇಷಕ್ಕೆ ಸಮನಾಗಿ ಕುಣಿಯುವ' ಎಂದು ಅಜ್ಜಿಯ ಮಾತಿಗೆ ನನ್ನದೇ ಆದ ಅರ್ಥವನ್ನು ಮಾಡಿಕೊಂಡು, ನನ್ನ ಮಡದಿಗೆ ಸಮಾಧಾನವನ್ನು ಹೇಳಿದ್ದುಂಟು.

ಈಗಲೂ ನನಗೆ ನಮ್ಮ ಅಜ್ಜಿಯ ಮುಂದಕ್ಕೆ - ನಾನು ದೊಡ್ಡವನಾಗಿದ್ದೇನೆ - ಎಂದು ಏನೇನೂ ಕಾಣಿಸುತ್ತಿಲ್ಲ. ನನಗೀಗ ಮದುವೆಯಾಗಿದೆ. ಇಬ್ಬರು ಮಕ್ಕಳಿದ್ದಾರೆ. ಆದರೆ ನಮ್ಮ ಅಜ್ಜಿ ನಮ್ಮ ಸಣ್ಣದರಲ್ಲಿ ನಮಗೆ ಕತೆ ಹೇಳಿದಂತೆ, ಅವರಿಗೆ ಮಾತ್ರ ಕತೆ ಹೇಳಿದ್ದನ್ನು ಕಾಣೆ. ಸೀತೆ ನಮ್ಮ ಮನೆಗೆ ಬಂದು ಕಾಲಿರಿಸಿದಂದಿನಿಂದ ಅವಳಿಗೇ ಯಾವತ್ತು ಯಜಮಾನಿಕೆ ಪಟ್ಟವನ್ನು ಕಟ್ಟಿ, ದೂರ ಉಳಿದಿದ್ದಾರೆ. ನಮ್ಮ ತಂದೆ ಬದುಕಿರುವ ಕಾಲದಲ್ಲಿಯೂ ತಾನು ಸಹ ಇದೇ ಮನೆಯಲ್ಲಿದ್ದೇನೆ - ಎಂದು ತೋರಿಸಿಕೊಂಡವರಲ್ಲ. ಅವರಿಗೂ ಸಂಸಾರದ ಸುಖದುಃಖಗಳನ್ನು ಕಂಡು ಬೇಸರ ಬಂದಿರಲೂಬಹುದು. ಆದರೆ ನೋಡಿ, ನನ್ನನ್ನು ಬೇಸರಗೊಳಿಸುವ ಒಂದು ವಿಷಯವನ್ನು ಮಾತ್ರ ಇಲ್ಲಿ ಹೇಳದಿರಲಾರೆ. ನಮ್ಮ ಮನೆಗೆ ಬಂದು ಹೋಗುವ ಯಾರಿಗಾದರೂ ಸರಿಯೆ, ನಮ್ಮ ಅಜ್ಜಿಯ ವಿಷಯದಲ್ಲಿ ಹೆಚ್ಚಿನ ಆದರ ಇರುವ ಹಾಗೆ ಮಾತ್ರ ಕಾಣಿಸುವುದಿಲ್ಲ.

ಅನೇಕರು ಮನೆಗೆ ಬರುತ್ತಿರುತ್ತಾರೆ; ಅವರ ಹತ್ತಿರಕ್ಕೇ ಹೋಗುವುದಿಲ್ಲ. ದೊದಲು, ಮೊದಲು ಅವರನ್ನು ಮಾತನಾಡಿಸುತ್ತಿದ್ದವರು ಕೂಡ, ನಾನು ಮನೆಯ ಹೊಣೆಯನ್ನು ಹೊತ್ತ ಮೇಲೆಯೂ ಅವರ ಹತ್ತಿರ ಯಾರೂ ಮಾತನಾಡುವುದಿಲ್ಲ. ಅಜ್ಜಿಗೆ ಅರೆಮರುಳು ಎಂಬ ಅಭಿಪ್ರಾಯ ನಮ್ಮ ಊರವರಿಗೆ.

ಅದಕ್ಕೆ ಇದೊಂದು ಕಾರಣವಿರಬಹುದು-ಅವರ ಕೈಗೆ ಏನಾದರೂ ವಸ್ತು-ಒಡವೆ ಬಂತೆಂದರೆ ಅಥವಾ ಮಕ್ಕಳು ಕೈಗೇನಾದರೂ ಕೊಟ್ಟುವೆಂದರೆ ಎರಡು ನಿಮಿಷ ಕಣ್ಣುಮುಚ್ಚಿ ಕುಳಿತುಕೊಳ್ಳುತ್ತಾರೆ. ಆ ಬಳಿಕ ತಮ್ಮಷ್ಟಕ್ಕೆ ಏನೇನೋ ಕನಸು ಕಂಡವರ ಹಾಗೆ ಗೊಣಗುತ್ತಾರೆ. ಅವರ ಈ ಗೊಣಗು ಮಾತುಗಳನ್ನು ಕೇಳಿ ಹಾಗೇನಾದರೂ ಅಭಿಪ್ರಾಯ ಬರುವುದು ಸಹಜ. 'ಮೂಕಜ್ಜಿಗೆ ಮುಪ್ಪಿನ ಮರುಳು! ತಮ್ಮಷ್ಟಕ್ಕೆ ಆಡಿಕೊಳ್ಳುತ್ತಿರುತ್ತಾರೆ. ಸೊಯಗೆಟ್ಟು ಮಾತನಾಡತೊಡಗಿದರೆ ನಿಲ್ಲಿಸುವುದೇ ಇಲ್ಲ' ಎನ್ನುತ್ತಾರೆ. ಹಾಗೆ ಬಂಧು, ಮಿತ್ರರು ಅಭಿಪ್ರಾಯ ಪ್ರಕಟಿಸುವುದನ್ನು ಕೇಳಿದಾಗ ನನಗೆ ನೋವಾಗುತ್ತದೆ. ನನಗೆ ಇಪ್ಪತ್ತೈದನೆಯ ವರ್ಷಕ್ಕೆ ಮದುವೆಯಾಯಿತು. ಅಂದಿನಿಂದ ನಾನು ಮನೆಗೆ ಯಜಮಾನ; ನಮ್ಮ ಸೀತೆ ಯಜಮಾನಿ. ಅಜ್ಜಮ್ಮ ತಮ್ಮಷ್ಟಕ್ಕೆ ಮಾತನಾಡುವ ಮರುಳಜ್ಜಿ. ಕೆಲವು ಸಾರಿ ನನ್ನ ಎರಡು ಮಕ್ಕಳೂ ಅವರ ಬಳಿಗೆ ಹೋಗಿ ಅವರ ಕೈಯಲ್ಲಿ ಏನಾದರೂ ಕೊಟ್ಟು, ಅವರು ತಮ್ಮಷ್ಟಕ್ಕೆ ಏನಾದರೂ ಅನ್ನತೊಡಗಿದರಾದರೆ, ಅವು ಓಡಿಬಂದು ತಮ್ಮ ತಾಯಿಯೊಡನೆ 'ಅಮ್ಮಾ ಅಜ್ಜಿಗೊಬ್ಬ ರೊಣೆಯ ಕಾಣಿಸಿದನಂತೆ. ಅವನು ಭಾರಿ

ಠೊಣೆಯನಂತೆ' ಎಂದು ಹೇಳಿ ನಗುವುದುಂಟು. ಅಂಥ ಪ್ರಸಂಗಗಳಲ್ಲಿ ನನ್ನ ಮಡದಿಗೆ ಮಕ್ಕಳ ಬಾಯಿಯನ್ನು ಕಟ್ಟುವುದೇ ಕಷ್ಟದ ಕೆಲಸವಾಗುತ್ತದೆ.

"ನೀವು ಅವರ ಹತ್ತಿರ ಹೋಗಬೇಡಿ. ಅವರಿಗೆ ಏನು ಕಾಣಿಸುತ್ತದೋ, ಏನು ಬಿಡುತ್ತದೋ! ನಿಮಗೆ ಯಾಕೆ ಅದೆಲ್ಲ?"

"ಸುಳ್ಳು ಸುಳ್ಳೇ ಹೇಳುತ್ತಾರಮ್ಮ ಅವರು."

"ಸುಮ್ಮನಾಗಿ ಎಂದೆನಲ್ಲ" ಎಂದು ಗದರಿಸಿ, ಅವನ್ನು ಕಳುಹಿಸಿಕೊಡುವ ಪಾಡು ಬರುತ್ತದೆ. ನನ್ನ ಮಕ್ಕಳು ಕೂಡ ಅವರಿಗೆ ಹುಚ್ಚೆಂದೇ ತಿಳಿದುಕೊಂಡಿದ್ದರೆ ನಾನು ಏನೂ ಮಾಡುವ ಹಾಗಿಲ್ಲ. ಅದು ಮಾತ್ರ ನನ್ನ ಮನಸ್ಸನ್ನು ತುಂಬ ನೋಯಿಸುತ್ತದೆ. ನನ್ನ, ಅವರ ಋಣಾನುಬಂಧ ಅಷ್ಟು ಬಿಗುವಾದುದರಿಂದ, ಇಂಥ ಸ್ಥಿತಿಯಲ್ಲಿ ನಾನೊಮ್ಮೆ ಅವರ ಜತೆಯಲ್ಲಿ ಅಶ್ವತ್ಥದ ಕಟ್ಟೆಯಲ್ಲಿ ಕುಳಿತಿದ್ದೆ. ಅವರು ನನ್ನ ಕಡೆ ದೃಷ್ಟಿ ಹರಿಸದೆ ಏನೇನೋ ತಮ್ಮಷ್ಟಕ್ಕೆ ಗೊಣಗುತ್ತಿದ್ದರು. ಅದನ್ನು ಕಂಡಾಗ ನನಗೆ 'ಇಷ್ಟು ಪ್ರಾಯವಾಗುವ ತನಕ ಯಾರೂ ಬದುಕಿರಬಾರದಪ್ಪ' ಎಂಬ ಯೋಚನೆ ಬಂತು. ಮರುಕ್ಷಣ ಅವರ ಬಾಯಿಯಿಂದ "ಮಗು, ನಿನಗೆ ನಿನ್ನ ಅಜ್ಜಿ ಭಾರವಾದಳೇ? ನನ್ನ ಸಾವನ್ನು ನೆನೆಯುತ್ತ ಇದ್ದೀಯಲ್ಲ' ಎಂದು ಹೇಳಿ, ನಕ್ಕು ಬಿಟ್ಟರು. ನನ್ನ ಎದೆ ಧಡಲ್-ಎಂದಿತು. ಎಲ್ಲಿಲ್ಲದ ಭಯವಾಯಿತು. 'ಅಜ್ಜಿ, ದಮ್ಮಯ್ಯ; ನಿಮ್ಮ ಮಾತು ಕೇಳಿ, ನಿಮ್ಮಷ್ಟಕ್ಕೆ ನೀವು ಗೊಣಗುವುದನ್ನು ಕಂಡು, ಒಂದು ಕ್ಷಣ ಹಾಗೆನಿಸಿದ್ದು ನಿಜ. ಅದು ನೀವು ಬೇಡವಾಗಿಯೂ ಅಲ್ಲ; ಭಾರವಾಗಿಯೂ ಅಲ್ಲ. ಮನಸ್ಸಿನ ಮೇಲೆ ಹತೋಟಿ ಇಲ್ಲದಾಗ ಬದುಕಿ ಫಲವೇನು-ಎಂದು ಕಾಣಿಸಿದ್ದು ನಿಜ. ತಪ್ಪಾಯಿತು ನನ್ನಿಂದ' ಎಂದೆ ದುಃಖದಿಂದಲೇ.

"ನನಗೆ ಅದು ಗೊತ್ತಾಗುತ್ತದೆ. ನಿನ್ನ ಮನಸ್ಸು ನನಗೆ ಗೊತ್ತಿಲ್ಲವೇ? ಆದರೂ ಹೇಳಿದೆ ಚೇಷ್ಟೆಗೆ; ನಿನ್ನ ತಲೆಯಲ್ಲಿ ಸುಳಿದ ವಿಚಾರವನ್ನು ತಿಳಿದೇ" ಎಂದರು.

"ನಿಮಗೆ ಹೇಗೆ ಗೊತ್ತಾಯಿತಪ್ಪ ಅದು?"

"ಹೇಗೋ! ನೀನು ಎಣಿಸಿದ್ದೆಲ್ಲ ನಾನೇ ಎಣಿಸಿದಷ್ಟು ಸ್ಪಷ್ಟವಾಯಿತು."

"ನೀವು ಆಗಾಗ ನಿಮ್ಮಷ್ಟಕ್ಕೆ ಏನೇನೋ ಅಂದುಕೊಳ್ಳುತ್ತೀರಲ್ಲ- ಏನದು?"

"ನನಗೆ ಏನೇನೋ ಕಾಣಿಸುತ್ತದೆ, ಏನೇನೋ ಅನ್ನುತ್ತೇನೆ. ಒಂದೊಂದು ಸಾರಿ ಹಾಗೆ ಮಾಡುತ್ತಿರುವುದಂತು ನಿಜ. ಏನಾದರೂ ಕಾಣಿಸತೊಡಗಿತೆಂದರೆ ನನಗೆ ನಾನೇ ಮರವೆಯಾಗಿ, ಕಾಣಿಸಿದ್ದನ್ನು ಕುರಿತು ಮಾತಾಡುತ್ತೇನೆ. ಅದೂ ಒಂದು ತೆರ ಕನಸಿದ್ದರೂ ಇದ್ದೀತು."

ಒಂದು ದಿವಸ ಅವರು ಹೀಗೆಯೇ ತಮ್ಮಷ್ಟಕ್ಕೆ ಗೊಣಗುತ್ತಿದ್ದಾಗ, ಮರೆಯಲ್ಲಿ ನಿಂತು, ಕಿವಿಗೊಟ್ಟು ಅವರ ಆತ್ಮಗತ ಸಂಭಾಷಣೆಯನ್ನು ಕೇಳತೊಡಗಿದೆ. ಕೇಳಿ ಬಲು ಆಶ್ಚರ್ಯವಾಯಿತು. ಯಾವುದೋ ಪ್ರತ್ಯಕ್ಷ ಘಟನೆಯೊಂದು ನಡೆಯುತ್ತಿದ್ದಂತೆ, ಅದಕ್ಕೆ ಸಾಕ್ಷಿಯಾದ ಅವರು ಅದನ್ನು ಬಣ್ಣಿಸುವಂತೆ ಕಂಡಿತು. ನಾನು ಥಟ್ಟನೆ "ಅಜ್ಜಿ, ಹೇಗಿದ್ದೀರಿ?" ಎಂದು ಕೇಳಿದೊಡನೆಯೇ, ಅವರ ಕನಸು ಭಂಗವಾಯಿತು.

"ಕರೆದೆಯೋ?" ಎಂದು ಪ್ರಶ್ನಿಸಿದರು.

"ಹೌದು, ಊಟಕ್ಕೆ ಬನ್ನಿ; ಹೊತ್ತಾಯಿತು" ಎಂದೆ. ನನ್ನ ಜತೆಯಲ್ಲಿ ಬಂದರು. ಊಟ ಮುಗಿಸಿ ಎರಡು ಗಳಿಗೆ ಮಲಗಿಕೊಂಡರು. ಹೆಚ್ಚಾಗಿ ಅವರು ಮನೆಯ ಜಗಲಿಯಲ್ಲಿ ಕುಳಿತೇ ಸಮಯ ಕಳೆಯುತ್ತಾರೆ. ಅಲ್ಲಿ ಕುಳಿತು, ಕುಳಿತು ಬೇಸರವಾದರೆ ಅಶ್ವತ್ಥದ ಕಟ್ಟೆಗೆ ಹೋಗಿ, ಅಲ್ಲಿ ತಮ್ಮ ಏಕಾಂತವನ್ನು ಮುಂದುವರಿಸುತ್ತಾರೆ. ಕಟ್ಟೆಯಲ್ಲಿ ಅವರು ನನಗೆ ಹೇಳಿದ ಹಲವಾರು ಕನಸಿನ ಕತೆಗಳನ್ನು ಸ್ಮರಿಸಿಕೊಂಡೆನಾದರೆ, ನಾನು ಓದಿದ, ಇಲ್ಲವೆ ಇತರರಿಂದ ಕೇಳಿದ ಕಥೆ ಅಥವಾ ಪುರಾಣಗಳು ಹೇಳುವ ಅವೆಲ್ಲ ಕತೆಗಳಿಗಿಂತಲೂ ಸ್ವಾರಸ್ಯವಾಗಿ ಕಾಣಿಸುತ್ತವೆ. ಮಾತ್ರವಲ್ಲ, ಇವು ಹೇಳುವ ಸತ್ಯವನ್ನು ಅವಾವುವೂ ಹೇಳುವುದಿಲ್ಲ ಎಂದೆನಿಸುತ್ತದೆ.

ಎಂಬತ್ತಾದರೂ ದಾಟಿರಬೇಕು ನಮ್ಮ ಅಜ್ಜಿಗೆ ವಯಸ್ಸು.

# ಅಧ್ಯಾಯ 2

ಇನ್ನು ನಿಮಗೆ ನಮ್ಮ ಊರಿನ ಕತೆಯನ್ನು ಹೇಳುತ್ತೇನೆ. ಇಂದು ನಮ್ಮ ಊರಿಗೆ ಬಂದು ಹೋಗುವ ಜನರು ಕಡಿಮೆ. ಕಾಡುಗುಡ್ಡಗಳ ಸೆರಗದು. ಎರಡು ಮೂರು ಹರದಾರಿಗಳೊಳಗೆ ಪಶ್ಚಿಮ ಘಟ್ಟದ ನಾಗನಕಾಲು ಎಂಬ ಬರೆಯೇ ಬರುತ್ತದೆ. ನಮ್ಮ ಊರಿನ ಒಟ್ಟು ಒಂದು ಮೈಲು ಪಾಸಲೆಯಲ್ಲಿ ನೂರು ಮನೆಗಳು ಇವೆಯೋ ಇಲ್ಲವೋ. ಅದೂ ಏನೆನ್ನುತ್ತೀರಿ? ಎಲ್ಲ ಜಾತಿಯಸ್ಥರ ಮನೆಗಳು. ನಮ್ಮ ನಾಡಿನಲ್ಲಿ ಎಷ್ಟೊಂದು ಜಾತಿ ಮತ್ತು ಮತಗಳು ಇವೆಯೋ-ಅವೆಲ್ಲವೂ ಇವೆ. ಮೊಗೇರರು, ಕುಡುಬಿಯರು, ಬಿಲ್ಲವರು, ಜೈನರು, ಬ್ರಾಹ್ಮಣರು, ಗಾಣಿಗರು, ಅಡ್ಡಜಾತಿಯವರು, ನೀಟಜಾತಿಯವರು- ಎಂದು ಜಾತಿಗಳ ಮಟ್ಟಿಗೆ ಪ್ರಾತಿನಿಧಿಕ ಹಳ್ಳಿ ನಮ್ಮದು. ಒಂದು, ಎರಡು, ಇಲ್ಲವೆ ಮೂರು, ನಾಲ್ಕು ಮನೆ ಒಂದೊಂದು ಜಾತಿಯವರದ್ದು. ಇಲ್ಲಿನ ಯಾರೊಬ್ಬರೂ ಊರು ಮನೆಯಲ್ಲಿ ನೆಂಟಸ್ತಿಕೆ ಬೆಳೆಯಿಸುವಂತಿಲ್ಲ. ಆಚೀಚಿನ ಹಳ್ಳಿಗಳಿಂದಲೇ ಹೆಣ್ಣನ್ನು ತರಬೇಕು; ಕೊಡಬೇಕು. ಅಂಥದರಲ್ಲಿ ಇಲ್ಲಿಯೇ ಹುಟ್ಟಿ, ಇಲ್ಲಿಯೇ ಬೆಳೆದು ಸಾಯದೆಯೂ, ಬದುಕದೆಯೂ ಉಳಿದಿರುವವಳು ತಾನೊಬ್ಬಳೇ ಎನ್ನುವುದುಂಟು, ನಮ್ಮ ಅಜ್ಜಿ.

ಅವರಿಗೆ ಪ್ರಿಯವಾಗಿರುವ ಒಂದು ತಾವು ನಮ್ಮ ಮನೆ ಮುಂದೆ ಹತ್ತು ಮಾರು ದೂರದಲ್ಲಿರುವ ಅಶ್ವತ್ಥದ ಕಟ್ಟೆ. ಚಿಕ್ಕವನಾಗಿರುವಾಗ ನಾನು ಅವರನ್ನು “ ಇದೇನು ಅಜ್ಜಿ, ಇಲ್ಲಿಗೆ ಬಂದು ಕುಳಿತಿರುವುದೆಂದರೆ ನಿಮಗೆ ಅಷ್ಟು ಖುಷಿ!” ಎಂದು ಪ್ರಶ್ನಿಸಿದ್ದೆ. ಅವರು ಹೀಗೆಂದ ನೆನಪಿದೆ: “ಮಾಣಿ, ಇದೂ ನನ್ನ ಹಾಗೆಯೇ ಇಲ್ಲಿಯೇ ಹುಟ್ಟಿ, ಇಲ್ಲಿಯೇ ಬೆಳೆದದ್ದು. ನಾನು ಒಂದು ನಾಲ್ಕು ದಿನ ನನ್ನ ಗಂಡನ ಮನೆಗೆ ಹೋಗಿ ಇದ್ದದ್ದು ನಿಜ. ನಾಲ್ಕೇ ದಿನ. ಆಮೇಲೆ ಇದ್ದದ್ದು ಇಲ್ಲಿಯೇ. ಈ ಅಶ್ವತ್ಥಕ್ಕೂ ಪ್ರಾಯ ಸಂದಿತು. ನನಗೂ ಸಂದಿದೆ. ಅದರ ಮುಂದೆ ನನ್ನ ಪ್ರಾಯ ಭಾರೀ ಅಲ್ಲ. ಅದಕ್ಕೆ ಸಾವಿರವೋ, ಹತ್ತು ಸಾವಿರವೋ.”

“ಹತ್ತು ಸಾವಿರವೇ? ಅಷ್ಟು ವರ್ಷಗಳ ತನಕ ಯಾವ ಮರವೂ ಬದುಕಲಾರದು.”

“ಮಗೂ, ಇದು ಅಶ್ವತ್ಥದ ಮರ. ಅಂತಿಂಥ ಮರವಲ್ಲ. ಈ ಮರ ನಿನ್ನೆ ಮೊನ್ನೆಯದಲ್ಲ. ಇದರ ಸುತ್ತ ಕಾಣಿಸುತ್ತಿರುವುದು ಹೊಸ ಬೇರು. ಹಳೆಯ ದಿಂಡು ಎಲ್ಲೋ ಏನೋ ಬೆಳೆದಿದೆ ಇಲ್ಲೇ. ನನ್ನ ಅಂದಾಜು-ಅದಕ್ಕೆ ಐನೂರರ ಮೇಲೆ

ಆಗಿರಬಹುದು ವರ್ಷ. ಅದಕ್ಕಿಂತ ಹಿಂದೆ ಅಂಥದೇ ಮರ ಇಲ್ಲೇ ಇದ್ದಿತ್ತು ಎಂದು ನನ್ನ ಅಂದಾಜು. ಅಂತೂ ನಮ್ಮ ಮೂಡೂರು ಊರು ಆದಂದಿನಿಂದಲೂ ಈ ಮರ ಇಲ್ಲಿಯೇ ಇದ್ದಿತ್ತು ಎಂದು ನನ್ನ ಯೋಚನೆ.

ನಾನು ಶಾಲೆಗೆ ಹೋಗಿ ನಾಲ್ಕು ಚುರುಕಿನ ಮಾತು ಕಲಿತ ಜಂಭಕ್ಕೆ "ಅಜ್ಜಿ, ನಮ್ಮದು ಎಂಥ ಊರು? ಸಾಗರ, ಶಿವಮೊಗ್ಗ, ಕುಂದಾಪುರ, ಉಡುಪಿ-ಅವಾದರೂ ಊರುಗಳು" ಎಂದೆ.

ಅವರು ನಕ್ಕರು: "ಹೌದು, ಹೌದು. ಈಗ ನಮ್ಮ ಊರು ಹೀಗಿದೆ ಅಂತಲೇ? ಹಿಂದೆ ಇದರ ಅಪ್ಪನ ಹಾಗಿನ ಊರು ಇಲ್ಲಿತ್ತು. ಇಕ್ಕೇರಿಗಿಂತ ದೊಡ್ಡದು. ಇಲ್ಲಿ ಒಂದು ಹರದಾರಿಯ ಸುತ್ತಿನೊಳಗೆ ಕಾಡಿನಲ್ಲಿ ಬಿದ್ದುಹೋದ ಗೋಡೆ, ಪೌಳಿ, ಮತ್ತೊಂದು-ಒಂದೆರಡು ಅನ್ನುತ್ತೀಯಾ?" ಎಂದರು.

ಅವರ ಮಾತನ್ನು ನೆನೆದು ಬೇಸಿಗೆಯ ರಜೆ ಬಂದಾಗಲೆಲ್ಲ ಬಿಡುವು ಸಿಕ್ಕಿದಾಗಲೆಲ್ಲ, ನನ್ನ ಸ್ನೇಹಿತ ಜನಾರ್ದನನನ್ನು ಕಟ್ಟಿಕೊಂಡು ನಮ್ಮ ಊರಿನ ಬರಿ ಬಯಲುಗಳನ್ನು ಮಾತ್ರವಲ್ಲ, ಕಾಡು ಗುಡ್ಡಗಳಲ್ಲೂ ಅಲೆದಾಡತೊಡಗಿದೆ. ನನ್ನ ತಮ್ಮ ನಾರಾಯಣ ಚಿಕ್ಕವನೆಂಬುದರಿಂದ ಅವನ ಕಣ್ಣನ್ನು ತಪ್ಪಿಸಿಕೊಂಡು ಹೋಗುತ್ತಿದ್ದೆವು. ನಮ್ಮ ಅಜ್ಜಿ ಹೇಳಿದ್ದು ನಿಜ. ನಮ್ಮ ಮನೆಯ ಅತಿ ಸಮೀಪದಲ್ಲೇ ಕನಿಷ್ಠ ಮೂರು ದೇವರ ಹಾಳು ಗುಡಿಗಳಿವೆ. ಆಚೀಚಿನ ಕಾಡುಗುಡ್ಡಗಳಲ್ಲಿ, ದೊಡ್ಡ ದೇವಾಲಯಗಳು ಯಾವುವೂ ಇಲ್ಲ. ಇದ್ದುದರಲ್ಲಿ ಊರಿನ ಈಶ್ವರನ ಗುಡಿ ದೊಡ್ಡದು. ಆದರೆ ಹಿಂದೆ ಅಂಥ ಹಲವಾರು ಗುಡಿಗಳಿದ್ದಿರಬೇಕು. ನಾಗನಕಲ್ಲುಗಳಿಗೆ ದಿಕ್ಕಿಲ್ಲ. ಅಲ್ಲಿ ಇಲ್ಲಿ ಎಸೆದ ಲಿಂಗಗಳೂ, ಒಡೆದ ಮೂರ್ತಿಗಳೂ ಹುಡುಕಿ ಹೋದರೆ ಕಾಣಸಿಗುತ್ತವೆ. ಒಂದೊಂದು ದೇವರ ಗುಡಿಗೆ ಐವತ್ತು ಐವತ್ತರಂತೆ ಭಕ್ತರ ಮನೆಗಳಿವೆಯೆಂದು ಎಣಿಕೆ ಹಾಕಿದರೂ ಸಹ ಒಂದು ಮೂನ್ನೂರು ಮನೆಗಳಾದರೂ ಇಲ್ಲಿದ್ದಿರಬೇಕು. ಅವುಗಳಲ್ಲಿ ಒಟ್ಟಿಂದ ಒಂದು ಮೂರು ಸಾವಿರದಷ್ಟು ಜನವಾದರೂ ಊರಲ್ಲಿದ್ದಿರಬೇಕು-ಎಂದು ಅಂದಾಜು ಮಾಡಿಕೊಂಡೆ. ಅದಕ್ಕಿಂತ ಹೆಚ್ಚಿಗೆ ನನ್ನ ಕುತೂಹಲ ಮುಂದುವರಿಯಲಿಲ್ಲ. ಅಷ್ಟರ ಹಿಗ್ಗಿನಿಂದ ಅಜ್ಜಿಗೆ ಅದನ್ನೆಲ್ಲ ಬಣ್ಣಿಸಿ ಹೇಳಿದೆ. ಅವರು 'ಹೌದಪ್ಪ, ಅನಾದಿಕಾಲದಲ್ಲಿ ಇದು ಬಹಳ ದೊಡ್ಡ ಪಟ್ಟಣವಾಗಿತ್ತು. ಈಗ ಕಾಲಗತಿ ಕೆಟ್ಟು ಯಾರೂ ಕೇಳುವವರಿಲ್ಲವಾಗಿದೆ" ಎಂದರು.

ಮತ್ತೊಂದು ಗಳಿಗೆಗೆ ನಗುತ್ತ "ಈ ಊರೇನು, ನಾನೇನು, ನೀನೇನು? ಏಳುವುದು, ಬೀಳುವುದು ಕೆಲಸ. ನಡುವೆ ಇರುವ ನಾಲ್ಕು ದಿನ ಬಾಳುವುದು, ನಾಯಿಗಳ ಹಾಗೆ ಬಳುವಟ್ಟೆ ತಿರುಗಾಡಿಕೊಂಡು ಇರುವುದು, ಮತ್ತೊಂದು ದಿವಸ ಇಲ್ಲಿಂದ ಹೊರಡುವುದು" ಎಂದರು.

ಹಾಗೆಯೇ, ನಮ್ಮ ಅಜ್ಜಿ ಅನ್ನುತ್ತಿದ್ದ ನೆನಪು ನನಗೆ: "ಈ ಮೂಡೂರಿಗೆ ಮೂರೂರು ಎಂಬ ಹೆಸರಿತ್ತಂತೆ. ಇಲ್ಲಿ ಮತ್ತು ಇದರ ಆಚೀಚೆ ಮೂರು ಕಾಡು ಮತ್ತು ಹಾಡಿಗಳ ಸೆರಗುಗಳಿವೆ. ಅವು ಮೂರು ಕೂಡಿ ಒಂದು ಊರಾಗಿತ್ತಂತೆ. ಜನರ ಬಾಯಿ ತೊದಲಿ ಆ ಮೂರೂರು ಮೂಡೂರು ಆಯಿತು. ಈಗ ಕೇಳಿದರೆ ಮೂಡೂರು ನಮ್ಮದು ಎನ್ನುತ್ತಾರೆ. ನಮ್ಮದು ನಡೂರು, ಆಚಿನದು ಮೂಡೂರು; ನಮ್ಮ ಈಚಿನದು ಪಡೂರು. ಆಚೆ ಮೂಡೂರಿನಲ್ಲಿ ಒಂದು ಹಳೆಯ ಬಸರೀ ಮರವಿದ್ದಿರಬೇಕು. ಅದರ ಸುತ್ತಲೂ ಒಂದು ಕಟ್ಟೆ ಇದ್ದಿರಬೇಕು. ಅದಕ್ಕೆ ಬಸರೀಕಟ್ಟೆ ಎಂದು ಹೆಸರು. ಈಗ ಅದನ್ನೆಲ್ಲ ಕಾಡು ನುಂಗಿಕೊಂಡಿದೆ. ನಮ್ಮದು ಅಶ್ವತ್ಥದ ಕಟ್ಟೆ, ಪಡುವಣದಲ್ಲಿಯೂ ಒಂದು ಕಟ್ಟೆ ಇತ್ತಂತೆ. ಅದಕ್ಕೆ ಬೂದಿಕಟ್ಟೆ ಎಂಬ ಹೆಸರಂತೆ. ಅಲ್ಲಿ ಯಾವ ಮರವಿತ್ತೋ, ಯಾಕೆ ಆ ಹೆಸರಿಟ್ಟರೋ. ನನಗೆ ನಮ್ಮ ಒಂದು ಕಟ್ಟೆ ಮಾತ್ರ ಗೊತ್ತು. ಉಳಿದವು ಯಾವುವನ್ನೂ ಕಂಡ ನೆನಪಿಲ್ಲ. ನಾನು ಎಲ್ಲಿಗೂ ಹೋದವಳಲ್ಲ. ಮನೆ ಬಿಟ್ಟರೆ ಬೇಸರ ನನಗೆ."

ನನಗೆ ಕುತೂಹಲವಾಗಿ "ಅಜ್ಜಿ, ಹಾಗೆಯೇ ಈ ಊರಲ್ಲಿದ್ದು, ಇದ್ದು ನಿಮಗೆ ಬೇಸರ ಬರಲಿಲ್ಲವೆ?" ಎಂದು ಕೇಳಿದೆ.

"ನನಗೆ ಇದೇ ಚಂದ" ಎಂದು ಹೇಳಿ ನಕ್ಕರು.

"ಯಾಕೆ ನಕ್ಕಿರಿ?" ಎಂದು ಕೇಳಿದೆ. ಅವರು ಮೂರು, ಮೂರು ಕಟ್ಟೆಗಳ ವಿಚಾರ ಹೇಳಿದಾಗ ನನ್ನ ತಲೆಯಲ್ಲಿಯೂ ಏನೇನೋ ಅನಿಸಿತ್ತು! ಅವರು ಬರಿದೆ ಕಟ್ಟೆಗಳ ಹೆಸರನ್ನು ಹೇಳಿದ್ದಲ್ಲ- ಎಂಬ ಭಾವನೆ ಬಂತು. ಅದಕ್ಕಾಗಿ ಅವರನ್ನು ಪ್ರಶ್ನಿಸಿದೆ. ಅವರು ನಗುನಗುತ್ತಲೇ "ಇನ್ನೂ ನನಗೆ ಬೂದಿಕಟ್ಟೆಗೆ ಹೋಗುವ ಕಾಲ ಬರಲಿಲ್ಲ. ಅದಕ್ಕಾಗಿ ಇಲ್ಲಿದ್ದೇನೆ- ಅಶ್ವತ್ಥದ ಕಟ್ಟೆಯ ಬುಡದಲ್ಲಿ. ಅಶ್ವತ್ಥದ ಕಟ್ಟೆ ಎಂದು ಇದನ್ನು ಕರೆಯುವ ಬದಲು, ಬಸರೀಕಟ್ಟೆ, ಬೂದಿಕಟ್ಟೆ ಎಂದ ಹಾಗೆ ಬಾಳ್ ಕಟ್ಟೆ ಎಂದಿದ್ದರೆ ಚೆನ್ನಾಗಿರುತ್ತಿತ್ತು."

"ನನಗೆ ಒಂದೂ ಅರ್ಥವಾಗಲಿಲ್ಲವಲ್ಲ ಅಜ್ಜಿ."

ನಕ್ಕರು; ತಿರುಗಿ "ಆ ಬಸರೀಕಟ್ಟೆಯಲ್ಲಿ ಹುಟ್ಟಿ, ಬೂದಿಕಟ್ಟೆಯಲ್ಲಿ ಮುಗಿಯುವ ಮೊದಲು, ನಾವು ಓಡಾಡಿಕೊಂಡಿರುವ ಕಟ್ಟೆ ಬಾಳಿನ ಕಟ್ಟೆಯಲ್ಲವೇ? ಮೂರೂರು ಅಂದರೆ ಅದೇ. ಈ ಜಗತ್ತೆಲ್ಲ ಮೂರೂರೇ" ಎಂದರು.

ಆಗ ನನ್ನ ಎಳೆಯ ಬುದ್ಧಿಗೆ ಜೀವನದ ಹುಟ್ಟು, ಬದುಕು, ಸಾವುಗಳನ್ನು ಕುರಿತು ಆಡಿದ ವಿನೋದ ಅರ್ಥವಾಯಿತು. ಅಶ್ವತ್ಥವೃಕ್ಷ ಚಿರಂತನವಷ್ಟೇ! ಬಾಳು ಹಾಗೆ ಚಿರಂತನವಲ್ಲ. ಬುಡವಿದೆ, ಕೊನೆಯಿದೆ. ಈ ವೃಕ್ಷ ಚಿರಂತನ ಎಂಬ ಭಾವನೆಯಿಂದ ಅವರು ಅದನ್ನು ಮೆಚ್ಚಿ, ಅದರ ನೆರಳಿನಲ್ಲಿ ಹೆಚ್ಚಿನ ಹೊತ್ತನ್ನು ಕಳೆಯುತ್ತಿರಬೇಕು. ನಮ್ಮ

ಬಾಳು ನಶ್ವರವಾದರೂ, ಅದಲ್ಲದ ಇನ್ನೊಂದನ್ನು ಅವರು ಆಗಾಗ ಸ್ಮರಿಸುತ್ತಿರಬೇಕು-ಎನಿಸಿತು.

ನಮ್ಮ ಅಜ್ಜಿಯ ಮತ್ತೊಂದು ಗುಣ ಕೂಡ ನನಗೆ ವಿಚಿತ್ರವಾಗಿ ಕಾಣಿಸುತ್ತದೆ. ಅವರು ಹಳಬರು. ಊರನ್ನು ಬಿಟ್ಟು ದೂರ ಹೋದವರಲ್ಲ. ಮನೆಯೇ ಅವರ ಮಠವಾಗಿದ್ದರೂ ಕೂಡ ನಮ್ಮ ಆಸುಪಾಸಿನ ಜನಕ್ಕೆಲ್ಲ ಅವರ ಹೆಸರು ಗೊತ್ತಿತ್ತು. ಅಷ್ಟು ಪ್ರಸಿದ್ಧಿಯಿದೆ. ಅವರು ತಾವಾಗಿಯೇ ಯಾರನ್ನೂ ಮಾತನಾಡಿಸುವ ಹಂಬಲ ತಾಳಿದ್ದನ್ನು ಕಾಣೆ. ಅಷ್ಟೇ ಅಲ್ಲ, ಅವರ ಮತ್ತೊಂದು ನಡೆಯೂ ವಿಚಿತ್ರದ್ದೇ. ನಾವು ಮನೆ ಮಾಡಿಕೊಂಡು ಇದ್ದ ಮೇಲೆ, ಮನೆಗೆ ನಾಲ್ಕು ಮಂದಿ ಬರದೆ ಹೋಗುತ್ತಾರೆಯೇ? ಬಂದೇ ಬರುತ್ತಾರೆ. ಕೆಲಕೆಲವರು ಮನೆಗೆ ಬರುವುದು ಅವರಿಗೆ ಹೇಗೆ ಗೊತ್ತಾಗುತ್ತದೋ, ಏನೋ? ಥಟ್ಟನೆ ಚಕಿತರಾದಂತೆ ಎದ್ದುಬಿಟ್ಟು, ಕೋಣೆಯ ಒಳಕ್ಕೆ ಹೋಗಿ ಕುಳಿತುಬಿಡುತ್ತಾರೆ. ಬಂದವರು ಹೊರಟುಹೋಗುವ ತನಕವೂ ಕಣ್ಣಿಗೆ ಬೀಳುವುದಿಲ್ಲ. ಅದರಿಂದಲೋ ಏನೋ-ಮೂಕಜ್ಜಿ ಎಂಬ ಹೆಸರು ಅವರಿಗೆ; ಅದಕ್ಕಿಂತ ಹೆಚ್ಚಿಗೆ ಯಾರಿಗೂ ಏನೂ ತಿಳಿದಿರಲಾರದು. ನಮ್ಮ ನೆರೆ ಗ್ರಾಮಗಳಿಂದ ನೆಂಟರು, ಆಪ್ತರು ಮನೆಗೆ ಬಂದಾಗಲೂ ಸರಿಯೆ, ಅವರ ಕಣ್ಣಿಗೆ ಬಿದ್ದರೂ, ಮಾತನಾಡಿಸಲು ಸಾಹಸ ಪಡುವುದಿಲ್ಲ. ಅಲ್ಲದೆ, ಅವರ ವಯಸ್ಸಿಗೆ ಸಾಟಿಯಾಗುವವರು ಸದ್ಯಕ್ಕೆ ಆಚೀಚೆ ಯಾರ್‍ಯಾರೂ ಇರುವಂತೆ ಕಾಣಿಸುವುದಿಲ್ಲ. ಹಾಗೆ ಬರುವ ಆಪ್ತೇಷ್ಟರಲ್ಲಿ ಒಬ್ಬರೋ, ಇಬ್ಬರೋ, ಹಿರಿಯ ಹೆಂಗಸರು ಮಾತ್ರ, ನಮ್ಮ ಮನೆಗೆ ಬಂದಾಗ, ಹೊರಡುವ ಮುಂಚೆ ಅವರನ್ನು ಹುಡುಕಿ ಹೋಗಿ, ಅವರ ಕಾಲುಮುಟ್ಟಿ, ವಂದಿಸಿ ಹೋದದ್ದನ್ನು ಕಂಡಿದ್ದೇನೆ. ಅಂಥವರು ಕೂಡ ಮಾತನಾಡಿಸುವ ಪ್ರಯತ್ನ ಮಾಡಿದ್ದು ಕಡಿಮೆ. ಅವರ ವಿಷಯದಲ್ಲಿ ಅಷ್ಟೊಂದು ಗೌರವವಿಲ್ಲದೆ ಹೋದರೆ ಹಾಗೆ ಮಾಡಲಾರರು-ಎನಿಸುತ್ತದೆ. ಒಬ್ಬಳು ಹಿರಿಯೆ ಮಾತ್ರ, ಅವರ ವಿಚಾರದಲ್ಲಿ "ಅವರೊಬ್ಬರು ದೇವರು" ಎಂದು ಹೇಳಿದ್ದನ್ನು ಕೇಳಿದ್ದೇನೆ. ನಮ್ಮ ಮನೆಯಲ್ಲಿ ಬಹಳ ಜನಗಳಿಲ್ಲ. ನಾನು, ನನ್ನ ತಮ್ಮ ನಾರಾಯಣ, ಅವನಿಗೆ ನನಗಿಂತ ನಾಲ್ಕು ವರ್ಷ ಕಡಿಮೆ ಪ್ರಾಯ. ತಂದೆಯವರು ಕಾಲವಾದ ಬಳಿಕ, ನಾನು ಕಾಲೇಜನ್ನು ಮುಗಿಸಿ ಊರನ್ನು ಸೇರಿದೆ. ತಮ್ಮನೂ ಓದುತ್ತಲಿದ್ದ. ನಾನು ಎಲ್ಲ ಮುಗಿಸಿ ಮನೆಗೆ ಬಂದ ಮೇಲೆ ಲಗ್ನ ಮಾಡಿಕೊಂಡು ಗೃಹಸ್ಥನಾದ ಕತೆ ಹೇಳಿದೆನಲ್ಲ. ಲಗ್ನವಾಗಿ ಮನೆಗೆ ಬಂದ ನನ್ನ ಮಡದಿಯನ್ನು ಬಾಯಿ ತುಂಬ ಹರಸಿದ್ದಾರೆ. ಆ ಮೇಲೆ ಮಾತ್ರ ಅವಳನ್ನು ಮಾತನಾಡಿಸಲು ಆತುರ ತೋರಿಸಿದವರಲ್ಲ. ಏನನ್ನಾದರೂ ಕೇಳಿದರೆ ಉತ್ತರ ಹೇಳುತ್ತಾರೆ. ನನ್ನ ಎರಡು ಚಿಕ್ಕ ಮಕ್ಕಳನ್ನು ತಾವಾಗಿಯೇ ಮಾತನಾಡಿಸುವುದುಂಟು. ನನ್ನ ತಮ್ಮನಿಗೆ ಅವರಲ್ಲಿ ಸರಸಸಲ್ಲಾಪ ಕಡಿಮೆ. 'ಅಜ್ಜೀ' ಎಂದು ರಾಗ ಹೊರಬಿದ್ದರೆ, ಮತ್ತೊಮ್ಮೆ ಮೂರು ದಿನದ ಮೇಲೆ 'ಅಜ್ಜಿ' ಎಂದು ರಾಗ

ಮಾಡುವವನು ಅವನು. ಆ ರಾಗದಲ್ಲಿಯೇ ಅವನ ಪ್ರೇಮ ವ್ಯಕ್ತವಾದೀತು. ಆತ ಹೆಚ್ಚಿಗೆ ಮಾತನಾಡಿಸದಿರಲು, ಊರವರ ಅಭಿಪ್ರಾಯದಂತೆ ಅವನು ಸಹ - ಅವರಿಗೆ ಒಂದು ಸುತ್ತು ಸಡಿಲು - ಎಂದು ತಿಳಿದುದು ಕಾರಣವೋ ಏನೋ. ನನ್ನ ಕಿರಿಯ ಮಕ್ಕಳಿಬ್ಬರಿಗೂ, ಕಿಟ್ಟು ಮತ್ತು ಚಂದ್ರರಿಗೆ ಅವರಲ್ಲಿ ಸಲಿಗೆಯಿದೆ. ಮಾತನ್ನು ಆಡಿಸುತ್ತಾರೆ. ಆದರೆ ಅಜ್ಜಿ ಹೇಳಿದ್ದೆಲ್ಲ 'ಸುಳ್ಳು' ಎಂಬ ಅಭಿಪ್ರಾಯ ಬಲವಾಗಿ ಬೇರೂರಿದೆ.

ನನ್ನ ತಮ್ಮ ನೆರೆಗ್ರಾಮದ ಮಂಜುನಾಥನ ದೆಸೆಯಿಂದ ಮೈಸೂರಿನಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿದ. ಅನಂತರ ಶಿವಮೊಗ್ಗೆಯಲ್ಲಿ ಚಾಕರಿ ಗಳಿಸಲು ಪ್ರಯತ್ನ ಮಾಡಿದ. ಆತ ದೊಡ್ಡ ರಜೆಗೆ ಊರಿಗೆ ಬಂದರೆ, ನಾಲ್ಕು ದಿನ ಇರುತ್ತಾನೆ. ಮೂಡೂರಿನ ಮೋಹ ಅವನಲ್ಲಿ ಏನೂ ಉಳಿದಿಲ್ಲ. ಈ ಹಾಳು ಕೊಂಪೆಯಲ್ಲಿ ಎರಡೇ ಎರಡು ದಿನ ಕಳೆಯುವುದಕ್ಕೆ ಆಗುವುದಿಲ್ಲವಂತೆ. ಈಗ ಬೆಳೆದು ದೊಡ್ಡವನಾಗಿದ್ದಾನೆ ಎಂಬುದರಿಂದಲೋ ಏನೋ, ಅಜ್ಜಿಯ ಹತ್ತಿರ ಹೋಗಿ ಅಶ್ವತ್ಥದ ಕಟ್ಟೆಯಲ್ಲಿ ಕುಳಿತಿರುವುದುಂಟು. 'ಏನು? ಹೇಗಿದ್ದೀರಿ?' ಎಂದು ಕೇಳಿದವನಲ್ಲ. ಆದರೂ ಒಂದು ದಿವಸ ಅವರು ಅವನಿಗೆ 'ಸಣ್ಣಮಾಣಿ, ಓದಿ ಮುಗಿಯಿತಂತೆ, ನೀನು ಒಂದು ಲಗ್ನ ಮಾಡಿಕೊ, ಎಲ್ಲಾದರೂ ಒಂದು ಚಾಕರಿ ಹುಡುಕಿಕೊಂಡು ಸುಖವಾಗಿರು' ಎಂದರು.

ಇವನು ಚೇಷ್ಟೆಗೆ "ಅಣ್ಣಯ್ಯನಿಗೆ ಹೇಳಿದ ಹಾಗೆ- ಈ ಊರಲ್ಲೇ ಇರು- ಅಂತ ಹೇಳಲಿಲ್ಲ ನೀವು" ಎಂದ.

ಅವರು "ನಿನಗೆ ಯಾತಕ್ಕೆ ಅಂದೇನು ಹಾಗೆ? ನಿನ್ನ ಋಣ ಈ ಊರಲ್ಲಿ ಬರೆದಿಲ್ಲ" ಎಂದರು.

ಹೀಗಾಗಿ, ನಮ್ಮ ಮನೆ ಸಾಕಷ್ಟು ಬರಿದಾಗಿದೆ. ಮನೆಯ ಹುಟ್ಟುವಳಿ ದುಂದು ಮಾಡದೆ ಹೋದರೆ, ನಮ್ಮ ಜೀವನಕ್ಕೆ ಸಾಕು. ಇಲ್ಲಿ ಸಮಯ ಹೇಗೆ ಹೋಗುತ್ತದೆಂದೇ ತಿಳಿಯುವುದಿಲ್ಲ ಅಥವಾ ಅದನ್ನು ಕಳೆಯುವುದು ಹೇಗೆಂದೂ ಗೊತ್ತಾಗುವುದಿಲ್ಲ. ನಮ್ಮ ಅಜ್ಜಿ ಎಂಬತ್ತು ವರ್ಷಗಳ ಕಾಲವನ್ನಾದರೂ ಇಲ್ಲಿ ಕಳೆದಿರಬೇಕು. ನನಗೆ, ಹಾಗೂ ಹೀಗೂ ಮೂವತ್ತು ಕಳೆಯಿತು. ಆದರೂ ಸ್ನೇಹಿತರು ಬೇಕು- ಎಂಬ ಹಂಬಲ ಆಗುತ್ತದೆ. ಊರಿನ ಜನಗಳ ಮೇಲೆ ಅಷ್ಟೊಂದು ಆದರ ಬೆಳೆದಿಲ್ಲ ನನಗೆ. ಏನೇನೋ ಅಲ್ಪತನ, ವಂಚನೆ, ಮೋಸ ನಡೆದದ್ದನ್ನು ಕೇಳಿ, ಅವರಲ್ಲಿಗೆ ಹೋಗಿ ಬರುವುದಕ್ಕೆ ಮನಸ್ಸು ಹಿಂಜರಿಯುತ್ತದೆ. ನನಗೆ ಹಿಡಿಸುವ ಸ್ನೇಹಿತ ಜನಾರ್ದನ ಒಬ್ಬನೇ. ಬಹಳ ಕಾಲದ ಬಳಿಕ ಅವನು ರಜೆಗೆ ಮನೆಗೆ ಬಂದನಾದರೆ ಸಂತೋಷ. ಚಾಕರಿ ಮಾಡಿಕೊಂಡಿದ್ದಾನೆ. ನಮ್ಮ ಮನೆಗೆ ಆಗಾಗ ಬರುತ್ತಾನೆ. ನಾನೂ ಅವನ ಮನೆಗೆ ಹೋಗಿ ಬರುತ್ತೇನೆ. ಏನಾದರೂ ಹಾಳು ಹರಟೆ ಕೊಚ್ಚಿಕೊಂಡಿರುತ್ತೇವೆ. ಆತ ಆಗಾಗ ನನಗೆ ಉಪದೇಶ ಮಾಡುವುದುಂಟು.

"ಮಹಾರಾಯ, ನೀನು ಬಿ.ಎ., ಮಾಡಿದ್ದು ಮಣ್ಣಿಗೆ, ಎಲ್ಲಿಂದಲಾದರೂ ನಾಲ್ಕು ಪುಸ್ತಕ ತರಿಸಿ ಓದಬಾರದೇ? ಒಂದೆರಡು ಪೇಪರು ತರಿಸಿ ಓದಬಾರದೇ?" ಎಂದು ಕೆಣಕುತ್ತಾನೆ.

ನಾನು ಅದಕ್ಕೆ "ಹಾಗೆ ಕತೆ ಕೇಳುವ ಆಸೆಯಾದರೆ ನಮ್ಮ ಅಜ್ಜಿ ಇದ್ದಾರೆ. ಎಷ್ಟೊ ಕತೆ ಹೇಳಿಯಾರು. ಹಿಂದೆ ಹೇಳಿದವರು" ಎಂದೆ.

ಅಷ್ಟಕ್ಕೆ ಜನ್ನನ ಮುಖ ಸಪ್ಪೆಯಾಗಿ "ನಿಮ್ಮಜ್ಜಿಗೆ ಈಗೀಗ ಏನೇನೂ ಬುದ್ಧಿ ಸ್ವಯವಿಲ್ಲವಂತಲ್ಲ" ಎಂದ.

"ಮೊದಲಿಂದಲೂ ಅವರು ನನ್ನ ಪಾಲಿಗೆ ಮಾತ್ರ ಒಂದೇ ತೆರ ಕಾಣಿಸುತ್ತಿದ್ದಾರೆ. ಹೆಚ್ಚೂ ಇಲ್ಲ; ಕಡಿಮೆಯೂ ಇಲ್ಲ."

"ಅವರಷ್ಟಕ್ಕೆ ಗೊಣಗಿದವರಿಗೆ ಬುದ್ಧಿ ಸ್ವಯವಿಲ್ಲ ಎಂಬ ಲೆಕ್ಕ ನಿನ್ನದು ಅಲ್ಲವೇ?" 'ಸ್ವಯವಿದ್ದವರು ಹಾಗೆ ಮಾಡುತ್ತಾರೇನಯ್ಯ?"

"ಬಾಯಿಯಲ್ಲಿ ಗೊಣಗಬೇಕಾಗಿಲ್ಲ. ಮನಸ್ಸು ಸುಮ್ಮನೆ ಕುಳಿತಿರಲಾರದೆ ನೂರು ಕಡೆಗೆ ಓಡುವುದಿಲ್ಲವೇ? ನನಗೂ ಹಾಗಾಗುತ್ತದೆ; ನಿನಗೂ ಹಾಗಾಗುತ್ತದೆ. ಅಜ್ಜಿ ಒಳಗಿದ್ದದ್ದನ್ನೆಲ್ಲ ಬಾಯಿಬಿಟ್ಟು ಹೇಳುತ್ತಾರೆ. ನಾನೂ ನೀನೂ ಹೇಳುವುದಿಲ್ಲ. ಅಷ್ಟೇ ವ್ಯತ್ಯಾಸ. ಆಗ ಏನೆಂದ ಹಾಗಾಯಿತು? ಮನಸ್ಸಿಗೆ ಕಂಡದ್ದನ್ನು ಬಾಯಿಂದ ಆಡಿದರೆ ಸ್ವಯಗೆಟ್ಟಂತೆ- ಎಂದಲ್ಲವೇ?"

ನನ್ನ ಸ್ನೇಹಿತ ನಕ್ಕ. ಅವನಿಗೂ ಗೊತ್ತಾಯಿತು, ತನ್ನ ಮಾನದಂಡದ ಇತಿಮಿತಿ.

ಜನಾರ್ದನನಂಥ ನನ್ನ ಸ್ನೇಹಿತ ಕೂಡ ನಮ್ಮ ಅಜ್ಜಿಯನ್ನು ಕಂಡು - ಅವರಿಗೆ ಸ್ವಯವಿಲ್ಲ - ಎಂದು ಅನ್ನಬೇಕಾದರೆ, ಅದೂ ನನ್ನೊಡನೆಯೇ, ನನಗೆ ನೋವಾಗದೆ ಹೋದೀತೆ? ಅವನಲ್ಲಿ ಅಂಥ ಅಭಿಪ್ರಾಯ ಇರಬಹುದು. ಅದನ್ನು ನನ್ನಲ್ಲಿ ಬಾಯಿಬಿಟ್ಟು ಹೇಳುವ ಜರೂರಿ ಏನಿತ್ತು? ನಾನು ನನಗಾದ ನೋವನ್ನು ತೋರಿಸಿಕೊಳ್ಳದೆ, ಇನ್ನೊಂದು ಅರ್ಧ ಗಳಿಗೆ ಅವನೊಡನೆ ಮಾತನಾಡಿದೆ. ಅವನು ಮನೆಗೆ ಬಂದರೆ ಮೊದಲಿನಂತೆ ಅವನನ್ನು ಉಪಚರಿಸಬಾರದು- ಎಂದು ನನಗನಿಸಿತು. ಸಿಟ್ಟು, ಮತ್ತೆ ಯಾವುದಕ್ಕೂ ಅಲ್ಲ-ಅಜ್ಜಿ ವಿಷಯದಲ್ಲಿ ಅಗೌರವ ಪ್ರಕಟಿಸಿದ್ದಕ್ಕೆ. ಪಾಪ, ಅವರ ವಯಸ್ಸು ಎಂಬತ್ತೋ ಸ್ವಲ್ಪ ಹೆಚ್ಚಿಗೋ; ಅವರ ಜೀವನದಲ್ಲಿ ಆರಂಭದ ಹತ್ತು ವರ್ಷವನ್ನಷ್ಟೇ ಅವರು ನಿಶ್ಚಿಂತೆಯಿಂದ ಕಳೆದಿರಬಹುದು. ಮುಂದೆ, ಕುಂಕುಮ ಅಳಿಸಿದ ಮೇಲೆ, ಕಳೆದಂಥ ಎಪ್ಪತ್ತು ವರ್ಷಗಳ ಬಾಳ್ವೆ, ಯಾರೊಡನೆಯೂ ತೋಡಿಕೊಳ್ಳದ ಜೀವನ. ಅದನ್ನು ನೆನೆದರೆ ನನಗೆ ಭಯವಾಗುತ್ತದೆ; ಮರುಕವಾಗುತ್ತದೆ. ಅದರಲ್ಲಿಯೂ ಬಾಲ್ಯದಿಂದ ಯೌವನಕ್ಕೆ ಸರಿದ ಅವರ ಜೀವನದಲ್ಲಿ - ತಾನು ವಿಧವೆ, ಅಮಂಗಲೆ-ಎಂಬ ನೆನಪೊಂದೇ

ಅವರನ್ನು ಎಷ್ಟು ಕಾಡಿತ್ತೋ ಏನೋ. ಆ ಕಾಲದಲ್ಲಿ ಅವರ ಅಣ್ಣ, ನನ್ನ ಅಜ್ಜ ಒಬ್ಬರೇ ಅವರಿಗೆ ತಮ್ಮ ಮಾತು, ನಡತೆಗಳಿಂದ ಸಮಾಧಾನ ಕೊಟ್ಟವರಂತೆ.

ನಮ್ಮ ತಂದೆಯ ಕಾಲದಲ್ಲೂ ಅವರನ್ನು ತುಂಬಾ ಚೆನ್ನಾಗಿಯೇ ಕಂಡುಕೊಂಡರು. ನಮ್ಮ ತಾಯಿಗೂ ಅವರ ಮೇಲೆ ಬಹಳ ಗೌರವ ಇತ್ತು. ಆದರೆ, ನಮ್ಮ ತಾಯಿ ಒಂದು ಸಂಗತಿಯನ್ನು ಹೇಳುತ್ತಿದ್ದುದುಂಟು; ಅದೆಂದರೆ-ಅವರಿಗೆ ದೈವಭಕ್ತಿ ಇತ್ತೋ ಇಲ್ಲವೋ ಎಂಬ ವಿಚಾರದ ಸಂಶಯ. ಮನೆಯಲ್ಲಿ ಅಷ್ಟೆಲ್ಲ ಕಟ್ಟುಕಟ್ಟಲೆಗಳಿಂದ ಪೂಜೆಪುನಸ್ಕಾರಗಳಾಗುತ್ತಿದ್ದರೂ ಉಳಿದವರಂತೆ ಯಾವ ನಿಷ್ಠೆಯನ್ನೂ ತೋರಿಸಿದವರಲ್ಲವಂತೆ. ನಮ್ಮ ಊರಲ್ಲಿ ಇಂದಿಗೂ ಉಳಿದು ಬಂದಿರುವ ಆ ಎರಡು ಹರುಕುಮುರುಕು ದೇವಾಲಯಗಳಿಗೂ ವಿಶೇಷ ಹೋದವರಲ್ಲ. ಹೋದವರೇ ಅಲ್ಲ - ಎನ್ನುವಂತಿಲ್ಲ. ಹೋಗಿದ್ದಾರೆ, ಸುತ್ತು ಬಂದಿದ್ದಾರೆ. ಆರತಿ, ನೈವೇದ್ಯ ಮುಗಿಯುವ ತನಕ ಕಾದುಕುಳಿತು ನೋಡಿದಂತೆ ಕಾಣೆ.

ಮನೆಯಲ್ಲಿ ಕುಳಿತಿರುವಾಗ ಇವರು ಸದಾ ಕಣ್ಮುಚ್ಚಿ ಏನನ್ನಾದರೂ ನೆನೆಯುತ್ತಿದ್ದರೂ ಅದೇನೆಂದು ನಮ್ಮ ತಾಯಿ ತಿಳಿದುಕೊಳ್ಳಲು ಶಕ್ತರಾಗಲಿಲ್ಲ. ಅಜ್ಜಿಯ ಕೈಯಲ್ಲಿ ಜಪಸರ ಕಂಡವರಿಲ್ಲ. ಅವರು ತುಟಿ ಅಲುಗಿಸಿ "ಓಂ ನಮಃ ಶಿವಾಯ" ಎಂದವರಲ್ಲ. ಇದರಿಂದಾಗಿ, ನನ್ನ ತಾಯಿಗೆ ಅವರ ವಿಷಯದಲ್ಲಿ ಒಂದು ರೀತಿಯ ಕನಿಕರ ಬಂದು "ಇವರು ತಮಗಾದ ಅನ್ಯಾಯವನ್ನು ನೆನೆದು, ದೇವರ ಮೇಲಿನ ವಿಶ್ವಾಸವನ್ನೇ ಕಳೆದುಕೊಂಡಿದ್ದಾರೆ" ಎಂದು ಅರ್ಥ ಮಾಡಿಕೊಂಡದ್ದುಂಟು. ಅಂಥ ಸಂಶಯದ ಬಿತ್ತನ್ನು ನನ್ನ ತಾಯಿ ನನ್ನ ತಲೆಯಲ್ಲಿಯೂ ಬಿತ್ತಿ ಹೋಗಿದ್ದಳು- ಎಂದರೆ ತಪ್ಪಾಗದು. ನಾನು ಕಾಲೇಜಿನಲ್ಲಿ ಕಲಿಯುತ್ತ ಬುದ್ಧಿವಂತನೆನಿಸಿದ ಕಾಲದಲ್ಲಿ, ಇಂತಹ ಒಂದು ನೆನಪಿನಿಂದ ಅಜ್ಜಿಯನ್ನು ಕೇಳಿಯೇ ಬಿಡುತ್ತೇನೆ- ಎಂದು ಹೊರಟದ್ದುಂಟು. ಅವರು ಆಗ ಅಶ್ವತ್ಥ ಕಟ್ಟೆಗೆ ಸುತ್ತುಬರುತ್ತಿದ್ದರು. ಹಾಗೆ ಸುತ್ತುಬರಬೇಕಾದರೆ ದೇವರ ಮೇಲಿನ ನಂಬಿಕೆಯಿಂದಲೇ ಬರುತ್ತಿರಬೇಕು- ಎಂಬ ಭಾವನೆ ನನಗೆ ಬಂದಿತು. ಅವರು ಪ್ರದಕ್ಷಿಣೆ ಮುಗಿಸಿದರು. ಮೈ ಬಗ್ಗಿಸಲಿಲ್ಲ, ಹಣೆ ತಗ್ಗಿಸಲಿಲ್ಲ. ಮೊಣಕಾಲನ್ನು ಊರಲಿಲ್ಲ. ಎರಡೂ ಕೈಗಳನ್ನು ಜೋಡಿಸಲಿಲ್ಲ. ಈಚೆಗೆ ಬಂದು ಕುಳಿತರು. ನಾನು ಹೋಗಿ ಅವರ ಮಗ್ಗುಲಲ್ಲಿ ಕುಳಿತೆ. ಅವರಾಗಿ 'ಏನು ಯೋಚನೆ?' ಎಂದು ಕೇಳಿದರು.

ನನ್ನ ಯೋಚನೆಯನ್ನು ಬಚ್ಚಿಡುವ ನೆಪದಲ್ಲಿ "ಯೋಚನೆ ಎಲ್ಲಿಂದ ಬಂತು? ಯಾವುದಕ್ಕಾಗಿ ಯೋಚನೆ ಮಾಡಬೇಕು? ಪರೀಕ್ಷೆ ಮುಗಿಸಿ ಬಂದಿದ್ದೇನೆ. ಅಲ್ಲಿಯ ತನಕವಾದರೆ ಅದರದ್ದೇ ಯೋಚನೆ ಇತ್ತು" ಎಂದೆ.

"ಆ ಪರೀಕ್ಷೆ ಮುಗಿದದ್ದಕ್ಕೆ ನನ್ನ ಪರೀಕ್ಷೆಗೆ ಹೊರಟಿದ್ದೀ ಅಲ್ಲವೇ?" ಎಂದರು.

ನನಗೆ ತಬ್ಬಿಬ್ಬಾಯಿತು. ನಾನು ಹೊರಟಾಗ ನನ್ನ ಮನಸ್ಸಿನಲ್ಲಿದ್ದ ಭಾವನೆ ನೆನಪಿಗೆ ಬಂದು ನಕ್ಕೆ.

"ಗೊತ್ತಾಯಿತು, ಈ ಅಜ್ಜಿ ದೇವರನ್ನು ನಂಬುತ್ತಾಳೋ ಇಲ್ಲವೋ ಎಂದು ನೋಡಲು ಬಂದೆ. ಅದು ಗೊತ್ತಾಗಿಯೇ ನಾನು ಅಶ್ವತ್ಥದ ಕಟ್ಟೆಗೆ ಸುತ್ತು ಬಂದೆ. ಈಗ ಗೊತ್ತಾಯಿತಲ್ಲ."

"ಅದು ಗೊತ್ತಾಗಿಯೇ!"

"ಗೊತ್ತಾಗುತ್ತದೆ ಒಂದೊಂದು ಸಾರಿ. ನಿನಗೇನೋ ಸಂಶಯ ಬಂತು ಎಂಬುದು ತಿಳಿಯಿತು. ಈಗ ಸಮಾಧಾನವಾಯಿತಲ್ಲ."

"ಹಾಗಲ್ಲ ಅಜ್ಜಿ; ನನ್ನ ಸಮಾಧಾನ ಮುಖ್ಯವಲ್ಲ, ನಿಮಗೆ ಬೇಕಾಗಿ ನೀವು ದೇವರಿಗೆ ಸುತ್ತು ಬಂದದ್ದು ಅಲ್ಲ ಅನ್ನುತ್ತೀರಾ?" ಎಂದು ಪ್ರಶ್ನಿಸಿದೆ.

"ದೇವರಿಗೆ ಸುತ್ತು ಬರಲಿಕ್ಕೆ ಆಗುತ್ತದೆಯೇ? ಮರಕ್ಕೆ ಸುತ್ತು ಬಂದೆ. ಆ ಮರ ನನಗಿಂತಲೂ ಹಳೆಯದು. ನಾನು ಗಳಿಗೆಗೆ ಸುತ್ತು ಬರುವ ಹಾಗೆ, ಇದಕ್ಕೂ ಸುತ್ತು ಬಂದೆ."

"ದೇವರಿಗೆ ಸುತ್ತು ಬರುವುದು ಬೇಡ ಅನ್ನುತ್ತೀರಾ?"

"ಬರುವವರು ಬರಲಿ."

"ಅಂದರೆ?"

"ದೇವರು ಅಷ್ಟು ಸಣ್ಣವನು ಅಂದುಕೊಂಡರೆ ಸುತ್ತು ಬರಲಿ."

"ಅಜ್ಜಿ, ನೀವು ಇದೊಂದನ್ನು ಹೇಳಿ; ನನಗೆ ಪ್ರಾಯ ಆಗಿದೆ ನಿಜ, ಆದರೂ ಬುದ್ಧಿ ಬಂದಿದೆ ಎಂದೆನಿಸುವುದಿಲ್ಲ. ಬಂದರೂ ಬಲಿತಿಲ್ಲ. ನಾನು ತಪ್ಪಿದರೆ ನೀವು ಹೇಳಬೇಕು. ನಿಮಗೆ ದೇವರಲ್ಲಿ ನಂಬಿಕೆ ಇಲ್ಲವೋ?" ಎಂದು ನೇರಾಗಿ ಪ್ರಶ್ನಿಸಿದೆ.

"ದೇವರು ಎಂಬುದು ನಾವು ನಂಬಿದರೆ ಉಂಟು. ನಂಬಿದ್ದಾರೆ ಜನ. ಈ ಮರವನ್ನು ನೆಟ್ಟವರೂ ನಂಬಿದವರೇ. ಈ ಮರಕ್ಕೆ ನನ್ನ ಅಮ್ಮ ನನ್ನನ್ನು ಕರೆದುಕೊಂಡು ಹೀಗೆಯೇ ಸುತ್ತು ಬಂದವಳು. ನಾನೂ ಬಂದದ್ದನ್ನು ಕಂಡೆಯಲ್ಲ. ಅಮ್ಮ ಅದರ ಹತ್ತಿರ ನಿತ್ಯವೂ ಏನೇನೋ ಬೇಡುತ್ತಿದ್ದ ನೆನಪು ನನಗೆ. ನನಗೆ ಬುದ್ಧಿ ಬರುವ ಮೊದಲು ನಾನೂ ಬೇಡಿರಬೇಕು. 'ಗಂಡನನ್ನು ಕೊಡು' ಎಂದು ಬೇಡಿರಲಿಕ್ಕೂ ಸಾಕು. ಒಂದು ದಿನ ಅವನೇ ಕೊಟ್ಟ ಎಂತ ತಿಳಿದಿರಲೂಬಹುದು. ಅನಂತರ ಆಯಿತಲ್ಲ. ಅವನೇ ಕೊಂಡ-ಎಂದು ತಿಳಿದುಕೊಂಡೆ ನಾಲ್ಕು ದಿನ. ಮತ್ತೆ ಇದೆಲ್ಲ ಮರುಳು- ಎನಿಸಿತು. ನಂಬಿಕೆಯೂ ಒಂದು ಮರುಳೇ. ಈಗ ಸುತ್ತು ಬಂದರೆ ಅದು ಅಭ್ಯಾಸದಿಂದ. ಇಲ್ಲ, ಬರಿದೆ ಮನಸ್ಸಿಗೆ ಹಿತ ಕಾಣಿಸುತ್ತದೆ- ಎಂಬುದರಿಂದ ಬರುತ್ತೇನೆ. ಇಲ್ಲಿ ಕುಳಿತರೆ ಹಿಂದಿನ ನೂರಾರು ತಲೆಮಾರಿನ

ಸೆರಗು ನಾನು ಎನಿಸುತ್ತದೆ. ಹಿಂದೆ ಹೋದಷ್ಟೂ ಜನಗಳು, ಜೀವಗಳು ಇದ್ದ ಹಾಗೆ ಕಾಣಿಸುತ್ತದೆ. ಮತ್ತೂ ಹಿಂದಕ್ಕೆ ಯೋಚಿಸಿದರೆ, ಅದು ಇತ್ತೋ ಇಲ್ಲವೋ ಎನಿಸುತ್ತದೆ. ಹಾಗೆ ಭೂಮಿಯಲ್ಲಿ ಹುಟ್ಟಿದ ಎಲ್ಲರೂ ಒಟ್ಟುಗೂಡಿ ಒಂದು ದೇವರನ್ನು ಮಾಡಿಕೊಂಡಿದ್ದಾರೆ. ಅವನೇನು ಮಾಡುತ್ತಿದ್ದಾನೋ? ಯಾರ್‍ಯಾರು ನನ್ನನ್ನು ನಂಬುತ್ತಿದ್ದಾರೆ, ಯಾರ್‍ಯಾರು ನಂಬುವುದಿಲ್ಲ- ಎಂದು ಹುಡುಕಿ ಹೋಗಲಾರ. ಅವನ ಚಿಂತೆಯೇ ಇಲ್ಲದ ಪ್ರಾಣಿಗಳಿಲ್ಲವೋ? ಅವುಗಳನ್ನೂ ಬದುಕಿಸಿ ಇರಿಸಿದ್ದಾನಲ್ಲ. ಅವನನ್ನು ತಿಳಿಯಬೇಕಾದರೆ, ನಾವು ಅವನನ್ನು ಹುಡುಕಿದ ಹಾಗೆ, ಅವನೂ ನಮ್ಮನ್ನು ಹುಡುಕಿಕೊಂಡು ಬರಬೇಕಾದುದು ಇಲ್ಲ. ನಾವೇ ಅವನಲ್ಲಿ ಪ್ರಶ್ನೆ ಕೇಳುತ್ತೇವೆ. ನಾವೇ ಅದಕ್ಕೆ ಉತ್ತರವನ್ನು ಹೇಳಿಕೊಳ್ಳುತ್ತೇವೆ. ನಮಗೆ ಯಾರು ಹೇಳುವವರಿದ್ದಾರೆ? ನಮಗೆ ಇಷ್ಟ ಕಂಡಂತೆ ನಡೆದಾಗ- 'ದೇವರ ಇಚ್ಛೆ' ಅನ್ನುತ್ತೇವೆ. ಅನಿಷ್ಟ ಪ್ರಾಪ್ತಿಸಿದಾಗ ಅನಿಷ್ಟ ಅನ್ನುತ್ತೇವೆ."

ಅವಳ ಮಾತಿನ ಸರಣಿ ನನ್ನ ಸರಳ ಮನಸ್ಸಿಗೆ ಸಮನಾದ ಅರ್ಥಕೊಡದೆ ಹೋಯಿತು. ನನ್ನ ತಾಯಿಗೆ ಸಂಶಯ ಬಂದ ಹಾಗೆ, ನನ್ನ ಹೆಂಡತಿಗೆ ಈಗಲೂ ಸಂಶಯ ಉಳಿದೇ ಇದೆ. ಅವರಿಗೆ ಈಗಲೂ ದೇವರ ವಿಚಾರದಲ್ಲಿ ಅನಾಸ್ಥೆ ಇದೆ ಎನಿಸಿತು. ಸುಮ್ಮನಾದೆ. ನಾನು ಸುಮ್ಮನಾದುದನ್ನು ಕಂಡು ಅವರು 'ಯಾಕೆ ಬರಿದೆ ಕುಳಿತೆ?' ಎಂದು ಕೇಳಿದರು.

"ನೀವು ಹೇಳುವುದೊಂದೂ ತಿಳಿಯುವುದಿಲ್ಲ ಅಜ್ಜಿ" ಎಂದೆ.

"ನಾನು ಎಷ್ಟು ತಿಳಿದು ಹೇಳಬಲ್ಲೆ? ನನಗೇನು ಗೊತ್ತು? ಎರಡು ದಿನದ ಸಂತೆಗೆ ಬಂದವಳಿಗೆ" ಎಂದರು.

"ಹಾಗೆಂದರೆ?"

"ಸಂತೆಗೆ ಬಂದವರು ತಮ್ಮ ತಮ್ಮ ಕೆಲಸ ಮಾಡಿಕೊಂಡು ಹೊರಡಬೇಕು. ಬದಲು, ಸಿಕ್ಕಿದವರ ಸಂಗಡ ಮಾತಿನ ಚಪಲ ಹೆಚ್ಚಿ ಸಮಯ ಕಳೆದರೆ ಏನಾದೀತು? ಬಂದ ಕೆಲಸವೇ ಮರವೆಯಾಗುತ್ತದಂತೆ. ನಾವೆಲ್ಲ, ನೀನೇ ಎಂದಲ್ಲ, ನಾನೂ ಮಾಡುತ್ತಿರುವುದು ಅದನ್ನೇ. ನಮಗೆ ದೇವರ ತಲೆ, ಬುಡ ಸಹ ಗೊತ್ತಿಲ್ಲ; ಗೊತ್ತಿದೆ ಎನ್ನುತ್ತೇವೆ. ಅದು ಗೊತ್ತಾಗುವಂಥ ಬಾಬು- ಎಂದು ನನಗೆ ಅನಿಸುವುದೇ ಇಲ್ಲ. ಆದರೂ, ಅವನ ಇಚ್ಛೆ ಹಾಗೆ; ಅವನ ಇಚ್ಛೆ ಹೀಗೆ- ಅಂತ ಆಡುತ್ತಿರುತ್ತೇವೆ. ಅದು ಮಕ್ಕಳಾಟಿಕೆ ಮಾತು. ಅವನ ಇಚ್ಛೆ ಅವನಿಗೇ ಗೊತ್ತು. ನನಗೂ ನಿನಗೂ ಗೊತ್ತಾದೀತೇ? ಊಂ.....ಹೂಂ...."

"ಅಲ್ಲ ಅಜ್ಜಿ, ದೊಡ್ಡವರು ಅನ್ನುತ್ತಾರಲ್ಲ- ಇದೆಲ್ಲ ಪರಮಾತ್ಮನ ಆಟ ಎಂತ."

"ಆಯಿತು, ಇದು ಆಟ ಅಂತಿಟ್ಟುಕೊ. ಆಮೇಲೆ ಏನು?"

"ನಮ್ಮನ್ನು ಅವನು ಕುಣಿಸುತ್ತಾನೆ."

"ಅಂತಿಟ್ಟುಕೋ."

"ಅವನು ಅಂದಹಾಗೆ ನಾವು ಕುಣಿಯಬೇಡವೇ!"

"ಅವನು ಏನು ಅಂದ ಅಥವಾ ಅನ್ನುತ್ತಾನೆ- ಎಂಬುದು ನಿನಗೆ ತಿಳಿಯುತ್ತದೆಯೇ- ಹಾಗೆ ಕುಣಿಯುತ್ತೇನೆ ಅನ್ನಲಿಕ್ಕೆ. ಅವನು ಅಂದದ್ದು ಎನ್ನುವುದೆಲ್ಲ ನಾವು ನಮ್ಮ ಮನಸ್ಸಿಗೆ ಕಂಡ ಹಾಗೆ ಅಂದದ್ದು."

ಕೊನೆಗೂ ಅಜ್ಜಿಯ ಸಂಭಾಷಣೆಯಿಂದ ನನಗೆ ತೃಪ್ತಿ ಬರಲಿಲ್ಲ. ಅದರ ಬದಲು, ನನ್ನ ವಿಚಾರಸರಣಿ ಮತ್ತಷ್ಟು ಗೊಂದಲಕ್ಕೆ ಗುರಿಯಾಯಿತು. ಹಾಗೆ ಯಾವ ಯೋಚನೆಯೂ ಹೊಳೆಯದೆ ಮೂಕನಾಗಿ ಕುಳಿತಿದ್ದಾಗ, ಅಜ್ಜಿ 'ಹೋಗು ಮನೆಗೆ, ಯಾರೋ ಅಂಗಳದಲ್ಲಿ ಬಂದು ಕುಳಿತಿದ್ದಾರೆ" ಎಂದರು.

ಮನೆಗೆ ಹೋಗಲು ನನ್ನ ಮನಸ್ಸು ಹವಣಿಸುತ್ತಿತ್ತು. ಯಾರೂ ಬಾರದೆ ಇದ್ದರೂ ಹೋಗುತ್ತಿದ್ದೆ. ಅವರೊಡನೆ ಸಂಭಾಷಣೆ ಮುಂದುವರಿಸುವ ಶಕ್ತಿಯಾಗಲೀ, ತಿಳಿಯುವ ಶಕ್ತಿಯಾಗಲೀ, ಎರಡೂ ನನ್ನಲ್ಲಿರಲಿಲ್ಲ. ನಾವಿಬ್ಬರೂ ಕುಳಿತು ಮಾತನಾಡುತ್ತಿದ್ದಾಗ ಯಾರೋ ನಮ್ಮೆದುರಿನಿಂದ ಹಾದು ಹೋದದ್ದನ್ನು ಅಜ್ಜಿ ಕಂಡಿರಬೇಕು ಎಂದು ಎಣಿಸಿ ಮನೆಗೆ ಹೋದೆ. ಅಲ್ಲಿ ಅಂಗಳದಲ್ಲಿ ಗಾಣದ ರಾಮಣ್ಣ ಕುಳಿತಿದ್ದ. ಆತ "ನಾನು ಒಡೆಯ, ಎಣ್ಣೆ ಮಾರಲು ಕೊಂಡುಹೋಗಿದ್ದೆ. ಇರಿಗೆಯಿಂದ ಬಂದೆ" ಎಂದ.

"ಇರಿಗೆಯಿಂದ! ಯಾವ ದಾರಿಯಿಂದ ಬಂದೆ? ಅಶ್ವತ್ಥದ ಕಟ್ಟೆಯ ಮುಂದಿನಿಂದ ಬಂದೆಯೇನು? ನಮ್ಮಜ್ಜಿ ಕಂಡು- ಯಾರೋ ಬಂದಿದ್ದಾರೆ ಎಂದು ಕಳುಹಿಸಿದರು."

"ನಾನು ಆ ದಾರಿಯಾಗಿ ಬರಲಿಲ್ಲವಲ್ಲ. ತೋಟದ ದಾರಿಯಿಂದ ಬಂದೆ. ಅಲ್ಲೇ ಹಟ್ಟಿಯ ಹಿಂದಕ್ಕೆ, ಮೇಲೆ ಹತ್ತಿದೆ. ಒಳ್ಳೆಯ ಒಂದು ಬೇಳೆ ತೆಂಗಿನೆಣ್ಣೆಯಿದೆ, ಕೊಟ್ಟು ಹೋಗುವ ಎಂದು ಬಂದೆ."

ಅಜ್ಜಿ ಯಾವ ಊಹೆಯಿಂದ ಹಾಗೆ ಹೇಳಿದರು ಎಂದು ತೋಚಲಿಲ್ಲ. ಪ್ರಾಯಶಃ ನನ್ನನ್ನು ತೊಲಗಿಸುವುದಕ್ಕಾಗಿಯೇ ಸುಳ್ಳನ್ನು ಹೇಳಿರಬಹುದು. ಅದೀಗ ಸತ್ಯವಾಯಿತು- ಎಂದು ಅನಿಸಿತು. ಅಂತೂ ಅಜ್ಜಿಯನ್ನು ಮರೆತು ರಾಮಣ್ಣನನ್ನು ಮಾತನಾಡಿಸಿ, ತೆಂಗಿನೆಣ್ಣೆಯನ್ನು ತೆಗೆದುಕೊಂಡೆ.

"ಇನ್ನೆರಡು ವಾರಗಳಲ್ಲಿ ಕೊಬ್ಬರಿ ತಯಾರಾಗಿರುತ್ತದೆ, ಬಂದು ತೆಗೆದುಕೊಂಡು ಹೋಗು; ಎಣ್ಣೆ ಮಾಡಿಕೊಡು" ಎಂದೆ. ಆ ಮೇಲೆಯೂ ಆತ ಒಂದಷ್ಟು ಹೊತ್ತು ಅಲ್ಲೇ ವಿರಮಿಸಿದ. ಬಾಯಾರಿಕೆ ಕೇಳಿದ. ನನ್ನ ಹೆಂಡತಿ ಒಂದಿಷ್ಟು ನೀರು, ಬೆಲ್ಲಗಳನ್ನು

ತಂದುಕೊಟ್ಟಳು. ತಿಂಗಳೆರಡು ತಿಂಗಳಿಗೊಮ್ಮೆ ಮನೆಗೆ ಬರುವ ಅವನ ಗುರುತು ಸಾಕಷ್ಟು ಇದ್ದುದರಿಂದ, ಅವನೂ ನಮ್ಮ ಮನೆಯ ಸುಖದುಃಖ ವಿಚಾರಿಸತೊಡಗಿದ.

ಮಾಡುವ ಬೇರೆ ಕೆಲಸವಿಲ್ಲದ್ದಕ್ಕೆ ನಾನು ಒಂದು ಕತ್ತಿಯನ್ನು ಹಿಡಿದುಕೊಂಡು ಹಿತ್ತಿಲಿಗೆ ಹೋದೆ. ಒಂದಷ್ಟು ಬೇಲಿಯ ಮುಳ್ಳುಗಿಡ ಸವರಿ, ಒಂದೆಡೆಯಲ್ಲಿ ಒಟ್ಟಿ, 'ಹೂ ಸಾಕು, ಇದನ್ನು ಸವರಿ ಫಲವಿಲ್ಲ. ಮಳೆ ಬಂದರೆ ಒಂದಕ್ಕೆ ಹತ್ತು ಚಿಗುರುತ್ತದೆ. ಬೇಲಿ ಇದ್ದುದು ಹೋಗಿ ಹಳುವಾಗುತ್ತದೆ. ಆದರೂ, ಆಚೀಚೆ ಹೋಗುವವರ ಮುಸುಡನ್ನು ಮುಳ್ಳು ಸವರಬಾರದಲ್ಲ' ಎಂದೆ. ಅಂದದ್ದು ನನ್ನಷ್ಟಕ್ಕೆ; ಯಾರೂ ಅಲ್ಲಿರಲಿಲ್ಲ. ನನ್ನ ಮಾತು ನನಗೇನೆ ಕೇಳಿಸಿ ನಗು ಬಂದಿತು. 'ಹೂ; ನಾನೂ ಅಜ್ಜಿಯ ಮೊಮ್ಮಗನೇ' ಎಂದು ಹೇಳಿ ನಕ್ಕೆ. ಮತ್ತೇಕಲ್ಲ, ನನಗೂ ನನ್ನಷ್ಟಕ್ಕೆ ಮಾತನಾಡುವ ಚಟ ಇತ್ತೆಂದು ಕಾಣಿಸಿದುದರಿಂದ ನಗು ಬಂತು.

ಈಚೆ ಬಂದಾಗ ನನ್ನ ಹೆಂಡತಿಯ ಮಾತುಕತೆ ನಡೆಯುತ್ತಲೇ ಇತ್ತು. "ಅಂತು ನಿನ್ನದೊಂದು ಪ್ರತಿಜ್ಞೆ, ಮದುವೆ ಆಗಲೇ ಇಲ್ಲ ತಿರುಗಿ. ಈಗ ಹಳಬನಾದೆ. ಅಂಥಾ ಹಳಬನೇನೂ ಅಲ್ಲ - ಎನ್ನು" ಎನ್ನುತ್ತಿದ್ದಳು.

"ಹಳಬನೋ ಗಿಳಬನೋ, ವರ್ಷ ಆಯಿತು. ನಲ್ವತ್ತರ ಮೇಲೆ ಆಯಿತಲ್ಲ. ಸದ್ಯಕ್ಕೆ ಮನೆ ತುಂಬ ಜನವಿದೆ. ಸಣ್ಣ ಮಕ್ಕಳೂ ಇದ್ದಾರೆ. ನನ್ನವೇ ಅಲ್ಲವಾದರೂ ಏನಂತೆ? ನಮ್ಮದು ಅಳಿಯಕಟ್ಟು. ತಂಗಿಯೊಬ್ಬಳಿಗೆ ಆರು ಮಕ್ಕಳಿದ್ದಾವೆ. ಒಂದಷ್ಟು ದಿನ ಅವಳು ಅಲ್ಲಿರುತ್ತಾಳೆ; ಒಂದಷ್ಟು ದಿನ ಇಲ್ಲಿರುತ್ತಾಳೆ. ಇಲ್ಲಿದ್ದಾಗ ದುಡಿಯುತ್ತಾಳೆ. ದುಡಿದಷ್ಟು ಉಣ್ಣುವ ಬಾಯಿಗಳೂ ಇವೆ.

"ಆದರೂ ಹೊಟ್ಟೆಯ ಮಕ್ಕಳು ಅಂದರೆ ಬೇರೆಯಲ್ಲವೆ? ಅಳಿಯಂದಿರೂ, ಸೊಸೆಯಂದಿರೂ ಎಷ್ಟಿದ್ದರೇನು? ಅವು ಅಲ್ಲಿ ಹೊಟ್ಟೆಗೆ ಇಲ್ಲದಾಗ ಇಲ್ಲಿ ಬರುವವು. ಇಲ್ಲಿ ಇಲ್ಲದಾಗ ಅಲ್ಲಿಗೆ ಹೋಗುವವು."

"ಅದೆಲ್ಲ ಹಣೆಯಬರಹ ಅಲ್ಲವೇ, ಒಡತಿ? ಅವನೇ ಅವಳ ಹಣೆಯ ಮೇಲೆ 'ನೀನು ಹೀಗಾಗು. ಹಾದಿಯ ಮೇಲೆ ಬಿದ್ದು ಸಾಯು' ಎಂದು ಬರೆದ. ಅವಳನ್ನು ನೆನೆದಾಗಲೆಲ್ಲ ಸಿಟ್ಟೂ ಬರುತ್ತದೆ. ಒಮ್ಮೊಮ್ಮೆ ದುಃಖವೂ ಬರುತ್ತದೆ. ಆದರೂ ಒಡತಿ, ಪ್ರಮಾಣಕ್ಕೂ ಅಂತೇನೆ- ಇನ್ನೊಂದು ಹೆಣ್ಣಿನ ಕೈಹಿಡಿಯಬೇಕೆಂದು ಆಸೆಯಾಗುವುದಿಲ್ಲ."

ಮಾತಾಡಿ, ಆಡಿ, ಬೇಸರ ಬಂದುದರಿಂದಲೋ ಏನೋ, ನನ್ನವಳು ಅಡುಗೆ ಮನೆಗೆ ಹೊರಟುಹೋದಳು. ಅವನೂ ಹೊರಟುಹೋದ. ನಾನು ಈ ಅರ್ಧಮರ್ಧ ಮಾತುಗಳನ್ನು ಕೇಳಿ ಬೇಸರ ಬಂದು, ಇನ್ನೇನು ಮಾಡಲಿ ಎಂತ ಯೋಚಿಸುತ್ತ ನಿಂತಾಗ,

ನನ್ನೆರಡು ಮಕ್ಕಳ ಕೊರಳ ಧ್ವನಿ ಕೇಳಿಸಿತು. ಅವು ಎರಡೂ ಕೂಗುತ್ತ, ಕಿರುಚುತ್ತ, ಒಂದನ್ನೊಂದು ಅಟ್ಟುತ್ತ 'ಅದು ನನಗೆ, ಅದು ನನಗೆ' ಎಂದು ಬೊಬ್ಬಿರಿಯುತ್ತ ನನ್ನ ಮುಂದೆಯೇ ಹಾದು ಹೋದವು. ಅವುಗಳ ಕೈಯಲ್ಲಿ ಏನೋ ಸಿಕ್ಕಿರಬೇಕು. ಅದಕ್ಕೇ ಈ ಬೊಬ್ಬೆ. ನನ್ನವಳು ಒಳಗಿಂದ 'ಎಂಥದು ಮಕ್ಕಳೇ ಗದ್ದಲ' ಎಂದು ಒದರಿದ್ದು ಕೇಳಿಸಿತು.

ನಾನು ಅರೆಮನಸ್ಸಿನಿಂದ ನನ್ನ ಸ್ನೇಹಿತ ಜನಾರ್ದನನ ಮನೆ ಕಡೆಗೆ ಹೊರಟೆ. ಅದು ಇರುವುದು ನಮ್ಮ ಬಯಲಿನ ಕೆಳತುದಿಯಿಂದ ಮುಂದೆ. ಅವರ ಮನೆಯ ಉದ್ದ ಬಯಲಿನ ಸೆರಗಿಗೆ ನಮ್ಮ ಮನೆಯ ಸೆರಗೂ, ಇನ್ನೆರಡು ಸೆರಗುಗಳೂ ಹೋಗಿ ಕೂಡುತ್ತವೆ. ಈ ಕೂಡು ಸೆರಗುಗಳ ನಡುವೆ ಎತ್ತರದ ಜಾಗ-ಗುಡ್ಡವೂ ಅಲ್ಲ, ಬೆಣವೂ ಅಲ್ಲ-ಎನ್ನುವಂಥ ಕಾಡು ಬೆಳೆದ ಪ್ರದೇಶ. ಅದನ್ನು ಹಾದು ಜನಾರ್ದನನ ಮನೆಗೆ ನೇರ ಹೋಗಬಹುದಾದರೂ, ನಾನು ಬಯಲಿನ ಸೆರಗಿನಲ್ಲಿಯೇ ಅವನ ಮನೆಯ ತನಕವೂ ನಡೆಯಲು ನಿರ್ಧರಿಸಿದೆ. ಮನೆಯ ಹೊರ ಜಗುಲಿಯಲ್ಲಿ ಅಜ್ಜಿ ಕುಳಿತಿದ್ದರು. ಅಶ್ವತ್ಥದ ಕಟ್ಟೆಯಿಂದ ಅವರು ಅಲ್ಲಿಗೆ ಬಂದು ಸ್ವಲ್ಪ ಹೊತ್ತಾಗಿರಲೂಬಹುದು. ಹೊರಟದ್ದನ್ನು ಅವರು ಕಂಡಾಗ ಎಲ್ಲಿಗೆ ಎಂತ ನನ್ನನ್ನು ಕೇಳದೆ ಹೋದರೂ, ನಾನಾಗಿಯೇ "ಜನ್ನನ ಮನೆಗೆ ಹೋಗಿಬರುತ್ತೇನೆ" ಎಂದೆ.

ಅವರು "ಜನ್ನನ ಮನೆಗೋ?" ಅಂದರು.

ಅಲ್ಲಿಂದ ಬೀಸನೆ ಹೆಜ್ಜೆ ಹಾಕಿ ಹೊರಟಾಗ "ಮನೆ ಇರುತ್ತದೆ" ಎಂದು ಅವರ ಬಾಯಿ ತೊದಲಿದ ಹಾಗೆ ಕೇಳಿಸಿತು. ನಾನು ಮುಕ್ಕಾಲು ಮೈಲು ದೂರ ಬಯಲಿನ ಅಂಚಿನಲ್ಲಿ ನಡೆದು, ಅಲ್ಲಿಗೆ ಹೋದರೆ, ಅವನಿಲ್ಲ- ಎಂಬುದು ತಿಳಿಯಿತು. ಆಮೇಲೆ ಅಲ್ಲಿ ಒಂದು ಕ್ಷಣವೂ ನಿಲ್ಲದೆ, ಅವರ ಮನೆಯವರನ್ನೂ ಮಾತನಾಡಿಸದೆ, ಅಲ್ಲಿಂದ ಹೊರಬಿದ್ದು, ಆಚೆ, ಈಚೆ ಅಲೆದಾಡಿಕೊಂಡು ಮುಸ್ಸಂಜೆಯ ಹೊತ್ತಿಗೆ ಮನೆಗೆ ಮರಳಿದೆ.

ಮನೆ ಮುಂದಿನ ಜಗುಲಿಯಲ್ಲಿ ಅಜ್ಜಿ ಕುಳಿತದ್ದನ್ನು ಕಂಡವನೇ "ಅಜ್ಜಿ, ನೀವು ಹೇಳಿದ್ದು ಸಮನಾಯಿತು. ಮನೆ ಇರುತ್ತದೆ- ಎಂದು ನೀವೆಂದಿರಿ. ಅವನು ಇರುವುದಿಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳದೆ ಹೋದೆ" ಎಂದಂದು ನೆಟ್ಟಗೆ ಬಾವಿಯ ಕಟ್ಟೆಗೆ ಹೋಗಿ, ಕಾಲು ತೊಳೆದು, ಅಲ್ಲಿ ಒಂದಿಷ್ಟು ಸಂಧ್ಯಾವಂದನೆಯ ಚಟವನ್ನು ತೀರಿಸಿಕೊಂಡೆ. ಮರಳಿ ಬಂದಾಗ ಅಜ್ಜಮ್ಮ ಮನೆಯ ಚಾವಡಿಯಲ್ಲಿ ಕೈಯಲ್ಲೇನೋ ಹಿಡಿದುಕೊಂಡು, ಕಂಬಕ್ಕೊರಗಿಕೊಂಡು ಮಣಮಣ ಅನ್ನುತ್ತಿದ್ದರು. ನನ್ನ ಬರವೂ ಅವರಿಗೆ ತಿಳಿದಿರದು. ನಾನು ಹೆಜ್ಜೆ ಹಗುರ ಮಾಡಿ ಅವರ ಸಮೀಪ ಬಂದರೂ, ಬಾಯಿ ಮಣಮಣ ನಡೆಯುತ್ತಿತ್ತು. ಏನು ಆಡುತ್ತಿದ್ದಾರೆ- ಎಂಬುದು ಮಾತ್ರ ತಿಳಿಯಲಿಲ್ಲ. ಕುತೂಹಲದಿಂದ ಸ್ವಲ್ಪ ಹಿಂದಕ್ಕೆ ಸರಿದು, ತುಸು ಆಚೆಯ ಕಂಬ ಅಡ್ಡವಾಗುವಂತೆ ಹೋಗಿ ಕುಳಿತೆ. ಅವರ ಧ್ವನಿ, ಮಾತುಗಳು

ಕಿವಿಯೊಡ್ಡಿ ಕೇಳಿದರೆ ಕೇಳಿಸುವ ಹಾಗಿತ್ತು. ಯಾರನ್ನೋ ಕುರಿತು ಮಾತನಾಡುತ್ತಿರುವುದು ಕಿವಿ ನಿಮಿರಿಸಿ ಕೇಳತೊಡಗಿದ ನನಗೂ ಹೊಳೆಯಿತು.

“ಹೌದು, ಇದು ನಿನಗೆ ಬೇಕು. ಈ ಕರಡಿಗೆ ಮರೆತಿಲ್ಲ ನೀನು! ಯಾಕೆ ಮರೆತೀಯಾ? ಅವಳು ನಿನಗೆ ಕೊಟ್ಟಿದ್ದಲ್ಲವೆ? ಅದನ್ನು ಹೆಣೆಯಲಿಕ್ಕೆ ಎಷ್ಟೆಲ್ಲ ಭಂಗ ಬಂದಿಲ್ಲ! ಕಾಡಿಗೆ ಹೋಗಿ, ಬೆತ್ತ ತಂದು, ಸಿಗಿದು, ಗೀಸಿ, ಹೆಣೆದುಕೊಟ್ಟಳು, ನಿನ್ನ ವೀಳಯಕ್ಕಾಗಲಿ-ಎಂದು. ಅವಳಿಗೆ ನಿನ್ನ ಮೇಲೆ ಪ್ರೀತಿ ಕಡಿಮೆ ಎನ್ನುತ್ತೀಯಾ? ಅವಳೂ ಒಳ್ಳೆಯವಳೇ.

“ಅಲ್ಲ, ಏಕೆ ಸಿಟ್ಟಾಗುತ್ತೀಯಾ? ನಿನ್ನನ್ನು ಬಿಟ್ಟು ಓಡಿ ಹೋದವಳನ್ನು ಒಳ್ಳೆಯವಳು-ಅಂದದ್ದಕ್ಕೇನು? ನಿನ್ನ ಮನೆಗೆ ಅವಳು ಒಲಿದೇ ಬಂದಳು. ಒಲಿದೇ ಇದ್ದಳು. ಓಡಿ ಹೋಗುವ ಆ ಕೆಟ್ಟ ಗಳಿಗೆಯ ತನಕವೂ ನಿನಗೆ ಇದಿರು ಮಾತನಾಡಿದಳೇನು? ನೀನೇ ಒಂದು ಲೆಕ್ಕಕ್ಕೆ ಪಡಪೋಷಿ. ಅವಳ ಮುಂದೆ ನಿನ್ನ ಗಂಡಸುತನದ ಜರ್ಬನ್ನೇ ತೋರಿಸಿದೆ. ಏನೆಂದೆ ನೀನು? ‘ನಿನ್ನ ಚಂದಕ್ಕೆ ನಾನು ಮರುಳಾದವನಲ್ಲ. ನಿನ್ನ ಮಾಯೆಗೆ ನಾನು ಮರುಳಾಗೆ’ ಎಂದು ಚೇಷ್ಟೆಗಾದರೂ ನೀನು ಹೇಳಿದ್ದೆಯೋ ಇಲ್ಲವೋ? ಮತ್ತೆ ಈ ಮಾತು ಅಂದಿಲ್ಲವೇ? ‘ಮೈ ಒಯಿನಾಗಿದ್ದರೇನಂತೆ? ನನ್ನ ಮನೆಗೆ ಬಂದ ಹೆಣ್ಣು ಮಕ್ಕಳು ಗಾಣದ ಎತ್ತಿನ ಹಾಗೆ ಚಾಕರಿ ಮಾಡಬೇಕಾದೀತು. ದುಡಿಯದೆ ತಿಂಬ ಮನೆ ಇದಲ್ಲ. ದುಡಿಯುವುದರಲ್ಲಿ ಕಳ್ಳತನ ಮಾಡಿದರೆ ಗುದ್ದಿ ಹಣ್ಣು ಮಾಡಿಯೇನು’ ಅಂದಿಲ್ಲವೇನು ನೀನು?

“ಯಾರು ದುಡಿಯುವುದಕ್ಕೆ ಹೆದರುತ್ತಾರೆ- ಅಂದಿಲ್ಲವೇನು ಅವಳು? ಅಥವಾ ದುಡಿಯಲಿಕ್ಕೆ ಕಡಿಮೆ ಮಾಡಿದಳೇ? ಆದರೂ ನೋಡು, ರಾಮಣ್ಣ ನೀನು ಮಾಡಿದ ಕೆಲಸ ಸಮವೇ? ಮದುವೆಯಾಗಿ ಬಂದು ಮೂರು ವರ್ಷ ಸಂದರೂ, ಒಂದು ಹೊಸ ಸೀರೆ ತುಂಡನ್ನು ಅವಳ ಮೈ ಮುಚ್ಚಲಿಕ್ಕೆ ಕೊಡಬೇಡವೇ? ಹೆಣ್ಣಲ್ಲವೇ ಅವಳು? ಅರಿವೆ, ಒಡವೆ, ವಸ್ತುಗಳ ಮೋಹ ಇದ್ದರೆ ಆಶ್ಚರ್ಯವೇ? ನೀನು ಕೌಪೀನ ತೊಟ್ಟು, ಗಾಣ ತಿರುಗಿಸಿದ ಹಾಗೆ, ನಿನ್ನ ಹಿಂದೆ ಅವಳು ಹರಕು ಅರಿವೆಯಲ್ಲಿ ತಿರುಗಬೇಕೆಂದರೆ? ಯಾರ ಹತ್ತಿರವೋ ಗೊಣಗಿದಳು-ನಿನ್ನ ಉದಾಸೀನ ಕಂಡು. ಅವರು ಅವಳಿಗೆ ಏನು ಹೇಳಿಕೊಟ್ಟರೋ? ನಿನ್ನನ್ನು ಹೆದರಿಸಲಿಕ್ಕೆ ಓಡಿ ಹೋದಳು. ನೀನೂ ಹುಡುಕಿರಬೇಕು ಆಮೇಲೆ. ಆದರೆ, ಅಷ್ಟರಲ್ಲಿಯೇ ದನ ಹೋಗಿ ಹುಲಿಯ ಗವಿಯನ್ನು ಸೇರಿದ ಹಾಗಾಯಿತು. ಅದೇ ಊರಿನವಳು ಅವಳು; ಅಲ್ಲವೇ? ಅವಳ ಮೇಲೆ ಶೀನಪ್ಪ ಎಷ್ಟು ನದರು ಇಟ್ಟಿದ್ದನೋ; ಎಂದಿಂದ ಇಟ್ಟಿದ್ದನೋ! ತವರಿಗೆ ಓಡಿಬಂದ ಅವಳನ್ನು ಎಲ್ಲಿ ಅಡಗಿಸಿಟ್ಟನೋ, ಏನು ಆಸೆ ಹುಟ್ಟಿಸಿದನೋ, ನಿನಗೆ ಇದೆಲ್ಲ ಗೊತ್ತಾಗುವಾಗ, ನಿನ್ನ ಗಂಡಸುತನದ ಡೌಲು ಇಳಿದು ಬುದ್ಧಿ ಬರುವಾಗ ಎಲ್ಲವೂ ತೀರ ಮುಗಿದು ಹೋಗಿತ್ತು.

ಶೀನಪ್ಪನ ಬಲೆಗೆ ಅವಳು ಬಿದ್ದಿದ್ದಾಳೆ- ಎಂಬ ಸುದ್ದಿ ಊರಲ್ಲಿ ಹಬ್ಬಿದ ಮೇಲೆಯೇ ನಿನಗೆ ಜ್ಞಾನ ಬಂದದ್ದು.

"ಆದರೂ ರಾತಾರಾತ್ರಿ ಹೋದೆ, ಬೇಡಿದೆ. ಅವಳು 'ಹೋಗಿ, ನೀವಿನ್ನು ನನ್ನ ಆಸೆಯನ್ನು ಬಿಡಿ' ಎಂದಳು. ಅಂದದ್ದು ಸಿಟ್ಟಿನಿಂದಲ್ಲ, ಸಂಕಟದಿಂದ. ತನ್ನ ಸಿಟ್ಟು, ಸೆಡಗಳಿಂದಲೇ ತಾನಾಗಿ ಹಳ್ಳ ಹಾರಿಕೊಂಡೆ- ಎಂದು ಗೊತ್ತಾಗಿಯೇ, ಅವಳು ಹೇಳಿದ್ದು. ನೀನಾಗ ಆಸೆ ಬಿಟ್ಟು ಬಂದೆ.

"ಆದರೂ, ನಿನ್ನ ಮನಸ್ಸು ದೊಡ್ಡದು, ರಾಮಣ್ಣ, ಆ ಶೀನಪ್ಪ ಎಷ್ಟು ಸಂಸಾರಗಳನ್ನು ಹಾಳು ಮಾಡಿದವನೋ! ಸಣ್ಣದರಲ್ಲಿ ಈ ಮನೆಗೆ ಬರುತ್ತಿದ್ದವನೇ ಅಲ್ಲವೇ! ಈಗಲಾದರೂ ಅವನಿಗೆ ಏನು ಮೊಡ್ಡ ಪ್ರಾಯ?" ಅಂಕೆಯಿಲ್ಲದ ಕಪಿ ಅದು, ಅವನು ನಮ್ಮ ಮನೆಗೆ ಬಂದ ಅಂದರೆ, ನನಗೆ ಬಿಸಿಗಾಳಿ ಬಡಿದ ಹಾಗೆ ಸಂಕಟವಾಗುತ್ತಿತ್ತು. ನಾಲ್ಕು ದಿನದ ಮೇಲೆ ಅವನು ಅವಳನ್ನು ಬಿಟ್ಟ. ಇನ್ನು ಯಾವಳನ್ನೋ ಹಾರಿಸಿ ತಂದ. ಅಪ್ಪ ಮಾಡಿಟ್ಟಿದ್ದು ಇದಕ್ಕೇ ಆಯಿತು. ಈಗ ಅವನೂ ಉದ್ಧಾರವಾಗಿಲ್ಲ. ಆ ಕಾಲದಲ್ಲಿ ಅವನಿಗೂ ಬುದ್ಧಿ ಹೇಳಿದವರಿಲ್ಲ. ಹೆಣ್ಣಿನ ಮೋಹ ಎಂದರೆ ಹೆಂಡ ಕುಡಿದ ಹಾಗೆಯೇ. ಇತ್ತ, ನಾಗಿಯ ಗತಿ ಏನಾಯಿತು? ಎರಡೆರಡು ಮಕ್ಕಳನ್ನು ಹೆತ್ತಳು. ಅವಳೂ ತಬ್ಬಲಿಯಾದಳು. ಈಗ ಎಲ್ಲಿದ್ದಾಳೋ, ಅಂತೂ ನಿನ್ನ ಹಿಂದಕ್ಕೆ ಬರಲಿಲ್ಲ- ತಾನು ಎಂಜಲಾದೆ ಎಂಬುದರಿಂದ. ಒಂದು ಹತ್ತು ದಿನ ಅವಳ ಮನಸ್ಸು ಎಂಜಲಾದದ್ದು ನಿಜ. ಪ್ರಾಯ ಅಂಥದು. ಸೊಕ್ಕು ಅಂಥದು. ನೀನು ಮನೆ ಬಿಟ್ಟು ಹೋಗುವ ಹಾಗೆ ಮಾಡಿದ ರೀತಿಯೂ ಅಂಥದೇ. ನೀನೂ ಒಂದು ಹೆಣ್ಣನ್ನು ಹೊಟ್ಟೆ, ಬಟ್ಟೆಗೆ ಕೊಟ್ಟು ಸಾಕುವ ತ್ರಾಣ ಇಲ್ಲ- ಎಂದು ತೋರಿಸಿದೆ.

"ನನಗೆ ಗೊತ್ತು. ಇಷ್ಟೆಲ್ಲ ಆಗುತ್ತದೆ-ಎಂದು. ನಿನಗೆ ಮೊದಲೇ ಗೊತ್ತಿದ್ದರೆ- ನೀನೆಂದೂ ಹಾಗೆ ಮಾಡುತ್ತಿರಲಿಲ್ಲ- ಎಂದು. ಹಾಗಿದ್ದುದರಿಂದಲೇ ಅಲ್ಲವೇ 'ಬಂದರೆ ಅವಳೇ ಬರಬೇಕು, ಬೇರೆ ಬೇಡವೇ ಬೇಡ' ಎಂದು ಹಟ ಹಿಡಿದು ಕುಳಿತಿದ್ದೀಯಾ. ಒಂದು ಲೆಕ್ಕಕ್ಕೆ ನಿನಗೆ ಏನೂ ಕಡಿಮೆ ಆಗಿಲ್ಲ. ತಂಗಿಯರಿದ್ದಾರೆ, ಅಳಿಯಂದಿರಿದ್ದಾರೆ. ನೀನೂ ದುಡಿಯುವವನೇ. ಆದರೂ ಒಯಿನಿಲ್ಲದ ಬದುಕು ನಿನ್ನದು. ರಸ ಹಿಂಡಿದ ಕಬ್ಬಿನ ಜೊಗಟೆ ನೀನು.

"ನಲ್ವತ್ತು ವರ್ಷ ಒಂದು ಹೆಚ್ಚಲ್ಲ, ಪ್ರಾಯ. ಇನ್ನೊಂದು ಹೆಣ್ಣು ಸಿಗಲಾರದು- ಎಂಬ ಹಾಗಿಲ್ಲ. ನಾಗಿ ಹಾಗಿನ ರಂಭೆ ಸಿಗಲಾರಳು; ಛಲಗಾತಿ ಸಿಗಲಾರಳು. ಬೇಕೆನಿಸಿದರೆ ಮದುವೆ ಆಗು. ಅಮೊಂದನ್ನು ಅವನೇ ಮಾಡಿದ್ದಾನಲ್ಲ ಪ್ರಾಕಿನಿಂದ. ಈ ಜಗತ್ತು ದೇವರ ಮಾಯೆ- ಅನ್ನುತ್ತಾರೆ ಎಲ್ಲರೂ. ನಾನೂ ಅನ್ನುತ್ತೇನೆ- ಗಂಡು ಹೆಣ್ಣಿನ ಮಾಯೆಯಿಂದಲೇ

ಜಗತ್ತು. ಅವು ಎರಡೂ ಇಲ್ಲದೆ ಹೋಗಿದ್ದರೆ ಜಗತ್ತೆಂಬುದು ಬರಡು. ಏನುಂಟಂತೆ ಅದರಲ್ಲಿ? ಅದನ್ನು ಮಾಡಿದ್ದರಿಂದಲೇ ಸಾವಿರ ಸುಖ, ಸಾವಿರ ದುಃಖ ಹುಟ್ಟಿಕೊಂಡಿತು. ಸಾವಿರ ರುಚಿ, ಸಾವಿರ ಅರುಚಿ ಹುಟ್ಟಿಕೊಂಡಿತು. ಇರಬೇಕು, ಈಜಬೇಕು. ಇದ್ದು ಜಯಿಸಬೇಕು- ಎಂಬ ಛಲವೂ ಜೀವಗಳಲ್ಲಿ ಕಾಣಿಸಿಕೊಂಡಿತು. ಆದುದರಿಂದಲೇ- ಬದುಕು ಎಂಬ ಪದಾರ್ಥ ಇದೆ ಅನಿಸತೊಡಗಿತು."

ನಾನು ಅದನ್ನೆಲ್ಲ ಕೇಳಿದೆ, ಕೇಳಿದೆ-ಯಾಕಿಷ್ಟೊಂದು ಮಾತು? ಯಾರ ವಿಚಾರ- ಎಂಬುದು, ರಾಮಣ್ಣನ ಹೆಸರು ಬಂದುದರಿಂದ ಮಾತ್ರ ತಿಳಿಯಿತು. ಆ ಇನ್ನೊಂದು ವ್ಯಕ್ತಿಯ ಹೆಸರೂ ಕೇಳಿಸಿತು. ಅದೆಂದರೆ, ನನ್ನ ಮಾವನ ಹೆಸರು. ಸುಮಾರು ಹದಿನೈದು, ಇಪ್ಪತ್ತು ವರ್ಷಗಳ ಕಾಲ ನನ್ನ ನೆನಪಿನ ಪಟಲದಿಂದ ಮಾಯವಾದ ನಾಗಿಯ ನೆನಪೂ ಬಂದಿತು. ಈಗ ಅವಳ ಎರಡು ಮಕ್ಕಳೂ ಮೊಡ್ಡವರಾಗಿರಬೇಕು. ಎಲ್ಲಿದ್ದಾರೋ ನಾನರಿಯೆ. ನನ್ನ ಮಾವನ ಚಿತ್ರವಂತು ಸ್ಮರಣೆಗೆ ಬಂದು, ಅಲ್ಲಿಂದ ಅವರನ್ನು ಕುರಿತು ಆಮೇಲೆ ಕೇಳಿದ ಹತ್ತಾರು ಕತೆಗಳ ಕಡೆಗೆ ಮನಸ್ಸು ಹರಿಯಿತು. ಅವರು ಹೆಣ್ಣಿನ ಮೋಹಕ್ಕೆ ಆಸ್ತಿಪಾಸ್ತಿಗಳನ್ನು ಕಳೆದುಕೊಂಡು, ತನ್ನೊಬ್ಬ ತಮ್ಮನಿಗೆ ಅವನ್ನೆಲ್ಲ ಮಾರಿ, ಯಾವಲ್ಲೋ ಅಜ್ಞಾತವಾಸ ಮಾಡುತ್ತಿದ್ದಾರೆಂದು ಕೇಳಿದ್ದೇನೆ. ಅಜ್ಜಿಯ ಗೊಣಗಿನಿಂದ ಆ ಒಂದು ಕತೆಯ ತುಣುಕು, ಚೂರುಗಳು ಕೂಡಿ ಬಂದು, ಕಡಿದು ಹೋದ ಸಂಬಂಧ, ಮರವೆಯಾದ ನಂಟುತನ ನಮ್ಮ ಮನೆಯ ನೆಲಕ್ಕೆ ಹೊಂದಿಕೊಂಡದ್ದು ಕಾಣಿಸಿತು.

ಇನ್ನೊಂದು ಸಾರಿ ಅವಕಾಶ ಮಾಡಿಕೊಂಡು ಮಾವನಿದ್ದ ಗ್ರಾಮಕ್ಕೆ ಹೋಗಬೇಕು. ಮುಂದೆ-ಆ ನಾಗಿ ಏನಾದಳು, ಹೇಗಾದಳು-ಎಂದು ತಿಳಿಯಬೇಕು; ಅವಳ ಭೀಷ್ಮಪ್ರತಿಜ್ಞೆ ಯಾವ ರೀತಿಯಲ್ಲಿ ಕೊನೆಗೊಂಡಿತು-ಎಂಬ ವಿಚಾರಗಳು ನನ್ನಲ್ಲಿ ಮೂಡಿದುವು.

ಅಷ್ಟರಲ್ಲಿ, ಯಾರವೋ ಬೀಸು ಹೆಜ್ಜೆಯ ಜೋಡಿನ ಧ್ವನಿ ಕೇಳಿಸಿತು. ಅಜ್ಜಿ ಕುಳಿತಲ್ಲಿಂದಲೇ "ರಾಮಣ್ಣ ತಿರುಗಿ ಬಂದನೆಂದು ಕಾಣುತ್ತದೆ. ಮರೆತು ಹೋಗಿದ್ದ; ಅವನ ದೇವಿ ಕೊಟ್ಟಿದ್ದ ಎಲೆಯಡಿಕೆ ಸಂಚಿಯನ್ನು"-ಎಂದಳು.

ರಾಮಣ್ಣನೇ ಬರಬೇಕೆ ಅಲ್ಲಿಗೆ? ಜಗುಲಿಯಲ್ಲಿ ಕುಳಿತ ನಮ್ಮ ನಡುವೆ ನನ್ನ ಹೆಂಡತಿ ಇರಿಸಿಹೋದ ಲಾಟೀನು ದೀಪದ ಅರಿವೂ ನನಗೆ ಬರಲಿಲ್ಲ. ಆ ಬೆಳಕಿನಲ್ಲಿ ರಾಮಣ್ಣನ ಮುಖ ಕಾಣಿಸಿತು. ಆತ 'ಒಡೆಯ' ಎಂದು ನನ್ನನ್ನು ಸಂಬೋಧಿಸಿದ.

"ಯಾರು, ರಾಮಣ್ಣನೇ? ಏನು ಬಂದೆ ತಿರುಗಿ?"

"ಅಯ್ಯಾ, ನನ್ನ ಸಂಚಿಪೆಟ್ಟಿಗೆ ಮರೆತುಹೋದೆ. ಮಕ್ಕಳ ಕೈಗೆ ಸಿಕ್ಕಿ ಏನಾದರೂ ಆಗದೆ- ಸಿಕ್ಕಿದರೆ ಆಗುತ್ತಿತ್ತು."

"ಸಂಚಿ ಪೆಟ್ಟಿಗೆಯಾ" ಎಂದು ಕೇಳಿದೆ ನಾನು.

ಅಜ್ಜಿ ನನ್ನ ಧ್ವನಿಯನ್ನು ಕೇಳಿ, "ನೀನೇನು ಮಾಡುತ್ತಿದ್ದೀಯ ಇಲ್ಲಿ?" ಎಂದು ಪ್ರಶ್ನಿಸಿದರು.

"ಕುಳಿತಿದ್ದೆ ಸುಮ್ಮನೆ."

"ಸಂಚಿ ಇಲ್ಲಿದೆ, ನೋಡು" ಎಂದು ಅದನ್ನು ನನ್ನ ಕೈಗೆ ಕೊಟ್ಟು, "ಅವನಿಗೆ ಕೊಡು, ಪಾಪ, ಅದೊಂದೇ ಅವನಿಗುಳಿದ ಭಾಗ್ಯ" ಎಂದರು.

"ನಿಮ್ಮ ಕೈಯಲ್ಲಿ ಹೇಗೆ ಬಂತಜ್ಜಿ?" ಎಂದು ಕೇಳಿದೆ ನಾನು.

"ನಿನ್ನ ಮಾಣಿ ಹಿಡಿದುಕೊಂಡು ಬಂದಿತಪ್ಪ. ಇಲ್ಲಿಯೇ ಅವೆರಡೂ ಆಡುತ್ತಾ ಇದ್ದುವು; ಬಿಟ್ಟು ಹೋದುವು. ನನ್ನ ಕೈಗೆ ಸಿಕ್ಕಿತು. ಏನಿದು ಅಂತ ಹಿಡಿದುಕೊಂಡೆ, ಒಂದು ರಾಮಾಯಣವೇ ಕಾಣಿಸಿತು. ಮೊದಲು ಅದನ್ನು ಅವನಿಗೆ ಕೊಡು, ಹೋಗಲಿ ಅವನು."

"ನಾನು ಅದನ್ನು ತೆರೆದು ಒಳಗಡೆ ನೋಡಿದೆ! ಎಲೆ ಅಡಿಕೆ ಏನೊಂದೂ ಉಳಿದಿರಲಿಲ್ಲ. ಅದನ್ನು ಕಂಡು ಆತ ನಕ್ಕು ಆಡಿದ "ಅದು ಮೊಡ್ಡದಲ್ಲ. ನನ್ನ ಸಂಚಿ ಕಳೆದು ಹೋಗಿದ್ದರೆ ಮಾತ್ರ..."

"ಅದರಲ್ಲಿ ಸುಣ್ಣದ ಕರಡಿಗೆ, ಹೊಗೆಸೊಪ್ಪಿನ ಅಂಡೆ ಇರಲಿಲ್ಲವೇ? ಎಂದು ಪ್ರಶ್ನಿಸಿದೆ ನಾನು.

"ಇತ್ತು ಅದೆಲ್ಲ; ಹೋದರೆ ಹೋಗಲಿ. ಪೆಟ್ಟಿಗೆ ಸಿಕ್ಕಿತಲ್ಲ."

"ಈ ಕತ್ತಲಲ್ಲಿ ಅವನ್ನೆಲ್ಲ ಹುಡುಕಲಿಕ್ಕೆ ಬರಲಾರದು. ನಾಳೆ ಹುಡುಕಿ, ಸಿಕ್ಕಿದರೆ ಕೊಡುತ್ತೇನೆ. ಬರಿಯ ಎಲೆ, ಅಡಿಕೆ ಬೇಕಾದರೆ ಕೊಡುವ ಈಗ."

"ಅದೇನೂ ಬೇಕಿಲ್ಲ ಒಡೆಯ."

"ಎಷ್ಟು ಮಾತು ನಿನಗೆ ಮಾಣಿ, ಪೆಟ್ಟಿಗೆ ಅವನಿಗೆ ಕೊಡು ಅಂದರೆ" ಎಂದು ಗದರಿಸಿದರು ಅಜ್ಜಿ. ಅವರ ದನಿ ತುಸು ಬಿರುಸಾಗಿ ಕೇಳಿಸಿತು. ಅದನ್ನು ಒಯ್ದು ಅವನ ಬಳಿಗೆ ಹೋಗಿ ಕೊಟ್ಟೆ. ಆತ ಅದನ್ನು ಎರಡೂ ಕೈಗಳನ್ನೊಡ್ಡಿ ತೆಗೆದುಕೊಂಡ. "ಇದೊಂದು ಸಿಕ್ಕಿತಲ್ಲ, ನನ್ನ ಪುಣ್ಯ" ಎಂದು ಹೇಳಿ ಹೊರಟು ಹೋದ. ಅವನು ಹೋದ ಮೇಲೆ ನಾನು ಅಜ್ಜಿಯೊಡನೆ ನಮ್ರತೆಯಿಂದ "ಅಜ್ಜಿ, ಅಷ್ಟಕ್ಕೆ ನೀವು ನನ್ನನ್ನು ಯಾಕೆ ಹೆದರಿಸಿದಿರಿ? ನಾನು ಆಸೆಯಾಗಿ ಅದನ್ನು ಇರಿಸಿಕೊಳ್ಳುತ್ತೇನೆಂದೇ? ಅದೊಂದು ಹಳೆಯ ಲಡ್ಡು ಪೆಟ್ಟಿಗೆ. ನಾನಾದರೆ, ಈ ಕತ್ತಲಲ್ಲಿ ಅದನ್ನು ಹುಡುಕಿಕೊಂಡು ಬರುತ್ತಲೇ ಇರಲಿಲ್ಲ. ಅದರ

ಒಳಗೇನಾದರೂ ಬೆಳ್ಳಿಯ ಸುಣ್ಣದ ಕರಡಿಗೆ ಇತ್ತೋ ಏನೋ. ಅವನು ಅದೊಂದಕ್ಕೂ ಆಸೆ ಮಾಡದೆ ಹೋದುದನ್ನು ಕಂಡರೆ ಅಂಥದೇನೂ ಇರಲಿಲ್ಲ- ಎಂದೇ ಕಾಣುತ್ತದೆ."

"ಅವನಿಗೆ ಆ ಸಂಚಿಪೆಟ್ಟಿಗೆ ಮುಖ್ಯವಾಗಿ ಬೇಕಾಗಿತ್ತು. ಅವನದ್ದದು; ಕೊಟ್ಟೆಯಲ್ಲ. ನಾಳೆ ಅವನ ಸುಣ್ಣದ ಡಬ್ಬಿಯೋ, ಹೊಗೆಸೊಪ್ಪಿನ ಅಂಡೆಯೋ ಸಿಕ್ಕಿದರೆ ಅವನಿಗೆ ಮುಟ್ಟಿಸು."

"ಮುಟ್ಟಿಸುತ್ತೇನೆ ಅಜ್ಜಿ, ಆದರೆ ನೀವು ಅಷ್ಟು ಸಿಟ್ಟಾದುದೇಕೆ ಅಂತ ಹೇಳಲಿಲ್ಲ."

ಅಜ್ಜಿ ನಕ್ಕರು, "ಬಂತಪ್ಪ, ಒಂದು ಚೂರು ಸಿಟ್ಟು. ಅವನದ್ದನ್ನು ಅವನಿಗೆ ಬೇಗ ಕೊಡು-ಎಂದೆ. ನಾನೇ ಅದನ್ನು ಇಷ್ಟು ಹೊತ್ತು ಹಿಡಿದುಕೊಂಡಿದ್ದೆ. ಅಷ್ಟು ಹೊತ್ತು ನನ್ನ ಕಣ್ಣಿಗೆ ಏನೇನೋ ಕಾಣಿಸಿತು. ಒಳ್ಳೆಯ ರಾಮಣ್ಣ; ಏಕೀನಿ ಜೀವ ಹೋದ ಮೇಲೆ ಈ ದೇಹ ಏನಾಗುತ್ತದೆ ಹೇಳು?"

'ಕೊಳೆತೇ ಹೋಗುತ್ತದೆ ಅಥವಾ ಒಣಗಿ ಬರಿ ಗೂಡಾಗುತ್ತದೆ.'

"ಹಾಗಿದೆ ಅವನ ಸಂಸಾರ. ಅವನ ಸಂಸಾರ ಆದದ್ದು ಹಾಗೆಯೇ. ಅವನು ಓಡಾಡುತ್ತಿರುವುದೆಲ್ಲ ಸಮನೇ. ಆ ನಾಗಿ ಹೋದದ್ದೆಂಬುದು ಅವನ ಪಾಲಿಗೆ ಇದ್ದೊಂದು ಜೀವ ಹೋದ ಹಾಗೆಯೇ. ಅವಳು ಬಂದ ಹೊಸತರಲ್ಲಿ ಮಾಡಿಕೊಟ್ಟ ಸಂಚಿ ಅದು. ಅವಳ ನೆನಪು ಅವನಿಗೆ ಹೋಗಲೊಲ್ಲದು. ಅದಕ್ಕಾಗಿ ಓಡಿಬಂದ. ಅದರ ಬದಲು ನೂರು ಹೊಸ ಸಂಚಿ ಕೊಟ್ಟರೂ ಅವನಿಗೆ ಬೇಕಾಗದು. ಇನ್ನೂ, ಇನ್ನೂ, ಅವನು ಸಾಯುವ ತನಕವೂ, ಆ ಸಂಚಿಯನ್ನು ಮಗ್ಗುಲಲ್ಲಿಟ್ಟುಕೊಂಡು ಮಲಗಿಯಾನು."

"ಹೋ, ಅದನ್ನು ನೆನೆದು ನೀವು ಇಷ್ಟು ಹೊತ್ತಿನ ತನಕವೂ ಅಂದದ್ದಿರಬೇಕಲ್ಲವೇ? 'ಗಂಡು ಹೆಣ್ಣಿನ ಮಾಯೆ ಅಂಥದು. ಅದರಿಂದ ಸಾವಿರ ಸುಖ, ಸಾವಿರ ದುಃಖ, ಸಾವಿರ ರುಚಿ, ಸಾವಿರ ಅರುಚಿ' ಎಂತ ಏನೇನೋ ಅನ್ನುತ್ತಿದ್ದಿರಲ್ಲವೆ! ಅದು ರಾಮಣ್ಣನ ನೆನಪು ಬಂದು ಹೇಳಿದ ಮಾತೇ?"

"ನಾನು ಹಾಗೆಲ್ಲ ಹೇಳಿದೆನೇ? ನನಗೆ ಹಾಗೆಲ್ಲ ಕಾಣಿಸಿದ್ದು ಹೌದು. ಹೇಳಿದೆನೋ, ಬಿಟ್ಟೆನೋ ತಿಳಿಯೆ."

"ಹೇಳಿದಿರಿ. ನಾನು ಸ್ವಲ್ಪ ಹೊತ್ತು ನಿಮ್ಮ ಮಗ್ಗುಲಲ್ಲಿ ಬಂದು ಕುಳಿತದ್ದು ನಿಮಗೆ ತಿಳಿಯಲೂ ಇಲ್ಲ, ಯಾರ ವಿಷಯವೋ, ಏನೇನೋ ಅನ್ನುತ್ತಿದ್ದೀರಿ-ಎಂದು ಕೇಳುತ್ತ ಕುಳಿತೆ."

ಅವರು ನಕ್ಕರು, "ಕೇಳಿದೆ, ಹಾಗಾದರೆ, ಕೇಳಿ ಏನು ತಿಳಿಯಿತು ನಿನಗೆ?"

"ಹೆಣ್ಣು ಗಂಡಿನ ಮಾಯೆ ಅಂದಿರಿ. ಯಾಕಿರಬೇಕು ಆ ಮಾಯೆ? ದೇವರು ಯಾಕೆ ಹಾಗೆ ಹೆಣ್ಣು, ಗಂಡು ಅಂತ ಸೃಷ್ಟಿ ಮಾಡಬೇಕು? ಈ ಮಾಯೆಯಲ್ಲಿ ಜಗತ್ತನ್ನು ಯಾಕೆ ಮುಳುಗಿಸಬೇಕು-ಎಂಬ ವಿಚಾರ ಮಾತ್ರ ತಲೆ ಚಚ್ಚಿಕೊಂಡರೂ ನನಗೆ ತಿಳಿಯುವ ಹಾಗಿಲ್ಲ. ಅದರಿಂದಲೇ, ಬಲ್ಲವರು-ಈ ಮಾಯೆ ಕಳಚದೆಯೆ ಮುಕ್ತಿ ಸಿಗಲಾರದು-ಅನ್ನುವುದು."

"ಅನ್ನುತ್ತಾರೆ. ಅಂದು, ನಾಲಗೆಯ ತೀಟೆ ತೀರಿಸಿಕೊಂಡದ್ದರಿಂದ ಯಾರೊಬ್ಬರೂ ಬುದ್ಧಿವಂತರಾಗುವುದಿಲ್ಲ. ಅದು ಮಾಯೆ-ಎಂದರೇನು? ಅದರ ಆಟ ನಮಗೆ ತಿಳಿಯಲಾರದು ಎಂತಲ್ಲವೇ? ಅದನ್ನು ಯಾಕೆ ಹೂಡಿದ-ಎಂದು ನಮಗೆ ತಿಳಿಯುವುದು ಸಾಧ್ಯವೇ?"

"ಸಾಧ್ಯವಲ್ಲ. ಅದೇ ಮಾಯೆಗೆ ರಾಮ, ಕೃಷ್ಣ, ಶಿವ, ಬ್ರಹ್ಮ-ಎಲ್ಲ ದೇವರನ್ನೂ ಸಿಕ್ಕಿಸಿ ಹಾಕಿದ್ದೇವೆ ನಾವು. ಅದೇ ನಾವು 'ಅದು ಮಾಯೆ; ಅದನ್ನು ಬಿಡಬೇಕು; ಬಿಟ್ಟರೇನೆ ಮೋಕ್ಷ' ಅನ್ನುತ್ತಿರುತ್ತೇವೆ. ಏನು ಮೋಕ್ಷವೋ! ಯಾರ ಮೋಕ್ಷವೋ! ಒಂದೊಂದು ಸಾರಿ ನಗು ಬರುತ್ತದೆ- ಮಗು, ನನಗೆ. ಹೆಂಡತಿ ಮಕ್ಕಳನ್ನು ಬಿಟ್ಟರು ದಾಸರು. ವಿಠಲನನ್ನು, ನಾರಾಯಣನನ್ನು ನಂಬಿ ಹಾಡಿದರು. ನಂಬಿದ್ದೇ ನಂಬಿದ್ದು; ಹಾಡಿದ್ದೇ ಹಾಡಿದ್ದು. ಅವರು ತಮ್ಮ ಹೆಂಡಿರನ್ನು ದಾರಿ ಮೇಲೆ ಕೆಡೆದು ಹೋದದ್ದು ನಿಜ. ಹಾಗೆ ಮಾಡಿ ಬೇಡಿದ್ದು ಯಾರನ್ನು? ತಂತಮ್ಮ ಹೆಂಡಿರೊಡನೆ ಸುಖವಾಗಿ ವೈಕುಂಠದಲ್ಲೋ, ಕೈಲಾಸದಲ್ಲೋ ಇರುವಂಥ ವಿಷ್ಣುವನ್ನು, ಶಿವನನ್ನು. ಅವರೇನು ಕೊಟ್ಟಾರು? ಅವರಿಗೂ ಅವರ ಹೆಂಡಂದಿರಿಂದ ಮುಕ್ತಿ ಸಿಗದೆ ಇರುವಾಗ?

"ಕನಸು, ಭ್ರಮೆ ಅನ್ನುತ್ತಾರಲ್ಲ. ಮಗು ಅದೇ ಇದು. ತಾವೇ ಮೋಹ ಪಾಶ ಕಡಿದುಕೊಳ್ಳಲಾರದ ದೇವರು, ಇವರ ಮೋಹ ಪಾಶ ಕಡಿದು ಉದ್ಧಾರ ಮಾಡುತ್ತಾನೆ- ಎಂಬುದು. ಆ ದೇವರಿಗೆ ಹೆಂಡಿರಿರುವುದು ಮೋಹ ಅನಿಸುವುದಿಲ್ಲವಾದರೆ, ಯಾತಕ್ಕೆ ಬೇಕವರು? ಯಾವ ದೇವರೂ ಮದುವೆ, ಗಿದುವೆ ಮಾಡಿಕೊಳ್ಳದೆ, ತಮ್ಮಷ್ಟಕ್ಕೆ ಲೋಕದ ಸೃಷ್ಟಿ, ಸ್ಥಿತಿ, ಲಯ ಮಾಡುತ್ತಾ ಇರಬಹುದು. ಬಸರೀಕಟ್ಟೆಯ ದೇವರು ಸೃಷ್ಟಿಯನ್ನು ಮಾಡಿದ. ಬಾಳಕಟ್ಟೆಯ ದೇವರು ಅನ್ನ ಬೇಯಿಸಿ ಹಾಕಿದ. ಬೂದಿಕಟ್ಟೆಯ ದೇವರು ಸುಟ್ಟು ಲಗಾಡಿ ತೆಗೆದ. ಮೂರು ಕೆಲಸಕ್ಕೆ ಮೂರು, ಮೂರು ದೇವರು. ಹಾಗೆ ಸುಡುವುದಕ್ಕೂ, ಇಡುವುದಕ್ಕೂ ಮೊದಲು, ಹೆಣ್ಣು, ಗಂಡು ಬೇಕು. ಅದನ್ನು ಒಟ್ಟಿಗೆ ತರುವುದಕ್ಕೂ, ಇಡುವುದಕ್ಕೂ ಬೇಕು. ಮೊದಲು ಅದು ಇಲ್ಲವಾದರೆ ಸೃಷ್ಟಿಯೆಂಬುದೇ ಇಲ್ಲ. ದೇವರು, ದೇವರು ಅನ್ನುವವರೂ ಉಳಿಯುವುದಿಲ್ಲ."

ಅಜ್ಜಿಯ ಈ ವಿಚಾರಸರಣಿ ನನ್ನನ್ನು ತಬ್ಬಿಬ್ಬಾಗಿ ಮಾಡಿತು. 'ಅಜ್ಜಿಗೆ ತಲೆ ಕೆಟ್ಟಿದೆ' ಎಂದು ಅವರ ಇಂಥವೇ ಮಾತುಗಳನ್ನು ಕೇಳಿಯೂ ಯಾರಾದರೂ ಅಂದರೆ

ಆಶ್ಚರ್ಯವಿಲ್ಲ-ಎನಿಸಿತು. ಅವರನ್ನು ತಿದ್ದಲು ಹೊರಟವನಂತೆ ನಾನೆಂದೆ: "ಅಜ್ಜಿ, ಗಂಡು ಹೆಣ್ಣು ಇಲ್ಲದೆ ಸೃಷ್ಟಿ ಇಲ್ಲ - ಅನ್ನುತ್ತೀರಿ."

"ಅಂ...." ಎಂದರು. ನಿಟ್ಟಿಸಿ ಕೇಳಿ-

"ಒಂದು ಗೋಳಿಮರ ಅಂತಿಟ್ಟುಕೋ. ಹೊಂಗಾರಕನ ಮರ ಅನ್ನು; ವೀಳೆಯದೆಲೆ ಬಳ್ಳಿ ಅಂತಿಟ್ಟುಕೋ, ತುಂಡು, ತುಂಡು ಮಾಡಿ ನೆಟ್ಟರೆ ಗಿಡ ಆಗುತ್ತದೆ. ಹಾಗೆಯೇ ಕೆಲವು ಜಾತಿಯ ಸಣ್ಣ ಪುಟ್ಟ ಪ್ರಾಣಿಗಳಲ್ಲಿ ಗಂಡು ಹೆಣ್ಣು ಎಂಬ ಭೇದವಿಲ್ಲ. ಒಂದು ಒಡೆದು ಎರಡಾಗುತ್ತವೆ."

"ಹೊಂಗಾರಕ?ಗೋಳಿ.... ಸರಿಯೆ. ನೀನೆಂಬ ಪ್ರಾಣಿ ಎಂಥಮೋ! ನಾನು ಕಂಡಿಲ್ಲ."

"ಹಾಗಿದ್ದರೆ, ಗಂಡು ಹೆಣ್ಣಿನ ದೋಹ, ಬಂಧನ ಇದ್ದರೂ ಒಂದೇ, ಇಲ್ಲದೆ ಇದ್ದರೂ ಒಂದೇ. ಸೃಷ್ಟಿಕಾರ್ಯ ನಡೆಯುತ್ತದೆ ಎಂದ ಹಾಗಾಯಿತು."

"ಯಾರಿಂದ ನಡೆಯುತ್ತದೆ?ಯಾವನೋ ಒಬ್ಬನಿಂದ ಅಂತಿಟ್ಟುಕೋ. ಅವಕ್ಕೆ ಅದು ಗೊತ್ತಿಲ್ಲದಿದ್ದೀತು. ಗಿಡಮರಗಳಿಗೆ ಯಾವ ಚಿಂತೆಯೂ ಇರಲಾರದು. ದೇವರ ಹತ್ತಿರ, ಅದನ್ನು ಕೊಡು, ಇದನ್ನು ಕೊಡು ಎನ್ನುವುದೂ ಅವಕ್ಕಿಲ್ಲ. ಅದು ನಮ್ಮ ಚಾಳಿ. ಮಾಯೆ ಇರುವುದು ನಿಜವಾದರೆ, ಎಲ್ಲ ಜೀವಕ್ಕೂ ಅದು ಇರಲೇಬೇಕು. ಗಿಡಕ್ಕಿಲ್ಲ, ನಮಗೆ ಉಂಟು-ಎಂದರೆ ಅದು ಮಾಯೆ ಆಗಲಾರದು."

"ಅಂದರೇನಜ್ಜಿ? ಈಗ ದೇವರು ಉಂಟು ಅಂತಲೋ, ಇಲ್ಲ ಅಂತಲೋ?"

"ನಾನಿಲ್ಲವೇ? ನೀನಿಲ್ಲವೇ?"

"ಇದ್ದೇವೆ."

"ನಮ್ಮ ಪಾಲಿಗೆ ಅವನಿದ್ದಾನೆ."

"ನೀವು ನಂಬುತ್ತೀರಿ, ಹಾಗಾದರೆ ದೇವರನ್ನು"

"ನಂಬುವವರಿದ್ದರೆ ಮಾತ್ರವೇ ಅವನಿರುವುದು; ಗಿಡ, ಮರ, ಕಲ್ಲು, ಮಣ್ಣು ಎಲ್ಲವೂ ಇವೆ. ಅವಕ್ಕೆ ನಂಬುವ ಶಕ್ತಿ ಇಲ್ಲ; ನಂಬಲಾರವು. ಅವಕ್ಕೆ ದೇವರೂ ಇಲ್ಲ; ದಿಂಡರೂ ಇಲ್ಲ."

"ಆದರೆ, ಅವಕ್ಕೂ ಒಬ್ಬ ದೇವರು ಇರಲೇಬೇಕಲ್ಲ."

"ಅದನ್ನು ಅವೇ ನಮಗೆ ತಿಳಿಸಿ ಹೇಳಬೇಕು. ಅವೇನು ಅನ್ನುತ್ತವೋ ನಮಗೆ ತಿಳಿಯದು. ನಾನೂ ನೀನೂ ಹೇಳುವುದು ನಮ್ಮಂಥ ಜನರಿಗೆ, ನಂಬುವವರಿಗೆ, ಆದರೂ

ಒಂದು ಸಂಗತಿ ಉಂಟು. ನಂಬಿದವರೂ, ನಂಬದೆ ಇದ್ದವರೂ ಸಾಯುವುದು ಮಾತ್ರ ತಪ್ಪಿದ್ದಲ್ಲ. ಹುಟ್ಟಿದ ಮೇಲೆ ಸಾವಿದೆ. ಹಾಗೆ ಸಾವು ಇದೆ-ಎಂದು ನಂಬಿದರೆ ಸಾಲದೇ? ದೇವರು ಯಾಕೆ ಸೃಷ್ಟಿ ಮಾಡಿದ-ಎಂದು ನನ್ನಂಥವಳನ್ನು ಕೇಳಿ ಫಲವುಂಟೇ? ಆ ದೇವರನ್ನೇ ನೀನು ಕೇಳಬೇಕು. ನಾವು ಕೇಳಬಹುದು. ಅವನು ಮಾತ್ರ ತನ್ನ ಸೃಷ್ಟಿಯನ್ನು ನಿಲ್ಲಿಸುವ ಹಾಗೆ ಕಾಣೆ."

ಅದರ ಬದಲು, ನಾವಿರುವುದು ಸೃಷ್ಟಿಯ ಚಂದ ನೋಡಲಿಕ್ಕಾಗಿಯೇ; ಅವನೇ ಹುಟ್ಟಿಸಿದ ಸೃಷ್ಟಿಯಿದು-ಎಂದು ಇದ್ದದ್ದನ್ನು ನಂಬಿದರೇನಾಗುತ್ತದೆ? ಇರುವ ನಾಲ್ಕು ದಿನ ಚಂದವಾಗಿ ಇರುವುದಪ್ಪ; ಹೋಗುವ ಕಾಲ ಬಂದರೆ ಹೋಗುವುದು. ಉಳಿದೆಲ್ಲ ಮಾತುಕತೆ ನಮ್ಮ ಬುದ್ಧಿಗೆ ಮೀರಿದ ಅಧಿಕಪ್ರಸಂಗವಾಗಿ ಕಾಣಿಸುತ್ತದೆ ನನಗೆ.

"ನನ್ನ ಅಪ್ಪ ನನ್ನನ್ನು ಕೇಳಿ ಹುಟ್ಟಿಸಿದರೇನು? ನಮ್ಮ ಅಪ್ಪನನ್ನು ದೇವರೂ ಕೇಳಿ ಹುಟ್ಟಿಸಿರಲಾರರು...."

ನನಗೆ ತಲೆ ಬಿಸಿಯಾಗುತ್ತಾ ಬಂದಿತು. ನಾನು ನಂಬಿ ಬಂದಿರುವ ಯಾವ ತರ್ಕ ಸರಣಿಯೂ ನನ್ನ ಅಜ್ಜಿಯಲ್ಲಿ ಕಾಣಿಸಲಿಲ್ಲ. ಅವರ ತರ್ಕಸರಣಿ ನನಗೆ ಸಂಪೂರ್ಣ ತಿಳಿದಂತೆಯೂ ಅನಿಸಲಿಲ್ಲ. ಅವರ ಈ ಎಲ್ಲ ಮಾತುಕತೆ ಮರುಳುತನವಾಗಿಯೂ ಕಾಣಿಸಲಿಲ್ಲ. ನನ್ನಲ್ಲಿಲ್ಲದ, ಇನ್ನೂ ಬೆಳೆಯದ ಯಾವುದೋ ಒಂದು ವಿಚಾರಸೂಕ್ಷ್ಮತೆ ಅವರಲ್ಲಿದ್ದಂತೆ ಕಾಣಿಸುತ್ತಿತ್ತು. ಅವರು ಈ ತನಕ ಕಳೆದಂಥ ಯೌವನವಾಗಲೀ, ವಾರ್ಧಕ್ಯವಾಗಲೀ ಬರಿಯ ಮೂಕತನ ಎನಿಸದಾಯಿತು. ಅವರ ಮೂಕತನಕ್ಕೆ ಈ ಕೆಲವು ವರ್ಷಗಳಿಂದ ಬಾಯಿ ಬಂದಿರುವುದನ್ನು ಕಾಣುತ್ತೇನೆ. ಅವರ ಎಲ್ಲ ಆತ್ಮಗತ ಭಾಷಣಗಳು ನನಗಾಗಿಯೋ, ಇನ್ನೊಬ್ಬರಿಗಾಗಿಯೋ ಹೇಳುವ ಉಪದೇಶಗಳೆಂದು ಕಾಣಿಸುವುದಿಲ್ಲ.

ಅಷ್ಟಕ್ಕೆ ಊಟದ ಕರೆ ಬಂದಿತು. ನಾನು ಹೊರಟೆ. ಅಜ್ಜಿ ಬಹಳ ಕಾಲದಿಂದಲೂ ಒಂದು ಹೊತ್ತು ಮಾತ್ರ ಊಟ ಮಾಡುವವರು. ರಾತ್ರಿ ಕೆಲವೊಮ್ಮೆ ಹಾಲನ್ನೋ, ಹೆಸರು ಗಂಜಿಯನ್ನೋ ತೆಗೆದುಕೊಂಡರೆ ತೆಗೆದುಕೊಂಡರು; ಇಲ್ಲವಾದರೆ ಇಲ್ಲ. ಅವರ ಒಪ್ಪೊತ್ತಿನ ಊಟ ಕೂಡ ಅಲ್ಪ ಆಹಾರ. ಅಷ್ಟೊಂದು ಸ್ವಲ್ಪದರಿಂದ ಅವರು ಇಷ್ಟೊಂದು ವರ್ಷ ಉಳಿದಿರುವುದು ಆಶ್ಚರ್ಯವೆಂದೇ ಕಾಣಿಸುತ್ತದೆ.

ನಾನು ಊಟ ಮುಗಿಸಿ ಮಲಗಿಕೊಂಡರೆ, ನನ್ನ ಯೋಚನೆಗಳು ಅಂಕೆ, ಅಂಕುಶಗಳಿಲ್ಲದೆ ಓಡಾಡತೊಡಗಿದವು. ಅಜ್ಜಿ ಸಂಚಿಪೆಟ್ಟಿಗೆಯನ್ನು ಹಿಡಿದು ಅಷ್ಟೆಲ್ಲ ಹೇಗೆ ಕಂಡರು? ರಾಮಣ್ಣ ಹಿತ್ತಿಲಿನ ಬಾಗಿಲಿಂದ ಬಂದದ್ದು ಅವರಿಗೆ ಹೇಗೆ ತಿಳಿಯಿತು? ಅವರ ಮೂಗಿಗೆ ಮನುಷ್ಯರ ವಾಸನೆ ಬಡಿಯುತ್ತದೆಯೋ? ಸಂಚಿಪೆಟ್ಟಿಗೆಯನ್ನು ಮೂಸಿಯೇ ಅದರ ಒಡೆಯನ ಸ್ವಭಾವ ಗುರುತಿಸುವುದು ಸಾಧ್ಯವೇ? ಹೇಗೆ, ಏನು-ಎಂಬ ವಿಚಾರಗಳೇ

ನನ್ನಲ್ಲಿ ಸುಳಿದಾಡತೊಡಗಿದವು. ಇನ್ನೊಂದು ದಿವಸ ಅವರು ಪ್ರಸನ್ನವಾಗಿರುವ ಹೊತ್ತನ್ನು ಹುಡುಕಿ, ಅದನ್ನೆಲ್ಲ ಕೇಳಿ ತಿಳಿಯಬೇಕು- ಎಂದು ಅನಿಸಿತು.

ರಾತ್ರಿ ಕಳೆದು ಬೆಳಗಾದಾಗ- ನನ್ನವಳು ಒಂದು ಹೊಗೆಸೊಪ್ಪಿನ ಅಂಡೆಯನ್ನು, ಸುಣ್ಣದ ಕರಡಿಗೆಯನ್ನೂ ತಂದು "ಇದು ಯಾರದ್ದು ಇದ್ದೀತು?" ಎಂದು ಕೇಳಿದಳು. ನಾನು "ರಾಮಣ್ಣನ ಸಂಚಿಯಿಂದ ಮಕ್ಕಳು ತೆಗೆದು ಎಸೆದದ್ದಿರಬೇಕು" ಎಂದಂದು, ಆತ ಬಂದು ಹೋದ ಕತೆಯನ್ನು ಹೇಳಿದೆ. ನಾನೇ ಜನ ಮಾಡಿ ಅವನ ಮನೆಗೆ ಅವನ್ನು ಕಳುಹಿಸಿಕೊಟ್ಟೆ.

# ಅಧ್ಯಾಯ 3

ನನಗೇಕೋ ಬೆಳಿಗ್ಗೆ ರಾಮಣ್ಣನ ಕರಡಿಗೆಗಳನ್ನು ಕಳುಹಿಸಿ ಕೊಟ್ಟ ಮೇಲೆ ಮನಸ್ಸಿಗೆ ತುಂಬ ಬೇಸರವಾಗಿತ್ತು. ಅವನ ವಿಚಾರವಾಗಿ ಅಜ್ಜಿಯ ಬಾಯಿಯಿಂದ ಕೇಳಿದ ಕತೆಯೇ ಅದಕ್ಕೆ ಕಾರಣವಾಗಿತ್ತು. ಅವನ ಕತೆಯಿಂದ ಮನಸ್ಸು, ಅವನ ಕೈಹಿಡಿದವಳ ನೆನಪಿಗೂ ಹರಿಯಿತು. ಯಾವುದೋ ರಾಯನ ಕಾಲದಲ್ಲಿ ನನ್ನ ಗೆಳೆಯನೊಬ್ಬ ಅವಳನ್ನು ತೋರಿಸಿದ ನೆನಪು ಬಂತು. ಆ ಘಟನೆಯನ್ನು ಈಗ ಎಷ್ಟು ಕೆದಕಿ ನೋಡಿದರೂ, ಮನಸ್ಸಿನ ಮುಂದೆ ಅವಳ ಬಿಂಬ ಬಂದು ನಿಲ್ಲಲೊಲ್ಲದು. ಅದರ ಬದಲು, ಅಜ್ಜಿಯ ಮಾತನ್ನು ಕೇಳಿ, ನಾನೇ ಸ್ಫುರದ್ರೂಪಿಯಾದ ಒಬ್ಬಳನ್ನು ಕಲ್ಪಿಸಿಕೊಂಡೆ. ಮರುಕ್ಷಣಕ್ಕೆ ಅದೂ ಸಲ್ಲದು ಎನಿಸಿತು. ಅವಳು ಹೊಟ್ಟೆಗಿಲ್ಲದೆ ಹೋದವಳು. ಎಂದೂ ಹಾಗಿರಲಾರಳು ಎಂದುಕೊಂಡೆ. ಆಗ ಕಂಗಾಲಾದ ಪ್ರೇತದಂಥ ಒಂದು ಸ್ತ್ರೀರೂಪ ಕಣ್ಮುಂದೆ ನಿಂತಿತು. ಅಲ್ಲಿಂದ ಮನಸ್ಸು ನನ್ನ ಸೋದರ ಮಾವನ ಕಡೆಗೆ ಹರಿಯಿತು. ಶೀನ, ಶೀನಪ್ಪ ಎಂಬ ಹೆಸರೇನೋ ನೆನಪಾಗುತ್ತದೆ. ಅದು ಅಜ್ಜಿ ಹೇಳಿದ ಕತೆಯ ನೆನಪಿನಿಂದ. ನಾನಂತು ಅಲ್ಲಿಗೆ ಹೋದ ನೆನಪು ಬರಲೊಲ್ಲದು. ಬರುವುದಾದರೂ ಹೇಗೆ? ಅವರ ತಂಗಿಯೋ ಅಕ್ಕನೋ ತೀರಿಕೊಂಡ ಮೇಲೆ, ನನ್ನ ಅಮ್ಮನನ್ನು ತಂದೆ ಮದುವೆಯಾದದ್ದು ಅವರ ಇರಿಗೆ ಮನೆಯಲ್ಲೇ? ಇರಿಗೆ ಊರಿಗೆ ಸ್ವಲ್ಪ ದೂರದಲ್ಲಿ ಕಮ್ಮರಪಾಲದಲ್ಲಿ ಶ್ರೀನಿವಾಸಯ್ಯ ಎಂಬವರಿದ್ದರು; ಅವರು ಭಾರಿ ಕಾರುಭಾರಿಗಳು. ಕಾರುಭಾರ ಹೆಚ್ಚಿಯೇ ಸಾಲಮಾಡಿ, ತಮ್ಮಂದಿರಿಗೆ ಆಸ್ತಿ ಮಾರಿ, ಊರು ಬಿಟ್ಟರು- ಎಂಬುದನ್ನು ಕೇಳಿದ್ದೆ. ಇವರೇ ಅವರಾದರೆ, ಇರಿಗೆಯಿಂದ ಕಮ್ಮರಪಾಲಕ್ಕೆ ಹೋಗಿರಬೇಕು- ಎಂಬ ವಿಚಾರ ಹೊಳೆಯಿತು.

ಒಮ್ಮೆ ಅನಿಸಿತು- ಯಾಕೆ ತಿರುಗಾಡಿಕೊಂಡು- ಇರಿಗೆಯಾದರೆ ಇರಿಗೆ, ಕಮ್ಮರಪಾಲವಾದರೆ ಕಮ್ಮರಪಾಲಕ್ಕೆ ನಾನು ಹೋಗಿ ನೋಡಿಕೊಂಡು ಬರಬಾರದು? ಬಹಳ ದೂರದ ಊರೇನಲ್ಲ. ಕಾಗೆ ಹಾರಿದ ಹಾಗೆ ಅನ್ನುತ್ತಾರಲ್ಲ, ನಾನೂ ಹಾರಿದರೆ ಒಂದೆರಡು ಹರದಾರಿ ದೂರ. ಕಾಡುಗುಡ್ಡ ತುಂಬಿದ್ದರಿಂದ ಅದರ ಇಮ್ಮಡಿ ದೂರವಾದೀತು, ಮುಮ್ಮಡಿಯಾದೀತು. ಆದರೆ ಕಾಗೆಯಂತೆ ನಾನು ಹಾರಲಾರೆ. ಹೋದರೆ ಮಾತ್ರ ಬರುವಾಗ ಸಂಜೆಯಾದೀತು. ಯಾರಾದರೂ ಗುರುತಿನವರ ಮನೆ ಸಿಕ್ಕಿದರೆ ಊಟ ಸಿಕ್ಕೀತು; ಇಲ್ಲವಾದರೆ ಇಲ್ಲ. ಬರಿ ಹೊಟ್ಟೆಯಲ್ಲಿ ಅಲೆದಾಡುವ ವಿಚಾರ ಬಂದಾಗ, ನಮ್ಮ ಜನ್ನನ ಅಜ್ಜನ ಮನೆ ಕಮ್ಮರಪಾಲದಲ್ಲಿ- ಎಂಬ ನೆನಪು ಬಂತು. ಅದು

ಹೊಳೆದೊಡನೆಯೇ ಅವನ ಮನೆಯ ಕಡೆಗೆ ಹೊರಟುಬಿಟ್ಟೆ. ನಮ್ಮವರ ಹತ್ತೆಂಟು ಮನೆಗಳು ಊರಲ್ಲಿ ಇವೆಯಾದರೂ, ಹಾಗೆಲ್ಲ ಹೋಗಿ ಬರುವ ವಾಡಿಕೆಯನ್ನಿರಿಸಿಕೊಂಡಿಲ್ಲ. ಇವನ ಮನೆಗೆ ನಿನ್ನೆ ದಿನ ಹೋಗಿದ್ದೆ; ಆಸಾಮಿ ಕಾಣಿಸಲಿಲ್ಲ. ಇದ್ದರೂ ಇದ್ದಾನು, ನೋಡಿಬಿಡುವ ಎಂದು ಹೊರಟೆ. ಬೆಳಗ್ಗಿನ ಸ್ನಾನ ಮಾಡಿಲ್ಲವಲ್ಲ ಎಂಬ ನೆನಪಾಯಿತು. ಅವಸರದಲ್ಲಿ ಅದನ್ನು ಮಾಡಿ, ಅದಕ್ಕಿಂತ ಅವಸರದಲ್ಲಿ ಜಪ ಮುಗಿಸಿ, ಸೀತೆಗೆ ಕೇಳಿಸುವ ಹಾಗೆ ದೇವರ ಮುಂದೆ ಗಂಟೆ ಬಾರಿಸಿ, ಹೊರಬಿದ್ದೆ. ಅರ್ಧ ಮುಕ್ಕಾಲು ಮೈಲು ದೂರ ಬಯಲಿನಲ್ಲಿ ನಡೆದುಹೋಗುವುದಕ್ಕೆ ಎಷ್ಟು ಹೊತ್ತು ಬೇಕು? ಸುದೈವಕ್ಕೆ ಜನ್ನನ ಸವಾರಿ ಮನೆಯ ಚಾವಡಿಯಲ್ಲಿ ಕಂಬಕ್ಕೊರಗಿಕೊಂಡು ಪುಸ್ತಕ ಓದುತ್ತಿರುವುದು ಕಾಣಿಸಿತು. 'ಇದೆ ಸವಾರಿ' ಎಂದು ಅವನ ಮುಂದಕ್ಕೆ ಹೋಗಿ ನಿಂತೆ. ಅವನು-

"ನಿನ್ನೆ ನೀನು ಬಂದಿದ್ದೆಯಂತಲ್ಲ! ನಾನು ಮಹಾರಾಯ, ಊರಿಗೆ ಬಂದು ಇಷ್ಟು ದಿನವಾದರೂ, ಅಜ್ಜಿಯ ಮನೆಗೆ ಹೋಗದಿದ್ದರೆ ತಕರಾರು ಬರುತ್ತೆ- ಅಂತ ಹೋಗಿದ್ದೆ."

"ಅಜ್ಜಿಯ ಮನೆಗೆ?"

"ಕಮ್ಮರಪಾಲಕ್ಕೆ"

"ಅಲ್ಲಿ ನಿಮ್ಮ ಅಜ್ಜಿಯ ಪೈಕಿಯವರು ಯಾರಿದ್ದಾರೆ? ಅಜ್ಜ ಇದ್ದಾರೋ?"

"ಅಜ್ಜನೂ ಇದ್ದಾರೆ; ಅಲ್ಲಿ ಅಲ್ಲ."

"ಅವರು ಎಲ್ಲಿ"

"ಅವರಿಗೆ ದಿಕ್ಕೇ? ದಿವಾನಿಯೇ? ಅವರಿಗೇನು!"

"ಅಂದರೆ"

"ಅವರದ್ದೇ ಒಂದು ಮಹಾಭಾರತ. ಸ್ವಾರಸ್ಯವಿಲ್ಲದ ಕತೆ-ಅದೆಲ್ಲವೂ, ಅವರಿಗೆ ಒಂದು ರಾಶಿ ಆಸ್ತಿಪಾಸ್ತಿ ಇತ್ತಂತೆ. ಯಾವುದಕ್ಕೂ ದಾಡಿ ಇರಲಿಲ್ಲವಂತೆ. ಆದರೆ ಗ್ರಹಚಾರ ಬಿಡಬೇಕಲ್ಲ. ಸಣ್ಣದರಲ್ಲಿಯೇ ಹೆಣ್ಣಿನ ಗೀಳು ಶುರುವಾಯಿತಂತೆ. ಮೂರು ಮೂರು ದಿನಕ್ಕೆ ಒಬ್ಬೊಬ್ಬರು ರಾಣಿಯರನ್ನು ಕಟ್ಟಿಕೊಂಡರಂತೆ. ಇಲ್ಲಿ ಬೇರೆ; ಬೈಂದೂರಿನಲ್ಲಿ ಬೇರೆ; ಸಾಗರದಲ್ಲಿ ಬೇರೆ. ಹೋದಹೋದ ಊರಿನಲ್ಲಿಯೂ ಒಂದೊಂದು ರಂಭೆ-ಅನ್ನುತ್ತಾರೆ. ಬಹಳ ರಸಿಕರಂತೆ ಮಾತ್ರ. ಆಮೇಲೆ ಎಲ್ಲವನ್ನೂ ಮುಗಿಸಿದರು. ಆಸ್ತಿ ತಮ್ಮಂದಿರಿಗೆ ಮಾರಿದರು. ಅವರೊಬ್ಬ ತಮ್ಮನ ಮನೆಯಲ್ಲಿ ನನ್ನ ಅಜ್ಜಿ ಇರುತ್ತಿದ್ದಳು. ಅವರಿಗೆ ಅಮ್ಮ, ಮತ್ತಿಬ್ಬರು ಗಂಡುಮಕ್ಕಳು. ಆ ಮಕ್ಕಳು ಉಳಿದಿಲ್ಲ ಇಂದು. ಉಳಿದದ್ದು ಅಮ್ಮ ಒಬ್ಬಳೇ. ಇವರು, ಊರಲ್ಲಿದ್ದುದು ಎಲ್ಲ ಒತ್ತರೆಯಾದ ಮೇಲೆ, ಹೆಂಡತಿಯನ್ನು ಕಟ್ಟಿಕೊಂಡು ಎಲ್ಲಿಗೆ ಹೋಗುವವರು? ಒಬ್ಬರೇ ಸೊರಬಕ್ಕೆ ಹೋದರಂತೆ. ಅಲ್ಲಿಯೂ,

ನಾಲ್ಕು ದಿವಸ ವ್ಯಾಪಾರ ಗೀಪಾರ- ಎಂದು ಕಾರುಭಾರ ನಡೆಸಿದರಂತೆ. ಕೊಟ್ಟವರಿಗೆಲ್ಲ ಟೊಪ್ಪಿ ಹಾಕಿರಬೇಕು. ಅಲ್ಲಿಂದ ಹೊರಟರು. ಈಗ ಚಿತ್ರದುರ್ಗದ ಕಡೆ ಎಲ್ಲೋ ಹೊಟೇಲು ಮಾಡಿಕೊಂಡಿದ್ದಾರೆ ಅಂತ ಯಾರೋ ಹೇಳುತ್ತಾರೆ."

"ನಿನ್ನ ಅಜ್ಜಿಯನ್ನು ಕಾಣಲಿಕ್ಕೆ ಬರುವುದಿಲ್ಲವೇ."

"ಅವರ ಕೈಹಿಡಿದ ನೆನಪು ಸಹ ಉಂಟೋ ಇಲ್ಲವೋ. ಅಂದರೆ ನೋಡು, ಅಷ್ಟೆಲ್ಲ ಕಳೆದುಕೊಂಡು ಊರಿಗೆ ಸಸಾರವಾಗಿ ಹೋದವರು ಅವರು. ಅವರ ತಮ್ಮಂದಿರು, ಎಲ್ಲ ಸಾಲದ ಹೊರೆಯನ್ನು ಹೊತ್ತು ಚೇತರಿಸಿದ್ದೇ ದೊಡ್ಡದು. ಅಜ್ಜಿ ಇದ್ದಾರೆ ನಿಜ. ಕರೆಯಲು ಬರುತ್ತಿದ್ದರೆ ಹೋಗುತ್ತಿದ್ದರೋ ಏನೋ? ಅವರಿಗೆ ಮಾತ್ರ ಬೇಕಾಗಿರಲಾರದು. ಇವರು ಒಂದಷ್ಟು ದಿನ- ಅವರು ಬಂದಾರು, ಬಂದಾರು- ಎಂದು ಆಸೆ ಕಟ್ಟಿಟ್ಟುಕೊಂಡಿದ್ದರು. ಭಾವಂದಿರಿಗೆ- ಅವರನ್ನು ಹುಡುಕಿ ತೋರಿಸಿ- ಎಂದೂ ಹೇಳಿದ್ದರು. ಅವರೇ ಬುದ್ಧಿ ಹೇಳಿದರು: 'ಅತ್ತಿಗೆ, ನಿನಗೆ ಮರುಳು. ನಿನಗೆ ಪ್ರಾಯ ತುಂಬಿದ್ದಾಗ ಅವನು ಮರ್ಯಾದೆ ಕೊಟ್ಟಿದ್ದರಲ್ಲವೇ ಇನ್ನು ಮೂಸಿ ನೋಡುವುದು? ಅವನು ಎಂಥ ಸ್ಥಿತಿಯಲ್ಲಿದ್ದಾನೋ, ಅವನ ಅನಾಚಾರ ಕಂಡು ಕಣ್ಣೀರು ಕರೆಯುವುದಕ್ಕೆ ಹೋಗುವುದೇ?' ಎಂದರು. ಅವಳನ್ನೂ ಅವಳ ಮಕ್ಕಳನ್ನೂ ಸಾಕಿದರು. ಆದರೆ ಗಂಡು ಮಕ್ಕಳ ಅದೃಷ್ಟ ಅವರಿಗಿರಲಿಲ್ಲ; ಆದರೂ, ನನ್ನ ತಾಯಿಯ ಲಗ್ನಕ್ಕೂ ಆತ ಎಲ್ಲಿದ್ದಾನೆ- ಅಂತ ಹುಡುಕಿ, ನೋಡಿ, ಹೇಳಿದರು. ಬರುತ್ತೇನೆಂದ ಆಸಾಮಿ- ಬರಲೇ ಇಲ್ಲ. ಹಾಗಾಗಿ ಅಜ್ಜಿಗೆ ಮಗಳು, ಮೊಮ್ಮಕ್ಕಳು ಅಂದರೆ ಜೀವ. ಇಲ್ಲಿಗೆ ಬನ್ನಿ ಅಂದರೆ ಬರುವುದಿಲ್ಲ. ನಾನು ಹೋದರೆ ಮಾತ್ರ ಬಹಳ ಸಂತೋಷವಾಗುತ್ತದೆ. ಎಷ್ಟೊಂದು ಸಮ್ಮಾನ ಮಾಡುತ್ತಾರೆ ಎಂದು ಹೇಳುವುದಕ್ಕಿಲ್ಲ. ಅವರು ಮಾತ್ರ ಇನ್ನೂ ಗಂಡನ ಆಸೆಯನ್ನು ಬಿಟ್ಟವರೇ ಅಲ್ಲ- ಎಂದು ಕಾಣುತ್ತದೆ. ಕಳೆದ ಸಾರಿ ಹೋದಾಗ 'ಚಿತ್ರದುರ್ಗದಲ್ಲೋ, ಜಗಳೂರಲ್ಲೋ ಇದ್ದಾರಂತಲ್ಲ; ನೀನು ಹೋಗಿ ಮಾತನಾಡಿಸಿಯಾದರೂ ಬಾ' ಎಂದಿದ್ದರು. ನಿನ್ನೆ ಹೋದಾಗಲೂ ಅವರೆನ್ನುವುದರೊಳಗೆ ನಾನೇ 'ನೋಡುವ; ಪುರುಸೊತ್ತು ಮಾಡಿಕೊಂಡು ಹೋಗುತ್ತೇನೆ' ಎಂದಿದ್ದೆ.

ನನಗೆ ಆ ಕತೆಯನ್ನು ತೊಡಗುವ ಕೆಲಸವೇನೋ ಸುಲಭವಾಯಿತು. ತೊಡಗಿದ ಮೇಲೆ ಕೇಳುವುದು ಕಷ್ಟವಾಯಿತು. ಅವನ ಅಜ್ಜಿ ಎಷ್ಟು ಸಂಕಟ ಪಟ್ಟಿರಬಹುದು- ಎಂಬ ನೆನವರಿಕೆಗಳು ಬಂದುವು. ಅವರು ನನ್ನ ಸೋದರ ಮಾವನ ಹೆಂಡತಿ ಎಂದು ನೆನೆಯುವುದು ಕಷ್ಟದ ಕೆಲಸವಾಯಿತು. ಆದರೂ, ಜನ್ನ ಮತ್ತೇನೇನೋ ಹೇಳಿದ. ಆತನೂ ಅವರನ್ನು ಕಂಡಿಲ್ಲ; ನಾನೂ ಕಂಡಿಲ್ಲ. ತಮ್ಮ ಮಗಳ ಲಗ್ನಕ್ಕೂ ಸಹ ಬರಲಿಲ್ಲ- ಅಂದರೆ? ಅವರ ಒಬ್ಬ ತಮ್ಮ ನರಸಿಂಹಯ್ಯ ಹೋಗಿ ಕರೆದರೆ 'ನಾನು ಬರುವುದು ತಿರುಗಿ

ಮೊದಲಿನಂತೆ ಮಾತುಭಾರನಾದ ಮೇಲೆಯೇ' ಎಂದರಂತೆ. ಬಹಳ ಒತ್ತಾಯಿಸಿದ್ದಕ್ಕೆ 'ಬರುತ್ತೇನೆ' ಅಂದರೂ, ಬರಲಿಲ್ಲ. ನಡೆಯಬೇಕಾದ ಮದುವೆ ನಡೆಯಿತು' ಎಂದ.

ಅವರ ಮಾತುಗಾರಿಕೆ, ಜರ್ಬುಗಳು ಅಂಥದಿರಬೇಕು. ಅಂಥ ಮಾತುಭಾರರು ದಿವಾಳಿ ತೆಗೆದು, ಊರು ಬಿಟ್ಟು ಹೋದ ಕತೆಯನ್ನು ಕೇಳಿದಾಗ ನಾಗಿಯ ಹೊಟ್ಟೆ ಎಷ್ಟು ತಣ್ಣಗಾಯಿತೋ! ಈಗ ಅವಳ ಮಕ್ಕಳು ದೊಡ್ಡವರಾಗಿರಬೇಕಲ್ಲ. ಬಂದ ತೊಂದರೆ ಇಷ್ಟೆ- ಅವರನ್ನು ಒಯ್ದು ತೋರಿಸುವುದಕ್ಕೆ. ನಮ್ಮ ಮಾವಯ್ಯ ಮಾತ್ರ ಈ ಊರು ವಠಾರದಲ್ಲೇ ಇಲ್ಲ. ಹೀಗೆ ಮನಸ್ಸಿನಲ್ಲಿ ಬೇಡದ ವಿಚಾರಗಳು ಬಂದಾಗ ಅದನ್ನು ತಪ್ಪಿಸುವುದಕ್ಕಾಗಿಯೇ "ಏನೋ ಓದುತ್ತಾ ಇದ್ದೀಯಲ್ಲ ಏನು ಪುಸ್ತಕ ಅದು?" ಎಂದು ಕೇಳಿದೆ.

"ಇದು" ಎಂದು ನನ್ನ ಕಣ್ಣಿಗೆ ಅದನ್ನೊಡ್ಡಿದ.

"ಏನಯ್ಯ ಅದು?" ಎಂದು ತೆಗೆದು ನೋಡಿದೆ. ಒಂದು ಕಾದಂಬರಿ. ಸೋಮರ್‌ಸೆಟ್ ಬರೆದದ್ದು. ನನಗೇಕೆ ಕಾದಂಬರಿ- ಎಂದೆನಿಸಿತು. ನಾನು ಕಂಡ ಕತೆಗಳೂ, ಕೇಳಿದ ಕತೆಗಳೂ ಸಾಕಷ್ಟು ಅದ್ಭುತವಾಗಿರುತ್ತವೆ. ಇನ್ನೂ ಒಂದು ಹೊಸ ಕತೆಯನ್ನು ಮೈಮೇಲೆ ಎಳೆದು ಹಾಕಿಕೊಳ್ಳಬೇಕೆನಿಸಲಿಲ್ಲ.

ಅಷ್ಟಕ್ಕೆ ಆತನೆಂದ, "ನೀನಂತೂ ಬಂದಿದ್ದೀಯ. ನನಗೆ ಊರಿಗೆ ಬಂದು ಬೇಸರ ಹಿಡಿದಿದೆ. ಮೈಸೂರಿನಲ್ಲೇ ಇದ್ದವರಿಗೆ ಇಲ್ಲಿಗೆ ಬಂದರೆ- ಯಾಕೆ ಬಂದೆ- ಎಂದೆನಿಸುತ್ತದೆ. ಊರಿನ ಗುಡ್ಡ, ಬಯಲು ಒಂದಷ್ಟು ಸಂತೋಷ ಕೊಡುತ್ತದೆ; ನಿಜ. ಆದರೆ, ಮನುಷ್ಯರಿಗೆ ಮನುಷ್ಯರು ಬೇಕು; ಬಾಯಿ ತುಂಬ ಮಾತನಾಡುವವರು ಬೇಕು. ನೀನೊಬ್ಬ ಇದ್ದೀಯಾ, ಮಾತನಾಡಿಸುತ್ತೀ; ನಿನ್ನ ಮಾತೂ ಹಿಡಿಸುತ್ತದೆ. ಉಳಿದವರು ಮಾತನಾಡಿಸುವುದಿಲ್ಲ ಎಂದಲ್ಲ, ಮಾತನಾಡಿಸುತ್ತಾರೆ. ಬೇಡದಿದ್ದ ಏನನ್ನಾದರೂ ಕೇಳುತ್ತಾರೆ. ಒಂದು ಸಾರಿ ಕಣ್ಣು ತಪ್ಪಿಸಿದರೆ ಸಾಕು ಎನಿಸುತ್ತದೆ. ಈಗೀಗ ನೀನೂ ಸಹ ಅಚ್ಚ ಹಳ್ಳಿಯವನಾಗಿದ್ದೀಯೆ; ಓದಿದ್ದೆಲ್ಲ ಮರೆತುಬಿಟ್ಟು ಗೊಡ್ಡರಲ್ಲಿ ಗೊಡ್ಡನಾಗಿದ್ದೀಯ" ಎಂದ.

"ನನಗೂ ಹಾಗೆಯೇ ಅನಿಸುತ್ತದೆ."

"ಯಾತಕ್ಕೆ ಹಾಗಿರಬೇಕು, ಹೇಳು. ಓದಿದ್ದೀ, ತಲೆಯಲ್ಲಿ ಮಿದುಳೂ ಉಂಟು. ನನ್ನ ಹಾಗೆ ಕಾದಂಬರಿ, ಕವನ ಇಂಥದು ಯಾವುದೂ ಹಿಡಿಸುವುದಿಲ್ಲವಾದರೆ- ಒಂದೆರಡು ಪೇಪರು ತರಿಸಿ ಓದಬಾರದೇ? ಮೂಡೂರಿನ ಹೊರಗೆ ಒಂದು ಜಗತ್ತು ಇದೆ- ಎಂದಾದರೂ ತಿಳಿಯದೆ ಹೋದರೆ ಹೇಗೆ?"

"ಆ ಜಗತ್ತಿಗೆ ನಾವಿದ್ದೇವೆ- ಎಂದು ತಿಳಿದಿದೆಯೇನು? ಅದಕ್ಕೆ ನಾವು ಬೇಡ. ನಮಗೆ ಯಾತಕ್ಕೆ ಬೇಕು? ಅಂಥದ್ದು ತಿಳಿಯುವ ಮನಸ್ಸಾದರೆ ನೀನೇ ಇದ್ದೀಯಲ್ಲ ಮಹಾಪಂಡಿತ, ಹೇಳಿಬಿಡು- ನಿನ್ನ ಹೊರಜಗತ್ತು ಮೊದಲಿಗಿಂತ ಉದ್ದ ಆಗಿದೆಯೋ, ಅಥವಾ ಉರುಟು ಆಗಿದೆಯೋ- ಎಂದು ಹೇಳು" ಎಂದು ಪರಿಹಾಸ್ಯ ಮಾಡಿದೆ.

ಆತ ನಗುತ್ತ "ಥೂ, ನೀನು ಓದಿದ್ದು ಮಾಡಿದ್ದು ಎಲ್ಲವೂ ವ್ಯರ್ಥ. ಹಳ್ಳಿಯವರ ಹಾಗೆ ಏನಾದರೊಂದಿಷ್ಟು ಬಾಯಿತುಂಬ ಮಾತನಾಡಿದರಾಯಿತು. ಹೋಗಲಿ ಬಿಡು, ಇವತ್ತು ನಿನಗೆ ಮನೆಯಲ್ಲಿ ಅಂಥ ಕೆಲಸ ಇಲ್ಲವಲ್ಲ."

"ಅಂಥ ಕೆಲಸವಿದ್ದರೆ ನಿನ್ನಂಥ ಕೊರಡನ್ನು ಮಾತನಾಡಿಸಲಿಕ್ಕೆ ಬರುತ್ತಿದ್ದೇನೇ?"

"ಹಾಗಿದ್ದರೆ ಒಂದು ಕೆಲಸ ಮಾಡುವ. ಊಟ ಮುಗಿಸಿ, ಒಂದು ಸಣ್ಣ ನಿದ್ದೆಮಾಡಿ, ಮೂಡಲಾಗಿನ ಕಾಡಿಗೋ ಗುಡ್ಡಕ್ಕೋ ಹೋಗುವ. ಇಲ್ಲಿಂದ ಘಟ್ಟದ ಬರೆಗೆ ಎಷ್ಟು ದೂರವಾದೀತು?"

"ಎರಡು ಮೈಲಿಗೆ ಹಿಂಡುಗಾನ ಬರುತ್ತದೆ. ಅಲ್ಲಿಂದ ಮುಂದೆ ಘಟ್ಟದ ಬರೆಗೆ ಮತ್ತಷ್ಟು ದೂರವಿದೆ. ಆದರೆ ಘಟ್ಟದ ಬರೆಯ ತನಕವೂ ಜನ ಓಡಾಡುವುದುಂಟು. ಜನ ಸೊಪ್ಪಿಗೆ ಹೋಗುತ್ತಾರೆ. ಅದಕ್ಕಿಂತ ಆಚೆ ಬೇಟೆ ಗೀಟೆಗೆ ಅಂತ ಕುಡುಬಿಯರು ಹೋಗುವುದುಂಟು. ಈಗ ಅಂತಹ ಬೇಟೆ ಏನೂ ಉಳಿದಿಲ್ಲ. ಹಿಂದೆ ಬರ್ಕ, ಕೆಮ್ಮ ಕಡವೆ ಯಾವಾಗಲೂ ಕಾಣಲಿಕ್ಕೆ ಸಿಗುತ್ತಿತ್ತು, ಅಂತಾರೆ."

"ಹುಲಿಗಿಲಿ ಇಲ್ಲವೇನಯ್ಯ ನಮ್ಮ ಕಾಡಿನಲ್ಲಿ?"

"ಗಿಲಿ ಇರಬಹುದು. ಹುಲಿಯ ಸುದ್ದಿ ಕೇಳಿಸುವುದಿಲ್ಲ. ನನ್ನ ಸಣ್ಣದರಲ್ಲಿ ನಮ್ಮ ಊರಲ್ಲಿ ಮೇಯಲು ಬಿಟ್ಟ ದನಕರುಗಳನ್ನು ಚಿಟ್ಟೆ ಹುಲಿಯೋ, ಪಟ್ಟೆ ಹುಲಿಯೋ ಎತ್ತಿಕೊಂಡು ಹೋದುದುಂಟು. ಈ ಸುಮಾರು ವರ್ಷಗಳಿಂದ ಪಟ್ಟೆ ಹುಲಿಯೂ ಇಲ್ಲ, ಚಿಟ್ಟೆ ಹುಲಿಯೂ ಇಲ್ಲ."

"ನನ್ನ ಅಮ್ಮ- ಒಂದೊಂದು ಹುಲಿ ಉಂಟು-ಅನ್ನುತ್ತಾಳೆ."

"ಹಾಗೆ ಸ್ವಲ್ಪ ಸಮಯದ ಮೊದಲು ನನ್ನ ಅಜ್ಜಿ, ಒಂದು ಸಾಯಂಕಾಲ ಹುಲಿ ಬಂತು ಅಂತ ವಾಸನೆಯಿಂದಲೇ ಹೇಳಿದ್ದರು. ಅವರ ಮೂಗು, ಕಣ್ಣು ಎರಡೂ ಚುರುಕು. ನನ್ನ ಎರಡೂ ಮಕ್ಕಳು ಅವರು ಹುಲಿ ಬಂತು ಅಂದುದಕ್ಕೆ ಅಜ್ಜಿಗೆ ಮರುಳು ಎಂದು ಚೇಷ್ಟೆ ಮಾಡಿದುವು. ವಾಸನೆ ಬರದೆಯೇ ಅವರು ಹೇಳಿರಲಾರರು."

"ಮೂಕಜ್ಜಿ ಹೇಳಿದ್ದೇ? ಅವರಿಗೆ ಏನೂ ಕಾಣಿಸೀತು. ನಮ್ಮ ಊರಿನ ಕಾಡಿನಲ್ಲಿ ಸಿಂಹ ಕಾಣಿಸಿದರೂ ಅವೊಂದು ದೊಡ್ಡದಲ್ಲ. ಸಣ್ಣದರಿಂದಲೂ ಅವರು ಹಾಗೆಯೇ ಅಂತಲ್ಲ... ಆದರೂ, ಅವರಿಂದ ಯಾರಿಗೇನೂ ಉಪದ್ರವಿಲ್ಲವಲ್ಲ."

"ಉಪದ್ರವೇ?"

"ಅಲ್ಲ, ಹುಚ್ಚು ಹಿಡಿದವರನ್ನು ಕಟ್ಟಿಕೊಂಡು ದಿನ ತೆಗೆಯುವುದು ಕಷ್ಟವಲ್ಲವೇ? ಹೇಳಿದ್ದು ಕೇಳದೆ ಇದ್ದರೆ, ತನ್ನದೇ ತಾನು ಹೇಳುತ್ತಲಿದ್ದರೆ ಕಷ್ಟವಾಗದಿದ್ದೀತೆ?"

"ನಮಗೆ ಯಾವ ಕಷ್ಟವೂ ಅವರಿಂದ ಬಂದಿಲ್ಲ. ನೀನು ಅನ್ನುವ ಹಾಗೆ, ನಮ್ಮ ಊರವರು ಅನ್ನುವ ಹಾಗೆ, ಅವರಿಗೆ ಅರೆಮರುಳೂ ಅಲ್ಲ; ಇಡಿ ಮರುಳೂ ಅಲ್ಲ. ಆ ಲೆಕ್ಕದಲ್ಲಿ ನಮ್ಮಷ್ಟೇ ಮರುಳು ಅವರಿಗೆ."

ಜನಾರ್ದನನಿಗೆ ನಗು ಬಂದಿತು. 'ಯಾತಕ್ಕೆ' ಎಂದು ಕೇಳಿದೆ. ಅವನದು ಕೊಂಕಿನ ನಗು ಎಂಬುದು ತಿಳಿಯುವ ಹಾಗೆಯೇ ಇತ್ತು.

"ಮತ್ತೆ ಯಾತಕ್ಕೂ ಅಲ್ಲ. ಈ ಊರಲ್ಲಿ, ಅದರಲ್ಲಿಯೂ ನಮ್ಮ ಮೂಡೂರಿನಲ್ಲಿ ಅರಳು ಮರುಳರಿಗೂ, ಬುದ್ಧಿ ಸಾಚಾ ಇರುವವರಿಗೂ ಯಾವ ವ್ಯತ್ಯಾಸವೂ ಇಲ್ಲ. ಯಾವುದೇ ಮರ, ಕಲ್ಲು, ಕುಂಟೆ, ಏನನ್ನು ಕಂಡರೂ ಒಂದೊಂದು ಕತೆ ಹೇಳುತ್ತಾರೆ. ಇದು ಭೀಮಸೇನ ಅಡಿಗೆ ಮಾಡಿದ ಒಲೆ; ಇದು ಪಾಂಡವರು ಕಟ್ಟಿದ ದೇವಸ್ಥಾನ; ಆ ಗುಮ್ಮಿ ರಾವಣನು ಮಿಂದ ತೀರ್ಥ- ಹೀಗೆ ಕತೆಯ ಮೇಲೆ ಕತೆ! ನಮ್ಮ ಅಮ್ಮನ ಬಾಯಿಯಲ್ಲಿ ಅಂಥ ನೂರಾರು ಕಥೆಗಳಿವೆ. ಅವು ಒಂದಕ್ಕಾದರೂ ತಲೆಬುಡವಿದೆಯೇ? ಅದನ್ನು ಎಣಿಸಿದರೇ ನಗು ಬರುತ್ತದೆ... ಇನ್ನೊಂದು ತಾವಿದೆಯಂತಲ್ಲ ನಮ್ಮೂರಿನಲ್ಲಿ; ಅದನ್ನು ಹೋಗಿ ನೋಡಬೇಕು. ಘಟ್ಟದ ಬರೆಗೆ ಸಮೀಪದಲ್ಲಿ ಅಲ್ಲೆಲ್ಲೋ ವಿಶ್ವಾಮಿತ್ರ ಋಷಿ ತಪಸ್ಸುಮಾಡಿದ ಸ್ಥಳವಿದೆಯಂತೆ. ಅವನು ಯಜ್ಞ ಮಾಡಿದ ಬೂದಿಯ ರಾಶಿಯಿದೆಯಂತೆ. ತಪಸ್ಸಿಗೆ ಕುಳಿತಂಥ ದೊಡ್ಡ ಗವಿಯಿದೆಯಂತೆ."

ಅಂಥ ಕತೆಗಳನ್ನು ನಾನೂ ನಂಬುತ್ತಿರಲಿಲ್ಲ. ಆದರೆ "ವಿಶ್ವಾಮಿತ್ರನಿಲ್ಲದೆ ಹೋದರೂ ಗವಿ ಇರಬಹುದು. ಗವಿ ಇದ್ದ ಮೇಲೆ ಬೂದಿಯ ರಾಶಿಯೂ ಇರಬಹುದು. ಅವು ಎರಡೂ ಇಲ್ಲದೆ ಕತೆ ಹುಟ್ಟಿಕೊಳ್ಳಲಾರದು" ಎಂದೆ.

"ಅದಕ್ಕೇನೆ ಹೇಳಿದ್ದು-ಘಟ್ಟದ ಬರೆಯ ತನಕವೂ ನೋಡಿಕೊಂಡು ಬರಬಹುದೆಂದು. ಬೂದಿಯ ರಾಶಿಯೋ, ಗುಹೆಯೋ ಇದ್ದರೆ ಅಷ್ಟಾದರೂ ನೋಡಿದ ಹಾಗಾಯಿತು. ಋಷಿಗಳಿಲ್ಲದೆ ಹೋದರೆ ಹುಲಿಗಿಲಿಯಾದರೂ ಇದ್ದೀತು. ಮನೆಯಲ್ಲಿ ಕುಳಿತು, ಕುಳಿತು ಬೇಸರವಾಗಿದೆ. ಓದಿ, ಓದಿ ಬೇಸರ ಬರುತ್ತದೆ."

"ಅದಕ್ಕೇನಾಗಬೇಕು! ಹೋಗಿ ಬರುವ. ಈ ಊರಲ್ಲೇ ಹುಟ್ಟಿ, ಇಲ್ಲೇ ಇದ್ದು, ಊರಿನ ವಿಚಾರ ಏನೇನೂ ಗೊತ್ತಿಲ್ಲದೆ ಹೋದರೆ ಹೇಗೆ? ಗುಹೆ ಖಂಡಿತಕ್ಕೂ ಕಾಣಸಿಗಬಹುದು. ಬೆಟ್ಟದ ಮೈಯಲ್ಲಿ ಮಳೆ ಬಿದ್ದು, ಬಿದ್ದು ನೆಲ ಮಾಟೆಯ ಹಾಗೆ ಕಾಣಿಸಿದರೆ ಅದೊಂದು ಆಶ್ಚರ್ಯದ ಸಂಗತಿಯಲ್ಲ. ಹಿಂದಿನ ಕಾಲದಲ್ಲಿ, ಇಲ್ಲಿ ಜನರೂ ಇದ್ದಿರಲಾರರು ಎನ್ನುವಂತಿಲ್ಲ. ನಮ್ಮ ಊರೇ ಒಂದು ಪಟ್ಟಣವಾಗಿತ್ತಂತಲ್ಲ. ತೀರ ಮೊದಲಿನ ಜನ ಕಾರ್ಲ, ಅಜಂತಗಳಲ್ಲಿ ಕೊರೆದ ಹಾಗೆ, ಅಷ್ಟು ದೊಡ್ಡದಲ್ಲವಾದರೂ ಸಣ್ಣ ತೆರನ ಗುಹೆಗಳನ್ನು ಕೊರೆದು ಬಿಡಾರ ಮಾಡಿಕೊಂಡಿದ್ದರೆ ಏನು ತಪ್ಪು? ಅವರು ಅಡಿಗೆ ಮಾಡಿ ಚೆಲ್ಲಿದ ಬೂದಿ ಇದ್ದರೂ ಇದ್ದೀತು. ಹೋದದ್ದಕ್ಕೆ ಅಷ್ಟಾದರೂ ಕಾಣಲು ಸಿಕ್ಕಿದರೆ ನಮ್ಮದೊಂದು ದೊಡ್ಡ ಸಂಶೋಧನೆ ಆಯಿತು."

"ಹಾಗಿದ್ದರೆ, ಊಟ ಮಾಡಿದವರೇ ಹೊರಡುವ. ಬರುವಾಗ ಕತ್ತಲೆ ಆಗಬಾರದಷ್ಟೆ. ಕಾಡಿನಲ್ಲಿ ಬರುವಾಗ ಕತ್ತಲೆಯಾಗಿ ದಾರಿ ತಪ್ಪಬಾರದು. ಯಾರನ್ನಾದರೂ ಕರೆದುಕೊಂಡು ಹೋಗಬೇಕು. ಮೂಡೂರಿನ ಸೆರಗು ದಾಟಿದರೆ ಕುಡುಬಿಯರ ಮನೆಗಳಿವೆ. ಅವರಿಗೆ ಕಾಡಿನ ಸಂದುಗೊಂದು ತಿಳಿದಿರುತ್ತದೆ."

"ಹಾಗೆಯೇ ಆಗಲಿ" ಎಂಬ ಅಪ್ಪಣೆ ದೊರೆಯಿತು. ಅನಂತರ, ಊಟ ಬೀಳುವ ತನಕವೂ ಹರಟೆ ಹೊಡೆದು, ಉಂಡೊಡನೆಯೇ ಕಾಲು ಕಿತ್ತೆವು. ಜನ್ನನ ತಾಯಿ ಅಷ್ಟು ಅವಸರದಲ್ಲಿ ಮನೆ ಬಿಟ್ಟದ್ದನ್ನು ಕಂಡು, ಕಣ್ಣು ಅರಳಿಸಿದಳು. ಆತನಿಗೆ ಅದರ ಇಂಗಿತ ತಿಳಿಯಿತು. "ಏನಿಲ್ಲ, ಬೇಸರ ಕಳೆಯುವುದಕ್ಕೆ ಎಲ್ಲಾದರೂ ತಿರುಗಾಡಿಕೊಂಡು ಬರುತ್ತೇವೆ" ಎಂದ. ಅಲ್ಲಿಂದ ನಾವಿಬ್ಬರೂ ಕೂಡಿ ನಮ್ಮ ಮನೆಯ ಕಡೆಗೆ ಬಂದೆವು. ಆಗ ಆತ "ಮನೆಗೆ ಹೋಗುವುದು ಬೇಡ. ನಿಮ್ಮ ಅಜ್ಜಿ ಮಾತನಾಡಿಸಲು ಕುಳಿತರೆ ಮತ್ತಷ್ಟು ಉದ್ದವಾದೀತು" ಎಂದ. ಅಲ್ಲಿಂದಲೇ ಮನೆಯ ಮೂಡಣಕ್ಕಿರುವ ಹಾದಿಯನ್ನು ಹೊಕ್ಕೆವು. ಅದನ್ನು ದಾಟಿದರೆ ಮುಂದೆ ಸರಿಯಾದ ಕಾಡಿನ ಸೆರಗು ಬರುತ್ತದೆ. ಅದರ ನಡುವಣ ಕಿರುದಾರಿಯಲ್ಲಿ ಎರಡು ಮೈಲು ದೂರ ನಡೆದು ಹೋದ ಮೇಲೆ ಒಂದು ಚಿಕ್ಕ ಬೆಣವಿದೆ. ಅಲ್ಲಿ ನಾಲ್ಕು ಕುಡುಬಿಯರ ಮನೆಗಳಿವೆ. ಬೆಣದ ಅಂಚಿನಲ್ಲಿ ನಿಂತು ನಾನು 'ಕೋಕ್ ಕೋಕ್' ಎಂದು ಎರಡು ಬಾರಿ ಕೂಗು ಹಾಕಿದೆ. ನನ್ನ ಧ್ವನಿ ಕೇಳಿ ಒಂದು ಮನೆಯಿಂದ ಅಣ್ಣುನಾಯ್ಕ ಹೊರಕ್ಕೆ ಬಂದು, ದೂರದಲ್ಲಿ ನಿಂತ. ನನ್ನನ್ನು ಕಂಡು, ನನ್ನ ಕೈಸನ್ನೆಯನ್ನು ನೋಡಿ ಹತ್ತಿರಕ್ಕೂ ಬಂದು 'ಏನು ಕರೆದಿರಿ' ಎಂದು ಕೇಳಿದ. ಆತ ಗುರುತಿನವ. ನಮ್ಮ ಒಕ್ಕಲೇನಲ್ಲ. ಅವನೊಡನೆ ನನ್ನ ಆಸೆಯನ್ನು ಹೇಳಿದೆ. ಹಾಗಿದ್ದರೆ, ಈ ಬಲದ ಜಾಡನ್ನು ಹಿಡಿದು ನಾಲ್ಕು ಹೆಜ್ಜೆ ಮುಂದಕ್ಕೆ ಹೋಗಿ; ನಿಮ್ಮ ಬೆನ್ನಿಗೆ ಬಂದು ಸೇರುತ್ತೇನೆ ಎಂದು ಹೇಳಿದ. ನಾವು ಹಾಗೆಯೇ ಮಾಡಿದೆವು. ಮೆಲ್ಲಗೆ ಏರುತ್ತ ಸರಿಯುವ ಕಾಡಿನ ದಾರಿಯನ್ನು

ಹಿಡಿದು ಅರ್ಧ, ಮುಕ್ಕಾಲು ಮೈಲು ನಡೆದಾಡುವಾಗ ಅಣ್ಣು ನಮ್ಮನ್ನು ಬಂದು ಕೂಡಿಕೊಂಡ. ಅವನ ಕೈಯಲ್ಲಿ ಕತ್ತಿ, ಕೋವಿಗಳೆರಡೂ ಇದ್ದುವು. ನಾನು "ಕತ್ತಿ ತಂದದ್ದು ಒಳ್ಳೆಯದಾಯಿತು. ಕೋವಿ ಯಾತಕ್ಕೆ?" ಎಂದು ಕೇಳಿದೆ.

"ಏನಾದರೂ ಸಿಗಬಾರದು ಅಂತಿಲ್ಲವಲ್ಲ."

"ಹುಲಿ ಗಿಲಿ ಉಂಟೇ?"

"ಇರಬಾರದೆಂದಿಲ್ಲವಲ್ಲ. ಕಡವೆಯೋ, ಕೆಮ್ಮನೋ ಸಿಕ್ಕಿದರೆ ಒಂದು ಸಾರಿ ಡಂ ಹಾರಿಸಬಹುದು."

"ಅದಕ್ಕೆಲ್ಲ ಪುರುಸೊತ್ತಿಲ್ಲ ನೋಡು. ಒಂದು ಸ್ಥಳ ನೋಡಲಿಕ್ಕೆ ನಾವು ಹೊರಟಿದ್ದೇವೆ. ನಾಗನಕಾಲು ಬರೆಗೆ ತಾಗಿ ಅಲ್ಲೆಲ್ಲೋ ಋಷಿಗಳು ತಪ್ಪಸ್ಸು ಮಾಡಿದ ಗುಹೆ ಉಂಟಂತಲ್ಲ." ಎಂದೆ.

"ಗುಹೆ ಘಟ್ಟದ ಬರೆಯ ಬುಡದಲ್ಲಿ ಹತ್ತಾರು ಇದ್ದಾವು; ಇವೆ. ಅಂದರೆ ಉಂಟು, ದೂರಕ್ಕೆ ನಡೆಯಬೇಕು. ಸಣ್ಣವನಾಗಿದ್ದಾಗ ಹೋಗಿದ್ದೆ, ಒಮ್ಮೆ ಅಲ್ಲಿಗೆ. ಅದರ ದಿಕ್ಕು ಗೊತ್ತುಂಟು ಅನ್ನಿ, ಮೂಗಿನ ತುದಿ ಕಾಣುತ್ತ ಮೂಡಲಿಗೆ ಹೋದರೆ ಸಿಕ್ಕುವುದೇ ಅದು. ಒಂದು ಮಾಟೆಯಲ್ಲಿ ಬೂದಿಯ ರಾಶಿ ಕಂಡದ್ದು ನೆನಪುಂಟು."

"ಅಲ್ಲಿಗೇ ಕರೆದುಕೊಂಡು ಹೋಗು" ಎಂದ ಜನ್ನ.

ಮುಂದೆ ಅವನು ಹೋದದ್ದೇ ದಾರಿ. ಕಾಡಿನ ಜಾಡು ಅಷ್ಟೊಂದು ಕಾಣಿಸುತ್ತಿರಲಿಲ್ಲ. ಅಣ್ಣು ಕಣ್ಣಿಗೆ ಇದಿರಾದ ಗಿಡಗಳ ಅಡರುಗಳನ್ನು ಸವರಿ, ಮೈ ಬಗ್ಗಿಸಿ, ನುಗ್ಗಿ, ನುಸುಳಿ ಸರಸರ ಹೋದರೆ, ಅವನ ಹಿಂದಕ್ಕೆ ನಾವು ಹೋಗುತ್ತಿದ್ದೆವು. ಅವನ ಚುರುಕು ನಮಗೆ ಬರಲಾರದು. ನಮ್ಮ ಮುಖಗಳಿಗೆ ಎಷ್ಟು ಸಾರಿ ಮರದ ಅಡರುಗಳು ಬಡಿದುವು ಎನ್ನುವುದಕ್ಕಿಲ್ಲ. ಒಂದು ಘಂಟೆಯಾದರೂ ನಡೆದಿರಬೇಕು. ಆದರೂ ಬಹಳ ದೂರಕ್ಕೆ ಸರಿದು ಬಂದೆವು- ಎಂಬ ಭಾವನೆ ಉಂಟಾಗಲಿಲ್ಲ. ಅಷ್ಟಕ್ಕೆ ಒಂದು ಬೆಟ್ಟದ ಬೆನ್ನಿಗೆ ಬಂದೆವು. "ನಿಲ್ಲಿ ಒಂದಿಷ್ಟು" ಎಂದು ಹೇಳುತ್ತ ಅಣ್ಣು ಕೋವಿಯನ್ನು ನೆಲದಲ್ಲಿರಿಸಿ, ಸಮೀಪದ ಒಂದು ಮರವನ್ನೇರಿದ. ಇವನೇಕೆ ಈ ಕೆಲಸ ತೊಡಗಿದ ಎಂಬ ಯೋಚನೆ ನನಗೆ ಬಂತು. ಆತ ಆ ಬಯನಿ ಮರದ ಎತ್ತರದಿಂದ ನಾಲ್ಕು ಸುತ್ತಲೂ ನೋಡಿ, ಅಲ್ಲಿಂದಲೇ "ಅಯ್ಯ, ಇನ್ನೇನು ಬಹಳ ದೂರವಿಲ್ಲ. ದಿಕ್ಕು ತಿಳಿಯಿತು. ಓ ಅಲ್ಲಿದೆ ಘಟ್ಟದ ಸೆರಗು; ಮಾಟೆ ಕಾಣಿಸುವುದು ಅಲ್ಲೇ; ಬೂದಿಮಾಟೆಯು ಅಲ್ಲೇ ಇರಬೇಕು" ಎಂದು ಹೇಳಿ ಅಲ್ಲಿಂದ ಕೆಳಕ್ಕೆ ಇಳಿದ.

ತಿರುಗಿ ಅವನು ಮುಂದೆ; ನಾವು ಹಿಂದೆ. ನಾವು ಇಳಿಯಬೇಕಾದ ಸೆರಗು ಸಾಕಷ್ಟು ಕಡಿದಾಗಿತ್ತು. ಗಿಡಗಳನ್ನು ಹಿಡಿದುಕೊಂಡು, ಮೆಟ್ಟಿದ ತರಗೆಲೆಗಳ ಮೇಲೆ ಕಾಲು ಜಾರದ ಹಾಗೆ ಮಾಡಿಕೊಂಡು, ಸಾಕಷ್ಟು ಕಷ್ಟದಿಂದಲೇ ಇಳಿದೆವು. ಸ್ವಲ್ಪ ಇಳಿದ ಮೇಲೆ ಕಿರಿಯ ಹಳ್ಳವೊಂದು ಸಿಕ್ಕಿತು. ಆ ಹಳ್ಳದ ಆಚೀಚೆ ಇಕ್ಕಟ್ಟಿತ್ತು. ಇಕ್ಕಟ್ಟಾದ ನೆಲದ ಕಲ್ಲು, ಬಂಡೆ, ಕೊಳಚೆಗಳ ಎಡೆಯಿಂದ ಬೆಟ್ಟದ ಒರತೆ ನೀರು ಸಾಕಷ್ಟು ಬಲವಾಗಿ ಹರಿಯುತ್ತಿತ್ತು. ಅದು ಮೊರೆತ ಮೇಲೆ ಆತ "ಇದು ಬರುವುದೇ ಅಲ್ಲಿಂದ" ಎಂದು ಹೇಳಿ, ಕುಪ್ಪಳಿಸಿ ಹಾರುತ್ತ ಮುಂದಕ್ಕೆ ಸರಿದನೇ. ನಮಗೋ! ಅಭ್ಯಾಸವಿಲ್ಲದ ಅವಾಂತರ. ಬಂಡೆಗಳನ್ನು ಹತ್ತಿ ಇಳಿಯಬೇಕು. ನೀರಿಂದ ಅವಕ್ಕೆ ಪಾಮಾಜಿ ಅಂಟಿಕೊಂಡಿದ್ದಲ್ಲಿ ಕಾಲುಗಳನ್ನು ಇಡುವಾಗಲೇ ಜಾಗ್ರತೆ ಮಾಡಿಕೊಳ್ಳಬೇಕು. ನೀರೇನೂ ಆಳವಾಗಿರಲಿಲ್ಲವಾದರೂ ಒಮ್ಮೆ ಕಲ್ಲನ್ನೂ, ಒಮ್ಮೆ ನೀರನ್ನೂ ಹತ್ತಿ ಇಳಿಯುವ ಆಟ ತ್ರಾಸದಾಯಕವಾಗಿತ್ತು. ಅವನ ಒಂದು ಕೈಯಲ್ಲಿ ಕೋವಿಯಿತ್ತು. ಬೆನ್ನಿಗೆ ಕತ್ತಿಯನ್ನೂ ಸಿಕ್ಕಿಸಿಕೊಂಡಿದ್ದ. ಆತ ಒಂದಿಷ್ಟೂ ಅಳುಕಿಲ್ಲದೆ ಹೋಗುವ ರೀತಿಯನ್ನು ಕಂಡರೆ 'ಥೇಟು ಕಿಷ್ಕಿಂಧಪುರದವನು' ಎಂಬ ಭಾವನೆಯಾಯಿತು. ಅವನು ದೂರದಲ್ಲಿ ಕಾಣಿಸುವುದು ನಿಂತಿತು. ಅಂತೂ ಏಗಿ, ಏಗಿ, ಅರ್ಧ ಮುಕ್ಕಾಲು ಮೈಲಾದರೂ ನಡೆದಿರಬೇಕು ನಾವು. ಅದಕ್ಕೆ ಎರಡು ಗಳಿಗೆ ಹಿಡಿದಿದ್ದರೂ ಹಿಡಿದಿರಬಹುದು. ಅಂತು ಹಳ್ಳದ ಬುಡಕ್ಕೆ ಬಂದೆವು. ಅಲ್ಲಿ ಒಂದಿಷ್ಟು ತಟ್ಟಾದ ನೆಲವಿದ್ದುದು ಕಾಣಿಸಿತು. ಮರುಳು ಮತ್ತು ನಂಜು ನೀರು ತುಂಬಿದ ಒಂದು ಬಗೆಯ ಜವುಗಿತ್ತು. ಅದರ ಸುತ್ತಲೂ ಕೇದಗೆ ಮತ್ತು ಬೆತ್ತದ ಹಿಂಡಲುಗಳು. ನಮಗೆ ಕಾಲೂರುವುದಕ್ಕೆ ಭಯ. ಹೂತುಹೋದರೆ! ನೀರು ಹರಿದು, ಹರಿದು, ತಾವು ಗಟ್ಟಿಯಾಗಿದ್ದುದು ಕಂಡುಬಂದ ಮೇಲೆ, ನಾಲ್ಕುಹೆಜ್ಜೆ ಮುಂದಿಟ್ಟೆವು. ಎಷ್ಟು ತಂಪಿನ ಹವೆ ಅಲ್ಲಿ! ಬಿಸಿಲಿನ ಚೂರಿಲ್ಲ. ಆಚೀಚಿನ ಮರಗಳ ಬೇರುಗಳು ಆನೆಯ ಸೊಂಡಿಲಿನ ಹಾಗೆ ಅಲ್ಲಿಯ ತನಕ ತಮ್ಮ ಮೂತಿಯನ್ನೂರಿದ್ದುವು. ಅದೊಂದು ಬೇರೆಯೇ ಲೋಕವಾಗಿ ಕಾಣಿಸಿತು. ನಮ್ಮಿಂದ ಹತ್ತು ಮಾರು ಮುಂದಕ್ಕೆ ನಿಂತ ಅಣ್ಣು "ಬಂತು, ಇನ್ನೇನು ದೂರವಿಲ್ಲ. ಇಲ್ಲೇ ಮೇಲಕ್ಕಿದೆ ಎಂದು ಕಾಣುತ್ತದೆ" ಎಂದು ಹೇಳಿ, ನಮ್ಮನ್ನು ಮುಂದಕ್ಕೆ ಕರೆದೊಯ್ದ. ಅಲ್ಲೆಲ್ಲ ನಾಲ್ಕು ಸುತ್ತಲೂ ಉರುಳಿಬಿದ್ದ ಬಂಡೆಗಳು ಆನೆಗಳಂತೆ ಕಾಣಿಸುತ್ತಿದ್ದುವು. ಅವನ್ನು ದಾಟಿಹೋದರೆ ನಮ್ಮ ಕಣ್ಣೆದುರಿಗೆ ಒಂದು ದೊಡ್ಡ ಮಾಟೆ ಕಾಣಿಸಿತು. ನೈಸರ್ಗಿಕ ಗುಹೆ. ಅಂಥ ಒಂದು ಸಂದಿನಲ್ಲಿ ಹಿಂದಿನ ಕಾಲದ ಯಾವುದೋ ಜನರು ವಸತಿಮಾಡಿಕೊಂಡಿದ್ದರೆ ಆಶ್ಚರ್ಯವೇನಿಲ್ಲ. ಉರುಳಿ ಬಿದ್ದ ಬಂಡೆಗಳನ್ನೇರಿ ಆ ಗುಹೆಗೆ ಹೋದೆವು. ಅದರ ತಳ ಸಮತಟ್ಟಾಗಿ ಕಾಣಿಸಿತು. ತುಂಬ ಶಾಂತಸ್ಥಳ. ಅಣ್ಣುನಾಯ್ಕ ನಮ್ಮನ್ನು ಅಲ್ಲಿಯೇ ಬಿಟ್ಟು, "ಈಗ ಬಂದೆ" ಎಂದು ಹೇಳಿ ಇನ್ನೇನನ್ನೋ ಹುಡುಕಿಹೋದ.

ನಾವು ತುಸು ಏಗಿ, ದಣಿವು ಕಳೆದ ಮೇಲೆ ಹರಟೆಯಲ್ಲಿ ಹೊಟ್ಟೆ ತುಂಬಿಸತೊಡಗಿದೆವು. ಮನೆಯಿಂದ ಹೊರಟು ಬರುವಾಗ ಒಂದಿಷ್ಟು ತಿಂಡಿಯನ್ನಾದರೂ ಹೊತ್ತು ತರುತ್ತಿದ್ದರೆ, ಅದಕ್ಕೆಷ್ಟು ರುಚಿ ಬರುತ್ತಿತ್ತೋ ಏನೋ. ಈಗ ಅಂಥ ಕೆಲಸವೇನಿಲ್ಲ. ಬಂದು ಕುಳಿತೆವು, ನಿಂತೆವು. ಆ ಗವಿಯ ಶಿಲಾ ಗೋಡೆಗಳನ್ನು ಸವರಿ ನೋಡಿದೆವು. ಅವಕ್ಕೆ ಅಂಟಿದ್ದ ಪಾಮಾಜಿ ಒಣಗಿ ನಮ್ಮ ಕೈಗೂ ಬಂದಿತು. ಆದರೆ, ದೂರದ ಒಂದು ಸಂದಿನಲ್ಲಿ ಒಂದು ಬಿರುಕು ಇದ್ದಿತ್ತು. ನೆಲದ ಮೇಲೆ ಒಂದಿಷ್ಟು ಬೂದಿ ಬಿದ್ದದ್ದು ಕಾಣಿಸಿತು. ತುಸು ಹೊತ್ತಿನಲ್ಲಿ ಅಣ್ಣು ನಾವಿದ್ದಲ್ಲಿಗೆ ಒಂದು 'ಅಯ್ಯಾ, ಇಂಥ ನಾಲ್ಕಾರು ಮಾಟೆಗಳಿವೆ. ಎಲ್ಲವನ್ನು ನೋಡುವುದಕ್ಕೆ ಸಮಯ ಸಾಲದು. ಬೂದಿಮಾಟೆಯನ್ನು ತೋರಿಸುತ್ತೇನೆ ನಿಮಗೆ' ಎಂದು ಹೇಳಿ ಮುಂದಕ್ಕೆ ಸಾಗಿದ. ನಾವು ಅವನನ್ನು ಹಿಂಬಾಲಿಸಿದೆವು. ಅದರ ಬದಿಯ ಮಗ್ಗುಲಲ್ಲಿ ಗಿಡಮರಗಳ ಎಡೆಯಲ್ಲಿ ಕಾಲಿರಿಸುತ್ತ ಮುಂದಕ್ಕೆ ಸಾಗಿದೆವು. ಒಂದಿಷ್ಟು ದೂರ ಸರಿದ ಮೇಲೆ ನಾಲ್ಕಾರು ಗುಹೆಗಳ ಸಾಲು ಕಾಣಿಸಿತು. ಅವೆಲ್ಲ ಎತ್ತರದಲ್ಲಿದ್ದುವು. ಮತ್ತೂ ಒಂದಷ್ಟು ದೂರ ನಡೆದು ನೆಲವನ್ನೇರಿ ನಿಂತಾಗ ಬಲು ದೊಡ್ಡದಾದೊಂದು ಹೆಬ್ಬಂಡೆಯ ಸೆರಗು ಬೆಟ್ಟದ ಗೋಡೆಯಿಂದ ಮುಂದಕ್ಕೆ ಚಾಚಿದ್ದು ಕಾಣಿಸಿತು. ಅದರ ಮೇಲೆಲ್ಲ ಜೇನಿನ ತಟ್ಟಿಗಳು. ಅಲ್ಲಿಂದಲೂ ತುಸು ಮುಂದಕ್ಕೆ ಹೋದೆವು. ಇನ್ನೊಂದು ಬಂಡೆಯ ಚಾಚಲು ಅಂಚಿನ ಮೇಲೆ ಕಾಲಿರಿಸಿ, ಹಿಂದಕ್ಕೆ ತಿರುಗಿದೆವು. ಬಂಡೆಯನ್ನಪ್ಪಿ ಹತ್ತೆಂಟು ಹೆಜ್ಜೆಗಳನ್ನು ಆ ಚಾಚು ಶಿಲೆಯ ಮೇಲೆ ನಡೆದಾದ ಬಳಿಕ ಬಹಳ ಮೊಡ್ಡ ಗುಹೆಯೊಂದು ಇದಿರಾಯಿತು. ದೊದಲು ಕಂಡದ್ದಕ್ಕಿಂತ ನಾಲ್ಕುಪಾಲು ವಿಶಾಲ ಸ್ಥಳವದು. ಅದರ ಇದಿರಿಗಿರುವ ಸ್ಥಳವು ಐದಾರು ಆಳು ತಗ್ಗಿನಲ್ಲಿದೆ. ಆ ಗುಹೆಯಾದರೆ ಮನುಷ್ಯರಿಗೆ ಪ್ರಾಣಿಗಳಿಂದ ಸಂಪೂರ್ಣ ರಕ್ಷಣೆ ಕೊಡುವಂಥದು.

ಗುಹೆ ದೊಡ್ಡದಾಗಿದ್ದರೂ ಅದರೊಳಗೆ ಕಲ್ಲು ಮಣ್ಣು ಹರವಿ ಬಿದ್ದಿತ್ತು. ಒಂದೆಡೆ ಎರಡು ಅಡಿ ದಪ್ಪಕ್ಕೆ ಬೂದಿಯ ರಾಶಿ ಹರವಿ ಬಿದ್ದಿತ್ತು. ಅದನ್ನು ಮೆಟ್ಟಿಕೊಂಡು ಗುಹೆಯನ್ನು ನೋಡತೊಡಗಿದೆವು. ಸಾಕಷ್ಟು ಒಳಗಿನ ತನಕ ಮೇಲಣ ಬಂಡೆಯ ಮಾಡು ಚಾಚಿದ್ದರಿಂದ ಆ ತಾವಿನಲ್ಲಿ ನೂರಾರು ಮಂದಿ ಕುಳಿತಿರುವಷ್ಟು ಜಾಗ ಕಾಣಿಸಿತು. ತೀರ ಹಿಂದೆ ಮತ್ತೊಂದು ಕಿರಿಯ ಮಾಟೆಯಿದೆ. ಅಂಥ ಪೊಟರೆ ಹೇಗೆ ಉಂಟಾಯಿತು? ಇಲ್ಲೆಲ್ಲ ಮೊದಲು ಕಲ್ಲು, ಮಣ್ಣು ತುಂಬಿಕೊಂಡಿತ್ತೇ? ಕಾಲಾಂತರದಲ್ಲಿ ಮಳೆ ನೀರು ಜಿನುಗಿ ಅವನ್ನೆಲ್ಲ ಹೊರಗೆ ಸಾಗಿಸಿತೇ-ಎಂದು ಏನೇನೋ ಯೋಚಿಸಿದೆ. ಜನರಂತೂ ಅಲ್ಲಿ ವಾಸವಾಗಿದ್ದ ಕುರುಹು ಅಷ್ಟು ದೊಡ್ಡದಾದ ಬೂದಿಯ ರಾಶಿಯಿಂದಲೇ ಸ್ಪಷ್ಟವಾಗುತ್ತಿತ್ತು. ಅಷ್ಟು ದಪ್ಪನಾದ ರಾಶಿ ಬೀಳಬೇಕಾದರೆ ದೀರ್ಘಕಾಲ ವಾಸ ಮಾಡಬೇಕು. ಇಂಥ ವಿಚಾರ ಮಾಡುತ್ತ ನಮಗೆ ಹೊತ್ತು ಗೊತ್ತಿನ ಮರವೆಯಾಯಿತು. ನಾನು ಕುತೂಹಲದಿಂದ

ಬೂದಿ ಮೆತ್ತಿದ ನೆಲವನ್ನು ಕೆರೆಯತೊಡಗಿದೆ. ಎಷ್ಟು ಸಾವಿರ ವರ್ಷಗಳ ಹಿಂದಿನ ಬೂದಿಯೋ! ಕೆರೆದರೆ ಬೆರಳಿಗೆ ಸಿಗಲಿಲ್ಲ. ಅಣ್ಣುವಿನ ಕೈಯಿಂದ ಕತ್ತಿ ತೆಗೆದುಕೊಂಡು ಕೊಚ್ಚತೊಡಗಿದೆ. ಕೊಚ್ಚಿದರೆ ಅಲ್ಲಿ ಏನುಂಟು, ಏನಿಲ್ಲ, ಅನ್ನಿಸಿತು. ಇದ್ದಲು ತುಣುಕುಗಳು, ಎಲುಬಿನ ತುಣುಕುಗಳು, ಗಡಿಗೆಯ ಚೂರುಗಳು ಹೊರಬಿದ್ದವು. ಒಂದೆರಡು ಎಲುಬಿನ ಚೂರನ್ನೆತ್ತಿಕೊಂಡು "ಮನುಷ್ಯರದ್ದಿರಲಾರದಲ್ಲ" ಎಂದೆ ನಾನು.

ಅಣ್ಣು ಅದನ್ನು ನೋಡಿದ. ಸಣ್ಣ ಸಣ್ಣ ಚೂರುಗಳವು. "ಏನೆಲ್ಲ ಸುಟ್ಟು ತಿಂದಿದ್ದರೋ ಇಲ್ಲಿ" ಎಂದು ನನ್ನ ಕೈಯಿಂದ ಕತ್ತಿ ತೆಗೆದುಕೊಂಡು ಆತ ಪಟಪಟನೆ ನೆಲವನ್ನಗೆದು ಅದರ ಹೆಂಟೆಗಳನ್ನು ಹರವಿದ. ಆಗ ಮೊಡ್ಡ ಎಲುಬಿನ ತುಂಡೊಂದು ಕಾಣಿಸಿತು. "ಇದಾದರೆ ಅಯ್ಯ, ಕೆಮ್ಮಿರ ತೊಡೆಯ ಎಲುಬು" ಎಂದ. ಅವನಿಗಿಂತ ನಾನು ಮೊಡ್ಡ ಪಂಡಿತನೇ? ಅವನನ್ನು ನಂಬಿದೆ. "ಕೊಡು, ನನಗೆ ಅದನ್ನು" ಎಂದೆ. ಕೊಟ್ಟ.

ನಾನು ಅಷ್ಟಕ್ಕೆ ಬಿಡಲಿಲ್ಲ. ಬಹಳ ಮೊಡ್ಡ ಸಂಶೋಧನೆಯನ್ನು ನಡೆಸುವ ಭಾಗ್ಯ ಸಿಕ್ಕಿದ ಮೇಲೆ ಅದರ ಕೀರ್ತಿಯನ್ನೆಲ್ಲ ಕೊರಳಿಗೆ ಕಟ್ಟಿಕೊಳ್ಳುವ ಚಪಲ ಉಂಟಾಯಿತು. ನನಗೆ ಆಶ್ಚರ್ಯ ಹುಟ್ಟಿಸಿದ್ದು ಆ ಎಲುಬು. ಅಲ್ಲಿಯೇ ನಾಲ್ಕೆಂಟು ಕವಡೆಗಳು ಕಾಣಿಸಿದ್ದು. ಅದನ್ನು ಕಿಸೆಗೆ ತುರುಕಿದೆ; ಮತ್ತೂ ಅಗೆದೆ. ಮಣ್ಣು ಮೆತ್ತಿದ ಯಾವುದೋ ಚೂರು ಕಾಣಸಿಕ್ಕಿತು. ಅದು ಭಾರವಾಗಿದ್ದು, ಅದೇನೆಂಬುದು ತಿಳಿಯದೆ 'ಅದು ಎಂಥ ಬೇರು?' ಎಂದು ಅಣ್ಣುವನ್ನು ಪ್ರಶ್ನಿಸಿದೆ. ಆತ ಅದನ್ನು ಹಿಡಿದವನೇ 'ಬೇರಲ್ಲ, ಬೇರಲ್ಲ, ಮರದ ಬೇರು ಇಷ್ಟು ಭಾರ ಇರುವುದಿಲ್ಲ. ಗಟ್ಟಿ ಜಾತಿಯ ಕೊಂಬಿರಬೇಕು. ಕಡವೆಯದೋ, ಜಿಂಕೆಯದೋ' ಎಂದ. 'ಅಷ್ಟು ಸಣ್ಣ ಕೊಂಬೇ?' ಎಂದು ಕೇಳಿದೆ ನಾನು. ಆತ 'ಇಡಿಯ ಕೊಂಬಲ್ಲ; ಚೂರು' ಎಂದ. 'ಇರಲಿ' ಎಂದು ಅದನ್ನು ತೆಗೆದುಕೊಂಡೆ. ಅಲ್ಲಿನ ಬೂದಿ, ಮಣ್ಣುಗಳಲ್ಲಿ ಸಿಕ್ಕಿದ ಇನ್ನೂ ಎಷ್ಟೆಷ್ಟೋ ಸಾಮಾನುಗಳನ್ನು ನನ್ನ ಹೆಗಲ ಪಂಚೆಯಲ್ಲಿ ಕಟ್ಟಿಕೊಂಡೆ. ಹೊತ್ತಿನ ನೆನಪಾಯಿತು. ನಾವು ಸಾಕಷ್ಟು ದೂರ ನಡೆದುಬಂದಿದ್ದೇವೆ. ಬಾನನ್ನು ಕಂಡಿಲ್ಲವಾದರೂ, ಬರಲಿಕ್ಕೆ ಮೂರು ಗಂಟೆ ಕಾಲ ಹಿಡಿದಿರಬಹುದು. ಮನೆಗೆ ಹಿಂದಿರುಗುವ ಕೆಲಸ ಒಂದುಂಟಲ್ಲ-ಎಂಬ ನೆನಪು ಬರುತ್ತಲೇ, "ಎಂಥ ಹೆಡ್ಡು ಕೆಲಸವನ್ನು ಮಾಡಿದೆ, ಬೆಳಿಗ್ಗೆಯೇ ಹೊರಟು ಬರಬೇಕಿತ್ತು. ಬರುತ್ತ, ಬುತ್ತಿ ತರಬೇಕಿತ್ತು. ಆಗ ಒಂದು ರಾತ್ರಿಯನ್ನು ಇಲ್ಲೇ ಕಳೆದರೂ ಕಳೆಯಬಹುದಿತ್ತು" ಎಂದು ಉದ್ಗರಿಸಿದೆ.

"ರಾತ್ರಿ ಕಳೆಯುವುದೇ?" ಎಂದ ಜನ್ನ.

"ಅಯ್ಯಾ, ಇನ್ನು ಬೇಗ ಹೊರಡುವ. ಎಷ್ಟು ಬೇಗನೆ ಹೋದರೂ ಮನೆ ಮುಟ್ಟುವುದರೊಳಗೆ ಕತ್ತಲಾಗುತ್ತದೆ. ಹಾಗೆ ನಾವು ಸ್ವಲ್ಪವೇನೂ ನಡೆಯಲಿಲ್ಲ. ಕಾಡಿನ ದಾರಿ ಗೊತ್ತಾಗಲಿಲ್ಲ" ಎಂದ ಅಣ್ಣು.

ಹಿಂದಕ್ಕೆ ಹೊರಡಬೇಕಲ್ಲ ಎಂಬ ನಿರಾಶೆ ನನ್ನದು. ಒಂದು ದಿನವೆಲ್ಲವೂ ಅಲ್ಲಿಯೇ ಇದ್ದು, ಈ ಆಸುಪಾಸಿನ ಸ್ಥಳಗಳನ್ನೆಲ್ಲ ಸುತ್ತಿ ನೋಡಿದ್ದರೆ ಇನ್ನೆಷ್ಟೋ ಹೆಚ್ಚಿಗೆ ವಸ್ತುಗಳು ಕಾಣಸಿಗುತ್ತಿದ್ದುವು- ಎನಿಸಿತು. ನಮ್ಮ ಊರಿನವರು ಹೇಳುವ ಹಾಗೆ ಬಹಳ ಹಿಂದಣ ಕಾಲದಲ್ಲಿ ಇಲ್ಲಿಯೇ ಯಾರಾದರೂ ಋಷಿಗಳು ತಪಸ್ಸು ಮಾಡಿಕೊಂಡಿರುತ್ತಿದ್ದರೆ ಆಶ್ಚರ್ಯವಿಲ್ಲ ಎಂದೆ ನಾನು.

"ಹಿಂದೆ ಅಂಥ ಋಷಿಗಳು ಇದ್ದರಂತೆ, ಒಡೆಯ. ಇದು ಬಡಾಘಟ್ಟದ ಸೆರಗಲ್ಲವೇ? ಬಡಾಘಟ್ಟದಲ್ಲಿ ಈಗಲೂ ಋಷಿಗಳು ತಪಸ್ಸು ಮಾಡಿಕೊಂಡಿದ್ದಾರೆ- ಅನ್ನುತ್ತಾರೆ. ಆದರೆ, ಅವರು ನಮ್ಮಂಥ ಮನುಷ್ಯರ ಕಣ್ಣಿಗೆ ಕಾಣಸಿಗುವುದು ಕಷ್ಟವಂತೆ ಎಂದ ಅಣ್ಣು. ಅನಂತರ ನಿರಾಶೆಯಿಂದ 'ನನಗೆ ಮಾತ್ರ ಬಂದದ್ದಕ್ಕೆ ಏನೂ ಪ್ರಯೋಜನವಾಗಲಿಲ್ಲ' ಎಂದು ಉದ್ಗರಿಸಿದ.

"ಕೋವಿ ಹೊತ್ತು ತಂದದ್ದು ವ್ಯರ್ಥವಾಯಿತಲ್ಲವೆ?" ಎಂದು ನಕ್ಕು ಕೇಳಿದ ಜನ್ನ.

"ಅದೇನು ವ್ಯರ್ಥವಲ್ಲ. ದಾರಿಯಲ್ಲೇನಾದರೂ ಅಡ್ಡ ಬಂದರೆ ಹೆದರಿಸಲಿಕ್ಕಾದರೂ ಬೇಕಲ್ಲ."

"ಬಂದೀತು ಎನ್ನುತ್ತೀಯಾ?"

"ಸಂಜೆ ಆಗಲಿಲ್ಲವೇ? ಮೇವಿಗೆ ಒಂಮೊಂದು ಪ್ರಾಣಿ ಬರಬಾರದೆಂದಿಲ್ಲ. ಕಾಟಿಯೋ, ಕಡವೆಯೋ! ಒಂದೆರಡು ಸಾರಿ ಕಾಟಿಯನ್ನು ಕಂಡಿದ್ದೆ. ಕಾಟಿ, ಕಡವೆ ನಮ್ಮ ಮನೆಯ ಹತ್ತಿರದ ತನಕವೂ ಬರುತ್ತವೆ."

ಕಾಟಿ, ಕಡವೆಗಳ ಹೆಸರನ್ನು ಕೇಳುತ್ತಲೇ ಜನ್ನನ ಮನಸ್ಸು ಇನ್ನೊಂದೇ ಪ್ರಾಣಿಯ ಕಡೆಗೆ ನೆಗೆಯಿತು. ಆತ "ಈ ಬದಿಯಲ್ಲಿ ಕಾಳಿಂಗನ ಹಾವು ಉಂಟು ಎನ್ನುತ್ತಾರಲ್ಲ; ಸದ್ಯಕ್ಕೆ ಅದೊಂದು ಬಾರದಿದ್ದರೆ ಸಾಕು" ಎಂದು ಹೇಳಿದ.

"ಕಾಳಿಂಗನ ಹಾವೇ? ಇದ್ದರೂ ಇದ್ದೀತು. ಹಾಗೆ ಬಂದರೂ ಬಂದೀತು. ಹೊರಡುವ ಮೊದಲು ನಮಗೆ ಅದರ ಕೈಯಲ್ಲಿ ಸಾಯುವ ಯೋಗವಿದ್ದರೆ ಯಾರು ತಪ್ಪಿಸುವವರು? ನಾವೇನೂ ಅದಕ್ಕೆ ಕೆಟ್ಟದ್ದನ್ನು ಮಾಡಲು ಬಂದವರಲ್ಲ; ಅದಕ್ಕೆ ನಮ್ಮ ಮೇಲೆ ಹಗೆಯೂ ಇರಲಾರದು. ಬನ್ನಿ, ಬೀಸಬೀಸನೆ ಹೋಗುವ. ಕಾಲು ಹಾಕುವಾಗ ಮೆಟ್ಟಿನ ಶಬ್ದಕ್ಕೆ, ತರಗೆಲೆಯ ಶಬ್ದಕ್ಕೆ ಹಾವುಗೀವು ಏನಿದ್ದರೂ ಹೆದರಿ ಓಡುತ್ತವೆ" ಎಂದು ಧೈರ್ಯ ಹೇಳಿದ. ನಾನು ಮೈಮೇಲೆ ಹೊದ್ದುಕೊಂಡು ಬಂದಿದ್ದ ಪಂಚೆಯಲ್ಲಿ ಅಲ್ಲಿ ಸಿಕ್ಕಿದ ಹಲವಾರು ವಸ್ತುಗಳನ್ನು ಕಟ್ಟಿಕೊಂಡೆ; ಚಿಕ್ಕಪುಟ್ಟ ವಸ್ತುಗಳನ್ನು ಕಿಸೆಯಲ್ಲಿ ತುರುಕಿಕೊಂಡೆ. ಗವಿಯನ್ನಿಳಿದು ಕೆಳಗೆ ಬಂದೊಡನೆಯೇ ಅಲ್ಲಿನ ನೀರನಲ್ಲಿ, ಭಾರವಾಗಿ

ಕಾಣಿಸಿದ ಆ ಬೇರಿನ ತುಂಡನ್ನು ಮುಳುಗಿಸಿ, ತಿಕ್ಕಿ ನೋಡಿದೆ. ಅವೊಂದು ಜಿಂಕೆಯ ಕೊಂಬಿನ ಚೂರೆಂಬುದು ತಿಳಿಯಿತು. ಅಣ್ಣು ಅದನ್ನು ತನ್ನ ಕೈಗೆ ತೆಗೆದುಕೊಂಡು "ಅಯ್ಯಾ, ಇದನ್ನು ನಮ್ಮ ಆಚಾರಿಯ ಕೈಯಲ್ಲಿ ಕೊಟ್ಟರೆ, ಸಿಗಿದು ಒಳ್ಳೆಯ ಚೂರಿಯ ಹಿಡಿ ಮಾಡಿಯಾನು" ಎಂದ.

"ಅದನ್ನು ಸಿಗಿಯುವುದು ಏತಕ್ಕೆ? ಅದು ಇಡೀ ಇದ್ದರೇ ಚಂದ. ಇಲ್ಲಿಗೆ ಬಂದ ನೆನಪಿಗೆ ಆಯಿತು. ನನಗಂತೂ ಅಣ್ಣು, ಇನ್ನೊಂದು ಸಾರಿ ಇಲ್ಲಿಗೆ ಬಂದೇ ತೀರಬೇಕು ಎನ್ನಿಸುತ್ತದೆ."

"ಆಗಲಂತೆ, ಬರುವ; ಇನ್ನೊಂದು ಸಾರಿ. ಜತೆಯಲ್ಲಿ ಇನ್ನೂ ಒಬ್ಬರು, ಇಬ್ಬರನ್ನು ಕರೆದುಕೊಂಡು ಬಂದರೆ, ಇದೇ ಮಾಟೆಯಲ್ಲಿ ಒಂದು ರಾತ್ರಿ, ಒಂದು ಹಗಲು ಕಳೆಯಬಹುದು. ಈ ಮಾಟೆಗೆ ಹುಲಿ ಬರಲಾರದು. ಮಾಟೆಗೆ ಹೋಗುವ ದಾರಿ ಎಷ್ಟು ಸಪುರದ್ದು, ಹುಲಿ ಕಾಲಿಡಲಾರದು ಅಲ್ಲಿ."

"ಹಾಗೆಯೇ ಮಾಡುವ" ಎನ್ನುತ್ತ ಅಣ್ಣು ಬೆಟ್ಟವನ್ನೇರತೊಡಗಿದ. ನಾವು ಅವನನ್ನು ಅನುಸರಿಸತೊಡಗಿದೆವು. ಬರುತ್ತ, ಎಲೆಗಳನ್ನು ಸವರುತ್ತ ಬಂದುದರಿಂದ ಮರಳುವ ದಾರಿ ಸುಲಭವಾಗಿ ಗೊತ್ತಾಗುತ್ತಿತ್ತು. ಏರುವ ಅವನ ಭರಕ್ಕೆ ಸಮನಾಗಿಯೇ ನಾವಿಬ್ಬರೂ ಏಗುತ್ತಲೇ ಹಿಂಬಾಲಿಸಿದೆವು ಬೆಟ್ಟದ ಬೆನ್ನಿಗೆ ಬಂದಾಗ ಅಣ್ಣು "ಅಯ್ಯಾ, ಪಡುವಿಗೆ ನೋಡಿ, ಹೊತ್ತು ಕಂತುತ್ತಾ ಇದೆ. ಮುಂದಿನ ದಾರಿಯೆಲ್ಲ ಇಳುಕಲು, ನಡೆಯುವುದಕ್ಕೆ ಕಷ್ಟವಿಲ್ಲ" ಎಂದು ನುಡಿದು ಮುಂದೆ ಸಾಗಿದ. ಆದರೆ ಕಲ್ಲು, ದರಗುಗಳ ಮೇಲೆ ನಮ್ಮ ಕಾಲುಗಳು ಎಡವುದನ್ನು ಕಂಡು ಆತ, ಎರಡು ಕೋಲುಗಳನ್ನು ಮಾಡಿಕೊಟ್ಟ; ನಾವು ಕೈಯಲ್ಲಿ ಅವನ್ನು ಹಿಡಿದು ಊರುತ್ತ, ದೇಹವನ್ನಾಧರಿಸಿ ನಡೆಯುವುದಕ್ಕೆ ಕಷ್ಟವಾಗಲಿಲ್ಲ. ಬೆಟ್ಟದ ಇಳಿತ ಮುಗಿಯುವ ತನಕವೂ ದಣಿವಿನಿಂದ ನಮ್ಮ ಬಾಯಿಗೆ ಬೀಗ ಬಿದ್ದಿತ್ತು. ಅಣ್ಣುನಾಯ್ಕನ ಮನೆ ಇರುವ ಬೆಣ ಬರುವ ವೇಳೆಗೆ ಚೆನ್ನಾಗಿ ಕತ್ತಲಾಗಿತ್ತು. ಜನ್ನನಿಗೆ, ದಣಿವಿನೊಡನೆ ಹಸಿವೂ ಕಾಡುತ್ತಿರಬೇಕು. ಆದುದರಿಂದ "ಇನ್ನೂ ಹರದಾರಿ ದೂರವಿದೆಯಲ್ಲಪ್ಪ-ಮೂಡೂರಿನ ಕಾಡನ್ನು ದಾಟಿ, ಬಯಲು ಬರುವುದಕ್ಕೆ. ಈ ಕತ್ತಲಿನಲ್ಲಿ ಈಗಾಗಲೇ ಕಾಲಿಗೆ ಬೇರು, ಕಲ್ಲುಗಳು ಬಡಿದು, ಬೆರಳಿಗೆ ಪೆಟ್ಟಾಗಿ ಹೆಜ್ಜೆ ಇಡುವುದಕ್ಕೆ ಸಾಕು ಬೇಕಾಗುತ್ತಿದೆ" ಎಂದ.

ಅಣ್ಣುವಿನ ಮನೆಯ ಮುಂಗಡೆಯ ಅಂಗಳಕ್ಕೆ ಹೋಗಿ ನಿಂತೆವು. ಆತ "ಅಯ್ಯಾ, ಬಾವಿಯಿದೆ, ಸ್ವಲ್ಪ ಕೈಕಾಲು ತೊಳೆದುಕೊಳ್ಳಿ, ಎಲೆ ಅಡಿಕೆ ಹಾಕಿ. ಮತ್ತೇನಿಲ್ಲ ಕೊಡಲಿಕ್ಕೆ-ನಾಲ್ಕು ಬಾಳೆಯ ಹಣ್ಣು ತಿಂದು ಹೊಟ್ಟೆ ತಂಪು ಮಾಡಿಕೊಳ್ಳಿ. ಅಷ್ಟರಲ್ಲಿ ಎರಡು ಸೂಡಿ ಕಟ್ಟುತ್ತೇನೆ. ಸಲೀಸು ಮಾರ್ಗದಲ್ಲಿ ನಿಮ್ಮನ್ನು ಬಯಲಿಗೆ ಮುಟ್ಟಿಸಿದರೆ ಆಯಿತಲ್ಲ.

ಆಮೇಲೆ ಬಿಸಾತಿಲ್ಲದೆ ಗದ್ದೆ ಅಂಚಿನಲ್ಲಿ ಹೋದರಾಯಿತು" ಎಂದು ಉಪದೇಶಿಸಿದ.

ನಾವು ಕಾಲುಗಳನ್ನು ತೊಳೆದು, ಮುಖಕ್ಕೆ ನೀರನ್ನು ಅಪ್ಪಳಿಸಿಕೊಂಡು ಮೈ ಬೆವರನ್ನು ಉಜ್ಜಿಕೊಂಡು, ಅಂಗಳದಲ್ಲಿರಿಸಿದ ಎರಡು ಮಣೆಗಳ ಮೇಲೆ ಹೋಗಿ ಕುಳಿತೆವು. ಅವನು ತಂದಿರಿಸಿದ ಎರಡು ಚಿಪ್ಪು ಬಾಳೆಯ ಹಣ್ಣುಗಳನ್ನು ತಿಂದೆವು. ನಾವೇ ತಂದ ಒಂದು ಬಿಂದಿಗೆ ನೀರನ್ನು ಬರಿದುಮಾಡಿದೆವು. ನಮಗೆ ಗಟ್ಟಿ ಉಪಾಹಾರವಾದುದರಿಂದ "ಅಣ್ಣು, ನೀನು ಮನೆಯಲ್ಲಿ ಅಡುಗೆಯಾಗಿದ್ದರೆ ಒಂದಿಷ್ಟು ಊಟ ಮಾಡಿ ಹೊರಡು" ಎಂದೆ ನಾನು.

"ಬೇಡ, ಬಂದು ಉಂಡರಾಯಿತು" ಎಂದ ಅವನು.

"ಹಾಗಿದ್ದರೆ, ರಾತ್ರಿ ನಮ್ಮಲ್ಲಿಯೇ ಉಂಡು ಮಲಗಿಕೋ, ಬೇಕಷ್ಟು ನಡೆದು ದಣಿದಿದ್ದೀಯ" ಎಂದು ನಾನು ಒತ್ತಾಯ ಮಾಡಿದ್ದಕ್ಕೆ ಆತ ತನ್ನ ಗುಡಿಸಲನ್ನು ಹೊಕ್ಕು, ಒಂದು ಊಟದ ಶಾಸ್ತ್ರ ಮುಗಿಸಿ ಬಂದ. ನಮ್ಮ ಮುಂದೆ ವೀಳೆಯದ ತಾಟು ಇರಿಸಿದ್ದ. ನಾವು ಅಂಬಾಡಿ ಎಲೆಯ ವೀಳೆಯ ಮೆದ್ದು ಕಾಲ ಕಳೆದೆವು. ಅಷ್ಟರಲ್ಲಿ ಅವನ ಊಟವೂ ಮುಗಿದು "ಬಂದೆ ಒಡೆಯ" ಎಂಬ ಧ್ವನಿಯೂ ಹೊರಟಿತು. ಅವನ ಜೊತೆಗೆ ಅವನ ತಮ್ಮನೂ ಸೇರಿಕೊಂಡ. ಮುಂದಕ್ಕೆ ಅವನು, ನಡುವೆ ನಾವಿಬ್ಬರೂ, ನಮ್ಮ ಹಿಂದೆ ಅವನ ತಮ್ಮ ಸಿದ್ಧು ನಾಯ್ಕ. ಅವರಿಬ್ಬರೂ ಹಿಡಿದ ಸೂಡಿಗಳ ಬೆಳಕಿನಲ್ಲಿ ನಮ್ಮ ಪಯಣ ಮುಂದುವರಿಯಿತು.

"ಕತ್ತಲಲ್ಲಿ ಹರೆಯುವುದು ಗಿರಿಯುವುದು ಇರಲಾರದೇ?" ಎಂದ ಜನ್ನ. "ಇದ್ದರೆ ಇರುತ್ತದೆ" ಎಂದೆ ನಾನು. ಅಂತೂ ನನ್ನ ಮಿತ್ರನಿಗೆ ಪಯಣದ ಆಯಾಸದ ಜತೆಯಲ್ಲಿ ದಾರಿಯ ಭಯವೂ ಇತ್ತೆಂಬುದು ಸ್ಪಷ್ಟವಾಯಿತು.

ಅಣ್ಣು ಒಂದಿಷ್ಟೂ ಆಯಾಸವಾಗದಂತೆ ಸೂಡಿ ಬೀಸುತ್ತ, ಹೆಜ್ಜೆ ಹಾಕುತ್ತಿದ್ದ. ನಾವು ಅವನ್ನು ಅನುಸರಿಸುತ್ತಿದ್ದೆವು. ಕಾಡು ಮುಗಿದು ಬಯಲಿನ ಸೆರಗು ಬಂತು. ಒಂದಿಷ್ಟು ಧೈರ್ಯ ಹೆಚ್ಚಿ ಜನ್ನನ ಬಾಯಿಯಿಂದ "ಇನ್ನು ಭಯವಿಲ್ಲ" ಎಂಬ ಮಾತು ಹೊರಟಾಗ ನಾನೆಂದೆ "ಅಷ್ಟು ಪುಕ್ಕನಾಗಿದ್ದರೆ ಉಮೇದಿನಿಂದ ಹೊರಟದ್ದು ಯಾಕೆ ನೀನು?"

"ಸ್ಥಳವನ್ನು ನೋಡುವ ಆಸೆಯಾಗಿ. ಕಾಣಲಿಕ್ಕೆ ಚೆಂದವಾಗಿಯೇ ಇತ್ತು. ಆದರೆ ಅಂಥ ವಿಶೇಷವೇನಿರಲಿಲ್ಲ."

"ವಿಶೇಷವಾಗಿ ಕಾಣಿಸುವುದಕ್ಕೆ ಏನು ಬೇಕಿತ್ತೋ ನಿನಗೆ?"

"ಹಾಗಿದ್ದರೆ ನೀನೇ ಹೇಳು, ಏನು ವಿಶೇಷ ಅಂತ! ಬಂಡೆಗಳ ಎಡೆಯಲ್ಲಿ ಮಾಟೆ ಇರುವುದೊಂದು ವಿಶೇಷವೇ? ಅಲ್ಲಿ ಒಂದಿಷ್ಟು ಬೂದಿ ಸಿಗುವುದು ವಿಶೇಷವೇ? ಯಾವ

ರಾಯನ ಕಾಲದಲ್ಲಿಯೋ, ಯಾರೋ ನಾಲ್ಕು ಮಂದಿ ಅಲ್ಲಿ ಇದ್ದಿರಬಹುದು. ವಾಸವಾಗಿದ್ದರು, ಅಡಿಗೆ ಅಟ್ಟರು, ಬೂದಿ ಚೆಲ್ಲಿದರು. ಆ ಬೂದಿ ಒಂದು ವಿಶೇಷವೇ? ಆ ಬೂದಿಯನ್ನು ಕಂಡೇ ನಮ್ಮೂರ್ರವರು ಋಷಿಗಳು ಗಿಷಿಗಳು ಅಂತ ಒಂದು ಕತೆ ಕಟ್ಟಿದರು."

"ಅಲ್ಲಿ ಬರಿಯ ಬೂದಿ ಇದ್ದದ್ದಲ್ಲ. ಕರಿ ಮಣ್ಣು ಮತ್ತು ಬೂದಿ ಕೂಡಿ ಗಟ್ಟಿಯಾದ ನೆಲವಾಗಿತ್ತು. ಅದರ ಮಣ್ಣಿನಲ್ಲಿ ಏನೇನೋ ವಸ್ತುಗಳು ಸೇರಿಕೊಂಡಿದ್ದುವು."

"ಏನಾಯಿತು ಅದರಿಂದ?"

"ಅದರಿಂದ ಏನೂ ಆಗಲಿಲ್ಲ. ನೀನು ರಸಿಕ. ನಿನಗೆ ಸಾಹಿತ್ಯದ ಕುಂಬಳಕಾಯಿ ಮಾತ್ರ ಚಂದವಾಗಿ ಕಾಣಿಸುವುದು. ಹಿಂದೊಂದು ಕಾಲದಲ್ಲಿ ಆ ಮಾಟೆಗಳಲ್ಲಿ ಜನಗಳು ವಾಸವಾಗಿದ್ದರು- ಎಂದರೆ ಅದು ಯಾವ ವಿಶೇಷದ ಸಂಗತಿಯೂ ಅನಿಸುವುದಿಲ್ಲ."

"ಇಂದಿನ ನಾವು ಇರಬೇಕಾದರೆ, ಹಿಂದೆಯೂ ಜನ ಇದ್ದಿರಬೇಕು."

"ಅಷ್ಟು ಗೊತ್ತಾಗುತ್ತದೆ ನಿನಗೆ. ಆದರೆ ನಿನಗೆ ಸರಿಯಾದ ವಿಶೇಷ ಕಾಣಿಸಬೇಕಾಗಿದ್ದರೆ ಒಂದು ಕಾಡುಹಂದಿಯೋ, ಹುಲಿಯೋ ಅಡ್ಡ ಬರಬೇಕಿತ್ತು."

"ಅಡ್ಡ ಬಂದರೆ ಅಣ್ಣುವಿನ ಕೈಯಲ್ಲಿ ಕೋವಿ ಇತ್ತಲ್ಲ."

"ಚರೆಮದ್ದಿನ ಕೋವಿಯದು; ಮಂಗ ಹೊಡೆಯಲಿಕ್ಕೆ ಆದೀತು."

"ಅಷ್ಟೇಯೇ?"

"ಅಲ್ಲ, ಅಣ್ಣು, ಈ ಅಯ್ಯ ಬರುವ ಸಮಯಕ್ಕೆ ಒಂದು ಕಾಳಿಂಗನ ಹಾವಾದರೂ ಅಡ್ಡ ಬರಬಾರದಿತ್ತೇ" ಎಂದೆ ನಾನು. ನನಗೆ ಅವನ ಮಾತು ಕೇಳಿ ಸಿಟ್ಟೇ ಬಂದಿತ್ತು.

ಆ ಮಾತಿಗೆ ಪೆಚ್ಚಾದ ಜನ್ನ "ನೀನು ಸುಮ್ಮನೆ ಇಲ್ಲದ್ದನ್ನು ಹೇಳಬೇಡ" ಅಂದ.

"ಹೆಸರನ್ನು ಹೇಳಿದ ಕೂಡಲೇ ಅದು ದಾರಿಗೆ ಬರುತ್ತದೆಯೇ!" ಎಂದೆ ನಾನು. ಆ ಮೇಲೆ ಅನಿಸಿತು, ಹಾವಿನ ಹೆಸರನ್ನು ತೆಗೆಯಬಾರದಿತ್ತೆಂದು. ಅವನಲ್ಲಿ ಅದರ ಭಯ ಆಳವಾಗಿ ಬೇರೂರಿತ್ತೆಂಬುದು ಸ್ಪಷ್ಟವಾಯಿತು. ನಾನು ಅದರ ನೆನಪನ್ನು ಮೇಲಿಂದ ಮೇಲೆ ತೆಗೆದರೆ, ಆ ನೆನಪಿನಿಂದಲೇ ಅವನಿಗೆ ರಾತ್ರೆ ಚೆನ್ನಾಗಿ ನಿದ್ರೆ ಹತ್ತಲಾರದೆಂದೂ ಅನಿಸಿತು.

ಮೊದಲು ಜನ್ನನ ಮನೆಯ ತನಕ ಹೋಗಿ ಅವನನ್ನು ಬಿಟ್ಟಾದ ಬಳಿಕ, ನನ್ನ ಮನೆಯ ಕಡೆಗೆ ಹೊರಟೆವು. ನಾವು ಮನೆಯನ್ನು ಸೇರುವಾಗ ಜಾವ ರಾತ್ರಿಯಾಗಿತ್ತು. ನನ್ನ ಮಡದಿ "ಇವರೆಲ್ಲಿಗೆ ಹೇಳದೆ ಹೋದರು?" ಎಂದು ಯೋಚನೆ ಮಾಡುತ್ತ ಕಾದು ಕುಳಿತಿದ್ದರು.

ನಾವು ಮನೆಯನ್ನು ಸೇರುತ್ತಲೇ ಅಣ್ಣು, "ಹಾಗಾದರೆ ನಾವು ಹೊರಡುತ್ತೇವೆ. ಈ ಎರಡು ಸೂಡಿ ಸುಟ್ಟು ಮುಗಿಯಿತು. ನಿಮ್ಮಲ್ಲಿ ಸೋಗೆ ಇದೆಯಲ್ಲ, ಇನ್ನು ಎರಡು ಸೂಡಿ ಮಾಡಿಕೊಳ್ಳುತ್ತೇವೆ" ಎಂದ. ಸೋಗೆಗಳನ್ನು ಅವರೆದುರಿಗೆ ರಾಶಿ ಹಾಕಿದಾಗ ನನ್ನ ಹೆಂಡತಿ "ಅವರೂ ಉಂಡು ಹೋಗಲಿ, ಅನ್ನ ಮಾಡಿದ್ದೇನೆ" ಎಂದಳು.

"ಅವರು ಬರುವುದು ನಿನಗೆ ಹೇಗೆ ಗೊತ್ತು?"

"ತುಂಬ ಕತ್ತಲಾದುದನ್ನು ಕಂಡು ನಾನು ಯೋಚಿಸುತ್ತಾ ಕುಳಿತಿದ್ದೆ. ಅಜ್ಜಮ್ಮ ಬಂದು "ಯಾಕೆ ಯೋಚನೆ ನಿನಗೆ? ಬರುತ್ತಾನೆ, ಮೆಲ್ಲಗೆ" ಎಂದರು. "ಒಬ್ಬರೇ ಇಷ್ಟು ಕತ್ತಲಾದ ಮೇಲೆ ಹೇಗೆ ಬರುತ್ತಾರಪ್ಪ" ಎಂದುದಕ್ಕೆ ಅವರು "ಜತೆಯಲ್ಲಿ ಯಾರಾದರೂ ಇದ್ದಾರು. ಒಬ್ಬನೇ ಬರಲಾರ. ಎಸರಿಗೆ ಒಂದೆರಡು ಮುಷ್ಟಿ ಅಕ್ಕಿ ಹೆಚ್ಚಿಗೆ ಹಾಕು" ಎಂದರು; ಹಾಕಿದೆ.

ಅಜ್ಜಿಯ ಮುಂದಾಲೋಚನೆಯನ್ನು ಕಂಡು ನನಗೆ ಆಶ್ಚರ್ಯವಾಯಿತು. ಅಡುಗೆ ಮಾಡಿದ್ದು ಒಳ್ಳೆಯದೇ ಆಯಿತು. ಅಣ್ಣು ಅವಸರದಲ್ಲಿ ಉಂಡು ಬಂದವನೆಂಬುದರಿಂದ ಹೊಟ್ಟೆ ತುಂಬ ತಿಂದಿರಲಾರನೆನಿಸಿ ಊಟಕ್ಕೆ ಒತ್ತಾಯಿಸಿದೆ. ದಾಕ್ಷಿಣ್ಯದಿಂದ ಅವರು 'ಬೇಡ, ಬೇಡ'ವೆಂದರೂ ಇಬ್ಬರೂ ಚೆನ್ನಾಗಿಯೇ ಊಟ ಮಾಡಿದರು. ಊಟ ಮುಗಿಯುತ್ತಲೇ ವೀಳೆಯ ಕೊಟ್ಟೆ; ತಿಂದರು. ಅವರು ವಹಿಸಿದ ಶ್ರಮಕ್ಕಾಗಿ ಎರಡು ಪಾವಲಿಗಳನ್ನು ನಾನು ಕೊಡುವುದಕ್ಕೆ ಹೋದರೆ 'ದುಡ್ಡು ಬೇಡವೇ ಬೇಡ' ಎಂದರು.

ನಾನು "ಮಹಾರಾಯ, ನನಗೆ ಇನ್ನೊಮ್ಮೆ ಹೋಗಬೇಕು- ಎಂದಿದೆ. ಹೋಗಿ, ಒಂದು ದಿನವೆಲ್ಲ ಅಲ್ಲಿ ಕಳೆಯಬೇಕು, ನೀನೇ ಕರೆದುಕೊಂಡು ಹೋಗಬೇಕು" ಎಂದೆ.

"ಇನ್ನು ಒಂದು ಸಾರಿಯಲ್ಲ ಹತ್ತು ಸಾರಿ ಹೋಗುವ; ಏನಾದರೂ ಬೇಟೆ ಗೀಟೆ ನನಗೂ ಸಿಕ್ಕೀತು. ನನಗೆ ಅದೇ ಕಾಸು. ಇದಕ್ಕೆಲ್ಲ ಕಾಸನ್ನು ತೆಗೆದುಕೊಳ್ಳುವುದೇ? ಈ ಸಾರಿ ಹೋದುದಕ್ಕೆ ತುಂಬ ಜೇನುತಟ್ಟಿಗಳನ್ನು ಕಂಡೆ. ಇನ್ನೊಂದು ಸಾರಿ ಹೋದರೆ, ಹೊಗೆಹಾಕಿ, ನೊಣ ಓಡಿಸಿ, ಒಂದು ಹಾಡ ಜೇನನ್ನು ಹಿಡಿದು ತಂದೇನು."

"ನೀನಾಗಿ ಹೋಗುವ ಹಾಗಿದ್ದರೆ ಮತ್ತಷ್ಟು ಪಸಂದವಾಯಿತು. ಬಂದು ಹೇಳು; ತಕ್ಷಣ ಹೊರಡುತ್ತೇನೆ."

"ಆಗಲಿ, ಆದರೆ ಅಯ್ಯಾ, ಆ ಇನ್ನೊಬ್ಬರು ಒಡೆಯರು ಬೇಡ. ಅವರು ದಾರಿ ನಡೆಯುವುದಕ್ಕೆ ಹಿಂದೆಯೇ. ಅಲ್ಲದೆ ಭಾರೀ ಪುಕ್ಕಲು ಜನ. ಅಷ್ಟು ಪುಕ್ಕಿನವರು ಯಾಕೆ ಬಂದರಪ್ಪ-ಎನಿಸಿತು ನನಗೆ. ಕಾಡು ಕಾಡೇ. ಒಂದು ಹಂದಿಯೋ, ಕಾಟಿಯೋ, ಹೆಬ್ಬಾವೋ, ಕಾಳಿಂಗನೋ, ಬರಬಾರದಂತ ಉಂಟೇ? ಬಂದಾಗ ಪುಕ್ಕಲು ಕಟ್ಟಿ ಓಡಿದರೇನು ಗತಿ? ಎಲ್ಲಿ ಅಂತ ಅವರನ್ನು ಹುಡುಕುವುದು?"

"ಅವರು ಹುಟ್ಟಿದ್ದು ನಮ್ಮೂರ್ರಲ್ಲಾದರೂ ಬೆಳೆದದ್ದು ಪೇಟೆಯಲ್ಲಿ. ಒಂದಿಷ್ಟೂ ಧೈರ್ಯವಿರುವ ಜನವಲ್ಲ. ಒಂದು ಸಾರಿ ನೋಡಿದ್ದಾಯಿತು. ಇನ್ನು ನಾನು ಕರೆದರೂ ಅವನು ಬರುವವನಲ್ಲ."

ಅಂತೂ ಅವರನ್ನು ಬೀಳ್ಕೊಟ್ಟೆ. ಅಜ್ಜಿಯೂ ನನ್ನ ಮಕ್ಕಳೂ ಹಾಸಿಗೆ ಹಿಡಿದು ಬಹಳ ಹೊತ್ತಾಗಿತ್ತು. ನನಗೆ ಸಾಕಷ್ಟು ದಣಿವಾಗಿದ್ದುದರಿಂದ ಚಾವಡಿಯಲ್ಲಿ ಚಾಪೆಯನ್ನು ಬಿಡಿಸಿ ಮಲಗಿಕೊಂಡೆ. ರಾತ್ರಿ ಗಾಢನಿದ್ರೆ ಬಂದೀತೆಂದು ಮಲಗಿದರೆ ಕಣ್ಣು ಒಂದಿಷ್ಟೂ ಬಾಡಲಿಲ್ಲ. ಮಗ್ಗುಲು ಮಗುಚಿ ಎಷ್ಟು ಹೊರಳಾಡಿದರೂ ನಿದ್ರೆ ಊಹೂಂ. ಅಂಗಾತ ಮಲಗಿದೆ, ಕವುಚಿ ಮಲಗಿದೆ. ನನ್ನ ತಲೆಯಲ್ಲಿ ಒಂದೇ ಸಮನೆ ಪ್ರಯಾಣದ ನೆನಪು ಬರತೊಡಗಿದುದರಿಂದ ನಿದ್ರೆ ಬಲು ದೂರಕ್ಕೆ ಉಳಿಯಿತು. ಬರೆಯನ್ನು ಸಮೀಪಿಸಿದಾಗ ಕಂಡ ನೀರಿನ ತೋಡು, ಜವುಗು, ಅಲ್ಲಿ ಬೆಳೆದ ದೆವ್ವದಂಥ ಮರಗಳು, ಗುಹೆಗಳು-ಒಂದರ ಬಳಿಕ ಒಂದಾಗಿ ಬರತೊಡಗಿದವು. ಮೊದಲಿನ ಗುಹೆಯನ್ನು ಹೊಕ್ಕು ನೋಡತೊಡಗಿದೆ. ಗೋಡೆಯನ್ನು ಸವರಿದೆ, ಬರಿದಾದ ಆ ತಾವಿನಲ್ಲಿ ಜನರು ತುಂಬಿದ ಹಾಗೆ ಕಾಣಿಸಿತು. ಚರಿತ್ರೆಯಲ್ಲಿ ಪುರಾತನ ಬೌದ್ಧ ಗುಹಾಲಯಗಳನ್ನು ಓದಿದ ನೆನಪಿನಿಂದಲೋ ಏನೋ, ನನಗೆ ಆ ಗುಹೆಯಲ್ಲಿ ಬುದ್ಧ ಕಾಣಿಸಿದ. ಸುತ್ತ ಕುಳಿತ ಭಿಕ್ಷುಗಳಿಗೆ ಉಪದೇಶ ಮಾಡುತ್ತಿದ್ದ. 'ಸಂಘಂ ಗಚ್ಛಾಮಿ, ಶರಣಂ ಗಚ್ಛಾಮಿ' ಎಂಬ ಘೋಷಗಳೂ ಕೇಳಿಸಿದುವು.

ಆ ಚಿತ್ರ ಸರಿಯಿತು; ಮತ್ತೊಂದು ಗುಹೆಗೆ ಬಂದು ನಿಂತೆ. ನಾನು ಒಂಟಿಯಾಗಿದ್ದೆ. ಗುಹೆಯ ಇದಿರು ಮೂರಾಳು ತಗ್ಗಿನ ಜಾಗದಲ್ಲಿ ಒಂದು ಪಟ್ಟೆ ಹುಲಿ ಕಾಣಿಸಿತು. ನನ್ನನ್ನು ನೋಡಿ ಘರ್ಜಿಸಿತು. ಗುಹೆಗೆ ಬರುವ ದಾರಿ ಅದಕ್ಕೆ ತಿಳಿಯದ್ದರಿಂದ ಅದು ಅಲ್ಲಿಂದಲೇ ಘರ್ಜಿಸುತ್ತಿತ್ತು. ಮತ್ತೊಂದು ಕ್ಷಣಕ್ಕೆ ಅಡ್ಡ ತಿರುಗಿ ಅದು ನಾನು ಬಂದ ಬಂಡೆಯ ಏಣಿನ ಮೇಲೆ ತೆವಳಿ, ತೆವಳಿ ಎಚ್ಚರದಿಂದ ನಡೆದು ಬರಬೇಕೇ? ಅದರ ವಾಸನೆ ನನ್ನ ಮೂಗಿಗೆ ಹೊಡೆದಾಗಲೇ ನನಗೆ ಗೊತ್ತಾದದ್ದು. 'ಇಲ್ಲಿಗೂ ಬಂತಲ್ಲ ದರಿದ್ರ ಹುಲಿ' ಎಂದು ಚೀತ್ಕರಿಸಿದೆ. ಎದುರಿಗೆ ಒಂದು ಮರದ ಗುದಿಗೆ ಬಿದ್ದಿತ್ತು. ಅದರ ತುದಿಗೆ ಬೀಳಲುಗಳಿಂದ ಕಲ್ಲೊಂದನ್ನು ಕಟ್ಟಿ ಗದೆಯಂತೆ ಮಾಡಿದ್ದರು. ನಾನು ಧೈರ್ಯದಿಂದ ಅದನ್ನು ಎತ್ತಿಕೊಂಡೆ. ಇನ್ನೇನು! ಹುಲಿ ನನ್ನ ಮೇಲೆ ಜಿಗಿಯುತ್ತದೆ- ಎಂಬಾಗ, ಗದೆ ಬೀಸಿ ಅದರ ಹಣೆಗೊಂದು ಏಟು ಹಾಕಿದೆ. ಧೊಪ್ಪನೆ ಮೂರು ಆಳು ಕೆಳಕ್ಕೆ ಬಿತ್ತು ಆ ಹುಲಿ. ಹುಲಿಯೇನೋ ಕೆಳಕ್ಕೆ ಬಿತ್ತು. ದೆವ್ವದಂತಹ ಜೀವ. ನನ್ನ ಏಟಿಗೆ ಸಾಯದೆಯೇ ಇನ್ನೊಮ್ಮೆ ಜಿಗಿದರೆ ಗತಿಯೇನು- ಎಂಬ ಭಯವಾಯಿತು. ಹಾಗಾಗಲಿಲ್ಲ. ಅದು ಮೇಲುಸಿರು ಎಳೆಯುತ್ತಿತ್ತು. ಮತ್ತೆರಡು ನಿಮಿಷಗಳಲ್ಲೇ ಸತ್ತೇ ಹೋಯಿತು. ನನ್ನ ಹೋದ ಉಸಿರು ಬಂದಿತು. ಹಸಿವೆಯಾಗತೊಡಗಿತು. ಆಚೀಚೆ ಹಣಕಿ ನೋಡಿದೆ. ಯಾರೋ

ಗಡ್ಡೆಗೆಣಸುಗಳನ್ನು ರಾಶಿ ಹಾಕಿದ್ದರು. ಒಂದು ಚಕಮಕಿ ಕಲ್ಲನ್ನು ಬಡಿದು, ಮರದ ಬೆಂಡಿನ ಚೂರಿನ ಹತ್ತಿರಕ್ಕೆ ಹಿಡಿದು, ಕಿಚ್ಚು ಕೊಟ್ಟೆ. ಅದರ ಮೇಲೆ ಕಟ್ಟಿಗೆ ಒಟ್ಟಿದೆ. ಅಷ್ಟೂ ಗಡ್ಡೆ ಗೆಣಸುಗಳನ್ನು ಸುಟ್ಟು ಒಂದೊಂದಾಗಿ ತೆಗೆದು, ಸಿಪ್ಪೆ ಸುಲಿದು ತಿಂದೆ. ಆ ರುಚಿ ಯಾವ ಭೋಜನಕ್ಕೂ ಬರಲಾರದು.

ನನ್ನ ಭೋಜನ ನಡೆಯುತ್ತಲೇ ಇತ್ತು. ನಾನು ಕುಳಿತ ಗುಹೆಯ ಹಿಂದಣ ಸೆರೆಯಿಂದ ಹತ್ತಾರು ಮಂದಿ ಕಾಡುಮನುಷ್ಯರು, ಒಬ್ಬರ ಹಿಂದೆ ಒಬ್ಬರು ಬರತೊಡಗಿದರು. ಎಂತಹ ಅಸಹ್ಯಾಕಾರದ ಜನಗಳು! ಗಂಡಸರೊಬ್ಬರಿಗೂ ಕ್ಷೌರವಿಲ್ಲ. ಅವರು ಸ್ನಾನ ಮಾಡಿದ್ದು ಯಾವ ರಾಯನ ಕಾಲದಲ್ಲೋ! ಆ ಗಂಡಸರೂ, ಹೆಂಗಸರೂ ನನ್ನನ್ನು ಸುತ್ತುವರಿದರು. ಅವರ ಮೈಮೇಲೆ ಬಟ್ಟೆಯ ಮಾತಂತಿರಲಿ, ಉಡಿದಾರಕ್ಕೂ ಗತಿಯಿರಲಿಲ್ಲ. ಅವರು ಬಿರುಗಣ್ಣುಗಳಿಂದ ನನ್ನನ್ನು ನೋಡುವಾಗ ನನಗೆ ಭಯವಾಯಿತು. ಅವರು ಕೂಡಿಟ್ಟ ಗಡ್ಡೆ ಗೆಣಸುಗಳನ್ನು ನಾನು ತಿಂದೆ; ಅವರೀಗ ನನ್ನನ್ನು ತಿಂದು ಮುಗಿಸುತ್ತಾರೆ- ಎನಿಸಿತು. ಭಯದಿಂದ ನನ್ನ ಕಾಲುಗಳು ಥರಥರ ನಡುಗತೊಡಗಿದವು. ಕೈಗಳಿಂದ ಅವನ್ನು ಒತ್ತಿ ಹಿಡಿದರೂ ನಡುಕ ಬಿಡಲೊಲ್ಲದು. ಅವರು ತಮ್ಮೊಳಗೆ ಏನೇನೋ ಮಾತಾಡತೊಡಗಿದರು. ನನ್ನ ಭಯ ಹೆಚ್ಚಿತು. ಇನ್ನು ನನ್ನನ್ನು ಕಟ್ಟಿಹಾಕುತ್ತಾರೆ, ನಾನೊಬ್ಬನೇ ಏತಕ್ಕೆ ಬಂದೆ ಎನಿಸಿದಾಗ, ಸ್ನೇಹಿತ ಜನ್ನ ಜತೆಗೆ ಬಂದ ನೆನಪಾಯಿತು. ಕೂಡಲೇ 'ಜನ್ನ, ಜನ್ನ' ಎಂದು ಕಿರುಚಿದೆ.

ಅವರು ಬಿಟ್ಟಾರೆಯೇ? ಮೈಮೇಲೆಯೇ ಬಿದ್ದಾರು. ಮುಗಿಯಿತು ನನ್ನ ಕತೆ- ಎಂದುಕೊಂಡೆ. ಅವರೋ! ಒಬ್ಬೊಬ್ಬರಾಗಿ ನನ್ನನ್ನು ಹಿಡಿದು ನನ್ನ ಹಣೆಗೆ ಒಂದೊಂದು ಮುತ್ತನ್ನು ಕೊಟ್ಟಾಗ 'ಇಶ್ಶೀ' ಅನಿಸಿತು. ಅಷ್ಟರಲ್ಲಿ ಅವರ ಯಜಮಾನ ಬಂದ. ಎಂಥ ದೈತ್ಯ ಆಳು! ಅವನ ಬೆನ್ನಿನ ಮೇಲೆ ಹುಲಿಯ ಹಸಿಯ ಚರ್ಮವೊಂದು ತೂಗುತ್ತಿತ್ತು. ಅವನನ್ನು ಕಂಡೊಡನೆಯೇ ನನ್ನನ್ನು ಸುತ್ತುವರಿದ ಜನರ ಗುಂಪು ಚದರಿತು. ಅವನು ಬಂದುದರಿಂದ ನಾನು ಪಾರಾದೆ-ಎನಿಸಿತು. 'ನನ್ನನ್ನು ಕಾಪಾಡು'- ಎಂದು ಅವನನ್ನು ಬೇಡಿದೆ. ಅವನು ಅಪ್ಪಟ ಇಂಗ್ಲೀಷಿನಲ್ಲಿ 'no fear; these are my people' ಅಂದ. ಆಗ ಮಾತ್ರ ನನಗೆ ನನ್ನ ಕತೆ ಮುಗಿಯಿತು- ಎಂದೇ ಭಾಸವಾಯಿತು. ನನ್ನನ್ನು ನರಬಲಿ ಕೊಡುತ್ತಾರೆ ಎಂಬುದಾಗಿ ತೋರಿತು. ಆ ಯಜಮಾನ ಬೆನ್ನನ್ನು ತಿರುಗಿಸಿದ. ಅವನು ತೊಟ್ಟ ಹುಲಿಯ ಚರ್ಮದಿಂದ ಇನ್ನೂ ನೆತ್ತರು ಸುರಿಯುತ್ತಿತ್ತು. ಆತ ನನ್ನನ್ನು ಕಂಡು, ಹುಲಿಯ ಚರ್ಮ ತೋರಿಸಿ 'ಈ ಕಾಣಿಕೆಯಿಂದ ನನಗೆ ತೃಪ್ತಿಯಾಯಿತು. ಈ ಹುಲಿ ನಮ್ಮನ್ನು ಬಹಳ ಕಾಲದಿಂದಲೂ ಪೀಡಿಸುತ್ತಿತ್ತು. ನೀನು ಅದನ್ನು ಬರಿಗೈಯಿಂದಲೇ ಕೊಂದುಬಿಟ್ಟೆ' ಎಂದಂದು, ನನ್ನ ಕೈಯ ಮೇಲೆ ಒಂದು ಕೊಂಬಿನ ಚೂರನ್ನು ಇರಿಸಿದ.

ಅದು ಯಾವ ಕೊಂಬೆನ್ನುತ್ತೀರಿ? ಅದೇ ಸಂಜೆ ನಾನು ಆ ಗವಿಯಲ್ಲಿ ಸಂಪಾದಿಸಿದ ಜಿಂಕೆಯ ಕವಲುಗೊಂಬಿನ ತುಣುಕು. ಆತ ಅದನ್ನು ಕೊಡುತ್ತ "ಇದನ್ನು ಹಿಡಿದುಕೋ; ಅದರ ಮೂಲಕ ನನ್ನ ಶಕ್ತಿಯೆಲ್ಲವೂ ನಿನಗೆ ಬರುತ್ತದೆ" ಎಂದ.

"ಆಗ ನಿನಗೆ?" ಎಂದೆ ನಾನು, ಅವನ ಔದಾರ್ಯವನ್ನು ನೋಡಿ.

"ನನಗೆ ಈಗ ಈ ಹುಲಿಯ ಶಕ್ತಿ ಬಂದಿತಲ್ಲ. ನೀನು ಕೊಂದ ಹುಲಿಯ ಶಕ್ತಿ ನನಗೆ; ನಾನು ಹಿಡಿದ ಈ ಕೊಂಬಿನ ಶಕ್ತಿ ನಿನಗೆ. ಅದು ಸಾಮಾನ್ಯ ಕೊಂಬೆಂದು ತಿಳಿಯಬೇಡ; ನನ್ನ ಮಂತ್ರಶಕ್ತಿಯೂ ಅದಕ್ಕಿದೆ" ಹೀಗೆಂದು ಹೇಳಿ ನನ್ನ ಕಿವಿಯಲ್ಲಿ ಏನೇನೋ ಮಂತ್ರ ಉಚ್ಚರಿಸಿದ. ನಾನು ಅದನ್ನೇ ಪಠಿಸುತ್ತ, ತಪಸ್ಸು ಮಾಡುತ್ತ ಅಲ್ಲಿಯೇ ಕುಳಿತೆ. ಎಷ್ಟು ಕಾಲ ಹಾಗೆ ಜಪ ಮಾಡುತ್ತ ಕುಳಿತಿದ್ದೆನೋ ನನಗೇ ತಿಳಿಯದು.

"ಬಿಸಿಲು ಬಿದ್ದಾಯಿತು; ಏಳಬಾರದೇ?" ಎಂದಳು ನನ್ನ ಸೀತೆ. "ನಡೆದು, ನಡೆದು ಆಯಾಸವಾಗಿತ್ತು ಎಂದು ಕಾಣುತ್ತದೆ. ಇಷ್ಟರ ತನಕವೂ ನೀವು ಇಷ್ಟು ಹೊತ್ತು ಮಲಗಿದವರಲ್ಲ" ಎಂದಳು.

"ಇಡೀ ರಾತ್ರಿ ಒಂದು ಚೂರು ನಿದ್ರೆ ಹತ್ತಲಿಲ್ಲ ನನಗೆ, ಮಹಾರಾಯಿತಿ" ಎಂದೆ ನಾನು!

# ಅಧ್ಯಾಯ 4

ನಾನು ನನ್ನ ನಿದ್ದೆಯಲ್ಲದ ದೀರ್ಘ ನಿದ್ದೆಗಾಗಿ ನನ್ನ ಹೆಂಡತಿಯಿಂದ ಪರಿಹಾಸ್ಯ ಮಾಡಿಸಿಕೊಂಡು, ಹಾಸಿಗೆಯನ್ನು ಸುರುಳಿಸುತ್ತಿ ಒಳಕೋಣೆಯಲ್ಲಿ ಇರಿಸಿ, ಮುಖಮಜ್ಜನಕ್ಕೆ ಹೊರಟೆ. ಮುಖವನ್ನು ತೊಳೆದಾಯಿತು. ಆದರೂ ಇನ್ನೂ ಕನಸು ಬೀಳುವಂತೆಯೇ ಇತ್ತು. ಚೆನ್ನಾಗಿ ನಾಲ್ಕು ಬಿಂದಿಗೆ ತಣ್ಣೀರನ್ನು ತಲೆಯ ಮೇಲೆ ಸುರಿದುಕೊಂಡರೆ ನಿದ್ದೆ ಬಿಟ್ಟೀತೆಂದು ತೋರಿ ಬಾವಿಕಟ್ಟೆಯ ಕಡೆಗೆ ಸರಿದೆ. ಅಷ್ಟಕ್ಕೆ, ಹಿಂದಿನ ಸಂಜೆ ಹೊತ್ತು ತಂದ ಸರಂಜಾಮುಗಳ ವಿಚಾರ ನೆನಪಾಯಿತು. ನನ್ನ ಅವಸರದಲ್ಲಿ ಏನೇನನ್ನೆಲ್ಲ ಹೆಕ್ಕಿ ತಂದಿದ್ದೆ. ಮಣ್ಣು, ಬೂದಿ ಅಂಟಿಕೊಂಡಿದ್ದ ಅವನ್ನು ತೊಳೆದು ಚೊಕ್ಕ ಮಾಡುವ ತನಕ- ನನಗೆ ಸಿಕ್ಕದ್ದೇನು- ಎಂಬುದರ ಅರಿವೂ ಇರಲಿಲ್ಲ. ನಾನೊಬ್ಬ ಪ್ರಾಚ್ಯ ಸಂಶೋಧಕನೆಂಬ ಭ್ರಮೆ ನನಗೆ ಅಂಟಿತ್ತು. ಒಮ್ಮೆ ತಂದ ಆ ವಸ್ತುಗಳನ್ನು ತೊಳೆದು ನೋಡುತ್ತೇನೆ ಎಂದು ತರಲು ಹೊರಟೆ. ನನ್ನ ಅಂಗಿ ಮತ್ತು ಗಂಟುಗಳನ್ನು ಹಿಂದಣ ರಾತ್ರಿ ಅಜ್ಜಿ ಮಲಗಿದ ಕೋಣೆಯಲ್ಲಿ ಏತಕ್ಕೆ ತಂದಿರಿಸಿದೆನು ಎಂಬುದು ನನಗೆ ತಿಳಿಯದ ವಿಷಯವಾಗಿತ್ತು. ನನಗೇ ತಿಳಿಯದ ವಿಚಾರವಾಗಿತ್ತು. ಮತ್ತೇಕಲ್ಲ ಭಯ- ಅಣ್ಣು ಹೇಳಿದ ಯಾವುದೋ ಪ್ರಾಣಿಯ ಎಲುಬಿನ ಚೂರಿತ್ತು ಅದರಲ್ಲಿ. ಮನೆಯೊಳಕ್ಕೆ ಯಾರಾದರೂ ಎಲುಬಿನ ಚೂರನ್ನು ಒಯ್ದಿರಿಸುತ್ತಾರೆಯೇ- ಎನಿಸಿತು.

ಸರಿ, ಗಂಟನ್ನು ತಂದು ಬಾವಿಕಟ್ಟೆಯಲ್ಲಿ ಕುಳಿತು, ಒಂದು ಬೋಗಣಿ ನೀರನ್ನು ಸುರಿದು ಅವನ್ನೆಲ್ಲ ಸುರುವಿದೆ. ದೊದಲು ಕೈಗೆ ಬಂದದ್ದು ಜಿಂಕೆ ಕೊಂಬು. ಅದನ್ನು ಬೆಳ್ಳಗೆ ಮಾಡುವ ಆಸೆ ನನ್ನದು. ಬೆಳ್ಳಗಾಗುತ್ತದೆಯೇ ಜಿಂಕೆಯ ಕೊಂಬು? ಅದರ ಕೊಳೆಯಂತೂ ಬಿಟ್ಟಿತು. ಅದರ ಒಂದು ಕುಡಿಯನ್ನು ಬಂಡೆಗೆ ಅರಚಿ, ಅರಚಿ ನಯಮಾಡಿದ್ದು ಕಾಣಿಸಿತು. ಆ ನಯವಾದ ಭಾಗದಲ್ಲಿ ಗೆರೆ, ಗೀಚು, ಸೊನ್ನೆಗಳಂಥ ಸಂಕೇತಗಳಿದ್ದವು. ಅವನ್ನು ಕಂಡು ಸ್ವಪ್ನದ ನೆನಪಾಯಿತು. ಹುಲಿಯ ಚರ್ಮ ತೊಟ್ಟು ಬಂದ ಆ ಒಬ್ಬ ಪುರಾತನ ಕಾಡುಮನುಷ್ಯ ಅದಕ್ಕೆ ಅದ್ಭುತ ಶಕ್ತಿ ಇದೆ- ಎಂದ ನೆನಪಾಯಿತು. 'ನೋಡುವ, ನಾಲ್ಕು ದಿನ ಅದನ್ನು ಸೊಂಟಕ್ಕೆ ಸಿಕ್ಕಿಸಿಕೊಂಡು ತಿರುಗಾಡಿದರೆ ಏನೆಲ್ಲ ಕಾಣಿಸುತ್ತದೆ' ಎಂಬ ಚಪಲ ಮೂಡಿತು.

ಇನ್ನೂ ಹತ್ತೆಂಟು ಚೂರುಗಳಿವೆಯಲ್ಲ, ಅವನ್ನು ತಿಕ್ಕಿ ತೊಳೆಯತೊಡಗಿದೆ. ಒಂದು ಬೆಣಚುಕಲ್ಲಿನ ಚೂರನ್ನು ಮಚ್ಚಿನ ಬಾಯಿಯಂತೆ ರೂಪಿಸಿದ್ದು ಕಾಣಿಸಿತು. ಅದು ಕಲ್ಲಿನ

ಮಚ್ಚು ಇರಬಹುದು. ಒಂದಿಷ್ಟು ಚರಿತ್ರೆ ಓದಿದ್ದೆನಲ್ಲ ಹಿಂದೆ; ಶಿಲಾಯುಗದ ನೆನಪು ಬಂತು. ಒಂದೊಂದೇ ಕಲ್ಲಿನ ಚೂರುಗಳನ್ನು ತೆಗೆದು, ತೊಳೆದು ನೋಡಿ-ಇದು ಕೊಂಬಿನ ಅಲಗು, ಇದು ಕತ್ತಿಯ ಬಾಯಿ, ಕತ್ತಿ ಅಲ್ಲ ಚೂರಿ-ಎಂದು ನನ್ನ ಬುದ್ಧಿಗೆ ತೋಚಿದಂತೆ ನಿಶ್ಚಯಿಸಿದೆ. ಮತ್ತೂ ನಾಲ್ಕಾರು ಚೂರುಗಳಿದ್ದವು. ಅವು ಕೊಂಬಿನವೋ ಎಲುಬಿನವೋ! ತಿಕ್ಕಿ, ತಿಕ್ಕಿ ಕಡ್ಡಿಗಳ ಹಾಗೆ ಮಾಡಿ, ಸರ ಮಾಡಲು ಬಳಸಿದ್ದಿರಬೇಕು. ಅಷ್ಟೇ ಅಲ್ಲ, ಕವಡೆ, ಕಡೆಗೋಲು, ದಾರೆಚಿಪ್ಪುಗಳಂಥ ಕಡಲ ಚಿಪ್ಪುಗಳೂ ಇದ್ದುವು. ಅವಕ್ಕೆಲ್ಲ ತೂತಿದ್ದುದನ್ನು ಕಂಡು ಅವನ್ನು ಒಂದು ಸಾಲಾಗಿ ಇರಿಸಿದೆ; ಹಗ್ಗ ಒಂದಿದ್ದರೆ ಅವಿಷ್ಟು ಕೂಡಿ ಒಂದು ಕೊರಳಿನ ಸರ ಆಗುತ್ತಿತ್ತು- ಎಂದುಕೊಂಡೆ. ಇನ್ನುಳಿದುದು ಒಂದು ಚೂರು ದೊಡ್ಡ ಎಲುಬಿನ ತುಣುಕು. ಅದನ್ನು ತೊಳೆಯುವಷ್ಟರಲ್ಲಿ ನನ್ನೆರಡು ಮಕ್ಕಳೂ ಅಲ್ಲಿಗೆ ಓಡಿಬಂದು "ಅಪ್ಪ, ಅಪ್ಪಾ ಎಂಥದು ಅದೆಲ್ಲ?" ಎಂದು ಪ್ರಶ್ನಿಸತೊಡಗುತ್ತಲೇ, "ಹೋಗಿ ನೀವೆಲ್ಲ, ಇಲ್ಲಿಗೆ ಯಾಕೆ ಬಂದಿರಿ?" ಎಂದು ಗದರಿಸಿದೆ. ಆ ಚೂರುಪಾರುಗಳನ್ನು ಅಲ್ಲಿಯೇ ಅಡಗಿಸಲು ಪ್ರಯತ್ನಿಸಿದೆ. ಅವು ಹಟ ಬಿಡದಿದ್ದನ್ನು ಕಂಡಾಗ ಸೀತೆಯನ್ನು ಕರೆದು "ಈ ಮಕ್ಕಳನ್ನು ಆಚೆಗೆ ಕರೆದುಕೊಂಡು ಹೋಗು" ಎಂದು ಕೂಗಿದೆ. ಅವಳೇ ಬಂದಳು. ಅವಳ ಕಣ್ಣಿಗೆ ಅವೆಲ್ಲ ಬಿದ್ದ ಮೇಲೆ ಸುಮ್ಮನಿರುತ್ತಾಳೆಯೇ? "ನಿನ್ನೆ ಘಟ್ಟದ ಬರೆಗೆ ಹೋದವನಿಗೆ ಇದೆಲ್ಲ ಸಿಕ್ಕಿತು. ಎಂಥದು, ಏನು ಎಂದು ನೋಡುವುದಕ್ಕೂ ಈ ಮಕ್ಕಳು ಬಿಡುವುದಿಲ್ಲ" ಎಂದೆ.

ಅವಳ ಕಣ್ಣು ನನ್ನ ಪಾದದ ಕೆಳಗೆ ಅಡಗಿಸಿಟ್ಟ ಆ ಎಲುಬಿನ ಕಡೆಗೆ ಹಾಯಬೇಕೆ? "ಅಂದೆಂಥದನ್ನು ನೀವು ಮೆಟ್ಟಿಕೊಂಡಿದ್ದೀರಿ? ಎಲುಬಿನ ಚೂರೇ?" ಎಂದಳು ಅವಳು.

"ಹೋಗಾಚೆ. ನೀನು ಇನ್ನೊಂದು ಮಗು; ಎಲುಬು, ಮತ್ತೊಂದು. ಮಕ್ಕಳನ್ನು ಕರೆದುಕೊಂಡು ಹೋಗು; ನಿನ್ನದೊಂದು ಅಧಿಕಪ್ರಸಂಗ, ತನಿಖೆ ಮಾಡಲಿಕ್ಕೆ ಶುರುಮಾಡಿದೆ. ನಿನಗೇನು ತಿಳಿಯುತ್ತದೆ ಅಂತ ಬೇಡವೇ?" ಎಂದೆ. ಅವಳಿಗೆ ಬೇಸರವಾಯಿತೋ ಏನೋ. ನನ್ನ ಕಿಟ್ಟಣ್ಣನನ್ನೂ, ಚಂದ್ರನನ್ನೂ ಸಮೀಪಕ್ಕೆ ಕರೆದು "ಬನ್ನಿ ಮಕ್ಕಳೇ, ಅವರಿಗೆ ಇನ್ನೊಂದು ಮಕ್ಕಳಾಟಿಕೆ ಬಂದಿದೆ. ಆಟದ ಸಾಮಾನು ಹಿಡಿದುಕೊಂಡಿದ್ದಾರೆ. ಕುಬೇರನ ಮನೆಯಿಂದ ತಂದ ವಜ್ರ, ವೈಢೂರ್ಯದ ಹಾಗಿದೆ" ಎಂದು ಅವನ್ನು ಎಳೆದುಕೊಂಡೇ ಹೋದಳು. ಅವು ತಮ್ಮ ಸ್ವಭಾವಕ್ಕೆ ಸರಿಯಾಗಿ ರಾಗ ಮಾಡುತ್ತ ನಡೆದುವು.

ನಾನು ಅವಸರದಲ್ಲಿ ಆ ಕೆಲಸವನ್ನು ಮುಗಿಸಿ ಒಂದು ಬುಟ್ಟಿಯನ್ನು ಹುಡುಕಿ ತಂದು, ಅವನ್ನು ತುಂಬಿಸಿ ಚಪ್ಪರದ ಸಂದಿನಲ್ಲಿ ತುರುಕಿಸಿ, ಸ್ನಾನಕ್ಕಿಳಿದೆ. ಆ ದಿನ ತಲೆಯ ಮೇಲೆ ಸುರಿದುಕೊಂಡ ತಣ್ಣೀರು ಎಷ್ಟೆಂಬುದಕ್ಕಿಲ್ಲ. ಸ್ನಾನವಾಯಿತು; ದೇವರ ಕೋಣೆಗೆ ಹೋದೆ. ಪೂಜೆಯ ಶಾಸ್ತ್ರ ತೊಡಗಿದೆ. ನನ್ನ ಬಾಯಿಯಿಂದ ಹೊರಟ ಮಂತ್ರ, ಜಪಗಳು ಹತ್ತಿರ

ನೆರೆಮನೆಯಿದ್ದರೆ ಅಲ್ಲಿನ ಜನಕ್ಕೂ ಕೇಳಿಸಬೇಕು. ಅಂತೂ ದೇವರದ್ದೊಂದು ಬಿಟ್ಟಿ ಸಲ್ಲಿಸಿ, ಈಚೆಗೆ ಬಂದೆ. ಅಷ್ಟಕ್ಕೆ ಸೀತೆ ಒಂದಿಷ್ಟು ಅವಲಕ್ಕಿ, ದೊಸರನ್ನು ತಂದುಕೊಟ್ಟಳು. ತಿಂದೆ; ಹೊಟ್ಟೆ ಗಟ್ಟಿಯಾಯಿತು. "ಇವತ್ತು ಇನ್ನೇನು ಮಾಡಲಿಕ್ಕಿದೆ? ಮನೆಯ ಕೆಲಸ ಯಾವುದೆಲ್ಲ ಬಾಕಿ" ಎಂದು ಯೋಚಿಸಿದೆ. ಅಂದರೆ ಇಷ್ಟೇ ಸಂಗತಿ- ನಿತ್ಯದ ಕೆಲಸ ಮಾಡುವುದಕ್ಕೆ ನೆನಪು ಬೇಕಿಲ್ಲವಾದರೂ, ಹಿಂದಣ ದಿನದ ಪಯಣದಿಂದಾಗಿಯೂ, ರಾತ್ರಿಯ ನಿದ್ರಾಭಂಗದಿಂದಾಗಿಯೂ ನನ್ನ ಬುದ್ಧಿಗೆ ಚುರುಕು ಸಾಲದಾಗಿತ್ತು.

'ಜನ್ನನ ಮನೆಗೆ ಯಾತಕ್ಕೆ ಹೋಗಿ ಬರಬಾರದು?' ಎನಿಸಿತು. ಅವನು ನಡೆದು, ನಡೆದು ಕಾಲುನೋವಿನಿಂದ ಕುಂಟುತ್ತಿರಬಹುದು. ಒಂದಿಷ್ಟು ಚೇಷ್ಟೆಯನ್ನಾದರೂ ಮಾಡಿ ಬರಬಹುದೆನಿಸಿತು. ಅಷ್ಟರಲ್ಲಿ, ಅವನ ಅಭಿರುಚಿಗಳನ್ನು ಕುರಿತ ನೆನಪು ಬಂದಿತು. ಘಟ್ಟದ ಬರೆಯ ತನಕ ನನ್ನೊಡನೆ ನಡೆದುಬಂದ ಆ ಆಸಾಮಿ, ಗುಹೆಗಳನ್ನು ಕಂಡಾಗ ಒಂದೆರಡು ಬಾರಿ ಬಾಯಿ ಬಿಟ್ಟದ್ದು ನಿಜವಾದರೂ, ನಾನು ನೆಲವನ್ನು ಅಗೆಯುತ್ತಿದ್ದಾಗ, ಧಡೆಯನ ಹಾಗೆ ಕುಳಿತೇ ಇದ್ದ. ಸಹಾಯಕ್ಕೆ ಬರಲಿಲ್ಲ. ಅಲ್ಲಿ ಪುರಾತನ ಕಾಲದ ಜನರು ವಾಸ ಮಾಡುತ್ತಿದ್ದಿರಬಹುದು- ಎಂದರೂ ಕುತೂಹಲ ತಾಳಲಿಲ್ಲ. ಅದನ್ನು ನೆನೆದು ನನಗೇ ನಗು ಬಂದಿತು. "ಇಲ್ಲ, ಬೇಕಾದರೆ ಅವನೇ ಬರಲಿ, ನಮ್ಮ ಮನೆಗೆ ಬರಲಾರ. ಕಾಲುನೋವಿನಿಂದ ತನ್ನ ಮನೆಯಲ್ಲೇ ಬಿದ್ದುಕೊಂಡಿದ್ದಾನು ದಿನವೆಲ್ಲ. ಅವನಿಗೆ ಅವನ ಪುಸ್ತಕಗಳಿವೆ; ಕತೆ, ಕಾದಂಬರಿಗಳು. ನಮ್ಮ ಅಜ್ಜಿ ಹೇಳುವ ಹಾಗೆ 'ಪುಣ್ಯಕ್ಕಲ್ಲ, ಪುರುಷಾರ್ಥಕ್ಕಲ್ಲ;' ಕತೆ ಓದುವುದಂತೆ. ಸಣ್ಣ ಮಕ್ಕಳು ಅಜ್ಜಿಯಿಂದ ಕತೆಗಳನ್ನು ಕೇಳಿದರೆ, ಇವನಂತಹ ಮೀಸೆ ಬಂದ ಮಕ್ಕಳು ಪುಸ್ತಕದಿಂದ ಅವನ್ನು ಓದುತ್ತಾರೆ- ಅಂದುಕೊಂಡೆ. ಸಾಹಿತ್ಯ ಓದಿಕೊಂಡ ಅವನಿಗಿಂತಲೂ ಚರಿತ್ರೆಯನ್ನು ಓದಿಕೊಂಡ ನಾನು ವಾಸಿ ಎನಿಸಿತು ನನಗೆ. ನಿನ್ನಿನ ಬದುಕು ಹೇಗಿತ್ತು- ಎಂಬ ಜ್ಞಾನವಾದರೂ ನನಗಿದೆ. ಅವನಿಗೆ ಅದೂ ಇಲ್ಲ. ಹಿಂದಿನ ಕಾಲದ ಮನುಷ್ಯರು ಎಂದರೆ, ಮಾವಿನ ಮರದಿಂದ ಉದುರಿಬಿದ್ದ ಹುಳಿ ಮಾವಿನ ಹಣ್ಣಿನ ಹಾಗೆಂದು ಈ ಜನಾರ್ದನನಿಗೆ ಕಾಣಿಸುತ್ತಿರಬೇಕು. ಅವನೇ ಅಂಥ ಒಂದು ಹಣ್ಣು. ಹಾಗೆ ಬಿದ್ದೊಂದು ಹಣ್ಣಿಗೆ ತಾನು ಹೇಗೆ ಹುಟ್ಟಿದೆ ಎಂದು ತಿಳಿಯಲು ಬೇಕಾದ ಮಿದುಳು ಇದೆಯೇ?

ಸುಮ್ಮನೆ ಕುಳಿತಿರಲಾರದೆ, ಮಾಡುವ ಕೆಲಸ ಯಾವುದೂ ಹೊಳೆಯದೆಯೇ, ಆಚೆ ಈಚೆ ಸುತ್ತಾಡಿದೆ. ಹೊರ ಚಾವಡಿಯಲ್ಲಿ ನಮ್ಮ ಅಜ್ಜಿಯೂ ಕುಳಿತಿದ್ದರು. ನಾನು ಹೀಗೆ ಹೆಜ್ಜೆ ಹಾಕುತ್ತಿರುವುದನ್ನು ಕಂಡ ಅವರು "ಏನು ಮಾಣಿ, ಇನ್ನೂ ತೋಟಕ್ಕೆ ಹೊರಟದ್ದು ಕಾಣುವುದಿಲ್ಲ. ಶತಪಥ ಹಾಕುತ್ತೀಯಲ್ಲ" ಎಂದರು.

"ಹೌದು ಅಜ್ಜಿ, ನಾನು ನಿನ್ನೆ ತುಂಬ ದಣಿದು ಬಂದಿದ್ದೆನಲ್ಲ, ರಾತ್ರಿ ನಿದ್ರೆ ಗಡದ್ದಾಗಿ ಬಂದೀತು- ಎಂದೆಣಿಸಿದರೆ ಒಂದು ಚೂರೂ ನಿದ್ರೆ ಬರಲಿಲ್ಲ. ಹೀಗಾಗಿ ಏನು ಮಾಡುವುದಕ್ಕೂ ಉದಾಸೀನ."

"ದಣಿದದ್ದು ಹೆಚ್ಚಾದರೆ ಹಾಗಾಗುತ್ತದೆ. ಒಂದೊಂದು ಸಾರಿ ನಿದ್ರೆ ಸಮನಾಗಿ ಬರುವುದಿಲ್ಲ. ಅಷ್ಟು ಹೊತ್ತಿನ ತನಕ ಎಲ್ಲಿ ಹೋಗಿದ್ದೆ ನೀನು? ನೀನು ಬಂದದ್ದು ನನಗೆ ಗೊತ್ತೇ ಆಗಲಿಲ್ಲ."

"ಅದೇ? ನನಗೆ ಒಂದು ಉಮೇದು ಬಂದಿತು. ಆ ಜನ್ನನನ್ನು ಕಟ್ಟಿಕೊಂಡು ಹೊರಟೆ. ನಾಗನಕಾಲು ಬರೆಯ ತನಕವೂ ಹೋಗುವ ಎಂದು. ಅಲ್ಲಿ ಋಷಿಗಳ ಗುಹೆ ಇದೆ ಎನ್ನುತ್ತಾರಲ್ಲ. ಇರುವುದಾದರೂ ಹೌದೇ-ಎಂದು ನೋಡುವುದಕ್ಕೆ ಹೋದೆ."

"ಹಿಂದೆ ಋಷಿಗಳು ಅಲ್ಲಿ ಇದ್ದುದುಂಟು ಅನ್ನುತ್ತಾರೆ. ನನ್ನ ಅಮ್ಮನೂ ಹೇಳುವುದನ್ನು ಕೇಳಿದ್ದೇನೆ. ಇದ್ದರೂ ಇದ್ದಾರು, ಇದ್ದುಕೊಳ್ಳಲಿ. ಆದರೆ ಅವರಿಗೆ ತಾವು ತಪಸ್ಸು ಮಾಡಬೇಕೆಂದು ಕಂಡರೆ ಬಾಗಿಲು ಹಾಕಿಕೊಂಡು ಮನೆಯಲ್ಲೇ ಕುಳಿತು ಮಾಡಬಹುದಲ್ಲ. ಅದಕ್ಕೆ ಕಾಡಿಗೆ ಹೋಗಬೇಕು ಎಂದು ನನಗೆ ಅನಿಸುವುದಿಲ್ಲ."

"ಮನೆಯಲ್ಲಿ ಹೆಂಡತಿ ಮಕ್ಕಳ ಗಲಾಟೆಯಲ್ಲಿ, ಸಂಸಾರದ ತಾಪತ್ರಯದಲ್ಲಿ ತಪಸ್ಸು ಮಾಡಲು ಬಂದೀತೇ, ಅಜ್ಜಿ?"

"ನಾನು ಇಷ್ಟು ವರ್ಷವೂ ಇಲ್ಲಿ ಮಾಡಿಕೊಂಡಿದ್ದದ್ದು ಏನು? ಮಕ್ಕಳುಮರಿಗಳು ನನಗೇನು ಮಾಡಿದುವಂತೆ? ಮತ್ತೊಂದು ನೋಡು- ಒಂದು ನಾಲ್ಕು ಗಳಿಗೆ ಯಾವುದನ್ನೇ ನೆನೆದು ಒಂದೇ ಸಮನೆ ಯೋಚನೆ ಮಾಡುತ್ತ ಕುಳಿತರೆ, ಅಲ್ಲಿಗೇ ನಿದ್ರೆ ಬರುತ್ತದೆ. ಆಗ ತಪಸ್ಸೂ ಇಲ್ಲ, ಇನ್ನೊಂದೂ ಇಲ್ಲ. ವರ್ಷ, ವರ್ಷ ಕುಳಿತು ತಪಸ್ಸು ಮಾಡಿಕೊಂಡಿದ್ದವರ ಕತೆಯೂ ಅಷ್ಟೇಯೋ ಏನೋ."

"ಅಷ್ಟೇ ಅನ್ನುತ್ತೀರಾ! ಋಷಿಗಳೆಲ್ಲರೂ ಕುಳಿತಲ್ಲೇ ಕುಳಿತು ವರ್ಷಗಟ್ಟಲೆ ನಿದ್ರೆ ಮಾಡಿದರು ಅನ್ನುತ್ತೀರಾ?"

"ಹಾಗೆಂದಲ್ಲ, ಆದರೂ ನೋಡು, ಮನಸ್ಸಿನ ಗುಣ ಅಂಥದು. ಉರು ಹಾಕಿದ್ದನ್ನೇ ತಿರುಗಿ ಉರುಹಾಕಲು ತೊಡಗಿದರೆ, ಮತ್ತೆ ಮತ್ತೆ ಮನಸ್ಸೆಲ್ಲೋ ನಾವೆಲ್ಲೋ, ಬಾಯಿ ಉರು ಹಾಕುತ್ತಲೇ ಇರುತ್ತದೆ; ಮನಸ್ಸು ಮಾತ್ರ ನಿದ್ರೆ ಮಾಡುತ್ತಲೇ ಇರುತ್ತದೆ. ಇನ್ನು ಹಿಂದಿನವರು ಏನು ಮಾಡಿದರೋ? ಆದರೆ ದೇವರ ಧ್ಯಾನವನ್ನು ಮಾಡಬೇಕಾದರೆ ಕಾಡಿಗೇ ಹೋಗಬೇಕು ಅಂತ ಅನಿಸುವುದಿಲ್ಲ. ಅಲ್ಲಿಗೇ ಹೋಗಿ ಒಂದು ಪರ್ಣಕುಟೀರ ಕಟ್ಟಿಕೊಂಡರೇ ಲೆಕ್ಕ; ಊರಲ್ಲಿ ಒಂದು ಜೋಪಡಿಯಲ್ಲಿದ್ದರೆ ಲೆಕ್ಕವಲ್ಲ-ಅನ್ನುತ್ತೀಯಾ?"

"ಆದರೂ ಅಜ್ಜಿ, ಇಲ್ಲಿದ್ದರೆ ಒಬ್ಬರಲ್ಲ ಒಬ್ಬರು ಬಂದು ಮಾತನಾಡಿಸುತ್ತಾರಲ್ಲ."

"ಇಲ್ಲಿಯೂ ಬಾಯಿ ಮುಚ್ಚಿಕೊಂಡಿರಲಿಕ್ಕೆ ಬರುತ್ತದೆ. ನಾನು ಎಷ್ಟು ವರ್ಷಗಳ ಕಾಲ ಮಾತುಬಿಟ್ಟಿದ್ದೆ ಗೊತ್ತೇ? ಹಾಗೆ ಮಾತು ಬಿಟ್ಟದ್ದನ್ನು ಕಂಡೇ ಊರಿನ ಜನ ಮೂಕಜ್ಜಿ ಎಂದು ಅನ್ನತೊಡಗಿದರು. ಅಲ್ಲಿ, ಇಲ್ಲಿ ಒಂದೊಂದು ಮಾತು ಆಡಲೇ ಇಲ್ಲ ಎನ್ನಲಾರೆ. ಆದರೂ ನನಗೆ ಸಿಕ್ಕುವ ಬಿರುದು ಸಿಕ್ಕಿಯೇ ಸಿಕ್ಕಿತು."

"ಅಲ್ಲ, ಕಾಡಿನಲ್ಲಿ ನಮ್ಮ ಜತೆಗೆ ಮಾತನಾಡುವ ಮನುಷ್ಯರೇನೋ ಇರಲಾರರು. ಹುಲಿ, ಕರು, ಹಕ್ಕಿ ಮತ್ತೊಂದು ಅಲ್ಲಿ ಕೂಗುವುದಿಲ್ಲವೇ? ಕಿರುಚುವುದಿಲ್ಲವೇ? ಆ ಸದ್ದೂ ಕೇಳಬಾರದಂತಿದ್ದರೆ ಕಿವಿಗೆ ಬೆಣೆ ಹಾಕಿಕೊಂಡಿರಬಹುದು. ಮನೆಯಲ್ಲಿ ಮಲಗಿದ್ದಾಗ ಚಾಪೆಯ ತಗಣೆ ಕಡಿದರೆ ಅಲ್ಲಿ ಗುಹೆಯಲ್ಲಿರುವಾಗ ಕಟ್ಟಿರುವೆ ಕಚ್ಚೀತು. ಅದಂತೂ ಕಡಿದರೆ ಅದರ ಉರಿ ಸಾಮಾನ್ಯವಲ್ಲ. ಅದು ಕಡಿದ ಜಾಗ ತಿಕ್ಕಿ ತಿಕ್ಕಿ, ಸಾಕಾಗುತ್ತದೆ. ಗುಹೆಗೆ ಹೋದವರಿಗೆ ಇಂಥ ಹೊರಗಿನ ಉಪದ್ರ ಕಡಿಮೆ ಎನ್ನುತ್ತೀಯಾ?"

"ಹಾಗಿದ್ದರೆ, ಅವರೆಲ್ಲ ಯಾಕೆ ಹೋಗುತ್ತಿದ್ದರು? ಅಥವಾ ಹೋದದ್ದೇ ಸುಳ್ಳೇ?"

"ಹೋದದ್ದು ಸುಳ್ಳಿರಲಾರದು. ಹೋಗುತ್ತಿದ್ದಿರಬೇಕು. ಯಾಕೆ ಅಂತ ಹೇಳಲಿ? ಒಂದು ಸಂಗತಿ ಕಾಣಿಸುತ್ತದೆ ನನಗೆ. ಅದನ್ನು ಕೇಳಿದರೆ ನೀನು ನಗಾಡಬಹುದು."

"ಏನದು ಅಜ್ಜಿ?"

"ನೀನು ಚೇರಟೆ ಹುಳು ಕಂಡಿದ್ದೀಯಲ್ಲ. ಅದನ್ನು ಮುಟ್ಟಿದರೆ ಏನು ಮಾಡುತ್ತದೆ? ಥಟ್ಟನೆ ಮುರುಟಿಕೊಂಡು ಮಲಗಿಬಿಡುತ್ತದೆ. ಹೊರಗಿನ ಭಯಕ್ಕೆ ತಾನು ಮುರುಟಿ ಮಲಗಿಕೊಂಡು ಬಿಟ್ಟರೆ ಆಪತ್ತು ತಪ್ಪುತ್ತದೆ ಅಂತ ಅದರ ಯೋಚನೆ. ಒಂದು ಲೆಕ್ಕಕ್ಕೆ ಅದು- ಬೆಕ್ಕು ಕಣ್ಣು ಮುಚ್ಚಿ ಹಾಲು ಕುಡಿದ ಹಾಗೆ. ಇನ್ನೊಬ್ಬರು ಅದನ್ನು ಕಾಣುವುದಿಲ್ಲ ಅಂತ ಲೆಕ್ಕ."

"ಋಷಿಗಳಿಗೆ ಏನು ಭಯ, ಅಜ್ಜಿ? ಭಯ ಇರುವವರು ಹುಲಿ, ಕರಡಿ ಇರುವ ಗುಹೆಗಳನ್ನು ಸೇರುತ್ತಾರೆಯೇ?"

"ಗುಹೆ ಸೇರುವುದೇ ಅದಕ್ಕೆ, ಅವರಿಗೆ ಹುಲಿ, ಸಿಂಹಗಳ ಭಯುವಲ್ಲ. ಅವರಿಗಿರುವುದು ಸಂಸಾರದ ಭಯ. ಅವರನ್ನು ಹುಟ್ಟಿಸಿದ ದೇವರೇ ಸಂಸಾರದ ಒಳಕ್ಕೆ ಹುಟ್ಟಿಸಿ 'ಇರು ಮಗುವೇ ಎಲ್ಲರೊಂದಿಗೆ ನೀನು' ಎಂದುಬಿಟ್ಟ. ಇಲ್ಲವಾದರೆ ಯಾಕೆ ಹುಟ್ಟಿಸಬೇಕಿತ್ತು? ಇಲ್ಲಿ ಇರುವುದಕ್ಕಾಗಿಯೇ ಅವನು ಹುಟ್ಟಿಸಿದ. ಇವರಿಗೆ ಸಂಸಾರದಲ್ಲಿ ಇರುವುದಕ್ಕೇ ಭಯ. ಸಂಸಾರ, ಜಗತ್ತು ಅಂದ ಮೇಲೆ ಸುಖ, ದುಃಖ, ನೋವು, ಮತ್ತೊಂದು ಇದ್ದೇ ಇರುತ್ತವೆ. ಇವರಿಗೆ ಅಂಥ ನೋವು ಬೇಡ, ದುಃಖ ಬೇಡ, ಸಾವು

ಬೇಡ! ಬರಿಯ ಸುಖ ಮಾತ್ರ ಬೇಕು. ಆದರೆ ಅದು ಎಂಥ ಸುಖ? ಶಾಶ್ವತ ಸುಖ! ಅಂಥ ಸುಖ ಆ ಪರಮಾತ್ಮನಿಗೇ ಉಂಟೋ ಇಲ್ಲವೋ! ಅವನು ಸೃಷ್ಟಿಸಿದ ಜಗತ್ತು ಇರುವ ತನಕವೂ ಹೇಗೆ ಸಿಗಬೇಕು ಅವನಿಗೆ ಸುಖ? ಆದರೆ, ಈ ಋಷಿಗಳಂಥವರು ಸಂಸಾರವನ್ನು ಬಿಟ್ಟು ಓಡಲಿಕ್ಕೆ ಕಲಿತರು. ಅವರಿಗೆ ಹೆಂಡತಿ, ಮಕ್ಕಳು ಬೇಡವಾದರೆ ಬೇಡ, ಹೋಗಲಿ. ಅಪ್ಪ, ಅಮ್ಮ ಬೇಡವಾದರೂ ಬೇಡ, ಹೋಗಲಿ, ಅವರನ್ನೆಲ್ಲ ತಪ್ಪಿಸಿಕೊಳ್ಳುವ ದಾರಿ ಯಾವುದು?"

"ಯಾವುದು?"

"ಹುಟ್ಟದೆಯೇ ಇರುವುದು. ಆದರೆ ಈಗ ಅವರು ಹುಟ್ಟಿಯಾಯಿತು. ಏನು ಮಾಡಬೇಕು? ಹಡೆದ ತಾಯಿಯ ಹೊಟ್ಟೆಯನ್ನು ತಿರುಗಿ ಸೇರುವ ಆಸೆ ಅಸಾಧ್ಯವಾದುದಕ್ಕೆ, ಗುಹೆಯನ್ನು ಹುಡುಕಿ ಹೋಗುತ್ತಾರೆ. ಅಲ್ಲಿ ಅಡಗಿ ಕುಳಿತರೆ ಭದ್ರತೆ ಎಂತ. ಮುಂದಕ್ಕೆ ನಡೆಯಲು ಧೈರ್ಯವಿಲ್ಲದಾಗ ಹಿಂದಕ್ಕೆ ಹೆಜ್ಜೆ ಹಾಕುವುದಪ್ಪ. ಸಂಸಾರದಿಂದ ದೂರ ಇರುವುದೆಂಬ ಈ ತಪಸ್ಸು ಚೇರಟೆ ಹುಳುವಿನದೇ ಕತೆ. ಸಂಸಾರ ಎಲ್ಲಿಲ್ಲವಂತೆ? ಕಾಡೂ ಸಂಸಾರವೇ, ಊರ ಮನೆಯೂ ಸಂಸಾರವೇ, ತಿನ್ನುವ ಕಂದಮೂಲವೂ ಸಂಸಾರವೇ, ಗುಹೆಯೂ ಸಂಸಾರವೇ, ದೇಹ ಕಳಚುವುದೂ ಸಮ, ಸಂಸಾರ ಬಿಡುವುದೂ ಸಮ. ದೇಹ ಇರುವ ತನಕ ನಾವಾಗಿಯೇ ಅದನ್ನು ಬಿಡಲಿಕ್ಕೆ ಬರುವುದಿಲ್ಲ. ಬಾಯಿಯಿಂದ ನಾವೆಷ್ಟೂ ಅನ್ನಬಹುದು. ಕಾಡಿಗೆ ಹೋಗಿ ತಪಸ್ಸು ಮಾಡುವ ಆ ಋಷಿಗಳು ಕಂದಮೂಲ ಯಾತಕ್ಕೆ ತಿನ್ನಬೇಕು? ದೇಹ ಉಳಿಸುವುದಕ್ಕೆ."

ನನಗೆ ನಮ್ಮ ಅಜ್ಜಿಯ ಮಾತುಗಳನ್ನು ಕೇಳಿ ವಿಸ್ಮಯವಾಯಿತು. ನಮ್ಮ ಪರಂಪರೆಯ ಜನರು ಎಲ್ಲರೂ, "ಸಂಸಾರದ ಮೋಹವನ್ನು ಬಿಡಬೇಕು" ಎನ್ನುತ್ತಿರುವಾಗ ನಮ್ಮ ಅಜ್ಜಿ ಮಾತ್ರ ಹೀಗೆ ಹೇಳುತ್ತಿರುವುದಕ್ಕೆ ಏನು ಕಾರಣ ಇದ್ದೀತು? ಅವರಿಗೆ ಸ್ವಂತ ಸಂಸಾರದ ಸುಖ ದೊರೆಯಲಿಲ್ಲವೆಂಬುದರಿಂದ ಹೀಗೆ ಅನ್ನುತ್ತಿದ್ದಾರೆಯೇ? ಹಿಂದಿನವರ ಹೇಳಿಕೆಗಳಿಗೆ ಇದು ತೀರ ವಿರೋಧವಾಗಿ ಕಾಣಿಸುತ್ತದೆಯಲ್ಲ. ಸಂಸಾರವನ್ನು ಬಿಡಲು ಗುಹೆ ಸೇರುವವನನ್ನು ತಾಯಿಯ ಹೊಟ್ಟೆಯನ್ನು ತಿರುಗಿ ಸೇರಲು ಬಯಸುವ ಶಿಶುವಿನ ನಡೆಗೆ ಹೋಲಿಸಿದ್ದಂತು ಮತ್ತೂ ಆಶ್ಚರ್ಯದ ಮಾತು. ಅಂಥ ಒಂದು ಮನೋಧರ್ಮ ನಿಜವಾದ್ದಿರಬಹುದೇ- ಎಂಬ ಅನುಮಾನ ಬಂದು ಅವರನ್ನೇ ತಿರುಗಿ ಕೇಳಿದೆ-

"ಅಜ್ಜಿ, ನನ್ನದರಲ್ಲಿ ತಪ್ಪಿದ್ದರೆ ನನಗೆ ಮರುಳು ಅನ್ನಿ, ನಿಮ್ಮಲ್ಲಿ ಒಂದು ಮಾತು ಕೇಳುತ್ತೇನೆ, ಕೇಳಲಿಲ್ಲ ಈ ತನಕ. ಕೇಳುವುದು ಸರಿಯೋ ಅಲ್ಲವೋ ಎಂದು ನನಗೆ ತಿಳಿಯುವುದಿಲ್ಲ. ಗೊತ್ತಿಲ್ಲದ್ದಕ್ಕೆ ಕೇಳುತ್ತೇನೆ."

"ಕೇಳಂತೆ; ಗೊತ್ತಿಲ್ಲದ್ದನ್ನು ಕೇಳಿದರೆ ಏನು ತಪ್ಪು? ನನಗೆ ಬಹಳ ಗೊತ್ತಿದೆ ಎಂತಲ್ಲ. ಕೇಳಿದ ಪ್ರಶ್ನೆಗೆ ನನಗೆ ಗೊತ್ತಿದ್ದುದನ್ನು ಅಥವಾ ಸರಿಯೆಂದು ಹೊಳೆದದ್ದನ್ನು ಹೇಳಿಯೇನು. ಎಲ್ಲರೂ ಹಾಗೆಯೇ ಮಾಡಿದವರು. ದೊಡ್ಡವರು, ನಿಜ; ಇನ್ನಾವುದೂ ಅಲ್ಲ- ಎಂಬವರುಂಟು. ನನಗೆ ಅಂಥ ಹಟವಿಲ್ಲ."

"ನಿಮಗೆ ಸಣ್ಣದರಲ್ಲಿ ಮದುವೆ ಆಯಿತಂತಲ್ಲ."

"ಉಡುತ್ತ ಇದ್ದೇನಲ್ಲ- ನನ್ನ ಹತ್ತು ವರ್ಷದ ಪ್ರಾಯದಿಂದಲೂ ಇಂಥ ಕೆಂಪು ಸೀರೆಯನ್ನೇ?"

"ಹತ್ತರಲ್ಲಿ ನಿಮ್ಮ..."

"ಹತ್ತಲ್ಲ, ಅದಕ್ಕಿಂತಲೂ ದೊದಲೇ. ನನ್ನನ್ನು ಎಂಟಕ್ಕೆ ಮದುವೆ ಮಾಡಿಕೊಟ್ಟರು. ಅಪ್ಪ, ಅಮ್ಮ ಒಂದು ಗಂಡ ಎಂತ ಗೊತ್ತು ಮಾಡಿದರು. ಮದುವೆ ಎಂತ ಮಾಡಿದರು. ಗಂಡನ ಮನೆಗೆ ಹೋದೆ. ಅವನೂ ನನ್ನ ಹಾಗೆ ಸಣ್ಣವನಿದ್ದ. ಹೆಂಡತಿ ಏನು ಎಂಬುದು ಅವನಿಗೆ ತಿಳಿದೇ ಇರದು. ಗಂಡ ಏನು ಅಂತ ನನಗೂ ತಿಳಿದಿರದು. ಬಾಸಿಂಗ ಕಟ್ಟಿ ಜೊತೆಯಲ್ಲಿ ಕುಳಿತುಕೊಂಡಾಗ ಜನ ಉಪಚಾರ ಮಾಡುವುದನ್ನು ಕಂಡು ನಮಗೆ ಸಂತೋಷವಾಗಿರಬೇಕು. ನಾಲ್ಕು ದಿವಸ ಚಂದದ ಒಂದು ಹಬ್ಬ ನಡೆಯಿತು. ಅವನು ನನ್ನನ್ನು ಮಾತನಾಡಿಸಿದ್ದೆಂಬುದಿಲ್ಲ. ನಾನು ಎಂಥವಳೆಂಬುದು ಅವನಿಗೂ ಗೊತ್ತಿರಲಾರದು. ಆದರೂ ಒಂದಿಷ್ಟು ದಿನ ಅವನ ಮನೆಯಲ್ಲಿದ್ದೆ."

"ಅವನು, ಅವನು ಅನ್ನುತ್ತೀರಲ್ಲ, ಅಜ್ಜಿ?"

"ಬೇಡ; ಅವರು- ಎಂದರಾಯಿತು. ಬುದ್ಧಿ ಇಲ್ಲದ ಮಕ್ಕಳು ನಾವು. ಅದು ಎಂದರೂ ತಪ್ಪಿಲ್ಲ. ಮತ್ತೆ ಪಾಪ... ಹತ್ತು ದಿನ ಜ್ವರ ಬಂದು ಸತ್ತೇ ಹೋದ; ಸತ್ತೇ ಹೋದರು. ಅಲ್ಲಿಗೆ ನನ್ನ ಅಪ್ಪ, ಅಮ್ಮ ಬಂದು ಎಷ್ಟೆಲ್ಲ ಅತ್ತು, ಕಣ್ಣೀರು ಕರೆದು, ನನ್ನನ್ನು ಈ ಮನೆಗೆ ಕರೆದುಕೊಂಡು ಬಂದರು.

"ಅವನ ಮನೆಯ ನೀರಿನ ಋಣ ಕಡಿಯಿತು. ನನಗೆ ಇಲ್ಲಿನ ನೀರಿನ ಋಣವೇ ಗಟ್ಟಿಯಾಗಿತ್ತು.'ಋಣ' ಎಂಬುದೊಂದು ಮಾತು, ಅರ್ಥವಿಲ್ಲದ ಮಾತು. ಏನೆಂದು ತಿಳಿಯದ್ದಕ್ಕೆ ಹೇಳುವ ಮಾತು. ಆ ಅಶ್ವತ್ಥದ ಮರಕ್ಕೆ ನಮ್ಮ ಮನೆಯ ಋಣ ಇದೆ-ಎಂದಷ್ಟೇ ಫಲ.

"ಮತ್ತೆ ನಾಲ್ಕು ವರ್ಷ ಕಳೆದ ಬಳಿಕ- ಹಿಂದೆ ಏನೆಲ್ಲ ಆಯಿತು- ನನ್ನ ಮುಂದಿನ ಅವಸ್ಥೆ ಏನು- ಎಂಬುದರ ತಿಳಿವು ನನಗೆ ಬರತೊಡಗಿತು, ಎಲ್ಲರಂತೆ. ನಾನು ಇನ್ನು ಸಂಸಾರ ಮಾಡಿಕೊಂಡಿರಲಿಕ್ಕಿಲ್ಲ ಎಂಬುದು ಆಗ ಗೊತ್ತಾಯಿತು. ಮುಂದೊಂದು ದಿವಸ,

ನಾನು ದೊಡ್ಡವಳಾದ ಬಾರಿಗೆ ಮುಟ್ಟಾದಾಗ, ಎಲ್ಲಿಲ್ಲದ ಗಾಬರಿ ಉಂಟಾಯಿತು. ನನ್ನ ಅಮ್ಮ ಆ ದಿನ ಅಷ್ಟೇಕೆ ಅತ್ತಳು- ಎಂದು ಇಲ್ಲಿಯ ತನಕವೂ ನನಗೆ ಹೊಳೆದಿಲ್ಲ."

"ಮತ್ತೇನಾಯಿತು?"

"ಮತ್ತೆ ಬೆಳೆದೆ; ದೊಡ್ಡವಳಾದೆ. ನನ್ನ ತಲೆಯ ಕೂದಲು ಅನಿಷ್ಟವೆನಿಸಿತು ಲೋಕಕ್ಕೆ. 'ಮುಂಡೆ' ಅನಿಸಿಕೊಂಡೆ. ಆಗ ನನ್ನ ಮನಸ್ಸು ಕಲ್ಲಾಯಿತು. ಮುಂಡೆಯಾದವಳು ಈ ಲೋಕಕ್ಕೆ ಬೇಡ- ಅನಿಸಿರಬೇಕು. ನನಗಾದರೂ ಅದೇತಕ್ಕೆ- ಎಂದು ತೋರತೊಡಗಿತು. ಅದು ಒಂದಷ್ಟು ದಿನವಿತ್ತು. ಮತ್ತೆ ಆ ಬುದ್ಧಿಯೂ ಜಡವಾಯಿತು. ನನ್ನ ಅಪ್ಪ, ಅಮ್ಮಂದಿರೂ ಸಹ ಇರುವಷ್ಟು ಕಾಲ ಒಂದಿಷ್ಟೂ ಪ್ರೀತಿಯನ್ನು ಕಡಿಮೆ ಮಾಡಿದವರಲ್ಲ. ಅದೇ ನನ್ನ ಹೊಟ್ಟೆಯನ್ನು ತುಂಬಿಸಿತು. ನಿನ್ನ ಅಪ್ಪ ಅಮ್ಮಂದಿರೂ ಆ ಒಂದು ಭಾಗ್ಯವನ್ನು ಕಡಿಮೆಮಾಡಲಿಲ್ಲ 'ಇವಳೂ ಒಂದು ಜೀವ' ಎಂದು ತಿಳಿದು ನಡೆಯಿಸಿಕೊಂಡು ಬಂದರು. ನನಗೂ- ನಾನು ಗಂಡನನ್ನು ಕಳೆದುಕೊಂಡೆ, ಅದರಿಂದ ನನಗೆ ಭಾರಿ ನಷ್ಟವಾಯಿತು- ಎಂಬ ಭಾವನೆಯೂ ಬರಲಿಲ್ಲ. ಮನೆಯಲ್ಲಿ ಅಷ್ಟೆಲ್ಲ ಮಕ್ಕಳಿರುವಾಗ ನನ್ನದೇ ಮಕ್ಕಳು ಬೇಕು ಎಂದು ಅನಿಸಲಿಲ್ಲ. ಮನೆಯಲ್ಲಿ ಮಕ್ಕಳು ಹುಟ್ಟಿದುವು; ಸತ್ತವು. ಅವು ಇದ್ದ ಕಾಲಕ್ಕೆ ನನ್ನವೇ ಅನಿಸುತ್ತಿತ್ತು. ನೀನು ಯಾರು? ನಿನ್ನ ಹೆಂಡತಿ ಯಾರು? ನಿನ್ನ ಮಕ್ಕಳು ಯಾರು? ಎಲ್ಲವೂ ನನ್ನವೇ. ಇನ್ನು ನನ್ನದೇ ಮಕ್ಕಳಾಗಿ,ಮಂಗನನ್ನು ಆಡಿಸುವವರ ಹಾಗೆ ಅವುಗಳ ಸೊಂಟಕ್ಕೆ ಹಗ್ಗ ಹಾಕಿ ನನ್ನ ಕೈಯಲ್ಲಿ ಹಿಡಿದುಕೊಂಡರೆ ಮಾತ್ರ ನನ್ನ ಮಕ್ಕಳು, ಇಲ್ಲವಾದರೆ ಅಲ್ಲ ಎನ್ನುತ್ತೀಯಾ?

"ಆದರೆ, ಒಂದು ಮಾಣಿ, ನನ್ನ ಕಣ್ಣು ಇನ್ನೂ ಸಾಫಾಗಿದೆ. ನಾಲ್ಕು ಮಂದಿ ಈ ಮನೆಯಲ್ಲಿ ಬೆಳೆದರು. ನೂರು ಮಂದಿ ಬಂದು ಹೋದರು. ಇನ್ನೂ ಬರುತ್ತಾರೆ, ಹೋಗುತ್ತಾರೆ. ಗಂಡು ಹೆಣ್ಣುಗಳು ಕೂಡಿ ಸಂಸಾರ ಮಾಡುತ್ತವೆ. ಇರುತ್ತವೆ, ಹೋಗುತ್ತವೆ. ಎಲ್ಲವೂ ಅರ್ಥವಾಗುತ್ತದೆ. ಅದರಲ್ಲಿ ನನಗೆ ಯಾವ ತಪ್ಪೂ ಕಾಣಿಸುವುದಿಲ್ಲ. ಪರರ ಸಂಸಾರವನ್ನು ಕಂಡು ವ್ಯಥೆ ಆಗಲಿಲ್ಲ, ಅಸೂಯೆ ಬರಲಿಲ್ಲ. ಗಂಡ ಕೈತಪ್ಪಿದ್ದಕ್ಕೆ ದುಃಖ ಕಾಣಿಸಲಿಲ್ಲ. ಮದುವೆಯಾಗಿ ಮಕ್ಕಳನ್ನು ಪಡೆಯದವರಿಲ್ಲವೇ?"

"ಹಾಗಾದರೆ, ನಿಮಗೆ ಇಷ್ಟು ವರ್ಷಗಳ ಕಾಲ ಇದ್ದು, ಇದ್ದು, ಬೇಸರವೂ ಬರಲಿಲ್ಲವೇ?"

"ಆ ಬೇಸರ ಅಪ್ಪ ಅಮ್ಮ ಇದ್ದಾಗಲೂ ಬರಲಿಲ್ಲ. ನನಗೆ ಪ್ರಾಯ ತುಂಬಿದಾಗ ನನ್ನಷ್ಟಕ್ಕೆ ನಾನೂ ಏನೇನೋ ಮಾತನಾಡುತ್ತ ಇದ್ದೆನಂತೆ. ಏನು ಆಡಿದೆ, ಎಷ್ಟು ಆಡಿದೆ- ಅದೊಂದೂ ನೆನಪಿಗೆ ಬರುವುದಿಲ್ಲ. ಈಗಲೂ ಹಾಗೆಯೇ ಮಾಡುತ್ತಿದ್ದೇನಲ್ಲ. ಅಂದು ನಾನು ಯಾವ ಮಾತನ್ನಾಡಿದೆನೋ, ಏನೆಲ್ಲ ಅಂದೆನೋ, ಅದರಿಂದ ಯಾರಿಗೆ ಏನು

ತೋರಿತೋ, ನನ್ನ ಅಣ್ಣ ಹೆದರಿದ. ನನಗೆ ಭೂತ ಹಿಡಿದಿದೆ, ಸೋಂಕು ಬಡಿದಿದೆ, ಇನ್ನೇನೇನೋ ಆಗಿದೆ ಎಂದು ಹೆದರಿದ ಹಾಗೆ ಕಾಣುತ್ತದೆ. ಅಮ್ಮ ಆಗಲೇ ಹೋಗಿದ್ದಳು. ಅಪ್ಪನಿಗೂ ಭಯ ಬಂದಿತು. ಅವರಿವರನ್ನು ಕೇಳಿದರು; ಮಂತ್ರವಾದಿಗಳನ್ನು ಕರೆಸಿದರು. ತಾಯಿತ ಕಟ್ಟಿಸಿದರು. ಯಾವನೋ ಒಬ್ಬ ಮಂತ್ರವಾದಿ ಒಂದು ಹುಣಿಸೆ ಅಡರಿನಿಂದ ನನ್ನನ್ನು ಎಷ್ಟು ಹೊಡೆದ ಎನ್ನಲಿಕ್ಕಿಲ್ಲ. 'ಹೋಗು, ಬಿಟ್ಟು ಹೋಗು, ನಿನ್ನ ಕಣ್ಣಿಗೆ ಆಣಿ ಹೊಡೆಯುತ್ತೇನೆ' ಎಂದು ಹೊಡೆದೇ ಹೊಡೆದ. ಪೆಟ್ಟಿನ ನೋವು ತಾಳಲಾರದೆ, ಅದಾದರೂ ನಿಲ್ಲಲಿ ಎಂದು 'ಹೋಗುತ್ತೇನೆ' ಎಂದು ಬೊಬ್ಬಿಟ್ಟೆ. 'ಯಾರು ನೀನು?' ಅಂತ ತಿರುಗಿ ಹೊಡೆಯಲಿಕ್ಕೆ ಶುರು.

"ನಾನು ಯಾರೆಂತ ನೀನೇ ಹೇಳು" ಅಂದೆ. ಅವನು 'ಯಜ್ಞ ಅಲ್ಲವೋ ನೀನು? ಉಪನಯನವಾಗದೆ ಸತ್ತ ಯಜ್ಞನಾರಾಯಣನಲ್ಲವೇ?, ಎಂದು ತಿರುಗಿ ಹೊಡೆದ. ನಾನು ಆ ಸತ್ತ ಯಜ್ಞನಾರಾಯಣನಾದದ್ದು ಹೇಗೆ ಅವನಿಗೆ ಗೊತ್ತೋ? ಹೆದರಿ ಒಂದು ಸಾರಿ 'ನಾನೇ ಯಜ್ಞ' ಎಂದೆ. ಇನ್ನೊಂದು ಸಾರಿ 'ನಾನು ಮೂಕಾಂಬಿಕೆ' ಎಂದೆ. ಅಂತು ಹೆದರಿಸಿ, ಬಡಿದು, ನನ್ನ ಬಾಯಿಯಿಂದ- 'ನಾನು ಹೊರಟುಹೋಗುತ್ತೇನೆ'- ಅನ್ನಿಸಿ ಒಂದು ತಂಬಿಗೆ ತಂದು ಅದರೊಳಕ್ಕೇನೋ ತುಂಬಿಸಿದ ಹಾಗೆ ಮಾಡಿ, 'ಇನ್ನು ಈ ಮನೆಯೊಳಕ್ಕೆ ಕಾಲಿಡಕೂಡದು' ಅಂತ ತಾಕೀತು ಮಾಡಿ ಹೊರಟುಹೋದ, ಆ ಹುಣಿಸೆ ಅಡರಿನ ಪಂಡಿತ."

"ಎಂಟು ದಿವಸಗಳ ತನಕ ನನ್ನ ಬೆನ್ನಿನಲ್ಲಿ ಬಿದ್ದ ಬಾಸುಂಡೆ ಮಾಯವಾಗಲಿಲ್ಲ. ಅದನ್ನು ಎಣ್ಣೆ ಹಾಕಿ, ತಿಕ್ಕಿ, ತೀಡಿ, ಉಪಚರಿಸಿದರು. ಅಂತೂ ಗುಣವಾಯಿತು. ಆಮೇಲೆ ನನಗೆ ಅನಿಸಿತು- ನನ್ನಷ್ಟಕ್ಕೇ ನಾನು ಗೋಣಗಿದ್ದರ ಫಲ ಇದೆಲ್ಲ; ನಾನು ಮಾತನಾಡಿದುದರ ಫಲ ಇದು. ಮಾತನ್ನೇ ಆಡದಿದ್ದರೆ ಏನಾಗುತ್ತದೆ- ಎಂದು ಮನಸ್ಸನ್ನು ಗಟ್ಟಿ ಮಾಡಿದೆ. ಲೋಕ ತನಗೆ ಹಿಡಿದ ಭ್ರಮೆಯನ್ನು ನನ್ನ ಮೇಲೆ ಹೊರಿಸುವುದು ಬೇಡವಷ್ಟೆ. ನಾನು ಇನ್ನು ಮುಂದೆ ಯಾರ ಹತ್ತಿರವೂ ಮಾತನಾಡುವುದಿಲ್ಲ, ಬಾಯಿಯನ್ನೇ ತೆರೆಯುವುದಿಲ್ಲ- ಎಂದು ಬಾಯಿಮುಚ್ಚಿ, ಬದುಕಲು ಕಲಿತೆ. ನಾನಾಯಿತು, ಮನೆಯಾಯಿತು. ನನಗೆ ನಲ್ವತ್ತು ವರ್ಷಗಳಾಗುವ ತನಕವೂ ಅಪ್ಪ, ಅಮ್ಮ ಇರಿಸಿದ್ದ ಹೆಸರಿಗೆ ತಕ್ಕಂತೆ ಮೂಕಾಂಬಿಕೆಯೇ ಆದೆ.

"ಮತ್ತೆ ನಾನು ಮಾತನಾಡತೊಡಗಿದುದು ಎಂದು ಗೊತ್ತೇ? ಅಪ್ಪ ಅಮ್ಮ ಹೊರಟು ಹೋದರಲ್ಲ. ನಿನ್ನ ಅಪ್ಪ ಅಮ್ಮಗೆ ಮದುವೆಯಾಗಿ ನೀನೂ ನಾರಾಯಣನೂ ಹುಟ್ಟಿಕೊಂಡಿರಲ್ಲ. ನೀವು ನನ್ನ ಮೈಯ ಮೇಲೆ ಬಿದ್ದು, 'ಅಜ್ಜಿ, ಅಜ್ಜಿ ಕತೆ ಹೇಳು' ಎಂದು ಪೀಡಿಸಲು ಶುರು ಮಾಡಿದ ಮೇಲೆ, ಕನಿಕರ ಕಂಡು ಮಾತನಾಡಲು ಶುರು ಮಾಡಿದೆ.

ನಿನ್ನ ಅಪ್ಪ ಅಮ್ಮಂದಿರೊಡನೆ ಸಮನಾಗಿ ಮಾತನಾಡತೊಡಗಿದ್ದೂ ಆಮೇಲೆಯೇ. ಈಗಲಾದರೂ ಮಗು, ನನಗಾಗಿ ಯಾರನ್ನಾದರೂ ಮಾತನಾಡಿಸಬೇಕು- ಎಂದು ಅನಿಸುವುದಿಲ್ಲ. ಅದರಿಂದ ಒಂದು ಪ್ರಯೋಜನವೇನೋ ಆಯಿತು."

"ಏನದು?"

"ನೀನು ಮರುಳು ಅಂದೀಯಾ. ಹಾಗೆ ಮರುಳು ಇದ್ದರೂ ಇದ್ದೀತು."

"ಯಾವುದು? ತನ್ನಷ್ಟಕ್ಕೆ ಮಾತನಾಡುವುದೇ?"

"ನನಗೆ ಅಜ್ಜಿ, ನಿಮಗೆ ಮರುಳು ಎಂದವರನ್ನು ಕಂಡರೆ ಸಿಗಿದು ಹಾಕುವ ಎಂದೆನಿಸುತ್ತದೆ. ಆದರೆ ಆ ಮನಸ್ಸಿನ ಸಿಟ್ಟು ರಟ್ಟೆಗೆ ಬರುವುದಿಲ್ಲ ಎಂದಿಟ್ಟುಕೊಳ್ಳಿ."

"ನನ್ನ ಕತೆ ಕೇಳು. ಅದನ್ನು ಹೇಳುತ್ತೇನೆ. ಒಂದು ಲೆಕ್ಕಕ್ಕೆ ಮಾತು ಬೇಕು- ಮನುಷ್ಯ ಎಂಬವನಿಗೆ. ಮನಸ್ಸಿನಲ್ಲಿರುವುದನ್ನು ತೋಡಿಕೊಂಡರೇ ವಾಸಿ. ಹೊಟ್ಟೆಯಲ್ಲಿ ಪಿತ್ಥ ತುಂಬಿಕೊಂಡರೆ ವಾಂತಿ ಮಾಡಿದರೆ ಗುಣವಾಗುತ್ತದೆ ಅಂತಾರಲ್ಲ ಹಾಗೆ. ನಾನು ಹೇಳಲಿಕ್ಕೆ ಹೊರಟದ್ದು ಅದನ್ನಲ್ಲ."

"ಮತ್ತೇನನ್ನು?"

"ಮಾತು ಬಿಟ್ಟುದರಿಂದ ಮತ್ತೊಂದೇ ಫಲ ಕಾಣಿಸಿತು. ನನ್ನ ಮನಸ್ಸಿನ ನಮೂನೆಯೇ ಒಂದು ತೆರನಾಯಿತು. ಈ ಮನೆಯನ್ನು ಬಿಟ್ಟು ಹೊರಗೆ ಹೋದರೆ ಸಾಕು ಅಥವಾ ಗುರುತು ಇರುವವರು ಯಾರು ಬಂದರೂ ಸಾಕು; ದೇವಸ್ಥಾನಕ್ಕೆ ಹೋದರೂ ಸರಿಯೆ, ಏನಾದರೂ ಹೊಸತನ್ನು ಮುಟ್ಟಿದರೂ ಸರಿಯೇ, ಒಂದು ಬಾರಿ ನನ್ನ ಮೈ ಜುಮ್ ಆಗುತ್ತದೆ. ಯಾಕೆ ಹಾಗಾಗುತ್ತದೆ- ಎಂದು ಕಣ್ಮುಚ್ಚಿ ಯೋಚಿಸಿದರೆ ಏನೇನೆಲ್ಲ ಕಾಣಿಸಲಿಕ್ಕೆ ತೊಡಗುತ್ತದೆ. ಹಿಂದೆ ಆದದ್ದೆಲ್ಲ ಕಾಣಿಸಿಕೊಳ್ಳುತ್ತದೆ. ನನಗೆ ಮೈ ಎಚ್ಚರವಿದ್ದರೂ ಇಲ್ಲದ ಹಾಗೆ ಏನೇನೋ ಕಣ್ಮುಂದೆ ಬಂದು ಹಾಯುತ್ತದೆ. ಒಂದು ನಾಟಕದ ಹಾಗೆ ಕಾಣಿಸುತ್ತದೆ. ಅದೇನೂ ಕನಸಲ್ಲ. ನನಗೆ ನಿದ್ರೆ ಬಂದು ಹಾಗೆ ಕಾಣಿಸುವುದೂ ಅಲ್ಲ. ಹಾಗೆ ಕಾಣಿಸತೊಡಗಿತು- ಅಂದರೆ ನನ್ನ ಬಾಯಿ ಗೊಣಗಲಿಕ್ಕೆ ಶುರು ಮಾಡುತ್ತದೆ. ನನ್ನ ಪ್ರಾಯದಲ್ಲಿಯೂ ಹೀಗಾಗುತ್ತಿತ್ತೋ ಏನೋ, ಯಾರು ಬಲ್ಲ? ಆಗ ಆದದ್ದು ಗೊತ್ತಾಗುತ್ತಿರಲಿಲ್ಲ. ಈಗ ಗೊತ್ತಾಗುತ್ತದೆ. ಆದುದರಿಂದಲೋ ಏನೋ, ನನ್ನ ಮಾತನ್ನು ಕೇಳಿ- ಇವಳಿಗೆ ಜಕಣಿ ಹಿಡಿದಿದೆ, ಭೂತ ಹಿಡಿದಿದೆ- ಎಂದು ತಿಳಿದರೋ ಏನೋ. ಯಾವ ಗಳಿಗೆಗೆ ಒಂದು ಸಾರಿ ಹುಣಿಸೆ ಅಡರಿನ ಪೂಜೆ ಆಯಿತೋ, ಅಲ್ಲಿಂದ ಮುಂದೆ ಜನರನ್ನು ಕಂಡರೆ ಮನೆಯೊಳಕ್ಕೆ ಹೋಗಿ ಕುಳಿತುಬಿಡುತ್ತಿದ್ದೆ."

"ಅಷ್ಟು ಹೊಡೆದರೇ?"

"ಅದನ್ನು ನೆನೆದರೆ ಈಗಲೂ ಭಯವಾಗುತ್ತದೆ. ನೀನು ಹಾಗೇನಾದರೂ ಮಾಡಿಸಬೇಡ. ನಿನಗೆ ಸಂಶಯ ಬಂದರೆ- ಎಲ್ಲರೂ ಅನ್ನುವ ಹಾಗೆ ಅಜ್ಜಿಗೆ ಮರುಳು- ಎಂದು ಬಿರುದು ಕೊಟ್ಟು ಸುಮ್ಮನಿದ್ದುಬಿಡು."

ಅವರ ಮಾತನ್ನು ಕೇಳಿ ನನಗೆ ತೀರ ನಗು ಬಂತು. ಅವರನ್ನು ನಾನು ಹೊಡೆಯಿಸುವುದುಂಟೇ? "ಹೋ! ನೀವು ಬಾಯಿಯಿಂದ ಮಣ ಮಣ ಅನ್ನುವುದು ಹಾಗೆಲ್ಲ ಕಣ್ಮುಂದೆ ಕಾಣಿಸುವುದರಿಂದ ಅಲ್ಲವೇ?" ಎಂದೆ.

"ಎಲ್ಲ ಸಮಯಗಳಲ್ಲೂ ಹಾಗೆನ್ನಲಾರೆ. ಕೆಲಕೆಲವು ಸಾರಿ ಮಾತ್ರ ಹಾಗಾಗುತ್ತದೆ. ಇನ್ನು ಕೆಲವು ಸಾರಿ ಮಾತಿನ ಚಪಲ ಹುಟ್ಟಿಯೂ ನನ್ನಷ್ಟಕ್ಕೆ ಏನಾದರೂ ಅಂದುಕೊಳ್ಳುವುದುಂಟು."

"ಇತ್ತೀಚೆಗೆ ಹಾಗೇನಾದರೂ ವಿಶೇಷ ನಿಮಗೆ ಕಾಣಿಸಿದ್ದುಂಟೇ?" ಎಂದು ಪ್ರಶ್ನಿಸಿದೆ ನಾನು.

"ನೀನು ರಾತ್ರಿ ನಿದ್ರೆ ಬರಲಿಲ್ಲ ಅಂದೆಯಲ್ಲ."

"ಹೌದು ಬರಲಿಲ್ಲ, ತುಂಬ ದಣಿವಾದುದರಿಂದಲೋ ಏನೋ."

"ನೀನು ಬಂದಾಗ ನನಗೆ ಗೊತ್ತೇ ಇರಲಿಲ್ಲ. ಆಗೊಂದು ಗಡದ್ದು ನಿದ್ದೆ ಬಂದಿತ್ತು. ಒಂದು ಸಾರಿ ಎಚ್ಚರವಾಯಿತು; ಹೊರಕ್ಕೆ ಹೋಗಿ ಬಂದೆ. ನೀನು ಹಾಸಿಗೆಯಲ್ಲಿ ಗೊರೆಯುತ್ತಿದ್ದೆ."

"ನಾನೇ?"

"ಅಲ್ಲ ನಾನು. ಹೊರಗೆ ಹೋಗಿ, ಹಿಂದೆ ಬಂದೆ; ಬಂದವಳಿಗೆ ಮೈ ಜುಮ್ಮೆಂದಿತು. ಆಮೇಲೆ ಒಳಗೆ ಬಂದು ಮಲಗಿಕೊಂಡರೆ ಒಂದಿಷ್ಟೂ ನಿದ್ದೆ ಹತ್ತಲಿಲ್ಲ. ಏನೇನೋ ಕಾಣಿಸುತ್ತಿತ್ತು. ಏನೇನೋ ಕೇಳಿಸುತ್ತಿತ್ತು. ಬಹಳ ಗದ್ದಲವಾಗುತ್ತಿತ್ತು. ಒಂದು ರಾಶಿ ಜನ ಸೇರಿದ ಹಾಗಿತ್ತು. ಅವರೊಬ್ಬರನ್ನೂ ಊರಲ್ಲಾಗಲೀ, ಇನ್ನೆಲ್ಲಾಗಲೀ ಕಂಡ ನೆನಪು ಬರುವುದಿಲ್ಲ. ಅದರ ಒಂದು ತಮಾಷೆ ಹೇಳುತ್ತೇನೆ; ಅವರೆಲ್ಲರೂ ದೋಣಪ್ಪ ನಾಯಕರು."

"ಅಂದರೆ?"

"ಮೈ ಮೇಲೆ ಒಬ್ಬರಿಗೂ ನೂಲಿನ ಎಳೆ ಇರಲಿಲ್ಲ. ಮಕ್ಕಳೂ ಒಂದೇ, ಮುದುಕರೂ ಒಂದೇ. ಯಾವ ಗಂಡಸಿಗೂ ಮೈಮೇಲೆ ಅರಿವೆಯಿಲ್ಲ. ಹೆಂಗಸರಿಗೂ ಇಲ್ಲ. ಗಂಡಸರ ಮುಖದ ತುಂಬ ಗಡ್ಡ, ಮೀಸೆ. 'ಹೊಡೆ, ಬಡಿ' ಅನ್ನುತ್ತಿದ್ದರು. 'ಕುತ್ತು, ಕೊಲ್ಲು' ಅನ್ನುತ್ತಿದ್ದರು. 'ಹಂದಿ, ಹುಲಿ' ಎನ್ನುತ್ತಲೇ ಇದ್ದರು; ಬೆಳಗ್ಗಿನ ತನಕವೂ."

"ನನಗೂ ಅಂಥದೇ ಹಾಳು ಸ್ವಪ್ನ, ಅಜ್ಜಿ."

"ಅಂಥದೇ ಅಂದರೆ?"

"ನೀವಂದಿರಲ್ಲ ದೋಣಪ್ಪ ನಾಯಕರು ಬಂದರು ಅಂತ; ಅವರನ್ನು ಕಂಡೆ. ಬೇಟೆಯ ಬದಲು ಒಂದು ಹುಲಿಯೇ ನನ್ನನ್ನು ಹಿಡಿಯಲು ಬಂತು. ಅದರ ತಲೆಯ ಮೇಲೆ ಏಟನ್ನು ಕೊಟ್ಟು ಬಂದೆ. ಆಮೇಲೆ ನೂರಾರು ಬತ್ತಲೆ ಜನಗಳು ಬಂದು ನನ್ನನ್ನು ಮುತ್ತಿಕೊಂಡರು."

"ಇಬ್ಬಿಬ್ಬರಿಗೂ ಇಂಥ ಬತ್ತಲೆ ಜನಗಳ ಸ್ವಪ್ನ ಒಮ್ಮೆಗೇ ಕಾಣಿಸುವುದೆಂದರೆ ಆಶ್ಚರ್ಯ."

"ಆಶ್ಚರ್ಯವೇ."

ಅವರು ಅಷ್ಟನ್ನೆಲ್ಲ ತಿಳಿಸಿದಾಗ ನನಗೆ ಮೊದಲಿನ ಆಶ್ಚರ್ಯ ಕಳೆದು, ಭಯವೆನಿಸತೊಡಗಿತು. ನಾನು ಗವಿಯಿಂದ ತಂದಿದ್ದ ಒಡವೆ ವಸ್ತುಗಳನ್ನು ಗಂಟು ಕಟ್ಟಿ, ಅವರು ಮಲಗಿದ್ದ ಕೋಣೆಯ ನಾಗಂದಿಗೆಯ ಮೇಲೆ ಇರಿಸಿದ್ದೆನಷ್ಟೆ. ಗ್ರಹಚಾರಕ್ಕೆ ಅದರಲ್ಲಿ ಆ ಎಲುಬಿನ ಚೂರು ಇತ್ತು. ಅವರ ಸೂಕ್ಷ್ಮಜೀವಕ್ಕೆ ಹಾಗೆಲ್ಲವೂ ಕಾಣಿಸಿದ್ದು ಆ ಗಂಟು ಸಮೀಪ ಇದ್ದುದರಿಂದಲೇ- ಎನಿಸಿತ್ತು. ಆ ಕಾರಣವನ್ನು ತಿಳಿಸುವುದಕ್ಕೆ ಮಾತ್ರ ನನಗೆ ಧೈರ್ಯ ಬರಲಿಲ್ಲ. ಇದರಿಂದ ನನ್ನಲ್ಲಿ ಹುಟ್ಟಿಕೊಂಡ ಒಂದು ಹೊಸ ಅನುಮಾನವೆಂದರೆ- ನಮ್ಮ ಅಜ್ಜಿಯಲ್ಲಿ ಏನೋ ಒಂದು ಹೆಚ್ಚಿನ ಶಕ್ತಿಯಿದೆ. ಯಾವುದೋ ಒಂದು ಬಗೆಯ ಒಳ ತಿಳಿವಿದೆ. ಅದನ್ನು ಅಂತರ್‌ದೃಷ್ಟಿಯೋ, ದೂರದೃಷ್ಟಿಯೋ, ಏನೆಂದು ಹೇಳಲಾರೆ. ಅದರಿಂದಾಗಿಯೇ ಹೊರಗಣ ವಸ್ತುಗಳನ್ನು ಮುಟ್ಟಿದಾಗ, ಮಾತ್ರವಲ್ಲ ಅವು ಸಮೀಪ ಬಂದರೂ ಅವರ ಮೈ ಜುಮ್ಮಾಗುತ್ತದೆ. ಅವರಿಗೆ ಏನೇನೋ ಕಾಣಿಸತೊಡಗುತ್ತದೆ- ಎನಿಸಿತು. ಹಾಗಿದ್ದರೆ, ಅವರಿಗೆ ಕಾಣಿಸುವ ಕನಸುಗಳಿಗೂ ಆ ವಸ್ತುಗಳಿಗೂ ಸ್ವಲ್ಪವಲ್ಲ ಸ್ವಲ್ಪ ಸಂಬಂಧ ಇದ್ದೇ ಇರಬೇಕು. ಆ ದಿನ ಸಂಜೆ ನನ್ನ ಅಜ್ಜಿ ಪ್ರಸನ್ನವಾಗಿದ್ದರೆ ಅವರ ಕೈಯಲ್ಲಿ ನಾನು ತಂದ ಯಾವುದಾದರೂ ಒಂದೆರಡು ವಸ್ತುಗಳನ್ನಿರಿಸಿ 'ಅಜ್ಜಿ, ಇದೇನು ಹೇಳಿ' ಎಂದು ನೇರ ಕೇಳುವ ಆಸೆಯಾಯಿತು. ರಾಮಣ್ಣ ಬಿಟ್ಟು ಹೋದ ಸಂಚಿಯನ್ನು ಹಿಡಿದು ಅವರು ಎಷ್ಟೆಲ್ಲ ವಿಷಯಗಳನ್ನು ಒಳದೃಷ್ಟಿಯಿಂದ ಹೇಳಲಿಲ್ಲ? ಈಗಲೂ ಹೇಳಿಯಾರೇ? ಅವರ ರಾಮಣ್ಣ ಗುರುತಿನವ. ಅವನ ಕತೆ ಒಬ್ಬರಲ್ಲ ಒಬ್ಬರ ಬಾಯಿಯಿಂದ ಕೇಳಿದ ಸಂಗತಿ ಇದ್ದಿರಲೂಬಹುದು. ಅದರ ಜತೆಯಲ್ಲಿಯೇ ನಾಗಿ ಮತ್ತು ಅವನ ಪ್ರೀತಿ, ವಿರಸಗಳ ವಿಚಾರವನ್ನೂ ಕೇಳಿದ್ದಾರು. ಅದೂ ಆಶ್ಚರ್ಯದ ಸಂಗತಿಯೇ. ಸತ್ಯದ್ದೋ ಅಲ್ಲವೋ- ಎಂಬುದು ಮಾತ್ರ ನನಗೆ ತಿಳಿಯಲಾರದು. ಅವಳು ಗಂಡನ ಮೇಲೆ ಕೋಪಗೊಂಡು ಅವಿತುಕೊಂಡಿದ್ದ ಕಾಲದಲ್ಲಿ ಯಾರದೋ ಪುಸಲಾವಣೆಯಿಂದ ಶೀನಪ್ಪನ ಬಲೆಗೆ ಬಿದ್ದಳಂತೆ. ಹಾಗಿದ್ದರೆ, ಅದರಲ್ಲಿಯೂ ಒಂದಿಷ್ಟು ಸತ್ಯಾಂಶ ಇರಲೇಬೇಕೆಂದಾಯಿತು.

ಆದರೆ, ನಾನು ಗುಹೆಯಿಂದ ತಂದಿರುವ ಈ ಸಾಮಗ್ರಿಗಳ ವಿಚಾರದಲ್ಲಿ ಮಾತ್ರ ಅಂಥ ಯಾವುದೇ ಜೀವಂತ ಸಂಬಂಧ ಕಾಣಿಸುವುದಿಲ್ಲ. ಅವು ಯಾವ ರಾಯನ ಕಾಲದ ಒಡವೆಗಳೋ, ಏನೋ! ಸಾವಿರಾರು ವರ್ಷಗಳ ಹಿಂದಿನ ಒಡವೆಗಳವು. ಅವನ್ನು ತೋರಿಸಿದಾಗ ಏನು ಹೇಳಿಯಾರು? ಈಗಾಗಲೇ ಹೇಳಿದ ಸಂಗತಿಗಳು ನಿಜ-ಎನಿಸುವಂತಿವೆ.

ನನ್ನ ಬೇಸರವಂತು ಕಳೆಯಿತು. ಅವರೊಡನೆ "ಅಜ್ಜಿ, ಇನ್ನು ಸಾಯಂಕಾಲ ಮಾತನಾಡುವ, ನಿಮ್ಮ ಹತ್ತಿರ ತುಂಬ ಮಾತನಾಡಬೇಕೆಂದಿದೆ" ಎಂದು ಹೇಳಿ, ಚಾವಡಿಯಿಂದಿಳಿದು ಕೆಳಕ್ಕೆ ಬಂದೆ. ನನ್ನ ತಲೆಯ ಭಾರ ಇಳಿಯಲೇ ಇಲ್ಲ. ಅಜ್ಜಿಯಂತೆ ನಾನೂ ಒಂದು ತಪಸ್ಸು ಮಾಡುತ್ತೇನೆಂದು ಅಶ್ವತ್ಥದ ಕಟ್ಟೆಗೆ ಹೋಗಿ ಕುಳಿತೆ. ಆಗ ಆ ಯೋಚನೆ ಮೂಡಿತು; ಕೊನೆಗೆ ಕಂಡ ಆ ಗುಹೆಯಲ್ಲಿ ಅಷ್ಟೆಲ್ಲ ಬೂದಿ, ಮಣ್ಣು ಹೇಗೆ ಕಲೆಯಿತು? ಅದರ ನೆಲ ಇತರ ಗುಹೆಗಳಂತೆ ಶಿಲೆಯ ಹಾಸಿನಿಂದಾದದ್ದು. ಅಷ್ಟೆಲ್ಲ ಅದರ ಮೇಲೆ ಹಾಸಿಕೊಂಡಿದ್ದು ಬರಿಯ ಬೂದಿ ಇರಲಾರದು. ಅಷ್ಟೊಂದು ಬೂದಿ ಕಲೆಯುವುದಕ್ಕೆ ಎಷ್ಟು ವರ್ಷಗಳು ಬೇಕೋ! ಎಷ್ಟು ದೀರ್ಘಕಾಲ ಅಲ್ಲಿ ಬೆಂಕಿ ಉರಿಸಿರಬೇಕೋ! ಹಾಗೆ ಉರಿಸಿದರೆ ಗುಹೆಯ ಮುಚ್ಚಿಗೆಗೆ ಹೊಗೆ ಹಿಡಿದು ಹೋಗುತ್ತಿತ್ತು; ಕರ್‍ರಗಾಗುತ್ತಿತ್ತು. ಅಲ್ಲಿ ಬೂದಿಯೇನೋ ಇದೆ, ನಿಜ. ಇದ್ದಿಲೂ ಇದೆ, ನಿಜ. ಆದರೆ ಅಂಥ ಪ್ರಮಾಣದ ಬೆಂಕಿ ಉರಿದಿರಲಾರದು. ಹಾಗೆ ಉರಿದಿದ್ದರೆ ಚಿಪ್ಪುಗಳೂ, ಕವಡೆಗಳೂ, ಎಲುಬಿನ ಚೂರುಗಳೂ ಉಳಿಯುತ್ತಿರಲಿಲ್ಲ. ಪ್ರಾಯಶಃ- ಒಂದು ಕಾಲದಲ್ಲಿ ಆ ಗುಹೆಯ ಮುಂಗಡೆ ಎತ್ತರದ ಒಂದು ಗೋಡೆ ಕಟ್ಟಿದ್ದಿರಬೇಕು. ಮಳೆಯಿಂದ ಗೋಡೆ ಮಗುಚಿ ಒಳಕ್ಕೆ ಬಿದ್ದಿರಬೇಕು. ಬಿದ್ದ ಮಣ್ಣು ಹರವಿ ಕಾಲಾಂತರದಲ್ಲಿ ನೀರಿನ ಪಸೆಗೆ ಹಾಗೆ ಕಟ್ಟಿಕೊಂಡಿರಬೇಕು. ಈ ವಿಷಯವನ್ನು ನಿಷ್ಕರ್ಷೆ ಮಾಡುವುದಕ್ಕೆ ಮತ್ತೊಮ್ಮೆ ಹೋಗಬೇಕಾದೀತು-ಎನಿಸಿತು.

ಅಂತೂ ಈ ಯೋಚನೆಯಿಂದ ಒಂದಿಷ್ಟು ತಲೆಭಾರ ಕಡಿಮೆಯಾಯಿತು. ಅಲ್ಲಿಂದ ವಿಷಯ ಅಜ್ಜಿಯ ಕಡೆಗೆ ಹೊರಳಿತು. ಅವರ ಮಾತುಗಳು ನನಗೆ ಅರ್ಥವಾಗದೆ ಹೋದರೂ, ಅವರ ಜೀವನ ಕಳೆದ ರೀತಿಯೇ ಒಂದು ತೆರ ಎನಿಸಿತು. ತನ್ನದೇ ಆದೊಂದು ಕಣ್ಣಿನಿಂದ ಸಂಪ್ರದಾಯದ ಎಲ್ಲೆ ಮೀರಿ, ಅವರು ಸುತ್ತಣ ಜಗತ್ತನ್ನು ಕಾಣುತ್ತ ಬಂದವರು. ತಮ್ಮ ಮನಸ್ಸನ್ನು ಉದ್ದೇಶಪಟ್ಟು, ಇಲ್ಲವೆ ಬಾಯಿಬಿಟ್ಟು ಇತರರಿಗೆ ಹೇಳದೆ ಹೋಗಿರಬಹುದು. ಹೇಳಿದ್ದರೆ ಕೇಳಿದವರು ನಕ್ಕಾರು ಎಂಬ ಭಯವೂ ಆಗಿರಬಹುದು. ಅಂಥ ಭಯದಿಂದ ತಮ್ಮ ಬಾಯನ್ನು ಬಿಗಿ ಹಿಡಿದರು. ಅವರ ಮೌನದಿಂದ ನಾಲ್ಕು ಜನರಿಂದ ಸಿಗಬಹುದಾದ ಪ್ರಯೋಜನ ಮಾತ್ರ ಸಿಗದಾಯಿತು.

ಹೆಣ್ಣು ಗಂಡುಗಳನ್ನು ಕುರಿತು ಅವರು ಆಡುತ್ತಿದ್ದ ಮಾತುಗಳು ನನಗಂತು ಬಲು ಮಹತ್ವದ್ದಾಗಿ ಕಾಣಿಸುತ್ತವೆ. 'ಹೆಣ್ಣು-ಗಂಡಿನ ಮೋಹ ಅವರವರು ಮಾಡಿಕೊಂಡದ್ದಕ್ಕಿಂತ ಹೆಚ್ಚಿಗೆ ಸೃಷ್ಟಿಯೇ ಜೀವಿಗಳೊಳಗೆ ತುಂಬಿಸಿಟ್ಟ ಪ್ರೇರಣೆ' ಎಂಬುದು ಅವರ ಮಾತಾಗಿದೆ. ಆದುದರಿಂದಲೇ ಅವರಿಗೆ ರಾಮಣ್ಣನ ಮೇಲೆ ಅಷ್ಟೊಂದು ಅನುಕಂಪ. ಬಹಳ ಹಿಂದಿನ ನೆನಪನ್ನು ತಂದುಕೊಂಡರೆ ಆ ನಾಗಿಯ ವಿಚಾರದಲ್ಲೂ ಅವರು ಕನಿಕರದಿಂದಲೇ ಆಡಿದವರು. ನನ್ನ ಮಾವನನ್ನು ಕುರಿತು ಆಡಿದಾಗಲೂ ಜನರು ಆಡಿದಷ್ಟು ಕಠಿಣವಾಗಿ ಅವರು ನುಡಿದಿರಲಿಲ್ಲ. ಆ ಮಾವನ ಸಂಗತಿಯನ್ನು ನನಗೆ ಬಣ್ಣಿಸಲು ಹೋಗಲೂ ಇಲ್ಲ; ಅವನ ವಿಚಾರದಲ್ಲಿ ನಿಂದಿಸಿ ನಾಲಿಗೆ ತೀಟೆಯನ್ನು ತೀರಿಸಿಕೊಳ್ಳಲೂ ಇಲ್ಲ. ಆದರೆ ಒಂದು ಸಂಗತಿ; ಹದಿನೈದು ವರ್ಷಗಳ ಹಿಂದಿನ ಕತೆ ಅದು. ನನ್ನ ನೆನಪು ಅಷ್ಟು ಗಟ್ಟಿಯಾದದ್ದು ಎಂದು ಹೇಳುವ ಧೈರ್ಯವೂ ಇಲ್ಲ. ಅಲ್ಲದೆ, ಆಗ ನನ್ನ ಪ್ರಾಯವೆಷ್ಟಿತ್ತು? ಕಾಮವೇನೆಂದೇ ಗೊತ್ತಿರಲಿಲ್ಲ; ಪ್ರೇಮದ ವಿಚಾರ ತಿಳಿದದ್ದೂ ಅಷ್ಟಕ್ಕಷ್ಟೇ. ಹಾಗಾಗಿ, ಯಾತಕ್ಕೆ ಇನ್ನೊಮ್ಮೆ ಅವರನ್ನು ಈ ವಿಷಯದಲ್ಲಿ ಉಪಾಯದಿಂದ ಕೇಳಬಾರದು- ಎಂಬುದಾಗಿ ತೋರಿತು.

ಒಮ್ಮೊಮ್ಮೆ ನೆನೆದಾಗ ನನ್ನ ಯೋಚನೆಗಳು ನನಗೇ ವಿಪರೀತದ್ದಾಗಿ ಕಾಣಿಸುತ್ತವೆ. ನಮ್ಮ ಅಜ್ಜಿ ಅಷ್ಟೊಂದು ದೀರ್ಘಕಾಲ ಕಾಮ ತುಂಬಿದ ಸಾಂಸಾರಿಕ ಆವರಣದಲ್ಲಿದ್ದೂ ಅಂಥ ವೈರಾಗ್ಯ ಜೀವನ ಹೇಗೆ ನಡೆಸಿದರು? ಯೌವನ ಎಂಬುದು ಕಾಲಿರಿಸಿದಾಗ ಅವರ ಮನಸ್ಸು ವಿಷಯ ವಾಸನೆಯಿಂದ ತೊಳಲಾಡದಾಯಿತೇ- ಎಂಬ ಪ್ರಶ್ನೆಗಳು ನನ್ನಲ್ಲಿ ಹುಟ್ಟುತ್ತವೆ. ಅಂಥದನ್ನು ಬಾಯಿಬಿಟ್ಟು ಕೇಳುವುದು ಹೇಗೆ? ಹಾಗೆ ಯಾರಾದರೂ ಕೇಳುತ್ತಾರೆಯೇ? ಕೇಳಿದರೆ ಏನು ಹೇಳಿಯಾರು? ಒಂದಲ್ಲ ಒಂದು ದಿನ ಪರೋಕ್ಷವಾಗಿ ಕೇಳಬೇಕು- ಎಂಬ ಆಸೆಯೇನೋ ಉಳಿದುಕೊಂಡಿತು.

ಮಧ್ಯಾಹ್ನ ಊಟವನ್ನು ಮುಗಿಸಿ ನಾನು ಮಲಗಿಕೊಂಡೆ. ಒಳ್ಳೆಯ ನಿಶ್ಚಿಂತ ನಿದ್ರೆಯೂ ಬಂದಿತು. ಅನಂತರ ಎದ್ದವನು, ಮಾಡುವ ಕೆಲಸವಿಲ್ಲದ್ದಕ್ಕೆ ಗುಹೆಯಿಂದ ತಂದ ಸಾಮಾನುಗಳನ್ನು ನೋಡುತ್ತೇನೆಂದು ಯೋಚಿಸಿದೆ. ಅಷ್ಟರಲ್ಲಿಯೇ ಕಣ್ಣೆದುರಿಗೆ ಮಕ್ಕಳು ಓಡಾಡತೊಡಗಿದುದರಿಂದ, ಅವನ್ನು ಅವುಗಳ ಕಣ್ಣಿಗೆ ಬೀಳಿಸಿ ಮನೆಯುವಳಿಂದ ಏನಾದರೂ ಅನ್ನಿಸಿಕೊಳ್ಳುವ ಪ್ರಸಂಗ ಬೇಡವೇ ಬೇಡವೆಂದು ತೋರಿ, ಅಲ್ಲಿಂದ ಹೊರಬಿದ್ದೆ. ಬಯಲು ದಾರಿಯಾಗಿ ಜನ್ನನ ಮನೆಯ ಕಡೆಗೆ ಹೊರಟೆ- ಭೂಪತಿ ಹೇಗಿದ್ದಾನೆಂದು ನೋಡಿ ಬರುವ ಚಪಲವಾಗಿ. ನಡುದಾರಿಯಲ್ಲಿ ಅವನೇ ಕಾಣಸಿಕ್ಕಿದ. ಕಾಲನ್ನು ಸ್ವಲ್ಪ ಕುಂಟಿಸುತ್ತಿರುವುದು ದೂರದಿಂದಲೇ ಕಾಣಿಸಿತು. ಆತ ಹೊರಟಿದ್ದು ನಮ್ಮಲ್ಲಿಗೇ ಇರಬೇಕು. ಸಮೀಪ ಬಂದಾಗ ಕಾಲು ಬೆರಳಿಗೆ ಅರಿವೆ ಸುತ್ತಿಕೊಂಡಿದ್ದು ಕಾಣಿಸಿತು. "ಇದೇನು ಮಹಾರಾಯ?" ಎಂದು ಪ್ರಶ್ನಿಸಿದೆ.

"ನಿನ್ನೆಯ ಪ್ರಸಾದ. ಮೂರು, ಮೂರು ಬಾರಿ ಬಲ ಹೆಬ್ಬೆರಳಿಗೆ ಬೇರು ಬಡಿದು ಇಷ್ಟು ಬಾತುಕೊಂಡಿದೆ."

"ರಾತ್ರಿ ಚೆನ್ನಾಗಿ ನಿದ್ರೆ ಬಂದಿತೋ?" ಎಂದು ಕೇಳಿದೆ.

"ಬಾರದೆ!" ಎಂಬ ಉತ್ತರ ಬಂದಿತು.

"ಅಲ್ಲ, ರಾತ್ರಿ ಸ್ವಪ್ನದಲ್ಲಿ ಕಾಳಿಂಗನ ಹಾವು ಕಾಣಿಸಿ ಬೊಬ್ಬೆ ಹೊಡೆಯಲಿಲ್ಲವಲ್ಲ."

"ಅಬ್ಬಾ ನಿನ್ನ ಬಾಯಿಯೇ! ನಿಜಕ್ಕೂ ನೋಡು... ಒಂದು ಭಾರೀ ಕಪ್ಪು ಸರ್ಪ ನನ್ನನ್ನು ಅಟ್ಟಿಕೊಂಡು ಬಂದು ಎಲ್ಲಿಗೆ ಹೋದರೂ ಬಿಡದೆ ಕಾಡಿತು. ಕೊನೆಗೆ, ಅಣ್ಣುನಾಯ್ಕ ಒಂದು ಸೋಟೆಯನ್ನು ಹಿಡಿದುಕೊಂಡು ಅದರ ತಲೆಗೇ ಬಡಿದ. ಅದು ಸತ್ತುಹೋಯಿತು ಎಂದು ಕಾಣಿಸುತ್ತದೆ..."

"ಇನ್ನೊಂದು ಸಾರಿ ಯಾವಾಗ ಹೋಗುವುದೆಂದು ಹೇಳು."

"ಇನ್ನೊಂದು ಸಾರಿಯೋ! ನೀನು ಬೇಕಾದರೆ ಹೋಗು; ನಾನು ಒಲ್ಲೆ. ನಿನ್ನ ತಮ್ಮ ಶಿವಮೊಗ್ಗದಿಂದ ಊರಿಗೆ ಬರುವುದು ಯಾವಾಗ? ಅಣ್ಣ ತಮ್ಮಂದಿರು ಇಬ್ಬರೂ ಸೇರಿ ರಾಮ ಲಕ್ಷ್ಮಣರಂತೆ ಹೊರಡಿ. ಆಮೇಲೆ ಬೇಕಾದರೆ ನೀನು ನಿನ್ನ ಹೆಂಡತಿಯನ್ನೂ ಜತೆಗೆ ಕರೆದುಕೊಂಡು ಹೊರಡು. ಅಣ್ಣುನಾಯ್ಕ ನಿಮ್ಮ ಪಾಲಿನ ಆಂಜನೇಯ. ಅವನಾದರೆ ಗಟ್ಟಿ ಜನ. ಒಂದು ಚೂರೂ ಹೆದರಿಕೆ ಇಲ್ಲ; ಒಂದಿಷ್ಟೂ ಬಿಸಾತಿಲ್ಲ."

"ಅವನ ಮನೆಯ ಸುತ್ತಲೂ ಕಾಡೇ. ಅವರ ಜನ ಯಾವಾಗಲೂ ಬೀಳು, ಬೆತ್ತ, ಮತ್ತೊಂದು ಎಂದು ಕಾಡಿನಲ್ಲೇ ಸುತ್ತಾಡುವವರು. ಉರುಳು, ಕರ್ಪು ಅಂತ ಇರಿಸಿ ಏನಾದರೂ ಹಿಡಿಯುವವರು. ಅವರಿಗೆಲ್ಲ ಏನು ಭಯ?"

"ನನಗೆ ಮತ್ಯಾವುದರ ಭಯವೂ ಅಲ್ಲ; ಸರ್ಪದ್ದೇ ಭಯ. ಸಣ್ಣದರಲ್ಲಿ ಒಮ್ಮೆ ಗದ್ದೆಯ ಅಂಚಿನ ಮೇಲೆ ಶಾಲೆಗೆ ಹೋಗುವಾಗ ಒಂದು ಹಾವನ್ನು ಕಂಡು ದಿಗಿಲುಗೊಂಡಿದ್ದೆ. ಆಮೇಲೆ ಕೆರೆ ಹಾವು ನೋಡಿದರೂ ಭಯವೇ. ಕಾಳಿಂಗನ ಹಾವಿನ ಹೆಸರನ್ನು ಕೇಳಿದರೇ ಹೆದರಿಕೆ. ಆದರೂ ಜನರ ಬಾಯಿಯಿಂದ ಅದರ ವರ್ಣನೆಯನ್ನಾದರೂ ಕೇಳಿದ್ದೇನಲ್ಲ. ಜಡೆ ಬಿಡಿಸುತ್ತದೆ; ಸಿಳ್ಳು ಹಾಕುತ್ತದೆ- ಎಂತ ಏನೇನೋ ಹೇಳುತ್ತಾರಲ್ಲ. ಅದನ್ನು ಕೇಳಿದ್ದರಿಂದ ಗಾಬರಿ ನಟ್ಟುಹೋಗಿದೆ."

"ಛೀ ಅಂಥದೇನಿಲ್ಲ. ಹಾಗೆ ಅದು ಊರು ಮನೆಗಳ ವಠಾರಕ್ಕೆ ಬರುವುದೆಂಬುದಿಲ್ಲ. ಇಷ್ಟು ದಿವಸಗಳಲ್ಲಿ ಒಂದು ಸಾರಿ ಅದು ಊರಿಗೆ ಬಂದದ್ದನ್ನು ಕೇಳಿದ್ದೆ. ನಮ್ಮೂರ ಸೆರಗಿನಲ್ಲಿ ಅದೊಂದು ಕನ್ನಡಿ ಹಾವನ್ನು ನುಂಗುತ್ತಿದ್ದಾಗ ಕಟ್ಟಿಗೆ ಕಡಿಯಲು ಹೋದವರ ಕಣ್ಣಿಗೆ ಬಿತ್ತಂತೆ. ಅದನ್ನು ಕಡಿದು ಕೊಚ್ಚಿ ಹಾಕಿದರೆಂದು ಕೇಳಿದ್ದೆ. ನಾನು ಆಗ ಸಣ್ಣವ.

ಸುದ್ದಿಯನ್ನು ಕೇಳಿ ಆ ಸ್ಥಳಕ್ಕೆ ಹೋಗುವುದರೊಳಗೆ ಅದನ್ನು ಸುಟ್ಟು ಬೂದಿ ಮಾಡಿದ್ದರು. 'ನಾಲ್ಕು ಮಾರು ಉದ್ದವಿತ್ತು; ತುಂಬ ದಪ್ಪನಾಗಿತ್ತು. ಮೈಮೇಲೆ ಉಂಗುರದ ಹಾಗಿನ ಗೆರೆಯಿತ್ತು' ಎಂದರು."

"ಅದಕ್ಕೆ ಜಡೆಯಿತ್ತೆ?" ಎಂದು ಕೇಳಿದ್ದಕ್ಕೆ "ಜಡೆಯೂ ಇಲ್ಲ; ತುರುಬೂ ಇಲ್ಲ" ಎಂಬುದು ನಿಜ. ಬಹಳ ಮಟ್ಟಿಗೆ ಅದನ್ನು ಕಾಣದಿದ್ದವರು ಬಣ್ಣ ಹಚ್ಚಿ ಹೇಳುವ ಮಾತುಗಳಿಂದ ನಮ್ಮಲ್ಲಿ ಭಯ ಹುಟ್ಟುವುದು. ಮೈಸೂರು ಜೂವಿನಲ್ಲಿ ಇದೆಯಲ್ಲ ಒಂದು ಕಾಳಿಂಗನ ಹಾವು, ಅದು ಹೆಡೆ ಬಿಡಿಸಿ ಮೂರು ನಾಲ್ಕು ಅಡಿ ಎತ್ತರಕ್ಕೆ ಮೈನಿಮಿರಿಸಿ ನಿಂತದ್ದನ್ನು ಕಂಡರೆ ಭಯವಾಗುವುದು ಸಹಜವೇ." ಅಲ್ಲಿಂದ ನಾವಿಬ್ಬರೂ ಹೀಗೆ ಮಾತನಾಡುತ್ತ ನಮ್ಮ ಮನೆಯ ಕಡೆಗೆ ಹೊರಟೆವು. ಅಶ್ವತ್ಥದ ಕಟ್ಟೆ ಕಾಣಿಸಿತು. ಅಜ್ಜಿ ನನ್ನೊಡನೆ "ಜನ್ನ ಊರಿಗೆ ಬಂದು ಎಷ್ಟು ದಿನವಾಯಿತಂತೆ?" ಎಂದು ಪ್ರಶ್ನಿಸಿದರು.

"ಹದಿನೈದು ದಿನವಾಯಿತು." ಎಂದ ಅವನೇ.

"ಒಂದು ಸಂಗತಿ ಹೇಳುತ್ತೇನೆ ನಿನಗೆ; ನೀನು ಸುಳ್ಳು, ಪೊಳ್ಳು ಅನ್ನಬೇಡ. ಹೇಳುವುದನ್ನೇನೋ ಹೇಳುತ್ತೇನೆ. ಕೇಳುವುದು ನಿನ್ನಿಷ್ಟ. ನಿನಗೆ ನಮ್ಮ ಸುಬ್ರಾಯ ಮಾಣಿಯದೇ ಪ್ರಾಯವಷ್ಟೇ. ಅವನಿಗೀಗ ಎರಡು ಮಕ್ಕಳಾದುವು. ನೀನು ಮದುವೆ ಮಾಡಿಕೊಳ್ಳುವುದು ಎಂದು?"

"ಆಗುತ್ತೇನೆ ನಿಧಾನವಾಗಿ."

"ಹಲ್ಲು ಉದುರಿದ ಮೇಲೆಯೋ? ನಿನ್ನ ಅಮ್ಮನಿಗೆ ನಿನ್ನದೇ ಯೋಚನೆ. ಅವಳು ಅಲ್ಲಿ, ಇಲ್ಲಿ ಹೆಣ್ಣನ್ನು ನೋಡಿದ್ದಾಳೆ. ಅದು ನಿನಗೆ ಹಿಡಿಸುವುದಿಲ್ಲ. ನಿನ್ನ ತಲೆಗೆ ಬಂದವಳನ್ನೇ ಆಗಬಹುದಲ್ಲ. ಊರುಮನೆಯ ಹೆಣ್ಣು ಬೇಡವಾದರೆ ಬೇಡ."

"ಏನು ಅವಸರ ಅಜ್ಜಿ? ಆದ ಮೆಲ್ಲಗೆ..."

"ಮೆಲ್ಲಗೆ ಆಗುವುದರಿಂದ ನಿನಗೇನೂ ಬಾಧಕವಿಲ್ಲ; ಹೆಣ್ಣಿಗೆ ಬಾಧಕ. ಅವಳು 'ಏನನ್ನಾದರೂ ಮಾಡಿಕೊಂಡರೆ ದೇವರೇ ಗತಿ."

"ಯಾರು ಏನಾದರೂ ಮಾಡಿಕೊಂಡರೆ?"

"ನೀನು ಮೆಚ್ಚಿದವಳು."

"ನಾನು ಯಾರನ್ನೂ ಮೆಚ್ಚಿಲ್ಲ ಅಜ್ಜಿ."

"ಬರೀ ಸುಳ್ಳುಗಾರ. ನಿನ್ನ ಅಜ್ಜ ತನ್ನ ಬದುಕನ್ನು ಹಾಳುಮಾಡಿಕೊಂಡು ಯಾರ್ಯಾರನ್ನೋ ದಾರಿಯ ಮೇಲೆ ಕೆಡೆದ ಹಾಗೆ ನೀನೂ ಆಗಬಾರದು- ಎಂಬುದಕ್ಕೆ

ಹೇಳಿದೆ. ಈ ಮರುಳು ಅಜ್ಜಿಗೆ ಏನು ತಿಳಿದೀತು- ಅಂತ ಬರಿದೆ ಹಾರಿಸಬೇಡ. ನಾಲ್ಕಾರು ಹೆಣ್ಣುಗಳ ಬೆನ್ನು ಹತ್ತಿ ತಲೆಯನ್ನು ಕೆಡಿಸಿಕೊಳ್ಳಬೇಡ. ಅದು ನಿನ್ನ ಒಳ್ಳೆಯದಕ್ಕೂ ಅಲ್ಲ. ಒಬ್ಬಳು ನಿನ್ನನ್ನು ನಂಬುವ ಹಾಗಿರಬೇಕು; ನೀನು ಅವಳನ್ನು ನಂಬುವ ಹಾಗಿರಬೇಕು; ಇಲ್ಲದೆ ಹೋದರೆ ಬದುಕಿನಲ್ಲಿ ಸುಖ ಸಿಗುವುದು ತೀರ ಕಷ್ಟ. ನೀನು ಸುಖವಾಗಿರಬೇಕು ಎಂದೆಣಿಸಿ ಬುದ್ಧಿ ಹೇಳಿದೆ."

ಜನ್ನನ ಮುಖ ಪೆಚ್ಚಾಗಾಯಿತು. ಆತ ಮಾತನಾಡಲಿಲ್ಲ. ನನ್ನ ಎದುರಿಗೆ ಅಜ್ಜಿ ಆಡಿದ ಮಾತುಗಳೆಂಬುವು ಅವನಲ್ಲಿ ಉರಿಯನ್ನು ಹೊತ್ತಿಸಿರಬೇಕು. "ಹೋಗುವ; ಜತೆಯಲ್ಲಿ ತಿರುಗಾಡಿಕೊಂಡು ಬರುವ" ಎಂದು ಹೊರಟುನಿಂತ; ನಾನೂ ಅವನ ಜತೆಯಲ್ಲಿ ಹೊರಟುಹೋದೆ. ದಾರಿಯಲ್ಲಿ ನಾನಾದರೂ ಈ ವಿಷಯವನ್ನು ಕುರಿತು ಯಾವ ಮಾತನ್ನೂ ಆಡಲಿಲ್ಲ. ಅವನು ಮಾತ್ರ ಅದೇ ಅದೇ ವಿಷಯಕ್ಕೇ ಬಂದು "ಇದಕ್ಕೇನೆ ಹೇಳುವುದು- ನಿನ್ನ ಅಜ್ಜಿಗೆ ತಲೆ ಕೆಟ್ಟಿದೆಯಂತ. ಅವರು ದೊಡ್ಡವರು, ಪ್ರಾಯ ಸಂದವರು, ಮೊದಲಿನಿಂದಲೂ ತಲೆ ಸರಿಯಿಲ್ಲ- ಎಂದು ಸುಮ್ಮನಿದ್ದೆ. ಆದರೂ ಹಾಗೆಲ್ಲ ಅವರು ಹೇಳುವುದೇ? ನನಗೆ ನನ್ನ ಒಳ್ಳೆಯದು ಏನು ಎಂಬುದನ್ನು ಅವರು ಕಲಿಸಿಕೊಡಬೇಕೇ?" ಎಂದು ಬೇಸರ, ಸಿಟ್ಟುಗಳನ್ನು ಬೆರೆಸಿಯೇ ಮಾತನಾಡಿದ. ನಾನು ಆ ವಿಚಾರದಲ್ಲಿ ಪಿಟ್ಟೆಂದು ಮಾತನಾಡಲಿಲ್ಲ. ಅಂತು, ಆ ಸಂಜೆ ನಮ್ಮ ವಿಹಾರ ವಿರಸದಲ್ಲಿ ಮುಗಿಯಿತು. ನನ್ನ, ಅವನೊಳಗಿನ ವಿರಸವಲ್ಲ. ನಿನ್ನೆ ದಿನ ವಿಹಾರದ ಸಂತೋಷ ಸರ್ಪದ ಹೆಸರನ್ನು ಕೇಳಿ ಜನ್ನನ ಪಾಲಿನ ಸಂತಸವನ್ನು ಕೆಡಿಸಿದ ಹಾಗೆ, ಇವತ್ತಿನ ವಿಹಾರ ಅಜ್ಜಿಯಿಂದಾಗಿ ಹೆಣ್ಣಿನ ಹೆಸರು ಸುಳಿದುದರಿಂದ ಕೆಟ್ಟೇ ಹೋಯಿತು.

ನನ್ನ ಭಯ ಅದಲ್ಲ. ಅಜ್ಜಿ ನಿಜಕ್ಕೂ ಅವನ ಸ್ವಭಾವ ಅಥವಾ ನಡತೆಯ ನಿಜವನ್ನು ತಿಳಿದೇ ಅಷ್ಟೆಲ್ಲ ಬುದ್ಧಿ ಹೇಳಿದರು- ಎಂಬುದರಿಂದ. ಹಾಗಾಗಿ, ಅವನ ವಿಷಯದಲ್ಲಿಯೂ ನನಗೆ ಅಸಮಾಧಾನ ಮೊಳೆಯಿತು. ಆತ ಸರಳ; ನನ್ನೊಂದಿಗೆ ಯಾವ ವಿಷಯದಲ್ಲಿಯೂ ಮುಚ್ಚುಮರೆ ತೋರಿಸುವವನಲ್ಲ- ಎಂದು ತಿಳಿದುಕೊಂಡಿದ್ದೆ. ಈಗ ಅದೇ ವಿಷಯದಲ್ಲಿ ಅಪನಂಬಿಕೆ ಹುಟ್ಟುವಂತಾಯಿತು. ಸಾಕ್ಷಿಯೇನಿಲ್ಲ ಅದಕ್ಕೆ.

ಸಂಜೆ ಅವನೊಂದಿಗೆ ತಿರುಗಾಟವನ್ನು ಮುಗಿಸಿ ಅವನನ್ನು ಅವನ ಮನೆಗೆ ಕಳುಹಿಸಿಕೊಟ್ಟೆ. ಬೇರೆ ಪ್ರಸಂಗವಾಗಿದ್ದರೆ ಇನ್ನೂ ಎರಡು ಗಳಿಗೆಯ ಕಾಲ ಅವನೊಂದಿಗೆ ಹರಟೆ ಹೊಡೆಯುತ್ತಿದ್ದೆನೋ ಏನೋ. ಆದರೆ ನನಗೆ ಅಜ್ಜಿಯನ್ನು ಮಾತನಾಡಿಸಬೇಕೆಂಬ ತವಕ ಹುಟ್ಟಿತು. ನಾನು ತಿರುಗಿ ಮನೆಯನ್ನು ಸೇರುವಾಗ ಬಾನಿನಲ್ಲಿ ತಿಂಗಳು ಬೆಳಕಿತ್ತು. ಮನೆಗೆ ಬಂದು ಕಾಲುಗಳನ್ನು ತೊಳೆದುಕೊಂಡು, ಚಾವಡಿಯ ಮೇಲೆ ಹೋಗಿ ಕುಳಿತೆ. ಮಕ್ಕಳು ಬಂದು ಕತೆಗಾಗಿ ಪೀಡಿಸಿದವು. ಒಂದೆರಡು ಸುಳ್ಳಂಬಳ್ಳಿ ಕತೆಗಳನ್ನು ಹೇಳಿ

ಮುಗಿಸುವಾಗ ಊಟಕ್ಕೆ ಕರೆ ಬಂದಿತು. ಹೊರಡುವ ದೊದಲು ಅಜ್ಜಿಯನ್ನು ಕಂಡು "ಅಜ್ಜಿ, ಇಂದು ಪಸಂದ ಬೆಳದಿಂಗಳಿದೆ" ಎಂದೆ.

"ಹುಣ್ಣಿಮೆಯಲ್ಲವೇ?"

"ಇರಬೇಕು, ಅದು ನನ್ನ ತಲೆಗೆ ಹೋಗಲಿಲ್ಲ. ಒಂದಿಷ್ಟು ಊಟಮಾಡಿಕೊಂಡು ಬರುತ್ತೇನೆ. ಅಶ್ವತ್ಥದ ಕಟ್ಟೆಯಲ್ಲಿ ಕುಳಿತು ಮಾತನಾಡುವ."

"ಮಧ್ಯಾಹ್ನವೆಲ್ಲ ಅದನ್ನೇ ಮಾಡಿದ್ದು ನೀನು. ಇವತ್ತು ಇಡೀ ದಿವಸ ತೋಟದ ಕಡೆಗೆ ಮುಖ ಹಾಕಲಿಲ್ಲ."

"ಹೋದರಾಯಿತು. ಅಲ್ಲೇನೂ ಕೆಲಸ ಗುಡ್ಡೆ ಬಿದ್ದಿಲ್ಲ. ಇವತ್ತು ನೀರು ಬಿಡುವ ದಿವಸವೂ ಅಲ್ಲ. ನಿಮ್ಮ ಹತ್ತಿರ ನನಗೆ ಏನೇನೋ ಕೇಳಲಿಕ್ಕಿದೆ" ಎಂದಂದು ಊಟಕ್ಕೆ ಹೊರಟೆ. ಊಟ ಅವಸರ, ಅವಸರದಲ್ಲಿಯೇ ಆಗಿರಬೇಕು. ಸೀತೆಗೆ ನನ್ನ ಅವಸರವೂ ಕಾಣಿಸಿರಬೇಕು. "ಹುಳಿಯನ್ನು ಅಷ್ಟು ಸಾಪಾಗಿ ಮಾಡಿದ್ದೆ- ಮಾವಿನಹಣ್ಣು, ಸೌತೇಕಾಯಿ ಹಾಕಿ. ಯಾಕೆ ಅವಸರ?" ಎಂದು ಕೇಳಿದಳು. ನಾನು ಮಾತಾಡಲಿಲ್ಲ. ಊಟ ಮುಗಿಸಿ ಹೊರಕ್ಕೆ ಬಂದೆ. ಮಕ್ಕಳು ಎದ್ದು ಬರುವ ಮೊದಲೇ ಧಾವಿಸಿ ಬಂದು, ಚಪ್ಪರಕ್ಕೆ ಸಿಕ್ಕಿಸಿದ ಚೀಲದಿಂದ ಕೊಂಬಿನ ಚೂರನ್ನು ತೆಗೆದು ಅಜ್ಜಿಯ ಬಳಿಗೆ ಹೋಗಿ "ಕಟ್ಟೆಗೆ ಹೋಗುವ" ಎಂದೆ.

"ಇಲ್ಲೇ ಕೂತು ಮಾತನಾಡುವ" ಎಂದರು ಅವರು.

"ಮಕ್ಕಳ ರಗಳೆ; ಇಲ್ಲಿ ಬೇಡ"

ಹೇಗೋ ದೊಡ್ಡ ಮನಸ್ಸು ಮಾಡಿ ಎದ್ದರು. ಹಗಲು ಹೊತ್ತು ಅಶ್ವತ್ಥದ ಕಟ್ಟೆಯ ಮೇಲೆ ಎಷ್ಟೊಂದು ಹೊತ್ತನ್ನೂ ಕಳೆಯುತ್ತಾರೆ ಅವರು. ರಾತ್ರಿ ಕಾಲ ಅಲ್ಲಿಗೆ ಹೋಗುವುದು ಕಡಿಮೆ. ಬೇಸಿಗೆಯಲ್ಲಿ ಸೆಕೆ ಅತಿಯಾಗಿ ಕಾಣಿಸಿದರೆ 'ಅಲ್ಲಿ ಜಾಜಿಯನ್ನು ಹಾಕಿ ಒರೆದ ನೆಲದ ಮೇಲೆ ಕುಳಿತುಕೊಂಡು ಬರುವ' ಎನ್ನುವುದುಂಟು; ಆದುದರಿಂದ, ನಾವಿಬ್ಬರೂ ಹೊರಟುಹೋದುದು ಮನೆಯಾಕೆಗೆ ಆಶ್ಚರ್ಯವನ್ನು ಹುಟ್ಟಿಸಲಿಲ್ಲ. ನಡುದಾರಿಯಲ್ಲಿ ನನ್ನೆರಡು ಮಕ್ಕಳು "ಅಪ್ಪಯ್ಯ, ನಾವು ಬರುತ್ತೇವೆ" ಎಂದು ಕಿರುಚಿದ್ದು ಕೇಳಿಸಿತು. ಅವರ ತಾಯಿ ಗದರಿಸಿದ್ದೂ ಕೇಳಿಸಿತು.

ಕಟ್ಟೆಗೆ ಹೋಗಿ ಕುಳಿತುಕೊಂಡ ನನಗೆ ಅವಸರ ಹೇಳತೀರದು. "ಅಜ್ಜಿ, ಕೈ ಹಿಡಿಯಿರಿ, ಇದನ್ನು ನೋಡಿ. ಇದು ಅಲ್ಲಿ ನನಗೆ ಸಿಕ್ಕಿದ್ದು. ಅಲ್ಲಿ ಅಂದರೆ ನಿನ್ನೆ ಹೋದಲ್ಲಿ" ಎಂದೆ. ಅನಂತರ ಸುಮ್ಮನಾದೆ. ಅವರು ಅದನ್ನು ಕೈಗೆ ತೆಗೆದುಕೊಂಡರು. ಏನು ಅನಿಸಿತೋ ತಿಳಿಯೆ. ಬಾಯಿಯಿಂದ ಮಾತೇ ಹೊರಡಲಿಲ್ಲ. ಕಾಲು ಗಳಿಗೆ ಸಂದರೂ ಮೌನವೇ;

ಅವರ ಬೆರಳು ಆ ಕೊಂಬಿನ ಚೂರನ್ನು ಸವರುವುದು ಕಾಣಿಸುತ್ತಿತ್ತು.

"ಏನು ಮಾಣಿ ಇದು?"

"ನೀವೇ ಹೇಳಬೇಕಜ್ಜಿ, ನನಗೆ ಗೊತ್ತಿದ್ದರೆ ಕೇಳುತ್ತೇನೆಯೇ?"

"ನಿನ್ನೆ ಇದನ್ನೇ ಎಲ್ಲಾದರೂ ನನ್ನ ಕೋಣೆಯಲ್ಲಿ ಇಟ್ಟಿದ್ದೆಯೋ?"

"ಹೌದು."

"ಹಾಗಾದರೆ ನಿನ್ನೆ ರಾತ್ರಿ ಅಷ್ಟೆಲ್ಲ ಕಾಣಿಸಿದ್ದು ಆಶ್ಚರ್ಯವಲ್ಲ."

"ಏನು ಸಂಗತಿ?"

"ನನಗೊಂದೊಂದೂ ತಲೆಬುಡವಾಗುವುದಿಲ್ಲ. ನಾನು ಹಿಂದೆ ಕಂಡ ಯಾವುದರ ಹಾಗೂ ಇದಿಲ್ಲ. ಯಾರಿವನು- ಎಂತ ಯೋಚನೆ. ನಿಜಕ್ಕೂ ಅನಿಸುತ್ತದೆ- ಇವನು ಭಾರೀ ಕುಳ; ಕುಳ ಗಟ್ಟಿಯಾದ ಕುಳವೇ. ಮೈಮೇಲೆ ಅರಿವೆ ಗಿರಿವೆ ಇಲ್ಲ. ಬೆನ್ನಿನ ಮೇಲೆ ಯಾಕೋ ಒಂದು ಹುಲಿಚರ್ಮ ತೂಗಿದೆ. ಕೈಯಲ್ಲಿ ಇದನ್ನೇ ಹಿಡಿದುಕೊಂಡಿದ್ದಾನೆ. ನೂರು ಮಂದಿಗೆ ಒಬ್ಬ ದೊರೆ ಇರುವ ಹಾಗೆ ನಿನ್ನೆ ರಾತ್ರಿ ಕಾಣಿಸಿದ್ದು; ಇವನಂಥವರನ್ನೇ; ಎಲ್ಲರೂ ದ್ರೋಣಾಚಾರ್ಯರುಗಳು; ಇವರು ಯಾತಕ್ಕೆ ಬತ್ತಲೆಯಾಗಿದ್ದಾರೆ ಎಂಬುದು ತಿಳಿಯುವುದಿಲ್ಲ. ಅದೇನು ವ್ರತವೋ."

"ಬಹಳ ಹಿಂದಿನ ಕಾಲಕ್ಕೆ ಅಜ್ಜಿ, ಅರಿವೆ ಎಲ್ಲಿಂದ ಬರಬೇಕು?"

"ಇವನು ನೋಡು, ಇದನ್ನು ಹಿಡಿದುಕೊಂಡವನು ಹಂದಿ, ಕಾಟಿ, ಮಿಗ- ಏನನ್ನು ಕೊಂದಿದ್ದರೂ ಆಶ್ಚರ್ಯವಿಲ್ಲ."

"ಅದೇ ಅವನ ಅನ್ನ ಇದ್ದೀತು."

"ಇದನ್ನು ಹಿಡಿದುಕೊಂಡು ಇವನು ಏನೇನೋ ಮಂತ್ರ, ಮಾಟ ಮಾಡಿಸುತ್ತಿದ್ದ ಹಾಗೆಯೂ ಕಾಣುತ್ತದೆ. ಹೋ! ಅಲ್ಲಿ ನೋಡು, ಯಾರೋ ಬರುತ್ತಿರುವ ಹಾಗೆ ಕಾಣಿಸುತ್ತದೆ. ಪಾಪ, ಬಡವ, ಕಾಯಿಲೆ ಮಗುವನ್ನು ಹೊತ್ತುಕೊಂಡು ಬಂದಿದ್ದಾನೆ. 'ಕಾಪಾಡು' ಎಂದು ಅವನ ಕಾಲಿಗೆ ಬೀಳುತ್ತಿದ್ದಾರೆ. ಮಗುವಿನ ಮೈ ಕೆಂಪೇರಿದೆ; ಮೇಲೆ ಎಂತೆಂಥ ಬೊಕ್ಕೆ! ಮೈಲಿಗೆ ಎಂದು ಕಾಣುತ್ತದೆ. ಹೌದೌದು; ಅದಕ್ಕೇನೆ ಅಷ್ಟು ಜ್ವರ. 'ಅದು ಎಲ್ಲಿ ಉಳಿಯುತ್ತದೆ! ನಿನ್ನ ದೇವರಿಗೆ ಕೋಪ ಬಂದಿದೆ. ನಿನ್ನ ಈ ಮಗುವನ್ನು ಕೊಡು ನನಗೆ' ಅನ್ನುತ್ತಿದ್ದಾನಂತೆ ಆ ದೇವರು, ಯಾವ ದೇವರದು? ಯಾವ ದೈವ? ಮಾರಿಯಮ್ಮನೇ? ಅಗೋ, ನೋಡು; ನೆಲದಲ್ಲಿ ರಂಗವಲ್ಲಿಯ ಹಾಗೆ ಏನೋ ಚಿತ್ರ ಬರೆಯುತ್ತಿದ್ದಾನೆ. ಹೆಣ್ಣಿನ ರೂಪ. ಹೆಣ್ಣೋ, ಗಂಡೋ ಗೊತ್ತಾಗುವುದಿಲ್ಲ. ಕೋರೆ ಹಲ್ಲು; ತಲೆಯ ಮೇಲೆರಡು ಕೋಣನ ಕೊಂಬು.

"ಹಾಗಾದರೆ ಈಗ ಗೊತ್ತಾಯಿತು. ಅದೇ ದೈವದ ಪಾತ್ರಿ ಇವನು. ನಾಗನ ದರ್ಶನ ಬರುವ ಹಾಗೆ ಇವನ ಮೈಮೇಲೂ ದರ್ಶನ ಬರುತ್ತಿದೆ. ಅಬ್ಬ! ಏನು ದನಿ! ಏನು ಗಂಟಲು! ಕಾಯಿಲೆ ಬಿಟ್ಟು ಹೋಗುತ್ತದೆ- ಎನ್ನುತ್ತಿದ್ದಾನಲ್ಲ. ಆ ಕೋಲಿನ ತುಂಡನ್ನು, ಬರೆದ ಚಿತ್ರದ ಮುಂದಿಟ್ಟು, ಮಣಮಣ ಮಂತ್ರ ಮಾಡಿ, ಮಗುವಿನ ಸುತ್ತ ಮೂರು ಸಾರಿ ಸುಳಿಸಿ ತೆಗೆದು, ಧೈರ್ಯ ಹೇಳುತ್ತಿದ್ದಾನೆ.

ಅದೇನು ಹೊಸ ಹಬ್ಬ! ತಿರುಗಿ ಅವನೇ ಬಂದ. ಅವನ ಹಿಂದೆಯೇ ಒಂದು ಸಾಲು ಗಂಡಸರಿದ್ದಾರೆ. ಕೈಯಲ್ಲಿ ಕತ್ತಿ, ಕೋಲುಗಳನ್ನು ಹಿಡಿದು ಕುಣಿಯುತ್ತಿದ್ದಾರೆ. ನೆಲದ ಮೇಲೆ ಹುಲಿಯ ಚಿತ್ರ ಬರೆದು, ಸುತ್ತಲೂ ಕುಳಿತಿದ್ದಾರಲ್ಲ ಏಕೆ? ಇವರೆಲ್ಲರೂ ಸೇರಿ ಎಲ್ಲಿಗೆ ಹೊರಟರು? ಅಲ್ಲಿ, ಕಗ್ಗತ್ತಲು ಎಲ್ಲೆಲ್ಲೂ. ಕತ್ತಲಲ್ಲಿ ಯಾರಾದರೂ ಶಿಕಾರಿಗೆ ಹೊರಡುತ್ತಾರೆಯೇ? ಸಾಲು ಹಿಡಿದು ಹೋಗುತ್ತಿದ್ದಾರೆ. ನೋಡು, ಅಲ್ಲೊಂದು ದೊಡ್ಡ ಮಾಟೆ. ಅದರ ಎದುರು ನಿಂತು ಬೆಂಕಿ ಒಟ್ಟುತ್ತಿದ್ದಾರೆ. ಯಾಕೆ? ಹೊಗೆ, ಹೊಗೆ, ಹೊಗೆ. ಏ ದೇವರೇ, ಹೊಗೆಯ ಘಾಟಿಗೆ ಹುಲಿ ಹಾರಿ ಬಂತು ನೋಡಿದೆಯಾ? ಅಯ್ಯಯ್ಯೋ, ಅದೊಂದು ಸಣ್ಣ ಹುಡುಗನ ಮೇಲೆ ಹಾರಿ, ಕಚ್ಚಿ ಓಡಿತೇ!... ಚಿಂತೆಯಿಲ್ಲ. ಎಲ್ಲರೂ ಸೇರಿ ಅದನ್ನು ಕುತ್ತಿ, ಕುತ್ತಿ, ಕೊಂದೇ ಬಿಟ್ಟರು. ಒಬ್ಬ ಹುಡುಗ ಮಾತ್ರ ಅದಕ್ಕೆ ಬಲಿ, ಅವರಿಗೆ ಇದು ಬಲಿ."

"ಇದು ಯಾಕೋ ಅಪ್ಪ, ತುಂಬ ಅಸಹ್ಯ, ಸಾಕು ಬಿಡು. ನನಗೆ ಇದರ ತಲೆಬುಡವೇ ಆಗುವುದಿಲ್ಲ" ಎಂದಂದು ತುಸು ಹೊತ್ತಿನ ತನಕವೂ ಮಾತನಾಡಲಿಲ್ಲ. ಅನಂತರ "ಹೀಗೂ ಉಂಟೇ!" ಎಂದು ಉದ್ಗರಿಸಿದರು.

"ಏನಜ್ಜಿ?" ಎಂದು ಪ್ರಶ್ನಿಸಿದ.

"ಅಲ್ಲ, ಅವಳಿಗೆ ಇನ್ನೂ ಹದಿನಾರು ತುಂಬಿರದು. ಇವನು ಪ್ರಾಯದ ದಡೆಯ. ವರ್ಷ ನಲ್ವತ್ತೋ, ಐವತ್ತೋ!" ಈ ಜನರ ಎಲ್ಲ ಹಬ್ಬಕ್ಕೂ ಇವನು ಬೇಕು. ಛೀ! ನಾಯಿ ಜೋಡಿಯಾಗುವುದನ್ನು ಸಣ್ಣ ಮಕ್ಕಳು ನಿಂತು ನೋಡುವ ಹಾಗೆ ಎಷ್ಟು ಮಂದಿ ಗಂಡಸರು, ಹೆಂಗಸರು ಸುತ್ತಲೂ ನಿಂತು ನೋಡುತ್ತಿದ್ದಾರಲ್ಲ ಅದನ್ನು. ಅವಳು ಹೆಣ್ಣು; ಇವನು ಗಂಡು. ನೋಡಲಿಕ್ಕಾದರೂ ಏನುಂಟು- ಅನ್ನುತ್ತೇನೆ.

"ನನಗೆ ಮರುಳು. ನಾಯಿ ಜೋಡಿಯಾಗಲಿಕ್ಕೆ ಕತ್ತಲು ಯಾಕೆ ಬೇಕು? ನಾಚಿಕೆಯಾಗುತ್ತದೆ ಎಂತಲೇ? ದೇವರು ಅದೊಂದನ್ನು ಮಾತ್ರ ಇವರಿಗೆ ಕೊಟ್ಟಿರಲಾರ ಎಂಬುದು ನೋಡಿದರೆ ಗೊತ್ತಾಗುತ್ತದೆ... ಅಲ್ಲ, ಮತ್ತೆ ಮದುಮಗಳ ಹಾಗೆ ಅವಳಿಗೆ ಸಿಂಗಾರ ಮಾಡಿ ಕರೆದುಕೊಂಡು ಹೋಗುತ್ತಿದ್ದಾರಲ್ಲ. ಈಗ ಒಬ್ಬೊಬ್ಬರೇ ತಂತಮ್ಮಷ್ಟಕ್ಕೆ ಹೊರಟರು. ಈ ಮದುಮಗ ಹೊರಟದ್ದು ಎಲ್ಲಿಗೋ? ಹೋ ಅವನದ್ದೂ ಒಂದು ಗುಹೆ

ಮನೆಯಿದೆ. ಗುಹೆಯಿಲ್ಲ, ಮಾಟೆ. ಅವನ ಹೆಂಡಿರು ಮಕ್ಕಳು ಕಾದಿದ್ದಾರೆ ಅಲ್ಲಿ. ಹಾಗಿದ್ದರೆ, ಇದು ಅವನ ಎಷ್ಟನೆಯ ಹೆಂಡತಿಯೋ!"

"ಮಗು, ನನಗೆ ಏನೇನು ಕಾಣಿಸಿತೋ ಕಂಡಂತೆ ನಿನಗೆ ಹೇಳಿದೆ. ಆದರೆ, ಹೀಗೆ ಕಣ್ಣಿಗೆ ಕಂಡದ್ದನ್ನು ನಾನು ನಂಬಬೇಕೇ ಬಿಡಬೇಕೇ-ಎಂದು ನನಗೂ ಗೊತ್ತಾಗುವುದಿಲ್ಲ. ಇಂಥ ರೀತಿ, ರಿವಾಜು ಎಲ್ಲಿಯೂ ಇರಲಾರದು."

"ಯಾವ ರಿವಾಜು?"

"ಹೇಳಿದೆನಲ್ಲ- ಒಂದು ಗಂಡು, ಹೆಣ್ಣು ಹತ್ತು ಮಂದಿಯ ಮುಂದೆಯೇ... ಅಲ್ಲ, ನಮಗೆ ಅಸಹ್ಯ ಅನಿಸಿದ್ದು ಅವರಿಗೆ ಅಸಹ್ಯ ಅನಿಸದೆ ಹೋಯಿತೋ ಏನೋ! ಯಾರು ಬಲ್ಲ..." ಹೀಗೆಂದು ಹೇಳಿ, ಉಸಿರುಗರೆದು "ತೆಗೆದುಕೋ ಇದನ್ನು" ಎಂದು ಕೊಡಲು ಬಂದರು.

"ಅದು ಯಾತರದ್ದು ಅಜ್ಜಿ?"

"ಮಿಗದ ಕೊಂಬು ಅಂತ ಕಾಣಿಸುತ್ತದೆ; ಮುಟ್ಟಿದರೆ, ನಿಜಕ್ಕೂ ಅದೇ ಇರಬೇಕು. ಆದರೆ, ಅದನ್ನು ಹಿಡಿದುಕೊಂಡವನನ್ನು ನೆನೆದರೆ ಮಾತ್ರ... ಬೇಡ, ಮಗು ಸಾಕು ಇವತ್ತಿಗೆ, ತುಂಬ ಆಯಾಸವೂ ಕಾಣಿಸುತ್ತದೆ. ನನ್ನ ಮೈಯ್ಯೂ ಯಾತಕ್ಕೋ ನಡುಗುತ್ತಿರುವ ಹಾಗಿದೆ" ಎಂದು ಹೇಳಿ, ಆ ಕೊಂಬಿನ ಚೂರನ್ನು ನೆಲದ ಮೇಲಿರಿಸಿ "ಅದನ್ನು ದೂರಕ್ಕಿಡು" ಎಂದರು. ನಾನು ಅದನ್ನು ತೆಗೆದು ದೂರಕ್ಕೆ ಇರಿಸಿದೆ.

"ದೂರದಲ್ಲೇ ಇರಿಸು. ಇನ್ನು ಅದನ್ನು ಮನೆಯ ಒಳಗೆ ತರಬೇಡ. ಮನೆಯಲ್ಲಿದ್ದರೆ ರಾತ್ರೆ ನಿದ್ರೆ ಬಾರದೆ ಹೋದೀತು" ಎಂದರು.

ಅದೀಗ ಫಜೀತಿಗೆ ಬಂದಿತು. ಅದನ್ನೆಲ್ಲಿ ತೆಗೆದಿರಿಸಲಿ ಎಂಬ ಯೋಚನೆ ಬಂದಿತು. ಹತ್ತು ಮಾರು ಆಚೆ ಹೋಗಿ, ಒಂದು ಪೊದೆಯ ಬಳಿಯಲ್ಲಿ ಇರಿಸಿ, ಅದರ ಮೇಲೆ ಮಣ್ಣನ್ನು ಮುಚ್ಚಿ, ಈಚೆ ಬಂದೆ. "ನಿದ್ರೆಗೆ ಹೊತ್ತಾಯಿತು; ಹೋಗುವ" ಎಂದ ಬಳಿಕ ಇಬ್ಬರೂ ಹೊರಟೆವು. ಮನೆಯನ್ನು ಸೇರುವಾಗ ಮಕ್ಕಳಿಬ್ಬರೂ ಮಲಗಿ ನಿದ್ರೆ ಹೋಗಿದ್ದರು. ಒಳಕ್ಕೆ ಕಾಲಿರಿಸುತ್ತಲೇ ನನ್ನವಳು "ಇವತ್ತೇನಪ್ಪ ಅಷ್ಟು ಕಾರುಭಾರ? ಅಜ್ಜಿಯ ಹತ್ತಿರ ಗುಸುಗುಸು ಮಾತನಾಡಲಿಕ್ಕೆ ಹೋದದ್ದೋ?" ಎಂದು ತನ್ನ ಅಸಮಾಧಾನವನ್ನು ತೋಡಿಕೊಂಡಳು.

"ಹೌದು; ಗುಸುಗುಸು" ಎಂದು ಅರ್ಧದಲ್ಲಿಯೇ ಮುಂದಿನ ವಾಕ್ಯವನ್ನು ನುಂಗಿ ಗೊಣಗುತ್ತ ಚಾವಡಿಯಲ್ಲಿ ಹಾಸಿಗೆ ಬಿಡಿಸಿ, ಮಲಗಿಕೊಂಡೆ.

# ಅಧ್ಯಾಯ 5

ಬೆಳಕು ಹರಿಯುತ್ತಲೇ ನನ್ನ ಮನಸ್ಸು ಮನೆಯಲ್ಲಿ ಅಡಗಿಸಿಟ್ಟ ಕಲ್ಲು, ಕವಡೆಗಳ ಕಡೆಗೆ ಸರಿಯಿತು. ಹಿಂದಣ ದಿನ ರಾತ್ರಿ ಒಂದು ಪೊದೆಯ ಕೆಳಗೆ ಹೂತು ಬಂದಿದ್ದ ಆ ಕೊಂಬಿನ ಚೂರಿನ ನೆನಪೂ ಆಯಿತು. ಅವನ್ನೆಲ್ಲ ಒಂದು ಕಡೆ ಭದ್ರವಾಗಿ ಅಡಗಿಸಿಡಬೇಕು. ಅಜ್ಜಿಯ ಸಮಯ ಕಾದು, ಅವನ್ನು ತೋರಿಸಿ, ಅವರ ಮನಸ್ಸು ಏನನ್ನು ಹೇಳುತ್ತದೆ- ಎಂದು ತಿಳಿಯುವ ಚಪಲ ತಿರುಗಿ ನನ್ನನ್ನು ಕಾಡತೊಡಗಿತು. ಅವಳಿಗೆ ಅದೆಲ್ಲ ಹೊಳೆಯುವುದು ಹೇಗೆ ಸಾಧ್ಯ- ಎಂಬ ಸಂಶಯವೂ ಬಂತು. ನನಗೆ ಸ್ವಪ್ನದಲ್ಲಿ ಸಂಬದ್ಧವೋ ಅಸಂಬದ್ಧವೋ ಕಾಣಿಸಿದ ಚಿತ್ರಗಳು, ಅಜ್ಜಿ ತನಗೆ ನಿಜವಾಗಿಯೂ ಕಂಡಿತು ಎಂದ ಮಾತುಗಳು, ಕೊಂಬಿನ ಚೂರನ್ನು ಹಿಡಿದುಕೊಂಡು ಮಾಡಿದ ವರ್ಣನೆಗಳು ಈ ಮೂರು ವಿವರಗಳು ತೀರ ಒಂದೇ ತೆರನಾಗಿಲ್ಲವಾದರೂ, ಒಂದೇ ವಿಷಯಕ್ಕೆ ಸಂಬಂಧಪಟ್ಟವು; ನಿಜ; ಗುಹೆ, ಕಾಡುಮನುಷ್ಯರು, ಬತ್ತಲೆ ಜೀವನ- ಇವೆಲ್ಲ ನಿಜವಾಗಿಯೂ ಹಿಂದೆ ಇದ್ದಿರಲೇಬಹುದಾದ, ಯಾವುದೋ ಆದಿವಾಸಿಗಳ ಜೀವನವನ್ನು ಬಿಂಬಿಸುತ್ತವೆ. ನನಗೆ ಗುಹೆಯಲ್ಲಿ ದೊರಕಿದ ಸಾಮಗ್ರಿಗಳು ಅವರವೇ ಎಂಬುದಕ್ಕೆ ಅನುಮಾನವಿಲ್ಲ. ಆದರೆ ನನ್ನ ಅಜ್ಜಿಯು ಹೇಳಿದ್ದು ನೂರಕ್ಕೆ ನೂರು ಸತ್ಯ- ಎನ್ನುವ ಧೈರ್ಯ ಬರಲಾರದು. ಅವರು ಜನ್ನನ ಮುಖಕ್ಕೆ ಆಡಿದಂತಹ ಮಾತುಗಳನ್ನು ಬೇರೆ ಯಾರೊಬ್ಬರ ವಿಷಯದಲ್ಲಿ ಆಡಿದ್ದರೆ ನಂಬಬಹುದಿತ್ತು; ಪುಕ್ಕಲುಜೀವಿಯಾದ ಅವನ ವಿಷಯದಲ್ಲಿ, ಅವು ನಿಜವಾಗಿರಲು ಶಕ್ಯವೇ ಇಲ್ಲ- ಎನಿಸಿತು.

ಅಂತು, ನನ್ನ ಬುದ್ಧಿ ಸಂಶಯದಲ್ಲಿ ತೊಳಲಾಡಿದ್ದು ನಿಜ. ಅಷ್ಟರಲ್ಲಿ ಮನೆಯ ತೆಂಗು ಕಂಗುಗಳಿಗೆ ನೀರನ್ನು ಹಾಯಿಸುವ ದಿನ ಅದು- ಎಂಬ ನೆನಪು ಬರುತ್ತಲೇ, ಮನೆಯ ಹಿಂದಿನ ತೋಟಕ್ಕೆ ಹೋದೆ. ಒಬ್ಬ ಆಳು ಆಗಾಗಲೇ ಬಾವಿ ನೀರಿಗೆ ದೊಟ್ಟೆಯನ್ನಿಳಿಸಿ ನೀರು ಮೊಗೆಯಲು ತೊಡಗಿದ್ದ. “ನನ್ನನ್ನೇಕೆ ಕರೆಯಲಿಲ್ಲ” ಎಂದು ಅವನನ್ನು ದೂರಿ, ಅವನು ಮೊಗೆದ ನೀರನ್ನು ಹಿತ್ತಲ ಗಿಡಗಳ ಸಾಲುಗಳಿಗೆ ಒಂದೊಂದಾಗಿ ಹರಿಯಿಸತೊಡಗಿದೆ. ಮೂರು ಗಳಿಗೆಯ ದೇಹಶ್ರಮದಿಂದ ನನ್ನ ಬುದ್ಧಿ ಹಳೆಯ ಚಿಂತೆಗಳನ್ನು ಮರೆಯಿತು. ಅಷ್ಟರಲ್ಲಿ ನನ್ನ ಹಿರಿಯ ಮಗ ಕಿಟ್ಟಣ್ಣ ತೋಟಕ್ಕೆ ಧಾವಿಸಿ ಬಂದು “ಅಪ್ಪಾ, ಚಿಕ್ಕಪ್ಪ ಬಂದಿದ್ದಾನೆ” ಎಂಬ ವಾರ್ತೆಯನ್ನು ಕೊಟ್ಟ.

“ಯಾವ ಚಿಕ್ಕಪ್ಪ?” ಎಂದು ಕೇಳಿದೆ.

ಮಗು ಅದಕ್ಕೆ ಕೊಂಕಿನಿಂದ "ಚಿಕ್ಕಪ್ಪ ಅಂದರೆ, ಯಾವ ಚಿಕ್ಕಪ್ಪ?" ಎಂಬ ಮಾರುತ್ತರ ಕೊಟ್ಟಿತು.

ನನಗೆ ನನ್ನ ಹುಚ್ಚುತನ ಕಾಣಿಸಿತು- ಅದಕ್ಕಿರುವ ಚಿಕ್ಕಪ್ಪ ಒಬ್ಬನೇ, ನನ್ನ ತಮ್ಮ ನಾರಾಯಣ. ಬೇಸಗೆಯ ರಜಾ ಕಾಲದ ಪ್ರಾರಂಭಕ್ಕೇನೆ ಆತ ಶಿವದೊಗ್ಗೆಯಿಂದ ಊರಿಗೆ ಬರಬೇಕಾಗಿತ್ತು, ಬಂದಿರಲಿಲ್ಲ. ಇವತ್ತು ಪುರುಸೊತ್ತು ಮಾಡಿಕೊಂಡು ಬಂದ ಎಂದ ಹಾಗಾಯಿತು. ಕರೆಯಲು ಬಂದ ಮಗುವಿಗೆ ನಾನಿನ್ನೂ ಏನನ್ನೂ ಹೇಳಲಿಲ್ಲ. ನಾರಾಯಣ ಮನೆಗೆ ಬಂದರೆ ಒಂದು ಆಶ್ಚರ್ಯವೇ? ಓಡಿ ಹೋಗಿ ನಂಟರನ್ನು ಕಾಣುವಂತೆ ಸ್ವಾಗತಿಸಬೇಕಾಗಿಲ್ಲವೆಂದು ನೀರಿನ ಕೆಲಸವನ್ನು ಮುಂದುವರಿಸಿದೆ.

"ಅಪ್ಪಯ್ಯ" ಎಂದಿತು ಮಗು, ತಿರುಗಿ.

"ಏನು ಮಗು?" ಎಂದೆ.

"ಚಿಕ್ಕಪ್ಪ ಬಂದ ಅಂದೆನಲ್ಲ, ನೀನು ಬರಬೇಕಂತೆ, ಅಮ್ಮ ಹೇಳಿದಳು"

ಆಗ ಅವನ ಜತೆಯಲ್ಲಿ ಬೇರೆ ಇನ್ನಾರೋ ಬಂದಿರಬಹುದು- ಎಂಬ ಅನುಮಾನ ಹೊಳೆಯಿತು. ಅದನ್ನು ಖಾತ್ರಿ ಮಾಡಿಕೊಳ್ಳಲು "ಚಿಕ್ಕಪ್ಪ ಒಬ್ಬನೇ ಬಂದದ್ದೋ?" ಎಂದು ಕೇಳಿದೆ.

"ಮತ್ಯಾರೋ ಇದ್ದಾರೆ" ಎಂದ ಆತ.

"ಆಯಿತು ಹಾಗಾದರೆ" ಎಂದು ಕೈಯ ಮಣ್ಣನ್ನು ತೊಳೆದುಕೊಂಡು, ಅಲ್ಲಿಂದ ಎದ್ದೆ. ಕೆಲಸದ ಆಳಿನೊಡನೆ "ಕಡೆಯ ಒಂದು ಸಾಲಿಗೆ ನೀರಾದರೆ ಸರಿ" ಎಂದೆ. "ಆಯಿತು. ನೀವು ಹೋಗಿ, ಅದನ್ನು ನಾನು ನೋಡಿಕೊಳ್ಳುತ್ತೇನೆ" ಎಂದ ಆತ.

ನಡುವಿಗೆ ಬಿಗಿದ ಪಂಚೆಯನ್ನು ಸರಿ ಮಾಡಿಕೊಂಡು, ತೋಟದಿಂದ ಮನೆಯ ಬಾವಿ ಕಟ್ಟೆಗೆ ಬರುವುದರೊಳಗಾಗಿ ನನ್ನ ತಮ್ಮರಾಯರ ಸವಾರಿ ನಗುನಗುತ್ತ ನನ್ನ ಕಡೆಗೆ ಬಂದಿತು. ಅವನ ಜತೆಯಲ್ಲಿ ಅವನದೇ ಪ್ರಾಯದ ಇನ್ನೊಬ್ಬ ತರುಣ ಕಾಣಿಸಿದ. ಆತ ನನ್ನನ್ನು ವಂದಿಸಿದಾಗ, ನಾನೂ ನಮಸ್ಕಾರ ಮಾಡಿ "ಬಂದು ಬಹಳ ಹೊತ್ತಾಯಿತೇ, ನಾರಾಯಣ, ಮಗು ಬಂದು ಹೇಳಿತು" ಎಂದೆ. ಆ ಮಗುವನ್ನು ನಾನು ಮರೆತೇ ಬಿಟ್ಟಿದ್ದೆ. ಅದು ಹೋಗಿ ಚಿಕ್ಕಪ್ಪನ ಅರಿವೆಯನ್ನು ಎಳೆಯುತ್ತಿತ್ತು. ಆತ ಮನೆಗೆ ಅಪೂರ್ವಕ್ಕೆ ಬಂದವನಲ್ಲವೇ? ಅವನನ್ನು ಮುದ್ದಿಸಿ ಎತ್ತಿಕೊಂಡಾಗ "ಅದನ್ನು ಯಾತಕ್ಕೆ ಎತ್ತಿಕೊಳ್ಳುತ್ತೀ, ಅವನೇನು ಸಣ್ಣವನೇ" ಎಂದೆ. ಆತ ನಕ್ಕ.

ಎರಡನೆಯ ಪ್ರಶ್ನೆ ಕೇಳುವುದರೊಳಗಾಗಿ ನನ್ನ ತಮ್ಮ "ಇವರು ಯಾರು-ಎಂಬುದನ್ನು ಹೇಳುತ್ತೇನೆ. ಇವರು ನಮ್ಮ ಜಿಲ್ಲೆಯವರೇ, ನಮ್ಮದ್ದೇ ತಾಲ್ಲೂಕು; ನಾವಿಬ್ಬರೂ ಒಂದೇ ಶಾಲೆಯಲ್ಲಿ ಮಾಸ್ತರರು. ಅನಂತರಾಯರು ಎಂತ ಅವರ ಹೆಸರು. ಅವರ ಹಿರಿಯರು ನಮ್ಮ ಜಿಲ್ಲೆ ಬಿಟ್ಟು, ಅಲ್ಲೇ ನೆಲೆಸಿ, ಒಂದು ಹೊಟೇಲು ಮಾಡಿಕೊಂಡಿದ್ದಾರೆ. ವ್ಯಾಪಾರ ವ್ಯವಹಾರ ಚೆನ್ನಾಗಿದೆ. ಇವರು ಮಾತ್ರ ಹುಟ್ಟಿದ್ದೂ, ಬೆಳೆದದ್ದೂ ಅಲ್ಲೇ. ಈ ಜಿಲ್ಲೆಯಲ್ಲೇ ಈಗ ಯಾವ ಹಂಗೂ ಉಳಿದಿಲ್ಲ. ಹಗಲೂರಿನಲ್ಲಿ ದೂರದ ನಂಟರು ಯಾರೋ ಒಬ್ಬರು ಇದ್ದಾರಂತೆ" ಎಂದ.

"ಅಲ್ಲಿಗೆ ಹೊರಟಿದ್ದೇ?"

"ಅಲ್ಲಿಗಲ್ಲ. ಬಂದದ್ದು ನನ್ನ ಜತೆಯಲ್ಲಿ ನಮ್ಮ ಮನೆಗೇ! ನೋಡಿದಿರಾ, ಅನಂತರಾವ್, ನಮ್ಮ ಈ ಅಣ್ಣನಿಗೆ ನಿಮ್ಮನ್ನು ಥಟ್ಟನೆ ರವಾನೆ ಹಾಕುವ ಯೋಚನೆ" ನಾನು ನನ್ನ ಮೂರ್ಖತನಕ್ಕಾಗಿ ನಗದೆ ಉಪಾಯವಿರಲಿಲ್ಲ.

"ಕ್ಷಮಿಸಿ ಅನಂತರಾಯರೇ, ಕೆಲವು ಸಾರಿ ನಾವಾಡಿದ ಮಾತಿನ ಅರ್ಥ ನಮಗೇ ಆಗದಂತೆ ಏನಾದರೂ ಅಂದುಬಿಡುತ್ತೇವೆ. ನಾರಾಯಣ, ಕಾಫಿ ಮಾಡಿಕೊಟ್ಟಳೇ ಸೀತೆ? ಅಲ್ಲ ಇನ್ನೂ..."

"ನಾವು ಬಂದು ಒಂದು ಗಳಿಗೆಯ ಮೇಲಾಯಿತು. ಕಾಫಿ, ಫಲಾಹಾರ ಎಲ್ಲವನ್ನೂ ತಿಂದು, ಹೊಟ್ಟೆ ತುಂಬಿಸಿಕೊಂಡೇ ಈಚೆ ಬಂದದ್ದು" ಎಂದರು ಅನಂತರಾಯರು.

"ಬಹಳ ಸಂತೋಷ, ತಮ್ಮಂಥವರು ಮನೆಗೆ ಬಂದದ್ದು. ಈ ಕೊಂಪೆಗೆ ಯಾರು ಬರುತ್ತಾರೆ ಹೇಳಿ! ನೋಡಿದಿರಲ್ಲ, ನಾರಾಯಣನಿಗೆ ರಜೆ ಶುರುವಾಗಿ ಒಂದು ತಿಂಗಳಾದರೂ ಊರಿಗೆ ಬರಬೇಕು ಎಂತ ಅನಿಸಲಿಲ್ಲ."

"ಹಾಗಲ್ಲ ಅಣ್ಣ. ರಜೆ ಬಂದದ್ದು ಹೌದು. ಪೇಪರ್ ಕರೆಕ್ಷನ್ ಮುಗಿಸಿ ಹೊರಟರೆ, ನಿಶ್ಚಿಂತೆಯಿಂದ ನಾಲ್ಕು ದಿನ ಊರಲ್ಲಿ ಕಳೆಯಬಹುದು. ಇಲ್ಲವಾದರೆ, ಆ ಹೊರೆಯನ್ನು ಹೊತ್ತುಕೊಂಡು ಇಲ್ಲಿ ಬಂದು ಒದ್ದಾಡಬೇಕು. ತಂದರೆ ಆ ಕೆಲಸವೂ ಆಗುವುದಿಲ್ಲ; ರಜೆ ಬಂದಂತೆಯೂ ಅನಿಸುವುದಿಲ್ಲ. ಅಲ್ಲದೆ ಇವರು "ನಾನು ಬರುತ್ತೇನೆ, ನಿಮ್ಮ ಊರು ನೋಡುವ" ಎಂದಿದ್ದರು. ಅವರಿಗೂ ಪೇಪರಿನ ತಾಪತ್ರಯವಿತ್ತು. ಕರೆಕ್ಷನ್ನೆಲ್ಲ ಮುಗಿಸಿ ಬರುವುದಕ್ಕೆ ಇಷ್ಟು ದಿವಸ ಹಿಡಿಯಿತು. ಕುಂದಾಪುರಕ್ಕೆ ಬಂದು, ಬೈಂದೂರಿಗೆ ಬಂದು, ಇಲ್ಲಿಗೆ ಬರುವಾಗ ಇಷ್ಟು ಹೊತ್ತಾಯಿತು. ಬಸ್ ದಾರಿ ಬಿಟ್ಟು ಸ್ವಲ್ಪ ನಡೆಯಲಿಕ್ಕೂ ಉಂಟಲ್ಲ."

ಅನಂತರಾಯರು ಮೊದಲು ಮುಕ್ತ ಕಂಠದಿಂದ "ನಿಮ್ಮ ಊರು ಮಾತ್ರ ನೋಡಲು ತುಂಬ ಚಂದ. ಆದರೆ, ಬಂದು ಹೋಗುವ ತಾಪತ್ರಯ ಇದೆ ಸಾಕಷ್ಟು. ನಮ್ಮ ಅಜ್ಜನ ಊರು, ಅಜ್ಜನದೂ ಹೌದು, ಅಪ್ಪನದೂ ಹೌದು. ಹಗಲೂರು ಎಂಬುದು ಇಲ್ಲಿಂದ ಎಷ್ಟು ದೂರ?" ಎಂದು ಕೇಳಿದರು.

"ಹಗಲೂರಿಗೆ ಹೋಗಬೇಕೇ ಈಗ? ಯಾರಿದ್ದಾರೆ ಅಲ್ಲಿ?"

"ಈಗಲೇ ಹೋಗಬೇಕೆಂದಿಲ್ಲ. ಎರಡು ದಿವಸ ಬಿಟ್ಟು ಹೋದರಾಯಿತು. ನಮ್ಮ ಗುರುತಿನವರು ಅಲ್ಲಿ ಯಾರೂ ಇಲ್ಲ. ನಮ್ಮ ಅಪ್ಪಯ್ಯ ಸಣ್ಣವರಿದ್ದಾಗ ಅಲ್ಲಿ ಇದ್ದರಂತೆ. ಆಮೇಲೆ ಅದನ್ನು ಬಿಟ್ಟವರು- ಒಂದೋ, ಎರಡೋ ಸಾರಿ ಅಲ್ಲಿಗೆ ಹೋಗಿ ಬಂದಿದ್ದರಂತೆ. ಈಗ ಅಲ್ಲಿ ನಮ್ಮ ಮನೆಯಡಿ ಕೂಡ ಇಲ್ಲ. ಆದರೆ ಅವರಿಗೆ ಬಹಳ ನೆನಪು. ನಮ್ಮ ಊರು ತುಂಬ ಚಂದ ಅನ್ನುತ್ತಾರೆ. ಅದರಿಂದ ನನಗೂ ಆಸೆಯಾಗಿ ನೋಡುವ ಎಂಬ ಉಮೇದು ಬಂದಿತು."

"ಅಷ್ಟೇ ಅಲ್ಲವೇ! ಹೋಗುವ- ಒಂದು ದಿನ ನಿಧಾನವಾಗಿ" ಎಂದಂದು, ಅವರ ಜತೆಯಲ್ಲಿ ಮನೆಯ ಚಾವಡಿಯ ತನಕ ಬಂದು ಸ್ಥಾಪನೆಯಾದೆವು. ಅಷ್ಟಕ್ಕೆ ನಮ್ಮ ಅಜ್ಜಿ ಚಾವಡಿಯಿಂದ ಅಂಗಳಕ್ಕಿಳಿಯುವುದು ಕಾಣಿಸಿತು. ನನ್ನ ತಮ್ಮ ಅವಳನ್ನು ಅನಂತರಾಯರಿಗೆ ತೋರಿಸುತ್ತಾ "ಅದು ನೋಡಿ, ನಮ್ಮ ಅಜ್ಜಿ; ವರ್ಷ ಎಪ್ಪತ್ತೋ, ಎಂಬತ್ತೋ. ಒಂದು ತರಹ ಸ್ವಭಾವ; ಮಾತು ಕಡಿಮೆ. ಏನು ಆಡುವುದಿದ್ದರೂ ಅದು ಅವರಷ್ಟಕ್ಕೇ; ನನ್ನ ಹತ್ತಿರವೂ ಅವರಿಗೆ ಅಷ್ಟೊಂದು ಸಲಿಗೆಯಿಲ್ಲ. ಅಂದರೆ ಒಂದು ಸುತ್ತು ಕಡಿಮೆ, ಸಣ್ಣದರಿಂದಲೂ ಹಾಗೆಯೇ ಅಂತೆ" ಎಂದ.

ನನಗಾಗ ಕೋಪ ಬಂದಿತು. "ಸುತ್ತು ಕಡಿಮೆ ನಿನಗೆ! ಅವರ ಪ್ರಾಯ ನಿನಗೆ ಸಲುವಾಗ ನೀನು ಬದುಕಿದರೆ ಮೊಡ್ಡದು. ಅವರಷ್ಟಕ್ಕೇ ಅವರು ಗೊಣಗುತ್ತಾರೆ- ಎಂದ ಮಾತ್ರಕ್ಕೆ, ಸುತ್ತು ಕಡಿಮೆ ಅಂತ ಕೂಡಲೇ ತೀರ್ಪು ಕೊಟ್ಟುಬಿಟ್ಟೆಯಲ್ಲ" ಎಂದು ಅವನನ್ನು ಖಂಡಿಸಿದೆ. ಆತ ಮೊದಲಿನಿಂದಲೂ ಅಜ್ಜಿಗೆ ಮಿದುಳು ದುರಸ್ತಿ ಇಲ್ಲ ಎಂದೇ ತಿಳಿದು ಬಂದವನು, ಅದು ಹೊಸ ಸಂಗತಿಯೇನಲ್ಲ. ಆದರೂ ನಮಗೆ ಹಿರಿಯವರಲ್ಲವೆ ಅವರು? ಮನೆಗೆ ಕರೆದು ತಂದವರ ಮುಂದೆ ಹಾಗೆನ್ನುವುದು ಅಧಿಕಪ್ರಸಂಗವಲ್ಲವೇ? ಅವರು ನಮ್ಮ ಅಜ್ಜಿ ಎಂದರೆ ಸಾಲದಿತ್ತೋ?" ಎನಿಸಿತು.

ನಾರಾಯಣನಿಗೆ ನನ್ನ ಧ್ವನಿಯ ಚುರುಕು ಕಾಣಿಸಿತೋ ಏನೋ, ಆತ "ಇರಲಿ ಬಿಡು, ಯಾಕೋ ಬರಿದೆ ಚೇಷ್ಟೆಗೆ ಅಂದೆ. ಯಾಕೆ ಅದನ್ನು ಉದ್ದ ಮಾಡುತ್ತೀ" ಎಂದ. ಅನಂತರ ಮೂವರೂ ಚಾವಡಿಯಲ್ಲಿ ಕುಳಿತು ಲೋಕಾಭಿರಾಮವಾಗಿ ಏನೇನೋ

ಮಾತಾಡತೊಡಗಿದೆವು. ನನ್ನ ತಮ್ಮ ಬಲು ಕುತೂಹಲದಿಂದ "ಅಣ್ಣ , ನಿನ್ನ ಮೋಸ್ತಿ ಜನಾರ್ದನ ರಜೆಗೆ ಊರಿಗೆ ಬಂದಿಲ್ಲವೇ?" ಎಂದು ಪ್ರಶ್ನಿಸಿದ.

"ಅವನು ಬಂದುದರಿಂದಲೇ- ರಜೆ ಶುರುವಾಯಿತು- ಎಂದು ನನಗೆ ತಿಳಿದದ್ದು. ಇಲ್ಲದೇ ಹೋದರೆ ಈ ನಮ್ಮ ಊರಲ್ಲಿ ಏಪ್ರಿಲೂ ಒಂದೇ; ಫೆಬ್ರವರಿಯೂ ಒಂದೇ. ಅವನು ಬಂದಿದ್ದಾನೆ; ಬಂದಾಗ ಆಗಾಗ ಬರುತ್ತಾನೆ ಮನೆಗೆ. ನಿನ್ನೆ ನಾವಿಬ್ಬರೂ ಕೂಡಿ ತಿರುಗಾಟಕ್ಕೂ ಹೋಗಿದ್ದೆವು. ಅನಂತರಾಯರೇ, ನಮ್ಮ ಜನಾರ್ದನ ನಿಮ್ಮ ಹಾಗೆಯೇ ಮಾಸ್ತರರು" ಎಂದೆ.

ಅನಂತರಾಯರು ಅದಕ್ಕೆ "ನಮ್ಮ ಹಾಗಲ್ಲಪ್ಪ; ಅವರು ಕಾಲೇಜಿನಲ್ಲಿ ಲೆಕ್ಚರರು; ನಾವು ಬರಿ ಹೈಸ್ಕೂಲು ಮೇಸ್ಟುಗಳು."

"ನಾನು ಅದಕ್ಕೇನೆ ಹೇಳಿದ್ದು. ಅವನ ಅಜ್ಜನ ಮನೆಯೂ ಕೂಡ- ಹಗಲೂರಿಗೆ ಸಮೀಪದ್ದು. ಹಿಂದೆ ನಮ್ಮ ಮನೆಗೂ ಆ ಕಡೆಗೂ ಒಂದು ಸಂಬಂಧ ಆದದ್ದುಂಟು. ಆ ಊರಿಗೆ ಹೋಗುವುದಾದರೆ ಆತನನ್ನು ಕೇಳಿ ತಿಳಿಯುವ."

"ಅದಕ್ಕೆಲ್ಲ ಜನಾರ್ದನರಾಯರು ಬೇಕಿಲ್ಲ. ನಮ್ಮಷ್ಟಕ್ಕೆ ನಾವು ಹೋಗಿ ಬಂದರಾಯಿತು. ಅಲ್ಲಿಗೆ ಹೋಗಿ ಯಾರ ಮನೆಯಲ್ಲಿಯೂ ಊಟಕ್ಕೆ ನಿಲ್ಲಬೇಕಾಗಿಲ್ಲ. ನಮ್ಮ ತಂದೆ ಹುಟ್ಟಿದ ಊರು ಎಂತ ನೋಡಿಕೊಂಡು ಬರುವುದು."

ಮಾತಿಗೆ ವಿಷಯ ಸಾಲದ್ದಕ್ಕೆ ನಾನು ನನ್ನ ತಮ್ಮನೊಡನೆ 'ನಾರಾಯಣ, ಶಿವಮೊಗ್ಗೆಯಲ್ಲಿ ಏನಾದರೂ ವಿಶೇಷವಿದ್ದರೆ ಹೇಳು" ಎಂದೆ. "ಅಲ್ಲೇನು ವಿಶೇಷವಿರುತ್ತದೆ." ಎಂದ ಅವನು. ಅಂತೂ ಹರಟೆ ಹೊಡೆಯಲು ನಮ್ಮೊಳಗೆ ಎಲ್ಲರೂ ಆಸಕ್ತಿ ತೋರಬಹುದಾಗಿದ್ದ ವಿಷಯಕ್ಕೆ ಮಾತ್ರ ಕೊರತೆಯಿತ್ತು. ಅವರಿಬ್ಬರೂ ಬಂದುದರಿಂದ ನನ್ನ ಮನಸ್ಸಿನಲ್ಲಿ ಒಂದು ಆಸೆಯೇನೋ ಮೂಡಿತು. ಅಂದರೆ, ನಾಗನಕಾಲು ಬರೆಗೆ ಇನ್ನೊಮ್ಮೆ ಹೋಗಿ, ಆ ಗುಹೆಗಳನ್ನು ಕಂಡು ಬರುವುದು. ನನ್ನ ತಮ್ಮನಿಗೂ ತಿರುಗಾಟದ ಹುಚ್ಚಿದೆ. ಆದರೆ ಕಾಡನ್ನು ಸುತ್ತಲು ಅವನು ಆಳಲ್ಲ. ನನ್ನ ಸಂಶೋಧನೆಗಳನ್ನು ಅವನಿಗೆ ತೋರಿಸಿ, ಅವನಲ್ಲಿ ಕುತೂಹಲ ಹುಟ್ಟಿಸಬೇಕು- ಅನಿಸಿತು. ಆದುದರಿಂದ, ಅವನ್ನು ಅಡಗಿಸಿಟ್ಟಲ್ಲಿಗೆ ಹೋಗಿ, ಅಲ್ಲಿಂದ ನಾಲ್ಕಾರು ಕಲ್ಲು ತುಂಡುಗಳನ್ನು ಹಿಡಿದುಕೊಂಡು ಬಂದು "ಈ ಕಲ್ಲುಗಳನ್ನು ನೀವು ನೋಡಿ, ದೊನ್ನೆ ಇವನ್ನೆಲ್ಲ ಎಲ್ಲಿಂದಲೋ ಸಂಪಾದನೆ ಮಾಡಿದೆ" ಎಂದೆ ಹಿಗ್ಗಿನಿಂದ. ಅನಂತರಾಯರು ಅವನ್ನು ತಮ್ಮ ಕೈಯಲ್ಲಿ ಎತ್ತಿಕೊಂಡು ನೋಡಿದರು. "ಇದು ಬೆಣಚುಕಲ್ಲು ಅಲ್ಲವೇ? ಇಮೊಂದು ಕಪ್ಪು ಜಾತಿಯ ಶಿಲೆ; ಚಕ್ಕೆ ಒಚ್ಚಿ ಯಾವುದಕ್ಕೋ ತಯಾರು ಮಾಡಿದ ಹಾಗಿದೆ" ಎಂದರು.

"ಏನು ಕೆಲಸಕ್ಕಿದ್ದೀತು?" ಎಂದು ಪ್ರಶ್ನೆ ಹಾಕಿದೆ.

"ಕಾಗೆ ಹೊಡೆಯಲಿಕ್ಕೆ; ಅಥವಾ ಮಂಗನನ್ನು ಓಡಿಸಲಿಕ್ಕೆ" ಎಂದ ಅಧಿಕಪ್ರಸಂಗಿಯಾದ ನನ್ನ ತಮ್ಮ."

"ಅದಕ್ಕೆ ಅಷ್ಟೆಲ್ಲ ಚಕ್ಕೆ ಒಚ್ಚಿ ತಯಾರಿಸಬೇಕಾಗಿರಲಿಲ್ಲ" ಎಂದರು ಅನಂತರಾಯರು. ಅವರು ಮತ್ತಷ್ಟು ಚೆನ್ನಾಗಿ ಯೋಚಿಸುತ್ತ "ಇವನ್ನು ನೋಡಿದರೆ ಹಿಂದಿನ ಕಾಲದ ಆಯುಧಗಳ ಹಾಗಿವೆ. ನಾನು ಕಂಡದ್ದು ಚಿತ್ರಗಳಲ್ಲಿ. ಈ ಒಂದು ಈಟಿಯ ಮೊನೆ; ಇನ್ನೊಂದು ತುಂಡು ಕೊಡಲಿ ಬಾಯಿಯ ಹಾಗೆ ಕಾಣಿಸುತ್ತದೆ. ಅವಾಗಿದ್ದರೆ ವಿಶೇಷವೇ. ನೂರಾರು ವರ್ಷಗಳ ಹಿಂದಿನವು ಎಂದ ಹಾಗಾಯಿತು" ಎಂದರು.

"ಅದೇ ನದರಿನ ಮೇಲಿಂದ ಹೆಕ್ಕಿ ತಂದದ್ದು ನಾನು. ಅಂದರೆ, ಬಹಳ ಪುರಾತನ ಕಾಲದಿಂದಲೂ ನಮ್ಮ ಮೂಡೂರು ಸೀಮೆಯಲ್ಲಿ ಜನ ವಾಸ ಮಾಡುತ್ತಿದ್ದರು ಎಂಬುದಕ್ಕೆ ಇದು ಸಾಕ್ಷಿ."

ನನ್ನ ತಮ್ಮನಿಗೆ ನನ್ನನ್ನು ಖಂಡಿಸುವ ಚಟ ಬಹಳ ಹೆಚ್ಚು. ಅವನೆಂದ "ಅದಕ್ಕೆ ಬೇರೊಂದು ಸಾಕ್ಷಿ ಬೇಕೇ? ಹಿಂದಿನ ಕಾಲದಲ್ಲಿ ಜನರು ಇದ್ದರು ಎನ್ನುವುದಕ್ಕೆ ನಾವೇ ದೊಡ್ಡ ಸಾಕ್ಷಿ" ಎಂದ.

ಹಾಗೆ ನಮ್ಮ ಹಿರಿಯರೋ, ಈ ಊರಿನ ಇತರ ಹಿರಿಯರೋ ಅನಾದಿಯಿಂದಲೂ ಇಲ್ಲಿಯೇ ಹುಟ್ಟಿ ಬೆಳೆದಿರಬೇಕೆಂಬ ನಿಯಮ ಇಲ್ಲವಲ್ಲ. ನಮ್ಮ ಅಪ್ಪ ಈ ಊರಿಂದ ಶಿವಮೊಗ್ಗೆಗೆ ಹೋದ ಹಾಗೆ, ಅವರು ಸಹ ಯಾವುದೋ ಪರ ಊರಿಂದ ಇಲ್ಲಿ ಬಂದವರಿರಲೂಬಹುದು. ಇಲ್ಲಿನವರ ಹಿರಿಯರೆಲ್ಲರೂ ಇಲ್ಲಿಯೇ ಹುಟ್ಟಿ, ಇಲ್ಲಿಯೇ ಬೆಳೆದವರು ಎಂಬುದು ಸಿದ್ಧಾಂತವೇ?" ಎಂದರು ಅನಂತರಾಯರು.

"ಏ ಮಹಾರಾಯ, ನೀನು ಬರುವಷ್ಟರ ತನಕವೂ ನನ್ನ ಪಕ್ಷ; ಇಲ್ಲಿಗೆ ಬಂದಾದ ಮೇಲೆ, ಈ ಮನೆಗೆ ಯಜಮಾನ ನಿನ್ನ ಅಣ್ಣ ಎಂದು ತಿಳಿದುಕೊಂಡು ಅವನ ಪಕ್ಷ ಹಿಡಿದಾಯಿತೋ" ಎಂದು ನನ್ನ ತಮ್ಮ ಪರಿಹಾಸ್ಯ ಮಾಡಿದ. ಆಗ ಅವರು "ಅಗ್ರಜರಿಗೆ ಮೊದಲನೆಯ ಮನ್ನಣೆ. ಆಮೇಲೆ ಕಿರಿಯರಿಗೆ" ಎಂದರು.

ಹೀಗೆ ಯಾವಾವುವೋ ಹರಟೆಗಳಲ್ಲಿ ಸಮಯ ಸರಿಯಿತು. ನಾನು ಒಚ್ಚಿದ ಶಿಲಾಯುಧದ ಮೊನೆ ಅಲ್ಲಿಗೆ ಬೊಡ್ಡಾಯಿತು. ಅವರಿಬ್ಬರೂ ಶಿವಮೊಗ್ಗೆಯ ತಮ್ಮ ಸಹ ವ್ಯವಸಾಯಿಗಳನ್ನು ಕುರಿತು ಚೇಷ್ಟೆ ಮಾಡತೊಡಗಿದರು. ನಾನು ಅದನ್ನು ಕೇಳುತ್ತ ಕುಳಿತೆ. ನಾವೇನು ಬಹಳ ಮಾತನಾಡಲಿಲ್ಲ- ಎನಿಸಿದರೂ, ನನ್ನವಳ ಧ್ವನಿ ಕೇಳಿಸಿದಾಗ ನನಗೆ ತೀರಾ ಎಚ್ಚರವಾಯಿತು. "ಇವತ್ತು ದೇವರಿಗೆ ಉಪವಾಸ ಅಂತ ಕಾಣುತ್ತದೆ" ಎಂದಳು

ಅವಳು. ನನ್ನ ಎರಡು ಮಕ್ಕಳೂ ಅಡುಗೆ ಮನೆಯಲ್ಲಿ ಆಗಲೇ ಬಿಡಾರ ಹೂಡಿದ್ದುವು. ಕಿಟ್ಟಣ್ಣ ಹೊರಗೆ ಬಂದು, ಚಿಕ್ಕಪ್ಪನನ್ನು ಸಮೀಪಕ್ಕೆ ಕರೆದು 'ಒಂದು ಗುಟ್ಟು ಹೇಳುತ್ತೇನೆ' ಎಂದು ತಿಳಿಸಿ, ಅವನ ಕಿವಿಯಲ್ಲಿ 'ಪಾಯಸ' ಎಂದದ್ದು ಕೇಳಿಸಿತು.

ನಾನು ಬಾವಿಕಟ್ಟೆಗೆ ಹೋಗಿ, ತಣ್ಣೀರೆರೆದುಕೊಂಡು ಬಂದೆ. ಇನ್ನು ಜಪ, ತಪ, ದೇವರ ಪೂಜೆಗಳನ್ನು ಒಂದೇ ಉಸಿರಿಗೆ ಮಾಡುತ್ತೇನೆಂದುಕೊಂಡು ದೇವರ ಕೋಣೆಗೆ ಹೋಗಿ ಸ್ಥಾಪಿತನಾದೆ. ನನ್ನವಳು, ನೈವೇದ್ಯಕ್ಕೆ ಏನೇನೋ ತಂದಿರಿಸಿದಳು. ಅವುಗಳಿಂದ ಏಲಕ್ಕಿಯ ವಾಸನೆ ಮೂಗಿಗೆ ಹೊಡೆದು ನನ್ನ ತಪೋಭಂಗವಾಯಿತು. "ಚಿಂತೆಯಿಲ್ಲ; ನನ್ನ ಸೀತೆ, ಅಷ್ಟು ತ್ವರೆಯಲ್ಲಿ ಬಂದವರ ಸಮ್ಮಾನಕ್ಕೆ ಹಾಲುಬಾಯಿ, ಪಾಯಸ, ಅಂಬೊಡೆಗಳನ್ನು ಕ್ಷಣದಲ್ಲಿ ಮಾಡಿಬಿಟ್ಟಿದ್ದಾಳೆ" ಎಂಬ ಹಿಗ್ಗು ಉಂಟಾಯಿತು. ಆದುದರಿಂದಲೇ ಇರಬೇಕು, ನನ್ನ ಎರಡೂ ಮಕ್ಕಳು ಅಡುಗೆ ಮನೆಯಲ್ಲಿ ಪಟ್ಟು ಹಿಡಿದು ಕುಳಿತದ್ದು. ಅವುಗಳ ಆತುರವನ್ನು ತಡೆಯಲಾಗದೆಂದು, ಆಕೆ ತಂದಿರಿಸಿದ ನೈವೇದ್ಯವನ್ನು ದೇವರಿಗೆ ತೋರಿಸಿ, ಘಂಟೆ ಬಾರಿಸಿ, ಮಂಗಳಾರತಿ ಹುಡಿ ಹಾರಿಸಿ ಹೊರಕ್ಕೆ ಬಂದೆ.

ಎಲೆ ಹಾಕಿದ್ದಾಯಿತು. ನನ್ನ ಎರಡು ಮಕ್ಕಳೂ ಹಟ ಹಿಡಿದು ಚಿಕ್ಕಪ್ಪನ ಆಚೀಚೆ ಕುಳಿತುಕೊಂಡವು. ಅವರೆದುರಿಗೆ ನಾನು, ಅನಂತರಾಯ ಮತ್ತು ನಮಗಿಂತ ಸ್ವಲ್ಪ ದೂರದಲ್ಲಿ ನಮ್ಮ ಅಜ್ಜಿ ಕುಳಿತಿದ್ದರು. ಊಟಕ್ಕಿಂತ ಮೊದಲು ಅವರಿಗೆ ಮನೆಗೆ ಬಂದ ಕಿರಿಯ ಮೊಮ್ಮಗನನ್ನು ಮಾತನಾಡಿಸುವ ಇಷ್ಟವಾಗಿ "ಏನು ಮಾಣಿ, ನಿನಗೆ ಶಿವಮೊಗ್ಗ ಒಳ್ಳೇ ಹಿಡಿಸಿದ ಹಾಗಿದೆ" ಎಂದರು.

"ಹಿಡಿಸದೆ ಏನಂತೆ? ಅಲ್ಲಿ ಮನುಷ್ಯರಿಲ್ಲವೇ?" ಎಂದ ನನ್ನ ತಮ್ಮ.

ಅಲ್ಲಿಗೆ ಮಾತನ್ನು ನಿಲ್ಲಿಸಿ ಅವರು ಊಟಕ್ಕೆ ತೊಡಗಿದರು. ನನ್ನ ಹೆಂಡತಿ ಬಂದವರಿಗೂ, ಮಕ್ಕಳಿಗೂ ಉಪಚಾರ ಮಾಡಿ ಬಡಿಸಿದಳು. ಊಟ ಮಾಡುತ್ತ ನನ್ನ ಮಗ ಕಿಟ್ಟಣ್ಣ "ಅಮ್ಮ ಪಾಯಸ ಮಾಡಿದರೆ ಲಾಯಕು ಆಗುತ್ತದೆ, ರುಚಿ ರುಚಿ; ನಿತ್ಯಕ್ಕೂ ಯಾಕೆ ಮಾಡುವುದಿಲ್ಲ?" ಎಂದು ಪ್ರಶ್ನಿಸಿದ. "ನಿತ್ಯವೂ ಪಾಯಸ ತಿಂದರೆ ಹೊಟ್ಟೆ ಹುಳುವಿನ ಉಪದ್ರ ತಡೆಯಲಿಕ್ಕೆ ಆಗಲಿಕ್ಕಿಲ್ಲ" ಎಂದಳು ತಾಯಿ.

"ರಾತ್ರಿಯೂ ಮಾಡು" ಎಂದ ಕಿಟ್ಟ.

ಅಜ್ಜಿ ಪಾಯಸ ಊಟ ಮಾಡುತ್ತಿದ್ದವರು, ಮಗುವಿನ ಮಾತನ್ನು ಕೇಳಿ ಸಂತೋಷವಾಗಿಯೋ ಏನೋ, "ಯಾತಕ್ಕೆ ಅವಸರ ಮಾಡುತ್ತೀ? ಇದರ ಬೆನ್ನಿಗೇ ಹತ್ತಾರು ಪಾಯಸ ಸಿಗುತ್ತದೆ ನಿನಗೆ" ಎಂದರು.

ನಾರಾಯಣ ಅವರ ಮಾತನ್ನು ಕೇಳಿ "ಹತ್ತಾರು ಪಾಯಸ ತಿಂದರೆ ಅತ್ತಿಗೆ ಹೇಳುವ ಹಾಗೆ ಮೊಡ್ಡವರಿಗೂ ಹುಳುವಿನ ಉಪದ್ರ ಶುರುವಾದೀತು" ಎಂದ. ನನಗೆ ಈ ಹಾಸ್ಯ, ಪರಿಹಾಸ್ಯಗಳ ಅರ್ಥ ಒಂದೂ ಆಗಲಿಲ್ಲ. ಮಕ್ಕಳು ಪಾಯಸದ ಆಸೆ ಮಾಡುವುದರಲ್ಲಿ ಆಶ್ಚರ್ಯವೇನಿಲ್ಲ. ಅದರಲ್ಲಿಯೂ ಕಿಟ್ಟಣ್ಣನಿಗೆ ಸಿಹಿ ಎಂದರೆ ತುಂಬ ಇಷ್ಟ. ಆ ಇಬ್ಬರು ಮಕ್ಕಳೂ ದೇವರಿಗೆ ನೈವೇದ್ಯವಾಗುವ ತನಕ ಮರ್ಯಾದೆಯಿಂದ ಕಾದು ಕುಳಿತದ್ದೇ ಮೊಡ್ಡದು.

ಊಟ ಮುಗಿಯಿತು; ಪಾಯಸದ ಊಟವಾದುದರಿಂದ ನಾನು ಚಾಪೆ ಬಿಡಿಸಿದೆ. ಮಗ್ಗುಲಲ್ಲಿ ಇನ್ನೆರಡು ಚಾಪೆ, ದಿಂಬುಗಳನ್ನು ಹಾಕಿ "ಒಂದು ಕ್ಷಣ ನಿದ್ದೆ ಮಾಡಿ" ಎಂದು ಹೇಳಿ, ಮಲಗಿದೆ.

"ನನಗೂ ಒಂದು ನಿದ್ರೆ ಆಗಬೇಕು" ಎಂದು ಅನಂತರಾಯರು ಮಲಗಿಕೊಂಡರು. ಮನೆಯ ಯಜಮಾನನನ್ನು ಅನುಸರಿಸುವುದಕ್ಕೆ ಅವರಿಗೆ ನಾಚಿಕೆ ಬರಬೇಕಾದ ಕಾರಣವೇನೂ ಇರಲಿಲ್ಲ. ಆದರೆ, ನನ್ನೆರಡು ಮಕ್ಕಳ ಗಂಟಲು ಸುಮ್ಮನಾದರೆ ಮಾತ್ರ ನಿದ್ದೆ ಬಂದೀತು ಎಂದೆಣಿಸುವಾಗ ಅವರ ತಾಯಿ "ಕಿಟ್ಟ, ನೀನೂ ಚಂದ್ರನೂ ಅವರ ಮಗ್ಗುಲಲ್ಲಿ ಮಲಗಿಕೊಳ್ಳಿ. ರಾತ್ರೆ ಪಾಯಸ ಬೇಕಾದರೆ ಒಂದು ಚೂರೂ ಮಾತನಾಡಬಾರದು. ಅವರೆಲ್ಲರೂ ಮಲಗಿಕೊಂಡಿದ್ದಾರಲ್ಲ" ಎಂದಳು.

ಮಕ್ಕಳು ಪಾಯಸದ ಆಸೆಗೋ ಏನೋ, ಸುಮ್ಮನೆ ಮಲಗಿಕೊಳ್ಳುತ್ತಲೇ ನಾನಂತು ಕಣ್ಮುಚ್ಚಿ ಮಲಗಿಕೊಂಡೆ; ಬಂದ ಜತೆಯವರೂ ಹಾಗೆ ಮಾಡಿರಬೇಕೆಂದು ನನ್ನ ಭಾವನೆ. ಆದರೆ ಎಚ್ಚರಗೊಂಡಾಗ ಅಲ್ಲಿ ಉಳಿದವನು ನಾನೊಬ್ಬನೇ. ಆದುದರಿಂದ ಕುತೂಹಲ ತಾಳಿ "ಸೀತೆ, ಅವರೆಲ್ಲ ಎಲ್ಲಿಗೆ ಹೋದರು?" ಎಂದು ವಿಚಾರಿಸಿದೆ.

"ನಾರಾಯಣ ಬಂದವರನ್ನು ಕರೆದುಕೊಂಡು ಜನಾರ್ದನನ ಮನೆಗೆ ಹೋಗಿರಬೇಕು. ಮಕ್ಕಳನ್ನು ಕಟ್ಟಿಕೊಂಡು ಹೋದನಪ್ಪ. ಅವನಿಗೆ ಆ ಎರಡು ಮಕ್ಕಳೆಂದರೆ ಜೀವ."

"ಅಂದರೆ ಏನರ್ಥ ಅದಕ್ಕೆ? ನನಗಿಂತ ಅವನು ಆ ಮಕ್ಕಳನ್ನು ಹೆಚ್ಚಿಗೆ ಪ್ರೀತಿಸುತ್ತಾನಂತಲ್ಲವೇ? ಹಾಗೆಯೇ ಆಗಲಿ" ಎಂದೆ.

ಬೇರೆ ಸಮಯವಾಗುತ್ತಿದ್ದರೆ ಸೀತೆ ಮರು ಬಾಣವೊಂದನ್ನು ಬಿಟ್ಟೇ ಬಿಡುತ್ತಿದ್ದಳು. ಹಾಗೆ ಸಾಲ ಬಾಕಿ ಇರಿಸುವವಳು ಅವಳಲ್ಲ; ಲೆಕ್ಕಾಚಾರ ಅಲ್ಲಿಂದಲ್ಲಿಗೇ ಫೈಸಲ್ಲಾಗಬೇಕು. ಹಾಗೆ ಮಾಡುವ ಬದಲು, ಈಚೆ ಬಂದು ಅಜ್ಜಿಯ ಕೋಣೆಯನ್ನು ಇಣಿಕಿ ನೋಡಿದಳು. ಅವರು ಇಲ್ಲದ್ದನ್ನು ಕಂಡು ನನ್ನ ಹತ್ತಿರ ಬಂದು "ಎಲೆ ಅಡಿಕೆ ಹರಿವಾಣ ತರಲೇ?" ಎಂದಂದು, ಅದನ್ನು ತಂದೂ ಬಿಟ್ಟಳು. ಈ ಬಿನ್ನಾಣವನ್ನು ಕಂಡೊಡನೆ "ಓ, ಇವಳಿಗೆ

ನನ್ನಿಂದ ಏನೋ ಕೆಲಸವಾಗಬೇಕಾಗಿದೆ" ಎಂಬುದಾಗಿ ತೋರಿತು. "ಏನಾಗಬೇಕು ಹೇಳು" ಎಂದೆ. "ಮೊಡ್ಡ ವರಪ್ರಸಾದ ಕೊಡುವ ದೇವರ ಹಾಗೆ ಮಾಡುತ್ತೀರಲ್ಲ. ನನಗೆ ಏನೂ ಆಗಬೇಕಾಗಿಲ್ಲ. ನಿಮ್ಮ ತಮ್ಮನ ಸುದ್ದಿ ಹೇಳುವ ಅಂತ ಬಂದೆ. ಬೇಡವಾದರೆ ಬೇಡ; ಅವನೇ ಹೇಳಲಿ."

"ಏನು ಹೇಳು, ನೀನೇ. ಅವನ ಸುದ್ದಿಯಾದರೆ ಅವನದ್ದು. ನಿನ್ನದಾದರೆ ನಿನ್ನದು; ನನ್ನಿಂದಾದರೆ ಮಾಡುತ್ತೇನೆ. ಹೇಳಲಿಕ್ಕೇನು ದಾಕ್ಷಿಣ್ಯ" ಎಂದು ರಾಗ ಎಳೆದೆ.

ಅವಳ ಮಾತುಗಳಿಂದ ತಿಳಿಯಿತು; ನನ್ನ ತಮ್ಮ ಹೊರಕ್ಕೆ ಹೊರಡುವ ಮೊದಲು ಅವಳ ಕಿವಿಯಲ್ಲಿ ಒಂದು ಹೊಸ ಸಮಾಚಾರ ಕೊಟ್ಟು ಹೋಗಿದ್ದನೆಂದು. ನಾನು, ಈ ಮೂರು ವರ್ಷಗಳಿಂದಲೂ ನನ್ನ ಯಜಮಾನಿಕೆಯ ಹೊಣೆಯನ್ನು ತೀರಿಸಿಕೊಳ್ಳಲು ಎಲ್ಲೆಲ್ಲಿಂದ ಜಾತಕ ತರಿಸಿ, ಅವನ ಲಗ್ನದ ವಿಚಾರ ಪ್ರಸ್ತಾಪಿಸಿದ್ದೆ. ಆದರೆ ಅವನೇ ರಾಪಿನಿಂದ "ನನಗೆ ಬೇಕಾದಾಗ ನಾನೇ ಹೇಳುತ್ತೇನೆ" ಎಂದು ನನ್ನ ಬಾಯಿಯನ್ನು ಕಟ್ಟಿಸಿದ್ದ. ನಮ್ಮೂರವರು "ಇವನು ತನ್ನ ತಮ್ಮನಿಗೆ ಮದುವೆಯನ್ನೇ ಮಾಡಿಸುವುದಿಲ್ಲ. ಬಸವನ ಹಾಗೆ ಬೆಳೆಯಲು ಬಿಟ್ಟಿದ್ದಾನೆ" ಎನ್ನುವುದಕ್ಕೂ ತೊಡಗಿದ್ದಾರೆ. ಈಗ ನನ್ನ ಸೀತೆ ಹೇಳಿದ ಸಮಾಚಾರದಿಂದ ನನಗೆ ಪರಮಾನಂದವಾಯಿತು. ನಮ್ಮ ಮನೆಗೆ ಬಂದ ಅನಂತರಾಯರಿಗೆ ಇಬ್ಬಿಬ್ಬರು ತಂಗಿಯರಂತೆ. ಇಬ್ಬರೂ ಓದಿಕೊಂಡವರು; ಮದುವೆಗೆ ನೆರೆದವರು. ಜಾತಕ ಅವರೇ ನೋಡಿಸಿದ್ದಾರಂತೆ. ಕಿರಿಯವಳು ನಾರಾಯಣನಿಗೆ ಒಪ್ಪಿಗೆಯಂತೆ. "ಮತ್ತೇನು ತೊಂದರೆ? ನಾವು ದಿಬ್ಬಣ ತೆಗೆದುಕೊಂಡು ಶಿವಮೊಗ್ಗೆಗೆ ಹೋದರಾಯಿತು. ಲಗ್ನ ಮಾಡಿಸಿ ಕರೆದು ತಂದರಾಯಿತು. ಚಿನ್ನ, ಮತ್ತೊಂದು ನಾವು ಹೇಳಿದ ಹಾಗೆ ಮಾಡಿಸುತ್ತಾರೆ" ಎಂದಳು ಅವಳು.

"ಕೊನೆಗೂ ಅವನಿಗೆ ಮನಸ್ಸು ಬಂತಲ್ಲ" ಎಂದು ಉದ್ಗರಿಸಿದೆ ನಾನು. "ಮದುವೆ ಆಗುವವನು ಅವನು; ಹುಡುಗಿ ಚಂದವಿರಬಹುದು ಎಂಬುದು ಅನಂತ ರಾಯರನ್ನು ಕಂಡರೆ ತಿಳಿಯುತ್ತದೆ. ಅವನಿಗೆ ಒಪ್ಪಿಗೆ ಆದರೆ ಆದ ಹಾಗೆಯೇ" ಎಂದೆ ನಾನು.

"ಅವರ ಕಷ್ಟ ಅದಲ್ಲ" ಎಂದಳು ಸೀತೆ.

"ಅವರದ್ದು ಎಂದರೆ?"

"ಹುಡುಗಿಯನ್ನು ಹೆತ್ತವರದ್ದು; ಮನೆಯಲ್ಲಿ ದೊಡ್ಡವಳು ಒಬ್ಬಳು ಇರುತ್ತ ಸಣ್ಣವಳಿಗೆ ಮದುವೆ ಮಾಡಲಾರರು. ನಾಳೆ ಯಾರಾದರೂ "ಮೊಡ್ಡವಳಿಗೆ ಏನೋ ಐಬು ಇದೆ' ಎಂದಾರು. ಅವಳ ಬಗ್ಗೆ ಸರಿಯಾದ ನಂಟಸ್ತಿಕೆ ಕೂಡಿ ಬಂದಿಲ್ಲ. ನೋಡಲಿಕ್ಕೆ ನೋಡಿಯೂ ಬಂದಿದ್ದಾರೆ. ಅದಕ್ಕೆ ನೀವು ಜನಾರ್ದನನಿಗೆ ಒಂದು ಮಾತು ಹೇಳಿದರಾಗಬಹುದು' ಎಂದಳು.

"ಜನಾರ್ದನನಿಗೆ! ಅವನಿಗೆ ನನ್ನ ಪ್ರಾಯ"

"ಹೆಚ್ಚೇ?"

"ಹಾಗಲ್ಲ, ನನ್ನಿಂದ ನಾರಾಯಣನಿಗೆ ಹೇಳಲಿಕ್ಕೆ ಆಗಲಿಲ್ಲ; ಅವನಿಗೆ ಹೇಳಿ ಲಗ್ನ ಮಾಡಿಸುವ ಕಾಲ ಇದೆಯೇ!"

"ಅವರ ಅಮ್ಮನ ಒತ್ತಾಯವೂ ಇದೆಯಂತಲ್ಲ."

"ಅದೆಲ್ಲವೂ ಸರಿಯೆ, ನಾನೇನೋ ಅವನಿಗೆ ಹೇಳಬಹುದು. ಆದರೆ ಮದುವೆಯ ವಿಷಯದಲ್ಲಿ ನನ್ನ ಮಾತು ನಡೆದೀತು- ಅನ್ನಲಾರೆ. ನಮ್ಮದನ್ನು ಬೇಕಾದರೆ ಒಪ್ಪುವ. ಆದರೂ, ಆ ನಂಟರಾಗುವವರು ಎಂಥವರು, ಏನು- ಎಂದು ತಿಳಿಯದೆ ಅವನಿಗೆ ಬುದ್ಧಿ ಹೇಳುವ ಮಾತು ಎಲ್ಲಿಂದ ಬಂತು?"

"ಅವರು ಹಗಲೂರಿನವರಂತಲ್ಲ."

"ಅಯ್ಯೋ ಮಹಾರಾಯತಿ, ಹಗಲೂರಾದರೇನಾಯಿತು? ಒಪ್ಪಬೇಕೆಂದಿದೆಯೇ?"

ಇನ್ನೂ ಒಂದು ಸಂಗತಿ. ಅವರು ಆಸೆ ಮಾಡಿ ಇಲ್ಲಿಗೆ ಬರುವುದಕ್ಕೂ ಒಂದು ಕಾರಣ ಇದೆ. ನಿಮ್ಮ ಜನಾರ್ದನ ಮೈಸೂರಿನಿಂದ ಬರುತ್ತ ಶಿವಮೊಗ್ಗೆಯಲ್ಲಿ ಇಳಿದು, ಅವರ ಮನೆಗೆ ಹೋಗಿದ್ದನಂತೆ. ಹೆಣ್ಣನ್ನು ನೋಡಿದ್ದಾನಂತೆ. ಊರಿಗೆ ಹೋಗಿ ಕಾಗದ ಬರೆಯುತ್ತೇನೆ- ಎಂದು ಹೇಳಿ ಬಂದಿದ್ದಾನಂತೆ. ಆದರೆ ಕಾಗದವನ್ನು ಮಾತ್ರ ಬರೆಯಲಿಲ್ಲ. ಅದು ಒಂದು ಖಾತ್ರಿಯಾದರೆ-"

"ಹಾಗೆ ಕತೆ! ಅದಕ್ಕೇ ಹೋದದ್ದು ಜನ್ನನ ಮನೆಗೆ."

"ಅವನಿಗಾಗಲೀ, ಅವನ ಅಮ್ಮನಿಗಾಗಲೀ- ಇಂತಿಷ್ಟೇ ಕೊಡಬೇಕು, ಮಾಡಬೇಕು- ಎಂಬ ಆಸೆ ಇದೆಯೋ ಏನೋ"

"ಅದನ್ನು ಅವರಾಗಿಯೇ ತಿಳಿಸಬೇಕು. ನೋಡು, ನಿನ್ನೆ ಅಜ್ಜಿಯ ಬಾಯಿಯಿಂದ ಒಂದು ಮಾತು ಬಂತು. ಅವರು ಅವನ ಮುಖಕ್ಕೆ ಅಂದರು; 'ಮದುವೆಯನ್ನು ಮುಂದಕ್ಕೆ ಹಾಕುತ್ತ, ಹಾಕುತ್ತ ಯಾವಳಾದರೂ ಹೆಣ್ಣು ಮಗುವನ್ನು ಸಂಕಟಕ್ಕೆ ಒಡ್ಡಬೇಡ' ಎಂದರು- ಒರಟಾಗಿ. ಅವನ ಸುದ್ದಿ ಇರಲಿ. ನಮ್ಮದನ್ನು ನಾವು ನೋಡುವ. ನಾವು ಒಪ್ಪಿದರೂ, ಬಿಟ್ಟರೂ, ನಾರಾಯಣನಿಗೆ ಆಸೆಯಿದ್ದರೆ ಆಗಿಯೇ ಆಗುತ್ತಾನೆ. ಆದರೂ ನಾವು 'ಹೂಂ' ಎನ್ನುವ ಮೊದಲು ಅಜ್ಜಿಯನ್ನು ಒಂದು ಮಾತು ಕೇಳಬೇಡವೇ?"

"ಅವರನ್ನೇ?"

"ಹಿರಿಯರಲ್ಲವೇ?"

"ಕೇಳಬೇಕು; ವಾಜಿಮಿಯೇ. ಆದರೆ ಅವರ ಬಾಯಿಯಿಂದ ಏನು ಬರುತ್ತದೆ, ಏನು ಬರುವುದಿಲ್ಲ- ಎಂತ ಹೇಗೆ ಹೇಳಲಿ? ಒಮ್ಮೆ ಬೇಡದ ಮಾತೇ ಬಂತು- ಎಂದು ಇಟ್ಟುಕೊಳ್ಳಿ"

"ಆಗ ಹೇಳುವುದು- ನಮ್ಮ ಆಕ್ಷೇಪವಿಲ್ಲ; 'ನೀನು ಅವರಲ್ಲೂ ಒಂದು ಮಾತು ಕೇಳು' ಎಂದು ಅವನಿಗೇ ಹೇಳಿಬಿಟ್ಟ."

"ಆಯಿತು ಹಾಗಾದರೆ, ನೀವು ಮೊದಲು ಅಜ್ಜಮ್ಮನನ್ನು ಮಾತನಾಡಿಸಿ. 'ಇದೊಂದು ನಿಮ್ಮ ಆಶೀರ್ವಾದದಿಂದ ಆಗಬೇಕು' ಅಂತ ಹೇಳಿ ಪುಸಲಾಯಿಸಿ; 'ನನಗೆ ಅವರ ಬಾಯಿಯ ಬೆದರಿಕೆ ಬಹಳ. ಸಾಯಂಕಾಲದ ಒಳಗೆ ಕೇಳಿ. ಅವರು ಬರುವುದರ ಒಳಗೆ ಅಜ್ಜಿಯ ನದರು ತಿಳಿದುಕೊಳ್ಳಿ."

ನನಗೆ ಇದು ಕರ್ತವ್ಯದ ವಿಷಯ. ನನ್ನ ಮೇಲಿನ ಜವಾಬ್ದಾರಿ ವಿಷಯ. ಸೀತೆಗಿಂತ ಹೆಚ್ಚಿನ ಆತುರ ಈ ವಿಷಯದಲ್ಲಿ ನನಗೆ; ಹೊರಟೆ. ಹೊರಟ ಮೇಲೆ ನೆನಪಾಯಿತು- ಕಲ್ಲಿನ ಚೂರು ಮತ್ತು ಕವಡೆಗಳ ವಿಚಾರ ಅವನ್ನು ಹಿಡಿದುಕೊಂಡು ಅಶ್ವತ್ಥಕಟ್ಟೆಯ ಕಡೆಗೆ ಹೋದೆ. ಮೊದಲು ಅವನ್ನು ಸುತ್ತಿದ ಅರಿವೆಯ ಕಟ್ಟನ್ನು ದೂರ ಒಂದು ಕಡೆ ಇರಿಸಿ, ಅನಂತರ ಅವರನ್ನು ಸಮೀಪಿಸಿ "ಅಜ್ಜಿ, ಎಷ್ಟು ಹೊತ್ತಿಗೆ ಬಂದು ಕುಳಿತಿರಿ?" ಎಂದು ಕೇಳಿದೆ.

"ಸುಮಾರು ಒಂದು ಗಳಿಗೆಯೇ ಆಯಿತು. ನಿನ್ನ ತಮ್ಮನೂ ಅವನ ಜೊತೆಗಾರರೂ ಆಚೆಲ್ಲೋ ಹೊರಟುಹೋದರು; ನಾನು ಈಚೆಗೆ ಬಂದೆ. ಹೊರಡುವಾಗ ನನ್ನ ಬಲ ಭುಜದ ಮೇಲೊಂದು ಹಲ್ಲಿ ಬಿತ್ತು. ಒಳ್ಳೆಯ ಶಕುನ ಅಂತ ಎಣಿಸಿಕೊಂಡು ಬಂದೆ. ಅವರು ಯಾರದು, ಮಾಣಿಯೊಟ್ಟಿಗೆ ಬಂದವರು?"

"ಅವನ ಸ್ನೇಹಿತರಂತೆ. ಅವರ ಹಿರಿಯರು ಬಲು ಹಿಂದೆ ಹಗಲೂರಲ್ಲಿ ಇದ್ದವರಂತೆ. ಈಗ ಶಿವಮೊಗ್ಗೆಯಲ್ಲಿ ಹೊಟೇಲು ಇರಿಸಿಕೊಂಡಿದ್ದಾರೆ. ಈಗ ಬಂದವರು ನಮ್ಮ ನಾರಾಯಣನ ಹಾಗೆ, ಅದೇ ಊರಿನಲ್ಲಿ ಹೈಸ್ಕೂಲು ಮಾಸ್ತರಿಕೆ ಮಾಡಿಕೊಂಡಿದ್ದಾರೆ."

"ಅವರು ಹೋದದ್ದು ಎಲ್ಲಿಗೆ?"

"ಜನಾರ್ದನನ ಮನೆಗೆ- ಎಂದಳಪ್ಪ ಸೀತೆ."

"ಹೋಗಲಿ, ಹೋಗಲಿ. ಆದರೆ ಫಲವಿಲ್ಲ. ಅವರು ಬಂದ ಕೆಲಸ ಅರ್ಧ ಆದ ಹಾಗೆ. ಇಡೀ ಆಗುವ ನದರನ್ನು ಕಾಣೆ. ನಿನಗೇನು? ನಿನ್ನ ಹೊರೆ ಕಡಿಮೆಯಾಗುತ್ತದೆ. ಮಾಣಿಗೂ ಹೆಣ್ಣು ಒಯಿನಾದ ಜೋಡಿ. ಎಷ್ಟು ಬೇಗನೆ ಆಯಿತೋ ಅಷ್ಟು ಒಳ್ಳೆಯದು;

ನಿನ್ನಪ್ಪ ಹೊರಿಸಿದ ಒಂದು ಹೊರೆ ಕಳಚುತ್ತದೆ ನಿನಗೆ. ಅದಕ್ಕೇನೆ ಅಂದದ್ದು ನಾನು-ಕಿಟ್ಟಣ್ಣನ ಹತ್ತಿರ ಇನ್ನೂ ಹತ್ತು ಪಾಯಸ ಉಂಟು ಅಂತ."

"ನಾನು ಅಜ್ಜೀ, ಅದನ್ನು ಕೇಳಲಿಕ್ಕೆ ಹೆದರಿ, ಹೆದರಿ ಬಂದವನು. ಅವರು ಯಾರು ಅಂತ ನನಗೆ ಗೊತ್ತಿಲ್ಲ."

"ಅದು ನನಗೂ ಗೊತ್ತಿಲ್ಲ. ಬಂದಾಗ ಕಂಡದ್ದಷ್ಟೇ ನನಗೆ ಗೊತ್ತು. ಆಗಿನಿಂದಲೂ ಮಂಗಲ, ಮಂಗಲ- ಅಂತ ಮನಸ್ಸು ಹೇಳುತ್ತಲೇ ಇದೆ. ಬಹಳ ದಿನಗಳಿಂದಲೂ ಕಾಣಿಸದ ಸಂತೋಷ ಇಂದು ಕಾಣಿಸಿತು. ಅವನು ಇಂಥದಕ್ಕೇ ಬಂದುದು- ಎಂದು ಹಾಗೆನಿಸಿರಬೇಕು."

"ಅರ್ಧ ಕೆಲಸ ಆಗುತ್ತದೆ ಅಂದಿರಿ."

"ಎರಡು ಹಕ್ಕಿಗೆ ಒಂದೇ ಸಾರಿ ಕಲ್ಲು ಹೊಡೆಯುವ ಎಂದು ಬಂದಿದ್ದ. ಆ ಇನ್ನೊಬ್ಬ ಹುಡುಗ..."

"ಜನ್ನ."

"ಅವನದ್ದು ನಂಬಿಕೆಯ ಮಾತಲ್ಲ; ಅವನು ನಿನ್ನ ಸ್ನೇಹಿತ ಹೌದು. ನಿನ್ನೆ ಅವನನ್ನು ಕಂಡಾಗ ಏನೋ ಅಂದೆನಲ್ಲ; ಮನಸ್ಸಿಗೆ ಏನೋ ಅನಿಸಿ ಅಂದೆ. ಅವನು ಒಪ್ಪಿದರೂ ಆ ನೆಂಟಸ್ತಿಕೆ ಬೇಡ. ದುಡ್ಡಿನ ಆಸೆಗೆ ಒಪ್ಪಿಯಾನು. ಆದರೆ ಅವನ ಕೈಯನ್ನು ಹಿಡಿದವಳು ಸುಖವಾಗಿರುವುದು ಹೇಗೋ. ಅವಳು ಇವನನ್ನು ಕುಣಿಸುವ ತ್ರಾಣವುಳ್ಳ ದುರ್ದುಂಡಿಯಾದರೆ ಅಡ್ಡಿಯಿಲ್ಲ."

"ಅವರಿಗೆ ಎರಡೆರಡು ಹೆಣ್ಣು ಮಕ್ಕಳಂತೆ; ಮದುವೆಗೆ ನೆರೆದವರು; ಓದಿಕೊಂಡವರು. ಅಲ್ಲಿಗೆ ಹೋದದ್ದು ಹಿರಿಯವಳ ಬಗ್ಗೆ."

"ಹಿರಿಯವಳು, ಕಿರಿಯವಳು- ಇಬ್ಬರೂ ಗುಣವಂತೆಯರೇ."

"ಹಾಗೆನಿಸುತ್ತದೆಯೇ ನಿಮಗೆ?"

"ಹಿರಿಯವಳು ಕಾಣುವುದಕ್ಕೆ ಅಷ್ಟು ಚಂದವಿಲ್ಲ. ಗುಣದಲ್ಲಿ ಇನ್ನೂ ಒಳ್ಳೆಯವಳು. ಆದರೆ, ನಿನ್ನ ತಮ್ಮ ಮೆಚ್ಚಿದ್ದು ಸಣ್ಣವಳನ್ನು; ಆಗಲಿ, ಅವನ ಇಷ್ಟವಿದ್ದ ಹಾಗೆ."

"ಸೀತೆಯ ಹತ್ತಿರ ಮಾತನಾಡುವುದೆಲ್ಲ ನಿಮಗೆ ಕೇಳಿಸಿರಬೇಕು ಅಂತ ಕಾಣಿಸುತ್ತದೆ."

"ಅವಳ ಹತ್ತಿರ ನೀನು ಮಾತನಾಡಿ ಆಯಿತೇನು? ಅಥವಾ ಅವಳು ಏನು ಹೇಳುತ್ತಾಳೆ?"

"ನಿಮ್ಮ ಮಾತನ್ನು ನಾನು ಹಾಗೆಲ್ಲ ಮೀರುತ್ತೇನೆಯೇ? ಅವಳು ಮೀರುತ್ತಾಳೆಯೇ?"

ನಕ್ಕರು ಅವರು.

"ನನಗೆ ನನ್ನ ಆಸೆಯನ್ನು ತೀರಿಸಿಕೊಳ್ಳಬೇಕೆಂದಿದೆ ಅಜ್ಜಿ. ಇನ್ನಿಷ್ಟು ಚೂರುಪಾರು ಕಲ್ಲು, ಕವಡೆ ತಂದಿದ್ದೇನೆ. ತಂದು ತೋರಿಸಲೇ?"

"ಏನು ಮರುಳೋ ನಿನಗೆ! ಆಯಿತು ತಾ. ಏನಾದರೂ ಕಾಣಿಸಿದರೆ ಹೇಳುತ್ತೇನೆ, ಇಲ್ಲವಾದರೆ ಇಲ್ಲ."

ಹಾಗೆಂದು ಹೇಳಿ ಅಲಗಿನಂತೆ ಕಂಡ ಒಂದು ಕಲ್ಲಿನ ಚೂರನ್ನು ಅವರ ಕೈಗೆ ಕೊಟ್ಟೆ. ಅವರು ಅದನ್ನು ಹಿಡಿದುಕೊಂಡು ಕಣ್ಮುಚ್ಚಿ ಯೋಚಿಸತೊಡಗಿದರು. "ಇದು ಮಗು, ರಾಮ ಲಕ್ಷ್ಮಣರ ಹಾಗೆ ಆಡುವವರದ್ದು. ಬಿಲ್ಲು ಬಾಣ ಹಿಡಿದು ಒಬ್ಬಾತ ಕಾಣಿಸುತ್ತಿದ್ದಾನೆ. ಅವನಿಗೆ ಗಡ್ಡ ಮೀಸೆಗಳೂ ಉಂಟು. ನಡು ಪ್ರಾಯದವನು. ಅವನು ಒಳ್ಳೆಯ ಈಡುಗಾರ; ಮಾಂಸ ತಿನ್ನುವ ಜಾತಿಯವನು. ಆದರೆ ಮೋಣಾಚಾರಿ ಅಲ್ಲ."

"ಅಂದರೆ?"

"ನಿನ್ನೆ ಹೇಳಿದೆನಲ್ಲ- ಮೈಯ ಮೇಲೆ ನೂಲಿಲ್ಲದವರ ಒಂದು ಕತೆಯನ್ನು. ಇವನಾದರೆ ಸೊಂಟಕ್ಕೇನನ್ನೋ ಸುತ್ತಿಕೊಂಡಿದ್ದಾನೆ. ಮುಂದಿನಿಂದ ಒಂದು ಲಂಗೋಟಿ ತೂಗಾಡುತ್ತಾ ಇದೆ."

"ಮತ್ತೆ?"

"ಅವನಿಗೊಬ್ಬ ಅಣ್ಣ, ಅತ್ತಿಗೆ ಇರುವ ಹಾಗಿದೆಯಪ್ಪ. ಅದಕ್ಕೋ ಏನೋ, ನನ್ನ ಬಾಯಿಯಿಂದ ರಾಮ ಲಕ್ಷ್ಮಣರ ಹೆಸರು ಬಂದದ್ದು. ಆದರೆ ಮಗು, ನನಗೆ ಆಶ್ಚರ್ಯ-ಬೇಸಾಯ, ಗೀಸಾಯ ಒಂದೂ ಇಲ್ಲದೆ ಜನ ಬದುಕುವುದು ಹೇಗೆ ಹೇಳು? ಇವನೂ ಒಂದು ಮಾಟೆಯಲ್ಲಿ ಬಿಡಾರ ಮಾಡಿಕೊಂಡಿರುವ ಹಾಗೆ ಕಾಣಿಸುತ್ತದೆ. ಗಡ್ಡ ಗಿಡ್ಡ ಇದ್ದರೂ ಋಷಿಗಿಷಿ ಅವನಲ್ಲ. ನಮ್ಮ ಹಾಗೆ ಸಾದಾ ಜನ. ಮತ್ತೇನೂ ಕಾಣಿಸುವುದಿಲ್ಲ."

"ಹಿಂದಿನ ಕಾಲದಲ್ಲಿ ಅಂಥವರು ಬಹಳ ಇದ್ದರಜ್ಜಿ. ಎಷ್ಟೋ ಕಡೆ ಹಾಗೆ ಇದ್ದದ್ದನ್ನು ಕೇಳಿದ್ದೇನೆ. ಅಷ್ಟೇಯೇ?"

"ಆಯಿತೇ."

"ಇದರಲ್ಲಿ ನನಗೆ ಇಷ್ಟೇ ಕಾಣಿಸುವುದಪ್ಪ" ಎನ್ನುತ್ತಲೇ ಅದನ್ನು ತೆಗೆದುಕೊಂಡು, ಒಂದು ಕರಿ ಶಿಲೆಯ ತುಂಡನ್ನು ಅವರ ಕೈಯಲ್ಲಿರಿಸಿದೆ.

"ಇವನಾದರೆ ಅವನಿಗಿಂತ ಜೋರು. ಅವನಂಥದೇ ಆಕಾರ. ಇದು ಮಗು, ಕೊಡಲಿ ಅಲಗು ಇದ್ದ ಹಾಗೆ ಇದೆಯಲ್ಲ. ಕಲ್ಲಿನ ಕೊಡಲಿ ಯಾವ ಮಣ್ಣಿಗೆ ಬಂದೀತು,

ಕೊಡಲಿಯೇ? ಮಚ್ಚೇ? ಇಲ್ಲಿಲ್ಲ- ಮರ ಕಡಿಯುವುದು ಕಾಣಿಸುತ್ತದೆ. ಒಂದು ಕಾಡು ಹಂದಿಯನ್ನೂ ಕಡಿಯುವ ಹಾಗಿದೆಯಲ್ಲ."

"ಕಬ್ಬಿಣ, ಕಂಚು ಸಿಗುವ ಮೊದಲು ಜನರು ಕತ್ತಿ, ಕೊಡಲಿ, ಚೂರಿ ಎಲ್ಲವನ್ನೂ ಕಲ್ಲಿನಿಂದಲೇ ಮಾಡುತ್ತಿದ್ದರು."

"ಕಷ್ಟ"

"ಕಷ್ಟವೇ"

"ಆದರೆ ಇವನು ನಾಲ್ಕು ಮಂದಿಗಳಲ್ಲಿ ದಿಟ್ಟಾಳು. ಹತ್ತು ಜನರು ಇವನಿಗೆ ಬಗ್ಗುತ್ತಾರೆ. ಇದನ್ನು ಹಿಡಿದುಕೊಂಡು ಹೋಗಿ ಎಲ್ಲಿಂದಲೋ ಒಂದು ಹೆಣ್ಣನ್ನೂ ಇವನೇ ಹೊತ್ತುಕೊಂಡು ಬಂದ ಹಾಗಿದೆ. ಆ ಹೆಣ್ಣಿನ ಕಡೆಯವರು ಅವಳನ್ನು ಹುಡುಕಿ ಬಂದರೂ, ಹಾಗೆಯೇ ಹೆದರಿಸಿ ಓಡಿಸಿದ ಹಾಗಿದೆ."

"ಆದರೂ ಇವನು ತನ್ನ ಹೆಂಡತಿಯನ್ನು ಸದರ ಮಾಡಿದವನಲ್ಲ. ಭಾರೀ ಪ್ರೀತಿ ಅವಳೆಂದರೆ. ಯಾವ ಕುಲದವಳೋ, ಯಾವ ಬಳಿಯವಳೋ, ಏನು ಕತೆಯೋ! ಹೆಣ್ಣು ಅಂದರೆ ಹಾಗೆಯೇ ಅಲ್ಲವೇ? ಎಲ್ಲೆಲ್ಲಿಯೋ ಹುಟ್ಟಿ ಯಾರ್‍ಯಾರ ಮನೆಯನ್ನೋ ಸೇರುವ ಪದಾರ್ಥವಲ್ಲವೇ?"

"ಅವರಿಗೆ ಮಕ್ಕಳು, ಮರಿ ಇದ್ದಾರೆಯೇ?"

"ಮಕ್ಕಳು ಮರಿ.... ಇಲ್ಲದೆ? ನನ್ನ ಕಣ್ಣಿಗೆ ಆರಾರು ತಲೆಗಳು ಕಾಣಿಸುತ್ತವೆ. ಅವುಗಳಲ್ಲಿ ಎರಡು ಸಣ್ಣದರಲ್ಲಿ ಸತ್ತಿರಬೇಕು. ಮತ್ತೆರಡು.... ಸಮನಾಗಿ ಅಂದಾಜು ಆಗುವುದಿಲ್ಲ. ಬೇರೆ ಯಾವಾವುವೋ ಮುಖಗಳು ಅಡ್ಡ ಬರುತ್ತಿವೆ. ಸಾಕು ಬಿಡು."

"ಇನ್ನೂ ಒಂದು ಕಲ್ಲಿದೆ ಅಜ್ಜಿ."

"ಆಯಿತು; ತೋರಿಸು" ಎಂದಾಗ ನಾನು ಇನ್ನೊಂದು ದುಂಡಾದ ಕಲ್ಲನ್ನು ತಂದು ಅವರ ಕೈಯಲ್ಲಿ ಇಟ್ಟೆ. ಒಂದು ಮುಷ್ಟಿಯಷ್ಟು ಗಾತ್ರದ ಕಲ್ಲದು. ನನಗೂ ವಿಶೇಷವಾಗಿ ಏನೂ ಕಾಣಿಸಿರಲಿಲ್ಲ. ಅದು ಊರಿನ ಹೊಳೆ, ತೋಡುಗಳಲ್ಲಿ ಸಿಗಬಹುದಾದ ಸಮೆಗಲ್ಲು. ಆ ಗುಹೆಯಲ್ಲಿ ಅದು ಸಿಕ್ಕಿತು- ಎಂಬುದರಿಂದ ತುಸು ಹೆಚ್ಚಿನ ಕುತೂಹಲ ನನಗೆ. ಇನ್ನು ಅಜ್ಜಿಗೆ ತೋರಿಸಲಿರುವ ವಸ್ತುಗಳೆಂದರೆ ಒಂದು ಎಲುಬಿನ ತುಣುಕು, ಕೆಲವು ಎಲುಬಿನ ನಳಿಗೆಗಳಂಥವು. ಎಲ್ಲವೂ ಒಂದೇ ಗಂಟಿಗೆ ಬೇಡ ಎಂದೆಣಿಸಿ, ಆ ಗುಂಡುಕಲ್ಲನ್ನು ಕೊಟ್ಟು "ಇದಾದರೆ ಸವೆದು ಒಳ್ಳೆ ನಯವಾಗಿದೆ. ಚಕ್ಕೆ, ಚೂರು ಹೋಗಿಲ್ಲ" ಎಂದೆ.

"ಮೊದಲು ಕೊಟ್ಟದ್ದರ ಹಾಗಿಲ್ಲ ಅನ್ನುವುದು ನೀನು."

"ಹೌದು"

"ಅವನ್ನು ಚಕ್ಕೆ ತೆಗೆದು ಮಾಡಿದ್ದೆಂಬುದು ಸಣ್ಣಪುಟ್ಟ ಕೆಲಸವೇನಲ್ಲ. ಬುದ್ಧಿವಂತರ ಕೆಲಸ. ಇದು ಬೇರೆಯೇ ಒಂದು ತೆರ" ಎನ್ನುವಾಗಲೇ ಅವರ ಮೈಯಲ್ಲಿ ಏತಕ್ಕೋ ನಡುಕು ಸಂಚರಿಸಿದಂತಾಯಿತು. ಹಾಗೆ ಅದನ್ನು ಹಿಡಿದುಕೊಂಡು ಕುಳಿತವರು ಅರ್ಧ ಗಳಿಗೆಯ ತನಕ ಕಣ್ಣು ತೆರೆಯಲೇ ಇಲ್ಲ; ಮಾತನಾಡಲೂ ಇಲ್ಲ. ನನಗೆ ಭಯ- ಇದೇ ವೇಳೆಗೆ ಯಾರಾದರೂ ಆಚೀಚೆ ಹಾಯುವವರು ಬಂದಾರೆಯೇ?" ಎಂದು.

"ಪರಮಾತ್ಮನೇ ಗತಿ" ಎಂದರು ನಮ್ಮಜ್ಜಿ, ನಿಟ್ಟುಸಿರು ತೆಗೆಯುತ್ತ.

"ಏನಜ್ಜಿ?"

"ನನ್ನ ಬುದ್ಧಿಗೆ ಏನೇನೋ ಕಾಣಿಸುತ್ತಿದೆ."

"ಕಂಡದ್ದು ಹೇಳಿ, ಮೊದಲು ಏನು ಕಂಡಿತು; ಆಮೇಲೇನು?"

"ಇದು ಲಿಂಗ, ಮಗು."

"ಲಿಂಗ ಅಂದರೆ ಶಿವಲಿಂಗವೇ?"

"ಲಿಂಗ ಅಂದರೆ ಲಿಂಗ. ಶಿವನೂ ಅಲ್ಲ, ಏನೂ ಅಲ್ಲ; ಅಲ್ಲಿ ಇದು ಒಂದೇ ಇದ್ದಿರಲಾರದು. ಅದರ ಜೊತೆಯಲ್ಲಿ ಇನ್ನೇನೋ ವಸ್ತು ಇತ್ತು ಅನಿಸುತ್ತದೆ. ನನ್ನ ಕಣ್ಣಿಗೆ ಒಂದು ಕತ್ತಲು ಮಾಟೆ ಕಾಣಿಸುತ್ತದೆ; ಅದರ ಹಿಂದಕ್ಕೆ ಮತ್ತೊಂದು ಸಣ್ಣ ಮಾಟೆಯಿದೆ."

"ಹೌದು ಹಾಗಿತ್ತು. ಅಲ್ಲಿ ಆ ಸಣ್ಣ ಮಾಟೆಯಲ್ಲಿ ಒಂದು ಕಲ್ಲು ಕುಣಿಯಲ್ಲಿ ಇದನ್ನು ಇಟ್ಟಿದ್ದರು."

"ಹಾಗಿದ್ದರೆ, ಪಾಣಿಪೀಠವೇ ಆಯಿತು."

"ಅಷ್ಟಕ್ಕೇ ಹಾಗಾಗಬೇಕಿಲ್ಲ. ಕಡೆಯುವ ಕಲ್ಲು, ಅದರ ಮಗುವನ್ನು ಕಂಡು-ಶಿವಲಿಂಗ, ಪಾಣಿಪೀಠ ಅನ್ನುತ್ತೀಯೋ ನೀನು? ಇದು ನೋಡು-ಗಂಡು; ಗಂಡುತನದ ಗುರುತು. ಆ ಮಾಟೆಯಲ್ಲಿ ಕೊರೆದು ಮಾಡಿಟ್ಟ ಕುಳಿ ಯೋನಿ. ಇವೆರಡನ್ನೂ ಒಟ್ಟಿಗಿರಿಸಿ, ಜನ ಪೂಜೆ ಮಾಡುತ್ತಿದ್ದರು."

"ಶಿವನೆಂದೇ!"

"ಶಿವನೂ ಅಲ್ಲ, ಮಣ್ಣೂ ಅಲ್ಲ, ಲಿಂಗ, ಯೋನಿ- ಅಂತಲೇ. ನಗಬೇಕು ಅಂತ ನನಗೆ ಕಾಣಿಸುತ್ತದೆ. ಒಂದೊಂದು ಸಾರಿ ನಗಲಿಕ್ಕೇನುಂಟು- ಎಂತ ಕಾಣಿಸುತ್ತದೆ. ಇನ್ನೊಂದು ಸಾರಿ, ಹೆಣ್ಣು ಗಂಡುಗಳು ಕೂಡಿಯೇ ಸೃಷ್ಟಿ; ದೇವರ ಸೃಷ್ಟಿಯಲ್ಲಿಯೂ ಹಾಗೆಯೇ- ಅಂತ ಈ ಜನರ ಯೋಚನೆ. ಹಸು, ಹಕ್ಕಿ ಎಲ್ಲವೂ ಹಾಗೆಯೇ ಅಲ್ಲವೇ

ಹುಟ್ಟುವುದು. ನಿನಗೆ ಒಂದು ಸಂಗತಿ ಹೇಳುತ್ತೇನೆ, ನನಗೆ ಕಾಣಿಸಿದ್ದನ್ನು. ಈ ತನಕವೂ ನಾನು ಆ ಸಂಗತಿಯಲ್ಲಿ ಬಾಯಿ ಬಿಚ್ಚಿದವಳಲ್ಲ. ನನಗೆ ಯಾವ ಶಿವಾಲಯಕ್ಕೆ ಹೋದರೂ ಅಲ್ಲಿನ ಲಿಂಗ ಮತ್ತು ಪಾಣಿಪೀಠಗಳನ್ನು ಕಂಡಾಗಲೆಲ್ಲ ಅನಿಸುತ್ತಿದ್ದುದು ಇದೇ. ಆಶ್ಚರ್ಯವಾಗುತ್ತಿತ್ತು ಮನಸ್ಸಿಗೆ. ನಮಸ್ಕಾರ ಮಾಡಬೇಕು- ಅಂತ ಅನಿಸುತ್ತಿರಲಿಲ್ಲ. ಭಕ್ತಿಯೇ ಬರುವುದಿಲ್ಲ, ದೇವಸ್ಥಾನಕ್ಕೆ ಹೋದರೂ. ಈಗಲೂ ನಾನು ಹೋಗುವುದುಂಟಲ್ಲ. ಭಕ್ತಿಗಿಕ್ತಿ ಬಾರದೆ ಹೋದರೂ ಆಶ್ಚರ್ಯ, ಬೆರಗು ತಪ್ಪಿದ್ದಲ್ಲ. ಏನು, ಗಂಡು ಹೆಣ್ಣಿನ ಚಮತ್ಕಾರ! ಎಷ್ಟು ಅವೆರಡರೊಳಗಿನ ಮೋಹ! ಎಷ್ಟೆಲ್ಲ ಸಂಸಾರದಲ್ಲಿ ಮಮತೆ, ಮಾಯೆ ಎಂಬುದು ಕಾಣಿಸುತ್ತದೆ! ಭಕ್ತಿಯೇ? ಅದು ನನ್ನಲ್ಲಿ ತೀರ ಕಡಿಮೆ. ಇಲ್ಲವೇ ಇಲ್ಲ- ಅಂದರೂ ಸಲ್ಲುತ್ತದೆ. "ಅಯ್ಯೋ ದೇವರೇ ಕಾಪಾಡು, 'ಅದನ್ನು ಕೊಡು', 'ಇದನ್ನು ಕೊಡು' ಎಂದು ನನಗೆ ಅನಿಸಿದ್ದೇ ಇಲ್ಲ. ಎಂದೆಂದೂ ಯಾವುದನ್ನೂ ಬೇಡಬೇಕು ಎಂದು ನನಗೆ ಅನಿಸುವುದಿಲ್ಲ. ಬೇಡುವುದೇ? ಛೀ, ಹೈಲು ಕೆಲಸ. ನೀರು, ನೆಲ,ಬೆಂಕಿ, ಬಾನುಗಳನ್ನು ಕೊಟ್ಟವನ ಹತ್ತಿರ, ಜೀವನವನ್ನೇ ಕೊಟ್ಟವನ ಹತ್ತಿರ, ಯಾವತ್ತು ಅದನ್ನು ಕೊಡು; ಇದನ್ನು ಕೊಡು- ಎಂದು ಬೇಡಿದರೆ ನಮಗೆ ಬುದ್ಧಿ ಉಂಟು- ಎಂದ ಹಾಗಾಯಿತೇ? 'ನಿನಗೆ ಕೊಟ್ಟಿದ್ದನ್ನು ಏನು ಮಾಡಿದೆ'- ಎಂದು ಕೇಳಲಾರನೇ ಆ ಬ್ರಹ್ಮ?"

'ಬ್ರಹ್ಮ ಅಂತ ನಾಲ್ಕು ಮುಖದ ದೇವರಿಗೆ ಹೇಳುವುದಲ್ಲವೇ ಅಜ್ಜಿ?"

"ನಾಲ್ಕು ಮುಖವೂ ಇಲ್ಲ, ಆರು ಮುಖವೂ ಇಲ್ಲ; ಸಾವಿರ ಮುಖ ಇದ್ದರೂ ಅದು ಕಡಿಮೆಯೇ! ಲೋಕದ ಎಲ್ಲ ಮುಖಗಳೂ ಅವನವೇ; ಈ ಸೃಷ್ಟಿ ಬೇರೆ ಅಲ್ಲ, ಅದನ್ನು ಮಾಡಿದವನೂ ಬೇರೆ ಅಲ್ಲ. ಹಾಗಿರುತ್ತ ನಾನೂ, ನೀನೂ ಬೇರೆ ಆಗುವುದು ಹೇಗೆ? ಬೇರೆ ಅಂತ ತಿಳಿದು ಬೇಡುವುದು ಏನನ್ನು!"

ಅಷ್ಟು ದೂರದ ವೇದಾಂತಕ್ಕೆ ನನ್ನ ಮನಸ್ಸು ಹೋಗಲಾರದ ದೆಸೆಯಿಂದ "ಅದಿರಲಿ ಅಜ್ಜಿ, ಇದರ ಪೂಜೆಯನ್ನು ಹೇಗೆ ಮಾಡಿದರು? ಅಭಿಷೇಕ, ಹೂವು, ಹಣ್ಣು...." ಎಂದು ಕೇಳಿದೆ.

"ಅದು ಯಾವುದೂ ನನ್ನ ಎಣಿಕೆಗೆ ಬರಲಿಲ್ಲ. ಎಣಿಸಿದ್ದರೆ ಕಾಣಿಸುತ್ತದೆಯೋ ಇಲ್ಲವೋ" ಎಂದು ಯೋಚಿಸುತ್ತ ನಕ್ಕು ಬಿಟ್ಟರು.

"ಯಾಕೆ ನಗುತ್ತೀರಿ?"

"ನನ್ನ ಅಂದಾಜೇ ಸಮ. ಮೊದಲು ಕಾಣಿಸಿದ್ದೇ ಸಮ."

""ಏನದು?"

"ಅಂದೆನಲ್ಲ, ಅದು ಲಿಂಗ ಅಲ್ಲ. ಆ ಮಾಟೆಯಲ್ಲಿ ಯೋನಿ ಗುರುತಿದೆ ಅಂತ. ಅದರ ಸುತ್ತಲೂ ಹತ್ತಾರು ಮಂದಿ ನಿಂತುಕೊಂಡಿದ್ದಾರೆ. ಒಂದು ಲೆಕ್ಕಕ್ಕೆ ಅಸಹ್ಯ. ಮಕ್ಕಳು ಮರಿ ಯಾರೂ ಇಲ್ಲವೆನ್ನು. ಎಲ್ಲರೂ ಹರೆಯದ ಹೆಣ್ಣುಗಳು, ಗಂಡುಗಳು, ಜೋಡಿಯಾಗುತ್ತಾ ಇದ್ದಾವೆ. ನಿನ್ನೆ ನನಗೆ ಅದೇ ಕಾಣಿಸಿದಾಗ ಒಂದು ಬಾರಿಗೆ ಅಸಹ್ಯ ಎನಿಸಿತು. ಮನುಷ್ಯರಲ್ಲಿ ನಾಚಿಕೆ ತುಂಬಿಕೊಂಡಿದ್ದರೆ ಅದು ಸ್ವಾಭಾವಿಕ. ಇವರಲ್ಲಿ ಅಂಥ ಸುಳ್ಳು ನಾಚಿಕೆ ಯಾವುದೂ ಇಲ್ಲ. ದೇವರು ಹೂಡು ಎಂದ ಆಟವನ್ನು, ಇವರು ನಾಚಿಕೆ ಬಿಟ್ಟು ಹೂಡುತ್ತಿರುವ ಹಾಗೆ ಕಾಣುತ್ತದೆ. ಆದರೆ, ಅವರ ಮುಖದಲ್ಲಿ ನನಗೆ ಒಂದು ವಿಧದ ಭಕ್ತಿ ಕಾಣಿಸುತ್ತದೆ. ಆದರೂ, ಈ ಜನರು- ಕೊಡು, ಬಿಡು- ಎಂದು ಬೇಡುತ್ತಲಿಲ್ಲ. ಮೊನ್ನೆ ಕಾಣಿಸಿದ ಆ ಮಂತ್ರವಾದಿ ಮಾತ್ರ "ಕಾಯಿಲೆ ಓಡಿಸು" ಎಂದು ಬೇಡಿದ. ನಿನ್ನೆ ಆ ಕೊಂಬಿನ ತುಂಡನ್ನು ಹಿಡಿದು, ನೋಡಿ ಏನೇನೋ ಅನಿಸಿ, ಅದನ್ನು ದೂರಕ್ಕಿರಿಸು ಎಂತ ಹೇಳಿದೆ. ಅದನ್ನು ಹೇಳಿದ ಹಾಗೆಯೇ ಇದನ್ನೂ ಹಿಡಿದರೆ- ಅಳುಕು, ಅಂಜಿಕೆ ಕಾಣಿಸುವುದಿಲ್ಲ. ಅದು ಇನ್ನೊಬ್ಬರಿಗೆ ಅಸಹ್ಯ ಕಾಣಿಸೀತು. ನನಗೆ ಅದೂ ಕಾಣಿಸುವುದಿಲ್ಲ. ಹೆರುವುದು ಅಸಹ್ಯವಲ್ಲ; ಇರುವುದೂ ಅಸಹ್ಯವಲ್ಲ; ಸಾಯುವುದೂ ಅಲ್ಲ, ಹುಟ್ಟಿಸುವುದು ಅಸಹ್ಯವೇ?"

"ಗಂಡು ಹೆಣ್ಣುಗಳನ್ನು ಒಟ್ಟಿಗೆ ಬೆಸೆದು, ಒಳ್ಳೆಯದಕ್ಕೋ ಕೆಟ್ಟದ್ದಕ್ಕೋ ಸುಖಕ್ಕೋ, ದುಃಖಕ್ಕೋ ಒಂದುಗೂಡಿಸುವ ಶಕ್ತಿ ಅಸಹ್ಯವೇ?"

ಆ ವೇಳೆಗೆ ಸಮನಾಗಿ ಆ ಹಾದಿಯಲ್ಲಿಯೇ ನಮ್ಮ ಮನೆಯ ಕಡೆಗೆ ಯಾರೋ ಬರುತ್ತಿರುವುದು ಕಾಣಿಸಿದುದರಿಂದ, ನಾನು ಅವರ ಕೈಯಿಂದ ಕಲ್ಲನ್ನು ತೆಗೆದುಕೊಂಡೆ. "ನೀವು ಕುಳಿತಿರಿ, ನಾನು ಹೋಗಿ ಇದನ್ನು ಇರಿಸಿ ಬರುತ್ತೇನೆಂದು" ಹೇಳಿ, ಮನೆಯ ಕಡೆಗೆ ಹೋದೆ. ಅನಂತರ ಅವನ್ನೆಲ್ಲ ಅಡಗಿಸಿಟ್ಟು, ಸೀತೆಯ ಬಳಿಗೆ ಹೋಗಿ ಅಜ್ಜಿಯೊಡನೆ ನಡೆದ ಮದುವೆ ವಿಚಾರದ ಸಂಭಾಷಣೆಯನ್ನು ತಿಳಿಸಿದೆ. ಅವಳಿಗೆ ಅದನ್ನು ಕೇಳುತ್ತ ಬಲು ಸಂತೋಷವಾಯಿತಾದರೂ "ಅಲ್ಲ, ನಿಮ್ಮ ಈ ಅಜ್ಜಮ್ಮ ಬೇಡವಾದುದನ್ನೆಲ್ಲ ಯಾತಕ್ಕೆ ಎಣಿಸುತ್ತಾರೋ" ಎಂದಳು.

"ಯಾವ ವಿಷಯ ಹೇಳುತ್ತೀ ನೀನು?"

"ಜನಾರ್ದನನ ವಿಷಯ."

"ಅವರು ಅವನ ವಿಷಯದಲ್ಲಿ ಏನೂ ಹೇಳಲಿಲ್ಲ. ನಾವು ಹಾಗೆ ಮಾತಾಡಬಾರದು. ಅಜ್ಜಿಯ ನಮೂನೆ ಥೇಟು ಅವರದ್ದೇ. ಅವರನ್ನು ತಿದ್ದುವವರು ನಾವಲ್ಲ."

"ಅದಲ್ಲಪ್ಪ" ಎಂದು ನುಡಿದು ಅವಳು ತನ್ನ ಕೆಲಸಕ್ಕೆ ಹೋದಳು.

ಅಷ್ಟು ಹೊತ್ತಿಗೆ ಮನೆಗೆ ಹೊಸ ಆಸಾಮಿಯೊಬ್ಬರು ಬರುವಂತೆ ಕಾಣಿಸಿತು. ಪ್ರಾಯಶಃ ಅಶ್ವತ್ಥದ ಕಟ್ಟೆಯಿಂದ ದೂರದಲ್ಲಿ ಕಾಣಿಸಿದವನು ಅವನೇ ಇರಬೇಕು. ಆತ ಮನೆಯೊಳಕ್ಕೆ ಕಾಲಿಡುವಾಗಲೇ "ಯಜಮಾನರಿದ್ದಾರೆಯೋ ಮನೆಯಲ್ಲಿ?" ಎಂಬ ಸ್ವರವೂ ಕೇಳಿಸಿತು. ಅಪರಿಚಿತ ಸ್ವರವಲ್ಲ. ನಾನು ಹಿಂದೆ ಕೇಳಿದ್ದೇ. ಅವನ ಮುಖವನ್ನು ನೋಡುತ್ತಲೇ ಗೊತ್ತಾಯಿತು. "ಓಹೋ ನೀನು, ಎಂದು ಬಂದೆ ಬೆಂಗಳೂರಿಂದ? ಏನು ಕಾರುಭಾರ?" ಎಂದು ಪ್ರಶ್ನಿಸಿದೆ.

"ನಾನು ಬೆಂಗಳೂರಲ್ಲಿರುವುದಲ್ಲ, ಮೈಸೂರಲ್ಲಿ."

"ನನಗೆ ನೆನಪು ಕಡಿಮೆ- ನೋಡು! ಬಾ ಕುಳಿತುಕೋ. ಎಂದು ಬಂದೆ? ಏನು ಕತೆ? ಇವತ್ತೇ ನನ್ನ ತಮ್ಮ ಶಿವಮೊಗ್ಗೆಯಿಂದ ಬಂದ. ಈಗ ಜನ್ನನ ಮನೆಗೆ ಹೋದ- ತನ್ನ ಸ್ನೇಹಿತರನ್ನು ಕರೆದುಕೊಂಡು. ಏನೀಗ ನಿನ್ನ ಸಮಾಚಾರ? ಹೊಟೇಲು ಚೆನ್ನಾಗಿ ನಡೆಯುತ್ತಾ ಇದೆಯೋ?" ಎಂದು ವಿಚಾರಿಸಿದೆ.

"ನಡೆಯುತ್ತಿದೆ. ನನ್ನದೊಂದು ತೀರಾ ಸಣ್ಣ ಹೊಟೇಲು. ಐದಕ್ಕೆ ಕಡಿಮೆಯಿಲ್ಲ, ಹತ್ತಕ್ಕೆ ಹೆಚ್ಚಿಲ್ಲ. ವರ್ಷಕ್ಕೆ ಒಂದು ಸಾರಿಯಾದರೂ ಊರು ಮನೆಗೆ ಬರಬೇಕಲ್ಲ. ಹಾಗೆ ಬಾರದೆ ಹೋದರೆ ಸಿಗುವ ನಾಲ್ಕು ಮುಡಿ ಗೇಣಿಗೆ ನಾಮ ಬಿದ್ದೀತು."

"ಅದಕ್ಕೆಂತಲೇ ಬಂದೆಯೋ? ಬಂದು ಹೋಗುವ ಖರ್ಚಿಗೂ ಇದಕ್ಕೂ ಸಮನಾದೀತಲ್ಲ."

"ಆದರೂ ಸಿಗುವ ಗೇಣಿ ಸಿಕ್ಕಿದರೆ ವರ್ಷಕ್ಕೆ ಒಂದು ದೇವರ ಸೇವೆ ಮಾಡಿಸಬಹುದು. ನನ್ನ ಊರಿನ ಅಮ್ಮನವರಿಗೆ ಸಲ್ಲಿಸುವ ಋಣವನ್ನು ಸಲ್ಲಿಸಬಹುದು. ಅದಕ್ಕಾದರೂ ಬರಬೇಕಲ್ಲ."

"ಇಲ್ಲಿನ ಮನೆಯಲ್ಲಿ ಯಾರ್‍ಯಾರಿದ್ದಾರೆ?"

"ಯಾವ ಭೂತವೂ ಇಲ್ಲ. ಒಬ್ಬ ಸಂಬಂಧಿಕನನ್ನು ಇರಿಸಿ ಹೋಗಿದ್ದೇನೆ. ಕಳೆದ ವರ್ಷದ ತನಕ ನಮ್ಮ ಅಮ್ಮ ಇರುತ್ತಿದ್ದಳು. ಯಾಕೆ ಅವಳೊಬ್ಬಳೇ ಇಲ್ಲಿ ವನವಾಸ ಮಾಡುವುದು?"

"ಹಾಗಾದರೆ ನಮ್ಮ ಮೂಡೂರಿನ ಚೂರೂ ಹಂಗಿಲ್ಲ ನಿನಗೆ?"

"ಹಾಗೆಂದರೆ ಹೇಗಾಗುತ್ತದೆ? ನಮ್ಮ ಹಿಂಡಾಗಾನಮ್ಮ ನಡೆಯಿಸಿದರೆ ಇದ್ದೇನೆ ನಾನು. ಅವಳು ಕೊಟ್ಟರೇ ಉಂಟು. ನನ್ನ ಅಜ್ಜಿ ಅವಳನ್ನು 'ಕೋಟಳಮ್ಮ' ಅಂತಿದ್ದಳು. ಕೋಟಳಮ್ಮನೋ,ಕೊಟ್ವಾಳಮ್ಮನೋ ನನ್ನ ಪಾಲಿಗೆ ಅವಳು ಕೊಟ್ಟರೆ ಉಂಟು, ಎಂಬ ನಂಬಿಕೆ ನನಗೆ. ಅದಕ್ಕೇನೆ ನನ್ನ ಹೊಟೇಲಿಗೆ ಜಗದಂಬಾ ವಿಲಾಸ ಎಂದು ಹೆಸರಿಟ್ಟಿದ್ದೇನೆ. ಅವಳೇ ಅಲ್ಲವೇ ಜಗದಂಬೆ?"

“ಒಳ್ಳೆಯ ಕೆಲಸ. ಮೊನ್ನೆ ನಾನು ಕಾಡು ಸುತ್ತಿ ಬರುವಾಗ ನಿಮ್ಮ ಮನೆಯ ಹತ್ತಿರದಿಂದಲೇ ಹಾದು ಬಂದೆ. ಆಗ ಅಮ್ಮನವರ ಗುಡಿಯ ಬಾಗಿಲು ತೆರೆದಿತ್ತು. ಯಾರೋ ದೇವರ ತಲೆಯ ಮೇಲೆ ಸಿಂಗಾರದ ಹೂವನ್ನು ಹಾಕಿ ಹೋಗಿದ್ದರು. ಪೂಜೆ ನಡೆಯುತ್ತದೆ-ಎಂದಾಯಿತು. ಆದರೆ ಅದರ ಮಾಡು ಮಾತ್ರ ಈಗಲೋ, ಇನ್ನೊಂದು ಗಳಿಗೆಗೋ-ಎನ್ನುವ ಹಾಗಿದೆ.”

“ಈ ವರ್ಷ ನಾನು ಊರಿಗೆ ಬಂದುದಕ್ಕೆ ಹುಲ್ಲಿನ ಚಾವಣಿ ಮಾಡಿಸಿ ಹೋಗುತ್ತೇನೆ. ಇನ್ನು ಎರಡು ವರ್ಷಗಳಲ್ಲಿ- ಅವಳು ನಡೆಯಿಸಿದರೆ, ಸ್ವಲ್ಪ ದುರಸ್ತಿ ಕೆಲಸ ಮಾಡಿ, ಹಂಚಿನ ಮಾಡನ್ನು ಹಾಕಿಸಬೇಕು. ಅವಳು ಅಷ್ಟು ಮಾಡಿಸುತ್ತಾಳೆಂಬ ಧೈರ್ಯ ನನಗಿದೆ. ಇಷ್ಟರ ತನಕ ಅವಳು ನನ್ನನ್ನು ನೂರು ಕುತ್ತುಗಳಿಂದ ಪಾರು ಮಾಡಿದಳು.” ಆತ ಹೀಗೆನ್ನುತ್ತಿದ್ದಾಗ ನನ್ನ ಸೀತೆಯೂ ಬಂದು ಮಾತಿಗೆ ಸೇರಿಕೊಂಡಳು. ಅವಳು ಮಾತನಾಡುತ್ತ “ಜನ್ನನ ಮನೆಗೆ ಹೋಗಿದ್ದೆಯಾ?” ಎಂದು ಕೇಳಿದಳು.

“ಇನ್ನೂ ಹೋಗಿಲ್ಲ. ಹೋದರೆ ಅವನು ನನ್ನನ್ನು ಮಾತನಾಡಿಸಬಹುದು, ಊರು ಮನೆಯಲ್ಲಿರುವಾಗ. ಆದರೆ, ಮೈಸೂರಿನಲ್ಲಿ ನಾನು ಅವನ ನದರಿಗೆ ಬಿದ್ದೇನೆಯೇ? ಅವನ ರಾಜ್ಯವೇ ಬೇರೆ. ಆದರೂ ಒಬ್ಬರಲ್ಲ ಒಬ್ಬರು ಅವನ ಸುದ್ದಿ ಹೇಳುತ್ತಾರೆ. ನೋಡಿ, ನೀವೆಲ್ಲ ಗುರುತಿನವರು, ಒಂದು ನಾಲ್ಕು ಬುದ್ಧಿಯ ಮಾತನ್ನು ಅವನಿಗೆ ಹೇಳಬೇಕು. ನಾನು ತಿಳಿಸಿದೆ ಅಂತ ಬೇಡ”

“ಏನು ಮಹಾರಾಯ?”

“ನಾನು ಕೇಳಿದ ಸಂಗತಿಯಿದು. ಅವನು ಬೇಗನೆ ಒಂದು ಮದುವೆ ಮಾಡಿಕೊಂಡರೆ ಚಂದ. ಅದರ ಬದಲು, ಯಾವ್ಯಾವ ಹೆಣ್ಣುಮಕ್ಕಳ ಹಿಂದೆ ಅಲೆದಾಡುತ್ತಾನೆ ಎಂದು ಸುದ್ದಿ. ಹಾಗೆಂದು ನಂಟಸ್ತಿಕೆ ಬರಲಿಲ್ಲ ಎಂದಲ್ಲ. ನನ್ನ ಗೊತ್ತಿನವರೇ ಹೋದದ್ದುಂಟು; ಮಾತಾಡಿದ್ದುಂಟು. ಅವನೂ ಒಂದು ಇಪ್ಪತ್ತು ಹೆಣ್ಣುಗಳನ್ನಾದರೂ ಕಂಡಿರಬಹುದು.”

“ಒಂದೂ ಸರಿಗೂಡಿ ಬರಲಿಲ್ಲ, ಅಲ್ಲವೇ?”

“ಸರಿ ಬರಲಿಲ್ಲ ಅಂದರೆ- ಒಂದು ಕಡೆಯವರಿಗೆ ಅವನು ನೇರವಾಗಿ ತಿಳಿಸಿದ ಮಾತನ್ನು ಕೇಳಿದ್ದೆ. ಅಗ್ಗಕ್ಕೆ ಸಿಕ್ಕುವ ಆಸಾಮಿ ತಾನಲ್ಲ- ಎಂದು ತಿಳಿಸಿದ. ಅವನ ಅಂದಾಜಿನಲ್ಲಿ ಹತ್ತೋ, ಇಪ್ಪತ್ತೋ ಸಾವಿರ ಕೊಡುವ ಮಾವಂದಿರು ಬೇಕೆಂದಿರಬಹುದು. ಅದನ್ನೂ ಕೊಡುವವರಿದ್ದರು. ನಮ್ಮ ಹೊಟೇಲವರ ಪೈಕಿಯಲ್ಲಿ ಓದಿದ ಒಂದು ಹುಡುಗಿ ಇದೆ. ಬಹಳ ಪಸಂದದ ಹುಡುಗಿ. ಕಾಣಲಿಕ್ಕೆ ರತಿ. ಹುಡುಗಿ ಬೆಳೆದಳು; ಅಪ್ಪನಿಗೆ ಲಗ್ನ ಮಾಡಿಸುವ ಆತುರ. ಪ್ರಸ್ತಾಪವನ್ನು ತೆಗೆದರು. ಇವನು ನಾಲ್ಕು ದಿನ ಅವರ ಮನೆಗೆ ಬಂದು

ಹೋದ; ನಂಬಿಕೆ ಹುಟ್ಟಿಸಿದ. ಅನಂತರ ಯಾಕೋ ಏನೋ, ಅವರಿಗೆ ಅನುಮಾನ ಬಂತು- ಅವನು ಬಂದುಹೋಗುವ ವಿಷಯದಲ್ಲೇ. ಅವರು ಸಿಟ್ಟಾಗಿ 'ಇನ್ನು ಮುಂದೆ ನೀನು ನಮ್ಮ ಮನೆಯ ಹತ್ತಿರಕ್ಕೆ ಸುಳಿಯಬಾರದು' ಎಂದರು. ಹೀಗೆಲ್ಲ ಹೈಲು ವ್ಯಾಪಾರ ಮಾಡಿಕೊಳ್ಳುವುದಕ್ಕಿಂತಲೂ ಆತ ನ್ಯಾಯವಾದ ಒಂದು ಮದುವೆ ಮಾಡಿಕೊಂಡರೇನು- ಅನಿಸುತ್ತದೆ ನನಗೆ. ಮತ್ಯಾಕಲ್ಲ- ಜನ ಕೇಳುತ್ತಾರೆ- ಜನಾರ್ದನರಾಯರಿಗೆ ನಿಮ್ಮೂರ್ರಲ್ಲವೇನು- ಅಂತ."

ನಾನು ಮೆಲ್ಲಗೆ ಅಲ್ಲಿಂದ ಜಾರಿಬಿಟ್ಟೆ. ಮನೆಗೆ ಬಂದ ಹಿಂಡುಗಾನ ಮಂಜುನಾಥನ ಸ್ವಭಾವ, ಪ್ರಾಮಾಣಿಕತೆಗಳ ವಿಷಯದಲ್ಲಿ ನನಗೆ ಯಾವ ಅಪನಂಬಿಕೆಯೂ ಇಲ್ಲ. ನನ್ನ ಅಜ್ಜಿ ಕೆರಳಿಸಿದ ಸಂಶಯ ನಿಜವಾಗದಿರಲಿ- ಎಂದು ಅಂದುಕೊಂಡು, ಮನಸ್ಸನ್ನು ಗಟ್ಟಿ ಮಾಡಿಕೊಂಡ ಕಾಲಕ್ಕೇನೆ ಈ ಸಮಾಚಾರ ತುಂಬ ನೋವನ್ನುಂಟು ಮಾಡಿತು. ನಾನು ಎದ್ದುದನ್ನು ಕಂಡು ಮಂಜುನಾಥ ನನ್ನ ಹೆಂಡತಿಯೊಡನೆ "ನಿಮ್ಮ ಯಜಮಾನರಿಗೆ ನನ್ನ ಹಾಳು ಹರಟೆ ಕೇಳಿ ಬೇಸರ ಬಂತೋ ಏನೋ. ಅವರಿಗೂ, ಜನಾರ್ದನನಿಗೂ ತುಂಬ ಸ್ನೇಹ ಎಂಬುದು ಗೊತ್ತಿದ್ದೇ ಹೇಳಲು ಬಂದೆ. ಅವನನ್ನು ದಾರಿಗೆ ತಂದರೆ ನಿಮ್ಮ ಯಜಮಾನರೇ ತರಬೇಕು" ಎಂದು ವಿನಂತಿಸಿದ್ದೂ ಕೇಳಿಸಿತು. ಸೀತೆಗೂ ಅಷ್ಟೇ ವಿಸ್ಮಯವಾಗಿರಬೇಕು, ಅದನ್ನೆಲ್ಲ ಕೇಳಿ. ಮಂಜುನಾಥ ಅವಳಿಗೆ ದೂರದ ಸಂಬಂಧಿ. ಚಿಕ್ಕಂದಿನಿಂದಲೂ ಪರಿಚಿತ. ಆತ ಊರಿಗೆ ಬಂದಾಗಲೆಲ್ಲ ತಮ್ಮ ಮನೆಗೆ ಬಂದು, ನಾಲ್ಕು ನಾಲ್ಕು ಸಾರಿ ಮಾತನಾಡಿಸಿಕೊಂಡು ಹೋಗುವವನು. ಆದರೆ ಊಟಕ್ಕೆ ನಿಲ್ಲು- ಎಂದು ಎಷ್ಟು ಸಾರಿ ಹೇಳಿದರೂ ದಾಕ್ಷಿಣ್ಯಪರನಾಗಿ ಎದ್ದು ಓಡುತ್ತಿದ್ದ. ನಾನು ಈ ಸಮಾಚಾರವನ್ನು ಕೇಳಿ ಏನು ಹೇಳುವುದಕ್ಕೂ ತೋಚದೆ ತಬ್ಬಿಬ್ಬಾಗಿ ಹೊರಟು ಬಂದೆ. ಮಂಜುನಾಥ ಬರುತ್ತ ದಾರಿಯಲ್ಲಿ ನಮ್ಮ ಅಜ್ಜಿಯನ್ನು ಮಾತನಾಡಿಸಿ ಬಂದಿರಲೂಬಹುದು.

"ತೋಟಕ್ಕೆ ಹೋಗಿ ಬರುತ್ತೇನೆ" ಎಂದು ಅವರಿಬ್ಬರನ್ನೂ ಉದ್ದೇಶಿಸಿ ಹೇಳಿ ಹೊರಟುಬಿಟ್ಟೆ. ನನ್ನ ಮನಸ್ಸಿನ ಗೊಂದಲವನ್ನು ತಪ್ಪಿಸುವುದಕ್ಕೋಸ್ಕರ ಉಪಾಯ ಹುಡುಕಿದೆ.

# ಅಧ್ಯಾಯ 6

ತಾನೊಂದು ಎಣಿಸಿದರೆ ದೈವ ಇನ್ನೊಂದು ಎಣಿಸಿತು-ಎಂಬ ಗಾದೆಯಂತಾಯಿತು ನನ್ನ ಅವಸ್ಥೆ. ಈ ತನಕವೂ ನಾನು ಓದಿಕೊಂಡು, ಪರೀಕ್ಷೆ ಪಾಸಾದದ್ದು ಮಾಮೂಲಿ ಕ್ರಮಗಳಿಂದ. ಜ್ಞಾಪಕಶಕ್ತಿ ಸ್ವಲ್ಪ ಗಟ್ಟಿಯಾಗಿ ಇದ್ದುದರಿಂದ- ಬೇಕಾದ್ದಿರಲಿ, ಬೇಡವಾದ್ದಿರಲಿ, ಓದಿದುದರಲ್ಲಿ ಹತ್ತರಲ್ಲಿ ಐದರಷ್ಟು ನನ್ನ ತಲೆಯಲ್ಲಿ ಉಳಿದುಕೊಳ್ಳುತ್ತದೆ. ಮತ್ತೊಮ್ಮೆ ಓದಿದರೆ ಏಳರಷ್ಟೂ ಉಳಿಯಬಹುದು. ಹೀಗಾಗಿ, ಪರೀಕ್ಷೆ ಪಾಸಾಗುವುದರಲ್ಲಿ ಕಷ್ಟ ಕಾಣಿಸಲಿಲ್ಲ. ನಾನು ಬಿ.ಎ., ಓದುತ್ತಿದ್ದ ವರ್ಷ, ಕೊನೆಯ ಪರೀಕ್ಷೆಗೆ ಹದಿನೈದು ದಿನಗಳಿರುವಾಗ ನನಗೆ ಒಂದು ಮದುವೆ ನಿಶ್ಚಯವಾಗಿದೆಯೆಂದು ನಮ್ಮಪ್ಪ ತಿಳಿಸಿದರು. ನೇರಾಗಿ ಹಾಗೆ ತಿಳಿಸಲೂ ಇಲ್ಲ; 'ತ್ವರೆಯಿಂದ ಮನೆಗೆ ಬಾ' ಎಂದರು. ಬಂದ ಮೇಲೆ, ನನ್ನ ಮತ್ತು ಸೀತೆಯ ಜಾತಕ ಬಹಳ ಚೆನ್ನಾಗಿ ಕೂಡಿ ಬರುತ್ತದೆ- ಎಂದು ಮದುವೆಯ ಪ್ರಸ್ತಾಪವನ್ನು ತೆಗೆದರು. 'ಪರೀಕ್ಷೆ ಕಳೆಯಲಿ' ಎಂದೆ. 'ಪರೀಕ್ಷೆ ವರ್ಷದ್ದು; ಅಥವಾ ಎರಡು ವರ್ಷದ್ದು. ಇದು ಆಯುಷ್ಯಕ್ಕೆ ಒಂದು ಪರೀಕ್ಷೆ' ಎಂದು ಗದರಿಸಿ, ಲಗ್ನ ನಿಶ್ಚಯ ಮಾಡಿದರು. ನಾನು ಬಿ.ಎ., ಓದುತ್ತಿದ್ದುದು ನಿಜವಾದರೂ, ಹೆಣ್ಣಿನ ಮುಸುಡನ್ನು ನೋಡಿದ್ದು ಮದುವೆಯ ಮಂಟಪದಲ್ಲಿಯೇ. ಅಲ್ಲಿ ಯಾವ ಹೆಣ್ಣೂ, ಯಾರಿಗೂ ವಿಕಾರವಾಗಿಯೇ ಕಾಣಿಸೀತು. ಇಲ್ಲದ ಅಲಂಕಾರ, ಸಲ್ಲದ ವೇಷ, ಎಲ್ಲಿಲ್ಲದ ನಾಚಿಕೆಗಳು ಕೂಡಿಕೊಂಡಾಗ ಮನ್ಮಥನೂ ಒಬ್ಬ ಮಂಗನಾಗಿ ಕಾಣಿಸುತ್ತಾನೆ; ರತಿಯು ಮಂಗಿಯಾಗುತ್ತಾಳೆ. ಸುತ್ತಲಿನ ಜನರು ಮಾತ್ರ ತಮ್ಮ ಮನಸ್ಸಿನ ಚಂದವನ್ನೆಲ್ಲ ಮದುಮಕ್ಕಳ ಮೇಲೆ ಹೊರಿಸಿ, 'ಮದುಮಕ್ಕಳು ಅಂಥಿಂಥ ಚೆಲುವ'ರೆಂದು ಬಿಡುತ್ತಾರೆ. ಸೀರೆ, ಜರತಾರಿ, ಕಿವಿಯಿಂದ ಕಾಲ್ಬೆರಳಿನ ತನಕವೂ ಚಿನ್ನಾಭರಣ, ಮುಂಡಾಸ, ಬಾಸಿಗ, ಅಕ್ಷತೆ- ಇವೆಲ್ಲವೂ ಮಂಟಪದಲ್ಲಿ ಹಬ್ಬುವ ಹೊಗೆಯಿಂದಾಗಿ ಒಂದು ಹುಣಿಸೆಯ ಕೊರಡಿಗೂ ಚಂದವನ್ನು ಪ್ರೇರಿಸುತ್ತಿರಬೇಕು. ಇವುಗಳ ಮೇಲೆ ಒಂದಿಷ್ಟು ಹೊಸ ಚಿನ್ನದ ಸರಗಳ ಹೊರೆಯನ್ನು ಹೇರಿಸಿದ್ದಾದರೆ ಕೇಳುವುದೇ ಬೇಡ. ಪ್ರಾಯಶಃ ಪುರಾಣ ಕಾಲದಲ್ಲಿ ಮನ್ಮಥ, ರತಿಯರಿದ್ದುದು ಸಹ ಹಾಗೆಯೇ ಏನೋ.

ನಾನು ಏನನ್ನೋ ಹೇಳಲಿಕ್ಕೆ ಹೊರಟೆ- ಮದುಮಕ್ಕಳ ವಿಚಾರದಲ್ಲಿ; 'ಹುಣಿಸೆ ಕೊರಡು' ಮತ್ತೊಂದು- ಅಂದೆ. ಮತ್ತೇಕಲ್ಲ ಹೇಳಿದ್ದು; ಪರೀಕ್ಷೆಯ ಅವಸರದಲ್ಲಿ ನನ್ನ ಲಗ್ನವಾಯಿತು- ಎಂಬುದಕ್ಕೆ ಹೇಳಿದೆ. ಅಷ್ಟಿದ್ದರೂ, ಪರೀಕ್ಷೆಯನ್ನು ಕೊಟ್ಟೆ; ಪಾಸಾದೆ. ಆ

ಬಳಿಕ ಓದಿದ ವಿಷಯಗಳಲ್ಲಿ ನಿರ್ಲಿಪ್ತನಾದೆ. ನಾನು ಓದಿದ್ದು- ಚರಿತ್ರೆ, ಸಮಾಜಶಾಸ್ತ್ರ ಭಾಷೆ, ಅವೆಲ್ಲವುಗಳಲ್ಲೂ ಹಾಗೆಯೇ. ನಿಜವಾಗಿಯೂ ನನಗೆ ಚರಿತ್ರೆಯಲ್ಲಿ ಆಸಕ್ತಿ ಹುಟ್ಟಿದ್ದಿದ್ದರೆ ಅದು ಕಾಲೇಜನ್ನು ಬಿಟ್ಟ ಮೇಲೆ; ಮೂಡೂರಿನ ಕಾಡುಗುಡ್ಡಗಳಲ್ಲಿ ಅಲೆದು, ಹಾಳುಬಿದ್ದ ಗುಡಿಗಳನ್ನು ಕಂಡು, ಮನೆ, ಬೀದಿಗಳ ಆಯಪಾಯ ನೋಡಿ, ನಮ್ಮ ಮೂಡೂರು ಹಿಂದೆ ಒಂದು ಮಹಾನಗರವಾಗಿತ್ತು ಎಂಬ ಭಾವನೆ ಬಂದ ಮೇಲೆ.

ನನಗೆ ದೊಡ್ಡ ನಗರದ ದೋಹವಿಲ್ಲ. ಈ ಹಳ್ಳಿ ಧಾರಾಳ ಸಾಕು. ಆದರೆ ಆ ಹಳ್ಳಿಯನ್ನು ಒಂದು ರಾಜಧಾನಿಯ ಮಟ್ಟಕ್ಕೇರಿಸಿದ್ದಾದರೆ, ಒಂದಿಷ್ಟು ಹೆಚ್ಚಿನ ಹೆಮ್ಮೆ. ಅಂಥ ಸ್ಥಿತಿ ನನ್ನದಿರುವಾಗ ನಾಗನಕಾಲು ಬರೆಗೆ ಹೋಗಿ ಬಂದದ್ದು, ಅಲ್ಲಿ ಶಿಲಾಯುಗದ ಅವಶೇಷಗಳು ಸಿಕ್ಕಿದ್ದು, ಅಜ್ಜಿ ಅಷ್ಟೆಲ್ಲ ಹೇಳಿದ್ದು, ಅದಕ್ಕೆ ತಕ್ಕಂತೆ ನನಗೆ ಹೊಳೆದದ್ದು, ಬಿಟ್ಟಿದ್ದು- ಇವುಗಳಿಂದ ಪ್ರಾಚ್ಯ ಸಂಶೋಧನೆಯ ಮರುಳು ನಾಟಿತು. ನಮ್ಮ ಮೂಡೂರನ್ನು ಹತ್ತು ಸಾವಿರ ವರ್ಷಗಳಷ್ಟು ಹಿಂದಕ್ಕೆ ತಳ್ಳಿ ಬಿಟ್ಟು, ಅದನ್ನು ಮೆಂಫಿಸು, ಲಕ್ಸರು, ಥೀಬಿಸು ನಗರಗಳಿಗೆ ಸಮಾನವಾಗಿ ಮಾಡಿಯೇ ಬಿಡಬೇಕು ಎಂಬ ಹಟ ಬಂದಿತು. ಇನ್ನೊಮ್ಮೆ ಅಣ್ಣು ನಾಯ್ಕನನ್ನು ಕಟ್ಟಿಕೊಂಡು ಹೊರಡುವ ಆಸೆ. ಆತನಿಗೆ ಬಿಡುವಿಲ್ಲವಾದರೂ, ನಾರಾಯಣ ಜತೆಗೆ ಬಂದಾನೆಂಬ ಹಂಬಲ. ಈ ನನ್ನ ಕನಸಿನ ಗೋಪುರವನ್ನು ಅದೇ ನಾರಾಯಣ ತನ್ನ ಮದುವೆಯ ಹಂಬಲದ ಒತ್ತಡದಲ್ಲಿ ಕೆಡವಿಬಿಡಬೇಕೇ?

ಅವನಿಗೆ ಬೇಗನೆ ಮದುವೆಯಾಗುವ ಆಸೆ; ಪ್ರಾಯವೂ ಆಗಿದೆ. ನನಗಿಂತಲೂ ಆತ ನಾಲ್ಕು ವರ್ಷ ಕಿರಿಯ. ಅದು ಸಹಜವಾದದ್ದೇ. ಆದುದರಿಂದ ನಾನು ಶಿವಮೊಗ್ಗೆಗೆ ಹೋಗಿ, ಅವನ ಭಾವೀ ಮಾವನ ಹತ್ತಿರ ಮಾತನಾಡಿ ಮುಂದಿನ ಎಲ್ಲ ವಿಚಾರಗಳನ್ನು ಗೊತ್ತುಮಾಡಿಕೊಂಡು ಬರಬೇಕು- ಎಂಬುದು ಅವನ ಅಪೇಕ್ಷೆ. ಲೆಕ್ಕಕ್ಕೆ ಈ ನಾನು ಮನೆಯ ಯಜಮಾನ, ನಿಜ; ಆದರೆ ಒಂದು ಮದುವೆಗೆ ಏನೇನು ಬೇಕು- ಎಂಬ ವಿಚಾರ ನನಗೆ ಗೊತ್ತೇ ಇಲ್ಲ ಅಂದರೆ ಗೊತ್ತೇ ಇಲ್ಲ. ಮದುವೆಗೆ ಗಂಡು, ಹೆಣ್ಣು ಬೇಕು ಎಂಬುದನ್ನು ಬಲ್ಲೆ. ಉಳಿದ ವಿಚಾರ ಊರವರನ್ನು ಕೇಳಿ, ತಿಳಿದು ಆಗಬೇಕು. ಹೇ ಮಹಾರಾಯ ನಿನಗೆ ಒಪ್ಪಿಗೆಯಾದರೆ ಸರಿ; ನಮಗೆ ಸಂತೋಷ ಎಂದೆನಲ್ಲದೆ, “ಅಜ್ಜಿಯ ಉಮೇದು, ಆಶೀರ್ವಾದ ಎರಡೂ ಸಿಕ್ಕಿದ ಮೇಲೆ ಏನು ಹೆದರಿಕೆ? ನೀನೇ ಹೋಗು; ದಿನ ನಿಶ್ಚಯ ಮಾಡು. ನಾನು ಇಂಥದನ್ನು ಮಾಡಬೇಕು- ಎಂಬುದನ್ನು ಹೇಳು. ನನಗೆ ಏನಾಗಿದೆ ಈಗ ಗೊತ್ತೇ? ಇಲ್ಲಿಗೆ ಬಂದು ಒಂದು ಸಾರಿ ಬೇರು ಬಿಟ್ಟ ಮೇಲೆ ಪ್ರಯಾಣ ಬೇಡ. ಈ ಊರನ್ನು ಬಿಟ್ಟು ಇನ್ನೊಂದು ಊರು ಸಹ ಬೇಡ ಎನಿಸುತ್ತಿದೆ. ಮದುವೆಯ ನಿಶ್ಚಯ ಅಂದರೆ ಏನಪ್ಪ? ಯಾವ ದಿನ, ಯಾವ ಸ್ಥಳ-ಎಂತ ಒಂದು ನಾಲ್ಕು ಮಾತಾಡಬೇಕು. ಅದರಲ್ಲಿ ತಕರಾರು ಬಂದರೆ, ಗಂಡಿನ ಕಡೆಯವರಿಂದ ಅದು ಬರಬೇಕು.

ಹೆಣ್ಣಿನ ಕಡೆಯವರಿಗೆ ಮದುವೆಯಾದರೆ ಸಾಕು ಎಂತ ಇರುತ್ತದೆ. ಚಿನ್ನ ಎಷ್ಟು, ದಾರಿ ಖರ್ಚಿಗೆ ಎಷ್ಟು, ಬಿಡಾರ ಎಲ್ಲಿ- ಅಂತ ನಾವು ಹೇಳಬೇಕು. ನನಗೆ ಅಂಥ ಯಾವ ಆಡಂಬರವೂ ಇಲ್ಲ. ಮದುವೆ ಕಳೆದ ಮೇಲೆಯೂ ನಂಟರು, ಬೀಗರು, ಪರಸ್ಪರ ಮಾತನಾಡುವ ಸ್ಥಿತಿ ಉಳಿಯಬೇಕು- ಎನ್ನುವವನು ನಾನು. ಹೆಣ್ಣಿನ ಸುಖ, ದುಃಖ ಬೇರೆ, ಗಂಡಿನವು ಬೇರೆ ಎನ್ನುವವ ನಾನಲ್ಲ. ಹಾಗಿರುತ್ತ, ಶಿವಮೊಗ್ಗೆಗೆ ನಾನೇ ಹೋಗಬೇಕು ಯಾಕೆ? ನೀನೇ ಹೋಗಿ ಮಾಡು ಅಷ್ಟು ಕೆಲಸ" ಎಂದೆ.

ನನ್ನ ಸೀತೆ ಆಗ ನಾರಾಯಣನ ಪಾರ್ಟಿಯನ್ನು ಸೇರಿಕೊಂಡು "ನೀವು ಮನೆಯ ಯಜಮಾನರಾಗಿರುವುದು ಯಾತಕ್ಕೆ?" ಎಂದಳು.

"ಅದನ್ನೂ ಅವನೇ ವಹಿಸಿಕೊಳ್ಳಲಿ" ಎಂದೆ ನಾನು.

"ಅಂದರೆ! ನೀವು ಇನ್ನೊಂದು ಮದುವೆ ಮಾಡಿಕೊಳ್ಳುತ್ತೀರಿ ಅಂತಲೋ" ಎಂದಳು. ಆಗ ನನಗೆ ಕಾಣಿಸಿತು- ನನ್ನ ಸೀತೆ ಪಾತಾಳ ಸೂಜಿ- ಎಂದು.

"ಆಯಿತು ಮಹಾರಾಯಿತಿ; ನಿನ್ನ ಹುಕುಮು ಹೇಗೋ, ಹಾಗೆ ನಡೆಯುತ್ತೇನೆ ಆಯಿತೇ" ಎಂದೆ.

"ಚಿನ್ನ ಗಿನ್ನ ನಾವು ಮಾಡಿಸುವುದೆಷ್ಟು? ಅವರು ಮಾಡಿಸುವುದೆಷ್ಟು? ಅದಕ್ಕಿಂತಲೂ ಹೆಚ್ಚಾಗಿ, ನಾರಾಯಣನ ಖಾಯಿಸು ಸಣ್ಣವಳ ಮೇಲೆ. ಹಿರಿಯವಳು ಅವನಿಗೆ ತುಂಬ ದೊಡ್ಡದಾದಳಂತೆ. ಅವಳಿಗೆ ಲಗ್ನವಾಗುವ ತನಕ ಕಾಯಬೇಕೇ ಹೇಗೆ?"

"ಅಂದರೆ- ನಿನ್ನೆ ಜನಾರ್ದನನನ್ನು ಕಂಡುಬಂದರಲ್ಲ; ಏನಾಯಿತು?"

"ಅವನನ್ನು ಹೋಗಿ ಮಾತನಾಡಿಸಿದರು. ಅದಕ್ಕೆ ಅವನು 'ನಮ್ಮ ಅಪ್ಪ ಹೇಳಿದ ಹಾಗೆ' ಎಂದನಂತೆ. ಅನಂತರಾಯರು ಧೈರ್ಯ ತೆಗೆದುಕೊಂಡು ಅವನ ಅಪ್ಪನನ್ನೂ ಮಾತನಾಡಿಸಿದರಂತೆ. ಅದಕ್ಕವರು 'ಅವನ ಸುದ್ದಿಯನ್ನು ನನ್ನ ಹತ್ತಿರ ಹೇಳಬೇಡಿ! ಇವು ಈಗಿನ ಕಾಲದ ಮಕ್ಕಳು! ನಮ್ಮ ಮಾತು ಕೇಳುವವರಲ್ಲ. ಕೇಳುವುದಾಗಿದ್ದರೆ ಆರು ವರ್ಷಗಳ ಹಿಂದೆಯೇ ಲಗ್ನವಾಗುತ್ತಿತ್ತು' ಎಂದರಂತೆ. ಅನಂತರಾಯರು ಹುಡುಗಿಯನ್ನು ಜನಾರ್ದನ ಕಂಡು ಬಂದ ವಿಚಾರ ಹೇಳಿದರಂತೆ. ಅದಕ್ಕವರು 'ಮಹಾರಾಯರೇ, ನನ್ನ ಹತ್ತಿರ ಹೇಳಬೇಡಿ ಆ ಯಾವ ಸುದ್ದಿಯನ್ನೂ. ಅವನಾಗಿಯೇ ನನಗೆ ಲಗ್ನ ಮಾಡಿಸು- ಅನ್ನುವ ತನಕ, ಯಾವ ಪಂಚಾಯಿತಿಯಲ್ಲೂ ನಾನಿಲ್ಲ' ಎಂದರಂತೆ."

"ಇನ್ನು, ನಿಮ್ಮ ಮೂಲಕ ಅವನನ್ನು ಮಾತನಾಡಿಸುವ- ಎಂದು ಯೋಚಿಸಿ, ಕತ್ತಲಾಗುವಾಗ ಮನೆಗೆ ಬಂದರು. ನಾರಾಯಣ ಅದನ್ನೆಲ್ಲ ನನಗೆ ಹೇಳಿದ. ನಾನು ಯೋಚಿಸಿ 'ನಿನ್ನ ವಿಷಯದಲ್ಲಿ ನೀನು ಅವರಿಗೆ ಧೈರ್ಯ ಕೊಡು. ಜನಾರ್ದನನ ವಿಷಯ ನಾವು

ಮುಟ್ಟುವುದೇ ಒಳ್ಳೆಯದಲ್ಲ. ಅವನ ಕತೆಯನ್ನು ಒಬ್ಬೊಬ್ಬರು ಒಂದೊಂದು ಹೇಳುತ್ತಾರೆ. ಕೇಳಲಿಕ್ಕೆ ಪಸಂದದ ಸುದ್ದಿಯಲ್ಲ; ಅದನ್ನು ಮರೆತು ಬಿಡುವುದೊಳ್ಳೆಯದು; ಬಿಡುವುದೆಂದರೆ- ಅವನ ಯೋಚನೆಯನ್ನೇ ಬಿಡುವುದು."

"ಈಗ ಅಲ್ಲಿಗೆ ಬಂದು ಮುಟ್ಟಿದೆ. ಅನಂತರಾಯರ ಮನಸ್ಸಿನಲ್ಲಿ- ಎರಡೂ ಆಗಬೇಕೆಂಬ ಹಠವಿದ್ದರೆ ಆಗ ಎರಡೂ ಕೈತಪ್ಪಬಹುದು- ಎಂಬ ಹೆದರಿಕೆಯೂ ಬಂದಿರಬಹುದು. ಅವರು ಏನಾದರೂ ನಿಮ್ಮನ್ನು ಕೇಳಿದರೆ, 'ನಿಮ್ಮದ್ದೊಂದನ್ನು ಮುಗಿಸಿಬಿಡಿ' ಎಂದು ಕೇಳಿದರೆ 'ಕೂಡದು' ಅನ್ನಬೇಡಿ; ದಿನ ತಳ್ಳಬೇಡಿ. ನಾರಾಯಣನಿಗೂ ಮದುವೆ ಆಗುವುದಾದರೆ ಈ ವರ್ಷವೇ ಆಗಬೇಕೆಂದಿದೆ" ಎಂದಳು.

"ಈ ವರ್ಷ ಅಂದರೆ? ಇದು ವೈಶಾಖ ಮಾಸ."

"ವೈಶಾಖ ಮಾಸದಲ್ಲಿ ಮದುವೆಯಾಗುವುದಿಲ್ಲವೇ?"

"ಅಲ್ಲ, ಮುಂದೆ ಮಳೆಗಾಲ; ಜ್ಯೇಷ್ಠ ಬಂದರೆ ಆಗುವುದಿಲ್ಲ. ಈ ತಿಂಗಳು ವಾಸಿ. ತಿಂಗಳಿಗಿರುವುದು ಮೂವತ್ತು ದಿನವಷ್ಟೆ; ಅದರಲ್ಲಿ ಹತ್ತು ದಿನ ಹೊರಟು ಹೋಯಿತು. ಹೋಗಿ ಬರುವುದು, ನಿಶ್ಚಯ ಮಾಡುವುದು, ಚಿನ್ನಗಿನ್ನ, ಮದುವೆಯ ತಯಾರಿ- ಇಷ್ಟಕ್ಕೆಲ್ಲ ದಿನ ಬೇಡವೇ?"

"ಮನಸ್ಸಿದ್ದರೆ ಮೂರು ದಿನಗಳಲ್ಲಿ ಆಗುತ್ತದೆ, ಮದುವೆ."

"ಹಾಗಿದ್ದರೆ, ನೀನು ಒಂದಿಷ್ಟು ಹೆಚ್ಚಿಗೆ ಮನಸ್ಸು ಮಾಡಿ ಒಂದೇ ದಿನದಲ್ಲಿ ಮುಗಿಸಿ ಬಿಡು. ಅವರು ಬರುವಾಗ ಹೆಣ್ಣನ್ನು ಕರೆದುತಂದಿಲ್ಲ. ಕರೆದು ತಂದಿದ್ದರೆ ಸಾಯಂಕಾಲದೊಳಗೆ ದಿಬ್ಬಣ ಹೊರಟುಹೋಗಿಯೂ ಆಗುತ್ತಿತ್ತು."

"ಮನಸ್ಸಿದ್ದರೆ ಅದು ಕೂಡಾ ಸಾಧ್ಯವೇ" ಎಂದಳು ಅವಳು. ಅವಳ ಪರಾಕ್ರಮವನ್ನು ನಾನು ಮೆಚ್ಚಲೇಬೇಕಾಯಿತು. ಸೀತೆ ರಾಗವಾಗಿ, ಎಲ್ಲವೂ ನಿಶ್ಚಯವಾಗಿಯೇ ಹೋದಂತೆ ಎಂದು ಎಣಿಸಿ "ನಾವೂ ಒಂದಿಷ್ಟು ಚಿನ್ನ ಮಾಡಿಸಬೇಡವೇ? ಎಂದು ಮಾಡಿಸುವುದು?" ಎಂದು ಕೇಳಿದಳು.

"ಅದನ್ನೆಲ್ಲ ನಿಂತ ಮೆಟ್ಟಿಗೆ ಮಾಡಲು ಬರುವುದಿಲ್ಲ. ನೀನು ಮಾಡೀಯ ಒಂದೇ ದಿನದಲ್ಲಿ."

ನಕ್ಕಳು ಅವಳು! "ಮದುವೆಗೆ ಒಂದು ದಿವಸ ಸಾಕು ಎಂದದ್ದು ನಾನು. ಚಿನ್ನ, ಗಿನ್ನ ಹಪ್ಪಳ ಸಂಡಿಗೆ ತಯಾರಿ ದೊಡ್ಡ ಕೆಲಸ ಎನ್ನುವುದು ನಿನ್ನ ಅಭಿಪ್ರಾಯ" ಎಂದಂದು ಸುಮ್ಮನಾದೆ.

ಆದರೊಂದು ಸಂಗತಿ ಇದೆ-ನನ್ನ ಸೀತೆ ಸಿಟ್ಟಿನಿಂದಾಗಲೀ, ಕೊಂಕಿನಿಂದಾಗಲೀ ತನ್ನ ಇಚ್ಛೆಯನ್ನು ಸಾಧಿಸುವವಳೇ. ಇಲ್ಲಿ ನಾರಾಯಣನ ಮದುವೆ ವಿಚಾರದಲ್ಲಿ ಭಿನ್ನಾಭಿಪ್ರಾಯವಿಲ್ಲ. ಅವನಿಗೆ ಎಷ್ಟು ಆತುರವಿದೆಯೋ ದಿಬ್ಬಣದ ಯಜಮಾನಿಯಾಗಿ ಮೆರೆಯಲು ಅವಳಿಗೂ ಅಷ್ಟೇ ಆತುರ. ನನ್ನಲ್ಲಿ ಅಂಥ ಆತುರವಿಲ್ಲ. ನನ್ನ ತಲೆಯಲ್ಲಿ-ಗುಹೆ ಸಂಶೋಧಿಸಿ, ಅಜ್ಜಿಯೊಡನೆ ಅನುಸಂಧಾನ ನಡೆಯಿಸಿ, ನಾನು ಸಂಗ್ರಹಿಸಿ ತಂದದ್ದನ್ನು ಪ್ರಾಚ್ಯಪಂಡಿತರಿಗೆ ತೋರಿಸಿ, ಒಂದೆರಡು ಲೇಖನಗಳನ್ನು ಗೀಚಿ, ನನ್ನ ಹೆಸರಿನಲ್ಲಿ ಅಚ್ಚಾದುದನ್ನು ಕಾಣಬೇಕು- ಎಂಬ ನನ್ನ ಚಪಲಕ್ಕೆ ಇವೆಲ್ಲವೂ ಅಡಚಣೆಯೇ. ಮುಂದಿನ ಎರಡು ದಿವಸಗಳಲ್ಲಿ ನಾನು ತಮ್ಮನ ವಕಾಲತನ್ನು ವಹಿಸಿ ಶಿವಮೊಗ್ಗೆಗೆ ಹೋಗಲೇ ಬೇಕೆಂದಾಯಿತು. 'ಒಟ್ಟಿಗೆ ಹೋಗುವ; ನಾಳೆ ಹಗಲೂರಿಗೆ ಹೋಗಿ ಬರುವ' ಎಂದು ಅನಂತರಾಯರನ್ನು ಪುಸಲಾಯಿಸಿದೆ. ಅವರು ನನಗಿಂತಲೂ ಒಂದು ದಿನಕ್ಕೆ ಮೊದಲು ತಮ್ಮ ಊರನ್ನು ಸೇರಿ, ಮನೆಯವರನ್ನು ತರಬೇತಿ ಮಾಡುವ ಆಸೆ ತೊಟ್ಟರು. ಮರುದಿನವೇ ನನ್ನ ತಮ್ಮ ಅವರನ್ನು ಗಂಗೊಳ್ಳಿ ಹೊಳೆ ದಾಟಿಸಿ, ಮೋಟರನ್ನು ಹತ್ತಿಸಿ, ಊರಿಗೆ ಹಿಂದಿರುಗಿದ.

ನಮ್ಮ ಊರು ಘಟ್ಟದ ಬರೆಗೆ ಬಲು ಸಮೀಪವಾದದ್ದು. ಜ್ಯೇಷ್ಠ ಮಾಸ ಬರುವ ಮೊದಲೇ ನಾಲ್ಕಾರು ಜಡಿಮಳೆಗಳು ಬಡಿಯುವ ಸಂಭವವಿದೆ. ಹಾಗಾಗಿ, ನಾನು ಉದಾಸೀನ ಮಾಡಿದರೆ ಪ್ರಯೋಜನವಿಲ್ಲ. ಚಿನ್ನಾಭರಣ ಮಾಡಿಸುವ ಪ್ರಸಂಗವೂ ಇಲ್ಲ. ನಮ್ಮೂರಲ್ಲಿ ಕಮ್ಮಾರರಿದ್ದರಲ್ಲವೆ ಅಕ್ಕಸಾಲಿಗಳಿರುವುದು! ಬೇಗನೆ ಕುಂದಾಪುರಕ್ಕೆ ಹೋಗಿ, ಯಾರಾದರೂ ಸರಾಫರಿಂದ ಅವರು ಕೊಟ್ಟದ್ದನ್ನು ಚಿನ್ನವೆಂದು ನಂಬಿ ತರುವುದೇ ಸುಲಭವೆಂದು ತೀರ್ಮಾನಿಸಿದೆ. ಜವುಳಿ ಬೇಕಾದರೂ, ಬೇಕಾದರೂ ಅಂದರೇನು, ಬೇಕಾಗಿಯೇ ಆಗುತ್ತದೆ, ಕುಂದಾಪುರಕ್ಕೆ ಹೋದರಾಯಿತು. ಅದಕ್ಕೊಂದು ಎರಡು ದಿನ ಬಿಡುವು ಬೇಕು. ಶಿವದೊಗ್ಗೆಯಿಂದ ಮರಳಿ ಬಂದ ಬಳಿಕ ಅಷ್ಟು ಕೆಲಸ ಮಾಡಿದರೆ ಸಾಕು.

ಸದ್ಯಕ್ಕೆ ನನ್ನ ತಮ್ಮ ಅನಂತರಾಯರನ್ನು ಬಿಟ್ಟು ಬರಲು ಹೋದ ಸುಮೂರ್ತವನ್ನು ಹುಡುಕಿ, ನನ್ನ ಸಂಶೋಧನೆಗಳನ್ನು ಮುಂದುವರಿಸುವ ಚಪಲ. ಅದಕ್ಕೂ ನೂರೆಂಟು ವಿಘ್ನಗಳು. ವಿಘ್ನ ಮತ್ತೇನಲ್ಲ- ನನ್ನ ಸೀತೆಗೆ ಲಗ್ನ ನಿಶ್ಚಯವಾದ ಹಾಗೆಯೇ ಇದೆ ಈಗ. ಒಮ್ಮೆ ಕರೆದಳು: "ಬನ್ನಿ, ಹೆಣ್ಣಿನವರ ದಿಬ್ಬಣವೂ ಇಲ್ಲಿಗೆ ಬರುವುದುಂಟಲ್ಲ. ಆರತಿ, ಅಕ್ಷತೆಗೆ ಸಮನಾದ ಒಂದು ಚಪ್ಪರ ಹಾಕಿಸಬೇಡವೆ?" ಎಂದಳು ಒಮ್ಮೆ. ಇನ್ನೊಮ್ಮೆ "ನನ್ನ ಚಿನ್ನಕ್ಕೆ ಕೊಳೆ ಹಿಡಿದು ಮೂಸಿ ನೋಡಲಿಕ್ಕೆ ಬರುವುದಿಲ್ಲ. ಅದನ್ನು ಅಕ್ಕಸಾಲಿಯ ಕೈಯಲ್ಲಿ ಕೊಟ್ಟು, ತೊಳೆಯಿಸಿ, ಒಪ್ಪ ಹಾಕಿಸಬೇಡವೇ?" ಎಂದಳು. ಮತ್ತೊಮ್ಮೆ 'ಸಂಡಿಗೆ

ಮಾಡಲಿಕ್ಕೆ ಉದ್ದು ಸಾಲದಲ್ಲ' ಎಂದಳು. ಮಗದೊಮ್ಮೆ ಇನ್ನೇನೋ ಹಾಲಾಹವಾಲೆ ಹೇಳಿದಳು. ಗಳಿಗೆಗೆ ಆರಾರು ನೆನಪು; ಎಂಟೆಂಟು ಸಾರಿ ಕರೆಯುವುದು, 'ಇಕೊಳ್ಳಿ' ಎನ್ನುವುದು. ನಾನೂ ಒಮ್ಮೆ 'ಇಕೊಳ್ಳಿ ಅಲ್ಲ; ಸೌದೆಕೊಳ್ಳಿ' ಎಂದು ತಾಳ್ಮೆಗೆಟ್ಟು ನುಡಿದ್ದದುಂಟು. ನನಗೆ ಒಂದಿಷ್ಟಾದರೂ ಬಿಡುವು ಬೇಡವೇನು? ಸಂಜೆ, ನಾರಾಯಣ ಹಿಂತಿರುಗಿ ಬರುವುದರೊಳಗೆ ಅಜ್ಜಿಯನ್ನು ಮಾತನಾಡಿಸಬೇಕು. ಅದಕ್ಕೆ ಉಚಿತ ಸ್ಥಳ ಅಶ್ವತ್ಥದ ಕಟ್ಟೆ. ಅಲ್ಲಿಗೆ ಗ್ರಹಚಾರ ಹಿಡಿದು ಜಗದಂಬಾ ವಿಲಾಸದ ಮಂಜುನಾಥ ಹುಡುಕಿ ಬಂದರೂ ಕಷ್ಟವೇ. ಜನಾರ್ದನ ಬರಲಾರ- ಎಂದು ಒಳಮನಸ್ಸು ಹೇಳುತ್ತದೆ. ಅನಂತರಾಯರು ಅವರ ಮನೆಗೆ ಹೋಗಿ, ಅಷ್ಟೊಂದು ಉಪಕಾರ ಮಾಡಿ ಬಂದಿದ್ದಾರೆ. ನನ್ನವಳ ಪೀಡೆಯನ್ನು ನಿವಾರಿಸಿಕೊಳ್ಳುವುದಕ್ಕೆ 'ಸೀತೆ, ಇವತ್ತು ಮಂಗಳವಾರ, ಮದುವೆಯ ಒಂದೇ ಒಂದು ಸುದ್ದಿ ಬೇಡ. ನಾಳೆ ಒಳ್ಳೆಯ ದಿವಸ. ನಿನ್ನದೇನಿದ್ದರೂ ಪಟಪಟ ಅಂತ ನಾಳೆ ತೋಡಿಕೊಂಡು ಬಿಡು. ಇವತ್ತು, ತೋಟದ ನೀರಿಗೆ ಹೋಗುವುದರೊಳಗೆ ಹದಿನಾರು ಸಾರಿ ಕರೆದಿದ್ದೀಯಾ' ಎಂದು ತಾಕೀತು ಮಾಡಿದೆ.

ನಾನು ವಾರದ ನೆನಪು ಮಾಡಿದ್ದಕ್ಕೋ ಏನೋ, ಆ ಪುಣ್ಯಾತ್ಮಗಿತ್ತಿಗೆ ತೀರ ನಾಚಿಕೆಯಾಯಿತು. ಅದನ್ನು ಕಂಡು ನನಗನಿಸಿತು- ನಾನೂ ಒಂದಿಷ್ಟು ಪಂಚಾಂಗವನ್ನು ಓದಿಕೊಂಡು- ತಿಥಿ, ವಾರ, ನಕ್ಷತ್ರ, ರಾಹುಕಾಲ, ಗುಳಿಕ ಕಾಲ ಇವನ್ನೆಲ್ಲ ಕಲಿತುಕೊಂಡು, ನನ್ನ ಬತ್ತಳಿಕೆಯಲ್ಲಿರಿಸಿಕೊಂಡಲ್ಲಿ ಸೀತೆಯ ಕಾಟ ತಪ್ಪಿಸಲಿಕ್ಕೆ ಬಲವಾದ ಅಸ್ತ್ರವಾಗುತ್ತಿತ್ತು- ಎಂಬುದಾಗಿ ನಿರ್ಣಯಿಸಿ, ಊಟ ಮಾಡಿ, ಮಲಗಿಕೊಂಡೆ.

ಮಧ್ಯಾಹ್ನ ನಮ್ಮ ಅಜ್ಜಿ ಎದ್ದು, ಆವಳಿಕೆ ತೆಗೆದು, ಬಿಸಿಲು ಇಳಿದದ್ದನ್ನು ಕಂಡು, ಚಾವಡಿಯಿಂದ ಇಳಿದು ಕಟ್ಟೆಗೆ ಹೋದದ್ದನ್ನು ನೋಡಿ, ಹಟ್ಟಿಯ ಹಿಂದೆ ಧಾವಿಸಿದೆ. ಒಂದು ಮುಂಗುಸಿ ಕಣ್ಣೆದುರಿಗೇ ಓಡಿ ಹೋಯಿತು. ಮುಂಗುಸಿ ಕಂಡರೆ ಲಕ್ಷಣವೇ, ಅವಲಕ್ಷಣವೇ- ಎಂಬ ವಿಚಾರ ಮೂಡಿತು. 'ಛೀ, ಇದು ಯಾಕೆ ನನ್ನ ತಲೆಗೆ ಬಂತು?' ಎಂದುಕೊಂಡು, ಹಟ್ಟಿಯ ಗೋಡೆಯ ಮೇಲಕ್ಕೆ ಅಡಗಿಸಿಟ್ಟ ಚೂರುಪಾರುಗಳನ್ನೆತ್ತಿಕೊಂಡು ಹೊರಟೆ. ಎಲುಬಿನ ತುಂಡನ್ನು ಮುಟ್ಟಲು ಇನ್ನೂ ಧೈರ್ಯ ಬರಲಿಲ್ಲ.

ಅಜ್ಜಿ ಯಥಾ ಕ್ರಮದಂತೆ ಪ್ರಸನ್ನವದನರಾಗಿಯೇ ಅಲ್ಲಿ ಕುಳಿತಿದ್ದರು. "ಹೂಂ, ಏನು ಕೊಡುವುದಿದೆ ಕೊಡು" ಎಂದು ಅವರಾಗಿಯೇ ಹೇಳಿದರು. ಮೆಲ್ಲಗೆ ಅವನ್ನೆಲ್ಲ ಅವರ ಕೈಗೆ ಕೊಟ್ಟು, ಅವರ ಬಳಿಯಲ್ಲಿ ಗಲ್ಲಕ್ಕೆ ಕೈಕೊಟ್ಟು ಕುಳಿತೆ; ಅವರ ಬಾಯಿಯಿಂದ ಏನೇನು ಬರುತ್ತದೆ- ಎಂಬ ನಿರೀಕ್ಷೆಯಿಂದ. ತುಸು ಹೊತ್ತಿನಲ್ಲಿ ಅವರೆಂದರು-

"ಇದು ಮಾಣಿ, ಸರ; ಚಿಪ್ಪಿನ ಸರ. ಬೇರೆಯೇನೋ ಚೂರು, ಪಾರು ಇದೆ. ಎಲುಬೋ? ಏನು ಮಣ್ಣೋ! ಆದರೆ ಇವು ಸರದ ತುಂಡುಗಳು ಎಂಬುದು ಖಂಡಿತ.

ಬಡವೆ ಎಂದು ಕಾಣುತ್ತದೆ; ಚಿಪ್ಪಿನ ಸರ ಹಾಕದೆ ಏನು ಮಾಡಿಯಾಳು? ಒಂದು ಲಂಗೋಟಿ ಇಳಿಯಬಿಟ್ಟು, ಸರ ತೊಟ್ಟು, ನಿಂತದ್ದನ್ನು ಕಂಡರೆ-ಜವಂತಿ-ಎಂಬುದು ಗೊತ್ತಾಗುತ್ತದೆ. ಚಂದದ ಜೀವ; ಬೆಳ್ಳಗಲ್ಲ; ಹತ್ತಿರವಿರುವ ಗಂಡಿಸಿನಷ್ಟು ಕಪ್ಪೂ ಅಲ್ಲ. ಇಬ್ಬರಿದ್ದಾರೆ, ಒಬ್ಬನು ಗಂಡ; ಇನ್ನೊಬ್ಬ ತಮ್ಮನ್ನೋ ಏನೋ. ಹೋ, ಮೊನ್ನೆ ಕಂಡವರು ಇವರು! ಬಿಲ್ಲು ಬಾಣಗಳ ಜನ. ಆದರೆ ಇವಳು ಮಾತ್ರ ಅವರ ಕೂಡುಕಟ್ಟಿನವಳಾಗಿ ಕಾಣಿಸುವುದಿಲ್ಲ. ತುಂಬ ದೂರದವಳು. ಅಯ್ಯೋ ಮಾಣಿ, ಇವಳನ್ನು ಬಾಯಿಕಟ್ಟಿ ಎಲ್ಲಿಂದಲೋ ಹೊತ್ತುಕೊಂಡು ಬಂದದ್ದು. ಮಗು, ಹೊಡೆತ, ಬಡಿತ ಎಲ್ಲವೂ ನಡೆದಿರಬೇಕು ಈ ಹೆಣ್ಣನ್ನು ತರುವುದಕ್ಕೆ. ಅವಳನ್ನು ತಂದ ಮೇಲೆ ಮಾತ್ರ, ಈ ಗಂಡ ಎಂಬವ ಅವಳಿಗೆ ಮರುಳೇ ಆದ ಹಾಗೆ ಕಾಣಿಸುತ್ತದೆ. ಚಂದವಾಗಿ ನೋಡಿಕೊಂಡಿದ್ದಾನೆ. ಇವಳು ಮಾತ್ರ ಪಂಜರದಲ್ಲಿ ಸಿಕ್ಕಿಬಿದ್ದ ಗಿಳಿಯ ಹಾಗೆ, ತನ್ನ ಅಪ್ಪ, ಅಜ್ಜಿಯನ್ನು ಬಿಟ್ಟು ಬಂದುದಕ್ಕೆ ಎಷ್ಟು ಮರಕಿದಳೋ ಏನೋ."

"ಯಾಕೆ ಹಾಗಾಯಿತು? ಕಾಣಿಸುತ್ತದಲ್ಲ- ಒಂದು ಹೊಳೆಯ ಬುಡ ನೋಡು. ಅದರ ಬುಡದಲ್ಲಿ ಈ ಪ್ರಾಯದ ಹುಡುಗಿ, ಏಡಿಗಳನ್ನೋ ಮಳಿ ಚಿಪ್ಪನ್ನೋ ಹುಡುಕುವ ಹಾಗಿದೆ. ಒಬ್ಬಳೇ ಒಬ್ಬಳು! ನೀರಿಗಿಳಿದು ಮೀಯಲಿಕ್ಕೆ ತೊಡಗಿದಳು. ಅಲ್ಲೇ ನಾಲ್ಕು ಮಾರು ದೂರದಿಂದ ಯಾರೋ ಕಿಸಕ್ಕನೆ ನಕ್ಕರು. ಗಾಬರಿಯಾಗಿ ಅಲ್ಲಿಂದಲೇ ಆಚೆ, ಈಚೆ, ಕಂಡಳು; ಸ್ವರ ಅಡಗಿತು. 'ಏನೂ ಇದ್ದಿರಲಾರದು' ಎಂದು ನೆನೆದು, ನೀರನ್ನು ಬಾಯಿಗೆ ಹಾಕಿ, ಚರ್ರನೆ ಉಗುಳುತ್ತ ಕುಳಿತಳು. ಅಷ್ಟಕ್ಕೆ ಕದ್ದು ಹೆಜ್ಜೆ ಇಡುತ್ತ ಬಿಲ್ಲುಗಾರನೊಬ್ಬ ಬಂದನೇ. ಬಂದ; ನೋಡಿದ. ಅವನಿಗೂ ಪ್ರಾಯವೇ. ಕಂಡು ಬೆಪ್ಪಾಗಿ ಅಲ್ಲೇ ನಿಂತ. ಅವನನ್ನು ಕಂಡದ್ದೇ ತಡ-ಓಡಿದಳೇ ಇವಳು!"

"ಓಡಿದ್ದೇನೋ ನಿಜ, ಮದುವೆಯಾಗದ ಹೆಣ್ಣು; ಗಂಡನ್ನು ಕಾಣದ್ದು, ಕಾಣುವ ಹಂಬಲವಾಯಿತು- ಎಂತ ಕಾಣುತ್ತದೆ. ನಿಂತಳು, ಹಿಂತಿರುಗಿ ನೋಡಿದಳು. ಹಿಂಬಾಲಿಸಿ ಬಂದಿದ್ದ ಅವನೂ ನಿಂತನೇ. ಇವಳೂ ಕಂಡಳು; ಕಣ್ಣು, ಕಣ್ಣು ಬಿಟ್ಟಳು. ಅವನೂ ಕಂಡ-ಕಣ್ಣು, ಕಣ್ಣು ಬಿಟ್ಟ. ಅವಳು ಹೊರಟುಹೋದಳು ತನ್ನ ಮನೆಗೆ; ಇವನು ಹಿಂದಕ್ಕೆ ಬಂದ. ಎಷ್ಟೋ ದೂರದಲ್ಲಿ ಇವನ ಮನೆ. ಮೂರು, ನಾಲ್ಕು ಹರದಾರಿ ಇದ್ದೀತು. ಊರಿಗೆ ಹೋಗಿ ನಾಲ್ಕು ಗೆಳೆಯರನ್ನು ಕೂಡಿಸಿ ಯೋಚನೆ ಮಾಡಿದ ಅಂತ ಕಾಣುತ್ತದೆ. 'ಬೇಡ' ಎಂದರು ಒಬ್ಬಿಬ್ಬರು; 'ಅವರಿಗೂ ನಮಗೂ ಹುಟ್ಟು ಹಗೆ' ಎಂದೂ ಅಂದರು.

"ನನಗೆ ಕಾಣಿಸುತ್ತಾ ಇದೆ-ಅವುಗಳ ಹತ್ತೆಂಟು ಬಿಡಾರಗಳಿವೆ. ಒಟ್ಟುಗೂಡಿ ಒಂದು ಐವತ್ತು ಮಂದಿ ಇರಬಹುದು. ಅವುಗಳಲ್ಲಿ ಐವತ್ತು ಮಂದಿಗೆ ಹತ್ತು ಹೆಣ್ಣು ಸಹ ಇದ್ದಿರಲಾರದು. ಮತ್ತೇನು ಮಾಡುತ್ತಾರೆ? ಬಹುಶಃ ಅದೇ ಹೊಳೆಯ ಬುಡಕ್ಕೆ ಹೋಗಿ ಅವಳು ಮೀಯುವ ಸಮಯವನ್ನು ಕಾದು, ನೋಡಿ, ಹೊಂಚು ಹಾಕಿದರು. ಅವಳೂ

ಬಂದಳು. ಕಂಡಳು; ಚೀರಿದಳು. ಆದರೆ ಓಡಲಿಲ್ಲ, ಮಾಡಲಿಲ್ಲ. ಇವರು ಅವಳನ್ನು ಕಟ್ಟಿ, ತಮ್ಮ ಊರಿಗೆ ಹೊತ್ತುಕೊಂಡು ಬಂದರೇ."

"ಅವಳ ಅಪ್ಪ, ಅಮ್ಮ ಕೂಡುಕಟ್ಟಿನವರು ಎಲ್ಲರೂ ಸೇರಿ ಗದ್ದಲ, ಗಿದ್ದಲ ಮಾಡಿದರು. ಊರಲ್ಲೆಲ್ಲ ಹುಡುಕಾಡಿದರು. ವಾಸನೆ ಗೊತ್ತಿದ್ದ ನಾಯಿಯ ಹಾಗೆ ಕೋಲು, ಕತ್ತಿ, ಬಾಣ, ಬಿಲ್ಲುಗಳನ್ನು ಹಿಡಿದುಕೊಂಡು ಘಟ್ಟದ ಬರೆಗೆ ಹೋದರು. ಹಿಡಿದುಕೊಂಡು ಬಂದವರು ಇದ್ದುದು ಅಲ್ಲಿ. ಅವರೆಲ್ಲರೂ ಕಪ್ಪು ಬಣ್ಣದ ಜನ. ಹೆಣ್ಣನ್ನು ಕಳೆದುಕೊಂಡ ಆ ಮಂದಿ ಎಣ್ಣೆಗಪ್ಪಿನವು. ಎರಡೂ ಕಡೆಯಿಂದ ಆರ್ಭಟೆ ತೊಡಗಿತೇ. ಅವರ ಆರ್ಭಟೆ ಕೇಳಿದರೆ ಮಾತ್ರ ಆ ಕ್ಷಣಕ್ಕೆ ನೂರಾರು ತಲೆಗಳು ಅಲ್ಲಿಯೇ ಕತ್ತರಿಸಿ ಬೀಳುತ್ತವೆ-ಅನಿಸಬೇಕು. ಪುಣ್ಯಕ್ಕೆ ಹಾಗೇನೂ ಆಗಲಿಲ್ಲ. ನೋಡು, ಅವರ ಎಣ್ಣೆಗಪ್ಪು ಯಜಮಾನನೂ, ಇವರ ಹೆಣ್ಣು ಹೊತ್ತು ತಂದ ಹುಡುಗನೂ ಇಬ್ಬರೇ ಉರುಡಾಡಿಕೊಂಡರು. ಎಷ್ಟು ನಿಜವೋ ಎಷ್ಟು ಸುಳ್ಳೋ! ಅವನು ಸೋತನು ಅಂತ ಲೆಕ್ಕ; ಇವನು ಗೆದ್ದ- ಅಂತ ಲೆಕ್ಕ. ಆಮೇಲೆ ಯುದ್ಧ ಮುಗಿದು ಅವರೆಲ್ಲ ರಾಜಿಯಾಯಿತು ಅಂತ ಲೆಕ್ಕ. ಹಾಗಾಗಿ, ಹೊತ್ತುಕೊಂಡು ಹೋದ ಹೆಣ್ಣು ಅವರಿಗೆ ದಕ್ಕಿದ ಹಾಗೆಯೇ ಆಯಿತು. ಇಂತಹ ಒಂದು ಕತೆಯುಂಟೆ? ಶಾಸ್ತ್ರದಲ್ಲಿ ರಾಕ್ಷಸ ವಿವಾಹ ಅಂತ ಹೇಳುತ್ತಾರೆ. ಅದೂ ಹೀಗೆಯೇ ಇತ್ತೋ ಏನೋ."

"ಇರಬೇಕಜ್ಜಿ."

"ಅವಳಿಗೆ ಮಕ್ಕಳು ಮರಿ ಆದುವು- ಅಂತ ಕಾಣುತ್ತದೆ. ಆಮೇಲೆಯೇ ಅವಳು ಸ್ವಲ್ಪ ಗೆಲವಾದದ್ದು. ಆ ಗಂಡನು ಬೇಡ ಅಂತ ಕಾಣಿಸಿಕೊಂಡ ದಿನವಿಲ್ಲ. ಆದರೂ, ಯಾಕೋ ಬೇಸರ. ಪ್ರಾಯಶಃ ಅಬ್ಬೆಯ ಕುಲಕ್ಕೆ ತಾನು ಹಿಂತಿರುಗುವಂತಿಲ್ಲ- ಎಂಬುದರಿಂದಲೋ ಏನೋ."

"ಏನೋ!"

"ಹೌದು ಪುಟ್ಟು, ಅದು ಹಾಗೆಯೇ ಇರಬೇಕು. ಅವರೆಲ್ಲರೂ ಕೋಣನ ಬಳಿಯವು."

"ಅಂದರೆ?"

"ಅವು ದಂಡೆತ್ತಿ ಬಂದುವಲ್ಲ, ಬಂದದ್ದು ಸಿಟ್ಟಿನಿಂದಲೇ. ತಮ್ಮ ದೈವದ ಗುಡಿಯ ಮುಂದೆ ಕುಣಿದು, ಕೂಗಿ, ಡೊಗ್ಗಾಲು ಹಾಕುವುದು ಕಾಣಿಸುತ್ತದೆ. ಅವರ ಪುರೋಹಿತನಾದವ ಒಂದು ಕೋಣನ ಮುಖವಾಡ ಇರಿಸಿಕೊಂಡು ಕುಣಿಯುತ್ತಿದ್ದಾನೆ. ಅವರ ದೈವ ಎಂಥದು ಎಂಬುದು ಗೊತ್ತೇ? ಒಂದು ಮರದ ಗೂಟ. ಅದರ ತಲೆಗೆ ಎರಡು ಕೋಣನ ಕೊಂಬುಗಳು"

"ಹಾಗಿದ್ದರೆ, ಗಂಡಿನ ಕುಲ ಯಾವುದು?"

"ಹೇಳುತ್ತೇನೆ... ಅವರ ಮಾಟೆ ಮನೆಯಲ್ಲಿ, ಮೊನ್ನೆ ಹೇಳಿದೆನಲ್ಲ, ಆ ಲಿಂಗ, ಯೋನಿ ಇತ್ತೆಂದೆನಲ್ಲ. ಅದರ ಆಚೆ, ಈಚೆ ಇನ್ನೂ ಏನೇನೋ ಕಲ್ಲುಗಳು, ಕಂಬಗಳು ಇರಬೇಕು. ಮಾಟೆಯ ಕತ್ತಲಿನಲ್ಲಿ ಏನೂ ಸಮನಾಗಿ ಕಾಣಿಸುವುದಿಲ್ಲ. ಒಂದು ಗಡಿಗೆ ಕವುಚಿದ್ದು ಕಾಣಿಸುತ್ತದೆ. ಅದರ ಮೇಲೆ ಹುಲಿ ಮುಸುಡಿನ ಚಿತ್ರ ಬರೆದಿದೆ. 'ಹುಲಿ' ಬಳಿಯೋ? ಅಂಥದೂ ಒಂದು ಕುಲ ಉಂಟೋ? ಉಂಟೇ ಉಂಟೆಂದು ಹಾಗಾಯಿತಲ್ಲ. ಹಾಗಿದ್ದರೆ, ಎಲ್ಲ ಅರ್ಥವಾಗುತ್ತದೆ. ಹುಲಿ ಬಳಿಯವರಿಗೂ ಕೋಣನ ಬಳಿಯವರಿಗೂ ಸಂಬಂಧ ನಡೆಸುವುದು ಪಸಂದವಲ್ಲ- ಎಂದು ಅವರಲ್ಲಿ ರಿವಾಜು ಇದ್ದಿರಬೇಕು. ಕೋಣನ ಬಳಿಯವರು ಈ ಹುಲಿ ದೈವಕ್ಕೆ ಹೆದರಿಯೇ ಸೋತರು. ಹೆಣ್ಣನ್ನು ಬಿಟ್ಟೇ ಹೋದರು. ಹುಲಿ ಬಳಿಯನ್ನು ಸೇರಿದ ಆ ಹೆಣ್ಣು ತಿರುಗಿ ಕೋಣನ ಬಳಿಯವರ ಹತ್ತಿರ ಸುಳಿಯುವ ರಿವಾಜು ಇಲ್ಲವೋ ಏನೋ."

"ಮಗೂ, ನಮ್ಮೂರ್ರ ಶೂದ್ರರಲ್ಲಿ ಆ ಬಳಿ, ಈ ಬಳಿ- ಅಂತ ಇದೆಯಲ್ಲ. ಅದೂ ಹೀಗೆಯೇ ಇರಬೇಕು."

"ನಮ್ಮಲ್ಲಿ ಗೋತ್ರ ಇಲ್ಲವೇ ಅಜ್ಜಿ- ವಿಶ್ವಾಮಿತ್ರ, ಭಾರದ್ವಾಜ, ವಸಿಷ್ಠ ಅಂತ."

"ಇದೆ, ಇದೆ; ಆದರೆ ನಾವೆಲ್ಲ ಅವರಿಗೆ ಹುಟ್ಟಿದ ಸಂತಾನ ಅಂತ ಅನಿಸುವುದಿಲ್ಲ ನನಗೆ. ವಿಶ್ವಾಮಿತ್ರನ ಸಂತಾನ ಅಂದರೇನು? ಮೇನಕೆಯ ಮಕ್ಕಳೆಂತಲೆ? ಆ ವಿಶ್ವಾಮಿತ್ರ ಕ್ಷತ್ರಿಯ, ಮೇನಕೆಯ ಜಾತಿ ಬೇರೆಯೇ. ಬ್ರಾಹ್ಮಣರಾದವರು- ಮೇನಕೆಯ ಮಕ್ಕಳೂ, ಶಕುಂತಲೆಯ ಮಕ್ಕಳೂ ಆಗುವುದು ಹೇಗೆ? ವಸಿಷ್ಠ, ವಿಶ್ವಾಮಿತ್ರ- ಎಂಬುವರೆಲ್ಲ ಗುರುಗಳ ಹಾಗೆ ಇದ್ದಿರಬಹುದು. ಇವುಗಳ ಮನಸ್ಸಿನಲ್ಲಿಯೂ- ತಾವು ಹುಲಿಯಿಂದಲೇ ಹುಟ್ಟಿ ಬಂದದ್ದು; ಕೋಣನಿಂದಲೇ ಹುಟ್ಟಿದ್ದು- ಎಂಬ ನಂಬಿಕೆ ಇರುವ ಹಾಗಿದೆ. ಆದರೂ ಈ ಬಳಿಗಳ ಕಟ್ಟಳೆ, ರಿವಾಜು ಬಹಳ ಬಿಗುವಿನದು. ಹುಲಿ ಬಳಿಯವರು ಹುಲಿಗಳ ಬೇಟೆಯನ್ನಾಡುವ ಪಂಚಾಯಿತಿ ಇಲ್ಲ. ಕೋಣನ ಬಳಿಯವು ಕೋಣನನ್ನು ಕೊಲ್ಲುವ ಸುದ್ದಿಯೂ ಇಲ್ಲ. ಅದು ಅವರಿಗೆ ನಿಷಿದ್ಧ."

"ಅಂಥದ್ದನ್ನು ನಾನು ಕೇಳಿದ್ದೇನೆ ಅಜ್ಜಿ. ಈ ಬಳಿ, ಗಿಳಿಗಳ ಲೆಕ್ಕಾಚಾರ ಹಾಗೆಯೇ ಇರುತ್ತದೆ. ಅದರ ಹಾಗೆಯೇ ಪೂರ್ವದಲ್ಲಿ ಸೂರ್ಯವಂಶ, ಚಂದ್ರವಂಶ- ಅಂತ ಇತ್ತಲ್ಲ, ಅವುಗಳ ಲೆಕ್ಕಾಚಾರವೇನು?"

"ಅಂಥಂಥ ದೈವಗಳನ್ನು ನಂಬಿದ ಅರಸುಕುಲ ಅಂತ ಇದ್ದೀತು. ಅಲ್ಲದೆ ಹೋದರೆ, ಕೋಣನ ಹೊಟ್ಟೆಯಲ್ಲಿ ಮನುಷ್ಯರು ಹುಟ್ಟುತ್ತಾರೆಯೋ? ಹುಲಿಯ ಹೊಟ್ಟೆಯಲ್ಲಿ

ಹುಟ್ಟುತ್ತಾರೆಯೋ? ಮನುಷ್ಯಕುಲ ಪ್ರಾಣಿ ಜನ್ಮಕ್ಕಿಂತ ಶ್ರೇಷ್ಠ- ಎಂಬ ಮಾತಿಗಾದರೂ ಅರ್ಥವೇನು? ಸಾಕು ಮಗು, ಇವತ್ತಿಗೆ; ಏನಾಯಿತು ನಿನ್ನ ತಮ್ಮನ ಸುದ್ದಿ? ಜನ್ನನ ಮನೆಗೆ ಹೋದ ಕತೆಯೇನಾಯಿತು? ಬಂದವರು ಹೋಗಿಯಾಯಿತೋ?"

"ಅವರು ಹೋದರು ಬೆಳಿಗ್ಗೆ."

"ನಾರಾಯಣ?"

"ಅವನು ಅವರನ್ನು ಕಳುಹಿಸಿಕೊಡಲು ಹೋದ. ನಾನು ನಾಡಿದ್ದು ಶಿವಮೊಗ್ಗೆಗೆ ಹೋಗಿ ದಿನ ನಿಶ್ಚಯ ಮಾಡಿಕೊಂಡು ಬರಬೇಕು."

"ಅಂತೂ ಒಪ್ಪಿಕೊಂಡೆ; ನಿನ್ನ ಸೀತೆಗೆ ಮನಸ್ಸು ಖುಷಿಯಾಯಿತೇ ಹೇಗೆ?"

"ಅವಳಿಗೆ ಅಜ್ಜಿ, ನಾರಾಯಣ ಅಂದರೆ ಅಷ್ಟು ಪ್ರೀತಿ. ಅವನು ಆಯಿತು ಎಂದದ್ದು ಅವಳಿಗೂ ಒಪ್ಪಿಗೆ. ನಾನೊಮ್ಮೆ- ಬೇಡ ಅಂದರೂ ಅವಳು ಬಿಡುತ್ತಿರಲಿಲ್ಲ."

"ಅಷ್ಟು ಹೆಡ್ಡಿಯಲ್ಲ ನಿನ್ನ ಸೀತೆ. ಅವಳಿಗೂ ಲೋಕದ ಜ್ಞಾನವಿದೆ. ಹಿಂದು, ಮುಂದು ಚೆನ್ನಾಗಿ ಗೊತ್ತುಂಟು. ಅವಳಿದ್ದಾಳೆಂಬುದರಿಂದ ಈ ಮನೆ ನಡೆಯುತ್ತದೆ. ನಿನ್ನ ಹಾಗಲ್ಲ ಅವಳು."

"ಅಂದರೆ?"

"ನಿನಗೆ ಹಿತ್ತಾಳೆಯನ್ನು ತೋರಿಸಿ 'ಇದು ಪುತ್ಥಳಿ ಚಿನ್ನ' ಎಂದರೆ 'ಹೌದೋ!' ಅನ್ನುತ್ತೀಯ."

"ಈಗ ನನ್ನ ತೂಕ ಅಷ್ಟೇಯೇನೋ?"

"ನೀನಿರುವುದು ಹಾಗೆ. ಇದ್ದದ್ದಕ್ಕಿಂತ ಹೆಚ್ಚಿನ ತೂಕ ಬರಬೇಕು ಅಂದರೆ ಹೇಗೆ ಬಂದೀತು? ಬಿಡು, ಆ ಸಂಗತಿ. ಜನ್ನ ಏನೆಂದನಂತೆ? ಅವನ ಅಪ್ಪನನ್ನು ಮಾತನಾಡಿಸಲಿಲ್ಲವೇ?"

"ಮಾತನಾಡಿಸಿದರು. ಮಗ ಅಪ್ಪನನ್ನು ತೋರಿಸಿದ; ಅಪ್ಪ ಮಗನನ್ನು ತೋರಿಸಿದ. ಜನ್ನ ಅವರ ಮನೆಗೆ ಹೋಗಿ, ಹೆಣ್ಣು ನೋಡಿ, ಊಟ ಉಂಡು ಊರಿಗೆ ಹೋಗಿ ತಿಳಿಸುತ್ತೇನೆ- ಎಂದು ಬಂದದ್ದರಿಂದ, ಅವರು ಅಷ್ಟೆಲ್ಲ ಆಸೆ ಮಾಡಿ ಬಂದರು. ಅವನ ಕತೆ ಸ್ವಾರಸ್ಯವಿಲ್ಲವಂತೆ, ಅಜ್ಜಿ. ನಿಮ್ಮ ಅನುಮಾನ ಸಮ. ನಿಮಗೆ ಯಾರಾದರೂ ಹೇಳಿರಬೇಕು, ಮಜುನಾಥನಂಥವರು ಅವನ ಸುದ್ದಿಯನ್ನು."

"ಮಂಜುನಾಥ ಇಲ್ಲಿಗೆ ಬಂದದ್ದು ನಿಜ. ಅವನು ಯಾವ ಸುದ್ದಿಯನ್ನೂ ಹೇಳಲಿಲ್ಲ. ಅವನ ಬಾಯಿ ತುಂಬ ಅಮ್ಮನವರ ಗುಡಿಯದ್ದೇ ಸುದ್ದಿ. ಮಾಡಲಿ ಒಂದು ಒಳ್ಳೆಯ ಕೆಲಸವನ್ನು. ನಂಬಿ ಬಂದಿದ್ದಾನೆ; ಅದರಿಂದ ಅವನಿಗೆ ಸಮಾಧಾನ."

ಅವರ ಈ ಪ್ರತ್ಯುತ್ತರ ನನಗೆ ಬೆರಗನ್ನುಂಟುಮಾಡಿತು. ಅವರಿಗೆ ಬೇರೆಯವರ ಮನಸ್ಸಿನಲ್ಲಿದ್ದುದು ಹೇಗೋ ತಿಳಿದುಬರುತ್ತಿರಬೇಕು. ಮೊನ್ನೆ ದಿವಸ ಊಟಕ್ಕೆ ಕುಳಿತಾಗ 'ಇನ್ನೂ ಹತ್ತು ಪಾಯಸ ಆಗುತ್ತದೆ' ಎಂದರು. ಆ ದಿನ ಮನೆಗೆ ನಂಟರು ಬಂದುದರಿಂದ, ಬರಿಯ ಊಹೆಯಿಂದ ಆಡಿದ ಮಾತಿರಬಹುದು- ಎಂದುಕೊಂಡೆ. ಆ ಮೇಲೆ ನನ್ನ ತಮ್ಮನೂ ಸೀತೆಯೂ ಅಡುಗೆ ಮನೆಯಲ್ಲಿ ಕುಳಿತು ಗುಸುಗುಸು ಗುಟ್ಟು ಮಾತನಾಡಿದ್ದು ಮಗ್ಗುಲು ಕೋಣೆಯಲ್ಲಿದ್ದ ಇವರಿಗೆ ಕೇಳಿಸಿರಬಹುದು- ಎಂದುಕೊಂಡೆ. ಹಾಗೇನೂ ಇಲ್ಲದೆಯೇ, ಮುಖವನ್ನು ಕಂಡೇ, ಪ್ರಸಂಗವನ್ನು ನೆನೆದೇ, ಅಷ್ಟೆಲ್ಲವನ್ನೂ ಹೇಳುವುದು ಸಣ್ಣಪುಟ್ಟ ಸಂಗತಿಯಲ್ಲ- ಎಂಬ ತರ್ಕ ಹೂಡಿದೆ. ನನಗೆ ಅವರ ರೀತಿ ಆಶ್ಚರ್ಯದ್ದಾಗಿಯೇ ಕಾಣಿಸುತ್ತದೆ. ಅದನ್ನು ನಾನು ನಂಬಬೇಕೇ, ಬೇಡವೇ- ಎಂಬ ಅನುಮಾನ ನನಗೆ ಇರುತ್ತಿದ್ದರೆ, ಆ ಚೂರುಪಾರು ಕಲ್ಲು, ಕೊಂಬುಗಳನ್ನೆಲ್ಲ ಹಿಡಿದುಕೊಂಡು, ಅವರಿಗೆ ತೋರಿಸಿ, ಈ ಮೂರು ದಿವಸವೂ ಹಟ ಹಿಡಿದು ಅವರಿಂದ ನಿಮಿತ್ಯ ಕೇಳಿದೆನೇಕೆ? ಅವರಿಗೂ ಗೊತ್ತಿದೆ ನನ್ನ ಸ್ವಭಾವ; ಹಿತ್ತಾಳೆ ತೋರಿಸಿ ಚಿನ್ನ ಎಂದು ನಂಬಿಸಬಹುದಾದ ನನ್ನ ಗುಣ. ಅವರು ಹೇಳಿದ ಯಾವತ್ತು ಸಮಾಚಾರಗಳನ್ನು ಬರಿದೇ ನೆನೆದರೂ, ಖಂಡಿತ ನಂಬಬಹುದಾದುವೇ- ಎಂದು ನನಗನಿಸುತ್ತದೆ. ಇಷ್ಟೇ ಮೋಸ- ಅದನ್ನು ನಂಬಿ, ನಾನು ಇನ್ನೊಬ್ಬರಿಗೆ ತಿಳಿಸಿದರೆ ಮಾತ್ರ- ಅಜ್ಜಿಯ ಹಾಗೆ ನನಗೂ ಮರುಳು- ಎಂದಾರು. ನಮ್ಮ ಅಜ್ಜಿ ಹಿಂದಿನ ಕಾಲದ ಅಷ್ಟೊಂದು ಕತೆಗಳನ್ನು ತಾವೇ ಹೊಸೆದು ಹೇಳುತ್ತಾರೆಯೇ? ಅಷ್ಟು ಚರಿತ್ರೆಯ ಜ್ಞಾನವಾದರೂ ಅವರಿಗಿದೆಯೇ? ಇಲ್ಲ, ಅವರ ಮಾತನ್ನು ಸಾಕ್ಷಿಯಾಗಿ ಇರಿಸಿಕೊಂಡು ನಾನು ನನ್ನ ಬಾಯಿ ತೆರೆದದ್ದಾದರೆ, ಒಂದು ಚೂರು ಕಲ್ಲು, ಒಂದು ಮುರುಕು ಕೊಂಬು, ಸವೆದ ಕಲ್ಲು, ಕವಡೆ- ಏನೇ ಇರಲಿ, ಅದನ್ನು ಹಿಡಿದವರು ಸತ್ತು ಮಣ್ಣಾಗಿ ಸಾವಿರ, ಸಾವಿರ ವರ್ಷಗಳಾದ ಮೇಲೆ ಅಜ್ಜಿಯ ಕಣ್ಣಿಗೆ ಕಾಣಿಸಿಕೊಳ್ಳುವುದಾದರೂ ಹೇಗೆ? ಆದರೆ, ಅಂಜನ ಹಾಕಿ ಏನೇನೋ ಹೇಳಿಸುತ್ತಾರಲ್ಲ. ಆಂಜನೇಯ ಬರುವುದಂತೆ, ನಮ್ಮನ್ನು ಎಲ್ಲೆಲ್ಲಿಗೋ ಕರೆದುಕೊಂಡು ಹೋಗುವುದಂತೆ. ತಲೆಬುಡವಿಲ್ಲದ ಕತೆಗಳು! ನನಗೆ ಅಂಥದ್ದರಲ್ಲಿ ಏನೂ ನಂಬಿಕೆಯಿಲ್ಲ. ಹನುಮಂತನ ಗುಡಿಗೆ ನಾನು ಹೋಗಿದ್ದೇನೆ. ಅಲ್ಲಿ ನಮಸ್ಕಾರ ಮಾಡಿದ್ದೇನೆ. ಸಣ್ಣವನಿರುವಾಗ 'ರಾಮನ ಬಂಟ ಹನುಮಂತ. ತಿರುಪತಿ ಎಂಬುದು ವೈಕುಂಠ' ಎಂದು ಭಜನೆ ಮಾಡಿದ್ದೇನೆ. ಆದರೂ, ರಾಮಾಯಣ ನಡೆದ ಕತೆ ಎಂಬುದಾಗಿ ನನ್ನ ಮನಸ್ಸಿಗೆ ಅನಿಸಿದ್ದಿಲ್ಲ. ಆದರೆ, ಅಜ್ಜಿ ಹೇಳುವ ಈ ಯಾವತ್ತು ಕತೆಗಳು ನಿಜಕ್ಕೂ ನಡೆದುವೇ ಎನಿಸುತ್ತದೆ ನನಗೆ.

ಈ ನನ್ನ ವಿಚಾರಸರಣಿ ಕುರುಡು ಓಣಿಯಲ್ಲಿ ಮುಂದಕ್ಕೆ ಸಾಗಲಾರದೆ ಒಮ್ಮೆಗೇ ನಿಂತುಬಿಟ್ಟಿತು. ಅಜ್ಜಿ ನನ್ನನ್ನು ಕಂಡು "ಏನು ಕೂತು ಮಾಡುತ್ತೀಯ? ಮನೆಗೆ ಹೋಗು.

ನಾಳೆ ನಾಡಿದ್ದು ಹೊರಡಬೇಕಾದರೆ ಏನೇನು ತಯಾರಿಸಬೇಕೆಂದು ಸೀತೆಯನ್ನು ಕೇಳು, ರೀತಿ ರಿವಾಜು- ಏನು ಅಂತ ಕೇಳಿಕೋ. ಅವಳಿಗೆ ಗೊತ್ತಿದ್ದೀತು ತಕ್ಕಮಟ್ಟಿಗೆ" ಎಂದರು. ಅಷ್ಟಕ್ಕೆ ಸಂಜೆಯಾಗಿತ್ತು. ನನ್ನ ತಮ್ಮ ಗಂಗೊಳ್ಳಿಗೆ ಹೋದವನು ಹಿಂದಕ್ಕೆ ಬಂದ. ಅವನ ಮುಖದಲ್ಲಿ ಬೇಸಿಗೆ ದಿನದ ಬೆವರು ಧೂಳಿನ ಎಡೆಯಲ್ಲಿಯೂ ಗೆಲುವು ಕುಣಿದಾಡುತ್ತಿತ್ತು.

"ಹೋಗಿ ಬಂದೆಯಾ?" ಎಂದು ಕೇಳಿದರು ಅಜ್ಜಿ.

"ಹೌದಜ್ಜಿ."

"ನೀವು 'ಆಯಿತು' ಅಂದಿರಂತೆ. ನಿಮ್ಮ ಮನಸ್ಸು ದೊಡ್ಡದು" ಎಂದ ತಮ್ಮ.

"ಪಾಯಸದ ಆಸೆ ಮಗು, ಪ್ರಾಯ ಸಂದವಳಿಗೆ. ಮೊಮ್ಮಗನ ಲೆಕ್ಕಕ್ಕೆ ಒಂದು ಪಾಯಸ ಬೇಗನೆ ಸಿಗಲಿ- ಎಂಬ ಯೋಚನೆ."

ಅವರೂ ನಕ್ಕರು. ನಾವೂ ನಕ್ಕೆವು. ಇಬ್ಬರೂ ಕೂಡಿಯೇ ಮನೆಯ ಕಡೆಗೆ ಹೊರಟೆವು. ನಾರಾಯಣನ ಬರವನ್ನು ನನ್ನ ಮಕ್ಕಳು ವಾಸನೆಯಿಂದಲೇ ಕಂಡುಕೊಂಡಿರಬೇಕು. ಮನೆಯ ಅಂಗಳಕ್ಕೆ ಆತ ಕಾಲಿರಿಸುವುದರೊಳಗಾಗಿಯೇ 'ಚಿಕ್ಕಪ್ಪ ಬಂದ' ಎನ್ನುತ್ತ ನನ್ನೆರಡೂ ಮಕ್ಕಳೂ ಧಾವಿಸಿ ಹೋಗಿ ಅವನಿಗೆ ಅಂಟಿಕೊಂಡುವು. ನನ್ನ ತಮ್ಮನು ದೊದಲು ಬಾವಿಕಟ್ಟೆಗೆ ಹೋಗಿ, ನೀರನ್ನು ಸೇದಿ, ಮುಖ, ಕೈಕಾಲುಗಳನ್ನು ತೊಳೆದುಕೊಂಡು, ಬೆವೆತ ಅಂಗಿಯನ್ನು ನೇಲೆಯಲ್ಲಿ ತೂಗುಹಾಕಿ 'ಅತ್ತಿಗೆ, ಹೋಗಿ ಬಂದೆ' ಎಂಬ ವಾರ್ತೆಯನ್ನು ಕೊಟ್ಟ. ಅವನ ಬಾಯಿಮಾತು ಮುಗಿಯುವುದ ರೊಳಗಾಗಿಯೇ ಅವಳು ಒಂದಿಷ್ಟು ಬೆಲ್ಲದ ಪಾನಕವನ್ನು ಮಾಡಿ, ಗಿಂಡಿಯಲ್ಲಿ ತುಂಬಿಸಿ ತಂದಿಟ್ಟಳು. 'ಅಮೃತ ಪಾನಕ; ಶುಂಠಿ, ಮೆಣಸು ನುರಿದು ಲಾಯಕು ಮಾಡಿದ್ದೇನೆ' ಎಂದಳು. ಬೇಸಿಗೆಯಲ್ಲಿ ದಣಿದು ಬಂದವರಿಗೆ ಅಮೃತ ಪಾನಕ ಸಂಜೀವನಕ್ಕೆ ಸಮ ಎಂಬ ನಂಬಿಕೆ ನಮ್ಮ ಊರವರದ್ದು. ಅದನ್ನು ಕೊಡುವ ಹೊತ್ತು ಮಾತ್ರ ಸಂಜೆಯಲ್ಲ; ಮಧ್ಯಾಹ್ನ. ಆದರೆ, ನನ್ನ ತಮ್ಮನಿಗೆ ಅದೇ ಬೇಕಿತ್ತು. ಅಷ್ಟರಲ್ಲಿ ನನ್ನ ಎರಡು ಕಾಟು ಮಕ್ಕಳು ಬಿಡುತ್ತಾವೆಯೇ? ಅವುಗಳ ಗಂಟಲಿಗೆ ಒಂದಿಷ್ಟು ಸುರಿದ ಮೇಲೆಯೇ, ಅದನ್ನು ಅವನಿಗೆ ಕುಡಿಯಲು ಬಿಟ್ಟವು.

"ಥೂ , ಈ ಮಕ್ಕಳ ... ! ಇವನು ಮನೆಯವನೇ ಆದುದಕ್ಕಾಯಿತು. ಹೊರಗಿಂದ ಬೇರೆ ಯಾರಾದರೂ ಬಂದಾಗ ಹೀಗೆಯೇ ಮಾಡಿದರೆ ಏನು ತಿಳಿದುಕೊಂಡಾರು? ಈ ಮಕ್ಕಳಿಗೆ ಮನೆಯಲ್ಲಿ ಒಂದಿಷ್ಟೂ ತಿಂಡಿ ಕೊಡುವುದಿಲ್ಲ; ಅದಕ್ಕೇ ಹೀಗೆ ಬಾಯಿ ಬಿಡುತ್ತವೆ" ಎಂದೆ.

ತಮ್ಮನಕ್ಕ; ಇಡೀ ಬಿಂದಿಗೆಯ ಪಾನಕವನ್ನು ನಾನು ಒಬ್ಬನೇ ಕುಡಿಯುತ್ತೇನೆಯೇ? ಹೊಟ್ಟೆ ಬಿರಿದೀತು."

"ಒಬ್ಬರೇ ಎಲ್ಲವನ್ನೂ ಕುಡಿದರೆ ಹೊಟ್ಟೆ ಒಡೆದೇ ಹೋಗುತ್ತದೆಯಂತೆ" ಎಂದ ನನ್ನ ಕಿಟ್ಟ.

"ಇಷ್ಟು ಸಣ್ಣದರಲ್ಲಿಯೇ ಇವು ಎಷ್ಟು ಕಲಿಯುತ್ತವಪ್ಪ!" ಎನಿಸಿತು ನನಗೆ. ಸೀತೆ ಅಷ್ಟಕ್ಕೆ ಬಿಡುವು ಮಾಡಿಕೊಂಡು ಚಾವಡಿಗೆ ಬಂದು ಕುಳಿತು "ಹೋಗುತ್ತ, ಮತ್ತೇನನ್ನಾದರೂ ಅನಂತರಾಯರು ತಿಳಿಸಿದರೇ?" ಎಂದು ಪ್ರಶ್ನಿಸಿದಳು.

"ಮತ್ತೇನೂ ಹೇಳಲಿಲ್ಲ. ನಾಡಿದ್ದು ಅಣ್ಣನಿಗಾಗಿ ಬಸ್ ಸ್ಟ್ಯಾಂಡಿನಲ್ಲಿ ಕಾದಿರುತ್ತೇವೆ- ಎಂದು ತಿಳಿಸಿದ. ಜನ್ನನ ಆಸೆಯನ್ನು ಬಿಟ್ಟೇ ಹೋಗಿದ್ದಾನೆ ಆತ. ಸುಸೂತ್ರವಿಲ್ಲ; ಅವನ ಮಾತುಕತೆಗಳನ್ನು ಕೇಳಿ ಬೇಸರ ಬಂದಿರಬೇಕು. ಈ ಜನಾರ್ದನನಿಗೆ ಎಷ್ಟು ಪ್ರಾಯವಾಯಿತು; ಲಗ್ನವಾಗುವ ಆಸೆಯಿಲ್ಲವಾದರೆ, ಸುಮ್ಮನೆ ಯಾರು, ಯಾರ ಮನೆಗಳಿಗೆ ಹೋಗಿ, ಏನೇನಾದರೂ ಮಾತನಾಡಿ, ಒಣ ಆಸೆಯನ್ನು ಹುಟ್ಟಿಸಿ ಬರುವುದಾದರೂ ಯಾಕೆ? ಹೆಣ್ಣು ಹೆತ್ತವರ ಸಂಕಟ ಒಂದಿಷ್ಟಾದರೂ ತಿಳಿಯಬಾರದೇ?"

"ಅವರಿಗೆ ವ್ಯಾಪಾರವನ್ನು ಬಿಟ್ಟರೆ ಊರು ಮನೆಯಲ್ಲಿ ಯಾವುದೂ ಇಲ್ಲವಂತೆ. ಎಲ್ಲರೂ ಅಲ್ಲಿಯೇ ಇದ್ದಾರೆ. ಒಂದು ಸ್ವಂತ ಸಣ್ಣ ಮನೆಯೂ ಇದೆ ಅಂತೆ. ಇನ್ನೊಬ್ಬ ತಮ್ಮ, ಅವನ ಬೆನ್ನಿಗೆ ಇಬ್ಬರು ಹೆಣ್ಣುಮಕ್ಕಳು- ಇಷ್ಟು ಮಂದಿ ಕೂಡಿರುವ ಸಂಸಾರ ಅವರದ್ದು. ತಮಗೆ ಆಸ್ತಿಪಾಸ್ತಿ ಇಲ್ಲದ್ದರಿಂದ, ಹೆಣ್ಣುಮಕ್ಕಳಿಗೆ ಒಂದಿಷ್ಟು ವಿದ್ಯೆಯನ್ನಾದರೂ ಕೊಡಿಸುವ- ಎಂಬ ಚಪಲ ಹುಟ್ಟಿತು; ಓದಿಸಿದರು."

"ಎಷ್ಟು ಓದಿಸಿದ್ದಾರಂತೆ?" ಏಳನೆಯ ಕ್ಲಾಸಾದರೂ ಆಗಿದೆಯೋ?" ಎಂದು ಕೇಳಿದಳು ಸೀತೆ.

ನಾರಾಯಣನು ನಕ್ಕನು "ಅತ್ತಿಗೆ, ಮೈಸೂರಿನಲ್ಲಿ ಅವರಿಬ್ಬರಿಗೂ ಬಿ.ಎ., ಮಾಡಿಸಿದ್ದಾರೆ."

"ಬಿ.ಎ.,ಯೇ? ಯಾವ ಮಣ್ಣಿಗೆ? ಅದು ಹೆಚ್ಚೇ?"

"ಹೋ, ನಿನ್ನ ಯೋಚನೆ ಅಷ್ಟೇಯೋ? ಹಾಗಾದರೆ, ಓದಿಸಲಿಲ್ಲ ಅಂತ ತಿಳಿ. ನಮ್ಮಷ್ಟು ಭೂಮಿ, ಕಾಣಿಕೆ ಇಲ್ಲದವರು ನಂಟಸ್ತಿಕೆ ಹುಡುಕುವುದು ಸುಲಭವೇ? ಹೆಣ್ಣು ಮಕ್ಕಳಿಗೆ ಓದೇ ಚಿನ್ನ- ಅಂತ ತಿಳಿದರು. ಈಗ ಅದೇ ಪಜೀತಿಗೆ ಬಂದಿದೆ. ಅಷ್ಟು ಓದಿಸಿದ್ದರಿಂದಾಗಿ ವರ ಹುಡುಕುವುದು ಕಷ್ಟವಾಗಿದೆ. ಅವರ ಅಪ್ಪ ಮೊದಲಿನಿಂದಲೂ ಮದುವೆಯ ಪ್ರಯತ್ನವನ್ನು ಮಾಡುತ್ತಲೇ ಇದ್ದರು. ಈ ಮಕ್ಕಳು 'ಓದು ಮುಗಿಯಲಿ'

ಎಂದು ಹಟ ಹಿಡಿದರು. ಪ್ರೀತಿಯಿಂದ 'ಆಗಲಿ' ಅಂದರು. ಅವರ ಅಮ್ಮನಿಗೆ ಈ ಕಡೆಯ ನಂಟಸ್ತಿಕೆ ಬೇಕು ಎಂಬ ಆಸೆ."

ಸೀತೆ ಪ್ರಶ್ನಿಸಿದಳು: "ನಿನ್ನ ಜಾತಕವನ್ನು ಅವರಿಗೆ ಎಂದು ತೋರಿಸಿದೆ ನೀನು? ಇಲ್ಲಿಂದ ಕೇಳಿಕೊಂಡು ಹೋದದ್ದು ಇಲ್ಲವಲ್ಲ. ನಿನ್ನನ್ನು ಅವರು ಅಷ್ಟು ಹುಚ್ಚುಕಟ್ಟಿಸಿದ್ದು ಹ್ಯಾಗೋ?"

ತಮ್ಮ ತುಸು ಕಕ್ಕಾಬಿಕ್ಕಿಯಾದ. ಇಲ್ಲಿಯ ತನಕವೂ ಅವನೆಂದುದಕ್ಕೆಲ್ಲ 'ಅಸ್ತು' ಎಂದವಳು ಈಗ- ಇದು ಹೊಸತೇ ವಿಷಯ- ಎಂಬ ರೀತಿಯಲ್ಲಿ ತನಿಖೆ ಮಾಡುತ್ತಿದ್ದಾಳಲ್ಲ! ಓದಿದ ಹುಡುಗಿ ಎಂದರೆ ಬಿ.ಎ., ಯಷ್ಟು ವಿಪರೀತ ಓದಿದವರು ನಮಗೆ ಯಾಕೆ- ಎಂಬ ರಾಗ ತೆಗೆದಾಳೆಯೇ- ಎಂಬ ಭಯವಾಯಿತು. ಆತ ತುಸು ಗಾಬರಿಯಿಂದಲೇ "ಅಲ್ಲ, ಈಗ ಏನು ಮಾಡಬೇಕು ಅನ್ನುತ್ತೀಯಾ?" ಎಂದು ಕೇಳಿದ.

"ನೀನು ಒಪ್ಪಿಗೆ ಕೊಟ್ಟು ಬರಲಿಲ್ಲವೇ?"

"ಹುಡುಗಿ ನನಗಾದೀತು ಎಂದು ಹೇಳಿ ಬಂದಿದ್ದೆ. ಆದುದರಿಂದಲೇ- ಅನಂತರಾಯ ಅಣ್ಣನನ್ನು ನಾಳೆ ಬರಬೇಕು ಎಂದು ಒತ್ತಾಯಿಸಿದ್ದು."

"ಹಾಗಿದ್ದರೆ ಮತ್ತೇನು?"

"ಅಲ್ಲ, ನೀನು ತನಿಖೆಗೆ ಹೊರಟ ರೀತಿಯನ್ನು ಕಂಡರೆ!"

"ಅದೇ! ಬಿ.ಎ., ಎಂದೆ ನೀನು; ಹೆಣ್ಣುಮಕ್ಕಳಿಗಾಗಿ ಬಹಳ ದುಡ್ಡು ಹಾಳು ಮಾಡಿದರು- ಎಂದು ಕಾಣಿಸಿತು. ಅದರ ಬದಲಿಗೆ, ಆ ದುಡ್ಡಿನಿಂದ ಚಿನ್ನ ಮಾಡಿಸಿದ್ದರೆ ಆಗುತ್ತಿತ್ತಲ್ಲ- ಅನಿಸಿತು ನನಗೆ."

ನಾನು ನಡುವೆ ಪ್ರವೇಶಿಸಬೇಕಾಯಿತು: "ಸೀತೆ, ಅವರು ಎಷ್ಟು ಮಣ ಚಿನ್ನ ಹಾಕಬೇಕು ಎಂಬುದನ್ನು ಹೇಳು. ಅಷ್ಟು ಹಾಕಲಿಕ್ಕೆ ಸಾಧ್ಯವೇ- ಎಂದು ಕೇಳುವ. ನಾಳೆ ನಾನು ಹೋಗಿ ಅದರ ನಿಷ್ಕರ್ಷೆ ಮಾಡಿ ಬರಬೇಕಲ್ಲ" ಎಂದೆ.

"ಛೇ, ನನಗೆ ಮರುಳು ಅಂತ ತಿಳಿದಿರಾ? ಅದನ್ನು ಕೊಡಿ; ಇದನ್ನು ಕೊಡಿ- ಎಂದು ಹೆಣ್ಣಿನ ಮನೆಯವರ ಮುಂದೆ ಬೇಡುವುದೇ? ಅಸಹ್ಯ. ಅವರ ಮಗಳು; ಕೊಡುವುದನ್ನು ಕೊಡುತ್ತಾರೆ. ನೀವು ಅಲ್ಲಿಗೆ ಹೋದವರು 'ನಾವಿಷ್ಟನ್ನು ತರುತ್ತೇವೆ, ಧಾರೆ ಸೀರೆ, ಇಷ್ಟು ನಗ' ಅಂತ ಹೇಳಿ. ಬೇರೆ ಒಂದೇ ಒಂದು ಸಣ್ಣ ಮಾತನ್ನೂ ಆಡಬಾರದು."

ನಾನು "ಅಯ್ಯೋ ಮಹಾರಾಯತಿ, ಒಂದು ಎಮ್ಮೆ ಇಲ್ಲ ದನ, ಇಲ್ಲ ಕಡಸನ್ನು ಕೊಳ್ಳುವುದಾದರೂ, ಕಸಿವಿಸಿ ಮಾಡಿ, ನಾಲ್ಕು ರೂಪಾಯಿ ಹೆಚ್ಚು ಕಡಿಮೆಗಾಗಿ ಚೌಕಸಿ

ಮಾಡುತ್ತೇವೆ. ಹಾಗಿರುತ್ತ, ಹೆಣ್ಣನ್ನು ತರುವಾಗ ಬಾಯಿ ಮುಚ್ಚಿಕೊಂಡಿರಬೇಕು ಅನ್ನುತ್ತೀಯಾ?" ಎಂದೆ.

"ಹೌದೌದು. ಹೋಗಿ ಅಜ್ಜಮ್ಮನ್ನನ್ನು ಕೇಳಿ. ನಿಮ್ಮ ಅಪ್ಪಯ್ಯ ನನ್ನನ್ನು ಸೊಸೆಯಾಗಿ ತರುವುದಕ್ಕೆ ಬಂದಾಗ ಏನು ಕೇಳಿದರು, ಎಷ್ಟು ಚೌಕಸಿ ಮಾಡಿದರು- ಎಂತ. ನಿಮಗೆ ಗೊತ್ತಿರಲಾರದು. ಅವರಿಗೆ ಗೊತ್ತಿದ್ದೀತು. 'ಹೆಣ್ಣು ನಮಗೆ ಒಪ್ಪಿಗೆ' ಅಂದರಂತೆ. ಅದರ ಮೇಲೆ ಒಂದು ಚೂರು ಮಾತನ್ನೂ ಅವರು ಆಡಿದವರಲ್ಲವಂತೆ. ಈಗಲೂ ನಮ್ಮಪ್ಪ ಅವರ ದೊಡ್ಡಸ್ತಿಕೆಯನ್ನು ನೆನೆಯುತ್ತಾರೆ."

"ಸೀತೆ, ಆ ಕಾಲ ಯಾವುದು? ಸಾವಿರಾರು ದಿನಗಳ ಹಿಂದಿನ ಕತೆ ಅದು. ಅದು ಕೃತಯುಗ; ಇದು ಕಲಿಯುಗ. ನಾನು ನನ್ನ ಅಪ್ಪನ ಹಾಗೆ ಸುಮ್ಮನೆ ಇರಲು ಬರುತ್ತದೆಯೇ?"

"ಹಾಗಾದರೆ, ನೀವು ಶಿವಮೊಗ್ಗೆಗೆ ಹೋಗುವುದೇ ಬೇಡ. ನಾರಾಯಣ, ನಿನ್ನ ಅಣ್ಣ ಹೋದರೆ ಒಂದಕ್ಕೊಂದಾದೀತು. ಅವರ ಮನಸ್ಸಿನಲ್ಲಿ ಏನೇನು ಆಸೆಗಳಿವೆಯೋ! ನೀನು ಮದುವೆಯಾಗುವುದು ನಿನ್ನ ಸುಖಕ್ಕೆ. ನೆಟ್ಟಗೆ ಹೋಗು; ಅಲ್ಲೇ ಇರು; ಹಿಂದಕ್ಕೆ ಬರುವುದು ಮದುವೆಯಾದ ಮೇಲೆ" ಎಂದಳು, ಬಿರಿದ ಮನಸ್ಸಿನಿಂದ.

ಈ ಎಲ್ಲ ಮಾತುಗಳನ್ನು ಮುಗಿಸಿದ ಎರಡನೆಯ ದಿವಸ ಸಂಜೆಗೆ ಸಮನಾಗಿ- ನಾನು ಶಿವಮೊಗ್ಗೆಯನ್ನು ಸೇರುವಾಗ ಸಂಜೆ ಆರು ಗಂಟೆ ಆಗಿರಬಹುದು. ಅಷ್ಟರೊಳಗಾಗಿ ನನಗೊಂದು ಧೂಳಿನ ಸ್ನಾನವೂ ಆಗಿಹೋಗಿತ್ತು. ನನ್ನ ಅವತಾರವನ್ನು ನೋಡುವುದಕ್ಕೋ- ಎಂಬಂತೆ ಅನಂತರಾಯರು, ಅವರ ತಂದೆ ಸದಾಶಿವಯ್ಯನವರು ನನಗಾಗಿ ಬಸ್‌ಸ್ಟ್ಯಾಂಡಿನಲ್ಲಿ ಕಾದು ನಿಂತಿದ್ದರು. ಇಬ್ಬರೂ ನನ್ನನ್ನು ತಮ್ಮ ಮನೆಗೆ ಕರೆದೊಯ್ದು ಕುಳಿತುಕೊಳ್ಳಿಸುವುದರೊಳಗೇ "ತೃಷೆಗೆ ಏನಾಗಲಿ?" ಎಂದಾಗ, "ತೃಷೆ ಆ ಮೇಲೆ, ಮೊದಲು ಸ್ನಾನದ ಮನೆಯನ್ನು ತೋರಿಸಿ, ಮಿಂದು ಚೊಕ್ಕವಾಗುತ್ತೇನೆ" ಎಂದಂದೆ. ಅವರು 'ನೀರು ಕಾಯಿಸೋಣ' ಎಂದರೂ ಬಿಡದೆ, ಬಚ್ಚಲು ಮನೆಯನ್ನು ಹೊಕ್ಕು, ತಣ್ಣೀರಿನಲ್ಲೇ ಒಂದು ಸ್ನಾನ ಮುಗಿಸಿ, ಬಟ್ಟೆ ಬದಲಿಸಿ ಬರುವ ತನಕವೂ ನನಗೆ 'ನಾನು ಮನುಷ್ಯ' ಎಂದು ಕಾಣಿಸಲಿಲ್ಲ. ಅಷ್ಟು ಸಿದ್ಧವಾಗಿ ಬರುವುದರೊಳಗಾಗಿ, ತಮ್ಮ ಹೊಟೇಲಿನಿಂದಿರಬೇಕು, ಹತ್ತಾರು ಬಗೆಯ ತಿಂಡಿ, ತಿನಿಸುಗಳನ್ನು ನನ್ನ ಮುಂದೆ ತಂದಿರಿಸಿದರು. ನೋಡಿಯೇ ನನಗೆ ಭಯವಾಯಿತು. "ಸ್ವಾಮಿ, ಇದೊಂದೂ ಬೇಡ. ಒಂದಿಷ್ಟು ಕಾಫಿ ಕುಡಿದು ಮಲಗಿಬಿಡುತ್ತೇನೆ. ತಿಂಡಿ, ತೀರ್ಥ, ಮಾತು, ಗೀತು ಅದು ಏನಿದ್ದರೂ ಅವು ಬೆಳಗಾದ ಮೇಲೆಯೇ. ಪ್ರಯಾಣದಿಂದ ನಾನು ಸುಸ್ತಾಗಿದ್ದೇನೆ" ಎಂದೆ. ಕಾಫಿಯನ್ನು ಕುಡಿದು, ಅವರ ಒತ್ತಾಯಕ್ಕೆ ಎರಡು ಬಾಳೆ ಹಣ್ಣುಗಳನ್ನು ಕಬಳಿಸಿ, 'ನುಡಿದಂತೆ ನಡೆವಾತ' ಎಂದು ತೋರಿಸಿಕೊಂಡು, ಅಲ್ಲೇ ಹರವಿದ್ದ ಚಾಪೆಯಲ್ಲಿ ಮಲಗಿಬಿಟ್ಟೆ. ಒಂದು

ನಿದ್ರೆ ಕಳೆದು ಎಚ್ಚರವಾದಾಗ ರಾತ್ರಿ ಎಷ್ಟು ಹೊತ್ತಾಗಿತ್ತೋ ತಿಳಿಯೆ. ನನ್ನ ಹೊಟ್ಟೆ ಚುರುಕಾಗಿತ್ತು. ತಲೆಯ ಮೇಲಕ್ಕೆ ಉರಿಯುತ್ತಿತ್ತು ವಿದ್ಯುದ್ದೀಪ. ನನ್ನ ತಲೆದಿಂಬಿನ ಬಳಿ ಇರಿಸಿದ ಕಿತ್ತಳೆ ಹಣ್ಣುಗಳನ್ನು ತಿನ್ನುವುದು ಮರ್ಯಾದೆಗೆ ತೀರ ಕಡಿಮೆ ಎಂದುಕೊಂಡು, ಮುಖಕ್ಕೆ ಮುಸುಕು ಎಳೆದುಕೊಂಡು ನಾನು ನಿದ್ರೆಯ ಎರಡನೆಯ ಅಧ್ಯಾಯವನ್ನು ಪ್ರಾರಂಭಿಸಿದೆ.

ತಿರುಗಿ ಏಳುವಾಗ ಹಚ್ಚನೆ ಬೆಳಗಾಗಿತ್ತು. ಹೊರಕ್ಕೆ ಬಂದೊಡನೆಯೇ ಅನಂತರಾಯನ ಭೇಟಿಯೂ ಆಯಿತು. "ರಾತ್ರಿ ಊಟ ಮಾಡದೆ ಮಲಗಿಕೊಂಡಿರಿ; ಎಚ್ಚರಿಸುವುದಕ್ಕೆ ನಮಗೆ ದಾಕ್ಷಿಣ್ಯ. ನಿದ್ರೆಯಾದರೂ ಚೆನ್ನಾಗಿ ಬಂತೇ?" ಎಂದು ಕೇಳಿದರು. "ಹೋ, ಒಂದು ಗಡದ್ದು ನಿದ್ರೆಯಾಯಿತು. ಈಗ ಮುಖ ಗಿಖ ತೊಳೆದುಕೊಂಡು ಬಂದೆನೆಂದರೆ ಗಂಟೆಗಟ್ಟಲೆ ಮಾತನಾಡುವುದಕ್ಕೆ ಸಿದ್ಧ" ಎಂದು ಉತ್ತರಿಸಿದೆ.

ಮುಖ ಮಜ್ಜನವಾಯಿತು. ಅದನ್ನು ಮುಗಿಸಿ ಬಂದೊಡನೆಯೇ ಇಡ್ಲಿ, ಮಸಾಲೆ ದೋಸೆಗಳು ಇದಿರಿಗೆ ಬಂದುವು. ಪರಮಾಶಿ ಕಾಫಿಯೂ ಬಂದಿತು. ಅನಂತಯ್ಯ ನಗು ದೊಗದಿಂದ "ಈಗ ಅಪ್ಪ ಬರುತ್ತಾರೆ. ಈಗ ನಿಮ್ಮ ಮುಂದೆ ಕಾಫಿ, ತಿಂಡಿ ತಂದಿರಿಸಿ ಹೋದಳಲ್ಲ-ಅವಳೇ ನಿಮ್ಮ ನಾದಿನಿಯಾಗುವವಳು" ಎಂದಂದು, ತಂದೆಯನ್ನು ಕರೆಯಲು ಧಾವಿಸಿದರು. ಅಷ್ಟಕ್ಕೆ ಅವರ ತಾಯಿ ಬಂದು, "ತುಂಬ ಶ್ರಮವಾಯಿತು ನಿಮಗೆ. ಬಸ್‌ಪ್ರಯಾಣ ಕೆಲವರಿಗೆ ಒಗ್ಗುತ್ತದೆ; ಕೆಲವರಿಗೆ ಒಗ್ಗುವುದಿಲ್ಲ" ಎಂದು ಉಪಚಾರ ಮಾಡಿದರು. ತಮ್ಮ ಮನೆವಾರ್ತೆ ವಿಷಯವೆಲ್ಲ ಹೇಳಿದರು. ತಮ್ಮೆರಡು ಹೆಣ್ಣುಮಕ್ಕಳನ್ನು ಹತ್ತಿರಕ್ಕೆ ಕರೆದರು. ನಾನು ತಿಂಡಿ ಮುಗಿಸಿದ ಬಳಿಕವೇ ಅವರ ಮುಖಗಳನ್ನು ಚೆನ್ನಾಗಿ ನೋಡಿದ್ದು. ಆಗ ಅಜ್ಜಿ ಹೇಳಿದ ಮಾತು ನನ್ನ ನೆನಪಿಗೆ ಬಂದಿತು: ದೊಡ್ಡವಳು ತುಸು ಕಪ್ಪು; ಆದರೂ ಲಕ್ಷಣವಾಗಿದ್ದಾಳೆ" ಎಂಬ ಮಾತದು. ನಾನೂ ಬಾಯಿ ಉಪಚಾರಕ್ಕೆ ಹಿಂದಾಗಲಿಲ್ಲ. "ನಿಮಗೆ ಎರಡೆರಡು ಹೊರೆ. ನನ್ನದು ಒಂದೇ. ಅದನ್ನು ನಾನು ಹೊರೆಯೆಂತಲೂ ತಿಳಿದಿಲ್ಲ" ಎಂದೆ.

"ನಿನ್ನೆಯ ತನಕವೂ ಹಾಗಿದ್ದದ್ದು ಮಾತ್ರ ನಿಜ. ಈಗ ಅದರ ಭಾರ ಕಡಿಮೆಯಾಗುವ ಹಾಗೆ ಇದೆ. ಒಂದು ಕಡೆಯವರು ಅವರಾಗಿಯೇ ಬಂದು, ಈ ದೊಡ್ಡವಳನ್ನು ನೋಡಿ ಒಪ್ಪಿ ಹೋಗಿದ್ದಾರೆ. ಹುಡುಗನಿಗೆ ರಜೆ ಸಿಗುವುದಕ್ಕೆ ಮಾತ್ರ ತಿಂಗಳೆರಡು ತಿಂಗಳು ಬೇಕು ಎಂದು ಹೇಳಿದ್ದಾರೆ! ನಾವೋ! ಎಷ್ಟು ವರ್ಷಗಳು ಕಾಯಬೇಕಾಗುತ್ತದೆಯೋ- ಎಂದು ಅಂಜಿಕೊಂಡಿದ್ದೆವು."

ಸರಿ, ಅದೇ ಹೊತ್ತಿಗೆ ಸದಾಶಿವಯ್ಯನವರ ಆಗಮನವಾಯಿತು "ಒಂದು ತಪ್ಪು ಕೆಲಸ ಮಾಡಿದೆವು. ಬಂದ ನೆಂಟರನ್ನು ರಾತ್ರಿಯೆಲ್ಲ ಉಪವಾಸ ಇರಿಸುವ ಹಾಗಾಯಿತು.

ಕ್ಷಮಿಸಿ. ನೀವಿನ್ನು ಮುಂದಿನ ವಿಚಾರ ಏನೆಂದು ಹೇಳಿ. ನಾನೆನ್ನುವುದು ಇಷ್ಟೆ- ನೀವೇ ಎಲ್ಲವನ್ನೂ ಚೆನ್ನಾಗಿ ನಡೆಯಿಸಿ ಕೊಡಬೇಕು. ಈಗ ಕಿರಿಯಳಿಗೆ ಮೊದಲು ಲಗ್ನ ಮಾಡುವುದಕ್ಕೆ ಯಾವ ತೊಂದರೆಯೂ ಇಲ್ಲ. ಲಗ್ನ ಇಲ್ಲಿಯೇ ನಡೆದರೆ ನಮಗೆ ಇಷ್ಟ. ಇಲ್ಲದೆ ಹೋದರೆ, ನಿಮಗೆ ಅನುಕೂಲವಾಗುವಲ್ಲಿ. ಕೊಲ್ಲೂರು ದೇವಸ್ಥಾನ ಇದೆಯಲ್ಲ. ಅಲ್ಲಾದರೂ ಸರಿಯೇ; ಆಗಲಿ. ಮುಖ್ಯವಾಗಿ- ನೀವು ನಿಂತು, ಮಾಡಿಸಬೇಕಾದ ಕೆಲಸ. ನಾನು ನೀವು ಹೇಳಿದ ಯಾವ ಇತ್ಯರ್ಥಕ್ಕೂ ಸಿದ್ಧನೇ" ಎಂದರು.

ನನಗಿಂತಲೂ ಹಿರಿಯರಾದ ಸದಾಶಿವಯ್ಯನವರೊಡನೆ ನನ್ನ ಹೆಚ್ಚುಗಾರಿಕೆಯನ್ನು ತೋರಿಸುವುದು ಸಮನಲ್ಲ- ಎಂಬುದಾಗಿ ಅನಿಸಿತು. ಅದಕ್ಕಾಗಿ, "ಮೊದಲು ಅನಂತರಾಯರನ್ನು ಕಳುಹಿಸಿಕೊಡಿ" ಎಂದೆ. ಅವರು ಕರೆದೊಡನೆಯೇ ಒಳಗೆ ಬಂದರು. ಅವರನ್ನು ಕುಳ್ಳಿರಿಸಿಕೊಂಡು ಅಳುಕಿಲ್ಲದೆ ಹೇಳಿದೆ; "ಅನಂತಯ್ಯ, ನೀವು ನಮ್ಮ ಮನೆ ನೋಡಿದ್ದೀರಿ; ಜನ ನೋಡಿದ್ದೀರಿ. ನಾನು ನಿಮ್ಮ ತಂಗಿಯನ್ನು ನೋಡಿಯಾಯಿತು. ನಾನು ನೋಡುವ ಮೊದಲೇ ಹುಡುಗ ಅವಳನ್ನು ನೋಡಿ ಪಾಸು ಮಾಡಿದ್ದಾನೆ. ಮುಂದಕ್ಕಿರುವುದು ಕೇವಲ ಲಗ್ನದ ವಿಚಾರ. ಲಗ್ನ ಎಲ್ಲಿ ಅಂದರೆ ಅಲ್ಲಿ. ನಾರಾಯಣನಿಗೆ ಅದು ಬೇಗನೆ ಆದರೆ ಅನುಕೂಲ. ಇನ್ನು ಹದಿನೈದು ದಿನಗಳ ತನಕ ಬೇಕಷ್ಟು ಲಗ್ನಗಳಿವೆ. ನಿಮಗೆ ಅನುಕೂಲವಾದ ದಿನವನ್ನು ನೀವೇ ಆರಿಸಿ ಹೇಳಿ. ಇನ್ನು ಮುಂದಕ್ಕೆ- ನಾವು ಬೇರೆ, ನೀವು ಬೇರೆ-ಅಂತ ತಿಳಿಯಬೇಕಾಗಿಲ್ಲ" ಎಂದೆ.

"ದಿಬ್ಬಣದ ಕಡೆಯವರು ಎಷ್ಟು ಮಂದಿ ಆಗಬಹುದು?"

"ಹಾಗೋ! ನಮ್ಮ ಕುಟುಂಬ ಬಲು ಸಣ್ಣದು; ನೆಂಟರಿಷ್ಟರು ಕಡಿಮೆ; ಹೆಚ್ಚೆಂದರೆ ಬರುವವರು ಹತ್ತಿಪ್ಪತ್ತು ಜನ. ನಮ್ಮ ಅಜ್ಜಿ ಮಾತ್ರ ಎಲ್ಲಿಗೂ ಹೊರಡುವವರಲ್ಲ."

"ಅಜ್ಜಿ ಬರುವುದಿಲ್ಲವೇ? ಅವರು ನಿಮ್ಮ ಮನೆಗೇ ದೊಡ್ಡವರು. ನನಗೆ ಯಾಕೋ ಅವರನ್ನು ಕಂಡು ತುಂಬ ಗೌರವ. ಅವರು ಬಂದೇ ತೀರಬೇಕು. ಅವರು ಇದ್ದೇ ಎಲ್ಲವೂ ಆಗಬೇಕು. ನೋಡಿ, ನಮ್ಮ ಅಪ್ಪಯ್ಯನ ಯೋಚನೆ ಹೀಗೆ- ಅವರಿಗೆ ಆಡಂಬರ ಬೇಕಿಲ್ಲ. ನಾವು ಖರ್ಚು ಮಾಡುವುದೇನು ಇದ್ದರೂ, ಅದು ಡೌಲು, ದುಂದಿಗಾಗಿ ಅಲ್ಲ. ಆದಷ್ಟು ಹೆಚ್ಚಿನ ಪ್ರಯೋಜನ ಮಗಳಿಗೂ, ಅಳಿಯನಿಗೂ ಸಿಗಬೇಕು- ಎಂಬುದು ಅವರ ಅಪೇಕ್ಷೆ. ನಮ್ಮ ಮೂಲದ ಊರು ಹಗಲೂರಷ್ಟೆ. ಇಷ್ಟದೇವತೆ ಮೂಕಾಂಬಿಕೆ. ಆ ದೇವಿಯ ಮುಂದೆ ಇದೊಂದು ಒಳ್ಳೆಯ ಕೆಲಸ ನಡೆಯಲಿ ಎಂಬಾಸೆ. ಅವರ ಮನಸ್ಸಿನಲ್ಲಿಯೂ ನಿಮ್ಮ ಅಜ್ಜಮ್ಮ ಬರಬಹುದಾದ ಯಾವ ಸ್ಥಳವೂ ಒಪ್ಪಿಗೆ. ಅವರಿಗೆ ಕೊಲ್ಲೂರು ಸಹ ದೂರ ಎನಿಸಿದರೆ, ನಿಮ್ಮ ಊರಿಗೆ ಬರುವುದಕ್ಕೂ ನಮ್ಮ ಅಡ್ಡಿಯಿಲ್ಲ."

"ಛೀ, ಛೀ, ಅದು ಬೇಡ."

ಹೀಗೆಂದು ಯಾವತ್ತು ಸಮಾಚಾರಗಳನ್ನು ತಂದೆಗೆ ತಿಳಿಸಿದರು. ಅನಂತರ ಎಲ್ಲರೂ ಕೂಡಿ, ಕುಳಿತು, ದಿನ ನಿಶ್ಚಯ ಮಾಡಿದೆವು. ಸ್ಥಳ ಕೊಲ್ಲೂರೆಂದೇ ಗೊತ್ತಾಯಿತು. ಅಜ್ಜಿಯನ್ನು ಹೇಗಾದರೂ ಪುಸಲಾಯಿಸಿ ಹೊರಡಿಸಬಹುದೆಂಬ ಆಸೆ ನನ್ನಲ್ಲೂ ಉಂಟಾಯಿತು. ಚಿನ್ನಾಭರಣಗಳ ಚರ್ಚೆಗೆ ನಾನು ಹೋಗಲಿಲ್ಲ. ಅವರಾಗಿಯೇ ಇಂತಿಂಥದನ್ನು ಹಾಕುತ್ತೇವೆ- ಎಂದರು. ನಾವು ಇಂಥದನ್ನೇ ತರಬೇಕೆಂದು ಅವರೂ ಒತ್ತಾಯಿಸಲಿಲ್ಲ. ಮರುದಿನವೇ ನಾನು ಆ ಊರನ್ನು ಬಿಡಬಹುದಿತ್ತು. ಆದರೆ ಅವರು ಒಡಂಬಡಲಿಲ್ಲ; ನನ್ನನ್ನು ಅಲ್ಲೇ ಕುಳ್ಳಿರಿಸಿಕೊಂಡರು. ಉಪಚಾರದ ಸವಿ ತೋರಿಸಿದರು. ಇಬ್ಬರ ಹೆಸರಲ್ಲೂ ಲಗ್ನಪತ್ರಿಕೆ ಮುದ್ರಿಸಿ, ಕೈಗೆ ಕೊಟ್ಟು, ಎರಡು ದಿನಗಳ ಬಳಿಕ ಕಳುಹಿಸಿಕೊಟ್ಟರು. ನಾನು ಊರಿಗೆ ಧಾವಿಸಿ ಬಂದೆ. ಸೀತೆ ಆತುರದಿಂದ ಹೊರಕ್ಕೆ ಬಂದಾಗ, ಓದಲು ಬಾರದ ಅವಳ ಕೈಗೆ ಲಗ್ನಪತ್ರಿಕೆಯನ್ನು ಕೊಟ್ಟು ನಾನು ಅಜ್ಜಿಯನ್ನು ಹುಡುಕಿಕೊಂಡು ಹೋದೆ. ಬಾವಿಕಟ್ಟೆಯ ಬಳಿಯಲ್ಲಿ ಒಂದು ದಂಡೆಯ ಮೇಲೆ ಅವರು ಕುಳಿತುಕೊಂಡಿದ್ದರು. "ಅಜ್ಜಿ, ನಿಮ್ಮ ಹರಸಿಕೆಯಿಂದ ಎಲ್ಲವನ್ನೂ ಗೊತ್ತುಮಾಡಿಕೊಂಡು ಬಂದೆ. ಏನೂ ತೊಂದರೆಯಾಗಲಿಲ್ಲ" ಎಂದೆ.

"ಇದು ಮಗ, ನನ್ನ ಹರಸಿಕೆಯೂ ಅಲ್ಲ; ನಿನ್ನದೂ ಅಲ್ಲ. ನಿನ್ನ ಬೀಗರು ಮೂಕಾಂಬಿಕೆಯ ಭಕ್ತರು. ಅವಳು ನಡೆಯಿಸಿದಳು- ಎಂತ ತಿಳಿ."

"ಕೊಲ್ಲೂರಲ್ಲೇ ಮದುವೆ! ಅಲ್ಲಿಗೇ ಅವರೂ ಬರುವುದು; ನಾವೂ ಹೋಗುವುದು. ದಿನ ಇಂಥದು..." ಎಂದೆ.

"ನಿನ್ನ ನಾರಾಯಣನಿಗೆ ಹೇಗೆ ಎನಿಸುತ್ತದೋ. ಹೇಳು ಅವನಿಗೆ, ಅವನ ಶಿವದೊಗ್ಗದ ದೋಸ್ತಿಗಳನ್ನು ಇಲ್ಲಿಗೆ ಕರೆಯಿಸಲಿ. ದಿಬ್ಬಣಕ್ಕೆ ಅವರೂ ಬರಲಿ. ನನ್ನ ಬೆನ್ನುಕೋಲು ಗಟ್ಟಿಯಿದ್ದರೆ ನಾನೂ ಬಂದೇನು."

ನಾನು ಅಂಜಿ "ಅಜ್ಜಿ, ಆ ದಿನ ಅನಂತರಾಯರು ನೀವಿದ್ದೇ ಮದುವೆ ಆಗಬೇಕು- ಎಂಬ ಹಟಹಿಡಿದರು" ಎಂದೆ.

"ಅವನೋ! ಅವನೊಂದು ಮರುಳ! ನಾನೊಂದು ಒಣ ಕೊರಡು; ನನ್ನದೇನು ಹೆಚ್ಚು ಇದರಲ್ಲಿ?" ಎಂದರು.

# ಅಧ್ಯಾಯ 7

ನಾನು ನನ್ನ ಕಿರಿಯ ತಮ್ಮನ ಮದುವೆಯ ವಿಚಾರವನ್ನು ಇನ್ನಷ್ಟು ಬೆಳೆಯಿಸಿದ್ದಾದರೆ, ಇಷ್ಟೆಲ್ಲ ಹೇಳಿದ್ದು ಅದಕ್ಕಾಗಿಯೇ ಇರಬಹುದು- ಎಂಬ ಅನುಮಾನ ಯಾರಿಗಾದರೂ ಬಂದೀತು. ಆದುದರಿಂದ- ಮದುವೆ ಮುಗಿಯಿತು, ಚಂದವಾಗಿಯೇ ನಡೆಯಿತು- ಎಂದು ಹೇಳುವ ಆಸೆ ನನಗೆ. ಹಾಗೆ ಚುಟುಕಾಗಿ ಹೇಳಿ ಮುಗಿಸಿದರೂ ಕಷ್ಟವೇ; ನನ್ನ ಹೆಂಡತಿ ಸೀತೆಗೆ ಅಸಮಾಧಾನವಾದೀತು. ಮದುವೆಯಲ್ಲಿ ಅವಳ ಪಾತ್ರ ದೊಡ್ಡದಿತ್ತು. ಅವಳು ಒಂದಿಷ್ಟು ಹೆಚ್ಚಾಗಿಯೇ ಮೆರೆದಳು, ಸಂತೋಷಪಟ್ಟಳು. ಅದೆಲ್ಲ ಸರಿಯೇ, ಪ್ರಕೃತ ನನಗೆ ಮುಖ್ಯವಾಗಿ ಕಾಣಿಸುವ ಸಂಗತಿ ಎಂದರೆ- ನನ್ನ ಸಂಶೋಧನೆಗೆ ತತ್ಕಾಲಕ್ಕೆ ವಿಘ್ನ ಬಂದದ್ದು. ಅದರಲ್ಲಿಯೇ ಇನ್ನೊಂದು ಸಮಾಧಾನವೆಂದರೆ- ಬಹಳ ದಿನಗಳಿಂದಲೂ ಊರನ್ನು ಬಿಡದ ನಮ್ಮ ಅಜ್ಜಿ ಕೊಲ್ಲೂರಿಗೆ ಹೋಗಿ, ಆ ಮದುವೆಗೆ ಸಾಕ್ಷಿಯಾದದ್ದು; ಅನಂತ ರಾಯರ ಅಪೇಕ್ಷೆಯನ್ನು ಪೂರೈಸಿದ್ದು. ಮನೆಯಿಂದ ಸ್ವಲ್ಪ ದೂರ ಒರಟು ದಾರಿಯಲ್ಲಿ ನಡೆದು ಹೋಗಿ, ಮುಂದೊಂದು ರೋಟನ್ನು ಸೇರಿ, ಬಳಿಕ ರಾಜರಸ್ತೆಯಲ್ಲಿ ಕೊಲ್ಲೂರಿಗೆ ಹೋದೆವು. ರೋಟು ಮತ್ತು ರೋಡಿನ ಪಯಣ ಎತ್ತಿನಬಂಡಿಯಲ್ಲಿ. ಮರು ಪಯಣವೂ ಹಾಗೆಯೇ, ಹೊರಡುವಾಗ ನಾನು ಅಜ್ಜಿಯ ಜತೆಯಲ್ಲಿಯೇ ಇದ್ದೆ. ಅವರಿಗೆ ಮನೆ ಬಿಡಲು ಉದಾಸೀನ. "ನಾನು ಯಾಕೆ ಮಗು? ನನ್ನ ಮನಸ್ಸು ಅಲ್ಲಿದೆ ಎಂದು ತಿಳಿ" ಎಂದರು. "ಹಾಗಲ್ಲ, ಅಜ್ಜಿ" ಎಂದು ಸಾಕಷ್ಟು ರಾಗಮಾಡಿ, ಮನಸ್ಸು ಒಡಂಬಡಿಸಿ ಮನೆಯಿಂದ ಹೊರಡಿಸಿದೆ. ಹರದಾರಿ ದೂರದ ಕಾಲು ದಾರಿಯನ್ನು ತುಳಿದದ್ದಾದರೆ- ಮುಂದೆ ಹೇಗೂ ಗಾಡಿ ದಾರಿಯಿದೆ- ಎನಿಸಿತು. ಅವರಿಂದ ನಡೆಯುವುದು ಸಾಧ್ಯವೇ- ಎಂಬ ಭೀತಿ ನನಗೆ. ಒಂದಿಷ್ಟೂ ಏಗದೆ "ಅಯ್ಯಪ್ಪ" ಎಂದು ಉಸಿರೆತ್ತದೆ, ನಡೆದುದನ್ನು ಕಂಡಾಗ "ನಮ್ಮಜ್ಜಿ ಚಿಂತೆಯಿಲ್ಲ; ಹುಣಿಸೆ ಕೊರಡಿನ ಹಾಗೆ ಜೀವ" ಎನಿಸಿತು.

ನಾನು ಅಷ್ಟರಿಂದಲೇ ನನ್ನ ಮನಸ್ಸಿನಲ್ಲಿ ಬೇಳೆ ಬೇಯಿಸತೊಡಗಿದೆ. ಈ ಬೇಸಗೆಯಲ್ಲಿ ಇನ್ನು ತಿರುಗಾಟಕ್ಕೆ ಸಮಯ ಸಿಗಲಾರದು. ಮಳೆಗಾಲ ಕಳೆದ ಮೇಲಾದರೂ ಅವರನ್ನು ಪುಸಲಾಯಿಸಿ, ನಮ್ಮೂರಿನ ಗುಡ್ಡಗಾಡನ್ನು ಸುತ್ತಿಸಿ, ಒಂದೊಂದು ಹಾಳು ಗುಡಿಯನ್ನೂ ಅವರಿಗೆ ತೋರಿಸಿ, ಅವರಿಗೆ ಕಾಣಿಸಬಹುದಾದ ಯಾವತ್ತೂ ಹಗಲುಗನಸುಗಳಿಗೆ ಪಾಲುಗಾರನಾಗುವ ಆಸೆ ನನ್ನಲ್ಲಿ ತಲೆದೋರಿತು. ಸಾಧ್ಯವಾದರೆ, ನಾಗನಕಾಲು ಬರೆಗೂ

ಕರೆದೊಯ್ದು ಅಲ್ಲಿನ ಮಾಟೆಗಳನ್ನು ತೋರಿಸಿ, ಪುರಾತನ ಕಾಲದವರ ಜೀವನವನ್ನು ಇನ್ನೊಮ್ಮೆ ಕಣ್ಣಿಗೆ ಕಟ್ಟಿಸಿಕೊಳ್ಳಬೇಕು- ಎಂಬ ಆಸೆಯೂ ಕುಡಿಯೊಡೆಯಿತು.

ಇಷ್ಟನ್ನು ಹೇಳುವಾಗ, ಯಾರಿಗಾದರೂ ನನ್ನ ಮಂಕು ಬುದ್ಧಿಯ ವಿಚಾರದಲ್ಲಿ ಸಂಶಯ ಹುಟ್ಟಲೂಬಹುದು, "ಅಜ್ಜಿಯ ಹುಚ್ಚು ಕನಸುಗಳನ್ನು ಈತ ನಂಬುತ್ತಾನಲ್ಲ" ಎಂದು. ಕವಡೆ ಇರಿಸಿ, ಫಲ ಹೇಳುವುದನ್ನು ಕೆಲವರು ನಂಬುತ್ತಾರೆ. ಜಾತಕ ತೋರಿಸಿ, ಹೇಳುವ ಗ್ರಹಫಲಗಳನ್ನೆಲ್ಲ ಹಲವರು ನಂಬುತ್ತಾರೆ; ಸಾಮುದ್ರಿಕರಿಗೆ ಅಂಗೈ ತೋರಿಸಿ ಬೇಕಷ್ಟು ಅವಲಕ್ಷಣಗಳನ್ನು ಕೇಳಿ, ಜೊಲ್ಲು ಸುರಿಸುತ್ತಾರೆ ಉಳಿದವರು. ಇನ್ನು ಕೆಲವರೋ! ಸಂತೆಗೆ ತಂದ ಹಕ್ಕಿಗಳಿಂದ ಶಕುನ ಹೇಳಿಸಿ ಸಮಾಧಾನ ತಾಳುತ್ತಾರೆ. ಇಷ್ಟೆಲ್ಲ ಪ್ರಸಂಗಗಳಲ್ಲೂ "ಹಿಂದೆ ಹೀಗಾಗಿತ್ತು; ಮುಂದೆ ಹೀಗಾಗುತ್ತದೆ" ಎಂದು ತಿಳಿಸುತ್ತಾರೆ. ಹಿಂದೆ ಆದುದರಲ್ಲಿ ಶೇಕಡ 50 ರಷ್ಟು ಸತ್ಯ ಕಾಣಿಸಿದರೆ, ಮುಂದಿನ ಭವಿಷ್ಯ ಅದರ ದುಪ್ಪಟ್ಟು ಸತ್ಯ ಎಂಬುದಾಗಿ ತಿಳಿಯುತ್ತಾರೆ. ಹೇಳಿದ್ದೆಲ್ಲವನ್ನೂ ಬರೆದಿಟ್ಟುಕೊಂಡು, ಒಂದು ಇಪ್ಪತ್ತು ವರ್ಷ ಕಾಲ ಕಾದು ನೋಡಿದರೆ- ಅಂಥವರಿಗೆ... ಬಹುಮಟ್ಟಿನ ವಿಷಯಗಳು ಹೇಳಿದಂತೆ ನಡೆಯಲಿಲ್ಲ- ಎಂಬುದು ಮನವರಿಕೆ ಆದೀತು.

ಭವಿಷ್ಯ ಹಾಗಾದರೂ, ಭೂತಕಾಲ ಹಾಗಲ್ಲವಲ್ಲ. ನಮ್ಮ ಅನುಭವದಿಂದ ಕೇಳಿದ್ದನ್ನು- ಅದು ನಡೆದಿತ್ತೋ ಅಥವಾ ಇಲ್ಲವೋ- ಎಂಬುದನ್ನು ಸ್ಪಷ್ಟವಾಗಿ ತೀರ್ಮಾನಿಸಬಹುದು. ಅದರಲ್ಲಿ ನಾಲ್ಕಾರು ತುಣುಕು ಸತ್ಯ ಹೊರಬಿದ್ದಿತಾದರೆ, ಭವಿಷ್ಯದ ನಮ್ಮ ನಂಬಿಕೆ ಚಿಗುರೊಡೆದು ಮರವಾಗುತ್ತದೆ. ಆ ಲೆಕ್ಕಾಚಾರದಲ್ಲಿ ನಮ್ಮ ಅಜ್ಜಿ ಹೇಳಿದ ವಿಷಯಗಳೆಲ್ಲವೂ ನಡೆದವೋ ಎಂದು ಖಾತ್ರಿಪಡಿಸಿಕೊಳ್ಳುವ ದಾರಿ ಯಾವುದೂ ಇರಲಿಲ್ಲ. ನಡೆಯಲಿಲ್ಲ ಅನ್ನಲೇ? ಅವರು ಹೇಳಿದಂಥ ವಿಷಯಗಳು ಹೆಚ್ಚು ಕಡಿಮೆ ಅದೇ ರೀತಿ ಹಿಂದಿನ ಒಂದಲ್ಲ ಒಂದು ಕಾಲದಲ್ಲಿ, ಒಂದಲ್ಲ ಒಂದು ಊರಿನಲ್ಲಿ ನಡೆದಿತ್ತು- ಎಂದು ಪ್ರಾಚ್ಯಶಾಸ್ತ್ರ ತಿಳಿಸಿಕೊಡುತ್ತದೆ. ನಾನು ಅವುಗಳನ್ನು ನಿಜ ಎಂದು ಎಣಿಸುತ್ತ ಬಂದಿದ್ದೇನೆ. ಮುಂದೆ ಮತ್ತಷ್ಟು ತಿಳಿಯುವುದಕ್ಕಾಗಿ ಹಂಬಲಿಸುತ್ತಿದ್ದೇನೆ.

ಅಷ್ಟೊಂದು ನಂಬಿಕೆ, ಎಲ್ಲರಿಗೂ ಅರಳುಮರುಳಾಗಿ ಕಾಣಿಸುವ ನಮ್ಮ ಅಜ್ಜಿಯ ಮಾತಿನಲ್ಲಿ ನನಗೆ ಉಂಟಾಗಿದ್ದರೆ- ಕ್ಷಮಿಸಿ. ಅಜ್ಜಿಯ ಮೊಮ್ಮಗ ನಾನು; ಕುಲದ ಗುಣದೋಷಗಳೆಲ್ಲ ನನ್ನಲ್ಲಿಯೂ ಇಳಿದು ಬಂದಿರಬೇಕು. ಪ್ರತಿಯೊಬ್ಬರಲ್ಲೂ- ಅವರವರ ಹಿಂದಣ ತಲೆಮಾರಿನವರ ಕತೆ ಕೇಳುತ್ತ ಹೋದರೆ, ಆ ಪೂರ್ವಪಿತೃಗಳಲ್ಲಿ ಒಬ್ಬರಲ್ಲ ಒಬ್ಬರು ಸ್ವಲ್ಪವಾಗಲೀ, ಇಡಿಯಾಗಲೀ ಬುದ್ಧಿ ದುರಸ್ತಿಯಿಲ್ಲದವರಾಗಿ ಕಾಣಿಸಿಯೇ ಕಾಣಿಸುತ್ತಾರೆ. ಆದರೂ, ನಮ್ಮ ನಮ್ಮ ಮರುಳು ನಮನಮಗೆ ಕಾಣಿಸುವುದಿಲ್ಲ. ನಮಗೆ

ನಾವು ಸದಾ ಬುದ್ಧಿವಂತರಾಗಿಯೇ ಕಾಣಿಸುತ್ತೇವೆ. ನಮ್ಮ ವಾದವನ್ನು ಒಪ್ಪದವರಿಗೆ 'ಒಂದು ಸುತ್ತು ಸಡಿಲು' ಎಂದು ಗೋಚರವಾಗುತ್ತದೆ. ಸಾಕು, ಇಷ್ಟು ಪೀಠಿಕೆ.

ಕೊಲ್ಲೂರಿಗೆ ಅಜ್ಜಿಯನ್ನು ಕರೆದೊಯ್ದುದ್ದರಿಂದ ನನಗೆ ಒಂದು ಲಾಭವಾಯಿತು. ಮದುವೆಯ ಊಟ ಗಡದ್ದಾಗಿತ್ತು; ಮದುವೆಯ ಮಾಟ ಭರ್ಜರಿಯಾಗಿತ್ತು. ಆ ಯಾವತ್ತು ಕೆಲಸಗಳು ಮುಗಿದ ಮೇಲೆ, ರಾತ್ರಿ ಹರಿದು, ಬೆಳಗಿನ ಜಾವಕ್ಕೆ ಗಾಡಿ ಕಟ್ಟಿಸುವ ತನಕವೂ ಯಾರಿಗೂ ಏನೂ ಕೆಲಸವಿರಲಿಲ್ಲ. ಆ ಸಂಜೆ ಅಥವಾ ಕತ್ತಲು ಕಾಲಿರಿಸುವ ದೊದಲು ನಾರಾಯಣ ತನ್ನ ಹೊಸ ಹೆಂಡತಿಯನ್ನು ಕರೆದುಕೊಂಡು, ಮೂರು ಗೇಣು ಉದ್ದದ ಕೊಲ್ಲೂರು ಪೇಟೆಯ ಹಾದಿಯಲ್ಲಿ ವಾಕಿಂಗಿಗೆ ಹೊರಟ. ಮದುಮಗಳ ಮೇಲೆ ಅಷ್ಟೆಲ್ಲ ಚಿನ್ನಾಭರಣ ಹೊರಿಸಿರುತ್ತ ತಿರುಗಾಟಕ್ಕೆ ಹೊರಡುವವರುಂಟೇ- ಎಂದು ಹುಡುಗಿಯ ತಾಯಿಗೆ ಅನಿಸಿರಬೇಕು. ನನ್ನ ಸೀತೆಗೆ, ಈ ಹೊಸ ತಂಗಿ, ಇಂಗ್ಲೀಷ್ ಕಲಿತ ಮಾತ್ರಕ್ಕೆ "ಇಷ್ಟು ನಾಚಿಕೆಬಿಟ್ಟು ವಾಕಿಂಗಿಗೆ ಹೊರಟಳಲ್ಲ" ಎಂದು ಅನಿಸಿರಬಹುದು. ನಮ್ಮಿಬ್ಬರು ಮಕ್ಕಳು ಎಲ್ಲೋ ಚೆಲ್ಲಾಪಿಲ್ಲಿಯಾಗಿದ್ದುವು. ನಾನು ಅವರ ಸಮಯ ಕಾದು ಅಜ್ಜಿಯ ಸಮೀಪಕ್ಕೆ ಹೋದೆ. "ದೇವಸ್ಥಾನದ ಹೊರ ಚಾವಡಿಯಲ್ಲಿ ಕುಳಿತು ಮಾತನಾಡಲು ಬಲು ಪಸಂದ" ಎಂದು ಪ್ರೇರಿಸಿದೆ. ಆ ಮದುವೆಯ ಗದ್ದಲದಲ್ಲಿ, ಅವರು ಹಿರಿಯರೆಂಬುದರಿಂದ, ಹತ್ತು ಮಂದಿ ಬಂದು ಅಭಿವಾದಿಸಿ ಹೋಗಿದ್ದರು; ಮದುವೆಯ ಸ್ವಲ್ಪ ಹೊತ್ತು, ಉಪಚಾರ ಮಾಡಿದರು. ಆಮೇಲೆ ಯಾರೊಬ್ಬರೂ ಬಂದು ಮೂಸಿದವರಿಲ್ಲ. ಹಾಗಾಗಿ, ನಾನು ಕರೆದೊಡನೆಯೇ ಅವರು ಎದ್ದರು. ಅವರನ್ನು ಕೈಹಿಡಿದುಕೊಂಡು ಒಂದಿಷ್ಟು ದೂರ ನಡೆದು ಅಲ್ಲಿನ ಚಾವಡಿಯ ಮೇಲೆ ಹೋಗಿ ಕುಳಿತುಕೊಂಡೆ. ನಮ್ಮೆದುರಿಗೆ ತುಸು ದೂರದ ಮತ್ತೊಂದು ಚಾವಡಿಯಲ್ಲಿ ಆರೆಂಟು ಮಂದಿ ಮಲೆಯಾಳಿ ಯಾತ್ರಿಕರು ಕುಳಿತದ್ದು ಕಾಣಿಸುತ್ತಿತ್ತು. ಮಾತಿಗೊಂದು ವಿಷಯ ಬೇಕು- ಎಂಬುದರಿಂದ ನಾನು ಅಜ್ಜಿಯೊಡನೆ "ಅಜ್ಜಿ, ನಿಮ್ಮ ಹೆಸರು ಮೂಕಾಂಬಿಕೆಯಲ್ಲವೇ?" ಎಂದೆ.

"ಈ ದೇವರ ನೆನಪಿಗೇ ಇರಿಸಿದ್ದು."

"ಬೇರೆ ಎಲ್ಲಿಯೂ ಅಮ್ಮನವರಿಗೆ ಮೂಕಾಂಬಿಕೆ ಅಂತ ಹೆಸರಿದ್ದುದನ್ನು ಕಾಣೆ. ಏನು, 'ಅವಳು ಮಾತನಾಡದ ಮೂಕಿಯೆಂತಲೇ? ಅಮ್ಮನವರು- ಅಂದರೆ ದುರ್ಗೆ,ಕಾಳಿ, ಚಂಡಿ, ಚಾಮುಂಡಿ ಎಂದು- ಯಾವಾವುವೋ ನೆನಪು ಹುಟ್ಟುತ್ತದೆ. ಅವಳು ಉಗ್ರ ದೇವತೆಯಲ್ಲವೇ?"

"ನಾವು ಎಣಿಸಿದ ರೂಪ ಅವಳಿಗೆ. ಚಂಡಿ, ಕಾಳಿ, ದುರ್ಗೆ- ಅಂದರೆ ಉಗ್ರದೇವತೆ. ದುಷ್ಟರನ್ನು ನಾಶ ಮಾಡುವವಳು ಅವಳು ಅಂತ. ಮಹಿಷಾಸುರ ಮರ್ದಿನಿ ಎಂದರೂ

ಅವಳೇ. ಹಿಂದೆ ಮಹಿಷ ಎಂಬ ರಾಕ್ಷಸನನ್ನು ಕೊಂದಳಂತೆ. ಹಾಗೆಯೇ, ಇವಳು ಮೂಕಾಸುರನನ್ನು ಕೊಂದಳು- ಅಂತ."

"ಹಾಗೋ? ಹಾಗೆಂದರೆ ಇವಳೇ ಮೂಕಿಯಲ್ಲ. ಹಿಂದೆ ಈ ಕೊಲ್ಲೂರು ಕಾಡಿನಲ್ಲಿ ಮೂಕಾಸುರ ಎಂಬ ರಾಕ್ಷಸ ಇದ್ದ ಎಂದು ಲೆಕ್ಕವಲ್ಲವೇ?"

"ಅಂತ ಲೆಕ್ಕ; ಮಹಿಷಾಸುರ ಇದ್ದ ಹಾಗೆಯೇ."

"ಹಾಗೆ ಇರಲಿಲ್ಲ ಅಂತೀರಾ? ದೇವರು ಅವತಾರ ಮಾಡಿದ್ದು, ದುಷ್ಟರನ್ನು ನಾಶ ಮಾಡಿದ್ದು ಸುಳ್ಳು ಅಂತಲೇ?"

"ನಿನಗೆ ಹೇಗೆ ಕಾಣಿಸುತ್ತದೆ?" ಎಂದು ಅವರು ನನಗೆ ಇದಿರು ಪ್ರಶ್ನೆ ಹಾಕಿದಾಗ ಸ್ವಲ್ಪ ಕಕ್ಕಾಬಿಕ್ಕಿಯಾಯಿತು. ಆದರೂ ಸೋಲಬಾರದಷ್ಟೆ! "ನನಗೆ ತಿಳಿಯದ ವಿಚಾರ: ಹಿಂದಿಂದ ಹೇಳುತ್ತ ಬಂದಿದ್ದಾರೆ; ಜನ ನಂಬುತ್ತ ಬಂದಿದ್ದಾರೆ. ನಾನೂ ಎಲ್ಲರ ಹಾಗೆ'ಇರಬಹುದು' ಅಂದುಕೊಂಡಿದ್ದೇನೆ. ದುಷ್ಟರು ಹೆಚ್ಚಿದಾಗ, ಯಾರಾದರೂ ಒಬ್ಬರು ಬಂದು ಸಂಹರಿಸಲೇಬೇಕಲ್ಲ. ಮತ್ಸ್ಯ, ಕೂರ್ಮ, ವರಾಹ... ರಾಮ, ಕೃಷ್ಣ... ಹಾಗೆಲ್ಲ ಸಾಲಾ ಸಾಲು ಎತ್ತಿದನಲ್ಲ ವಿಷ್ಣು ಅವತಾರಗಳನ್ನು. ಹಾಗೆ ಶಿವನೂ ಎತ್ತಿರಬೇಕು; ಪಾರ್ವತಿಯೂ ಎತ್ತಿರಬೇಕು" ಎಂದೆ.

"ಏನೋ ಅಪ್ಪ, ನನಗೆ ಅದು ಒಂದಕ್ಕೂ ಅರ್ಥ ಕಾಣುವುದಿಲ್ಲ."

"ಅಂದರೆ?"

"ಈ ಎಲ್ಲ ಅವತಾರಕ್ಕೆ."

"ಯಾಕೆ?"

"ದುಷ್ಟರ ನಾಶಕ್ಕೆ ದೇವರು ಅವತಾರಗಳನ್ನು ಎತ್ತಬೇಕೇ? ಒಂದು ಮರ ದೊಡ್ಡದೋ, ಎಲೆಯೋ?"

"ಮರ."

ಒಂದು ಎಲೆ ಉದುರಿಸಿಕೊಳ್ಳಲಿಕ್ಕೆ ಮರಕ್ಕೆ ಮರವೇ ಕುಣಿದಾಡುವುದನ್ನು ಕಂಡಿದ್ದೀಯಾ! ಅಲ್ಲದೆ ಹೋದರೂ, ನೋಡು ಮಗು, ಈ ಪಾಟಿ ಅವತಾರ ಯಾಕೆ ಅನ್ನುತ್ತೇನೆ? ಅವನಿಗೆ ಬೇರೆ ಕೆಲಸವೇ ಇಲ್ಲವೆಂತಲೇ? ದೇವರು ಎಷ್ಟು ಮಂದಿ? ಇದ್ದಾನಾದರೆ ಲೋಕಕ್ಕೆಲ್ಲ ಒಬ್ಬ ಸಾಲದೋ."

"ಒಬ್ಬನೇ ದೇವರು ಇರುವುದು; ಆದರೂ ವಿಪ್ರರು 'ಬಹುಧಾ ವದಂತಿ' ಎನ್ನುತ್ತಾರಲ್ಲ."

"ವಿಪ್ರರು ಅಂದುಕೊಳ್ಳಲಿ; ಬಾಧಕವಿಲ್ಲ. ಜನ ಏನೂ ಅನ್ನಲಿ. ಒಬ್ಬ ದೇವರು ಅವತಾರವನ್ನೆತ್ತುವುದೇ ಮಸ್ತಾಯಿತು. ಅದನ್ನು ಬಿಟ್ಟು, ವಿಷ್ಣುವೂ ಅವತಾರ ಹೊರಡಿಸುವುದೇ, ಶಿವನೂ ಹೊರಡಿಸುವುದೇ, ದುರ್ಗೆಯೂ ಹೊರಡಿಸುವುದೇ, ಪುಣ್ಯಕ್ಕೆ ಬ್ರಹ್ಮನಿಂದ ಹೆಚ್ಚು ಗಲಾಟೆಯಿಲ್ಲ. ಈ ಲೆಕ್ಕಾಚಾರದಲ್ಲಿ ನಮ್ಮ ತಲೆಗೆ ಬಂದಷ್ಟು ದೇವರು, ತಲೆಗೆ ಹಿಡಿಸಿದಷ್ಟು ಅವತಾರಗಳು ಎಂದಾಗುತ್ತದೆ. "

"ಮತ್ತೂ ನೋಡು, ಅವನೇ ಹುಟ್ಟಿಸಿದಂಥ ಒಂದು ಹುಳುವನ್ನು ಕೊಲ್ಲಲಿಕ್ಕೆ ಒಂದು ಅವತಾರ ಬೇಕೋ? ಎಷ್ಟು ಕೆಟ್ಟ ಮನುಷ್ಯನೇ ಇರಲಿ ಅಥವಾ ರಾಕ್ಷಸನೇ ಇರಲಿ- ದೇವರ ಮುಂದೆ ಒಂದು ಹುಳು; ಅದಕ್ಕಿಂತಲೂ ಕಡಿಮೆ; ಆ ಹುಳುವನ್ನು ಕೊಲ್ಲುವುದಕ್ಕೆ ಅವತಾರವೇ? ರಾವಣನನ್ನು ಕೊಲ್ಲುವುದಕ್ಕೆ ರಾಮನ ಅವತಾರ ಎಂದಿಟ್ಟುಕೊ. ದುಷ್ಟರ ಉಪದ್ರ ಶುರುವಾಯಿತು-ಎಂದು ದೂರು ಬಂದದ್ದು ಯಾವಾಗ? ಇವನು ದಶರಥರಾಯನ ಹೊಟ್ಟೆಯಲ್ಲಿ ಹುಟ್ಟಿ, ಹದಿನಾರೋ ಹದಿನೆಂಟೋ ವರ್ಷ ಕಾಲ ಬೆಳೆದು ಮತ್ತೂ ಹದಿನಾಲ್ಕು ವರ್ಷಕಾಲ ವನವಾಸ ಮಾಡಿ, ರಾವಣನನ್ನು ಕೊಲ್ಲುತ್ತಾನೆ. 'ರಾವಣನ ದುಷ್ಟತನ ಹೆಚ್ಚಾಯಿತು' ಎಂದು ದೂರುಕೊಟ್ಟರೆ ಥಟ್ಟನೆ ಹೊರಟ, ಕೊಂದ, ಬಂದ. ಮೂವತ್ತೆರಡು ವರ್ಷ ಕಾಲ ಸಿಕ್ಕಿದ ಅನ್ಯಾಯ ಮಾಡಲಿಕ್ಕೆ ಅವನಿಗೆ ಪುರುಸೊತ್ತು ಕೊಡಬೇಕೇ? ಅಲ್ಲಿಯ ವರೆಗೆ, ಅವನನ್ನು ನಂಬಿದ ಶಿಷ್ಯರ ಗತಿಯೇನು? ಇದಂತು ನನ್ನ ಬುದ್ಧಿಗೆ ಯದ್ವಾತದ್ವಾ ಆಗಿ ಕಾಣಿಸುತ್ತದೆ."

"ಅಲ್ಲದೆ ಮಗು, ಅವನು ಯಾರನ್ನು ನಾಶ ಮಾಡಲಿಕ್ಕಾದರೂ ಈ ಮನುಷ್ಯರೂಪವನ್ನೋ ಮತ್ತೊಂದನ್ನೋ ತಾಳಬೇಕು ಯಾಕೆ? ಒಂದು ಸಿಡಿಲನ್ನೆರಗಿಸಿದರೆ ಬೇಕಾದ್ದನ್ನು ಸುಡಬಹುದು. ಅದಕ್ಕೆ ಅವತಾರದ ನಾಟಕ ಬೇಕೋ?"

"ಹಾಗಿದ್ದರೆ, ಇಷ್ಟೆಲ್ಲ ದೇವರು, ಅವತಾರ- ಎಲ್ಲವೂ ಸುಳ್ಳು ಅಂತೀರಾ ಅಜ್ಜಿ? ನೀವೇ ಹಾಗೆ ಹೇಳಿದರೆ?"

"ಇದೆಲ್ಲ ಆದದ್ದು ಅವನನ್ನು ಕಾಣುವ ನಾವು ಸಾವಿರ ಮಂದಿ ಸಾವಿರ ಬುದ್ಧಿಯವರಾದುದರಿಂದ. ಅವನು ಒಬ್ಬನೇ. ಸಾವಿರ ಆದದ್ದು ನಮ್ಮಿಂದ. ಸಾವಿರ ಜನಗಳ ಕಣ್ಣು ಕಂಡ ಮಾತ್ರಕ್ಕೇನೆ ಒಂದು ಆಕಾಶ ಸಾವಿರ ಆಗುತ್ತದೆಯೇ? ಅಷ್ಟೇ ಹುಚ್ಚು ಇದು."

ನಾನು ಅಜ್ಜಿಯ ವಾದವನ್ನು ಕೇಳಿ ಬೆರಗಾದೆ. ಈ ಅಜ್ಜಿ ಹಳೆಯ ನಂಬಿಕೆಗಳಾವುವನ್ನೂ ಅಷ್ಟು ಸುಲಭದಲ್ಲಿ ಹೊತ್ತು ಬಂದವರಲ್ಲ ಎನಿಸಿತು. ಹಾಗಾಗಿ, ಅವರ ವಿಷಯದಲ್ಲಿ ನಮ್ಮ ಮನೆಯವರೂ, ನಮ್ಮ ಊರವರೂ "ತಲೆಕೆಟ್ಟವರು, ಪಿಶಾಚಿ ಹಿಡಿದವರು ಎಂತ ತಿಳಿದಿದ್ದರೆ ಆಶ್ಚರ್ಯವೇನಿಲ್ಲ" ಎನಿಸಿತು ನನಗೆ.

"ಹಾಗಿದ್ದರೆ, ಮೂಕಾಸುರ ಇರಲಿಲ್ಲ ಅಂತಲೋ" ಎಂದೆ ನಾನು.

"ನನಗೆ ಮಗು, ಕೊಲ್ಲೂರೇನು ಹೊಸತಲ್ಲ. ಸಣ್ಣದರಲ್ಲಿ ನಿನ್ನ ಅಜ್ಜ ನನ್ನನ್ನು ಇಲ್ಲಿಗೆ ಕರೆದುತಂದಿದ್ದ. ಇಲ್ಲಿರುವುದು ಒಂದು ಅಮ್ಮನವರು. ಮಾತಾಡದ ಅಮ್ಮನವರು. ನೀನು ಹಗಲಲ್ಲಿ ದೇವರ ಮೂರ್ತಿಯನ್ನು ಕಂಡಿದ್ದೀಯಲ್ಲ. ಅದೂ ಹಿಂದಕ್ಕೆ ಇಲ್ಲಿ ಇದ್ದಿರಲಿಲ್ಲ. ಬಹಳ ಕಾಲದ ಮೇಲೆ ಯಾರೋ ತಂದು ನೆಟ್ಟಿದ್ದು. ಇಲ್ಲೊಂದು ಸಣ್ಣಗುಡಿ ಇದ್ದ ಹಾಗೆ ನನ್ನ ಕಣ್ಣಿಗೆ ಈಗಲೂ ಕಾಣಿಸುತ್ತದೆ. ಅದರೊಳಗೆ ಯಾವುದೋ ಒಂದು ಸಣ್ಣ ಹೆಣ್ಣು ಕಲ್ಲು ಗೊಂಬೆಯಿತ್ತು. ಅದನ್ನೇ 'ಅಮ್ಮ ಅಮ್ಮ' ಎಂದು ಕರೆದರು ನಾಲ್ಕು ಸುತ್ತಿನ ಜನ."

"ಅದಾದರೂ ನಿಜವೇ?"

"ಯಾವುದಂತೀಯಾ?"

"ದೇವರು ಬರಿ 'ಅಮ್ಮ' ಆದದ್ದು. ಇರಲಿ, ಈಗ ದೇವರು ಗಂಡೋ, ಹೆಣ್ಣೋ?"

"ದೇವರು ಏನೂ ಆಗಲಿಲ್ಲ. ಅವನು ಹೆಣ್ಣೂ ಆಗಲಿಲ್ಲ; ಗಂಡೂ ಆಗಲಿಲ್ಲ. ಅಮ್ಮನೂ ಆಗಲಿಲ್ಲ. ಅಪ್ಪನೂ ಆಗಲಿಲ್ಲ, ಅವನನ್ನು ನಾವು ಹಾಗೆಂದು ಎಣಿಸಿಕೊಂಡದರು; ಅಂಥ ಒಂದು ಮೂರ್ತಿಯನ್ನು ಕೆತ್ತಿ ಇಲ್ಲಿ ಇರಿಸಿದರು; ಪೂಜೆ ಮಾಡಿದರು. ಮಕ್ಕಳಿಗೆ ತಾಯಿಗಿಂತ ದೊಡ್ಡ ವಸ್ತುವಿಲ್ಲ. ಅಪ್ಪನಿಲ್ಲವಾದರೂ ಕಳೆಯುತ್ತದೆ; ಅಮ್ಮ ಇಲ್ಲದಿದ್ದರೆ ಹೇಗೆ? ನಮಗೆ ಇಷ್ಟು ಪ್ರಾಯವಾದ ಮೇಲೂ, ಎಲ್ಲಾದರೂ ಒಂದಿಷ್ಟು ಪೆಟ್ಟು ನಾಟಿದರೆ 'ಅಯ್ಯಮ್ಮ' ಎನ್ನುವುದಿಲ್ಲವೇ? ಹಾಗಾಗಿ 'ದೇವರೇ ನಮ್ಮ ಅಮ್ಮ' ಎಂದು ತಿಳಿದರೆ ತಪ್ಪೇನಿಲ್ಲ. ನಮ್ಮ ಅಮ್ಮನ ಮೇಲೆ ನಮಗಿರುವ ಪ್ರೀತಿ ಬಹಳ ದೊಡ್ಡದಲ್ಲವೇ? ಅವಳನ್ನು ನಾವು ಎಷ್ಟೂ ಬೇಡಬಹುದು; ಕಾಡಬಹುದು ಎಂದು ಅನಿಸುವುದಿಲ್ಲವೇ?"

"ಕೆಲವರ ಪಾಲಿಗೆ, ಅದೇ ಅಮ್ಮನೆಂಬವಳು-ತಂಟೆ ಮಾಡಿದ ಮಕ್ಕಳನ್ನು ಹೊಡೆಯುವ ಅಮ್ಮನಂತೆ ಕಾಣಿಸಿರಬೇಕು. ತಮಗೆ ಆಪತ್ತು ಬಂದಾಗ ಅದೆಲ್ಲ ಅಮ್ಮನೇ ಕೊಟ್ಟ ಶಿಕ್ಷೆ-ಎಂದು ಅನಿಸಿ ನಂಬಿದರು. ಕಾಳಿ, ದುರ್ಗೆಯರಂಥ ಅಮ್ಮಂದಿರಾದರು. ಶಿರ್ಸಿಯ ಮಾರಿಯಮ್ಮ ಇಲ್ಲವೇ, ಇಂಥ ಇನ್ನೊಂದು."

"ಈ ಊರಿನ ಅಮ್ಮ ಇನ್ನೊಂದೇ ಜಾತಿಯ ಅಮ್ಮ. ಇವಳು ಮೂಕಮ್ಮ. ನಾವು ಅವಳನ್ನು ಹೊಗಳಿದರೂ ಅಷ್ಟೆ, ಬೈದರೂ ಅಷ್ಟೆ, ನೀನು ಅದನ್ನು ಕೊಡು, ಇದನ್ನು ಕೊಡು-ಎಂದು ಬೇಡಿದರೂ ಫಲವಿಲ್ಲ; ಕಾಡಿದರೂ ಫಲವಿಲ್ಲ. ಸುತ್ತಿ, ನಿಂದೆಗಳೆರಡಕ್ಕೂ ಅವಳು ಮೂಕಿಯೇ. ಅವಳು ಮಾಡಿದ್ದೆಲ್ಲ ಒಳ್ಳೆಯದಕ್ಕೇ, ಕೊಟ್ಟದ್ದೆಲ್ಲ ಒಳ್ಳೆಯದಕ್ಕೇ-ಎಂದು ನಂಬಿ ಬರಬೇಕಾದವಳು ಇವಳು. ಬೇಡುವವರಿಗೆ ಹೇಳಿಸಿದ ಅಮ್ಮ ಇವಳಲ್ಲವೇ ಅಲ್ಲ ಎಂದು ನನಗಂತು ಕಾಣಿಸುತ್ತದೆ. ನಾನು ನನಗೆ ಕಾಣಿಸುತ್ತದೆ ಹಾಗೆ ಎನ್ನುತ್ತೇನೆಯೇ

ಹೊರತು, ಅದೇ ಸಮ-ಎನ್ನುವುದಕ್ಕೂ ಹೋಗುವುದಿಲ್ಲ. ನಾನು ಅಂಥ ಬುದ್ಧಿವಂತೆಯಲ್ಲ. ನನ್ನ ಬುದ್ಧಿಗೆ ತೋರುವುದು ಅಷ್ಟು."

"ಅಕೋ, ಈಗ ನನ್ನ ಕಣ್ಣಿಗೆ ದೊಡ್ಡದೊಂದು ಅಮ್ಮನ ಬೊಂಬೆ ಕಾಣಿಸುತ್ತಾ ಇದೆ. ಓ ಅಲ್ಲೇ; ಆ ಕಲ್ಲಿನ ಮೂರ್ತಿ ಇದ್ದಲ್ಲೇ! ಅಲ್ಲಿ ಗುಡಿ, ಗೋಪುರ ಏನೊಂದೂ ಇಲ್ಲ. ದೊಡ್ಡದೊಂದು ಮಣ್ಣಿನ ಗೊಂಬೆಯಿದೆ. ದೊಡ್ಡ ದೊಡ್ಡ ಮೊಲೆಗಳು; ದೊಡ್ಡ ಹೊಟ್ಟೆ, ಕಣ್ಣು ಮುಚ್ಚಿಕೊಂಡಿದ್ದಾಳೆ. ಇರುವ ಎರಡೇ ಎರಡು ಕೈಗಳನ್ನು ತೊಡೆಯ ಮೇಲೆ ಇರಿಸಿಕೊಂಡಿದ್ದಾಳೆ. ಅವಳ ಅಂದಾಜೇನೆಂಬುದು ನನಗೆ ಗೊತ್ತಾಗುತ್ತದೆ; 'ನನಗೆ ಸಾವಿರಾರು ಮಕ್ಕಳಿವೆ. ನೀನು ಅದರಲ್ಲಿ ಒಬ್ಬಳು. ನಿನ್ನನ್ನು ಹಡೆದೆ; ದೊಲೆಯುಣಿಸಿ ಬೆಳೆಸಿದೆ. ಸಾಕು; ಇನ್ನು ಹೋಗು. ನಡೆ, ಆಡು, ಓಡು, ಸಂತೋಷವಾಗಿ ಇರು. ಗಳಿಗೆಗೆ ನೂರು ಸಾರಿ ನನ್ನ ಹತ್ತಿರ ಬಂದು 'ಅಮ್ಮ, ಅಮ್ಮ ಅಂತ ಪೀಡಿಸಬೇಡ' ಎಂದಂದು ತುಟಿಕಚ್ಚಿ ಕುಳಿತಿದ್ದಾಳೆ."

"ಅದೇ ಸಹಜ ಅಲ್ಲವೇ? ಇನ್ನೂ, ಇನ್ನೂ ಅವಳ ಹತ್ತಿರ ಹೋಗಿ ಸಣ್ಣ ಮಕ್ಕಳು ಹಟ ಹಿಡಿಯುವ ಹಾಗೆ 'ನನಗೆ ಇದನ್ನು ಕೊಡು,' 'ನನ್ನನ್ನು ಅವನು ಚಿವುಟಿದ, ಇವನು ನನಗೆ ಹೊಡೆದ' ಎಂದು ನಾವು ದೂರುತ್ತಲೇ ಇದ್ದರೆ ಏನೆನಿಸೀತು 'ಇವಕ್ಕೆಲ್ಲ ಎಂದು ಬುದ್ಧಿ ಬಂದೀತು? ಇವು ತಮ್ಮ ಕಾಲ ಮೇಲೆ ಎಂದು ನಡೆದಾವು' ಎಂದು ಹೊಳೆಯದೆ ಹೋದೀತೆ?"

"ಅಜ್ಜಿಯ ಮಾತನ್ನು ಕೇಳಕೇಳುತ್ತ ನನ್ನ ಮನಸ್ಸು "ಏಕಂ ಸತ್ ವಿಪ್ರಬಹುಧಾಃ ವದಂತಿ" ಎಂಬ ಭಾವನೆಯನ್ನು ಮರೆತು ಬಿಟ್ಟು, ಮಾತನಾಡುವುದಕ್ಕೇ ಒಡಂಬಡದ ಈ ಅಮ್ಮನ ಕಲ್ಪನೆಯನ್ನು ಮನಸ್ಸಿನಲ್ಲಿ ಮೂಡಿಸಲು ಹವಣಿಸಿತು. ಅಂಥ ಅಮ್ಮ-ಯಾರ ಲಂಚಕ್ಕೂ, ಕಣ್ಣೀರಿಗೂ ತಲೆಬಾಗದವಳು. ಅವಳನ್ನು ಒಲಿಸುವ ದಾರಿ ತನಗೆ ಸರಿಯೆನಿಸುವ ದಾರಿಯಲ್ಲಿ ನಡೆಯುವುದೊಂದೇ. 'ಶರಣು ಬಂದೆ' ಎಂಬ ನಾಟಕವೂ ಈ ಮೂಕಾಂಬಿಕೆಗೆ ಬೇಡ-ಎಂದು ಕಾಣಿಸಿತು.

ಅಲ್ಲಿಂದ ಮುಂದೆ ನನ್ನ ಮನಸ್ಸು ಅನೇಕ ಆದಿ ಅಮ್ಮಗಳ ಕಲ್ಪನೆಗೆ ಜೋತುಕೊಂಡು ವಿಹರಿಸತೊಡಗಿತು. ಎಲ್ಲೋ ಒಬ್ಬಳು ಕೊಟ್ಟೂರಮ್ಮ ಇದ್ದಾಳೆ; ಇನ್ನೆಲ್ಲೋ ಒಬ್ಬ ದ್ಯಾಮವ್ವ ಇದ್ದಾಳೆ; ಮತ್ತೆಲ್ಲೋ ಎಲ್ಲವ್ವ ಇದ್ದಾಳೆ; ಮಗದೆಲ್ಲೋ ಸಾವಕ್ಕ ಇದ್ದಾಳೆ; ಈ "ಬಹುಧಾಃ ವದಂತಿ"- ಅವುಗಳ ಒಂದೊಂದು ಕಲ್ಪನೆಗೂ ಕಾರಣವಾದ ಮನೋಧರ್ಮ- ಯಾವ ತೆರನದು ಎಂಬ ವಿಚಾರವನ್ನು ನಾನು ಮಾಡತೊಡಗಿದೆ. ಅಜ್ಜಿ ನನ್ನೀ ಯೋಚನೆಗಳ ಕೋಲಾಹಲವನ್ನು ಕೊನೆಗೊಳಿಸಲು ಎಂಬಂತೆ "ಬೆಳಗಿನ ಜಾವಕ್ಕೆ ಗಾಡಿ ಕಟ್ಟಿಸಿ ಹೊರಡಬೇಕಲ್ಲವೇ?" ಎಂದಳು. "ಸದ್ಯಕ್ಕೆ ಮಲಗುವ ಹೊತ್ತಾಯಿತು; ಎಲ್ಲಿ, ಜಾಗ

ತೋರಿಸು" ಎಂದಳು. ಅವಳನ್ನು ಕರೆದುಕೊಂಡು ದೇವಾಲಯದ ಪ್ರಾಕಾರದ ಹೊರಗಿದ್ದ ಬಿಡಾರದ ಮನೆಯ ಚಾವಡಿಗೆ ಬಂದೆ. ನಮ್ಮವರೆಲ್ಲರೂ ಅಲ್ಲಿ ಮಲಗಿ ನಿದ್ದೆ ಹೋಗಿದ್ದರು. ಅಜ್ಜಿ ಅಂಗಳದಲ್ಲೊಂದು ಕಡೆ ಮಲಗಿಕೊಂಡರು. ನಾನು ಮತ್ತೊಂದು ಕಡೆ ವಿರಮಿಸಿದೆ.

ರಾತ್ರಿ ಮಲಗಿಕೊಂಡವನಿಗೆ ಸುಖವಾದ ನಿದ್ರೆ ಬಂತು-ಎನ್ನಲಾರೆ. ಚಾವಡಿಯಲ್ಲಿ ಅಂಗಳದಲ್ಲಿ ಅಸ್ತವ್ಯಸ್ತ ಮಲಗಿಕೊಂಡ ನಮ್ಮ ಪಾಳೆಯದ ಹತ್ತಿಪ್ಪತ್ತು ಮಂದಿ ಇದ್ದರು. ಕೆಲವರು ಬರಿಯ ನೆಲದಲ್ಲೇ ಮಲಗಿದ್ದರು. ಅವರೆಲ್ಲರೂ ಹಾಸಿಗೆಯನ್ನು ಹಿಡಿದೊಡನೆಯೇ ನಿದ್ದೆ ತಟ್ಟುವ ಪುಣ್ಯಪುರುಷರು. ಸಾಮಾನ್ಯವಾಗಿ ನನಗೆ ಅಂಥ ಪುಣ್ಯವಿದೆ. ಆದರೆ, ಒಮ್ಮೊಮ್ಮೆ ನಿದ್ದೆ ಹತ್ತದೆ ಪೇಚಾಡುವುದೂ ಉಂಟು. ಈ ಹೊತ್ತು ನಾನಾಗಿ ಅಜ್ಜಿಯೊಡನೆ ಅಷ್ಟೆಲ್ಲ ಅಧಿಕಪ್ರಸಂಗಕ್ಕೆ ಹೋದುದರಿಂದ, ಮಲಗಿಮೊಡನೆ ನಿದ್ದೆ ಬರುವುದಾದರೂ ಹೇಗೆ? ನನ್ನ ಆಚೆ, ಈಚೆಯಿಂದ ನಾನಾ ಧ್ವನಿಗಳು. ಹಂದಿಯ ಗುಟುರು, ಕುದುರೆಯ ಕೆನೆತ, ನಾಯಿಯ ಬೊಳುಗರೆ ಮತ್ತು ವಿಚಿತ್ರ ರೀತಿಯ ಉಸಿರಾಟದ ಧ್ವನಿಗಳಿದ್ದವು. ಮಲಗಿದ ತುಸು ಹೊತ್ತಿನಲ್ಲಿ ಚಾವಡಿಯಿಂದ ಕಿಟ್ಟಣ್ಣ "ಅಪ್ಪಯ್ಯ, ನಾನೂ ಬರುತ್ತೇನೆ" ಎಂದ ಧ್ವನಿಯೂ ಕೇಳಿಸಿತು. ಅದೂ ನಿದ್ದೆಯಲ್ಲೇ. ಪ್ರಾಯಶಃ ಅವನು ಮಲಗುವ ಹೊತ್ತಿಗೆ "ಅಪ್ಪಯ್ಯ ಎಲ್ಲಿ ಕಣ್ಮರೆಯಾದರು?" ಎಂದು ತಾಯಿಯನ್ನು ಕಾಡಿರಬೇಕು. ಅವಳು ಅವನ ಬೆನ್ನಿಗೆ ಬರೆ ಎಳೆದು ಜತೆಯಲ್ಲಿ ಮಲಗಿಸಿಕೊಂಡಿರಬೇಕು. ಅದರಿಂದ ಅವನ ನಿದ್ರೆಯೂ ಸ್ವಪ್ನ ಬಾಧಿತವಾಯಿತು. ಅದರಿಂದ ನಾನು ಸುಖವಾಗಿ ಮಲಗಿ ನಿದ್ದೆ ಹೋಗುವ ವಿಚಾರ ಹೇಗೆ ಸಾಧ್ಯ?"

ಮಲಗಿದ್ದೇ ತಡ- ಕಣ್ಮೆದುರಿಗೆ ಭಾರೀ ದೊಡ್ಡ ಒಂದು ರಾಕ್ಷಸ ಜೀವ ಬಂದು ನಿಂತಂತೆ ಕಾಣಿಸಿತು. ಕೈಯಲ್ಲೊಂದು ಗುದಿಗೆ; ಕಣ್ಣಲ್ಲಿ ಕೆಂಡ. ಗುಡಿಗಾರರ ಚಿತ್ರದಲ್ಲಿರುವ ಹಾಗೆ, ಎದೆಯ ತನಕವೂ ಚಾಚುವ ನಾಲಗೆ, ದಶದಿಕ್ಕುಗಳಿಗೆ ಚದರಿ ಹಾರಾಡುವ ತಲೆಗೂದಲಿನ ಘೋರ ರೂಪ. ಆತ ನನ್ನೆದುರಿಗೇ ಬಂದು ನಿಂತ; ಚೂರೇ ಚೂರು ಮಾತನಾಡಲಿಲ್ಲ. ಹೆದರಿ ಕಂಗಾಲಾದ ನಾನೇ ಅವನನ್ನು ಮಾತನಾಡಿಸಬೇಕಾಯಿತು. "ಯಾರು ನೀನು? ಇಲ್ಲಿ ಯಾತಕ್ಕೆ ಬಂದೆ?" ಎಂದು ಕೇಳಿದೆ. ದೊದಲಿನ ಪ್ರಶ್ನೆಗೆ ಉತ್ತರ ಸಿಗಲಿಲ್ಲ. ಎರಡನೆಯದಕ್ಕೆ ಉತ್ತರವೆಂಬಂತೆ- ಕೈಯ ಕೊಂತವನ್ನು ಮೇಲಕ್ಕೆ ಎತ್ತಿದ್ದನೇ. ಇನ್ನೇನು! ನನ್ನ ತಲೆಯ ಮೇಲೆಯೇ ಅದೀಗ ಎರಗುತ್ತದೆ ಅನಿಸಿತು. ಆದರೂ ಧೈರ್ಯ ತಂದುಕೊಂಡು "ಕೊಲ್ಲುವುದಾದರೆ ಕೊಲ್ಲು; ಮಹಾರಾಯ, ನೀನು ಯಾರು ಎಂದಾದರೂ ಹೇಳು, ಆ ಮೇಲೆ ಕೊಲ್ಲು. ನಾನು ಮೂಡೂರಿನವ; ಹೆಸರು-ಸುಬ್ರಾಯ- ಎಂದು. ಒಂದು ಲಗ್ನಕ್ಕೆ ಬಂದಿದ್ದೆ. ನನ್ನ ತಮ್ಮ ನಾರಾಯಣನಿಗೆ ಮದುವೆಯಿತ್ತು. ಆ ಮದುವೆ ಆಯಿತು. ನಿನಗೆ ಇದು ಇಷ್ಟವಿಲ್ಲ- ಎಂಬ ಹಾಗೆ ಕಾಣಿಸುತ್ತದೆ. ನೋಡು, ಈಗ

ಅವರೊಬ್ಬರಿಗೂ ಎಚ್ಚರವಿಲ್ಲ. ನಿದ್ದೆ ಮಾಡಿದವರನ್ನು ಕೊಲ್ಲುವುದರಲ್ಲಿ ನ್ಯಾಯವಿಲ್ಲ. ನನಗೆ ಎಚ್ಚರವಿದೆ, ಕೊಂದು ಒಂದು ಪುರುಷಾರ್ಥ ಗಳಿಸು" ಎಂದೆ.

ಅವನ ತುಟಿಗಳಿಂದ ನಗು ಹೊರಸೂಸಿತು. ಅವನಿಗೆ ನನ್ನ ವಾದಸರಣಿ ಚಮತ್ಕಾರಿಕವಾಗಿ ಕಾಣಿಸಿರಬೇಕು. ನಾನು ಅಷ್ಟಕ್ಕೇ ಬಿಡದೆ "ಯಾರು ನೀನು ಅಂತ ಹೇಳಲೇ ಇಲ್ಲವಲ್ಲ?" ಎಂದೆ. ಅವನು ಕೊಂತವನ್ನು ತಿರುಗಿಸಿ, ಅದರ ತುದಿಯನ್ನು ನೆಲದ ಮೇಲೆ ಊರಿ ನಿಂತ. ಮತ್ತೆ ಮಾತಿಲ್ಲ. "ಇದು ಮಾತ್ರ ಒಳ್ಳೆಯ ತಮಾಷೆಯಾಯಿತಲ್ಲ! ಇವನ ಈ ಕೊಂತಾಭಿನಯದಿಂದ ನಾನು ಏನೆಂದು ತಿಳಿದುಕೊಳ್ಳಲಿ? ಆದರೂ ನನ್ನ ಬುದ್ಧಿಯನ್ನು ಹರಿಯಗೊಡಿಸಿ 'ಹೋ! ಇದೇ ಊರಿನವ-ಎಂದು ಹೇಳುವುದೋ ನೀನು' ಎಂದೆ. ಇನ್ನೊಂದು ನಗು ಬಂದಿತು ಅವನ ಮೂತಿಯಿಂದ. ಇದೇ ಊರು ಎಂದರೆ ಕೊಲ್ಲೂರಾಯಿತಷ್ಟೆ. ಇವನು ಸಹ 'ಕೊಲ್ಲೂರಿನವನು' ಎಂದ ಹಾಗಾಯಿತು. ಅವನು ಮಾತಾಡದಿದ್ದುದನ್ನು ನೆನೆದರೆ, ಇವನು ಆ ಸುಟ್ಟ ಮೂಕಾಸುರ ಇದ್ದರೂ ಇದ್ದಾನು. ಮಾತನಾಡದೆ ಕೊಂತವನ್ನು ಕೆಳಕ್ಕೆ, ಮೇಲಕ್ಕೆ ಮಾಡುತ್ತಿದ್ದಾನೆ. ಹಾಗಿದ್ದರೆ- ಮೂಕಾಸುರ ಬದುಕಿದ್ದಾನೆ ಎಂದಂತಾಯಿತು. ಮೂಕಾಂಬಿಕೆ ಕೊಂದದ್ದು ಯಾರನ್ನು ಎಂಬ ಪ್ರಶ್ನೆ ಹುಟ್ಟುತ್ತದೆ. ಅಜ್ಜಿ ಹೇಳಿದ ಕತೆ ನಿಜವೇ? ಇವನು ನಿಜವೇ? ಮೂಕಾಗಿರುವುದು ಅಂಬಿಕೆಯೋ ಅಥವಾ ಅಸುರನೋ ಎಂದು ಯೋಚನೆ ಮಾಡುವಾಗ, ಬಂದ ಆಸಾಮಿ ನಾಪತ್ತೆ! ಅವನು ಅಲ್ಲಿಲ್ಲ ಎಂಬುದು ಖಾತ್ರಿಯಾಯಿತು. ಆತ, ನಾನು ಈ ಊರಿನವನು ಎಂದದ್ದು ನಿಜವಷ್ಟೆ. ಕೊಲ್ಲೂರಿನವ ಅವನು, ಅಥವಾ ಇದರ ಅರ್ಥ-ಇಲ್ಲಿಗೆ ಬಂದವರನ್ನು ಈ ಊರಿನವ ಕೊಲ್ಲುತ್ತಾನೆಂದೇ? ಎಲ್ಲಾದರೂ ಒಂದು ಊರಿಗೆ ಅಂಥ ಹೆಸರು ಬರುವುದು ಶಕ್ಯವೇ? ಎಲ್ಲ ಊರುಗಳಲ್ಲೂ ಜನ ಸಾಯುತ್ತಾರೆ. 'ಸಾವೂರು' ಎಂತ ಊರಿಗೆ ಹೆಸರಿಟ್ಟಿದ್ದರೂ ಆಶ್ಚರ್ಯವಿಲ್ಲ. ಇದು ಹಾಗಲ್ಲ; ಕೊಲ್ಲೂರು, ಪ್ರಾಯಶಃ ಬಹಳ ಹಿಂದಕ್ಕೆ ಇಲ್ಲಿ ಇದ್ದ ಕಳ್ಳಕಾಕರರು ದಾರಿಗರನ್ನು ಕೊಲ್ಲುತ್ತಿದ್ದರಿಂದ, ಆ ಹೆಸರು ಬಂದಿರಬೇಕು. ಆಮೇಲೆ ಯಾರೋ ಹೆದರಿ ಇಲ್ಲಿ ಮೂಕಾಂಬಿಕೆಯ ಗುಡಿಯನ್ನು ಕಟ್ಟಿದರು. ಆಮೇಲೆ ಆ ದೇವರಿಗೆ ಹೆದರಿ ಜನರನ್ನು ಕೊಲ್ಲುವುದು ನಿಂತಿತು. ಹಳೆಯ ಹೆಸರು ಮಾತ್ರ ಇಂದಿನ ತನಕವೂ ಅಂಟಿಕೊಂಡು ಬಂದಿರಬೇಕು- ಎನಿಸಿತು.

ಅಲ್ಲಿಂದ ಮೂಕಾಂಬಿಕೆಯ ನೆನಪಾಯಿತು; ದುರ್ಗೆಯ ಹಲವಾರು ಹೆಸರುಗಳು ನನ್ನ ನೆನಪಿಗೆ ಬರತೊಡಗಿದವು. ಅವಳಿಗೆ ಅರುವತ್ತನಾಲ್ಕು ಅವತಾರಗಳಿವೆಯಷ್ಟೇ. ಅಂಥ ಅವತಾರಗಳ ಕಲ್ಪನೆಯಾಗಲೀ, ಹೆಸರಾಗಲೀ, ನೆನಪಿಗೆ ಬರಲಿಲ್ಲ. ನಾನು ಓದಿಕೊಂಡಂಥ ಕತೆಗಳು ಒಂದೋ, ಎರಡೋ! ಹೀಗಾಗಿ, ಮತ್ತೂ ಮುಂದಕ್ಕೆ ನನ್ನ ವಿಚಾರಸರಣಿ

ಹರಿಯಲಿಲ್ಲ. ನನ್ನ ಸಮೀಪದಲ್ಲಿ ಮಲಗಿದವರೊಬ್ಬರು ತಮ್ಮ ಜತೆಯಲ್ಲಿದ್ದವರನ್ನು ಬಡಿದು ಎಚ್ಚರಗೊಳಿಸಿದಾಗ ನಾನೂ ಎದ್ದೆ. ಉಳಿದವರೆಲ್ಲರೂ ಅನುಸರಿಸಿ ಎದ್ದರು. ಗಾಡಿಗಳನ್ನು ಕಟ್ಟಿಸಿ, ಬಂದ ದಿಬ್ಬಣ ಹೊರಡಿಸಿ, ಪಯಣ ತೊಡಗಿದೆವು. ನಡೆಯಲಾರದವರು ಬಂಡಿಯಲ್ಲಿ ಕುಳಿತರು. ಬೆಳಗಾದ ಜಾವ ಹೊತ್ತಿಗೆ ನಾವು ನಮ್ಮ ಮೂಡೂರು ಮನೆಯನ್ನು ಸೇರಿದೆವು.

ಮುಂದಿನ ಎರಡು ದಿವಸಗಳ ಕಾಲ ನಮ್ಮ ಮನೆ ಮದುವೆಯ ಗದ್ದಲದಿಂದ ತುಂಬಿಕೊಂಡಿತು. ನಮ್ಮ ಜತೆಯಲ್ಲಿ ಬೀಗರೂ ಬಂದಿದ್ದರು. ಊರಿಗೆ ಬಂದ ಅವರನ್ನು ಒಂದು ಬಿಡಾರದ ಮನೆಗೆ ಮುಟ್ಟಿಸಿ, ನಾವು ನಮ್ಮ ಮನೆಯಲ್ಲಿ ಮದುಮಕ್ಕಳ ಗೃಹಪ್ರವೇಶ ಉತ್ಸವ ನೆರವೇರಿಸಿದೆವು. ಅದರ ಮರುದಿನ ಆರತಿ ಅಕ್ಷತೆಯ ಸಮಾರಂಭವೂ ನಡೆಯಿತು. ಅವೆಲ್ಲ ಕೆಲಸಗಳು ಚೆನ್ನಾಗಿಯೇ ನಡೆದಿದ್ದರೂ, ಒಂದೆರಡು ವಿಷಯಗಳಲ್ಲಿ ಸ್ವಲ್ಪ ಮಟ್ಟಿಗೆ ಅಸಮಾಧಾನ ಬಂದಿತ್ತು. ಅದರಲ್ಲೊಂದು-ನನ್ನ ಸೀತೆಗೆ ಮದುಮಗಳ ವಿಷಯದಲ್ಲೇ ಬಂದ ಅಸಮಾಧಾನ. ಆಕೆ ಅದನ್ನು ಬಚ್ಚಿಡದೆ, ಅವಳೊಡನೆ "ನೋಡು, ಒಂದು ನಾಲ್ಕು ದಿವಸ, ಈ ಊರನ್ನು ಬಿಡುವ ತನಕ, ನಿನ್ನ ಗಂಡನೊಡನೆ ಎಲ್ಲರ ಇದಿರಿನಲ್ಲೂ ಕಿಚಿಪಿಚಿ ಮಾತನಾಡಬೇಡ. ಈ ಊರ ಜನ ಅದನ್ನು ಕಂಡು 'ಏನು ಲಜ್ಜೆಗೇಡಿ ಹುಡುಗಿ' ಎಂದಾರು- ಎಂದಳಂತೆ. ಅವಳು ಅದಕ್ಕೆ "ಅದೆಲ್ಲ ನಿಮ್ಮ ಕಾಲಕ್ಕಾಯಿತು" ಎಂದಳಂತೆ. ಅಲ್ಲಿಂದ ಸೀತೆಯ ಮನಸ್ಸು ತಿರುಗಿತೇ! ಈ ಓದಿದ ಹರಕು ಬಾಯಿ ಹೆಣ್ಣನ್ನು ನಾರಾಯಣ ಲಗ್ನವಾದದ್ದು ಮೂರ್ಖತನ ಎಂದು ಅನಿಸತೊಡಗಿತು. ಅದಕ್ಕೆ ಕಾರಣವೂ ಇದೆ. ಸೀತೆ ಮದುವೆಯಾಗಿ ನಮ್ಮ ಮನೆಗೆ ಬಂದು, ಒಂದು ವರ್ಷದ ತನಕವೂ, ತುಟಿಗಳ ಎಡೆಯಲ್ಲಿ ಕಡ್ಡಿ ಹಾಕಿದರೂ ಪಿಟ್ಟೆಂದವಳಲ್ಲ. ನನ್ನ ಸೀತೆಯುನ್ನು ನೆನೆದರೆ ಅವಳಿಂದಲೇ ಶ್ರೀರಾಮಚಂದ್ರನ ಹೆಂಡತಿಗೆ ಆ ಹೆಸರು ಬಂದಿರಬೇಕು-ಎನಿಸುತ್ತದೆ. ಹೀಗಿರುತ್ತ, ಮನೆಗೆ ಬಂದವಳು, 'ಮನೆಯ ಯಜಮಾನಿ' ಎಂಬ ಭಯಕ್ಕಾದರೂ ಸುಮ್ಮನಿರದ್ದನ್ನು ಕಂಡಾಗ, ನಾರಾಯಣ ಭಾವನನ್ನು ಕರೆದು, ಸಮೀಪ ನಿಂತಿದ್ದ ಅವಳಿಗೆ ಕೇಳಿಸುವಂತೆಯೇ "ನೀನಾದರೂ ಒಂದೆರಡು ದಿವಸ ಅವಳ ಬಾಯಿ ಕಟ್ಟಿಸು. ಮತ್ತೆ ಹೇಗೂ ಶಿವಮೊಗ್ಗೆಗೆ ಹೋಗಿ ಬಿಡಾರ ಮಾಡುತ್ತೀರಿ. ಅಲ್ಲಿ ಬರೀ ಮಾತಿಂದಲೇ ಹೊಟ್ಟೆ ತುಂಬಿಸಿಕೊಳ್ಳಬಹುದು" ಎಂದಳು. ಅವನಿಗೆ ಏನು ಕಾಣಿಸಿತೋ. ಅವನೂ ಹೆಂಡತಿಗೆ ಆ ವಿಷಯುವನ್ನು ಹೇಳಿರಬಹುದು. ಅನಂತರ, ಅವಳು ಮಾತನಾಡುವುದು ಕಡಿಮೆಯಾಗಲಿಲ್ಲವಾದರೂ, ನಾರಾಯಣ ಅವಳಿಗೆ ಹಸ್ತಾಭಿನಯದಿಂದ ಉತ್ತರ ಕೊಡತೊಡಗಿದ.

ರಜೆ ಮುಗಿಯುತ್ತಲೇ ಅವರಿಬ್ಬರೂ ಶಿವಮೊಗ್ಗೆಗೆ ಹೊರಟು ಹೋದ ಮೇಲೆ, ಸೀತೆ ತನ್ನ ಪರಾಭವವನ್ನು ಕುರಿತು ನನ್ನೊಡನೆ ನೋವನ್ನು ತೋಡಿಕೊಂಡದ್ದುಂಟು. "ನನಗೆ ಹೀಗೆಂದು ಕಾಣುತ್ತದೆ, ಓ ದೇವರೇ, ಅವರಿಬ್ಬರಿಗೂ ಶಿವಮೊಗ್ಗೆಯಲ್ಲಿ ಒಂದು ವರ್ಷದಿಂದಲೂ ದೋಸ್ತಿ ಇದ್ದಿರಬೇಕು. ಅನಂತರಾಯ ಮತ್ತು ಅವನು ಇಲ್ಲಿಯ ತನಕ ಬಂದು ನಂಟಸ್ತಿಕೆಯ ಮಾತುಕತೆ ಆಡಿ ಅಣ್ಣ, ಅತ್ತಿಗೆಯನ್ನು ಕೇಳಿದ ಸಂಗತಿ ಬರೀ ನಾಟಕ. ನಾವು ಬೇಡ ಅನ್ನುತ್ತಿದ್ದರೂ ನಮ್ಮನ್ನು ಕೇಳದೆ ಮದುವೆಯಾಗುತ್ತಿದ್ದರು. ಏನೇನೂ ಸ್ವಾರಸ್ಯವಿಲ್ಲ' ಎಂದು ದೂರಿದಳು.

"ಸದ್ಯಕ್ಕೆ ಅವರು ಮದುವೆಯಾದರಲ್ಲ. ಅವರವರಿಗೆ ಒಪ್ಪಿದ್ದು ಅವರವರಿಗೆ. ನನಗೇನು, ನಿನಗೇನು?"

"ಹಾಗೆಂದರೆ? ಬೇಸಿಗೆ ರಜೆಗೆ ಬಂದರೆ ಒಂದು ನಾಲ್ಕು ದಿನವಾದರೂ ಇಲ್ಲಿರುವುದಿಲ್ಲವೇ."

"ಏನಾಯಿತು ಅದರಿಂದ? ಮದುವೆಯಾದ ಹೊಸತರಲ್ಲಿ ಬಾಯಿ ತುಂಬ ಮಾತನಾಡುವ ಚಪಲ. ಮುಂದೆ ನಾಲ್ಕು ತಿಂಗಳಲ್ಲಿ ಅದು ಹಳಸಿ ಹೋಗುತ್ತದೆ. ಇಂಗ್ಲೀಷಿನಲ್ಲಿ ಒಂದು ಗಾದೆ ಉಂಟು- ಹೊಸ ಕಸಬರಿಕೆ ಗುಡಿಸುವುದು ಲಾಯಕ್ಕು ಎಂತ."

ಹೀಗೆ, ಇದೊಂದೇ ವಿಷಯವನ್ನು ಹೇಳಿ ಮುಗಿಸಿದರೆ ನನ್ನ ಕಥಾನಕಕ್ಕೆ ಬಾಧಕವಿಲ್ಲ. ಆದರೆ, ನನ್ನ ಮನಸ್ಸಿನಲ್ಲಿ ಉಳಿದಿರುವ ಎರಡನೆಯ ಉಪಕತೆ ಯಾವುದು- ಎಂದು ಹೇಳದೆಯೂ ನಿಮಗೆ ಅದು ಹೊಳೆದೀತು. ನಾನು ಸ್ನೇಹಿತನಾದ ಜನಾರ್ದನನಿಗೆ ಮದುವೆಯ ಹೇಳಿಕೆ ಕೊಟ್ಟಿಲ್ಲ ಎಂದು ನೀವು ಊಹಿಸಿರಬಹುದು. ಆತ ನನ್ನ ಬಲಗೈ ಬಂಟನಷ್ಟೇ; ಊರಿನ ಒಬ್ಬ ಮರಿ ಗುರಿಕಾರ. ಅವನ ಹತ್ತಿರ ಹೋಗಿ "ಒಂದು ಗಳಿಗೆ ಬಂದು ಮದುವೆಯನ್ನು ಚಂದಗಾಣಿಸಿ ಕೊಡಬೇಕು" ಎಂದು ಬೇಡಿದ್ದೆ. ಆತ "ನೋಡುವ" ಎಂದಿದ್ದ. "ಬರದಿದ್ದರಾಗದು" ಎಂದು ಪಟ್ಟುಹಿಡಿದುದಕ್ಕೆ "ಧಾರೆ ಮುಹೂರ್ತಕ್ಕೆ ಸಮನಾಗಿ ಬಂದು ಹೋಗುತ್ತೇನಪ್ಪ" ಎಂದಿದ್ದ. ಆದರೆ ಬರಲೇ ಇಲ್ಲ ಆಸಾಮಿ. ಅಂದರೆ- ಅವನಿಗೆ ಬರುವ ಧೈರ್ಯವಿರಲಿಲ್ಲ. ನಮ್ಮ ಬೀಗರ ಮುಖವನ್ನು ಕಾಣುವ ಧೈರ್ಯವೇ ಅವನಿಗಿರಲಿಲ್ಲ. ಮದುಮಗಳ ಅಕ್ಕ ಮತ್ತು ಅನಂತರಾಯ- ಅವರಿಬ್ಬರ ಮುಖವನ್ನು ನೋಡುವುದು ಹೇಗೆ? ಶಿವಮೊಗ್ಗೆಯಲ್ಲಿ ಅವರ ಮನೆಗೆ ಹೋದಾಗ ಅವಳ ಕೈಯಿಂದ ನಾಲ್ಕು, ನಾಲ್ಕು ಜಾಂಗೀರು ಬಡಿಸಿಕೊಂಡು ಆತ ತಿಂದಿರಲಿಲ್ಲವೇ? ಆ ಮರುಳು ಹುಡುಗಿ, ಅಷ್ಟಕ್ಕೇ ತನ್ನನ್ನು ಆತ ಮೆಚ್ಚಿದ್ದಾನೆ- ಎಂದು ತಿಳಿದುಕೊಂಡಿರಲೂಬಹುದು.

ಆ ಮೇಲೆ ನಮ್ಮ ಸ್ವಂತ ಮನೆಯಲ್ಲಿಯೇ ಆರತಿ, ಅಕ್ಷತೆ ನಡೆಯುವಾಗ ಇನ್ನೊಂದು ಹೇಳಿಕೆಯನ್ನು ಮಾಡಿ ಬರಬೇಕಷ್ಟೆ. ಊರಿನ ನೂರು ಮಂದಿಗೆ ನಾನು ಊಟ ಹಾಕಬೇಕು. ಊರಿನ ನೂರು ಮನೆಗಳಿಗೂ ನಾನೊಬ್ಬನೇ ಹೋಗಲಾರೆ. ಒಬ್ಬೊಂಟಿಗನಾಗಿ ಎಷ್ಟು ಕಡೆಗೆ ಹೋದೇನು? ಹೋಗಲೇಬೇಕಾದ ಸ್ಥಳಗಳಿಗೆ ಹೋಗಿ ನಾನು ಹೇಳಿಕೆಯನ್ನು ಮಾಡಿಬಂದಿದ್ದೆ. ಉಳಿದೆಲ್ಲ ಮನೆಗಳಿಗೆ ನಮ್ಮ ಮಂಜುನಾಥ, ಅಮ್ಮನವರ ಗುಡಿಯ ದುರಸ್ತಿಗಾಗಿ ಬಂದಿದ್ದವನು, ನನ್ನ ಪರವಾಗಿ ಹೋಗಿ, ಹೇಳಿಕೆ ಮಾಡಿ ಬಂದ. ಆದರೂ ಜನಾರ್ದನನ ಮನೆಗೆ ನಾನು ಹೋಗಲೇಬೇಕಾಯಿತು. ಹಾಗೆ ನಾನು ಹೋಗದಿರುವುದು ತಪ್ಪು; ಹೋಗುವುದು ನನ್ನ ಘನಸ್ತಿಕೆಗೆ ಕಡಿಮೆಯಾದರೂ, ಹೋಗಿ, ಅವನ ತಂದೆಯನ್ನು ನೋಡಿ ಹೇಳಿಕೆ ಮಾಡಿದೆ; "ನೀವು ಯಾರೂ ಬರಲಿಲ್ಲ ಮದುವೆಗೆ" ಎಂದು ದೂರಿದೆ. ಅವರು "ಅದು ನಮ್ಮ ಮಾಣಿ ಬಿಟ್ಟು ಬಂದ ಸಂಬಂಧವಲ್ಲವೇ?" ಎಂದು ಉದ್ಗರಿಸಿದರು.

"ನಿಮ್ಮ ಮಗ ಎಲ್ಲಿ?" ಎಂದು ಕೇಳಿದೆ.

"ಇವತ್ತು ಬೆಳಗ್ಗಷ್ಟೇ ವಂಡಸೆಗೆ ಹೋದ. ಅವನು ಅಲ್ಲಿಂದ ದೋಣಿಯಲ್ಲಿ ಕುಂದಾಪುರಕ್ಕೆ ಹೋಗಿ, ಮತ್ತೆಲ್ಲಿಗೋ ಹೋಗುತ್ತಾನಂತೆ" ಎಂದಂದು, ಅವರೂ ಅವನನ್ನಷ್ಟು ದೂರಿದರು.

ವಿಷಯ ಹೇಗೆಯೇ ಇರಲಿ, ನನ್ನ ಮಿತ್ರನಾದ ಜನಾರ್ದನನು ಮದುವೆ ಮತ್ತು ಆರತಿ, ಅಕ್ಷತೆಗಳೆರಡನ್ನೂ ತಪ್ಪಿಸಿಕೊಂಡದ್ದು ನನಗೆ ತೀರ ಅತೃಪ್ತಿಯ ವಿಷಯವಾಗಿತ್ತು. ಹೀಗೆ ಸಂಭವಿಸಿದ ಎರಡು ಅತೃಪ್ತಿಯ ವಿಷಯಗಳನ್ನು ಬಿಟ್ಟುದಾದರೆ, ಮತ್ತೆಲ್ಲವೂ ಸಾಂಗವಾಗಿಯೇ ನಡೆಯಿತು. ಆರತಿ, ಅಕ್ಷತೆಗಳು ಕಳೆದ ಬಳಿಕ, ನಮ್ಮ ಬೀಗರು ಒಂದು ದಿವಸ ಇದ್ದು, ತಮ್ಮ ಪುರಾತನ ನೆಲೆಯನ್ನು ಕಾಣಲೆಂದು ಹಗಲೂರಿಗೆ ಹೋಗಿ ಬಂದರು. ಅವರೊಡನೆ ನಾರಾಯಣನೂ ಹೋಗಿದ್ದ. ಅವರು ಯಾರೂ ಇಲ್ಲದ ವೇಳೆಯಲ್ಲಿ, ನನ್ನ ನಾದಿನಿ ಅಶ್ವತ್ಥದ ಕಟ್ಟೆಯಲ್ಲಿ ಕುಳಿತ ನನ್ನ ಅಜ್ಜಿಯನ್ನು ಬಾಯಿ ತುಂಬ ಮಾತನಾಡಿಸುತ್ತಿದ್ದುದನ್ನು ಕಂಡಾಗ ನನಗೆ ಆಶ್ಚರ್ಯವೂ ಆಯಿತು; ಸಂತೋಷವೂ ಆಯಿತು! ಅದರಿಂದ ಸೀತೆಗೆ ಏನು ಅನಿಸಿತೋ- ಹೇಳಲಾರೆ.

ನನಗೆ ಅದರಿಂದ ಮತ್ಸರವಾದದ್ದೂ ನಿಜವೇ! ಅವರೆಲ್ಲರೂ ಬೇಗನೇ ಶಿವಮೊಗ್ಗೆಗೆ ಮರಳುತ್ತಿದ್ದರೆ, ನಾನು ಅದೇ ಕಟ್ಟೆಯಲ್ಲಿ ಕುಳಿತು ಇನ್ನು ಬಾಕಿ ಉಳಿದ ಆ ಒಂದು ಎಲುಬಿನ ಚೂರನ್ನು ಅಜ್ಜಿಗೆ ತೋರಿಸಿ, ಪ್ರಶ್ನೆ ಕೇಳಬಹುದಿತ್ತು- ಎಂದು ನನಗೆ ಅನಿಸಿದ್ದುಂಟು. ಆದರೆ, ಅದು ಎಲುಬಿನ ಚೂರಾದುದರಿಂದ ಇನ್ನೂ ಧೈರ್ಯ ಬಾರದೆಯೇ ಸುಮ್ಮನಿದ್ದೆ. ಅತ್ತ, ನಮ್ಮ ಹೊಸ ನಂಟರಾದ ಅನಂತರಾಯ- ನಮ್ಮ ಅಜ್ಜಿ ಅಂಥವರು, ಇಂಥವರು, ಅವರಿಂದಲೇ ಈ ಲಗ್ನ ಕಾರ್ಯ ನಡೆಯಬೇಕು- ಎಂದು ಹಂಬಲಿಸಿದವರು,

ಮದುವೆ ಮನೆಯಲ್ಲಿ ಅಜ್ಜಿಯನ್ನು ಉಪಚರಿಸಿದ್ದನ್ನು ಮಾತ್ರ ಕಾಣೆ. ಮೂಡೂರಿಗೆ ಮರಳಿದ ಮೇಲೆಯೂ ಮಾತನಾಡಿದ್ದನ್ನು ಕಾಣೆ. ಅದಕ್ಕೆಲ್ಲ ಸಾಕಷ್ಟು ಸಮಯ, ಸಂದರ್ಭಗಳು ಸಿಗಲಿಲ್ಲವೆನ್ನಿ. ಆದರೆ, ಶಿವಮೊಗ್ಗೆಗೆ ಹೊರಡುವಾಗ ಮಾತ್ರ ಅವರು "ಅಜ್ಜಮ್ಮ ನಾವು ಹೋಗಿಬರುತ್ತೇವೆ; ಆಶೀರ್ವಾದವಿರಲಿ" ಎಂದದ್ದನ್ನು ಕಂಡಿದ್ದೆ. ಅವರು ಮಾತಿಲ್ಲದೆ ನಕ್ಕರು; ಇವರು ಅಷ್ಟನ್ನೂ ಮಾಡಲಿಲ್ಲ.

ಆಗ ನನಗೆ ಅನಿಸಿತು- ಈ ಅನಂತರಾಯರು ನಮ್ಮ ಅಜ್ಜಿಯನ್ನು ಅಟ್ಟಕ್ಕೇರಿಸಿದ ಕಾರಣವೆಂದರೆ, ನನಗೆ ಅವರ ವಿಷಯದಲ್ಲಿ ಹೆಚ್ಚಿನ ಗೌರವವಿತ್ತು ಎಂಬುದರಿಂದ. ಅವರನ್ನು ತಾವು ಉಬ್ಬಿಸಿ ಮಾತನಾಡಿದರೆ, ನಾನು ಬಗಲಿಗೆ ಬಿದ್ದಂತೆಯೇ ಎಂದು ಲೆಕ್ಕವಷ್ಟೇ. ನಿಜದ ಸಂಗತಿ ಹಾಗಿದ್ದರೂ ಕೂಡ, ಅವರು ಆ ರೀತಿ ನನ್ನ ಹೆಡ್ಡುತನದ ಲಾಭವನ್ನು ಪಡೆಯಬಾರದಿತ್ತು ಎನಿಸಿತು. ಬಹಳ ದಿನಗಳ ತನಕವೂ ಉಳಿದ ಈ ವಿಷಯದ ಸಂದಿಗ್ಧ ನಿವಾರಣೆಯಾದದ್ದು ಅನಂತರವೇ; ನಮ್ಮ ನಾರಾಯಣನು ಹೆಂಡತಿಯನ್ನು ಕರೆದುಕೊಂಡು ಶಿವಮೊಗ್ಗೆಗೆ ಹೊರಟು ಹೋದ ಮೇಲೆಯೇ. ಅದರ ಮೇಲೆ ಸೀತೆಗೆ ತನ್ನ ಯಜಮಾನಿಕೆ ತನಗೆ ವಾಪಸ್ಸು ಸಿಕ್ಕಿತು ಎನಿಸಿದ್ದು. ಅಲ್ಲಿಯ ತನಕವೂ "ಇದು ನಾರಾಯಣ ಮತ್ತು ಅವಳ ಮನೆ; ನನ್ನದು, ನಿಮ್ಮದು ಅಲ್ಲ-ಅಂತಲೇ ಅನಿಸಿತು" ಎಂದಳು ಅವಳು, ಬಾಯಿಬಿಟ್ಟು.

ನಾನೆಂದೆ: "ನೀನು ದೊಡ್ಡವಳು; ಈಗಿನ ಕಾಲದ ಓದಿದ ಮಕ್ಕಳೆಂದರೆ ಹಾಗೆಯೇ. ಅವು ಬೆಳೆದದ್ದು ಪೇಟೆಯಲ್ಲಿ. ಇರುತ್ತವೆ ಗಂಡುಬೀರಿಗಳ ಹಾಗೆ. ಅವಕ್ಕೆ ಮಾತು ಹೆಚ್ಚು. ಅಳುಕು ಕಡಿಮೆ. ನಿನ್ನ ಹಾಗೆ ಅವಳು ಹಳ್ಳಿಯಲ್ಲಿಯೇ ಹುಟ್ಟಿ, ಇಲ್ಲೇ ಬೆಳೆದವರಂತೆ ತನ್ನ ನಾಲಗೆ ಬಾಯಿಯೊಳಗಿರಿಸಿಕೊಂಡಿರಲು ಕಲಿತವಳಲ್ಲ" ಎಂಬ ಸಮಾಧಾನವನ್ನು ಹೇಳಿದೆ. ಅದೇ ದಿನವಲ್ಲ; ಅದರ ಮರುದಿನ, ಯಾತಕ್ಕೋ ಅಜ್ಜಿಯ ಪ್ರಸ್ತಾಪ ಬಂದಿತು. ಆಗ ನಾವಿಬ್ಬರೇ ಇದ್ದೆವು. ಕಿಟ್ಟು, ಚಂದ್ರರು ಸ್ವಲ್ಪ ಆಚೆಗೆ ಮಲಗಿಕೊಂಡಿದ್ದರು. ನನ್ನ ಸೀತೆ "ನಿಮ್ಮ ಅಜ್ಜಿ ಚಿಂತೆಯಿಲ್ಲ" ಎಂದಳು.

"ಏನು ಬಂತಪ್ಪ?"

"ಬೀಗರ ಮಗನೊಂದಿಗೆ ಅವರು ಮಾತನಾಡಿದ್ದನ್ನು ಕೇಳಿ ನನಗೆ ತೀರ ದಿಗಿಲಾಯಿತು."

"ಯಾರೊಡನೆ ಯಾರು ಮಾತಾಡಿದ್ದು?"

"ನಿಮ್ಮ ಅಜ್ಜಿ ಬೀಗರ ಮಗ ಅನಂತಯ್ಯನ ಹತ್ತಿರ."

"ಅವರೂ ಇವರೂ ಸಂಧಿಸಿದ್ದನ್ನು ಕಾಣೆ!"

"ಇಲ್ಲಪ್ಪ, ನಾನಾಗ ಈಚಿ ಕೋಣೆಯಲ್ಲಿದ್ದೆ. ಅವರು ಅಜ್ಜಮ್ಮನನ್ನು ಮಾತನಾಡಿಸಲಿಕ್ಕೆ ಹೋದರು; ಮಾತನಾಡಿಸಿದರು. ಒಂದು ವಿಷಯದಲ್ಲಿ ನಿಮ್ಮ ಅಜ್ಜಿ ಹಿಸುಕಿ, ಹಿಸುಕಿ ಹೇಳಿದರು. ಅದಕ್ಕೆ ತಲೆ ಇಲ್ಲ, ಬುಡವಿಲ್ಲ."

"ಅಂದರೆ."

"ಒಂದು ಲೆಕ್ಕಕ್ಕೆ ಸಮ; ಇನ್ನೊಂದು ಲೆಕ್ಕಕ್ಕೆ ತಪ್ಪು."

"ವಿಷಯ ಏನೆಂದು ಹೇಳು."

"ಅವರು ಬಂದರು; ಬಂದು ಅಜ್ಜಿಯ ಹತ್ತಿರ ಕುಳಿತರು. "ನೀವು ಬಂದು ಮದುವೆ ನಡೆಯಿಸಿಕೊಟ್ಟಿದ್ದೆಂಬುದು ತುಂಬ ಚೆನ್ನಾಯಿತು" ಎಂದರು. ಇವರು ಅಷ್ಟಕ್ಕೇ ಒಂದು ನಮೂನೆಯಾದರು: "ನಾ ಬಂದೆ- ಮೊಮ್ಮಗ್ರ ಹೇಳಿದ ಅಂತ. ನಡೆಸುವುದು, ಗಿಡಿಸುವುದು ತ್ರಾಣವಿದ್ದವರು; ಅದು ನಾನಲ್ಲ. ನನ್ನದೇನು ಮುದುಕಿ ಸಂಭ್ರಮ!" ಎಂದರು. ಆಮೇಲೆಯೂ ಇವರು ಏನೇನೋ ಸುಖ, ದುಃಖ ಹೇಳಿದರು. ಇವರು ಮೆಲ್ಲಗೆ "ಅನಂತಯ್ಯ ಅಂತಲ್ಲವೇ ಹೆಸರು? ಎಷ್ಟು ಮಂದಿ ಅಣ್ಣ ತಮ್ಮಂದಿರು ನೀವು?" ಎಂದು ಕೇಳಿದ್ದಕ್ಕೆ ಅವರು "ಮೊದಲಿನವ ನಾನು, ಅನಂತರ ಒಬ್ಬ ತಮ್ಮ ಆ ಮೇಲೆ ಇಬ್ಬರು ತಂಗಿಯರು, ಆದರ ಮೇಲೆ ಮತ್ತಿಬ್ಬರು ತಮ್ಮಂದಿರು" ಎಂದ ನೆನಪು.

"ಹಾಗಿದ್ದರೆ ನೀನೇ ಹಿರಿಯವ. ನೀನಿನ್ನೂ ಮದುವೆಯಾಗಿಲ್ಲ. ಎಲ್ಲ ಯೋಚನೆ ಬಿಟ್ಟು ಮೊದಲು ನೀನೊಂದು ಮದುವೆಯಾಗು; ತಂಗಿಯರಿಗೆ ಆಗಬೇಕಾದ್ದು ಸಹಜವೇ. ನಿನ್ನದಾಗಬೇಕಾದುದೂ ಒಳ್ಳೆಯದೇ."

"ಯಾಕೆ ಹಾಗೆ ಹೇಳುತ್ತೀರಿ?" ಎಂದು ಕೇಳಿದರು.

"ಯಾಕೆ ಅನ್ನಲಿ? ಮದುವೆಯನ್ನು ಮುಂದಕ್ಕೆ ತಳ್ಳಿ, ತಳ್ಳಿ, ಮತ್ತೆ ಅಡ್ಡದಾರಿ ಹಿಡಿಯಬಾರದು ಎಂಬುದರಿಂದ ಹೇಳಿದೆ."

"ನನಗೆ ಯಾಕೋ ಮದುವೆಯ ವಿಷಯ ಪಸಂದ ಕಾಣುವುದಿಲ್ಲ."

"ಅದು ಪಸಂದ ಕಾಣದಿದ್ದವನು ತಂಗಿಯ ಲಗ್ನಕ್ಕೆ ಯಾಕೆ ಹೊರಟೆ?"

"ನನ್ನ ಮಟ್ಟಿಗೆ ಬೇಡ ಮದುವೆ- ಸದ್ಯಕ್ಕೆ- ಅಂತಿದೆ. ನನ್ನ ನಮೂನೆ ಒಂದು ತೆರ. ಲೌಕಿಕದಲ್ಲಿ ನನಗೆ ಇಷ್ಟವೇ ಇಲ್ಲ; ಪಾರಮಾರ್ಥದ ಕಡೆಗೆ ನನ್ನ ಒಲವು ಹೆಚ್ಚು."

"ಮದುವೆ ಮಾಡಿಕೊಂಡರೆ ಪಾರಮಾರ್ಥಕ್ಕೆ ಕೇಡು- ಎಂದು ನಿನಗೆ ಯಾರು ಹೇಳಿದರು?"

"ರಾಮಕೃಷ್ಣ ಪರಮಹಂಸರು, ವಿವೇಕಾನಂದರು ಎಲ್ಲ."

"ಅವರು ಯಾರೋ, ನನಗೆ ಅವರು ಗೊತ್ತಿಲ್ಲಪ್ಪ. ನನಗೆ ಗೊತ್ತಿದ್ದ ಕೆಲವರು- ಮದುವೆ ಬೇಡ, ಬೇಡ- ಎಂಬ ನಾಟಕ ಮಾಡಿ, ಒಳಗಿಂಮೊಳಗೆ ಹೇಗೆ ಹೇಗೋ ಇದ್ದದ್ದನ್ನು ಕಂಡಿದ್ದೇನೆ. ಪಾರಮಾರ್ಥ, ಗೀರಮಾರ್ಥ- ಎಂಬುದೆಲ್ಲ ಸರಿ. ಮದುವೆಯ ಮನೆಯಲ್ಲಿ ನಿನ್ನ ಓಡಾಟ ಕಂಡ ನನಗೆ ಅಂಥ ಪಾರಮಾರ್ಥ ನಿನ್ನಲ್ಲಿ ಕಾಣಿಸಲಿಲ್ಲ. ಎಲ್ಲರ ಹಾಗೆಯೇ ನೀನು ಅಂಥ ತಿಳಿದುಕೋ."

"ಅದು ಒಂದು ಮನಸ್ಸಿಗೆ ಬಂಧನ."

"ಹಾಗೆ! ಹೆಣ್ಣು ಗಂಡಿಗೆ ಬಂಧನ- ಅಂತ. ಹೌದೌದು, ನಿನ್ನ ರಾಮಕೃಷ್ಣರೇ ಮದುವೆ ಮಾಡಿಕೊಂಡರು. ಹೆಣ್ಣು ಗಂಡಿಗೆ ಬಂಧನ; ಅದೇ ಪಾರಮಾರ್ಥಕ್ಕೆ ಕುಂದು- ಎಂದು ನೀನು ಕಟ್ಟಿಕೊಂಡ ಆ ದೇವರಿಗೂ ಅನಿಸುತ್ತಿದ್ದರೆ, ಅವನು ಸೃಷ್ಟಿಯನ್ನೇ ಮಾಡುತ್ತಿರಲಿಲ್ಲ. ಹೆಣ್ಣು, ಗಂಡು ಅಂತ ಮಾಡಿದ್ದು ನೀನಲ್ಲ, ನಾನಲ್ಲ. ಈ ಲೋಕವನ್ನು ಹುಟ್ಟಿಸಿದವನೇ ಹಾಗೆ ಮಾಡಿದ. ಅವನು ಹೆಡ್ಡನಿರಲಾರ, ತಪ್ಪು ಮಾಡಿರಲಾರ, ಅವನಿಗೆ ಗೊತ್ತಿದ್ದೀತು- ಯಾಕೆ ಇದನ್ನೆಲ್ಲ ಮಾಡಿದೆ ಅಂತ. ಆ ದೇವರಿಗಿಂತಲೂ ನಾನೂ, ನೀನೂ ಬುದ್ಧಿವಂತರಲ್ಲವಷ್ಟೇ."

"ಇಹದಲ್ಲಿ ಎಲ್ಲಕ್ಕಿಂತಲೂ ಸನ್ಯಾಸವೇ ಶ್ರೇಷ್ಠ,ಬ್ರಹ್ಮಚರ್ಯ ಶ್ರೇಷ್ಠ ಅನ್ನುತ್ತಾರಲ್ಲ."

"ಆಯಾಯ ಪ್ರಾಯಕ್ಕೆ ಅದದು ಶ್ರೇಷ್ಠ. ಮದುವೆ ಮಾಡಿಕೊಂಡಿಲ್ಲ ಅಂದ ಮಾತ್ರಕ್ಕೇ ನೀನು ಬ್ರಹ್ಮಚಾರಿಯಾಗುವುದಿಲ್ಲ; ಸನ್ಯಾಸಿಯೂ ಆಗುವುದಿಲ್ಲ. ಹಗಲುವೇಷದ ಬ್ರಹ್ಮಚಾರಿಗಳೂ, ಸನ್ಯಾಸಿಗಳೂ ಸಾವಿರ ಮಂದಿ ಕಾಣಿಸುತ್ತಾರೆ. ಆಗಬೇಕಾದ ಪ್ರಾಯದಲ್ಲಿ ಮದುವೆ ಆಗು, ನಾಳೆ ಆಗಬೇಕು ಅಂತ ಅನಿಸಿದಾಗ ಹೆಣ್ಣು ಕೊಡುವವರು ಸಿಗದೆ ಹೋದಾರು. ನೀನೂ ಒಬ್ಬ ಅವನ ಹಾಗೆ ಆಗಬಾರದು- ಎಂಬುದಕ್ಕೆ ಹೇಳಿದೆ."

"ನಾನು ಯಾರ ಹಾಗೂ ಆಗುವುದಿಲ್ಲ, ಅಜ್ಜಿ. ನನ್ನ ಮನಸ್ಸು ನನಗೆ ಗೊತ್ತಿದೆ."

"ನಿನಗೆ ದೇವರು, ಪಾರಮಾರ್ಥ, ಮೋಕ್ಷಗಳ ವಿಚಾರದಲ್ಲಿ ತಿಳಿವಳಿಕೆ, ಪ್ರೀತಿಯಿಲ್ಲ ಎಂದು ನಾನೆನ್ನುವುದಿಲ್ಲ. ಏನೂ ತಿಳಿದಿಲ್ಲ- ಅಂತ ಹೇಳಿದ್ದೂ ಅಲ್ಲ. ತಮ್ಮ ತಮ್ಮ ಇತಿಮಿತಿ ತಿಳಿಯದಿರುವುದೇ ಹೆಚ್ಚು. ಪುರಾಣಗಳಲ್ಲಿ ಹತ್ತಾರು ಋಷಿಗಳು ಸಂಸಾರವನ್ನು ಕಟ್ಟಿಕೊಂಡು ಇದ್ದ ಕತೆ ಹೇಳುತ್ತದೆ. ಅಂಥವರಿಗೆ ಮೋಕ್ಷವಿಲ್ಲ ಅಂತ ಹೇಳಿದ್ದನ್ನು ನಾನೆಲ್ಲೂ ಕಾಣೆ. ದೇವರನ್ನು ಪ್ರೀತಿ ಮಾಡುವುದಕ್ಕೆ ಸಂಸಾರ ಬಾಧಕವಿಲ್ಲ. ಸಂಸಾರ ನಡೆಯಿಸಲಿ- ಅಂತಲೇ ಅವನು ಗಂಡು, ಹೆಣ್ಣು ಎಂಬ ಸೃಷ್ಟಿ ಮಾಡಿದ್ದು."

"ನನ್ನೊಬ್ಬನಿಂದ ಅವನ ಸಂಸಾರಕ್ಕೆ ಏನು ಧಕ್ಕೆ ಬರುತ್ತದೆ? ಸಾವಿರಾರು ಮಂದಿ ಆಗಾಗ ಹುಟ್ಟುತ್ತಲೇ ಇರುತ್ತಾರೆ. ದೈವ ಸೃಷ್ಟಿಗೆ ಅದರಿಂದ ಚ್ಯುತಿ ಬರಲಾರದು."

"ಅದನ್ನೆಲ್ಲ ಅವನು ನೋಡಿಕೊಂಡಾನು ಮಗು. ನಿನ್ನದನ್ನು ನೀನು ನೋಡಿಕೋ."

"ನನ್ನದು ನನಗೆ ಗೊತ್ತಿಲ್ಲವಾದರೆ, ಅಂತಹ ನಿರ್ಧಾರ ಮಾಡಿಕೊಳ್ಳುತ್ತಿರಲಿಲ್ಲ."

"ಅದು ನಿರ್ಧಾರವೋ? ಹಾಗಿದ್ದರೆ, ಅದನ್ನು ಬಿಡಿಸಬೇಕೆಂಬ ಹಟ ನನಗಿಲ್ಲ. ನೀನು ಸಣ್ಣವನು; ಹೇಳಿದರೆ ಸ್ವಲ್ಪವಾದರೂ ತಿಳಿದೀತು- ಅಂತ ಹೇಳಿದೆ. ನೀನು ಹಾಗೆ ನಿರ್ಧಾರ ಮಾಡಬೇಕಾದುದು ಯಾವಾಗ ಗೊತ್ತೇ? ಹೆಣ್ಣಿನ ರೂಪ ಹಗಲು ರಾತ್ರಿಯೂ ಕನಸಿನಲ್ಲಿ ಸುಳಿದಾಡುವುದು ನಿಂತ ಮರುದಿನ. ಆಗಲಾದರೆ ನಿಶ್ಚಯ ಮಾಡು. ಯಾರು ಬೇಡವೆನ್ನುತ್ತಾರೆ? ಅದು ಇರುವ ತನಕವೂ ಎಲ್ಲರ ಹಾಗೆಯೂ ನೀನೂ ಒಬ್ಬ ಎಂದು ತಿಳಿ. ಪುಸ್ತಕ ಓದಿಕೊಂಡುದರಿಂದ ಬ್ರಹ್ಮಚರ್ಯ ಸಾಧಿಸುವುದಿಲ್ಲ."

"ನಾನು ಸದಾಕಾಲ ಹಗಲು, ರಾತ್ರಿಯೂ ಹೆಣ್ಣಿನದೇ ಚಿಂತೆಯಲ್ಲಿದ್ದೇನೆ ಅನ್ನುತ್ತೀರಾ?" ಎಂದು ಕೇಳಿದ್ದಕ್ಕೆ, ಇವರು "ನನಗೆ ಹಾಗೆ ಕಾಣಿಸಿದ್ದಕ್ಕೆ ನಮ್ಮವ ನೀನು ಅಂತ ತಿಳಿದು ಇಷ್ಟೆಲ್ಲ ಬುದ್ಧಿ ಹೇಳಿದೆ" ಎಂದಂದರು.

"ನನ್ನ ಮನಸ್ಸು ನನಗೆ ಗೊತ್ತಿದೆ; ಆ ವಿಷಯದಲ್ಲಿ ನೀವು ಹೇಳುವುದು ಬೇಡ" ಎಂದರು ಅವರು ಸಿಟ್ಟಿನಿಂದಲೇ.

"ಆಗಲಿ ಅಪ್ಪ, ನಾನು ಯಾಕೆ ಅಂಕೆ ಮಾಡುತ್ತೇನೆ ನಿನ್ನನ್ನು?" ಎಂದರು, ಇವರು.

"ಮನೆಗೆ ಬಂದವರ ಹತ್ತಿರ ಹೀಗೆಲ್ಲ ನಿಮ್ಮ ಅಜ್ಜಿ ಸಿಕ್ಕಾಪಟ್ಟೆ ಮಾತನಾಡಿದರೆ ಹೇಗೆ? ಅವರ ಮನಸ್ಸಿಗೆ ಅವನ ತಲೆಯೊಳಗೆ ಇಲ್ಲದ್ದೂ ಕಾಣಿಸುತ್ತದೆ- ಎಂತಲೇ?"

"ಅಜ್ಜಿ ಬರಿದೆ ಹಾಗೆ ಹೇಳುವವರಲ್ಲ."

"ಸುಮ್ಮನಿರಿ ನೀವು, ನಿಮಗೆ ನೋಡಿ, ನಿಮ್ಮ ಅಜ್ಜಿಯ ಮರುಳು ಗೊತ್ತಾಗುವುದಿಲ್ಲ ಏನೇನೂ."

"ಅಯ್ಯೋ ಮಹಾರಾಯಿತಿ, ನನಗೆ ನನ್ನ ಮರುಳೇ ತಿಳಿಯುವುದಿಲ್ಲ. ಅಜ್ಜಿಯದು ಗೊತ್ತಾಗುವುದು ಹೇಗೆ?"

"ಸುಮ್ಮಸುಮ್ಮಗೆ ಮನೆಗೆ ಬಂದ ನೆಂಟರೊಡನೆ ಇವರು ಬೇಡದ ಅಧಿಕಪ್ರಸಂಗ ಮಾತನಾಡಿ-"

"ಛೇ, ಅದು ನನಗೆ ಮೊದಲೇ ಗೊತ್ತಾಗುತ್ತಿದ್ದರೆ ಈ ನಂಟಸ್ತಿಕೆಯ ಪ್ರಸ್ತಾಪವನ್ನು ನಾನು ಅವರ ಹತ್ತಿರಕ್ಕೇ ಒಯ್ಯುತ್ತಿರಲಿಲ್ಲ" ಎಂದೆ ನಾನು, ತಾಳ್ಮೆಗೆಟ್ಟು.

ಅಷ್ಟಕ್ಕೆ ಅಜ್ಜಿಯ ದನಿ ಕೋಣೆಯಿಂದ ಕೇಳಿಸಿತು; "ಮಾಣಿ, ನನ್ನ ಮರುಳಿಗಾಗಿ ನೀನು ಸೀತೆಯ ಹತ್ತಿರ ಜಗಳ ಮಾಡಬೇಡ" ಎಂದರು.

# ಅಧ್ಯಾಯ 8

ಮದುವೆ ಅಥವಾ ಮುಂಜಿ, ಯಾವುದಾದರೂ ಸರಿಯೆ, ಅವು ಬಂದಾಗ ಮನೆಯೆಂಬುದು ಒಂದು ಸಂತೆಯು ಹಾಗೆ ಆಗುತ್ತದೆ. ನೆಂಟರಿಷ್ಟರು ಮನೆಗೆ ಬರಬಾರದೆಂದಲ್ಲ. ಅಪೂರ್ವಕ್ಕೆ ನಾಲ್ಕು ಮಂದಿ ಬಂದರೆ ಸಂತೋಷವೇ ಆಗುತ್ತದೆ. ಆದರೆ, ನಮ್ಮ ಮೂಡಿನ ಊರಿನಲ್ಲಿ ಒಮ್ಮೆಗ್ರೇ ಹತ್ತು ಮಂದಿ ಬಂದರೆ, ಅವರಿಗೆ ಬೇಕಾದ ಸಮ್ಮಾನ್ಯ ಮಾಡುವುದಕ್ಕೆ ಜನರ ನೆರವು ಕಡಿಮೆ. ಮನೆಯಲ್ಲಿದ್ದುದನ್ನು ಹೇಗೂ ಬೇಯಿಸಿ ಹಾಕುತ್ತೇವೆ. ಬಾಯಿ ಉಪಚಾರ ಮಾಡುತ್ತೇವೆ. ಅದೆಲ್ಲವೂ ಸರಿ, ಅವೆಲ್ಲವುಗಳ ಭಾರ ಮನೆಯವರ ಮೇಲೆಯೇ ಬೀಳುವಾಗ - ನಾವು ಎಲ್ಲಿ ತಪ್ಪಿದೆವು; ಅದನ್ನು ಮಾಡಿದ್ದು ಹೆಚ್ಚಾಯಿತೇ, ಇಲ್ಲವೇ ಇದನ್ನು ಮಾಡಿದ್ದು ಕಡಿಮೆಯಾಯಿತೇ - ಎಂಬ ಕಳವಳ ಆಗಾಗ ಬಂದೇ ಬರುತ್ತದೆ. ನಮ್ಮ ಹಿಂಡುಗಾನ ಮಂಜುನಾಥನ ಸಹಾಯವಿಲ್ಲದೆ ಹೋಗುತ್ತಿದ್ದರೆ ನಾನಂತು ಕಂಗಾಲಾಗುತ್ತಿದ್ದೆ. ಅವನು, ಅವನ ಹೆಂಡತಿ ಶ್ರೀದೇವಮ್ಮ ನಮ್ಮ ಮನೆಗೆ ಬಂದು, ನಮ್ಮ ಮೇಲೆ ಬಿದ್ದ ಯಾವತ್ತು ಹೊರೆಯನ್ನು ಹೊತ್ತರು. ತಮ್ಮದ್ರೇ ಮನೆಯೆಂದು ತಿಳಿದು ಎಲ್ಲ ಕಾರುಭಾರು ನಡೆಯಿಸಿದುದರಿಂದ ನನ್ನ ಮತ್ತು ಸೀತೆಯ ಮಾನ ಉಳಿಯಿತು. ಶಿವಮೊಗ್ಗೆಯಿಂದ ಬಂದ ಬೀಗರ ಪರಿವಾರವನ್ನು ಗಾಡಿ ಹತ್ತಿಸಿ, ವಂಡಸೆಗೆ ಮುಟ್ಟಿಸಿ, ಅಲ್ಲಿಂದ ದೋಣಿಯಲ್ಲಿ ಕುಳ್ಳಿರಿಸುವ ತನಕವೂ ನನಗೆ ಉಸಿರಿನಲ್ಲಿ ಉಸಿರಿರಲಿಲ್ಲ. ಆದರೆ ಎಲ್ಲವನ್ನೂ ಮೂಕಾಂಬೆ ನಡೆಯಿಸಿಕೊಟ್ಟಳು - ಎನ್ನುತ್ತಾಳೆ ಸೀತೆ. ಮಂಜುನಾಥನನ್ನು ಕೇಳಿದರೆ, ಅವನು ನಂಬಿದ ಹಿಂಡುಗಾನ ಅಮ್ಮನವರು ಅದನ್ನು ನಡೆಯಿಸಿದ್ದರಂತೆ.

ನಮ್ಮ ಊರಿನಿಂದ ಹಿಂಡುಗಾನಕ್ಕೆ ಎರಡು ಮೈಲು ದೂರ ಕೂಡ ಇಲ್ಲ. ಅಲ್ಲಿ ಅನಾದಿಯಿಂದಲೂ ಅವನ ಹಿರಿಯರು ನಂಬಿ ಬಂದಿರುವ ಅಮ್ಮನವರ ಒಂದು ಗುಡಿಯಿದೆ. ನಾನು ಅದನ್ನು ಅಷ್ಟೊಂದು ಚೆನ್ನಾಗಿ ಕಣ್ಣು ಬಿಟ್ಟು ನೋಡಿದವನಲ್ಲ. ಒಂದೆರಡು ಬಾರಿ ಆ ಕಡೆಗೆ ಹೋದಾಗ ಗುಡಿಯ ಹೊರಗಡೆ ನಿಂತು, ನಮಸ್ಕಾರ ಮಾಡಿ ಬಂದದ್ದುಂಟು. ಅದಕ್ಕಿಂತ ಹೆಚ್ಚೇನೂ ನನಗೆ ತಿಳಿಯದು. ಮಂಜುನಾಥನ ವಿಚಾರ ಹಾಗಲ್ಲ - ಅವನ ಮನೆ ಅದಕ್ಕೆ ಸಮೀಪವಾಗಿದೆ; ಮನೆಯ ದೇವರೇ ಆ ಅಮ್ಮನವರಿದ್ದಂತೆ. ಬಹಳ ನಂಬಿಕೆ ಅವಳಲ್ಲಿ. ಕೊಲ್ಲೂರು ಸುಳ್ಳು; ಹಿಂಡುಗಾನ ಅಮ್ಮ ನಿಜ, ಅವನ

ಪಾಲಿಗೆ. ಅವನು 'ಜಗದಂಬೆ' ಎನ್ನುವಾಗಲೆಲ್ಲ ಯಾವುದೋ ಮಹಾಕ್ಷೇತ್ರದ ಅಧಿಷ್ಠಾತ್ರಿ ಆಕೆ ಎನಿಸಬೇಕು - ಕೇಳಿದವರಿಗೆ. ಅವನು ಹೇಳುವುದು ಈ ಅಮ್ಮನನ್ನು ಕುರಿತೇ. ಅವಳ ಪೂಜೆಯನ್ನು ಭಾರೀ ವೈಭವದಿಂದ ಮಾಡುವುದಕ್ಕಾಗಿ ಆತ ಪ್ರತಿ ವರ್ಷವೂ ಊರಿಗೆ ಬರುತ್ತಾನೆ. ಈ ವರ್ಷ ಗುಡಿಯ ಮಾಡನ್ನು ಹೊಸತಾಗಿ ಹೊದೆಯಿಸಿದ್ದಾನೆ. ಇನ್ನೊಂದು ಭಾರೀ ಉತ್ಸವವನ್ನು ನಡೆಯಿಸಿ ಹೋಗುತ್ತಾನೆ. ಅವನ ಉಮೇದಿಗೆ ಬಂದಿರುವಂಥ ತೊಡಕು ಇದೊಂದೇ - ನಮ್ಮ ಊರಿನಲ್ಲೇ ನೂರು ಮಂದಿ ಬ್ರಾಹ್ಮಣರನ್ನು ಕಲೆಯ ಹಾಕಲು ಇರುವ ಪಜೀತಿ. ಇರುವ ಮನೆಗಳ ಸಂಖ್ಯೆ ಕಡಿಮೆ; ಇದ್ದ ಮನೆಗಳಲ್ಲಿ ಒಬ್ಬರಿದ್ದರೆ ಒಬ್ಬರಿರುವುದಿಲ್ಲ. ಹಿಂಡುಗಾನಿನಲ್ಲಿಯೇ ನಾಲ್ಕು ಬ್ರಾಹ್ಮಣರ ಮನೆಗಳೂ ಇಲ್ಲ. ಅದು ಕಾನು. ಮಂಜುನಾಥನ ಮನೆ ಒಂದು; ಮತ್ತು ಅವನಿಗೆ ದಾಯಾದಿಗಳಾದವರ ಮನೆ ಇನ್ನೊಂದು. ಮತ್ತೆ ಬೇರೆ ಹತ್ತಿಪ್ಪತ್ತು ಮನೆಗಳಿದ್ದರೆ ಅವು ಕುಡಿಯರು, ಕೂಸಾಳು, ಅಂತ ಅನ್ಯ ಜಾತಿಯವರದ್ದು. ಹಾಗಾಗಿ, ಅಮ್ಮನ ಉತ್ಸವ ಭರ್ಜರಿಯಾಗಬೇಕಾದರೆ ಈ ಮಂಜುನಾಥ ಬೈಂದೂರು, ವಂಡಸೆ, ಕೊಲ್ಲೂರು ಮತ್ತು ಕಮಲಶಿಲೆ ವಿಸ್ತಾರಕ್ಕೆ ಹರಡಿರುವ ಕಾಡು ಗುಡ್ಡಗಳನ್ನು ಸುತ್ತಿ, ಪ್ರತಿ ಮನೆಗೂ ಹೋಗಿ, ಹೇಳಿಕೆ ಕೊಟ್ಟು, ಅಂಗಲಾಚಿ ಬೇಡಬೇಕು. ಇವನು ಹೇಳಿದರೂ ಅವರು ಬರಬೇಕಲ್ಲ; ಹಿಂಡುಗಾನ ಅಮ್ಮನವರ ಪ್ರಸಿದ್ಧಿ ಇವನಿಗೆ ತಿಳಿದಂತೆ ಅವರಿಗೂ ತಿಳಿದಿರಬೇಕಷ್ಟೆ; ಅಂತು, ಕೇವಲ ದಕ್ಷಿಣೆಯ ಆಸೆಯಿಂದ ಬೈಂದೂರು, ಉಪ್ಪುಂದಗಳಿಂದ ನಾಲ್ಕಾರು ವೈದಿಕರು ಬರುವುದು ನಿಜ. ಲಲಿತಾ ಸಹಸ್ರನಾಮ ಮಾಡುವುದಕ್ಕೆ ಆಲೆಮನೆಯಿಂದ ಘಟಾನುಘಟಿ ಸುಬ್ಬಣ್ಣಿ ಜೋಯಿಸರನ್ನು ಕರೆಯಿಸುವ ನಿಶ್ಚಯ ಮಾಡಿದ್ದಾನೆ. ಇನ್ನು ಹತ್ತೇ ಹತ್ತು ದಿನಗಳಲ್ಲಿ ಆತ ದೇವಿಯ ಉತ್ಸವ ನಡೆಯಿಸಿಯೇ ನಡೆಯಿಸುತ್ತಾನೆ. ಆ ಉತ್ಸವದ ಮೋಹವನ್ನು ನನಗೆ ಅಂಟಿಸುವ ಪ್ರಯತ್ನ ಅವನದ್ದು. ಅಂದರೆ ನೋಡಿ, ನಮ್ಮ ಮನೆಯ ಮದುವೆಯನ್ನು ಮುಗಿಸಿಕೊಟ್ಟ ಅವನ ಮತ್ತು ಅವನ ಹೆಂಡತಿಯ ಉಪಕಾರವನ್ನು ನಾವು ಮರೆಯುವ ಹಾಗಿಲ್ಲವಲ್ಲ. ಹಾಗೆಂದು, ನಾವು ಅವನ ಮನೆಗೆ ಹೋಗಿ ಎರಡು ದಿವಸ ಬಿಡಾರ ಹೂಡಲು ಸಿದ್ಧರಾದರೂ, ಊಟ, ಅಡುಗೆ, ಉಪಚಾರ ಅಥವಾ ಮತ್ತೊಂದು - ಯಾವೊಂದು ವಿಷಯದಲ್ಲೂ ನನ್ನಿಂದ ಅವನಿಗೆ ಪ್ರಯೋಜನ ಸಿಗಲಾರದು. ಒಂದಷ್ಟು ಹೊರೆ ಹೆಚ್ಚೀತು. ನನ್ನ ಯೋಗ್ಯತೆ ಅಷ್ಟಕ್ಕಷ್ಟೆ. ಮನೆಯಲ್ಲಿದ್ದಾಗ ತೋಟಕ್ಕೆ ನೀರನ್ನು ಮೊಗೆದೇನು; ಎಲೆ ಅಡಿಕೆ ತಿಂದೇನು; ಅಜ್ಜಿಯನ್ನು ಮಾತನಾಡಿಸಿಯೇನು; ಸೀತೆಯನ್ನು ಗದರಿಸಿಯೇನು. ಅಲ್ಲಿಗೆ ಮುಗಿಯಿತು ನನ್ನ ರಾಜ್ಯಭಾರ. ಆದರೂ ಅವನಿಗೆ ಭರವಸೆಯನ್ನು ಕೊಟ್ಟಿದ್ದೆ. "ಬೆಳಗ್ಗೆಯೇ ಬರುತ್ತೇನೆ; ರಾತ್ರಿ ಹಿಂದಕ್ಕೆ ಬರಲೇಬೇಕು; ಅಜ್ಜಿಯೊಬ್ಬರನ್ನೇ ಮನೆಯಲ್ಲಿ ಬಿಡಲಾರೆ; ಸೀತೆ ಬೇಕಾದ ಹಾಗೆ ಮಾಡಲಿ. ಒಂದು ದಿವಸ ಬಂದು

ಬೆಳಗಿನಿಂದ ಸಂಜೆಯ ತನಕ ಇರುತ್ತೇನೆ. ನಿನ್ನ ಅಮ್ಮನವರು ನನ್ನಿಂದಾಗುವಷ್ಟು ಕೆಲಸ ಮಾಡಿಸಿಕೊಳ್ಳಲಿ" ಎಂದಿದ್ದೆ.

ಅದಕ್ಕೆ ಆತ "ಛೀ, ಛೀ, ನೀವು ಒಂದು ಕಡ್ಡಿಯನ್ನೂ ಮುಟ್ಟಬೇಕಾಗಿಲ್ಲ. ಅದಕ್ಕೆಲ್ಲ ಜನರಿದ್ದಾರೆ. ನೀವು ಬಂದು ನಮ್ಮ ಮನೆಯ ಒಂದು ಕಂಬಕ್ಕೆ ಒರಗಿ ಕುಳಿತುಕೊಂಡದ್ದಾದರೆ ನಮಗೊಂದು ಧೈರ್ಯ" ಎಂದಿದ್ದ. "ಆಯಿತು" ಅಂದಿದ್ದೆ ಅವನಿಗೆ.

ಅವನ ಮತ್ತೊಂದು ಅಪೇಕ್ಷೆಯೆಂದರೆ - ನಮ್ಮ ಅಜ್ಜಿಯನ್ನು ಅಲ್ಲಿಗೆ ಕರೆದೊಯ್ಯಬೇಕೆಂದು. ಆತ ಮೂರು ಮೂರು ಸಾರಿ ನನ್ನೊಡನೆ ಹೇಳಿದ್ದಾನೆ. ಅವರನ್ನು ಮಂಚದಲ್ಲಿ ಮಲಗಿಸಿ, ಹೊರಿಸಿಯಾದರೂ ಒಯ್ಯಬೇಕಂತೆ. ಅಜ್ಜಿ ಅದಕ್ಕೆ "ನೋಡು ಮಗು, ಬಹಳ ಹಿಂದಕ್ಕೆ ಅಮ್ಮನವರನ್ನು ಕಂಡಿದ್ದೆ. ತಿರುಗಿ ಅವರನ್ನು ಕಾಣಬಾರದೆಂದಲ್ಲ. ಮೂಕಾಂಬಿಕೆ ಕರೆಯಿಸಿಕೊಳ್ಳಲಿಲ್ಲವೆ ಮೊನ್ನೆ. ಈ ಕೋಟಳಮ್ಮ ಕರೆಯಿಸಿಕೊಂಡರೂ ಸರಿಯೆ" ಎಂದಿದ್ದಾರೆ.

ಅವರ ಬಾಯಿಯಿಂದ ಪ್ರಪ್ರಥಮ ಬಾರಿಗೆ ನಾನು ಈ 'ಕೋಟಳಮ್ಮ'ನ ಹೆಸರನ್ನು ಕೇಳಿದ್ದು. ನನಗೆ ಅಂಥ ಒಂದು ಹೆಸರು ಇದ್ದಿತ್ತೆಂದೇ ಅನಿಸಿರಲಿಲ್ಲ. ಮೈಲಿಗೆಗೆ ಒಂದು 'ಅಮ್ಮ' ಇರುವ ಹಾಗೆ, ಸೀತಾಳಿ ಇಲ್ಲವೆ ನೀರುಕೋಟಲೆಗೆ ಹಿಂದಿನವರು ಪ್ರತ್ಯೇಕವಾಗಿ ಒಂದು 'ಅಮ್ಮ'ನನ್ನು ಮಾಡಿಕೊಂಡಿರಬೇಕು - ಎನಿಸಿತು. ಹಾಗಿದ್ದರೆ, ಈ ಬಾರಿ ಆ ದೇವರ ಗುಡಿಯನ್ನು ಮತ್ತಷ್ಟು ಚೆನ್ನಾಗಿ ಕಂಡು ಬರಬೇಕು. ಗರ್ಭಗೃಹದ ತನಕವೂ ಹೋಗಿ ನೋಡಿ - ಎಂಥ ವಿಗ್ರಹ, ಏನು ಆಕಾರ - ಎಂದು ತಿಳಿಯುವ ಆತುರವಾಯಿತು. ಅದಕ್ಕೆ ಪೂರ್ವ ಪೀಠಿಕೆ ಎಂಬಂತೆ - ಒಂದು ವಾರಕ್ಕೆ ಮೊದಲೇ ಮಂಜುನಾಥನ ಒತ್ತಾಯಕ್ಕೆ ಅವನ ಜತೆಗೆ ಅಲ್ಲಿಗೆ ಹೋದೆ. ಅದೇನೂ ಪರವೂರಲ್ಲವಲ್ಲ. ನಡುವೆ ಕಾಡುಗುಡ್ಡಗಳಿಲ್ಲದೆ ಹೋಗಿದ್ದರೆ ನಮ್ಮ ಮನೆಗೆ ಎರಡು ಮೈಲೂ ಇರಲಾರದು. ನಡುವೆ ಕಾಡುಗುಡ್ಡ ಇರುವುದರಿಂದ - ಅಲ್ಲಿಗೆ ಒಂದು ಹರದಾರಿ ದೂರವಾಗಬಹುದು. ಹೆಚ್ಚೆಂದರೆ, ಒಂದು ಘಂಟೆಯ ದಾರಿ. ಆತ ನನ್ನನ್ನು ಮನೆಗೆ ಕರೆಮೊಯ್ಯುವ ಮುಂಚೆಯೇ, ಗುಡಿಯ ಬಳಿಗೆ ಕರೆದೊಯ್ದ. ಅದೊಂದು ದೊಡ್ಡ ನಾಗನ ಬನದ ವಠಾರದ ಹಾಗಿತ್ತು. ಗುಡಿಯು ಇರುವುದು ಒಂದು ದಿಬ್ಬದ ಮೇಲೆ. ಅದರ ಸುತ್ತಲೂ ಗಿಡಗಳ ಹಳು. ಮಂಜುನಾಥ ಊರಿಗೆ ಬಂದವನು ಎಷ್ಟೆಲ್ಲ ಕೆಲಸ ಮಾಡಿಸಿದ್ದ ಎಂದು ತಿಳಿಯಿತು. ಅಲ್ಲಿ ಹುಟ್ಟಿ ಬೆಳೆದ ಗಿಡ, ಬಲ್ಲೆಗಳನ್ನು ಸವರಿಸಿ, ಚೊಕ್ಕಟ ಮಾಡಿಸಿದ್ದ. ಆ ದಿಬ್ಬದ ನಡುವೆ ಕಲ್ಲಿನಿಂದ ಕಟ್ಟಿದ ಎರಡು ಮೂರಂಕಣಗಳ ಕಿರಿಯ ದೇವಸ್ಥಾನ ಕಾಣಿಸುತ್ತಿತ್ತು. ಪಾಮಾಜಿ ಹಿಡಿದ ಅದರ ಗೋಡೆಗಳು ಕಪ್ಪಾಗಿ ಇದ್ದುವು. ಅಲ್ಲಿ ದಿಬ್ಬವಾಗಿ ಕಾಣಿಸಿದ್ದು - ಹಳೆಗಾಲದ ಒಂದು ವಿಶಾಲ ಪಂಚಾಂಗ. ಅದರ ಮೇಲೆ ಇತ್ತು ಈ ಗುಡ್ಡ. ಒಂದು ಕಾಲದಲ್ಲಿ ಆ

ಯಾವತ್ತು ಪಂಚಾಂಗವನ್ನು ಆವರಿಸುವ ದೊಡ್ಡ ದೇವಾಲಯ ಅಲ್ಲಿ ಇದ್ದಿರಬೇಕು. ಗುಡಿಯ ಮುಂದಕ್ಕೆ ಸುತ್ತಣ ನೆಲವನ್ನು ಕೆತ್ತಿಸಿ, ನಾಳಿನ ಉತ್ಸವದ ಸಲುವಾಗಿ ಭಾರೀ ದೊಡ್ಡ ಚಪ್ಪರವನ್ನು ಹಾಕಿಸಿದ್ದ. ನಾವು ಹೋದಾಗ ಹತ್ತಾರು ಮಂದಿ ಮಲೆಕುಡಿಯರು ಆ ಕೆಲಸದಲ್ಲಿ ನಿರತರಾಗಿದ್ದರು. ಮಂಜುನಾಥ ಆಳುಗಳಿಗೆ ಏನೇನೋ ಹೇಳಲು ತೊಡಗಿದಾಗ ನಾನು ಆಚೀಚೆ ಹಿಂದಿನ ಕಾಲದ ಕುರುಹುಗಳೇನಿವೆ - ಎಂಬುದನ್ನು ನೋಡಿಕೊಂಡು, ಗುಡಿಯ ಮುಂದೆ ಬಂದು ನಿಂತೆ. ಅದರೊಳಗೊಂದು ಮಿಣುಕು ದೀಪ ಉರಿಯುತ್ತಿತ್ತು. ದೇವರ ಪೀಠದ ಮೇಲೆ ಹೂವಿನ ರಾಶಿ ಬಿದ್ದಿತ್ತು. ಎಣ್ಣೆ ಸವರಿ ಜಿಡ್ಡುಗಟ್ಟಿದ ಒಂದು ಕಲ್ಲೂ ಕಾಣಿಸಿತು. ಅದೇ ದೇವಿಯ ಮೂರ್ತಿ ಇರಬೇಕು. ಆದರೆ ಅದರಲ್ಲಿ ನನಗೆ ಯಾವೊಂದು ರೂಪವೂ ಕಾಣಿಸಲಿಲ್ಲ. ಅಲ್ಲಿ ಅಮ್ಮನವರ ಸಾನ್ನಿಧ್ಯ ಮಂಜುನಾಥನಿಗೆ ಸದಾ ಕಾಣಿಸುತ್ತಿರಲು ನಾನೂ ತಲೆಬಾಗಿಸಿ ನಿಂತೆ; ಕೈ ಮುಗಿದೆ. ಅವನು ಕರೆದೊಡನೆ ಅವನ ಜತೆಯಲ್ಲಿಯೇ ಅವನ ಮನೆಗೆ ಹೋದೆ. ಒಂದೆರಡು ಫರ್ಲಾಂಗಿನಲ್ಲಿ ಮನೆಯಿತ್ತು. ಅಲ್ಲೊಂದು ಸಣ್ಣ ಬಯಲಿದೆ. ಆ ಬಯಲಿನ ಮಗ್ಗುಲಲ್ಲಿ ಹಳೆಗಾಲದ ಮನೆಯಿದೆ. ಮಂಜುನಾಥನ ಹೆಂಡತಿ ಶ್ರೀದೇವಿಯ ಸ್ವಾಗತವಾಯಿತು. ಮನೆ ಎಂಟು ಹತ್ತು ಅಂಕಣ ವಿಶಾಲವಾದದ್ದು. ಅದು ನಾನ್ನೂರು ಎಡೆ ಹಾಕುವಷ್ಟು ದೊಡ್ಡ ಅಂಗಳ. ಅದರ ನೆಲವನ್ನು ಚೆನ್ನಾಗಿ ಒರೆಯಿಸಿ, ಕಂಬ ನಟ್ಟು ಮೊಡ್ಡ ಚಪ್ಪರವನ್ನು ಹಾಕಿಸಿದ್ದ. ಚಪ್ಪರದ ಆಯ, ಅಳತೆಗಳನ್ನು ಕಂಡಾಗ "ಮಂಜುನಾಥ, ನನ್ನ ತಮ್ಮನ ಮದುವೆಗೂ ನಾನು ಇದರ ಅರ್ಧಭಾಗದಷ್ಟು ಚಪ್ಪರ ಹಾಕಿಸಲಿಲ್ಲ" ಎಂದು ಉದ್ಗರಿಸಿದೆ.

"ನಿಮ್ಮ ವಿಷಯದ ಮಾತು ಬೇರೆಯೇ. ಮದುವೆಗೆ ಬರುವವರು ಬರೀ ನೆಂಟರಿಷ್ಟರು. ನಮ್ಮ ಬಳಗವೂ ತೀರ ಸಣ್ಣದು; ಬೀಗರ ಬಳಗವೂ ಸಣ್ಣದು, ಅಷ್ಟಕ್ಕೆ ಅದು ಸಾಕು."

"ನಾನು ಅದಕ್ಕಾಗಿ ಹೇಳಿದ್ದಲ್ಲ. ದೇವಸ್ಥಾನದ ಮುಂದೆಯೂ ಅಷ್ಟು ಮೊಡ್ಡ ಚಪ್ಪರವನ್ನು ಮಾಡಿಸುತ್ತಿದ್ದು, ಇಲ್ಲಿಯೂ ತಿರುಗಿ ಅಷ್ಟೇ ಮೊಡ್ಡ ಚಪ್ಪರ ಯಾತಕ್ಕೆ - ಎಂಬುದರಿಂದ ಕೇಳಿದೆ."

"ಸುಬ್ರಾಯರೇ, ದೇವರ ಕಾರ್ಯ, ಚಂಡಿಕಾ ಹೋಮ, ಸಹಸ್ರನಾಮ ಇವು ಎಲ್ಲವೂ ಅಲ್ಲೇ ಆಗುವುದು. ಆದರೆ, ಸಂತರ್ಪಣೆಯನ್ನು ಅಲ್ಲಿ ಮಾಡಿಸುವುದಕ್ಕೆ ಉಪಾಯವಿಲ್ಲ. ಅಲ್ಲಿನ ಬಾವಿಯಲ್ಲಿ ನೀರು ಏನೇನೂ ಸಾಲದು. ಹಾಗಿದ್ದ ಮೇಲೆ"

"ಅಲ್ಲ, ನಾನ್ನೂರು ಐನೂರು ಮಂದಿಗೆ ಇಲ್ಲಿಯೇ ಜಾಗವಿದೆ. ಇಷ್ಟು ಜನರು ಬಂದಾರೇ! ಊರಿನ ಬ್ರಾಹ್ಮಣರು, ಶೂದ್ರರು ಎಲ್ಲರೂ ಒಟ್ಟು ಸೇರಿದರೂ ಅಷ್ಟು ಜನರು ಎಲ್ಲಿಂದ ಬರಬೇಕು?"

"ನಿಮಗೆ ಯಾಕೆ ಅದೆಲ್ಲ? ನಾಳೆ ನೋಡಿ - ಎಷ್ಟು ಜನ ಬರುತ್ತಾರೆಂದು. ಆಮೇಲೆ ಗೊತ್ತಾಗುತ್ತದೆ. ನನ್ನ ಮಾಣಿ ವಂಡಸೆ, ಬೈಂದೂರು, ಉಪ್ಪುಂದ, ಹೆರಂಜಾಲು ಎಂದು ಹತ್ತು ಊರಿಗೆ ಹೇಳಿಕೆ ಮಾಡಿದ್ದಾನೆ. ನಮ್ಮ ಅಜ್ಜಂದಿರ ಕಾಲದಲ್ಲಿ ಇಲ್ಲಿ ಸಾವಿರ ಎಡೆ ಸಂತರ್ಪಣೆಯಾಗುತ್ತಿತ್ತಂತೆ. ಅಪ್ಪನ ಕಾಲಕ್ಕೆ ಕಂದಾಯ ಕೊಡಲಾಗದೆ ಈ ಆಸ್ತಿಯೇ ಕೈಬಿಟ್ಟಿತು. ನನ್ನ ಬಾಲ್ಯ ಕಂಗಾಲಿನ ಕಾಲ. ಈಗ ಅಮ್ಮನವರು ಕೈಯಲ್ಲಿ ಒಂದಿಷ್ಟು ಕಾಸು ಹಾಕುತ್ತಿದ್ದಾಳೆ. ಅವಳ ನೆನಪು ಮರೆತರೆ ಹೇಗೆ? ಅವಳು ಹೀಗೆಯೇ ನಡೆಯಿಸಿದರೆ, ಮುಂದೆ ವರ್ಷಾನುವರ್ಷ ಉತ್ಸವ ಮಾಡಿಸಿಯೇನು."

"ವರ್ಷಾನುವರ್ಷವೇ? ಜನರು ಬಂದರಾದರೂ ಒಂದು ಸಾರ್ಥಕ."

"ಜನ ಬರದೆ ಏನಂತೆ? ಇವತ್ತು ಬಾರದೇ ಹೋದರೆ ನಾಳೆ ಬಂದಾರು. ಇನ್ನು ಮೂರು ವರ್ಷಗಳ ಕಾಲ ಅವಳು ಹೀಗೆ ನಡೆಯಿಸಿದರೆ, ನಡೆಯಿಸದೆ ಏನು ಮಾಡುತ್ತಾಳೆ? ದೇವಾಲಯದ ಜೀರ್ಣೋದ್ಧಾರ ಮಾಡಿಸುತ್ತೇನೆ. ಗರ್ಭಗುಡಿಯ ಗೋಡೆಯನ್ನು ಏರಿಸಿ, ಚೌಮಾಡು ಹಾಕಿಸಿ, ತಾಮ್ರ ಹೊದೆಸುತ್ತೇನೆ. ಸುತ್ತಲೂ ಹಾಳುಬಿದ್ದ ಪಾಯವನ್ನು ಕಂಡಿರಷ್ಟೆ! ಅದರ ಮೇಲೆ ಗೋಡೆ ಮತ್ತು ಕಂಬಗಳನ್ನು ಇರಿಸಿ, ಹೆಂಚಿನ ಚಾವಣಿ ಮಾಡಿಸಬಹುದು. ಅವಳು ನನ್ನ ಕೈಯಿಂದ ಅಷ್ಟು ಮಾಡಿಸಿಕೊಂಡಾಳು."

ನನಗೆ ಅವನ ಇಂಥ ಯೋಚನೆಗಳನ್ನು ಕೇಳಿದಾಗಲಂತೂ ಗಾಬರಿಯೇ ಆಯಿತು. ಅವನ ಎಣಿಕೆ ಸಣ್ಣದಲ್ಲ. ಕೆಲಸ ತೊಡಗಿದರೆ ಹತ್ತು ಸಾವಿರ ಬೇಕೋ, ಇಪ್ಪತ್ತು ಸಾವಿರ ಬೇಕೋ! ಆ ಅಳುಕೇ ಇಲ್ಲದವರಂತೆ ಮಾತನಾಡಬೇಕಾದರೆ, ಆತನ ಸಂಪಾದನೆ ಚೆನ್ನಾಗಿರಬೇಕು. ಅದಕ್ಕೆ ತಕ್ಕಂತೆ ಖರ್ಚು ಮಾಡುವ ಅವನ ಮನಸ್ಸು ದೊಡ್ಡದೇ ಸರಿ.

ಮಂಜುನಾಥನ ಮನೆ ಕಿರಿದಾದರೂ, ನೆಲ, ಅಂಗಳ, ಬಚ್ಚಲು, ಚಾವಡಿ ಎಲ್ಲವೂ ಓರಣವಾಗಿದ್ದುವು. ಆತ ನನಗಿಂತಲೂ ಆರೇಳು ವರ್ಷಕ್ಕೆ ದೊಡ್ಡವನು. ನಿತ್ಯದ ಸಲಿಗೆಯಿಂದ ನಾನು 'ನೀನು' ಅನ್ನುತ್ತೇನಷ್ಟೆ. ಅವನ ಸಾಂಪತ್ತಿಕ ಸ್ಥಿತಿ ನನಗಿಂತಲೂ ಉತ್ತಮವಾದದ್ದು. ನನ್ನ ಮಡದಿಯಾದ ಸೀತೆಯ ತಾಯಿ, ಅವನ ಹೆಂಡತಿ ಶ್ರೀದೇವಿಯ ತಾಯಿ ಅಕ್ಕ, ತಂಗಿಯರಂತೆ. ನಿಜವಾದ ಅಕ್ಕ ತಂಗಿಯರೋ, ಹತ್ತಿರದ ಬಂಧುಗಳೋ; ಅಷ್ಟೆಲ್ಲ ಸೂಕ್ಷ್ಮ ನನಗೂ ತಿಳಿಯದು. ಆ ಗಂಡಹೆಂಡಿರಿಗೆ ನಾಲ್ವರು ಗಂಡು ಮಕ್ಕಳು; ಐದನೆಯದು ಹೆಣ್ಣು ಮಗು. ಅವಳಿಗೆ 'ಅಂಬಾ' ಎಂದು ಹೆಸರಿಟ್ಟಿದ್ದಾನೆ. ಹಿರಿಯ ಹುಡುಗರು ಹೆಚ್ಚು ಓದಿದವರಲ್ಲ. ಊರಲ್ಲೋ, ತಂದೆಯ ಜತೆಯಲ್ಲೋ ಇದ್ದು ಸದಾ ದುಡಿಯುತ್ತಾರೆ. ಕಿರಿಯರಿಬ್ಬರು ಶಾಲೆಗೆ ಹೋಗುತ್ತಾರೆ. ಆ ದೊಡ್ಡ ಮಕ್ಕಳಿಬ್ಬರೂ ತಂದೆಯ ಶ್ರಮ ತಗ್ಗಿಸುವಲ್ಲಿ ಓಡಾಡುತ್ತಿದ್ದಾರೆ.

ಮಂಜುನಾಥನ ತಾಯಿಗೆ ಈಗ ಅರುವತ್ತು ವರ್ಷವಾದೀತು ಅಥವಾ ತುಸು ಕಡಿಮೆಯೋ! ಆಕೆಯೂ, ಹೆಂಡತಿ ಶ್ರೀದೇವಿಯೂ ಸರದಿಯಿಂದ ಆರಾರು ತಿಂಗಳ ಕಾಲ ಮೈಸೂರಿಗೆ ಹೋಗಿ, ಇದ್ದು ಬರುತ್ತಾರೆ. ಅಂತು, ಅವರಾದರೂ ಊರು ಮನೆಯ ಸಂದನ್ನು ಕಡಿದುಕೊಂಡವರಲ್ಲ. ಈಗ, ತನ್ನ ಒಬ್ಬ ಭಾವನಂಟನನ್ನು ಹೊಟೇಲಿನಲ್ಲಿ ಕುಳ್ಳಿರಿಸಿ, ನಿಶ್ಚಿಂತೆಯಿಂದ ಹಿಂಡುಗಾನಿಗೆ ಬಂದಿದ್ದಾನೆ.

ಹಿಂಡುಗಾನಿನಲ್ಲಿಯೇ, ನನಗೆ ತಿಳಿದಿರುವ ಹಾಗೆ ಒಟ್ಟಿರುವ ಬ್ರಾಹ್ಮಣರ ಮನೆಗಳು ಮೂರೋ, ನಾಲ್ಕೋ. ನನಗೆ ತಿಳಿದ ಹಾಗೆ ಎಂದೆ. ಅಂದರೆ, ಊರು ಅಷ್ಟು ಸಮೀಪವಾಗಿದ್ದರೂ, ನಾನು ಅಲ್ಲಿಗೆ ಹೋಗಿ ಬರುವುದು ಕಡಿಮೆ. ಆ ಊರಿನ ಇತರರ ಗುರುತು, ತೀರ ಪರಿಚಯ ನನಗಿಲ್ಲವೆಂದರೂ ಸಲ್ಲುತ್ತದೆ. ನನ್ನ ಅಜ್ಜಿ ಬಲು ಪೂರ್ವದಲ್ಲಿ ಅಲ್ಲಿಗೆ ಹೋದದ್ದು ಉಂಟಂತೆ. ಅದು ನನ್ನ ಸ್ಮರಣೆಗೆ ಬರುವ ದಾಖಲೆಯಲ್ಲ. ಇತ್ತೀಚೆಗಂತೂ ಹೋಗಿ ಬಂದದ್ದಿಲ್ಲ. ನಮ್ಮ ಊರೇ ಕಾನನಗಳ ಕೋಟೆಯಾಗಿರುವಾಗ ಹಿಂಡುಗಾನಿಗೆ ಯಾತಕ್ಕೆ ಹೋಗಬೇಕು?

ಆ ದಿನ ಊಟವನ್ನು ಮುಗಿಸಿ, ವಿಶ್ರಮಿಸಿದ ಮೇಲೆ, ಅವರ ಊರಿನ ಬಯಲನ್ನೂ ನೋಡುವ, ಅಲ್ಲಿನ ಒಂದೆರಡು ಮನೆಗಳಿಗೂ ಹೋಗಿ ಬರುವ - ಎಂಬ ಆಸೆಯೂ ಉಂಟಾಯಿತು. ಅಂದಿನ ಊಟ ಮಾತ್ರ ನನ್ನ ಅಳತೆಯನ್ನು ಮೀರಿತ್ತು. "ನೀವು ನಮ್ಮ ಮನೆಗೆ ಆಗಾಗ ಬರುವವರಲ್ಲ" ಎಂದು, ಮೇಲಿಂದ ಮೇಲೆ ಉಪಚಾರ ಮಾಡಿ, ಆ ಶ್ರೀದೇವಮ್ಮ ಬಡಿಸಿದ್ದಕ್ಕೆ ಲೆಕ್ಕವಿಲ್ಲ. ನನಗೋ, ತಮ್ಮನ ಮದುವೆಯ ಗದ್ದಲದ ಊಟೋಪಚಾರದ ಬಾಧೆ ಶಾಂತವಾಗುವುದರೊಳಗೇನೇ ಅವರ ಭರ್ಜರಿ ಉಪಚಾರ ಸಹಿಸುವುದು ಕಷ್ಟವಾಯಿತು. ಆದರೆ ಅವರ ಪ್ರೀತಿ, ಆದರಗಳಿಗೆ ನಾನು ಮಣಿಯಲೇ ಬೇಕಾಯಿತು. ಮೂರು ಮೂರು ಬಾರಿ ಹಲಸಿನ ಹಣ್ಣಿನ ಪಾಯಸ ತಿನ್ನಿಸಿ, ತಿನ್ನಿಸಿ, ಹಾಸಿಗೆ ಹಿಡಿಯುವ ಹಾಗೆ ಮಾಡಿದರು. 'ಮಂಜುನಾಥ, ಒತ್ತಾಯ ಮಾಡಬೇಡ'ವೆಂದರೆ, ಅವನ ಮಡದಿಯೂ ಮಕ್ಕಳೂ ಬಿಡಲಿಲ್ಲ.

ಊಟವಾಯಿತು; ಚಾವಡಿಯಲ್ಲಿ ಹೊಸದಿಂಬು, ಜಮಖಾನೆಗಳನ್ನು ಹಾಸಿದ್ದರು. "ಇನ್ನೇನು ಮಾಡುವುದೂ ಬೇಡ. ನೀವು ಗಡದ್ದಾಗಿ ಒಂದು ನಿದ್ರೆ ಮಾಡಿ" ಎಂದು ಹೇಳಿದರು. ವೀಳೆಯವನ್ನು ಮೆದ್ದು, ಮಲಗಿಕೊಂಡೆ. ಪಾಯಸದ ಅಮಲು ನನ್ನನ್ನು ಆದರಿಸಿತು. ನಿದ್ದೆಯಲ್ಲಿ ಅಮ್ಮನವರ ಉತ್ಸವದ ವೈಭವಗಳನ್ನೆಲ್ಲ, ಅದು ನಡೆಯುವುದಕ್ಕಿಂತ ಮುಂಚಿತವಾಗಿ ಕಂಡುಕೊಂಡೆ. ನಿದ್ರೆ ಮುಗಿಯುತ್ತಲೇ ಕಟ್ಟಗಿನ ಕಾಫಿಯೂ ಬಂದಿತು. ಕಾಫಿ ಕುಡಿಯುತ್ತ "ಕರೆಯುವುದಕ್ಕೇನಿದೆ?" ಎಂದು ಕೇಳಿದೆ, ನಮ್ಮ ಮನೆಯಲ್ಲಿ ಹಾಲಿಗೆ ತೊಂದರೆ ಎಂಬುದರಿಂದ. ಅವರೋ, ಎರಡೆರಡು ಭರ್ಜರಿ ಎಮ್ಮೆ ಸಾಕುತ್ತಿದ್ದಾರೆ.

ಸಂತರ್ಪಣೆ ಸಮೀಪ ಬಂದುದರಿಂದ ಮಾಸೂರಿನಿಂದ ಬರುವಾಗ ಪುಡಿ ಹಾಲಿನ ಚೀಲವನ್ನೇ ತಂದಿದ್ದಾರೆ. ಅವರ ಮುಂದಾಲೋಚನೆಯನ್ನು ನೋಡಿ ನನಗೆ ಆಶ್ಚರ್ಯವಾಯಿತು.

ನಿದ್ರೆ ಮುಗಿದ ಬಳಿಕ ಮಂಜುನಾಥ "ಅವಸರವಿರದಿದ್ದರೆ ನಾನು ದೇವಸ್ಥಾನದ ಕಡೆಗೆ ಹೋಗಿ ಬರುತ್ತೇನೆ. ಬಹಳ ಕೆಲಸ ಇನ್ನೂ ಇದೆ. ನಮ್ಮ ಶಂಕರನಾರಾಯಣ ನಿಮ್ಮ ಜತೆ ಬರುತ್ತಾನೆ" ಎಂದು ಹೇಳಿ ಹೊರಟುಹೋದ. ಹಿರಿಯ ಮಗನಾದ ಲಕ್ಷ್ಮೀನಾರಾಯಣ ಹೇಳಿಕೆಗೋ, ಇನ್ನೇತಕ್ಕೋ ಬೈಂದೂರಿಗೆ ಹೋಗಿದ್ದ. ಅವರ ಎರಡನೆಯ ಮಗ ಶಂಕರನಾರಾಯಣನನ್ನು ಕರೆದೆ. ಊರನ್ನು ನೋಡುವ ಹಂಬಲದಿಂದ "ಏನೇನಿದೆ ನಿಮ್ಮ ಊರಿನಲ್ಲಿ? ಈ ಮೊದಲು ನಾನು ಇಲ್ಲಿಗೆ ಬಂದವನಾದರೂ ಹೆಚ್ಚಿಗೆ ತಿರುಗಿದವನಲ್ಲ. ನಮ್ಮ ಅಜ್ಜಿಗೆ ಬೇಕಾಗುವ ಯಾವುದೋ ಒಂದು ಮನೆ ಇಲ್ಲಿದೆಯಂತೆ. ನಾನು ಹೊರಟೊಡನೆಯೇ ಅವರು "ಮಾಣಿ, ನೀನು ಹೋಗುವುದಾದರೆ ನನ್ನ ಓರಗಿತ್ತಿಯನ್ನು ನೋಡಿಕೊಂಡು ಬಾ; ಅವಳಿಗೆ ಕಣ್ಣು ಸರಿಯಾಗಿ ಕಾಣಿಸುವುದಿಲ್ಲ" ಎಂದಿದ್ದರು. "ಯಾರೋ! ಅದು ಯಾವ ಮನೆ? ಕರೆದುಕೊಂಡು ಹೋಗು" ಎಂದೆ. ಆತ ತಾಯಿಯ ಬಳಿಗೆ ಹೋಗಿ ಆ ಕಣ್ಣು ಕಾಣದ ಮುದುಕಿ ಯಾರೆಂದು ವಿಚಾರಿಸಿಕೊಂಡು ಬಂದ. ಬಂದು, "ಅಲ್ಲಿಗೆ ಬಹಳ ದೂರವಿಲ್ಲ. ಹಿಂಡುಗಾನಿನ ಸೆರಗಿನಲ್ಲಿದೆ. ಬಯಲಿನ ಈಚೆ ನಮ್ಮದೇ ದಾಯಾದಿಗಳ ಮನೆಯಿದೆ. ನೀವು ಹೇಳುವ ಮನೆ ತಿಪ್ಪಜ್ಜಿಯ ಮನೆ ಇರಬೇಕು, ಹೋಗುವ" ಎಂದ.

ಆ ವಠಾರಕ್ಕೇನೆ ಹಿಂಡುಗಾನ ಎಂಬ ಹೆಸರಿರಬೇಕು. ಒಂದು ಕಾಲದಲ್ಲಿ, ಅಂದರೇನು ಈಗಲೂ ಹಾಗೆಯೇ ಬೆತ್ತದ ಬೀಳಲಿಂದ ತುಂಬಿದ ಆ ಕಾನು, ಜೀವ ಹಿಂಡುವಂಥ ಮೊಡ್ಡ ಕಾನೇ ಆಗಿತ್ತು. ಅದರ ಮೂಲಕವೇ ನಾವು ಹಾದು ಹೋಗುವಾಗ - ಹತ್ತು ಹತ್ತು ಸಾರಿ ಮುಖಕ್ಕೆ ಗಿಡಗಳ ಅಡರುಗಳು ಬಡಿದುವು. ನಾಲ್ಕಾರು ಬಾರಿ ಬೆತ್ತದ ಬೀಳಲುಗಳು ಅರಿವೆಗೆ ಸಿಕ್ಕಿ ಸೆಳೆದವು. ಅದಕ್ಕಿಂತಲೂ ಹೆಚ್ಚಾಗಿ, ದಾರಿಯಲ್ಲಿದ್ದ ಇಂಬಳಗಳು ನನ್ನ ರಕ್ತವನ್ನು ಹೀರುವುದಕ್ಕೂ ಬಂದುವು. ಆ ಕಿರು ದಾರಿಯಲ್ಲಿ ಓಡುವುದಕ್ಕೂ ಆಗದು. ಸ್ವಲ್ಪ ದೂರಕ್ಕೆ ಹೋದ ಮೇಲೆ ಶಂಕರನಾರಾಯಣನು ನಗುತ್ತ "ಇದು ತೀರ ಹತ್ತಿರ ಎಂದು ಕರೆದು ತಂದೆ. ಬಯಲು ಇಳಿದು ಆಚೆ ದಾರಿಯಿಂದ ಸುತ್ತಿ ಬಂದಿದ್ದರೆ, ಈ ತೊಂದರೆ ತಪ್ಪುತ್ತಿತ್ತು. ದೂರ ಹೆಚ್ಚಾಗುತ್ತದೆಂದು ಹೀಗೆ ಮಾಡಿದೆ. ಅದರಿಂದ ನಿಮಗೆ ತುಂಬ ಉಪದ್ರವಾಯಿತು" ಎಂದು ಉಪಚರಿಸಿದ.

"ಆಯಿತು, ಹೇಗೂ ಬಂದಾಯಿತಲ್ಲ; ಇನ್ನು ಸೋತು ಹಿಂದಿರುಗುವುದು ಬೇಡ. ಬರುತ್ತ, ಆಚೆಂದಲೇ ಬಂದರಾಯಿತು" ಎಂದೆ ನಾನು. ಅಂತು ಕಾಡು ಕಳೆದು, ಬಯಲಿಗೆ

ಬಂದು, ಒಂದಿಷ್ಟು ಜವುಗು ನೀರಿನಲ್ಲಿ ಕಾಲಿಟ್ಟು ಸಾಗಿ, ಒಂದು ಹಳೆಯ ಹುಲ್ಲಿನ ಮನೆಯ ಮುಂದೆ ನಿಂತೆವು. ಮನೆಯ ಅಂಗಳದಲ್ಲಿ ಎರಡು ಒಣಕಲು ಮಕ್ಕಳು ಆಡುತ್ತಿದ್ದವು. 'ಶಂಕಣ್ಣ' ಎಂದು ಹಿಗ್ಗಿ, ಕೂಗಿ, ಕರೆದವು. ಆತ ಅವುಗಳನ್ನು ಕಂಡವನೇ "ಮಕ್ಕಳೇ, ತಿಪ್ಪಜ್ಜಿ ಏನು ಮಾಡುತ್ತಿದ್ದಾರೆ?" ಎಂದು ಕೇಳಿದ.

ಮರುಕ್ಷಣ ಚಾವಡಿಯಿಂದ "ಯಾರು? ಶಂಕಣ್ಣ ಬಂದ ಹಾಗಿದೆಯಲ್ಲ; ಮತ್ಯಾರಿದ್ದಾರೆ?" ಎಂಬ ಧ್ವನಿ ಕೇಳಿಸಿತು.

ಶಂಕರನಾರಾಯಣ ಅದಕ್ಕೆ "ಅಜ್ಜಿ, ನಿಮ್ಮ ಮನೆಗೆ ಭಾರೀ ಅತಿಥಿಗಳು ಬಂದಿದ್ದಾರೆ" ಎಂದ.

"ನಮ್ಮ ಮನೆಗೆ ಯಾವ ಭೂತ ಬರುತ್ತದೆ ಹೇಳು? ಅದೂ ಈ ಕುರುಡಿಯನ್ನು ಕಾಣಲಿಕ್ಕೆ!" ಎಂದಳು ಅಜ್ಜಿ.

ನಾವಿಬ್ಬರೂ, ಮನೆಯ ಚಾವಡಿಯಲ್ಲಿ ಜಪಸರ ಹಿಡಿದು ಕುಳಿತ ಜರ್ಜರಿತ ಕಾಯೆಯಾದ ಅವಳ ಮುಂದಕ್ಕೆ ಹೋಗಿ ನಿಂತೆವು. ಬಳಿಕ ಶಂಕರನಾರಾಯಣನು ಅವಳಿಗೆ ನನ್ನ ಪರಿಚಯವನ್ನು ಮಾಡಿಕೊಡುತ್ತ "ಅಜ್ಜಿ, ಮೂಡೂರಿನ ಸುಬ್ರಾಯರನ್ನು ಕರಕೊಂಡು ಬಂದೆ" ಎಂದ.

"ಯಾವ ಸುಬ್ರಾಯರಪ್ಪ?" ಎಂದರು ಅವರು, ತಮ್ಮ ಹುಬ್ಬಿನ ಮೇಲೆ ಕೈಯಿಟ್ಟು. ಅಷ್ಟಕ್ಕೆ ನಾನು ನನ್ನ ಹೆಸರನ್ನು ತಿದ್ದಿಕೊಂಡು, ಅವರಿಗೆ ತಿಳಿಯುವಂತೆ 'ಅಜ್ಜಮ್ಮ ನಾನು, ಸುಬ್ಬಣ್ಣ ಬಂದದ್ದು. ಮೂಕಜ್ಜಿಯ ಮೊಮ್ಮಗ' ಎಂದೆ.

"ಸುಬ್ಬಣ್ಣ, ನನ್ನ ಮೂಕಜ್ಜಿಯ ಮೊಮ್ಮಗ! ಹಾಗೆ ಹೇಳು, ರಾಯರು ಗೀಯರು ಅಂದರೆ ನನಗೆ ಹೇಗೆ ತಿಳಿಯಬೇಕು?"

ಅದಕ್ಕೆ ಶಂಕರನಾರಾಯಣ "ಅಜ್ಜಿ, ನನಗಿಂತ ದೊಡ್ಡವರನ್ನು ನಾನು ಸುಬ್ಬಣ್ಣ ಎಂದು ಕರೆಯಲಿಕ್ಕಾಗುತ್ತದೆಯೇ?" ಎಂದ.

ಅಷ್ಟರಲ್ಲೇ ಅವರು "ಅಯ್ಯೋ ಮಗು, ನೀನು, ಸುಬ್ಬಣ್ಣ, ಸಣ್ಣದರಲ್ಲಿ ಕಂಡಿದ್ದೆನಷ್ಟೇ; ಕಣ್ಣು ಕಾಣುವ ತನಕವೂ ನಿಮ್ಮಲ್ಲಿಗೆ ಬರುತ್ತಿರಲಿಲ್ಲವೇ? ನಾನು ಮೂಲೆ ಹಿಡಿದು ಇಪ್ಪತ್ತೋ ಮೂವತ್ತೋ ವರ್ಷವಾಯಿತು. ನಿನ್ನ ಅಜ್ಜಿಯೂ ನನ್ನ ಹಾಗೆ ಆಗಿರಬೇಕು."

"ಇಲ್ಲ, ಅವರು ಓಡಾಡುತ್ತಿದ್ದಾರೆ; ಅವರ ಕಣ್ಣು ಸಾಪಾಗಿದೆ." "ಹೌದೇ? ಯಾರು ತಿಳಿಸುವರು ನನಗೆ? ಗಂಡಸರಿಲ್ಲದ ಮನೆಯಿದು. ನಾನೂ, ನನ್ನ ಸೊಸೆ, ಈ ಎರಡು ಪುಟ್ಟ ಮಕ್ಕಳು - ಇದ್ದೇವೆ ಇಲ್ಲಿ. ನನ್ನ ಮಗ ವರ್ಷಕ್ಕೆ ನಾಲ್ಕು ದಿವಸ ಬಂದು ಹೋಗುತ್ತಿರುತ್ತಾನೆ. ನಾವು ವನವಾಸ ಮಾಡಿಕೊಂಡಿದ್ದೇವೆ ಇಲ್ಲಿ. ನನ್ನ ಪಾಡಂತು

ಹಾಗಿರಲಿ; ಮೂಕಿ ಒಯಿನಾಗಿ ಇದ್ದಾಳಲ್ಲ?"

"ಇದ್ದಾರೆ."

"ಒಯಿನು ಅಂದರೆ ಮತ್ತೇನಿಲ್ಲ, ಮಗು. ಕಣ್ಣು, ಕಾಲು ಒಯಿನಾಗಿದೆ ಅನ್ನುತ್ತೀಯಾ? ಅವಳದ್ದು ಒಂದೊಂದು ಗಳಿಗೆಗೆ ಒಂದೊಂದು ತೆರ ಬುದ್ಧಿ ಎಂದು ಅನ್ನುತ್ತಾರಪ್ಪ. ಅದಕ್ಕಾಗಿ ಕೇಳಿದೆ."

"ಹಾಗೇನಿಲ್ಲ ಅಜ್ಜಿ, ನನಗೆ ಈಗ ಮೂವತ್ತು ವರ್ಷ ಕಳೆಯಿತು; ಅದರ ಮೇಲೆ ಮತ್ತೂ ಒಂದೆರಡು ವರ್ಷ ಹೆಚ್ಚಿರಲೂಬಹುದು. ನನಗೆ ಅಂಥದ್ದೇನೂ ಕಾಣಿಸುವುದಿಲ್ಲ. ಊರವರು ಅನ್ನುತ್ತಿದ್ದಾರು 'ಮೂಕಜ್ಜಿಗೆ ಮರುಳು' ಅಂತ. ಅನ್ನುವವರ ಬಾಯಿಯನ್ನು ಕಟ್ಟಲಿಕ್ಕೆ ಬರುತ್ತದೆಯೇ? ಬೇರೆ ಎಲ್ಲರ ಹಾಗೆ ಅವರಿಲ್ಲ - ಎಂಬುದು ನಿಜ. ಅದಕ್ಕೇನೆ ಮರುಳು ಎನ್ನುವುದಾದರೆ ಅಂದುಕೊಳ್ಳಲಿ, ನಮ್ಮದೇನು ಗಂಟು ಹೋಗುತ್ತದೆ?"

ಅವರು ಸೊಸೆಯನ್ನು ಕರೆದು"ಮಗು, ಬಂದವರಿಗೆ ಏನಾದರೂ ಆಸರು ಮಾಡಿಕೊಡು" ಎಂದರು. ನಾನು ಬೇಡವೆಂದರೆ ಕೇಳಲಿಲ್ಲ. ನನಗೆ ಅವರನ್ನು ಕಂಡು ಒಮ್ಮೆಗೇ ತುಂಬಾ ಆದರ ಹುಟ್ಟಿಕೊಂಡಿತು. ಅವರ ದೇಹವು ಕುಗ್ಗಿ ಅರ್ಧಕ್ಕರ್ಧವಾಗಿರಬೇಕು. ಮೈಯ ಅಂಗುಲ ಅಂಗುಲವೂ ನಿರಿಗೆಗಳೇ. ಮಾತು ಬಲು ಮೆಲ್ಲಗೆ. ಊಟೆಯಿಂದ ನೀರ ಹನಿ ಒಸರಿದಂತೆ ಬಿಡಿಬಿಡಿಯಾಗಿ ನುಡಿಗಳು ಹೊರಡುತ್ತಿದ್ದವು. ಅವರು ತಮ್ಮ ವಿಚಾರವನ್ನು, ತಮ್ಮ ಸಂಸಾರದ ವಿಚಾರಗಳನ್ನು ಹೇಳುವ ಬದಲು "ನೋಡು ಮಗು, ಈ ಊರಿನಲ್ಲಿ ಹುಟ್ಟಿ ಬಂದವ್ರಕ್ಕೆ - ನಮ್ಮ ಮಂಜುನಾಥನಾದರೆ ಜನ್ಮ ಸಾರ್ಥಕ ಮಾಡಿಕೊಂಡ. ಅಮ್ಮನವರ ಗುಡಿಯನ್ನು ಊರ್ಜಿತ ಮಾಡುತ್ತಾನಂತೆ. ಪೂಜೆ, ಹೋಮ, ಏನೇನೋ ಮಾಡಿಸುತ್ತಾನಂತೆ. ಅವನಲ್ಲದೆ ಹೋದರೆ ಆ ಕೋಟಳಮ್ಮನನ್ನು ಯಾರು ಮೂಸುತ್ತಿದ್ದರು?" ಎಂದರು.

ನಾನು ಅಷ್ಟಕ್ಕೆ ನಡುವೆ ಬಾಯಿ ಹಾಕಿ "ನನ್ನ ಅಜ್ಜಿಯೂ ಕೋಟಳಮ್ಮ ಅಂದರು. ನೀವೂ ಹಾಗೆಯೇ ಅನ್ನುತ್ತೀರಿ. ನಿಮ್ಮ ಮಂಜುನಾಥ ಅಂಬೆ, ಜಗದಂಬೆ - ಅನ್ನುತ್ತಾನೆ. ಈ ಹಿಂಡುಗಾನ ಅಮ್ಮನ ನಿಜವಾದ ಹೆಸರು ಯಾವುದಂತೆ?" ಎಂದು ಪ್ರಶ್ನಿಸಿದೆ.

"ಅಮ್ಮ ಜಗದಂಬೆ, ದುರ್ಗೆ, ಕಾಳಿ - ಎಂಬುದು ಎಲ್ಲವೂ ಒಬ್ಬಳಿಗೇ ಅಲ್ಲವೇ ಹೇಳುವುದು. ಎಲ್ಲರಿಗೂ ಅವಳು ಅಮ್ಮ."

"ಅದು ಅರ್ಥವಾಗುತ್ತದೆ ನನಗೆ, 'ಕೋಟಳೆ' ಎಂಬ ಮಾತು ಎಲ್ಲಿಂದ ಬಂತು ಎಂದು ತಿಳಿಯಲಿಲ್ಲ."

"ನನ್ನ ಅಜ್ಜಿ ಹೇಳುವುದನ್ನು ಕೇಳಿ ನಾನು ಹೇಳಿದೆ, ನೆನಪಿಂದ."

"ಹಾಗೂ ಒಂದು ಹೆಸರು ಉಂಟಲ್ಲವೆ?"

"ಇಲ್ಲದೆ! ದೇವರಿಗೆ ಎಷ್ಟೆಷ್ಟೋ ಹೆಸರುಗಳು; ಏನೇನೋ ಕಥೆಗಳು. ಆದರೆ ಎಲ್ಲವೂ ಅವಳೊಬ್ಬಳದ್ದೇ. ಇರಲಿ ಬಿಡು; ನಿನ್ನ ಅಜ್ಜಿ ಸೌಖ್ಯ ಅನ್ನುತ್ತಿದ್ದೀಯ? ಓಡಾಡಿಕೊಂಡು ಇದ್ದಾರೆ! ನಾನು ನೋಡದೆ ವರ್ಷ ಎಷ್ಟಾಯಿತೋ ಏನೋ!"

"ನಿಮಗೆ ಅವರು ತುಂಬಾ ಗೊತ್ತಲ್ಲವೇ?"

"ಮಾಣಿ, ಅವಳು ನನಗಿಂತ ಮೂರು ನಾಲ್ಕು ವರ್ಷಕ್ಕೆ ಸಣ್ಣವಳು. ಆದರೆ, ಪಾಪ ಬಲು ಸಣ್ಣದರಲ್ಲಿ ಅವಳ ಕುಂಕುಮದ ಭಾಗ್ಯ ಕಳೆಯಿತು. ಅಂದಿನಿಂದ ಒಂದು ನಮೂನೆಯಾಗಿಬಿಟ್ಟಳು. ಮನೆಯವರನ್ನು ಬಿಟ್ಟು ಯಾರ ಹತ್ತಿರವೂ ಹೆಚ್ಚಿಗೆ ಮಾತುಕತೆ ಇದ್ದಿರಲಿಲ್ಲ. ನಾನೆಲ್ಲಾದರೂ ನಿಮ್ಮ ಮನೆಗೆ ಹೋದರೆ "ಏನಕ್ಕ, ನೀನೊಬ್ಬಳಿಗಾದರೂ ನನ್ನನ್ನು ಕಾಣಬೇಕೆನಿಸಿತು, ಬಂದೆ. ಇಲ್ಲವಾದರೆ ಇಲ್ಲಿಗೆ ಯಾರು ಬರುತ್ತಾರೆ ಹೇಳು" ಎನ್ನುತ್ತಿದ್ದಳು.

"ಹಾಗೇನು? ಅದಿರಲಿ, ಯಾತಕ್ಕೆ ಹಾಗೆ ಯಾರಿಗೂ ಬೇಡವಾದವರು ಆದರು?"

"ಯಾಕೋ! ಅದು ಯಾರು, ಯಾರಿಗೂ ಬೇಡವಾಗಿಯಲ್ಲ. ಅವಳಿಗೆ ನೋಡು, ಸಣ್ಣದರಿಂದಲೂ ಜಕಣಿ ಉಪದ್ರ."

"ಜಕಣಿ ಉಪದ್ರವೋ! ನನಗೆ ಬುದ್ಧಿ ಬಂದ ಮೇಲೆ ಅಂಥದ್ದೇನೂ ಕಂಡವನಲ್ಲವಲ್ಲ."

"ಈಗ ಹೇಗೋ! ಹಿಂದೆಲ್ಲ ಒಂದೊಂದು ದಿವಸ ಏನೇನೋ ಮೈ ಮೇಲೆ ಬಂದು ಯದ್ವಾತದ್ವಾ ಮಾತನಾಡುತ್ತಿದ್ದಳು. ಯಾರನ್ನು ಕಂಡರೂ ಅವರ ಮುಖಕ್ಕೇನೇ 'ನೀನು ಹಾಗೆ; ನೀನು ಹೀಗೆ' ಅನ್ನುತ್ತಿದ್ದಳು. ಎಲ್ಲ ಹೊತ್ತಿಗೂ ಅಲ್ಲ; ಮೈಮೇಲೆ ಬಂದಾಗ."

"ಹುಚ್ಚು, ಹುಚ್ಚು ಮಾತನಾಡುತ್ತಿದ್ದರೇ?"

"ಹುಚ್ಚು, ಹುಚ್ಚು - ಅನ್ನಲಾರೆ. ಅವಳು ಆಡಿದ ಮಾತುಗಳ ಪರಾಮರ್ಶೆ ಮಾಡಿದರೆ - ಅವಳು ಆಚೀಚಿ ನಡೆದದ್ದನ್ನೇ ಹೇಳುತ್ತಿದ್ದಳು; ಇದ್ದದ್ದನ್ನೇ ಹೇಳುತ್ತಿದ್ದಳು. ಆದರೆ ನೋಡು, ಮನೆಗೆ ಬಂದವರ ಹತ್ತಿರ - ನೀನು ಕಳ್ಳ; ನೀನು ಹಾಗೆ ಮಾಡಿದೆ, ಹೀಗೆ ಮಾಡಿದೆ - ಎಂದರೆ ಏನು ತಿಳಿದಾರು!"

"ಇರಲಿ, ಅವರ ಮೈಮೇಲೆ ಬರುತ್ತಿದ್ದ ದೈವವಾದರೂ ಯಾವುದು?"

"ಅಯ್ಯೋ, ಅದರ ತಾರ್ಕಣೆ ಮಾಡುವುದಕ್ಕೇ ನಿನ್ನ ಅಜ್ಜ ಎಷ್ಟೆಲ್ಲ ಮಂತ್ರವಾದ ಮಾಡಿಸಿ ನೋಡಿದರಂತೆ; ಅದೊಂದೂ ಪ್ರಯೋಜನಕ್ಕೆ ಬರಲಿಲ್ಲ."

"ನಮ್ಮ ಅಪ್ಪ ಅದನ್ನಾವುದನ್ನೂ ಹೇಳುತ್ತಿರಲಿಲ್ಲ."

"ನಿನ್ನ ಅಪ್ಪಯ್ಯ ದೊಡ್ಡದಾಗುವಾಗ ಅವಳು ಮಾತನ್ನೇ ಬಿಟ್ಟಿದ್ದಳು. ಒಂದು ಮೂಲೆ ಹಿಡಿದಿದ್ದಳು. ಯಾರ್‍ಯಾರ ಒಡನಾಟವೂ ತನಗೆ ಬೇಡ; ಉಪದ್ರವೂ ಬೇಡ ಎಂದು ಜಪಸರ ಹಿಡಿದುಕೊಂಡು ಕೂತದ್ದುಂಟು; ಮತ್ತಿನ ಸಂಗತಿ ಮಾತ್ರ ನನಗೆ ಗೊತ್ತಿಲ್ಲ. ಅವಳನ್ನು ಒಂದು ಸಾರಿ ಕಾಣುವ ಎಂಬ ಆಸೆಯಾಗುತ್ತದೆ ನನಗೆ. ಕಾಣುವುದಕ್ಕೆ ಕಣ್ಣಿಲ್ಲ; ನಡೆಯಲಿಕ್ಕೆ ಕಾಲು ಬಾರದು."

"ನಮ್ಮ ಅಜ್ಜಿ ಓಡಾಡುವುದಕ್ಕೆ ಗಟ್ಟಿ. ಮೊನ್ನೆ ನನ್ನ ತಮ್ಮನ ಲಗ್ನಕ್ಕೆ ಕೊಲ್ಲೂರಿಗೆ ಹೋಗಿ ಬಂದರು. ಹೋದದ್ದು ಮಾತ್ರ ಗಾಡಿಯಲ್ಲಿ. ಆದರೆ ಗಾಡಿಯ ದಾರಿಗೆ ಹರದಾರಿ ಮಿಕ್ಕ ಕಾಲು ನಡೆಯೇ ಇದೆಯಲ್ಲ. ನಡೆದೇ ಹೋದರು."

"ಹೌದೇ!"

ಅಷ್ಟಕ್ಕೆ ಶಂಕರನಾರಾಯಣ "ನೀವು ಹೀಗೆಯೇ ಮಾತನಾಡಿಕೊಂಡಿರಿ. ನಾನೊಂದು ಕ್ಷಣ ಆಚೆಗೆ ಜೋಯಿಸರ ಮನೆಗೆ ಹೋಗಿ ಬರುತ್ತೇನೆ" ಎಂದು ಹೇಳಿ, ನನ್ನ ಅನುಮತಿಯನ್ನು ಪಡೆದು ಹೋದ. ತಿಪ್ಪಜ್ಜಿಯು ಆಗ "ಶಂಕಣ್ಣ ಹೋದನೇನು? ಒಳ್ಳೆಯದೇ ಆಯಿತು" ಎಂದಂದರು. ಅದೇಕೆಂದು ನನಗೆ ಹೊಳೆಯಲಿಲ್ಲ. ನಾನು ಮಾತನ್ನು ಮುಂದುವರಿಸುತ್ತ, "ಅಜ್ಜಿ, ನಿಮಗೆ ಅವರನ್ನು ಕಾಣುವ ಆಸೆ ಅಷ್ಟು ಬಲವಾಗಿದ್ದರೆ ನೋಡುವ, ಈ ಮಂಜುನಾಥ ಅವರನ್ನು ಅಮ್ಮನವರ ಸಂತರ್ಪಣೆಗೆ ಕರೆಯಿಸುವ ಹಠ ಹಿಡಿದಿದ್ದಾನೆ. ಅಜ್ಜಿ - ಅದೊಂದೂ ತನಗೆ ಬೇಡ, ಅನ್ನುತ್ತಿದ್ದಾರೆ. ಒತ್ತಾಯಿಸಿದರೆ ಬಂದಾರು. ಅವನ ಮನೆಯ ತನಕ ಬಂದವರಿಗೆ ಇಲ್ಲಿಗೂ ಬರುವುದು ಕಷ್ಟವಾಗದು" ಎಂದೆ.

"ಸುಬ್ಬಣ್ಣ, ಅದು ಒಂದು ಕೆಲಸ ಮಾತ್ರ ಬೇಡ" ಎಂದರು ಗಾಬರಿಯಿಂದ.

"ಏನಜ್ಜಿ ಗಾಬರಿ? ಉತ್ಸವಕ್ಕೆ ಬರುವುದು ಬೇಡ ಅಂತಲೋ ಅಥವಾ ಅವರನ್ನು ದಣಿಸಬಾರದು ಅಂತಲೋ" ಎಂದು ಪ್ರಶ್ನಿಸಿದೆ.

"ಎರಡೂ ಸಮನೆ. ಅದು ಯಾಕೆಂದು ನಿನಗೆ ಗೊತ್ತಾಗದು. ಅವಳು ಈಗ ಹುಷಾರಾಗಿದ್ದಾಳೆ ಅನ್ನುತ್ತೀ, ನಿಜ. ಅವಳು ತಿರುಗಿ ಇಲ್ಲಿಗೆ ಬಂದದ್ದಾದರೆ ಒಂದಕ್ಕೆ ಎರಡಾದೀತು. ಮೊದಲ ಸಾರಿ ಅವಳಿಗೆ ಮೈಮೇಲೆ ಬಂದದ್ದೇ ಈ ಅಮ್ಮನವರ ಗುಡಿಗೆ ಬಂದಾಗ. ನಾನಿದ್ದೆ ಆ ದಿವಸ. ನಾನು ಕಂಡು ಕಂಗಾಲಾದೆ. ನನ್ನ ನಾಚಿಕೆ ಹೇಳತೀರದು... ನನ್ನನ್ನು ಕೇಳಿದರೆ - ಅದೇ ಅಮ್ಮ ಆ ದಿನ ಅವಳ ಮೈಮೇಲೆ ಬಂದದ್ದು."

"ಅವರು ಹಿಂಡುಗಾನ ಅಮ್ಮನವರ ಗುಡಿಗೆ ಬಂದಿದ್ದರೇ?"

"ಹೌದಪ್ಪ, ಈ ಮಂಜುನಾಥನ ಅಜ್ಜಯ್ಯ ಒಂದು ದೊಡ್ಡ ಪೂಜೆ ಮಾಡಿಸಿದ್ದ. ಅದಕ್ಕೆ ನಮ್ಮ ಮನೆಯವರೆಲ್ಲ ಬಂದಿದ್ದರು. ಬೇರೆ ನೂರಾರು ಜನರು ಸೇರಿದ್ದರು. ದೇವರಿಗೆ ಮಂಗಳಾರತಿ ತೊಡಗುತ್ತಲೇ, ಹೆಮ್ಮಕ್ಕಳ ಎಡೆಯಲ್ಲಿ ಕುಳಿತಿದ್ದ ನಿಮ್ಮ ಅಜ್ಜಿ, ಕಿರುಚಿ ಆರ್ಭಟಿಸಿದಳು; ನಾವೆಲ್ಲರೂ ಕಂಗಾಲು. ಅವಳಿಗೆ ಮೈಮೇಲೆ ಬಂತೇ! ಮೈ ಥರಥರ ಆಯಿತು. ಎದ್ದಳು, ನಿಂತಳು. ಅದಕ್ಕಿಂತಲೂ ಹೆಚ್ಚು ಎಂದರೆ - ಆ ಪ್ರಾಯದಲ್ಲಿ ಮೈಯ ಅರಿವೆಯನ್ನೇ ಕಿತ್ತೆಸೆದು, ಉಡಿ ನೂಲಲ್ಲಿ ತಲೆ ಕೆದರಿ ನಿಂತಳು! ಕಿರುಚಿ, ನಕ್ಕು, ಆರ್ಭಟಿಸಿ ಕುಣಿದಾಡಿದಳು. ಆಚೀಚೆ ಸೇರಿದವರು ಎಲ್ಲರೂ ಗಾಬರಿಗೊಂಡು ಕಕ್ಕಾಬಿಕ್ಕಿಯಾಗಿ ಚದುರಿದರು. ನಿನ್ನ ಅಜ್ಜನೂ, ಮತ್ತ್ಯಾರು ಯಾರೋ ಸೇರಿ ಅವಳನ್ನು ಹಿಡಿದುಕೊಂಡರು. ತಲೆಯ ಮೇಲೆ ತಣ್ಣೀರು ಸುರಿದು ಆಚೆ ಹಾಡಿಗೆ ಕರೆದೊಯ್ದರು. ಆಗ ಅವಳ ಮೈಗೆ ಬಂದ ತ್ರಾಣವೆಂದರೆ - ಹುಲಿಗೆ ಸಮ! ಮುಟ್ಟಿದವರನ್ನು ಕಚ್ಚಿ, ಹರಿದು ಕಂಗಾಲುಗೊಳಿಸಿದಳು."

"ಅಂಥ ಸ್ಥಿತಿಯಲ್ಲೇ ಅವಳ ಕೈಕಾಲನ್ನು ಕಟ್ಟಿ, ಮನೆಗೆ ಹೊತ್ತುಕೊಂಡು ಹೋಗಿ, ಒಂದು ಕೋಣೆಯಲ್ಲಿ ಹಾಕಿದರು. ಮೂರು ದಿನಗಳ ತನಕ ಮೈ ಮೇಲೆ ಸ್ವಯವಿಲ್ಲದವಳ ಹಾಗೆ ಇದ್ದಳಂತೆ."

ನನಗೆ ತಿಪ್ಪಜ್ಜಿಯ ಆ ಮಾತುಗಳನ್ನು ಕೇಳಿ ನಂಬುವುದಕ್ಕೇ ಅಸಾಧ್ಯವಾಯಿತು. ಯಾಕೆ ಹಾಗೆ ಮಾಡಬೇಕಿತ್ತು? ಮೈಮೇಲೆ ದೈವ ಬಂದಿತೆಂದೇ ತಿಳಿಯುವ. ಬತ್ತಲೆ ಕುಣಿದಾಡುವ ಚಪಲ ಯಾವ ದೈವಕ್ಕಿದೆ? ಹಾಗೆಂದು ಎಣಿಸಿ "ಅಜ್ಜಿ, ಅವರು ಅಷ್ಟೆಲ್ಲ ಮಾಡುವಾಗ ಯಾರೂ ಅವರನ್ನು ಮಾತನಾಡಿಸಲಿಲ್ಲವೇ? ಯಾರು ನೀನು? ಯಾಕೆ ಬಂದೆ? ಏನಾಗಬೇಕು ನಿನಗೆ ಅಂತ ಕೇಳಲಿಲ್ಲವೇ?" ಎಂದು ಕೇಳಿದೆ.

"ಕೇಳುತ್ತಿದ್ದರೋ ಏನೋ. ಅವಳ ಮೈ ನಡುಗುವುದಕ್ಕೆ ತೊಡಗಿದಾಗ ನಾನೂ ಹಿಡಿಯುವುದಕ್ಕೆ ಹೋಗಿದ್ದೆ. ಸೀರೆ ಕಿತ್ತೆಸೆದಾಗ ನಾನು ಕಂಗಾಲಾದೆ - ನನ್ನ ಮಾನವೇ ಹೋಯಿತು, ಎಂದೆಣಿಸಿ ಅದನ್ನು ನೋಡಲಾರದೆ ಹೆದರಿ ಓಡಿದೆ. ಅವಳನ್ನು ಅಂಥ ಸ್ಥಿತಿಯಲ್ಲಿ ಯಾರು ಮಾತನಾಡಿಸುವವರು?"

"ಕಟ್ಟಿ ಹಾಕಿದ ಮೇಲಾದರೂ...."

"ಅವಳು ಕೂಗುತ್ತಲೇ ಇದ್ದಳು. "ಓಹೋ ನನ್ನ ಈ ರೂಪ ಬೇಡವೋ ನಿಮಗೆ? ನಿಮಗೆ ಹೆತ್ತಬ್ಬೆ ಮರೆತುಹೋದಳೋ? ಹೆತ್ತಬ್ಬೆಗೆ ಬೇಡವಾದ ಮಕ್ಕಳು ನೀವು" ಎಂದು ಮೇಲಿಂದ ಮೇಲೆ ಕೂಗುತ್ತಿದ್ದಳಂತೆ. ಯಾರಿಗೆ ಅದೆಲ್ಲವೂ ಅರ್ಥವಾಗಬೇಕು? ಆ ಹಬ್ಬ ಬೇಡವಾಗಿದ್ದರೆ - ನಮ್ಮ ಈ ಮಂಜುನಾಥನ ಅಜ್ಜ ಸಂತರ್ಪಣೆ, ಚಂಡಿಕಾ ಹೋಮ, ಮತ್ತೊಂದನ್ನೆಲ್ಲಾ ಮಾಡಿಸುತ್ತಿದ್ದನೇ?

"ಕೊನೆಗೂ ಅವರ ಮೈಮೇಲೆ ಬಂದ ದೈವ ಯಾವುದೆಂದು ತಿಳಿಯಲಿಲ್ಲ, ಅಲ್ಲವೇ?"

"ನಿನ್ನ ಅಜ್ಜ ದೂರದಲ್ಲಿದ್ದ ಒಬ್ಬ ಜೋಯಿಸರನ್ನು ಕರೆಯಿಸಿ, ಪ್ರಶ್ನೆ ಕೇಳಿಸಿದರಂತೆ. ಅದು ಹೇಳಿತಂತೆ, ತಾನು 'ಭಗವತಿ' ಅಂತ. ಕೊನೆಗೂ ಮಂತ್ರವಾದ ಗಿಂತ್ರವಾದ ಮಾಡಿಸಿ, ಸ್ವಲ್ಪ ದಿನಗಳ ಮೇಲೆ ಹಿಡಿದ ಆ ಭೂತವೋ, ಪ್ರೇತವೋ ಹೊರಟು ಹೋಯಿತು."

ಆ ಮಾತನ್ನು ಕೇಳಿದಾಗ ಕೇರಳದ ಉದ್ದಕ್ಕೂ ಜನರ ಮನ್ನಣೆಗೆ ಗುರಿಯಾದ ಅಮ್ಮನ ಮತ್ತೊಂದು ಹೆಸರು 'ಭಗವತಿ'ಯು ನೆನಪಾಯಿತು. ಮನಸ್ಸು ಅವೇ ಶಬ್ದಾರ್ಥಗಳನ್ನು ವಿಚಾರ ಮಾಡತೊಡಗಿತು. ನನ್ನ ಅಜ್ಜಿ ಆ ಗುಡಿಯ ಮುಂದೆ ತಾನೇ ಭಗವತಿ ಎಂಬ ಭ್ರಮೆಯಿಂದ ಹಾಗೆ ವರ್ತಿಸಿದಳು ಎಂದು ಊಹಿಸಿದೆ. ಅಂತು, ತಿಪ್ಪಜ್ಜಿಯ ಉಪದೇಶ ನನಗೆ ಸರಿಯೆಂದೇ ಕಾಣಿಸಿತು. ನಮ್ಮ ಅಜ್ಜಿಯ ಸೂಕ್ಷ್ಮ ಮನಸ್ಸಿನ ಮೇಲೆ ಯಾವುದೋ ಅಪೂರ್ವ ದೃಶ್ಯ ಇಲ್ಲವೇ ಮಾತು ಪರಿಣಾಮವನ್ನುಂಟುಮಾಡಿದರೆ, ಅವರು ಮೈಮರೆಯಬಹುದು. ಸ್ವಂತ ವ್ಯಕ್ತಿತ್ವವನ್ನು ತೀರ ಮರೆತು ಇನ್ನೇನೇನೋ ಆವೇಶಕ್ಕೊಳಗಾಗಿ ವರ್ತಿಸಲೂಬಹುದು. ಹಾಗಿದ್ದರೆ, ಹಿಂಡುಗಾನ ಅಮ್ಮನವರ ಪೂಜೆ ಅವರಿಗೆ ಹೇಳಿಸಿದ್ದಲ್ಲ. ಅವರು ಹಾಗೆಲ್ಲಾದರೂ ಇಲ್ಲಿಗೆ ಬಂದುದಾದರೆ ಇನ್ನೊಂದು ಅನರ್ಥ ಸಂಭವಿಸುವುದನ್ನು ಕಾಣಬೇಕಾದೀತು ಎಂಬ ಭಯವಾಯಿತು.

ತಿಪ್ಪಜ್ಜಿಯೊಡನೆ ಒಂದಿಷ್ಟು ಹೊತ್ತು ಅವರದೇ ಸುಖ ದುಃಖಗಳನ್ನು ವಿಚಾರಿಸಿಕೊಂಡು, ನನ್ನ ಅಜ್ಜಿಯ ವಿಚಾರದಲ್ಲಿ ಅವರಿಗಿರುವ ಆದರದ ಮಾತುಗಳನ್ನು ಕೇಳುತ್ತ ಕುಳಿತೆ. ಅಷ್ಟರಲ್ಲಿ ಶಂಕರನಾರಾಯಣನು ತನ್ನ ಕೆಲಸವನ್ನು ತೀರಿಸಿಕೊಂಡು ಬಂದು "ನಿಮ್ಮ ಮಾತುಕತೆ ಮುಗಿದರೆ ಹೊರಡುವ" ಎಂದ. ನಾನು ತಿಪ್ಪಜ್ಜಿ ನನ್ನ ಅಜ್ಜಿಗಿಂತಲೂ ಹಿರಿಯೆ ಎಂಬುದರಿಂದ, ಅವರ ಕಾಲುಗಳನ್ನು ಮುಟ್ಟಿ, ನಮಸ್ಕರಿಸಿ ಹೊರಟೆ. ಅವರು "ನನಗೆ ಯಾಕೆ ನೀನು ನಮಸ್ಕಾರ ಮಾಡುತ್ತೀಯ? ಆ ಅಮ್ಮನಿಗೆ ಮಾಡು" ಎಂದರು.

ಚತುರನಂತೆ "ಅವಳೇ ಎಲ್ಲ ಹಿರಿಯರಲ್ಲೂ ಇದ್ದಾಳಲ್ಲವೇ?" ಎಂದು ನುಡಿದು, ಈಚೆಗೆ ಬಂದೆ. ಹೊರಡುವಾಗ ಅವರು "ಹೀಗೆಯೇ ಬಂದು, ಈ ಕೊರಡನ್ನು ಮಾತನಾಡಿಸಿಕೊಂಡು ಹೋಗು. ನಿನ್ನ ಮೂಕಿಗೆ ಹೇಳು; ತಿಪ್ಪಜ್ಜಿ ಚೆನ್ನಾಗಿದ್ದಾಳೆ, ಕೇಳಿದೆ ಅವಳನ್ನು ಎನ್ನು" ಎಂಬುದಾಗಿ ತಿಳಿಸಿದರು.

ನಾನು ಅಲ್ಲಿಂದ ಹೊರಡುವಾಗ ಅವರ ಸೊಸೆಯು ತಂದುಕೊಟ್ಟ ಪಾನಕವನ್ನು ಕುಡಿದು, ಹೊರಬಿದ್ದೆ. ಶಂಕರನಾರಾಯಣ ನನ್ನನ್ನು ತಮ್ಮ ಮನೆಯ ಬಯಲಿನ ದಾರಿಯಲ್ಲಿ

ಕರೆದೊಯ್ದ. ಆಗಲೇ ಸಾಕಷ್ಟು ಹೊತ್ತಾಗಿದ್ದುದರಿಂದ ಮನೆಗೆ ಹೊರಡುವ ಕಡು ಆತುರ ನನ್ನದು. ಮಂಜುನಾಥ ಮನೆಯ ತನಕವೂ ನನ್ನನ್ನು ಮುಟ್ಟಿಸುವ ಛಲ ಹಿಡಿದ. ಅವರ ಮನೆಯಿಂದ ನಾವಿಬ್ಬರೂ ಅಮ್ಮನ ಗುಡಿಯ ತನಕವೂ ಬಂದೆವು. ಆಗ ಅವನು "ಹೇಗಿದೆ ನಮ್ಮ ಈ ಅಂಬಾವನ" ಎಂದು ಕೇಳಿದ.

"ಅಂಬಾವನ ಚಿತ್ರಮೂಲದ ಕೆಳಗಲ್ಲವೇ?'' ಎಂದಂದೆ, ಕೊಲ್ಲೂರಿನ ಅಂಬಾವನವನ್ನು ನೆನೆದು.

"ಇದೂ ಅಂಬಾವನವೇ."

"ಆಗಲಪ್ಪ, ಹಿಂಡುಗಾನ ಅಮ್ಮನ ವನ" ಎಂದೆ ನಗುತ್ತ. ಆತ ತಿರುಗಿ ಆಳುಗಳ ಬಳಿಗೆ ಹೋಗಿ ಮಾತಾಡಲು ನಿಂತ. ಸಂಜೆಯ ಬಿಸಿಲು ಗುಡಿಯ ಮುಂಭಾಗವನ್ನು ಬೆಳಗಿದ್ದು ಕಾಣಿಸಿತು. ಆ ಗುಡಿಯ ಮುಖ ಪಶ್ಚಿಮಕ್ಕಿದೆ ಎಂಬ ಜ್ಞಾನವಾಯಿತು. ನಾನು ಬಾಗಿಲ ಬಳಿಗೆ ಹೋದೆ. ಕದವಿಕ್ಕಿತ್ತು; ತಳ್ಳಿದೆ. ಬಾಗಿಲಲ್ಲಿ ಸೆರೆ ಉಂಟಾಯಿತು. ಒಳಗಡೆ ದೀಪ ಉರಿಯುತ್ತಿತ್ತು. ಮಗ್ಗುಲಿಗೆ ಸರಿದು, ಮಾಲಿ ನೋಡಿದಾಗ ಸಂಜೆಯ ಬೆಳಕು ಒಳಗೆ ನುಗ್ಗಿತ್ತು. ಏನು ವಿಗ್ರಹ ಎಂದು ನೋಡಲು ಆತುರಗೊಂಡರೆ ಅದು ಕಾಣಿಸಲಿಲ್ಲ. ಅದನ್ನು ಇರಿಸಲು ಸಿದ್ಧಮಾಡಿದ ಪೀಠವೊಂದೇ ಅಲ್ಲಿ ಉಳಿದುಕೊಂಡಿದೆ ಎಂಬ ಭಾವನೆ ಬಂದಿತು. ಪೀಠಕ್ಕಿಂತ ಹಿಂದೆ ಎಣ್ಣೆ ಸವರಿ, ಜಿಡ್ಡುಗಟ್ಟಿದ ಕಗ್ಗಲ್ಲೊಂದು ಕಾಣಿಸಿತು. ಅದರ ಮುಖದಲ್ಲಿ ಎರಡು ಬೆಳ್ಳಿಯ ಕಣ್ಣುಗಳನ್ನು ನೆಟ್ಟಿದ್ದರು. "ಇವುಗಳಲ್ಲಿ ಅಮ್ಮನವರ ವಿಗ್ರಹ ಯಾವುದು? ಹಿಂದಿರುವ ನಿಲುಗಲ್ಲೇ? ಇದಿರಿನ ಪೀಠವೇ?" ಎಂಬ ಸಂಶಯ ಮೂಡಿತು.

ದಾರಿಯಲ್ಲಿ ಮನೆಗೆ ಹೋಗುತ್ತ, ನಾನು ಮಂಜುನಾಥನೊಡನೆ ಅದೇ ಪ್ರಶ್ನೆಯನ್ನು ಕೇಳಿದೆ. ಪೀಠದ ಹಿಂದೆ ವಿಗ್ರಹ ಇದ್ದುದರ ಕಾರಣ ಅವನಿಗೂ ಹೊಳೆಯಲಿಲ್ಲ. ಆತನೆಂದ "ಹಿಂದಿನಿಂದಲೂ ಹಾಗೆಯೇ ಇದೆ. ನಾವೇನೂ ತಬ್ದೀಲು ಮಾಡಿಲ್ಲ. ಹಿಂದಿನ ವಿಗ್ರಹವಾದರೂ ಏನೆನ್ನುತ್ತೀರಿ? ಒಂದು ಭಾರೀ ದೊಡ್ಡ ಕಲ್ಲು. ಅದರ ಮೇಲ್ಭಾಗದಲ್ಲಿ ಕಣ್ಣು, ಬಾಯಿಗಳ ಕುರುಹು ಇದೆ. ಕೈ ಮೈಯನ್ನೆಲ್ಲ ಗೆರೆಗಳಿಂದ ಗುರುತಿಸಿದ್ದಾರೆ. ಹೊಟ್ಟೆ ಸ್ವಲ್ಪ ಡುಬ್ಬದ ಹಾಗೆ ಉಬ್ಬಿದೆ. ಕಾಲುಗಳು ಎರಡು ಎಂದು ತೋರಿಸುವುದಕ್ಕೆ ಕಡಿದಾದ ಒಂದು ಗೆರೆಯಿದೆ. ಬಟ್ಟೆಬರೆ ತೊಟ್ಟಂತೆ ಬರೆದಿಲ್ಲ. ನಗ್ನರೂಪ ಗೊತ್ತಾಗುತ್ತದೆ. ಆ ಗೆರೆಗಳು ಕೂಡ ಎಣ್ಣೆಯ ಜಿಡ್ಡಿನಿಂದ ಮುಚ್ಚಿಹೋಗಿವೆ. ಹಿಂದಿನವರ ವಾಡಿಕೆಯಂತೆ ನಾವು ಅದರ ಸೊಂಟದ ಕೆಳಗೆ ಕಿರಿಗೆ ಉಡಿಸುತ್ತೇವೆ. ಕೊರಳಿಗೆ ಹಾರವನ್ನು ಹಾಕುತ್ತೇವೆ. ಕೈಗಳು ಪ್ರತ್ಯೇಕ ಇಲ್ಲದಿರುವುದರಿಂದ ಕಂಕಣ ತೊಡಿಸಲು ಉಪಾಯವಿಲ್ಲ. ಅಲ್ಲ, ಆ ಅಮ್ಮನಿಗೆ ಅಲಂಕಾರ ಯಾಕೆ ಬೇಕು ನಮ್ಮಿಂದ? ಲೋಕಕ್ಕೆ ಅವಳೇ ಅಲಂಕಾರ. ಅವಳಿಂದಲೇ ಈ ಲೋಕದ

ಸೃಷ್ಟಿ. ನಮ್ಮ ಭಕ್ತಿಯ ಗುರುತಿಗಾಗಿ ಸಿಂಗಾರ ಹೂವು, ಕುಂಕುಮ, ನೆತ್ತಿಗೆ ಎಣ್ಣೆ ಹಾಕುತ್ತೇವೆ."

"ಬೆಳಿಗ್ಗೆ ಪೀಠದ ಮೇಲೂ ಹೂವಿತ್ತಲ್ಲ!" ಎಂದೆ ನಾನು.

"ಹೂವು ಇದ್ದೇ ಇರುತ್ತದೆ. ಪೀಠ ಅದರದ್ದೋ, ಇನ್ನೊಂದರದ್ದೋ, ಪೀಠದಲ್ಲೊಂದು ಕುಳಿಯಿದೆ. ಅಲ್ಲೊಂದು ಶಿವಲಿಂಗವಿದ್ದರೂ ಇದ್ದಿರಬಹುದು. ಈಗ ಯಾವುದೂ ಇಲ್ಲ. ಪೀಠದ ಮೇಲೆಯೂ ನಾಲ್ಕು ಹೂವು ಹಾಕುವ ವಾಡಿಕೆಯಿದೆ; ಹಾಕುತ್ತ ಬಂದಿದ್ದೇವೆ."

ಅಂತೂ ಆತನ ಜತೆಯಲ್ಲಿ ಮನೆಯ ತನಕವೂ ಬಂದೆ. ಅವನು ಸೀತೆಯೊಡನೆ ನಾಲ್ಕು ಹರಟೆಯ ಮಾತುಗಳನ್ನಾಡಿ, ತನ್ನ ಮನೆಗೆ ಹೊರಟುಹೋದ.

ಆ ರಾತ್ರಿ ಮಲಗಿಕೊಂಡರೆ, ನನಗೆ ರಾತ್ರಿಯೆಲ್ಲವೂ ಹಿಂಡುಗಾನ ಅಮ್ಮನವರದ್ದೇ ಕನಸು. ಆ ಗುಡಿಯು ಸಾವಿರ, ಎರಡು ಸಾವಿರ ವರ್ಷಗಳಿಂದಲೂ ಅಲ್ಲಿ ನಿಂತಿದ್ದಿರಬೇಕು. ಇತ್ತೀಚೆಗೆ ಅಲ್ಲಿ ದಟ್ಟವಾದ ಕಾಡು ಬೆಳೆದಿರಬಹುದು. ಹಿಂದೆ ಸಾಕಷ್ಟು ಜನವಸತಿ ಆ ಊರಲ್ಲಿ ಇದ್ದಿರಬಹುದು. ಸುತ್ತಮುತ್ತಲಿನ ಸಾವಿರಾರು ಜನರು ಅಲ್ಲಿ ಕಲೆತು ಉತ್ಸವ ನಡೆಸುತ್ತಿದ್ದಿರಬೇಕು. ನನ್ನ ಎಳೆತನದಲ್ಲಿ ನಾಲ್ಕಾರು ಬಾರಿ ಅಲ್ಲಿನ ಜಾತ್ರೆಗೆ ಹೋದ ನೆನಪು ಬಂದಿತು. ಆದರೆ, ಆಗ ಅಲ್ಲಿ ಹೆಚ್ಚಿನ ಜನಸಮುದಾಯ ಸೇರಿದ ನೆನಪಾಗುವುದಿಲ್ಲ.

ಅದು ಅಮ್ಮನವರ ಗುಡಿ ಎಂಬುದರಿಂದ ಏನೋ, ನನ್ನ ಕನಸಿನಲ್ಲಿ ಅವಳ ಮುಂದೆ ಕುರಿ, ಕೋಣಗಳನ್ನು ಕಡಿಯುತ್ತಿದ್ದ ದೃಶ್ಯ ಕಾಣಿಸಿತು. ಅವಳನ್ನು ಪ್ರತಿನಿಧಿಸುವ ಪಾತ್ರಿ ಖಡ್ಗ ಝಳಪಿಸಿ, ವಾದ್ಯಸಮೇತನಾಗಿ ಆರ್ಭಟಿಸುತ್ತಿದ್ದ. ಅವನ ಎದುರಿಗೆ ನಿಂತ ನೂರಾರು ಜನರು ತಮ್ಮ ನೋವು, ಸಂಕಟ, ಸಾಲ, ಸೋಲಗಳನ್ನು ತಿಳಿಸಿ, ಅವಳಿಂದ ಅಭಯ ಬೇಡುತ್ತಿದ್ದರು.

ಮತ್ತೊಂದು ಕ್ಷಣದೊಳಗಾಗಿ ಅವಳ ಎದುರಿಗೆ ದೊಡ್ಡ ಕಟ್ಟಿಗೆ ರಾಶಿಯೊಂದನ್ನು ಉರಿಸಿ, ಅದರ ಕೆಂಡಗಳನ್ನು ಹರವಿ, ಆ ಕೆಂಡದ ಹಾಸಿಗೆಯ ಮೇಲೆ ಹೆಂಗಸರೂ, ಮಕ್ಕಳೂ ತುಳಿದು ಓಡಾಡುತ್ತಿರುವುದು ಕಾಣಿಸಿತು. ನಾನು "ಕೆಂಡ ತುಳಿಯುತ್ತಾರೆ" ಎಂಬುದನ್ನು ಕೇಳಿದ್ದೇನೆ. ಆದರೆ ಯಾವ ಕೆಂಡಕ್ಕೂ ಹೋದವನಲ್ಲ. ನನಗೆ ಆಶ್ಚರ್ಯವಾಯಿತು. ಭಕ್ತಿಯ ಆವೇಶ ಮೈಯಲ್ಲಿ ತುಂಬಿಕೊಂಡಾಗ ಹೀಗೆಲ್ಲ ಓಡಾಡುತ್ತಾರಲ್ಲವೇ - ಎನಿಸಿತು.

ಇನ್ನೊಮ್ಮೆ ಇನ್ನೊಂದೇ ಬಗೆಯ ಚಿತ್ರ ಕಾಣಿಸಿತು. ಯಾವಳೋ ಒಬ್ಬಾಕೆ ತನ್ನ ಮಗುವನ್ನು ಆ ಗುಡಿಯ ಹೊಸ್ತಿಲಲ್ಲಿ ತಂದಿರಿಸಿ "ಇಗೋ, ಕೊಟ್ಟ ಮಾತಿನಂತೆ ಇದನ್ನು ತಂದಿದ್ದೇನೆ; ತೆಗೆದುಕೋ ಅದರ ಪ್ರಾಣವನ್ನು" ಎಂದು ಬಲಿ ಕೊಟ್ಟ ಹಾಗೆ ಕಾಣಿಸಿತು.

ಆ ಚಿತ್ರ ಮಾಯವಾಗುತ್ತಲೇ ಹಿಂಡುಗಾನಿನ ಗುಡಿಯೂ ಮಾಯವಾಗಿ, ಆ ಸ್ಥಳದಲ್ಲಿ ಅಮ್ಮನವರ ಸಂಕೇತವಾದಂಥ ಕಲ್ಲೊಂದೇ ನಿಂತದ್ದು ಕಾಣಿಸಿತು. ಅದೇ ಬೆಳೆಬೆಳೆದು ತಲೆ ಮುಗಿಲೆತ್ತರಕ್ಕೆ ಹೋಯಿತು. ಕಾಲು ಪಾತಾಳದ ಆಳಕ್ಕೆ ಇಳಿಯಿತು. ಆಕೆಯ ನಡು ಒಂದೇ ಬೃಹದಾಕಾರವನ್ನು ತಾಳಿತು; ಕತ್ತಲು ತುಂಬಿಕೊಳ್ಳುತ್ತ ಬಂದಿತು. ಆ ತಮಸ್ಸು ಲೋಕವನ್ನೆಲ್ಲ ಆವರಿಸುತ್ತ ನನ್ನನ್ನೂ ಆವರಿಸಿ, ಕರಗಿಸಿ, ನಾನೂ, ನನ್ನ ಮನಸ್ಸೂ ಇಲ್ಲದಂತೆ ಮಾಡಿತು. ಅಂಥ ಸ್ಥಿತಿಯಲ್ಲಿ ನನಗೆ ಗಾಢ ನಿದ್ರೆ ಬಂದಿರಬೇಕು. ಎಚ್ಚರಗೊಳ್ಳುವ ಹೊತ್ತಿಗೆ "ಬೆಳಗಾಗುವುದು ಎಷ್ಟು ಹೊತ್ತಿಗೆ, ಜಗತ್ತಿಗೆ ನಾನು ಬರುವುದೆಂದು" ಎಂಬೊಂದು ಪ್ರಶ್ನೆಯನ್ನು ಅಸ್ಪಷ್ಟ ವಾಣಿಯಿಂದ ನನ್ನ ನಾಲಿಗೆ ತೊದಲುತ್ತಿತ್ತು. ಕಣ್ಣನ್ನು ತೆರೆದಾಗ ಸೂರ್ಯ ತೆಂಗಿನ ಮರಗಳ ಎಡೆಯಿಂದ ಇಣುಕುತ್ತಿದ್ದ.

# ಅಧ್ಯಾಯ 9

ಹಿಂಡುಗಾನ ಅಮ್ಮನವರ ಉತ್ಸವವನ್ನು ಮಂಜುನಾಥ ಬಹಳ ವೈಭವದಿಂದಲೇ ನಡೆಯಿಸಿದ. ಆ ಕಾನು ಕೊಂಪೆಗೆ ಯಾರು ಬರುತ್ತಾರೆ ಎಂದು ನಾನು ಯೋಚಿಸಿದ್ದರೆ, ಸುಮಾರು ಹತ್ತು ಹದಿನೈದು ಮೈಲುಗಳ ಆಸುಪಾಸಿನಿಂದ ನೂರಾರು ಬ್ರಾಹ್ಮಣರು ಬಂದಿದ್ದರು. ಚಂಡಿಕಾ ಹೋಮ, ಲಲಿತಾ ಸಹಸ್ರನಾಮ ಮೊದಲಾದ ಯಾವತ್ತು ಕಾರ್ಯಗಳು ಬಲು ವಿಜೃಂಭಣೆಯಿಂದಲೇ ನಡೆದುವು. ಕಣ್ಣು ಉರಿಸುವಷ್ಟು ಹೋಮದ ಹೊಗೆ ಎಲ್ಲೆಲ್ಲೂ ತುಂಬಿಕೊಂಡಿದ್ದರೂ, ಜನರು ಭಯಭಕ್ತಿಗಳಿಂದ ಕುಳಿತು ನೋಡುತ್ತಿದ್ದರು. ಮಂಜುನಾಥನಿಗಂತೂ ಪರಮ ತೃಪ್ತಿ. ಮುನ್ನೂರರಷ್ಟು ಸ್ವಜಾತಿಯವರು, ಐನೂರರಷ್ಟು ಹೊರಗಿನವರು, ಸಂತರ್ಪಣೆಯ ಭೋಜನದಲ್ಲಿ ಭಾಗಿಗಳಾದರು. ಅವನ ಧಾರಾಳ ಹಸ್ತದಿಂದಾಗಿ ಓಡಾಡುವ ಪರಿಚಾರಿಕೆಯವರು, ಅಡುಗೆಯವರು ಮತ್ತು ಬಡಿಸುವ ಯಾವೊಂದು ಕೆಲಸಗಳಿಗೂ ಒಂದಿಷ್ಟು ತೊಡಕೂ ಬರಲಿಲ್ಲ. ನಾನು ತಮ್ಮನ ಮದುವೆಯ ನೆಪದಲ್ಲಿ ನೂರು ಮಂದಿಯನ್ನು ಕರೆಯಿಸಿ ಉಪಚರಿಸುವುದರೊಳಗೇನೆ ಕಂಗಾಲಾಗಿದ್ದೆ. ಅಂಥ ನನ್ನ ಮುಂದೆ, ವರ್ಷವೆಲ್ಲ ಊರ ಹೊರಗೇ ಇರುತ್ತಿದ್ದ ಮಂಜುನಾಥನೂ, ಅವನ ಮಕ್ಕಳೂ ನಡೆಯಿಸಿದ ಕಾರುಭಾರವನ್ನು ಕಂಡಾಗ ನನಗೆ ಲಜ್ಜೆಯಾಯಿತು.

ಅವನ ಒಂದು ಅಪೇಕ್ಷೆಯನ್ನು ನಾನು ಪೂರೈಸಲಾರೆ - ಎಂಬ ಕೊರಗು ಮೊದಲ ಬಾರಿಗೆ ಗುಡಿಗೆ ಹೋಗಿ ಬಂದಂದಿನಿಂದಲೂ ನನ್ನನ್ನು ಕಾಡುತ್ತಿತ್ತು. ಅದೆಂದರೆ - ನಮ್ಮ ಅಜ್ಜಿಯನ್ನು ಆ ಉತ್ಸವಕ್ಕೆ ಹೊರಡಿಸುವ ವಿಚಾರ. ತಿಪ್ಪಜ್ಜಿಯಿಂದ ಹಳೆಯ ಪ್ರಕರಣವನ್ನು ಕೇಳಿದಂಥ ನನಗೆ, ಅವರನ್ನು ಕರೆದೊಯ್ಯುವ ಇಷ್ಟ ಉಂಟಾಗಲಿಲ್ಲ. ಸೀತೆಯೂ ನನ್ನ ಅಭಿಪ್ರಾಯದವಳೇ. ಅವಳ ದೃಷ್ಟಿ ಬೇರೆಯೇ "ಬೇಡ ಅವರು; ನಾನು ಮನೆಯಲ್ಲಿರುತ್ತೇನೆ. ಮಕ್ಕಳನ್ನು ಕರೆದುಕೊಂಡು ನೀವು ಒಬ್ಬರು ಹೋಗಿ ಬಂದರೆ ಸಾಕು" ಎಂದಳು ಅವಳು.

"ಯಾಕೆನ್ನುತ್ತೀಯಾ?" ಎಂದೆ.

"ಅಲ್ಲ; ಅವರ ಹರಕು ಬಾಯಿ ಸುಮ್ಮನಿರದು. ಅವರು ಯಾವ ಗಳಿಗೆಯಲ್ಲಿ ಯಾರನ್ನು ಕಂಡು ಏನು ಹೇಳಿಯಾರು ಎಂಬುದಕ್ಕಿಲ್ಲ" ಎಂಬ ಭಯವನ್ನು ವ್ಯಕ್ತಪಡಿಸಿದಳು. ಹೀಗಾಗಿ, ಉತ್ಸವದ ಬೆಳಿಗ್ಗೆ ಅಜ್ಜಿಗೆ ಸುದ್ದಿ ಹೇಳದೆಯೇ, ನಾನು ನನ್ನ ಎರಡು ಮಕ್ಕಳನ್ನು ಕಟ್ಟಿಕೊಂಡು ಹೊರಡಲು ಅಣಿಯಾದೆ. ಮಂಜುನಾಥ ಅಜ್ಜಿಯೊಡನೆ 'ನೀವು ಬಂದೇ

ತೀರಬೇಕು' - ಎಂದಿದ್ದರೂ ನಾನು ಅವರ ಮುಂದಕ್ಕೆ ಪ್ರಸ್ತಾಪವನ್ನು ಆಡಿರಲಿಲ್ಲ. ಸಂತರ್ಪಣೆಯ ದಿವಸ ಬಂತು. ಮಿಂದು ಹೊರಡಲು ಅಣಿಯಾದಾಗ ಅವರಾಗಿಯೇ ನನ್ನನ್ನು ಕರೆದು "ಮಾಣಿ, ನನ್ನಿಂದ ನಡೆಯಲಿಕ್ಕೆ ಆದೀತಲ್ಲ. ಸಣ್ಣವಳಿದ್ದಾಗ ಹೋಗಿ ಅಮ್ಮನನ್ನು ಕಂಡು ಬಂದಿದ್ದೆ; ಇನ್ನು ಸಾಯುವ ಮೊದಲು ಒಮ್ಮೆ ಕಂಡು ಬರುತ್ತೇನೆ. ಹಾಗೆಯೇ ನನ್ನ ತಿಪ್ಪಕ್ಕನನ್ನು ನೋಡಿ ಬರುತ್ತೇನೆ. ಅವಳು ಕುರುಡಿಯಾದರೂ ನನಗೆ ಕಣ್ಣು ಉಂಟಷ್ಟೆ. ಎಂದು ಮಾತನಾಡಿಸುವುದು ಅವಳನ್ನು?" ಎಂದಾಗ ನನ್ನ ಎದೆ ಧಸಲ್ಲೆಂದಿತು.

ಅವರು "ನನಗೆ ನಿಜ ಗೊತ್ತು. ನೀವು ಗಂಡ, ಹೆಂಡಿರು ನನ್ನನ್ನು ಮನೆಯಿಂದ ಹೊರಡಿಸಬಾರದೆಂತ ಪೈಂಟು ಮಾಡಿಕೊಂಡಿದ್ದೀರಿ - ಎಂತ. ಸೀತೆಗೆ ಹೇಳು; ಅಲ್ಲಿ ನನ್ನ ಬಾಯಿಗೆ ಬೀಗ ಹಾಕಿಕೊಂಡಿರುತ್ತೇನೆ; ಅವಳು ಹೆದರುವುದು ಬೇಡ ಅಂತ; ಅವಳೂ ಬರಲಿ" ಎಂದರು.

ಮತ್ತೆ ಉಳಿದದ್ದೇನು? ನಾನು ಸಕುಟುಂಬ ಸಪರಿವಾರ ಸಹಿತವಾಗಿ ಹೊರಡುವುದಷ್ಟೆ! ದಾರಿಯುದ್ದಕ್ಕೂ ನನ್ನ ಮಕ್ಕಳ ಬಾಯಿಗೆ ಯಾವ ಬೀಗವೂ ಇರಲಿಲ್ಲ. ಅವುಗಳ ಮಾತನ್ನು ಕೇಳುತ್ತ ನಡೆದೆವು. ಸೀತೆ ಅಜ್ಜಿಯ ಬೆಂಗಡೆಯಲ್ಲೇ ಸಾಗಿದಳು. ದೊದಲು ಬಂದುದೇ ಅಮ್ಮನವರ ದೇವಸ್ಥಾನಕ್ಕೆ. ಅಜ್ಜಿ ಅಲ್ಲಿನ ಸಂಭ್ರಮವನ್ನು ಕಂಡರು; ಹೋಮ ಕುಂಡದ ಮುಂದೆ ಬ್ರಾಹ್ಮಣರು ಮಂತ್ರ ಪಠಿಸುವುದನ್ನು ಕೇಳಿದರು. ಹೊಗೆಯ ಕಾಟಕ್ಕೆ ಕಣ್ಣು ಸವರಿದರು. ಅಮ್ಮನವರ ಗುಡಿಯ ಬಾಗಿಲಿಗೂ ಹೋದರು. ನಾನು ಅವಸರಿಸಿ ಅವರ ಹಿಂದೆಯೇ ಧಾವಿಸಿದೆ "ಇನ್ನೇನಾದರೂ ಆದೀತು" ಎಂಬ ಭಯದಿಂದ. ಅವರು ಅಲ್ಲಿ ನಿಂತು "ದೊಡ್ಡ ಅಮ್ಮ ನೀನು! ನಿನ್ನದು ಸಾವಿರ ಆಟ. ಕಾಲಕಾಲಕ್ಕೆ ಒಂದೊಂದು ಆಟ. ಇವತ್ತು ಈ ಮಕ್ಕಳ ಕೈಯಿಂದ ಈ ಆಟ ಆಡಿಸುತ್ತಿದ್ದೀಯಾ" ಎಂದರು.

ಮರುಕ್ಷಣಕ್ಕೆ "ಮಾಣಿ, ನನ್ನನ್ನಿನ್ನು ತಿಪ್ಪಕ್ಕನ ಮನೆಗೆ ಕರೆದುಕೊಂಡು ಹೋಗು" ಎಂದು ಆಜ್ಞೆ ಮಾಡಿದರು.

"ಮೊದಲು ಮಂಜುನಾಥನ ಮನೆಗೆ ಹೋಗುವ" ಎಂದು, ನಾನು ಅವರನ್ನು ಅವನ ಮನೆಗೇನೆ ಕರೆದೊಯ್ದೆ. ಶ್ರೀದೇವಮ್ಮ ಆ ಗಡಿಬಿಡಿಯಲ್ಲಿಯೂ ಹೊರಕ್ಕೆ ಬಂದು, ಅವರನ್ನು ಹತ್ತಿರ ಕುಳ್ಳಿರಿಸಿಕೊಂಡು ತುಂಬ ಉಪಚರಿಸಿದರು. ಮಧ್ಯಾಹ್ನ ಸಮಾರಾಧನೆಯ ಅನ್ನ ಬೀಳುವಾಗ ಅಂತೂ ಹೊತ್ತು ತಿರುಗಿಯೇ ತಿರುಗುತ್ತದೆ ಎಂಬುದು ಗೊತ್ತಿತ್ತು. ಅಷ್ಟೆಲ್ಲ ಜನರ ಗದ್ದಲದಲ್ಲಿ ಅಜ್ಜಿಗೆ ಶಾಂತಿ ಸಿಗುವುದು ಕಷ್ಟ ಎಂಬುದರಿಂದ, ನಾನಾಗಿಯೇ, "ನಡೆಯಲಿಕ್ಕುಂಟು ಸ್ವಲ್ಪ. ಅಲ್ಲಿಗೆ ಹೋಗುವುದಾದರೆ ಹೋಗುವ" ಎಂದೆ.

"ನಡೆಯದೆ ಏನು?" ಎಂದರು.

ಕಾಡಿನ ದಾರಿಯನ್ನು ಬಿಟ್ಟು, ಗದ್ದೆಯ ಅಂಚುಗಳ ಮೇಲೆ ತಿಪ್ಪಜ್ಜಿಯ ಮನೆಯ ತನಕ ಹೋದೆವು. ಮನೆಯ ಮುಂದಿನ ಗುಮ್ಮಿಯ ನೀರಲ್ಲಿ ಕಾಲನ್ನು ತೊಳೆದುಕೊಂಡು, ಅಂಗಳಕ್ಕೆ ಬಂದೆವು. ತಿಪ್ಪಜ್ಜಿ ಚಾವಡಿಯಲ್ಲಿ ಜಪಸರ ಹಿಡಿದು ಕುಳಿತದ್ದು ಕಾಣಿಸಿತು. "ನಾನು, ಸುಬ್ಬಣ್ಣ ಬಂದದ್ದು, ನನ್ನ ಅಜ್ಜಿಯನ್ನು ಕರೆದುಕೊಂಡು ಬಂದಿದ್ದೇನೆ" ಎನ್ನುವುದರೊಳಗಾಗಿಯೇ ನನ್ನ ಅಜ್ಜಿ "ತಿಪ್ಪಕ್ಕ, ಇಂದೀಗ ನಿನ್ನನ್ನು ಕಾಣುವ ಯೋಗ ಬಂದಿತು ನನಗೆ. ಮಂಜುನಾಥನ ಅಮ್ಮನವರ ಪೂಜೆಯ ಲೆಕ್ಕದಲ್ಲಿ ಬಂದೆ. ಆ ಲೆಕ್ಕದಲ್ಲಿ ನಿನ್ನ ಲೆಕ್ಕವೂ ಸೇರಿತು" ಎಂದು ಹೇಳುತ್ತ ಅವರನ್ನು ಸಮೀಪಿಸಿ ಕುಳಿತರು. ಅವರ ಬೆನ್ನನ್ನು ಮೆಲ್ಲನೆ ಸವರಿದರು; ಗಲ್ಲವನ್ನು ಎತ್ತಿ ಅವರ ಕಣ್ಣುಗಳನ್ನು ಇಣಿಕಿ ನೋಡಿದರು. ತಮ್ಮ ಹಸ್ತಗಳಿಂದ ಅವರ ಮುದುಡಿದ ಕೈಗಳನ್ನು ಹಿಡಿದುಕೊಂಡರು. ಆಕೆ ಕಣ್ಣೀರನ್ನು ಸುರಿಸುತ್ತ "ಮೂಕಿ, ನಿನಗಿನ್ನೂ ಕೈಕಾಲು ಗಟ್ಟಿಯಾಗಿದೆ, ದೇವರು ಕಣ್ಣನ್ನು ಉಳಿಸಿದ್ದಾನೆ. ನೀನು ಇಲ್ಲಿಗೆ ಬಾರದೆಯೇ, ನಾನು ನಿನ್ನ ಹತ್ತಿರ ಬರುವುದಕ್ಕುಂಟೇ?" ಎಂದರು.

ನನ್ನ ಅಜ್ಜಿ "ತಿಪ್ಪಕ್ಕ, ಅದಕ್ಕೆಂದೇ ಬಂದೆ; ಬರಬಹುದಿತ್ತು ಈ ಮೊದಲೇ. ಇವತ್ತು ಮನಸ್ಸನ್ನು ತೀರ ಗಟ್ಟಿ ಮಾಡಿಕೊಂಡು ಬಂದೆ; ಯಾತಕ್ಕೆಂದು ಗೊತ್ತಾಯಿತಲ್ಲ. ಒಂದು ಸಾರಿ ಬಂದು ಅನುಭವಿಸಿದ್ದು ನನಗೆ ಸಾಕಾಗಿತ್ತು. ಆ ಅಮ್ಮನವರ ಮುಖವನ್ನೇ ನೋಡುವುದಿಲ್ಲ - ಎಂದುಕೊಂಡಿದ್ದೆ. ಅದು ಸಹ ಅವಳ ಆಟ ಅಲ್ಲವೇ? ನನ್ನನ್ನು ಮರುಳು ಮಾಡಿ, ಆ ದಿನ ಹತ್ತಿರ ಕರೆಯಿಸಿಕೊಂಡದ್ದು ಅವಳೇ ಅಲ್ಲವೇ? ನನಗೂ ಅರಿವೆಯಿಲ್ಲ, ನಿನಗೂ ಬೇಡ. ಯಾರು ನಾನು? ಭಗವತಿ; ನೀನು ನನ್ನ ಮಗು" ಎಂದು ಹೇಳಿದಳು. ನಾನು ಸಣ್ಣ ಮಗುವಲ್ಲವೇ? ಅವಳ ಮಾತನ್ನು ನಂಬಿ 'ನಿನ್ನ ಹಾಗೆಯೇ ನಾನು' ಎಂದು ಕುಣಿದಾಡಿದೆ - ಅಮ್ಮನನ್ನು ಕಂಡ ಸಂತೋಷಕ್ಕೆ. ಆಮೇಲೆ ಏನಾಯಿತು ಹೇಳು ನನ್ನ ಗತಿ? ನನ್ನ ಒಬ್ಬಳ ಮರುಳಿಗೆ, ಊರಿನ ನೂರು ಮರುಳುಗಳು ಸೇರಿಕೊಂಡು ಸಾವಿರ ಬಗೆಯಿಂದ ಕಾಡಿದರು. ಜಕಣಿ, ಬೊಬ್ಬರ್ಯ, ಬ್ರಹ್ಮರಾಕ್ಷಸ ಎಂದು ಹೊಡೆದು, ಬಡಿದು ನನ್ನ ಜೀವ ತಿಂದರು. ಆಮೇಲೆ ಮಾತನಾಡುವುದನ್ನೇ ಬಿಟ್ಟೆ, ನಾಲ್ಕು ವರ್ಷ."

ತಿಪ್ಪಜ್ಜಿ ಅದಕ್ಕೆ "ಇವತ್ತು ನೀನು ಬರುವುದು ಬೇಡವಿತ್ತು. ಅದೇ ಅಮ್ಮನವರ ಪೂಜೆಯಲ್ಲವೇ?" ಎಂದರು.

"ಇವತ್ತು ಗಟ್ಟಿ ಮನಸ್ಸು ಮಾಡಿಕೊಂಡು ಬಂದೆ. ಹೆದರುವವಳು ನಾನಲ್ಲ. ನನಗೆ ಯಾವುದೂ ಮರೆತು ಹೋಗಿಲ್ಲ. ಅದಕ್ಕೇನೆ ಅಮ್ಮನವರ ಹತ್ತಿರ ಹೋಗಿ, ನಕ್ಕು ಹೇಳಿದೆ 'ನಿನ್ನ ಆಟವೇ! ನಿನ್ನದು ದಿನಕ್ಕೆ ಒಂದೊಂದು ವೇಷ' - ಎಂದಂದೇ ಬಂದೆ; ಬಿಡಲಿಲ್ಲ."

"ಈಗ ನೀನು ಅಲ್ಲಿಗೆ ಹೋಗಿ, ಬಂದೂ ಆಯಿತೇ? ಅದೆಲ್ಲ ಅಸಂಬದ್ಧ ಯಾಕೆ ಹೇಳಿದೆ - ಅಮ್ಮನವರ ಮುಂದೆ? ಯಾರಾದರೂ ಕೇಳಿದರೆ ನಿನಗೆ ಮರುಳು ಅನ್ನದಿರುತ್ತಾರೆಯೇ?"

"ನನಗೆ ಮರುಳು ಅಂತ ಜನ ಎಂದೋ ಹೇಳಿಬಿಟ್ಟಿದ್ದಾರೆ. ಅಮ್ಮನವರಿಗೆ ಹೇಳಬೇಕಂತ ಅನಿಸಿತು; ಹೇಳಿಬಿಟ್ಟೆ. ಅವಳ ಆಟ ಕಂಡು ನಗು ಬಂತು ನನಗೆ. ಅದರಲ್ಲಿಯೂ ತಿಪ್ಪಕ್ಕ, ಈ ಹಿಂಡುಗಾನ ಅಮ್ಮ ಮಾಯಾವಿ ಎಂದರೆ ಮಾಯಾವಿ. ಸಾವಿರ ವೇಷವನ್ನು ತೊಟ್ಟವಳು. ನನಗೆ ಅವಳ ಒಂದೊಂದು ವೇಷವೂ ಕಾಣಿಸುತ್ತದೆ."

"ಅವಳು ಲೋಕವನ್ನು ಹುಟ್ಟಿಸಿದಳು; ಜೀವಿಗಳನ್ನು ಹಡೆದವಳು; ಅವನ್ನು ಸಾಕಿದವಳು ಆ ಅಮ್ಮ - ಎಂದೆನಿಸಿದಳು."

"ಹುಟ್ಟಿಸಿದ ಮಕ್ಕಳಿಂದ ಕಪ್ಪಕಾಣಿಕೆ ಕೇಳಿದಳು. ರಕ್ತಬಲಿ ಬೇಡಿದಳು. ಕುರಿ, ಕೋಣಗಳನ್ನು ತಿಂದಳು; ಮಕ್ಕಳನ್ನೂ ತಿಂದಳು."

"ಭಕ್ತರೂ ನಂಬಿದರು; ಕಳ್ಳಕಾಕರರೂ ನಂಬಿದರು. ಮಂತ್ರವಾದಿಗಳೂ ನಂಬಿದರು. ಸಾವಿರ ಆಕಾರ ತಾಳಿದಳು. ಹೆಣ್ಣೇ ಸರ್ವಸ್ವ, ಹೆಣ್ಣಿದ್ದರೇ ಗಂಡು - ಎಂತ ಮಾಯೆಯನ್ನು ಹೂಡಿದಳು. ಭಗವತಿ ಆದಳು. ಭಗವತಿ ತಾನೇ ಎಂದಳು. ಅದನ್ನೇ ಪೂಜೆ ಮಾಡು ಎಂಬ ಭ್ರಮೆ ಹುಟ್ಟಿಸಿದಳು."

"ದೇವರ ಗುಡಿಯ ಎದುರು ನಿಂತ ಕ್ಷಣದಲ್ಲಿ ಅವಳ ಈ ಸಾವಿರ ಆಟವೂ ಕಾಣಿಸಿತು ನನಗೆ. ಮಕ್ಕಳನ್ನು ಹೆತ್ತಳು, ಉಣಿಸಿದಳು, ಹಿಡಿದಳು, ನುಂಗಿದಳು. ಭಕ್ತರು ಬಂದು ಅವಳಿಗೆ ಆರತಿ ಎತ್ತಿದರು, ಹಣ್ಣುಕಾಯನ್ನು ಮಾಡಿದರು. ಕುರಿ, ಕೋಳಿ ಕಡಿದರು. ಹೆಣ್ಣು ಗಂಡಿನ ಪೂಜೆಯನ್ನು ಮಾಡಿತು; ಗಂಡು ಹೆಣ್ಣಿನ ಪೂಜೆಯನ್ನು ಮಾಡಿತು. ಕಳ್ಳನ್ನು ಕುಡಿದರು, ಮಾಂಸವನ್ನು ತಿಂದರು. ಆ ಲಿಂಗವನ್ನು ಪೂಜಿಸಿದರು; ಯೋನಿಯನ್ನೂ ಪೂಜಿಸಿದರು. ಅದರಿಂದಲೇ - ಇಷ್ಟಾರ್ಥಸಿದ್ಧಿ, ಅಷ್ಟೈಶ್ವರ್ಯಸಿದ್ಧಿ - ಎಂದು ಭ್ರಮಿಸಿ ಮರುಳು ಮರುಳಾಗಿ ಕುಣಿದಾಡಿದರು."

"ನಾನಿದ್ದರೆ ಪುರುಷ; ನಾನು ಇಲ್ಲವಾದರೆ ಏನುಂಟು? ಎಂದಂದಳು. ಅದನ್ನೆಲ್ಲ ಕೇಳಿ, ಕಂಡು, ನಕ್ಕು ಬಂದೆ."

ಈ ಯಾವತ್ತು ಮಾತುಗಳನ್ನು ಆಡುತ್ತಿದ್ದಾಗ ನನ್ನ ಅಜ್ಜಿ ನನಗೆ ಅಜ್ಜಿಯೆಂದೇ ಕಾಣಿಸಲಿಲ್ಲ. ಆಕೆಯೇ ಅಮ್ಮನವರ ವೇಷ, ಆವೇಶ ತೊಟ್ಟು ಮಾತಾಡುತ್ತಿದ್ದಂತೆ ಕಾಣಿಸುತ್ತಿತ್ತು. ಅವರಂತು ತುಂಬ ಭಾವತಲ್ಲೀನರಾಗಿ ನುಡಿಯುತ್ತಿದ್ದರು. ಅವರ ಒಂದು ಕೈ ತಿಪ್ಪಜ್ಜಿಯ ಒಂದು ಕೈಯನ್ನು ಹಿಡಿದುಕೊಂಡಿತ್ತು. ಅವರು ಭಾವತಲ್ಲೀನರೇ. ಇವರಂತೂ

ತುಟಿ ಬಿಗಿದು ಕಲ್ಲಾಗಿ ಆಲಿಸುತ್ತಿದ್ದರು. ನನ್ನ ಅಜ್ಜಿಯ ಮೈಯಿಂದ ಅವರ ಮೈಯೊಳಕ್ಕೆ ಯಾವುದೋ ಮಿಂಚಿನ ಶಕ್ತಿ ಹರಿಯುತ್ತಿರುವಂತೆ ನನಗೆ ಕಾಣಿಸಿತು.

ಆಗ ನನಗೆ ಭಯ ಉಕ್ಕುತ್ತ ಬಂದಿತು. ದೇವರ ಗುಡಿಯ ಮುಂದೆ ಕಾಣಿಸಬೇಕಾಗಿದ್ದ ಇಂಥ ಆವೇಶ, ಇಲ್ಲಿ ಪ್ರಕಟಗೊಳ್ಳುವ ಹಾಗಿದೆಯಲ್ಲ. ಇನ್ನೇನೆಲ್ಲ ಮಾಡುತ್ತಾರೋ ಹಿಂದೆ ಮಾಡಿದಂತೆ - ಎಂಬ ಭೀತಿಗೊಳಗಾದೆ. ಆದರೆ ಸುದೈವದಿಂದ ಹಾಗೇನೂ ಸಂಭವಿಸಲಿಲ್ಲ. ಅವರೇ ತಮ್ಮ ಮಾತಿನ ರೀತಿಯನ್ನು ಬದಲಿಸಿ, ನಮ್ರತೆಯಿಂದ "ನೀನು ಹೆದರಿಕೊಂಡೆ - ಎಂದು ಕಾಣುತ್ತದೆ. ಏನಿದೆ ಹೆದರಲಿಕ್ಕೆ? ಅವಳ ಆಟವೇ ಹಾಗಲ್ಲವೆ? ನಾನು ಹೆದರಲಿಲ್ಲ. ನೀನು ಯಾಕೆ ಹೆದರುತ್ತೀಯ? ಅಮ್ಮ ಅಲ್ಲವೇ ಅವಳು? ಅಮ್ಮನಿಗೆ ಮಕ್ಕಳು ಹೆದರುತ್ತಾರೆಯೇ?" ಎಂದು ಕೇಳಿದರು.

ತಿಪ್ಪಜ್ಜಿ ಚೇತನ ಬಂದವರಂತೆ "ನೀನೊಬ್ಬಳು ಪುಣ್ಯಾತ್ಗಿತ್ತಿ. ನಿನಗೆ ಅಮ್ಮ ಅಷ್ಟೆಲ್ಲವನ್ನೂ ಕಾಣಿಸಿದಳು" ಎಂದರು.

"ಯಾರು ಕಾಣಿಸಿದರೋ ಕಾಣಿಸಿದರು. ನಾನಂತು ಹೆದರುವವಳಲ್ಲ ಎಂದು ಗೊತ್ತಾಯಿತು ಅವಳಿಗೆ. ಅವಳು ನನ್ನನ್ನು ಕಂಡು ನಕ್ಕಳು. ಅಮ್ಮನಿಗೆ ಮಗು ಹೆದರುತ್ತದೆಯೋ? ನಾನು ಇದೇ ಅಮ್ಮನ ಹೊಟ್ಟೆಯಲ್ಲಿ ಹುಟ್ಟಿದ ಮಗುವಲ್ಲವೇ?" ಎಂದಂದು "ಯಾರಿಲ್ಲ ಅಂತ ಕಾಣುತ್ತದೆ ಮನೆಯಲ್ಲಿ" ಎಂದು ಕೇಳಿದರು.

"ಏನು ಬೇಕಜ್ಜಿ?" ಎಂದು ಕೇಳಿದೆ. ಅಷ್ಟರಲ್ಲಿ ಅವರ ಸೊಸೆ, ಮನೆಯಲ್ಲಿ ಗದ್ದಲವಿಲ್ಲದೆ ಕೆಲಸ ಮಾಡುತ್ತಿದ್ದಾಕೆ, ಹೊರಕ್ಕೆ ಬಂದು, ನಮ್ಮ ಮುಂದಕ್ಕೆ ಎರಡು ಥಾಲಿಗಳಲ್ಲಿ ಬೆಲ್ಲದ ಪಾನಕವನ್ನು ಇರಿಸಿದಳು. ಉಪಚಾರವಿಲ್ಲದೆಯೇ ನನ್ನ ಅಜ್ಜಿ ಅದನ್ನು ಕುಡಿದು "ಈಗ ತಂಪಾಯಿತು; ಇಷ್ಟೆಲ್ಲ ನಿನ್ನ ಹತ್ತಿರ ಹೇಳುವಾಗ, ಯಾಕೋ ಮರಕು ಸಂಕಟದ ಹಾಗೆ ಆಗಿತ್ತು. ವಯಸ್ಸಾದ ಕೊರಡು, ನನಗಾದರೂ ಏನು ತ್ರಾಣವಿದೆ ಹೇಳು?" ಎಂದರು.

"ನನಗೇನು ಉಂಟು ಅನ್ನುತ್ತೀಯ? ನಿನ್ನಷ್ಟೂ ಇಲ್ಲ. ಇದ್ದೇನೆ - ತರಗೆಲೆಯ ಹಾಗೆ, ಒಣಗಿ, ಸೊರಗಿ. ಅಂತೂ ಬಂದೆ ನೀನು."

"ಎಷ್ಟೆಂದರೂ ನಾನು ಪ್ರಾಯದಲ್ಲಿ ಸಣ್ಣವಳಲ್ಲವೇ?"

"ಪ್ರಾಯ ಮಾತ್ರ ನನಗೆ ಹೆಚ್ಚಾದದ್ದು ನಿಜ; ಆದರೇನು? ಅಮ್ಮ ನಿನ್ನನ್ನು ಒಲಿದಿದ್ದಾಳೆ."

"ನೀನೂ ಅವಳ ಮಗುವೇ, ಚರಾಚರವೆಲ್ಲ ಅವಳ ಮಕ್ಕಳೇ; ನಾವು ತಿಳಿದುಕೊಂಡರೆ ಉಂಟು."

"ಅದು ಹೌದೆನ್ನು. ಆದರೆ ಮೂಕಿ, ನನ್ನಂಥವಳು ಇದ್ದು ಏನು ಆಗಬೇಕಿನ್ನು? ಅವನು ಕೊಂಡುಹೋಗುವುದಿಲ್ಲ."

"ಅಯ್ಯೋ ತಿಪ್ಪಕ್ಕ, ಅದೆಂಥ ಯೋಚನೆ? ಅವನು ಸಾಗಿಸುವ ಕತೆ! ಇರುತ್ತೀ ಇನ್ನೊಂದಿಷ್ಟು ದಿವಸ. ನಿನಗೇನೂ ಆಗಿಲ್ಲ; ಆಗುವುದೂ ಇಲ್ಲ. ನಿನ್ನ ಈ ಅಂಗಿ ಇನ್ನು ನಾಲ್ಕು ವರ್ಷಕ್ಕೆ ಸಾಕು."

"ಇನ್ನೂ ನಾಲ್ಕು ವರ್ಷಕ್ಕೆ ಇರಬೇಕು ಅನ್ನುತ್ತೀಯಾ?"

"ಅಂದೆ - ಒಂದು ಮಾತಿಗೆ. ಇರಬೇಕಾದ ಜೀವ ಇಲ್ಲಿದ್ದರೇನು, ಎಲ್ಲಿದ್ದರೇನು? ಅದಕ್ಕೆ ಸಾವಿಲ್ಲ ಅನ್ನುತ್ತಾರಲ್ಲ! ಯಾವತ್ತು ಲೋಕ ಕರಗುವಾಗ ಅದೂ ಕರಗುತ್ತದೆಯೋ ಏನೋ. ಆಗ ಯಾರ್‍ಯಾರೂ ಇಲ್ಲ. ಹಾಗೆ ಯಾರೂ ಇಲ್ಲ ಅಂದರೇನು? ಆ ಅಮ್ಮನೂ ಇಲ್ಲ; ಇಷ್ಟೆಲ್ಲ ಆಟ ಆಡಿಸುವವಳು. ಅವಳಿಗೂ ಸಾಕಾಗಿರುತ್ತದೆ. ತನ್ನ ಮಕ್ಕಳನ್ನು ಕಟ್ಟಿಕೊಂಡು ಅವಳೂ ಕರಗಿ ಬಿಡುತ್ತಾಳೆ. ಅವಳಿರುವ ತನಕ ನಾವು; ನಾವಿರುವ ತನಕ ಅವಳು. ಎರಡೂ ಇರುವ ತನಕ ಈ ಲೋಕ."

"ಅಷ್ಟೇ ಅಂತಿಯಾ?"

"ಅಷ್ಟಲ್ಲದೆ ಮತ್ತೇನು? ಜೀವಗಳು ಕುಣಿದಾಡಲಿ... ಅಂತ ಈ ಸೃಷ್ಟಿ. ಕುಣಿದಾಟ ಮುಗಿದ ಮೇಲೆ, ಅವೆಲ್ಲ ಯಾತಕ್ಕೆ ಬೇಕು?"

ನನ್ನ ಅಜ್ಜಿಯ ಈ ಬಗೆಯ ಹೊಸ ಭಾಷೆ ಮತ್ತು ಮಾತು - ನನಗೊಂದೂ ತಿಳಿಯದಾದುವು. ಅವರು ಯಾರಿಂದ ಅಷ್ಟೆಲ್ಲ ಮಾತುಗಳನ್ನು ಕಲಿತರು ಎಂಬುದನ್ನು ನೆನೆದರೆ, ನನಗೆ ತೀರ ಆಶ್ಚರ್ಯ. ನನ್ನ ಅಪ್ಪ, ಅಮ್ಮ ಅಜ್ಜ, ಅಜ್ಜಿ ಯಾರ್‍ಯಾರೂ ವೇದಾಂತಿಗಳಲ್ಲ. ಇಂಥ ಮಾತುಗಳನ್ನು ಅವರು ಆಡಿರಲಾರರು. ಅವೇ ಮಾತುಗಳನ್ನು ಚಾಚೂ ತಪ್ಪದೆಯೇ ಕೇಳುತ್ತ ವರಪ್ರಸಾದವೆಂದು ತಿಳಿಯುತ್ತಿರುವ ತಿಪ್ಪಜ್ಜಿಗೆ ಅದೆಷ್ಟು ಅರ್ಥವಾಯಿತೋ ಹೇಳಲಾರೆ. ಅರ್ಥವಾದವರಂತೆ ಅವರ ಮುಖ ಅರಳಿದ್ದನ್ನು ಕಾಣುವಾಗ, ಅವರ ಕೈಗಳು ನನ್ನ ಅಜ್ಜಿಯ ಕೈಗಳಲ್ಲಿ ಇರುವುದನ್ನು ಕಂಡಾಗ, ಈ ಮೂವತ್ತು ವರ್ಷಗಳ ಕಾಲ ಈ ಇಬ್ಬರೂ ಅಕ್ಕತಂಗಿಯರ ದೇಹಗಳು ಅಷ್ಟೊಂದು ದೂರದಲ್ಲಿ ಹೇಗೆ ಒಂದನ್ನೊಂದು ಸಂಧಿಸದೆಯೇ ಉಳಿದುವೋ - ಎಂಬ ಬೆರಗು ಆಯಿತು.

ನಾನು ಅವರ ಮನೆಗೆ ಹೋಗಿ ಕುಳಿತಾಗ, ಹೊತ್ತು ನೆತ್ತಿಗೆ ಬರಲು ಬರಿ ಎರಡು ಗಳಿಗೆಯ ಸಮಯ ಉಳಿದಿತ್ತು. ಹೊತ್ತು ತಿರುಗಿದ ಎರಡು ಗಳಿಗೆಯಲ್ಲಿ ಅವರ ಸೊಸೆ ಚಾವಡಿಯಲ್ಲಿ ನಮಗಾಗಿ ಎಲೆ ಬಡಿಸಿದಳು. ನಾನು ಸಹ ಇಲ್ಲಿಯೇ ಊಟವನ್ನು ಮಾಡಿದರೆ ಮಂಜುನಾಥ ಏನು ತಿಳಿದಾನೆಂಬ ಭಯದಿಂದ "ನಾನು ಅಲ್ಲಿಗೇ ಹೋಗಿ ಉಣ್ಣುತ್ತೇನೆ" ಎಂದೆ.

"ಅಲ್ಲಿಗೆ ಹೋಗಿ ಪ್ರಸಾದವನ್ನು ತೆಗೆದುಕೊಂಡರೆ ಸಾಕು" ಎಂದರು ನನ್ನ ಅಜ್ಜಿ.

"ಪಂಕ್ತಿಗೆ ಸೇರದೇ ಹೋದರೆ ಹೇಗಾಗುತ್ತದೆ?" ಎಂದೆ ನಾನು.

"ಇದು ಅದರದ್ದೇ ಚೂರು. ಈ ಅನ್ನ ಕೊಡಿಸಿದವಳು ಅದೇ ಅಮ್ಮ" ಎಂದು ತಿಪ್ಪಜ್ಜಿ ಹೇಳಿದಾಗ, ಹಾಗೆ ಇರಲೂಬಹುದೆನಿಸಿತು ನನಗೆ. ನಾನು ಊಟವನ್ನು ಮುಗಿಸಿ - ಮಂಜುನಾಥನ ಮನೆಗೆ ಧಾವಿಸಿದೆ. ಬಡಿಸುವ ಚಾಕರಿಯನ್ನಾದರೂ ಮಾಡುತ್ತೇನೆ - ಎಂದುಕೊಂಡೆ. ಹೋಗಿ ಅವರೊಡನೆ ಸೇರಿದೆ. ಹೋದ ಮೇಲೆಯೇ ಮೊದಲ ಪಂಕ್ತಿಗೆ ಅನ್ನ ಬೀಳತೊಡಗಿತು. ಅವರೊಡನೆ ಸೇರಿಕೊಂಡು ಬಡಿಸಿ, ಎರಡನೆಯ ಪಂಕ್ತಿಯಲ್ಲಿ ಊಟಕ್ಕೆ ಕುಳಿತುಕೊಳ್ಳಲು ಯಾವ ಸಂಕೋಚವೂ ಆಗಲಿಲ್ಲ. ತಿಪ್ಪಜ್ಜಿಯಲ್ಲಿ ಉಂಡು ಬಂದ ಗುಟ್ಟನ್ನು ನಾನು ಯಾರೊಡನೆಯೂ ಹೇಳಲಿಲ್ಲ. ಸೀತೆ ನನ್ನನ್ನು ಕಂಡವಳು "ಅವರೆಲ್ಲಿ?" ಎಂದು ಪ್ರಶ್ನಿಸಿದಳು. "ತಿಪ್ಪಜ್ಜಿ ಮನೆಯಲ್ಲಿ" ಎಂದೆ."ಅದೇ ಒಳ್ಳೆಯದು" ಎಂಬ ಉತ್ತರ ಬಂದಿತು.

ಊಟವನ್ನು ಮುಗಿಸಿ, ಅಲ್ಲಿಗೆ ಧಾವಿಸಿ, ಅಜ್ಜಿಯನ್ನು ಮಂಜುನಾಥನ ದೃಷ್ಟಿಗೆ ಬೀಳಿಸಿದಾಗ, ಅವನಿಗೆ ಪರಮ ಸಂತೋಷವಾಯಿತು. ಆತ ಸತಿ, ಪುತ್ರ ಸಮೇತನಾಗಿ ಅವರ ಕಾಲಿಗೆ ಉದ್ದಂಡ ಎರಗಿದ.

ಅಜ್ಜಿಯನ್ನೂ ಸಣ್ಣ ಮಕ್ಕಳನ್ನೂ ಕರೆದುಕೊಂಡು ಬೇಗನೆ ಹೊರಡುವ - ಎಂದರೆ, ನಾಲ್ಕು ಮಂದಿ ಸುತ್ತುವರಿದಾಗ ಅದು ಸುಲಭವಾಗುತ್ತದೆಯೇ? ಅಜ್ಜಿ ತಾವಾಗಿಯೇ ಮಂಜುನಾಥನೊಡನೆ "ಇನ್ನು ಕತ್ತಲಾಯಿತು ಮಗು, ಹೋಗಿ ಬರುತ್ತೇವೆ. ದೇವರು ಒಳ್ಳೆಯದು ಮಾಡಲಿ" ಎಂದಂದುದರಿಂದ, ಮನೆಯವರನ್ನು ಬೀಳ್ಕೊಟ್ಟು ನಾವು ಹೊರಟೆವು. ಅಷ್ಟರೊಳಗೇನೇ ಸೀತೆ ಕಿರಿಯ ಮಕ್ಕಳೊಡನೆ ಹೊರಟು, ಚಪ್ಪರದ ಹೊರಕ್ಕೆ ಬಂದು ಕಾದು ನಿಂತಿದ್ದಳು. ಅವಳ ಬೆನ್ನ ಹಿಂದೆ ನಾವು ಹೊರಟೆವು. ಮನೆಗಿರುವ ದೂರ ಸ್ವಲ್ಪವಾದರೂ, ಅಗಲ ಕಿರಿದಾದ ದಾರಿ; ಅಂಕುಡೊಂಕಿನದು ಬೇರೆ. ಕತ್ತಲಾಗುತ್ತದಲ್ಲ ಎಂಬ ಭಯದಿಂದಲೇ ನಾನು ಅಜ್ಜಿಯ ಕೈಯನ್ನು ಹಿಡಿದು "ಮೆಲ್ಲಗೆ ನಡೆಯಿರಿ; ನಾನು ಹತ್ತಿರ ಇದ್ದೇನೆ" ಎಂದು ಹೇಳಹೋದರೆ, ಕೈ ಬಿಡಿಸಿಕೊಂಡು "ನನಗೆ ಗೊತ್ತಿಲ್ಲದ್ದೇ" ಎಂದರು. ಉಭಯತರ ಹೆಜ್ಜೆ ಮೆಲ್ಲಗೆ ಸಾಗಿತು. ನಮಗಾಗಿ ಕಾಯದೆ, ಸೀತೆ ಮಕ್ಕಳನ್ನು ಕಟ್ಟಿಕೊಂಡು ಮುಂದೆ ಹೋಗಿಯೇ ಬಿಟ್ಟಳು. ಅರ್ಧ ಹಾದಿಯ ಬಳಿಕ ನಮ್ಮ ಮನೆಯ ದಾರಿ ಕವಲೊಡೆಯುತ್ತದೆ. ಅಲ್ಲಿ ನಾವು ಬಲಗಡೆ ತಿರುಗಬೇಕು. ಅದನ್ನು ಮರೆತು, ನಾನು ಎಡಕ್ಕೆ ತಿರುಗಿದೆ. ದಾರಿ ತಪ್ಪಿದ್ದು ಇಬ್ಬರ ಗಮನಕ್ಕೂ ಬಂದಿರಲಿಲ್ಲ. ಆದರೆ, ಸ್ವಲ್ಪ ಮುಂದಕ್ಕೆ ಹೋಗುತ್ತಲೇ ಅವರು ಛಕ್ಕನೇ ನಿಂತುಕೊಂಡದ್ದನ್ನು ಕಂಡು "ಯಾಕೆ ನಿಂತಿರಿ?" ಎಂದು ಪ್ರಶ್ನಿಸಿದೆ.

"ನಿನ್ನ ಕಿವಿ ಕಿವುಡೇ?" ಎಂದರು.

"ಯಾಕೆ?" ಅಂದೆ.

"ಚೆನ್ನಾಗಿ ಕಿವಿಗೊಟ್ಟು ಕೇಳು" ಎಂದರು.

"ಏನೂ ಕೇಳಿಸುವುದಿಲ್ಲವಲ್ಲ" ಎಂದೆ.

ಅವರು ನನ್ನನ್ನು ಅಲಕ್ಷಿಸಿ, ನಾಲ್ಕು ಹೆಜ್ಜೆ ದೂರ ಮುಂದಕ್ಕೆ ಸರಿದು, ಅಲ್ಲಿ ಹಾಸಿದ ದೊಡ್ಡ ಪಾರೆಕಲ್ಲಿನ ಮಗ್ಗುಲಿಗೆ ಸರಿದು ಏನನ್ನೋ ನೋಡುವವರಂತೆ ನಿಂತರು. ಏನಿದ್ದೀತು - ಎಂದು ಕುತೂಹಲದಿಂದ ಅವರನ್ನೇ ಕೇಳಿದೆ. "ಮಾಣಿ, ಸಾಪಾಗಿ ಕೇಳಿಸುತ್ತದೆ ಬ್ರಾಹ್ಮಣರ ಧ್ವನಿ 'ಓಂ ಇಂದ್ರಾ ಇದನ್ನಮಃ ಓಂ ವರುಣಾ ಇದನ್ನಮಃ ಓಂ ಮಿತ್ರಾ ಇದನ್ನಮಃ;' ಅನ್ನುತ್ತಿದ್ದಾರೆ! ಕೇಳು" ಎಂದರು.

"ಎಲ್ಲಿ ಅಜ್ಜಿ? ಈ ಕಾಡಿನಲ್ಲಿ ಯಾತಕ್ಕೆ ಮಂತ್ರ ಹೇಳುತ್ತಾರೆ? ನಿಮಗೆ ಅಮ್ಮನವರ ಚಪ್ಪರದಲ್ಲಿ ಕಂಡ, ಕೇಳಿದ, ಚಂಡಿಕಾ ಹೋಮದ ನೆನಪು ಇನ್ನೂ ಉಕ್ಕುತ್ತಿರುವ ಹಾಗೆ ಕಾಣಿಸುತ್ತದೆ" ಎಂದೆ.

"ನನಗೆ ಅಷ್ಟೊಂದು ಮೈಮರವೆಯೇನು? ಇಲ್ಲ, ಇಲ್ಲ. ಓ ಅಲ್ಲಿ ನೋಡು, ಯಾರೋ ಒಂದು ಯಜ್ಞವನ್ನು ಮಾಡುತ್ತಿದ್ದಾರೆ. ಮೂರು ನಾಲ್ಕು ಮಂದಿ ಗಡ್ಡದ ಬ್ರಾಹ್ಮಣರು ಕಾಣಿಸುತ್ತಿದ್ದಾರೆ, ಮಂತ್ರ ಹೇಳುತ್ತಿದ್ದಾರೆ. ತುಪ್ಪ ಸಮಿತ್ತು ಎರೆಯುತ್ತಿದ್ದಾರೆ" ಎಂದರು.

ನಾನು ಆಚೀಚಿನ ಸ್ಥಳಗಳನ್ನು ನೋಡಿದಾಗ - ದಾರಿ ತಪ್ಪಿ ಬಂದದ್ದು ಗೊತ್ತಾಯಿತು. ಆಗ ಗಾಬರಿಯಿಂದ "ಅಜ್ಜಿ, ಮುಂದಿದ್ದ ನೀವೇ ದಾರಿ ತಪ್ಪಿಸಿದಿರಿ. ಅದು ನನಗೂ ತಿಳಿಯಲಿಲ್ಲ. ಬನ್ನಿ ಕತ್ತಲಾಯಿತು" ಎಂದು ಹೇಳಿ ಅವರ ಕೈ ಹಿಡಿದುಕೊಂಡು ಹಿಂದಕ್ಕೆ ಕರೆದು ತಂದೆ. ಅವರಿಗೆ ಬರಲು ಏನೇನೂ ಇಷ್ಟವಿಲ್ಲದಂತೆ ಕಾಣಿಸಿತು. "ಅಜ್ಜಿ, ಕತ್ತಲಾಯಿತು, ಸೀತೆ ಗಾಬರಿಯಾದಾಳು; ಕತ್ತಲಾಗುವ ಮುಂಚೆಯೇ ಮನೆ ಮುಟ್ಟದಿದ್ದರೆ" ಎಂದು ಮೇಲಿಂದ ಮೇಲೆ ಹೇಳಿ, ಕೈಯನ್ನು ಹಿಡಿದು ನೂರು ಮಾರು ಹಿಂದಕ್ಕೆ ನಡೆದು ಬಂದು, ಅನಂತರ ಸಮನಾದ ದಾರಿಯನ್ನು ಹಿಡಿದು, ಮನೆಯ ಸಮೀಪಕ್ಕೆ ಬಂದೆವು. ಅಶ್ವತ್ಥದ ಕಟ್ಟೆ ಬರುತ್ತಲೇ "ಮಗು, ನಾನು ಇಲ್ಲಿ ಒಂದಿಷ್ಟು ಕೂತು ಬರುತ್ತೇನೆ. ನೀನು ಮನೆಗೆ ಹೋಗು" ಎಂದಂದು, ಕಳುಹಿಸಿದರು. ನಾನು ಮನೆಯನ್ನು ಸೇರಿ "ಸೀತೆ, ನಾವು ಬಂದಾಯಿತು" ಎಂದು ನಮ್ಮ ಆಗಮನದ ವಾರ್ತೆಯನ್ನು ಮುಟ್ಟಿಸಿದೆ. ಆಮೇಲೆ ಬಾವಿಕಟ್ಟೆಯಲ್ಲಿ ಕಾಲು ತೊಳೆದುಕೊಂಡು, ಸಂಧ್ಯಾವಂದನೆಯ ನಾಟಕ ಮುಗಿಸಿ, ಚಾವಡಿಯನ್ನು ಸೇರುವಾಗ, ಕಿಟ್ಟಣ್ಣ ಬಂದು "ಅಪ್ಪಯ್ಯ, ರಾತ್ರಿ ಅಮ್ಮನವರ ಗುಡಿಗೆ

ಹೋಗುವ; ಹಬ್ಬ ಇನ್ನೂ ಉಂಟಂತೆ" ಎಂದು ಅಂಗಲಾಚಿದ. ಅವನಿಗೆ ಆ ಜನರ ಗದ್ದಲ, ವಾದ್ಯ, ವೈಭವಗಳನ್ನು ಕಂಡು ಹುಚ್ಚುಗಟ್ಟಿಹೋಗಿತ್ತು. ಚಂದ್ರ, ಅವನ ತಮ್ಮ ಆಡಿ ತೀರ ದಣಿದು, ಹಾಸಿಗೆ ಹಿಡಿದಾಗಿತ್ತು. ಆ ರಾತ್ರಿ ಯಾರಿಗೂ ಊಟವಿಲ್ಲವೆಂಬ ಸಂಗತಿ ತಿಳಿದದ್ದೇ. ಆದರೆ ಅಜ್ಜಿಗೆ ಮಾತ್ರ ಒಂದಿಷ್ಟು ಫಲಾಹಾರ ಆಗಲೇಬೇಕು. ಅವರು ಸಮಾರಾಧನೆಯ ಊಟವನ್ನೂ ಸಹ ಅಲ್ಲಿ ಉಂಡವರಲ್ಲ. ಮಂಜುನಾಥನ ಆಗ್ರಹಕ್ಕೆ ಒಂದಿಷ್ಟು ಪಂಚಕಜ್ಜಾಯ ಬಾಯಿಗೆ ಹಾಕಿಕೊಂಡಿದ್ದರು.

"ದೊಡ್ಡವರೆಲ್ಲಿ?" ಎಂದು ಕೇಳಿದಳು ಸೀತೆ.

"ಅಶ್ವತ್ಥದ ಕಟ್ಟೆಯಲ್ಲಿ."

"ಅವರನ್ನು ನೀವು ಅಲ್ಲಿಯೇ ಬಿಟ್ಟು ಬರುವುದೇ? ಒಂದಿಷ್ಟು ಅವಲಕ್ಕಿಯನ್ನು ತಿಂದು, ಮಜ್ಜಿಗೆ ನೀರನ್ನು ಕುಡಿಯಲಿ. ಅವರಿಗೂ ನಿಮ್ಮ ತಿಪ್ಪಜ್ಜಿಗೂ ಭಾರೀ ಮಾತುಕತೆಯಾಗಿರಬೇಕು."

"ಹೂಂ, ಆಯಿತು, ಅಲ್ಲಿ ಏನೇನೋ! ಹೋದ ಒಂದು ಗಳಿಗೆ ಹೊತ್ತು ತುಂಬ ಮಾತನಾಡಿದರು. ಅನಂತರ ಇಬ್ಬರೂ ಸುಮ್ಮನಿದ್ದರು."

"ಅವರು ಸುಮ್ಮನಿರುವವರೇ; ಇವರು ಹಾಗಲ್ಲವಲ್ಲ" ಎಂದಳು ಸೀತೆ.

"ನಿನಗೆ ಯಾಕೆ ಅದೆಲ್ಲ? ಅವರ ವಯಸ್ಸಿನಲ್ಲಿ ನಮ್ಮನ್ನು ಬುಟ್ಟಿಯಲ್ಲಿ ತುಂಬಿಸಿಕೊಂಡು ಹೊರಬೇಕಾದೀತು."

ಸೀತೆ ಮಾತನಾಡಲಿಲ್ಲ. ನಾನು ಅಜ್ಜಿ ಕುಳಿತ ತಾವಿನ ಬಳಿಗೆ ಹೋದೆ. ಕಿಟ್ಟಣ್ಣ ನನ್ನ ಬೆನ್ನನ್ನು ಬಿಡದೆ ಹೊರಟ! "ನೀನೆಲ್ಲಿಗೆ?" ಎಂದು ಗದರಿಸಿದೆ.

"ನೀನು ಹಿಂಡುಗಾನಿಗೆ ಹೋಗುತ್ತೀ" ಎಂದು ರಾಗ ಮಾಡಿದ.

"ಛೀ, ಹಿಂಡುಗಾನಿಗೆ ಎಷ್ಟು ಸಾರಿ ಹೋಗುವುದಂತೆ? ಅದೂ ಈ ಕತ್ತಲಲ್ಲಿ" ಎಂದು ಬೀಸನೆ ಕಾಲು ಹಾಕಿ, ಅಶ್ವತ್ಥದ ಕಟ್ಟೆಗೆ ಹೋದೆ. ಅದನ್ನು ಸಮೀಪಿಸಿದಾಗ - ಅಜ್ಜಿ ಏನೇನೋ ಗೊಣಗುತ್ತಿರುವುದು ಕೇಳಿಸಿತು. ಕಾಲಿನ ವೇಗ ತಗ್ಗಿಸಿ ಕಳ್ಳ ಹೆಜ್ಜೆಯನ್ನು ಇರಿಸಿ, ಮುಂದುವರಿದೆ, ಕಟ್ಟೆಯ ಒಂದು ತುದಿಯಲ್ಲಿ ಹೋಗಿ ಕುಳಿತೆ. ಅವರೇನಾದರೂ ಆತ್ಮಚಿಂತನೆ ಮಾಡುತ್ತಿದ್ದಾರಾದರೆ "ಬನ್ನಿ, ಹೊರಡಿ" ಎನ್ನುವ ಒರಟ ನಾನಲ್ಲ. ಅನೇಕ ಬಾರಿ ಅವರ ಗೊಣಗುಗಳು ಸರಳವಾದ, ಸ್ಪಷ್ಟ ಅರ್ಥವುಳ್ಳ ಮಾತುಗಳಿಂದ ಕೂಡಿರುವುದರಿಂದ, ಈಗಲೂ ಅವರು ಯಾರ ಹತ್ತಿರವೋ ಮಾತನಾಡುತ್ತಿದ್ದಾರೆ ಎನಿಸಿ ನನ್ನಲ್ಲಿ ಕುತೂಹಲ ಉಂಟಾಯಿತು. ಅವರೋ!

"ಇಂದ್ರಾಯ ಸ್ವಾಹಾ; ಇಂದ್ರಾ ಇದನ್ನಮಃ"

"ವರುಣಾಯ ಸ್ವಾಹಾ; ವರುಣಾಯ ಇದನ್ನಮಃ"

ಅನ್ನುತ್ತಿದ್ದರು ತಿರುಗಿ.

"ಅಯ್ಯೋ, ನಿಮ್ಮ ಪಾಡೇ! ಯಾರು ಈ ಕಾಲದಲ್ಲಿ ನಿಮ್ಮನ್ನು ಮೂಸುವವರು? ಆ ಕಾಲ ಹೊರಟುಹೋಯಿತೇ. ಮೆರೆದಿರಿ ನಾಲ್ಕು ದಿನ; ಬ್ರಾಹ್ಮಣರು ಮೆರೆಯಿಸಿದರು ನಿಮ್ಮನ್ನು. ಅವರಿಂದ ನೀವು ಬದುಕಿಕೊಂಡಿರಿ; ನಿಮ್ಮಿಂದ ಅವರು ಬದುಕಿಕೊಂಡರು. ಪೂಜಾರಿ ದೇವರಿಗಿಂತಲೂ ದೊಡ್ಡವ ಅನ್ನುವುದು ಅದಕ್ಕೇ. ನೂರೋ, ಐನೂರೋ ವರ್ಷಗಳ ಕಾಲ ನಿಮ್ಮ ರಾಜ್ಯ ನಡೆಯಿತು. ಎಲ್ಲದಕ್ಕೂ ಇಂದ್ರನೇ, ಎಲ್ಲದಕ್ಕೂ ವರುಣನೇ, ಎಲ್ಲದಕ್ಕೂ ಮಿತ್ರನೇ. ಅಗ್ನಿಕುಂಡದಲ್ಲಿ ಬೆಳಗ್ಗಿನಿಂದ ಹೊತ್ತು ನೆತ್ತಿಗೆ ಬರುವ ತನಕವೂ ತುಪ್ಪ ಸುರಿದದ್ದೇ ಸುರಿದದ್ದು. ಹವಿಸ್ಸು ಕೊಟ್ಟದ್ದೇ ಕೊಟ್ಟದ್ದು. ಹೊಗೆಯನ್ನು ಎಬ್ಬಿಸಿದ್ದೇ ಎಬ್ಬಿಸಿದ್ದು! ಇಂದ್ರಭೋಗ ಅಂದರೆ ಅದು! ಯಾವ ದೇವರಿಗೂ ಇಲ್ಲದ ಸಮ್ಮಾನ ಅವನಿಗೆ."

"ಆ ಇಂದ್ರನೂ ಕಡಿಮೆಯಲ್ಲ. ನೀನು, ವರುಣ, ನೀನೂ ಕಡಿಮೆಯಲ್ಲ. ಆಯಿತು ಅದೊಂದು ಕಾಲ. ಈಗ ನಮ್ಮನ್ನೆಲ್ಲ ಯಾರು ಕೇಳುತ್ತಾರೆ ಹೇಳು? ನಿಮ್ಮ ಸ್ವರ್ಗ ಯಾರಿಗೆ ಬೇಕು ಇವತ್ತು?"

"ಸ್ವರ್ಗ, ನರಕ - ಉಂಟು ಅಂತ ಜನ ಹೆದರಿಸುತ್ತಿದ್ದಾರೆ, ನಿಜ; ಅದು ಯಾರಿಗೆ? ಹೆದರುವವರಿಗೆ. ಹೆದರದವರಿಗೆ ಯಾವುದೂ ಇಲ್ಲವಲ್ಲ. ಅದು ಇದ್ದರೆ ಪುನರ್ಜನ್ಮ ಯಾಕಂತೆ?"

"ಅಗ್ನಿ, ನೀನಾದರೆ ಚಿಂತೆಯಿಲ್ಲ. ನಿನ್ನ ಅದೃಷ್ಟ. ನಿನ್ನ ಮರ್ಯಾದೆಯನ್ನು ಇಂದಿನವರೆಗೂ ನಮ್ಮ ಬ್ರಾಹ್ಮಣರೆಂಬವರು ಉಳಿಸಿಕೊಂಡು ಬಂದಿದ್ದಾರೆ. ಎಷ್ಟು ತುಪ್ಪ, ಸಮಿತ್ತು, ಚರುಗಳನ್ನು ತಿಂದರೂ ನಿನಗೆ ಅಜೀರ್ಣವಾಗುವುದಿಲ್ಲ. ನಮ್ಮ ಮಂಜುನಾಥ ಇವತ್ತು ನಿನಗೆ ಒಂದು ಹಾಡ ತುಪ್ಪ ಎರೆದಿರಬೇಕು. ಅದನ್ನೆಲ್ಲ ಅರಗಿಸಿಕೊಂಡ ನೀನು - ಆ ಇಂದ್ರನಿಗೆ ಮುಟ್ಟಿಸುತ್ತೀಯೋ ಎಂಬ ಯೋಚನೆ ನನಗೆ."

"ಥೂ, ನೀನು ಯಾರಿಗೆ ಏನು ಮುಟ್ಟಿಸುತ್ತೀಯೆ? ನಿನ್ನ ಹೊಟ್ಟೆಗೇ ಅದೆಲ್ಲ. ನೀನು ಮುಟ್ಟಿಸುವುದು ಹೊಗೆಯನ್ನು. ನಾಲ್ಕು ದಿಕ್ಕಿನ ಗಾಳಿಗೆ ಹೊಗೆಯನ್ನು ಹಾರಿಸಿ - ಯಾರು ಯಾರು ನಿನ್ನ ಪಾಲುಗಾರರೋ ಅವರವರು ಬೇಕಾದರೆ ಬಂದು ತೆಗೆದುಕೊಂಡು ಹೋಗಲಿ - ಎನ್ನುವವನು ನೀನು. ನಿನ್ನ ಠಕ್ಕು ಆಟ ನನಗೆ ತಿಳಿಯದೋ? ಠಕ್ಕರಲ್ಲಿ ಠಕ್ಕ ನೀನು."

ಈ ಮಾತನ್ನು ಕೇಳಿದಾಗ ನನ್ನ ಎದೆ ದಢಲ್ ಎಂದಿತು. ಯಾಕೆ ನಮ್ಮ ಅಜ್ಜಿ ಹೀಗೆ ಚಾರ್ವಾಕನಂತೆ ಮಾತನಾಡುತ್ತಿದ್ದಾರೆ? ಅವರಿಗೆ ಯಾವ ದೇವರಲ್ಲೂ ಒಂದಿಷ್ಟೂ ನಂಬಿಕೆಯಿಲ್ಲವೇ - ಎನಿಸಿತು. ಅಜ್ಜಿಯ ಮಾತು ಮಾತ್ರ ಮುಂದುವರಿದಿತ್ತು.

"ಆ ದಿನ, ನೆನಪುಂಟೇ ನಿನಗೆ? ನಿನಗೆ ಸುತ್ತು ಬಂದೆ ನಾನು. ಅವರ ಕೈ ಹಿಡಿದು ಏಳು ಹೆಜ್ಜೆ ಇರಿಸಿದೆ. ನನ್ನ ಮದುವೆಗೆ ನೀನೇ ಸಾಕ್ಷಿ. ಕೊನೆಗೂ ನೀನು ಮಾಡಿದ್ದೇನು, ಹೇಳು? ಅವರ ಜೀವವನ್ನು, ಜೀವವೇನಲ್ಲ; ಅದೆಲ್ಲಿ ಸಿಗುತ್ತದೆ ನಿನಗೆ, ದೇಹವನ್ನು ಮಾತ್ರ ನುಂಗಿದೆ. ಸುಟ್ಟು ಬೂದಿಯಾದರು. ನೀನು ಅವರನ್ನು ಸಂಪೂರ್ಣವಾಗಿ ತಿನ್ನಲೂ ಇಲ್ಲ. ತಿನ್ನುತ್ತಿದ್ದರೆ, ಅದು ನಿನಗೆ ಜೀರ್ಣವಾಗುತ್ತಲೇ ಇರಲಿಲ್ಲ. ಅವರ ಒಂದಿಷ್ಟು ಬೂದಿಯನ್ನು, ಅಸ್ಥಿಯನ್ನು ಬಿಟ್ಟುಹೋದೆ. ಅದನ್ನು ನನ್ನ ಮಾವಯ್ಯ ರಾಮೇಶ್ವರಕ್ಕೆ ತೆಗೆದುಕೊಂಡು ಹೋಗಿ ಅಲ್ಲಿ ವರುಣನಿಗೆ ಕೊಟ್ಟು ಬಂದರು."

"ಇಂದ್ರ ಹೋದ ಮೇಲೆಯೂ ನೀನು ಉಳಿದುಕೊಂಡೆ. ನಮ್ಮ ಉಳಿದ ಬೂದಿಯನ್ನು ನುಂಗುವ ಮಟ್ಟಿಗೆ, ವರುಣನೂ ಉಳಿದುಕೊಂಡ."

"ಯಾಕೆ ಹೇಳು, ನಿನ್ನನ್ನು ನಂಬಿದ ಯಾವತ್ತು ದೇವರುಗಳ ಮರ್ಯಾದೆ ಹೋದದ್ದು ಎಂದು ತಿಳಿಯುವ ಚಪಲ ನನಗೆ. ನಿನ್ನ ಇಂದ್ರನ ಹಾಗೆಯೇ ನನ್ನ ಅಮ್ಮನ ಗತಿ ಮಾತ್ರ ಆಗಲಿಲ್ಲ. ಅವಳು ಜೀವಗಳನ್ನು ಹಡೆದವಳು, ಕಾಯುವವಳು. ಒಯ್ದರೆ ಅವಳೇ ಒಯ್ಯುವವಳು. ಅವಳಿಗೆ ಯಾವತ್ ಕಾಲಕ್ಕೂ ಮರ್ಯಾದೆ ಉಂಟು. ಅವಳಿಂದ ಅವನು ಎಂಬವನಿಗೂ ಉಂಟು. ಅವರಿಂದ ನಿನಗೂ ಒಂದಷ್ಟು ಉಳಿದಿದೆ ಚೂರು, ಪಾರು."

ನಾನು ಮೈಮರೆತವನಂತೆ "ಅವನಿಗೆ ಅಂದರೆ ಯಾರಿಗೆ ಅಜ್ಜಿ?" ಎಂದು ಪ್ರಶ್ನಿಸಿದೆ. ಅವರು "ಅವನಿಗೆ ಅಂದರೆ ಅವನಿಗೆ. ಹೆಣ್ಣು ಬಾಯಿಂದ ಅದನ್ನು ಹೇಳುವ ಮಾತಲ್ಲ - ಅನ್ನುತ್ತಾರೆ. ಹೇಳದೆ ಏನು? ನಾನು ಎಷ್ಟು ಹೆಣ್ಣೋ ಅಷ್ಟೇ ಗಂಡು. ಲಿಂಗಕ್ಕೆ! ಅವರಿಬ್ಬರೂ ಕೂಡಿಕೊಂಡೇ ಸೃಷ್ಟಿಯಲ್ಲವೇ? ಮಾಣಿ, ಅವೆರಡನ್ನು ಬಿಟ್ಟರೆ ಏನುಂಟಂತೆ? ದೇವರ ಲೀಲೆ, ಮಾಯೆ, ಮಣ್ಣು - ಎಂಬುದೇ ಅದು. ಅಷ್ಟು ಗೊತ್ತಿದ್ದರೂ ನಮಗೆ ಸತ್ಯವನ್ನು ಕಂಡರೆ ನಾಚಿಕೆ."

"ಅಲ್ಲದಿದ್ದರೂ ಮಗು, ಈ ನರಮನುಷ್ಯರ ಬುದ್ಧಿ ಬಹಳ ಚಪಲ. ಇಂದಿದ್ದದ್ದು ನಾಳೆಗೆ ಹಳಸುತ್ತದೆ. ಊರೂ ಸಮ; ತಿನ್ನುವ ಊಟವೂ ಸಮ, ತಿಂಡಿಯೂ ಸಮ, ತೀರ್ಥವೂ ಸಮ."

"ಯಾಕೆನ್ನುತ್ತೀರಿ ಹಾಗೆ?"

"ಅಲ್ಲದೆ ಹೋದರೆ - ಇಂದ್ರ, ವರುಣ, ಉಳಿದ ಎಲ್ಲ ಅಷ್ಟದಿಕ್ಪಾಲಕರು, ಮತ್ತೊಂದು ಎಂದವರು, ಅವರೆಲ್ಲರನ್ನೂ ಮರೆತುಬಿಟ್ಟು ಎಷ್ಟು ಹೊಸ ದೇವರುಗಳನ್ನು ಪೂಜಿಸುವುದಂತೆ? ಬ್ರಹ್ಮ ವಿಷ್ಣು, ಶಿವ, ಗಣೇಶ, ದುರ್ಗೆ, ಪಾರ್ವತಿ, ಮೂಕಾಂಬೆ - ಹೀಗೆಯೇ ಇನ್ನೆಷ್ಟೆಷ್ಟೋ! ಒಬ್ಬೊಬ್ಬ ದೇವರಿಗೆ ಸಾವಿರ, ಸಾವಿರ ಹೆಸರು."

"ಅಮ್ಮನವರಿಗೆ ಲಲಿತಾ ಸಹಸ್ರನಾಮ ಮಾಡಿದರಲ್ಲ ಇವತ್ತು" ಎಂದೆ ಜಾಣನಂತೆ.

"ಹೌದಪ್ಪ, ನಾವು ನೂರಾರು, ಸಾವಿರಾರು ದೇವರುಗಳನ್ನು ಕಟ್ಟಿಕೊಂಡು, ಒಂದೊಂದಕ್ಕೂ ಸಾವಿರ, ಸಾವಿರ ಹೆಸರಿಟ್ಟೆವು. ಹಾಗೆಯೇ ಬೇರೆ ಬೇರೆ ಕಾಲಕ್ಕೆ ಬೇರೆ ಬೇರೆ ದೇಶದ ಜನ, ಅಷ್ಟೇ ದೇವರನ್ನೂ, ಹೆಸರನ್ನೂ ಮಾಡಿಕೊಂಡಿರಬೇಕು."

"ಆದರೂ ಒಬ್ಬನಿಗೇ ಹೇಳುವುದಲ್ಲವೆ ಅಷ್ಟೆಲ್ಲ?"

"ಅಂಥ ಜ್ಞಾನವಿರುತ್ತಿದ್ದರೆ - ಇಂದ್ರ, ವರುಣ, ಅಗ್ನಿ, ಮಿತ್ರ - ಅಂತ ನಾಲ್ಕು ನಾಲ್ಕು ಪ್ರತ್ಯೇಕ ಹೆಸರುಗಳನ್ನು ಹೇಳಿ, ಅವರಿಗೆ ನಾಲ್ಕು ನಾಲ್ಕು ಸಾರಿ ಹವಿಸ್ಸನ್ನು ಕೊಡುತ್ತಾರೆಯೇ? ದೇವರು - ಅವನೋ, ಅವಳೋ - ಎಂಬಾಗಲೇ ಎರಡು ಹೆಸರಾಗಿ ಬಿಟ್ಟಿತು. ಅವನೋ, ಅವಳೋ ಅಥವಾ ಅದೋ - ಎಂಥದು, ಏನು - ಎಂಬುದು ನಮಗೆ ತಿಳಿಯದ್ದರಿಂದಲೇ ಮನಸ್ಸಿಗೆ ಕಂಡ ಹಾಗೆ ಮಾಡಿದೆವು. ಈಗ ನಮಗೆ - ಇಷ್ಟೆಲ್ಲ ಅನ್ನುವುದು ಯಾರಿಗೆ, ಏನು ಕತೆ - ಎಂಬುದು ತಿಳಿಯದೆ ಹೋದ ಗೊಂದಲಕ್ಕಾಗಿ 'ಅವೆಲ್ಲ ಒಂದೇ' ಅನ್ನುತ್ತಿದ್ದೇವೆ. ಇವೆಲ್ಲವೂ ಒಂದು ಆಟ; ಯಾವುದರ ಆಟ? ಅಜ್ಞಾನದ ಆಟ; ಅಂತು ಜ್ಞಾನದ್ದಲ್ಲ."

"ಆಟ ಆಟವೇ, ಅಜ್ಞಾನ ಅಜ್ಞಾನವೇ! ಅಲ್ಲದೆ ಹೋದರೆ ಮಗು, ಅಮ್ಮನ ಗುಡಿಯ ಮುಂದೆ ಅವಳೇನೆ ಹುಟ್ಟಿಸಿದ ಕೋಳಿ, ಕುರಿ, ಕೋಣ ಕಡಿಯುತ್ತಾರೆಯೇ? ನಮ್ಮ ದೇಹದಲ್ಲಿ ನೆತ್ತರು ತುಂಬಿಸಿದವಳು ಅವಳಾದರೆ, ಅವಳಿಗೆ ನಮ್ಮ ನೆತ್ತರನ್ನು ಕುಡಿದು ತೃಪ್ತಿಯೇ! ಹಿಂದೆ ನರಬಲಿಯನ್ನು ಕೊಡುತ್ತಿದ್ದರಂತೆ. ಅದು ಕಾಳಿಗೆ, ಆ ಅಮ್ಮನಿಗೆ ಪ್ರೀತಿ ಅಂತ ಅಜ್ಞಾನದ ಬೆನ್ನಿಗೆ ಅನ್ಯಾಯವೂ ನಡೆಯುತ್ತದೆ. ಅದು ಮಾತ್ರ ಆಗಬಾರದಲ್ಲ."

ನನಗೆ ಅಜ್ಜಿಯು ಹೇಳಿದ ಸಮಸ್ಯೆ ಜಿಡುಕಾಗಿ ಕಾಣಿಸಿತು. ಅವರ ಬುದ್ಧಿ ಪಾದರಸದಂತೆ ಯಾವ ದಿಕ್ಕಿನಿಂದ ಯಾವ ದಿಕ್ಕಿಗೂ ಹರಿದೀತು. ಅವರ ಮಾತಿನಲ್ಲಿ ನನಗೆ ಅಸಂಗತವೇನೂ ಕಾಣಿಸದೆ ಹೋದರೂ, ಮಾತಿನ ಬಿಡು ತುಣುಕುಗಳನ್ನು ಒಂದು ಪರಿಪೂರ್ಣ ಚಿತ್ರವನ್ನಾಗಿ ಎಣಿಸಿಕೊಳ್ಳುವ ತಾಕತ್ತು ನನ್ನಲ್ಲಿಲ್ಲ. ಇನ್ನು, ನಾನು ಸೀತೆಯಿಂದ ಗದರಿಸಿಕೊಳ್ಳಬಾರದು - ಎಂಬ ನೆನಪಾಗಿ "ಅಜ್ಜಿ, ಫಲಾಹಾರ ಮಾಡಿಟ್ಟಿದ್ದಾಳೆ. ಕರೆದುಕೊಂಡು ಬನ್ನಿ ಎಂದಳು" ಎಂದೆ.

"ಆಯಿತು ಬಂದೆ, ಬಂದೆ. ಯಾವುದು, ಯಾವುದೋ ಮರುಳು ಯೋಚನೆಗಳಲ್ಲಿ ನನಗೆ ಹೊತ್ತು ಹೋದದ್ದೇ ಗೊತ್ತಾಗಲಿಲ್ಲ. ದಾರಿಯಲ್ಲಿ ಬರುತ್ತ ಏನೋ ಕಾಣಿಸಿತು, ಕೇಳಿಸಿತು - ಅಂದೆನಲ್ಲ. ಅದರದ್ದೇ ನೆನಪಾಗಿ ಮನಸ್ಸು ಎಲ್ಲೆಲ್ಲಿಗೋ ಹರಿಯಿತು. ಇವತ್ತೆಲ್ಲ ಹಾಗೆಯೇ. ತಿಪ್ಪಕ್ಕನ ಮನೆಯಲ್ಲಿ ಒಂದಿಷ್ಟು ಹೊತ್ತು ಸಂತೋಷವಾಗಿದ್ದೆ" ಎಂದು ಹೇಳುತ್ತಲೇ, ಅವರ ಕೈಯನ್ನು ಹಿಡಿದೆ. ಇಬ್ಬರೂ ಮನೆಗೆ ಬಂದೆವು.

ಅಜ್ಜಿ ತಮ್ಮ ಉಪಾಹಾರವನ್ನು ಮುಗಿಸಿ ಮಲಗಿಕೊಂಡರು. ಸೀತೆ ಚಾವಡಿಯಲ್ಲಿ ಮಕ್ಕಳನ್ನು ಮಗ್ಗುಲಿಗೆ ಮಲಗಿಸಿಕೊಂಡು ನಿದ್ದೆ ಹೋದಳು. ನನಗೆ ಆ ದಿನದ ಘಟನೆಗಳಿಂದ ಮನಸ್ಸು ಕಲ್ಲಾಬಿಲ್ಲಿಯಾಗಿತ್ತು. ಯಾವುದೋ ಒಂದು ವಿಚಿತ್ರ ನಾಟಕವೊಂದರ ವಿಚಿತ್ರ ದೃಶ್ಯಗಳೆಂಬಂತೆ ವಾಸ್ತವಿಕ ವಿಷಯಗಳ ಜತೆಯಲ್ಲಿ, ಹಲವಾರು ಅವಾಸ್ತವಿಕವಾದ ನೋಟಗಳು ಕಣ್ಣಿನ ಮುಂದೆ ಕುಣಿದಾಡತೊಡಗಿದವು. ತಿರುಗಿ ಹಿಂಡುಗಾನಿನ ಗುಡಿ, ಚಪ್ಪರ, ಚಂಡಿಕಾ ಹೋಮ, ಜನಸ್ತೋಮಗಳು ಕಾಣಿಸಿದುವು. ಹಿಂಡುಗಾನಮ್ಮ ಕರಾಳ ಕಾಳಿಯಾಗಿ, ದುರ್ಗೆಯಾಗಿ, ಚಂಡಿಯಾಗಿ, ಏನೇನೋ ಘೋರ ರೂಪಗಳನ್ನು ತಾಳಿ ನನ್ನ ಕಣ್ಮುಂದೆ ಹಾದು ಹೋದಳು. ಅವಳ ಕರಾಳವಾದ ಕಾಳಿಯ ರೂಪವನ್ನು ನೆನೆದಾಗ ನನಗೆ ಭಯವಾಯಿತು. ಅರಳಿದ ಕಣ್ಣುಗಳು, ನಿಡಿದ ನಾಲಗೆ, ಎತ್ತಿದ ನೂರಾರು ತೋಳುಗಳು, ಕೆದರಿದ ಜಡೆ, ಇಳಿಬಿಟ್ಟ ಸ್ತನಗಳು, ತುಳಿದ ಮಹಿಷಾಸುರ! 'ಅಮ್ಮ ಅಮ್ಮ' ಎಂದು ಸವಿಯಾದ, ಬಲು ಆತ್ಮೀಯ ನುಡಿಗಳಿಂದ ಕರೆಯಿಸಿಕೊಳ್ಳುವ ಆ ತಾಯಿ ಹೀಗೇಕಾದಳು? ಇವಳು ನಿಜಕ್ಕೂ ತಾಯಿಯಲ್ಲ, ಮಹಾಮಾಯಿ - ಅನಿಸಿತು. 'ಮಹಾಮಾಯಿ' ಅಂದರೂ ದೊಡ್ಡ ಅಮ್ಮ ಅಂತಲ್ಲವೆ ಹೆಸರು? ಅವಳಿಗೆ ಈ ಘೋರಾಕಾರ ಕೊಟ್ಟವರು ಯಾರು? ಯಾಕೆ ಅಂಥ ಪುರಾಣಗಳನ್ನು ಬರೆದು ಭಯ ನಟ್ಟರು - ಅನಿಸಿತು.

ಇಂಥವೇ ನಾಲ್ಕಾರು ಸ್ವಪ್ನಗಳಲ್ಲಿ ರಾತ್ರಿ ಕಳೆಯಿತು. ಬೆಳಗ್ಗಿನ ನಸುಕಿಗೆ ಸೀತೆಯು ಎದ್ದು ಹೊರಟಾಗ, ನನಗೆ ಎಚ್ಚರವಾಯಿತು; ನಾನು ಮಲಗಿಕೊಂಡೇ ಇದ್ದೆ. ಮುಸುರೆ ಪಾತ್ರೆಗಳ ಕಣಕಣ ನಿನಾದ ಕೇಳಿಸುತ್ತಿತ್ತು. ಕಣ್ಣನ್ನು ತೆರೆದಾಗ ಬಾನು ಝಳಪಿಸುತ್ತಿದ್ದುದನ್ನು ಕಂಡು ಅವಸರಿಸಿ, ಎದ್ದು ಕುಳಿತೆ. ಚಾಪೆಯನ್ನು ಸುರುಳಿ ಮಾಡಿ, ಕೋಣೆಯ ನಾಗಂದಿಗೆಯ ಮೇಲೆ ಇರಿಸಿ ಬಂದೆ. ಶೌಚ, ಮುಖ ಮಜ್ಜನಗಳ ಕಾರ್ಯ ಮುಗಿಯುವಾಗಲೂ ಹೊತ್ತಾಯಿತು. ಮಾವಿನ ಎಲೆಯನ್ನು ಕಚ್ಚಿಕೊಂಡು ಬಾವಿಕಟ್ಟೆಯ ಬಳಿ ಒಂದು ಗಳಿಗೆ ಹೊತ್ತು ಕುಳಿತಿದ್ದೆನೋ ಏನೋ. ನನ್ನ ಅಮಲನ್ನು ಇಳಿಸಲು ತಲೆಯ ಮೇಲೆ ಒಂದೊಂದೇ ಕೊಡ ತಣ್ಣೀರನ್ನು ಸುರಿದುಕೊಂಡಂತೆ, ಆಕಾಶದಿಂದ ಭೂಮಿಗೆ ಬರುತ್ತಿದ್ದೇನೆ - ಎಂದು ಕಾಣಿಸತೊಡಗಿತು.

ನಿತ್ಯದ ಚೂರುಪಾರು ಕೆಲಸಗಳನ್ನು ತೊಡಗಿದಾಗ, ಯಾವತ್ತು ಸ್ವಪ್ನ ಮರವೆಯಾಯಿತು. ಆದರೂ, ಒಂದು ನೆನಪು ಹೋಗಲೊಲ್ಲದು. ಹಿಂದಣ ಸಂಜೆ ಅಜ್ಜಿಯನ್ನು ಕರೆದುಕೊಂಡು ಬರುತ್ತ ದಾರಿ ತಪ್ಪಿತಷ್ಟೆ. ಹಾಗೆ ತಪ್ಪಿ, ನಾವು ಸೇರಿದಂಥ ತಾವು ನಿತ್ಯ ಹೋಗದ ಜಾಗವಲ್ಲ. ಅಲ್ಲಿ ಶಿಲೆಯ ಬಂಡೆ ಹಾಸಿದ ಕಡೆ ಏನಾದರೊಂದು ವಿಶೇಷ ಇದ್ದಿರಲೇ ಬೇಕು. ಇಲ್ಲದೆ ಹೋದರೆ, ಅಜ್ಜಿಗೆ ಅಲ್ಲಿಗೆ ಬಂದಾಗ ಅಂಥ ಪೂರ್ವ ಸ್ಮೃತಿ ಹುಟ್ಟಲಾರದು. ಊಟ ಮುಗಿದ ಬಳಿಕ, ಬಿಸಿಲು ಇಳಿದ ಮೇಲೆ, ನಾನು ಇನ್ನೊಮ್ಮೆ ಅಲ್ಲಿಗೆ ಹೋಗಿ, ಮಾಗಣೆ ಮಣೇಗಾರರ ಹಾಗೆ ಸ್ಥಳ ತನಿಖೆ ಮಾಡಿಕೊಂಡು ಬರಬೇಕು - ಎಂಬ ಚಪಲ ನನ್ನಲ್ಲಿ ದೊಳೆಯಿತು.

ಮಧ್ಯಾಹ್ನ ಊಟ ಮಾಡಿ ನಿತ್ಯದಂತೆ ಒಂದಿಷ್ಟು ಹೊತ್ತು ಒರಗಿದೆ. ಎದ್ದಾಗ, ಬೇಸಿಗೆಯ ಉರಿ ಬಿಸಿಲು ಒಂದಿಷ್ಟೂ ಕಡಿಮೆಯಾಗಿರಲಿಲ್ಲ ಎನಿಸಿತು. ಕತ್ತಿಯನ್ನು ಹಿಡಿದುಕೊಂಡು ಮನೆಯ ತೋಟವನ್ನು ಹೊಕ್ಕು, ಬೇಲಿಯ ಬಳ್ಳಿಗಳನ್ನು ಸವರಿ, ಹೊತ್ತು ಕಳೆದೆ. ಮೈ ಬೆವತಿತು. ತಿರುಗಿ ಬಾವಿಕಟ್ಟೆಗೆ ಬಂದು ತಣ್ಣೀರಿನ ಪ್ರೋಕ್ಷಣೆ ಮಾಡಿಕೊಂಡು ಉಸ್ಸೆನ್ನುತ್ತ ಈಚೆ ಬಂದಾಗ, ಹೊತ್ತು ಇಳಿದದ್ದು ಕಾಣಿಸಿತು. ಅಂಗಳದಲ್ಲಿ ಮಕ್ಕಳ ಸುಳಿವು ಕಾಣಿಸಲಿಲ್ಲ. ಇದೇ ಸಮಯವೆಂದು ಮನೆಯಿಂದ ಹೊರಬಿದ್ದೆ. ಅಶ್ವತ್ಥದ ಕಟ್ಟೆ ಬಂದಿತು. ಅಲ್ಲಿಂದ ಹಿಂಡುಗಾನಿನ ಕಾಲುದಾರಿ ಹಿಡಿದೆ. ನಡುವೆ ಕಾಲುದಾರಿ ಬಂದೊಡನೆಯೇ ಅಡ್ಡಕ್ಕೆ ಹೊರಳಿದೆ. ಅಲ್ಲಿಂದ ಮುಂದೆ ನನ್ನ ಕಣ್ಣು ಮತ್ತು ಕಿವಿಗಳು ಚುರುಕಾದವು. ನೂರು ಮಾರು ಸರಿಯುತ್ತಲೇ ವಿಶಾಲವಾದ ಬಂಡೆ ಕಾಣಿಸಿತು. ನನಗೂ ಏನಾದರೂ ಮಂತ್ರಗಿಂತ್ರ ಕೇಳಿಸೀತಲ್ಲ - ಎಂದು ಕಿವಿಗಳನ್ನು ನಿಮಿರಿಸಿದೆ. ದೂರದ ಬಲ್ಲೆಯೊಂದರಿಂದ ಕುಪ್ಪುಳು ಹಕ್ಕಿಯೊಂದು ಕೂಗುವ ಧ್ವನಿ ಕೇಳಿಸಿತು. "ಹೋ ಭಾರದ್ವಾಜರು!" ಎಂದು ವೈದಿಕ ಯುಗದ ಸ್ಮರಣೆ ತಂದುಕೊಂಡೆ. ಅದೇ ಪಾರೆಗೆ ಒಂದು ಸುತ್ತು ಬಂದೆ. ಅದರ ಮೇಲೆ ಯಾವ ಗಿಡವೂ ಬೆಳೆಯುವಂತಿರಲಿಲ್ಲ. ಅದರ ಮಧ್ಯದಿಂದ ಜನ ನೂರಾರು ವರ್ಷಗಳಿಂದ ನಡೆದು ಹೋದ ದಾರಿಯಿದೆ. ಆಚೀಚೆ ಪಾಮಾಜಿ ಹಿಡಿದು, ಕರಿಕಾದ ತಾವಿನ ನಡುವೆ ಅದು ಬಿಳಿಯ ನಾಮ ಎಳೆದಂತೆ ಕಾಣಿಸುತ್ತಿತ್ತು. ಪಾರೆಯ ತುದಿಗೆ ಹೋದಾಗ ಗಿಡಗಳ ಮರೆಯಲ್ಲಿ ಒಂದು ಕಲ್ಲುಮರಿಗೆ ಕಾಣಿಸಿತು. ಅದರ ಮಗ್ಗುಲಲ್ಲೇ ಒಂದು ಕಲ್ಲಿನ ಕಂಬವನ್ನು ನಿಲ್ಲಿಸಿದ್ದರು. ಈ ತನಕ ಅವುಗಳ ಕಡೆಗೆ ನನ್ನ ಗಮನ ಹರಿದಿರಲಿಲ್ಲ. ಆ ಕಲ್ಲನ್ನು ದಾರಿಹೋಕರು ಹೊರೆ ಇಳಿಸಿಕೊಳ್ಳಲು ಅನುಕೂಲಿಸುವಂತೆ ಅಲ್ಲಿ ನೆಟ್ಟದ್ದು. ಆದರೆ, ಅಲ್ಲಿ ಕಲ್ಲುಮರಿಗೆ ಯಾತಕ್ಕೆ ಬೇಕು? ಉತ್ತರ ಸ್ಪಷ್ಟವಾಗಿತ್ತು - ಬಾಯಾರಿದ ದನಗಳಿಗಾಗಿ ನೀರು ತುಂಬಿಸಲೆಂದು. ಆದರೆ ನೀರು ಅದಕ್ಕೆ ಎಲ್ಲಿಂದ ಬರಬೇಕು? ಆಚೀಚೆ ಒಂದು ಮೈಲಿನ ತನಕ ಕಾಡೋ, ಹಾದಿಯೋ ಇದೆ. ಬಯಲು

ಸೇರುವ ತನಕ ನೀರಿಲ್ಲ. ಆಗ ಒಂದು ವಿಷಯ ಹೊಳೆಯಿತು - ಪೂರ್ವದಲ್ಲಿ ಇದು ದನಕರುಗಳು ಮೇಯುವ ಜಾಗವಾಗಿರಬೇಕು. ನೀರು ಮರಿಗೆಯನ್ನು ಅಲ್ಲಿ ಇರಿಸಿದಂಥ ಪುಣ್ಯಾತ್ಮರು, ದೂರದ ಎಲ್ಲಿಂದಲೋ ನೀರನ್ನು ಹೊತ್ತು ತರುತ್ತಿದ್ದಿರಲಾರರು. ಮರಿಗೆಯ ಸಮೀಪದಲ್ಲಿ ಒಂದು ಬಾವಿಯೂ ಇದ್ದಿರಬೇಕು - ಎಂಬ ವಿಚಾರ ಹುಟ್ಟಿ, ಅಲ್ಲೆಲ್ಲ ಸುತ್ತಾಡತೊಡಗಿದೆ. ನಾನು ನನ್ನ ಎಳೆತನದಲ್ಲಿ ಅಲೆದಾಡದಿದ್ದ ಜಾಗವೇನೂ ಅದಲ್ಲ. ಅಲ್ಲಿನ ತರಗೆಲೆಗಳ ಮೇಲೆ ಅಲೆದಾಡುತ್ತಿರುವಾಗ, ನುರಿನುರಿ ಸದ್ದಾಗುವುದನ್ನು ಕೇಳಿ, ಅವುಗಳ ಕೆಳಕ್ಕೆ ಹರೆಯುವುದೇನಾದರೂ ಇದ್ದೀತೇ ಎಂಬ ಸಂಶಯ ಮೂಡಿತು. ಹಾವಿನ ನೆನಪಿನೊಂದಿಗೆ ಅದರ ಹೆಸರಿಗೆ ಹೆದರಿದ ಜನ್ನನ ನೆನಪೂ ಬಂತು. ಆತ ಆ ದಿನ ಹೊರಟು ಹೋದವನು ತಿರುಗಿ ಬಂದಿರಲಿಲ್ಲ. ಅವನ ಸುದ್ದಿಯಿಲ್ಲ - ಎಂಬ ನೆನಪೂ ಬಂದಿತು.

ಬಾವಿಯ ಬಗ್ಗೆ ನನ್ನ ಶೋಧೆಯು ಅರೆ ಮನಸ್ಸಿನಿಂದಲೇ ನಡೆಯಿತು. ಅದಕ್ಕೆಲ್ಲ ಯಾರಾದರೂ ಜತೆಯಲ್ಲಿದ್ದರೆ ಒಳ್ಳೆಯದು ಎನಿಸಿತು. ಆ ಪುಟ್ಟ ಕಾಡಿನಲ್ಲಿ ದಾರಿ ತಪ್ಪಲಾರದಾದರೂ, ಬಾವಿಯನ್ನು ಹುಡುಕುವ ಕೆಲಸ ಸುಲಭವಲ್ಲ. ಅಲ್ಲಿ ಹಬ್ಬಿಕೊಂಡಿರುವ ಪೊದರುಗಳಿಂದಾಗಿ, ಅದಿದ್ದರೂ ಕಾಣಿಸಲಾರದು. ಆದರೂ ಹುಡುಕಿದೆ. ಬಾವಿ ಕಾಣಿಸದೆ ಹೋದರೂ, ತುಸು ತಗ್ಗಿನ ಒಂದು ತಾವು ಕಾಣಿಸಿತು. ಇಲ್ಲಿ ಬೇಕಷ್ಟು ಕೇದಗೆ ಗಿಡಗಳ ಹಳು ಬೆಳೆದಿರುವುದನ್ನು ಕಂಡು, “ಇಲ್ಲಾದರೆ ಧಾರಾಳ ನೀರಿನ ಪಸೆಯು ಇದ್ದೇ ತೀರಬೇಕು” ಎಂಬ ಭಾವನೆಯಾಯಿತು. ನನ್ನ ಅಂತರಂಗದಲ್ಲಿ ಇಂಥದನ್ನು ಕಾಣುತ್ತೇನೆ - ಎಂಬ ಬಯಕೆ ಇದ್ದುದರಿಂದಲೇ ಅದು ಕಾಣಿಸಿದುದರಲ್ಲಿ ಆಶ್ಚರ್ಯವೇನಿಲ್ಲ. ಅಜ್ಜಿಗೆ ‘ಇಂದ್ರಾಯ ಸ್ವಾಹಾ’ ಮಂತ್ರ ಕೇಳಿಸಬೇಕಾದರೆ ಏನು ಕಾರಣ? ಅಲ್ಲೇನಾದರೂ ಪೂರ್ವ ಕಾಲದಲ್ಲಿ ಋಷ್ಯಾಶ್ರಮ ಇದ್ದೀತೇ? ಇದ್ದರೆ, ಅವರ ವಸತಿಯ ಮುಂದೆ ಯಜ್ಞಕುಂಡವೂ ಇದ್ದೀತು. ಆದರೆ, ಸಾವಿರಾರು ವರ್ಷಗಳ ಹಿಂದಿನ ಆ ಯಜ್ಞಕುಂಡವೋ ಅಥವಾ ಅಂಥ ಮತ್ತೇನೋ ಇಂದಿಗೂ ಉಳಿದುಕೊಂಡಿರಲು ಸಾಧ್ಯವೇ? - ಎಂದು ತೋಚುತ್ತಲೇ ನಕ್ಕೆ. ಅಜ್ಜಿಗೆ ಅಂಥ ಯಾವುದೋ ಪುರಾತನ ಕಾಲದ ಸಂವೇದನೆಯುಂಟಾಗಿ ಅವರು ಗೊಣಗಿದರು. ನಾನು ಅಜ್ಜಿ ಅಲ್ಲವಲ್ಲ. ಆ ನೀರು ಮರಿಗೆ, ನಿಂತ ಕಲ್ಲು - ಇಷ್ಟು ಕಾಣಿಸಿದ್ದೇ ನನ್ನ ಪುಣ್ಯ - ಎನಿಸಿತು.

ಆ ಕಾಡಿನೆಡೆಯಲ್ಲಿ ಒಂದು ಅಶ್ವತ್ಥ ವೃಕ್ಷ ಕಾಣಿಸಿದಾಗ ತಿರುಗಿ ನನ್ನ ಮನಸ್ಸು ಚಕಿತಗೊಂಡಿತು. ಹಿಂದಣ ಕಾಲದ ಋಷಿಗಳು ಸಮಿತ್ತನ್ನು ಪಡೆಯಲು ಅದನ್ನು ನೆಟ್ಟಿರಬೇಕು - ಎಂದುಕೊಂಡೆ. ಆದರೆ, ಈ ಮರಕ್ಕೆ ನೂರು ವರ್ಷ ಪ್ರಾಯ ಕೂಡ ಆಗಿರಲಾರದು. ಅದಕ್ಕೆ ಉಪನಯನವನ್ನು ಮಾಡಿದವರೂ ಇರಲಾರರು. ಹಾಗೆ

ಹೇಳಹೋದರೆ, ನಮ್ಮ ಮನೆಯ ಮುಂದಕ್ಕಿರುವ ಅಶ್ವತ್ಥಕ್ಕೆ ನಾನ್ನೂರು, ಐನೂರು ವರ್ಷಗಳಾದರೂ ಆಗಿರಬೇಕು. ಋಷ್ಯಾಶ್ರಮವಿದ್ದಲ್ಲಿ, ಅದು ಕೂಡ ನಮ್ಮ ಮನೆಯ ಮುಂದೆಯೇ ಇದ್ದಿರಬೇಕು - ಎಂಬ ಭಾವನೆ ದೊಳಗಿತು.

ಸಾಧ್ಯವಾದರೆ, ಒಂದು ದಿವಸ ಆ ಕೇದಗೆಯ ಬಲ್ಲೆಯನ್ನು ಸವರಿಸಿ ನೋಡಬೇಕು. ಅದರೊಳಗೆ ಒಂದು ಹಳೆಯ ಬಾವಿ ಸಿಗಬಾರದು ಎಂದಿಲ್ಲ. ಬಾವಿ ಇಲ್ಲದೆ ಹೋದರೂ ಸಮೀಪದಲ್ಲಿಯೇ ಒಂದಲ್ಲ ಒಂದು ಬಾವಿ ಕಾಣಿಸಲೇ ಬೇಕು. ಹೀಗೆ, ನನ್ನ ಹುಡುಕಾಟ ಮತ್ತು ಚಿಂತನೆಯಲ್ಲಿ ಬಾನು ಕೆಂಪಡರಿದ್ದು ಕಂಡಿತು. ಅದೇ ವೇಳೆಗೆ ಬಯಲಿಗೂ ಹೋಗುವಂಥ ಈ ದಾರಿಯಲ್ಲಿ ಗುರುತಿನ ಯಾರಾದರೂ ನನ್ನನ್ನು ಕಂಡು "ಏನು ಸುಬ್ರಾಯರೇ, ಇಲ್ಲೇನು ಮಾಡುತ್ತೀರಿ?" ಎಂದು ಕೇಳಿದರೆ, ಉತ್ತರಿಸುವುದು ಕಷ್ಟವಲ್ಲವೇ - ಎನಿಸಿತು.

ಅಷ್ಟು ಹೊತ್ತಿಗೆ ಅದೇ ದಾರಿಯಾಗಿ ಇಬ್ಬರು ಹುಡುಗರು ಏನನ್ನೋ ಹೊತ್ತುಕೊಂಡು ಅದೇ ಕಡೆ ಬಂದರು. ಅವರ ಹಿಂದೆ ಮತ್ತೊಬ್ಬ ಹೆಂಗಸು ಸಹ ಮತ್ತೊಂದು ಹೊರೆಯನ್ನು ಹೊತ್ತುಕೊಂಡು ಬರುವುದೂ ಕಾಣಿಸಿತು. ದಣಿದು ಬಂದ ಅವರು ಆ ನಿಲುಗಲ್ಲಿನ ಬಳಿ ಬಂದು, ಹೊರೆಗಳನ್ನು ಇಳಿಸಿ, ನಿಂತರು. ತಮ್ಮ ಅಂಗಾಂಗಗಳಿಂದ ಸುರಿಯುತ್ತಿದ್ದ ಬೆವರನ್ನು ಉಜ್ಜಿಕೊಂಡರು. ಉಸ್ಸೆನ್ನುತ್ತ ಅಲ್ಲಿಯೇ ಕುಳಿತು, ವಿರಾಮವಾಗಿ ಮಾತಿಗೂ ತೊಡಗಿದರು.

ಅವರಲ್ಲೊಬ್ಬ ಹುಡುಗ "ಏ ಅಬ್ಬೆ, ಕತ್ತಲಾಗುತ್ತ ಬಂತು. ಇನ್ನೆಷ್ಟು ನಡೆಯುವುದು ಅಂತೀಯೆ? ಮೂಡೂರು ಸಮೀಪ ಬಂತು - ಎಂತ ಕಾಣಿಸುತ್ತದೆ. ರಾತ್ರಿ ಇಲ್ಲೆಲ್ಲಾದರೂ ಉಳಿದುಕೊಳ್ಳುವ. ಒಂದಿಷ್ಟು ನೀರು ಸಿಕ್ಕಿದ್ದಾದರೆ ಕುಡಿದುಕೊಂಡು, ಎಲ್ಲಾದರೂ ನಿದ್ದೆ ಮಾಡಿ, ಬೆಳಗ್ಗಿನ ಜಾವಕ್ಕೆ ಎದ್ದು ಹೊರಟರಾಯಿತು" ಎಂದ.

"ಯಾಕೆ ನಿಲ್ಲುವುದು ಮಗ? ಮೂಡೂರಿನಲ್ಲಿ ನಿಲ್ಲುವುದು ಬೇಡ, ಯಾರ ಮನೆಗೂ ಹೋಗುವುದೂ ಬೇಡ" ಎಂದಳು ಆ ಹೆಂಗಸು.

"ಕಾಲಬೆರಳು ಮರಡಿದ್ದಲ್ಲದಿದ್ದರೆ ನಿಲ್ಲಬೇಕು ಅನ್ನುತ್ತೇನೆಯೇ?"

"ಹೌದು; ಕತ್ತಲಲ್ಲಿ ನಡೆದು ಮತ್ತಷ್ಟು ಕಲ್ಲು, ಬೇರು ತಾಗಿಸಿಕೊಂಡು ಏನಾದೀತೋ ಹೇಳಲಾರೆ. ಒಂದು ರಾತ್ರಿಗೆ ಮೂಡೂರಿನ ನೀರಿನ ಋಣ ಇದೆ ಎಂದು ತಿಳಿಯುವುದಪ್ಪ."

"ಎಲ್ಲಿಗೆ ಹೋಗುವುದು ಎನ್ನುತ್ತೀಯ? ನಿನ್ನ ಪ್ರಾಕಿನ ಗುರುತಿನ ಒಬ್ಬರಾದರೂ ಇಲ್ಲವೇ?"

"ಗುರುತು ಪರತು ಇಲ್ಲದೆ? ಇಲ್ಲೇ ಸಮೀಪ ಒಂದು ಬ್ರಾಹ್ಮಣರ ಮನೆಯಿದೆ. ಅಶ್ವತ್ಥದ ಕಟ್ಟೆ ಅಡಿಗಳ ಮನೆ. ಮನೆಗೆ ಹೋಗಬೇಕಾದುದಿಲ್ಲ; ಹೋಗಿ, ಅಶ್ವತ್ಥದ ಕಟ್ಟೆಯಲ್ಲಿ ಮಲಗಿಕೊಳ್ಳಬಹುದು."

ಆಕೆ ಆ ಯೋಚನೆ ಮಾಡುತ್ತಿದ್ದಾಗ ನಾನು ಅವರನ್ನು ಸಮೀಪಿಸಿದೆ. ಅವಳ ಮುಖವನ್ನು ನೋಡಿದಾಗ "ಇವಳನ್ನು ನಾನು ಎಂದೋ ಒಂದು ದಿನ ಕಂಡಿದ್ದೆನಷ್ಟೆ!" ಎನಿಸಿತು ನನಗೆ. ಅಷ್ಟಕ್ಕೆ ಆ ಹುಡುಗ ನನ್ನನ್ನು ಉದ್ದೇಶಿಸಿಯೇ "ಅಶ್ವತ್ಥದ ಕಟ್ಟೆ ಇರುವ ಮನೆ ಯಾವುದು?" ಎಂದು ಕೇಳಿದ.

"ಮೂಕಮ್ಮನವರು ಅಂತ ಒಬ್ಬರಿದ್ದರಲ್ಲ. ಅವರ ಮನೆ ಯಾವುದು ಒಡೆಯ" ಎಂದು ಅವಳೂ ಕೇಳಿದಳು.

"ಅದು ನಮ್ಮ ಮನೆಯೇ. ಬನ್ನಿ, ನನ್ನ ಹಿಂದೆ. ಏನಾಗಬೇಕು? ಘಟ್ಟದ ಬರೆಗೆ ಬೆತ್ತ ಸವರಲು ಹೋದವರಿರಬೇಕು. ಮನೆಗೆ ಬಂದು, ಒಂದಿಷ್ಟು ಹೊಟ್ಟೆ ತಂಪು ಮಾಡಿಕೊಳ್ಳಿ" ಎಂದೆ.

ಅವರು ನನ್ನ ಹಿಂದೆಯೇ ಹೊರಟರು. ನಾನು "ಒಂದಷ್ಟು ತಂಪು ಮಾಡಿಕೊಳ್ಳಿ" ಎಂದು ಹೇಳಿದ್ದು ನಿಜ; ಆದರೆ, ಬರಿದೆ ನೀರನ್ನು ಕೊಟ್ಟು ಮಲಗಲಿಕ್ಕೆ ಹೇಳುವುದೇನು? ಮನೆಗೆ ಹೋಗಿ, ನನ್ನವಳಿಗೆ ಸುದ್ದಿ ಹೇಳಿ, ಒಂದಿಷ್ಟು ಅನ್ನ ಬೇಯಿಸಿ ಹಾಕಲಿಕ್ಕೆ ಸಾಧ್ಯವೇ ಎಂದು ಅವಳನ್ನು ಕೇಳುವ ತನಕ ಸುಮ್ಮನಿದ್ದೆ. ಅವರು ನನ್ನನ್ನು ಹಿಂಬಾಲಿಸಿದರು. ಅವರಿಗೆ ನಮ್ಮ ಮನೆಯ ಮುಂದಿನ ಅಶ್ವತ್ಥದ ಕಟ್ಟೆಯನ್ನು ಕಂಡಾಗ ಒಂದು ಛತ್ರವೇ ಸಿಕ್ಕಿದಷ್ಟು ಸಂತೋಷವಾಯಿತು. ಅಲ್ಲಿಯೇ ಹೊರೆಯನ್ನು ಇಳಿಸಿದರು. ಆಕೆ ಆಯೆರಡು ಮಕ್ಕಳ ತಾಯಿ ಆಗಿರಬೇಕು. ಅವಳು "ಮಕ್ಕಳೇ, ಒಡೆಯರ ಹಿಂದೆ ಹೋಗಿ, ಒಂದು ಚಂಬು ನೀರು ಬೇಡಿಕೊಂಡು ಬನ್ನಿ" ಎಂದಳು.

ನಾನದಕ್ಕೆ "ಮನೆಯ ತನಕ ಬರಬಾರದೇನು? ನಿಮ್ಮ ಮೂವರಿಗೆ ಒಂದಿಷ್ಟು ಗಂಜಿ ಬೇಯಿಸಿ ಬಡಿಸುವ ತ್ರಾಣವಿಲ್ಲವೇ?" ಎಂದೆ.

"ಹತ್ತು ಮಂದಿಗೆ ಅನ್ನ ಹಾಕಿದ ಮನೆ ನಿಮ್ಮದು ಎಂಬುದು ಗೊತ್ತು ನನಗೆ. ಆದರೂ ಒಡೆಯ, ಅದೇನೂ ಬೇಡ. ಬರೀ ನೀರಿಷ್ಟು ಕೊಟ್ಟರೆ ಸಾಕು."

"ಮೂಕಜ್ಜಿ ಯಾರೆಂಬುದು ಗೊತ್ತೋ ನಿನಗೆ?" ಎಂದೆ ನಾನು.

"ಒಡೆಯ, ಅವರು ಯಾರೆಂತಲೂ ನನಗೆ ಗೊತ್ತು. ಈ ಹಾಳು ನಾಗಿ ಯಾರು ಅಂತ ಅಜ್ಜಮ್ಮ ಇದ್ದರೆ ಅವರಿಗೂ ಗೊತ್ತಿದ್ದೀತು. ಅದಕ್ಕಲ್ಲ ಹೇಳಿದ್ದು."

'ನಾಗಿ ಯಾರಂತ...' ಎಂದು ನಾನು ಉದ್ಗರಿಸಿದ ಅರ್ಧ ವಾಕ್ಯವನ್ನು, ನನ್ನ ಗಂಟಲಲ್ಲೇ ನುಂಗಿಕೊಂಡು "ನಿನಗೇನೂ ದಾಕ್ಷಿಣ್ಯ ಬೇಡ, ಮನೆಯ ಅಂಗಳದ ನೆಲವೂ ಸಾಪಾಗಿದೆ; ಕೈಕಾಲು ತೊಳೆದುಕೊಂಡು, ಒಂದಿಷ್ಟು ನೀರು ಬೆಲ್ಲ ಮುಗಿಸಿ, ಒಂದಿಷ್ಟು ಹೊಟ್ಟೆಯನ್ನು ತಂಪು ಮಾಡಿಕೊಂಡು ಮಲಗಿಕೊಂಡರೆ, ನಮ್ಮ ಅಜ್ಜಿಗೆ ಒಂದಷ್ಟು ಸಂತೋಷವಾದೀತು. ಆಮೇಲೆ ಏನು ಬೇಕಾದರೂ ಮಾಡಿ" ಎಂದು ಹೇಳಿ ಬಂದೆ.

# ಅಧ್ಯಾಯ 10

ನಾಗಿಯೂ ಅವಳ ಆ ಇಬ್ಬರು ಮಕ್ಕಳೂ ತಮ್ಮ ಆಯಾಸ ಮಿತಿ ಮೀರಿದುದರಿಂದಲೋ ಏನೋ, ಮನೆಯ ತನಕವೂ ಬರಲೊಪ್ಪಿದರು. ಬಂದು ಕೈಕಾಲು, ಮುಖಗಳನ್ನು ತೊಳೆದುಕೊಂಡರು. ನಾನು ದೊದಲೇ ಅಷ್ಟೊಂದು ಕೆಲಸವನ್ನು ಮಾಡಿ, ಮನೆಯೊಳಕ್ಕೆ ಹೋಗಿ, ಅವರಿಗಾಗಿ ಒಂದು ಎಲೆಯಲ್ಲಿ ಒಂದಿಷ್ಟು ಬೆಲ್ಲವನ್ನೂ, ನೀರಿನ ಬಿಂದಿಗೆಯನ್ನೂ ತಂದಿರಿಸಿದೆ. ಸೀತೆಯೊಡನೆ "ಹೊರಗಿನ ಮೂರು ಆಳುಗಳಿದ್ದಾವೆ; ಪರವೂರಿನವರು. ಒಂದಿಷ್ಟು ಅನ್ನವನ್ನೋ, ಗಂಜಿಯನ್ನೋ ಮಾಡು; ಪದಾರ್ಥ ಮಾಡುವುದಕ್ಕೆ ನಿನಗೆ ಉದಾಸೀನವಾದರೆ ಎಣ್ಣೆ, ಉಪ್ಪಿನಕಾಯಿಯನ್ನು ಬಡಿಸಿದರಾಯಿತು" ಎಂದು ಹೇಳಿ ಬಂದಿದ್ದೆ. ಅಷ್ಟರಲ್ಲಿಯೇ ಅವರು ಕೈಕಾಲು ತೊಳೆದುಕೊಂಡು ಬಂದರು. ನಾಗಿ "ನೀರು ಕುಡಿದಾಯಿತು ಒಡೆಯ. ಇನ್ನು ನಾವು ಕಟ್ಟೆಗೆ ಹೋಗಿ ಮಲಗಿಕೊಳ್ಳುತ್ತೇವೆ" ಎಂದಳು.

ನಾನು ಆಶ್ಚರ್ಯದಿಂದ "ತಂದಿರಿಸಿದ ಬೆಲ್ಲ, ನೀರು ಇಲ್ಲೇ ಇದೆಯಲ್ಲ" ಎಂದೆ.

ನಾಗಿಯ ಮಗ "ಅಮ್ಮ, ಈ ಅಯ್ಯನಿಗೆ ಬೇಸರವಾದೀತು. ಒಂದಿಷ್ಟು ಬೆಲ್ಲ ತಿಂದು ನೀರು ಕುಡಿಯುವ" ಎಂದು ಬೆಲ್ಲದ ಎಲೆಗೆ ಕೈ ಹಾಕಿದ.

ನಾನೆಂದೆ : "ಮನೆಗೆ ಬಂದವರು ಬರಿ ಹೊಟ್ಟೆಯಲ್ಲಿ ಹೋಗಬಾರದು. ಈಗ ಅಡುಗೆಯಾಗುತ್ತದೆ. ಒಂದಿಷ್ಟು ಉಂಡು ಹೋಗಿ" ಎಂದಾಗ, ನಾಗಿ "ಬೇಡ ಒಡೆಯ, ಅಮ್ಮನಿಗೆ ನೀವು ಉಪದ್ರ ಕೊಡುವುದು ಬೇಡ" ಎಂದು ಹೊರಡಲು ಚಡಪಡಿಸಿದಳು. ಚಾವಡಿಯಲ್ಲಿ ಲಾಟೀನು ಉರಿಯುತ್ತಿತ್ತು. ಅದರ ಬೆಳಕಿನಲ್ಲಿ ಆಕೆಯ ಮುಖ ಸೊಂಪಾಗಿ ಕಾಣುತ್ತಿತ್ತು. ಸುಮಾರು ಹದಿನೈದು ವರ್ಷಗಳ ಹಿಂದೆಯೇ ಕಂಡಂಥ ಆ ಮುಖದ ನೆನಪು ನನಗೆ ತಿರುಗಿ ಹೊಳೆಯಿತು. ಆಗ ಅವಳಿಗೆ ಇನ್ನೂ ಹೆಚ್ಚಿನ ಚೆಲುವಿತ್ತು. ಈಗ ಸ್ವಲ್ಪ ಸೊರಗಿದ್ದಾಳೆ; ವಯಸ್ಸು ಸಂದಿದೆಯಷ್ಟೆ. ಆದರೂ ಕಟ್ಟುಮಸ್ತಾದ ಜೀವ; ಕಂಗಾಲು ಜೀವಿಯಲ್ಲ. ಅವಳ ಮಕ್ಕಳಲ್ಲೂ ಯೌವನ ತುಂಬಿ ಕಾಣುತ್ತಿತ್ತು.

ಅಷ್ಟು ಹೊತ್ತಿಗೆ ಅಜ್ಜಿ ಕೋಣೆಯಿಂದ ಹೊರಕ್ಕೆ ಬಂದು, ಚಾವಡಿಯಲ್ಲಿ ನಿಂತು ನೋಡುತ್ತಿದ್ದರು. ಅವರಿಗೆ ನನ್ನ ಉಪಚಾರದ ಮಾತು ಕೇಳಿಸಿತೋ ಏನೋ -

"ಯಾರು, ನಾಗಿಯೇ? ನಮ್ಮೂರಿನ ನಾಗಿಯೇ" ಎಂದರು.

ಆಕೆಯ ಮುಖ ಪೆಚ್ಚಾಯಿತು. ಅಜ್ಜಿಯ ಮುಖವನ್ನು ದಿಟ್ಟಿಸಿ, ಬೆದರಿ ನೋಡತೊಡಗಿದಳು. ಕೇಳಿದ್ದಕ್ಕೊಂದು ಉತ್ತರವನ್ನು ಕೊಡಬೇಕೆಂದೋ ಏನೋ, "ದೊಡ್ಡೊಡತಿ, ನನಗೆ ಈ ಊರಿನ ಋಣ ಮುಗಿದದ್ದು ಎಂದೋ ಏನೋ" ಎಂದಳು.

ಅಜ್ಜಿ ನಾಗಿಯನ್ನು ಅದೆಷ್ಟೋ ಹಿಂದಿನಿಂದಲೇ ಕಂಡವರು! ಅನಂತರವೂ ಅವಳ ವಿಷಯವನ್ನು ಕೇಳಿಬಲ್ಲರು. ಆದರೆ ಮಾತ್ರ ತಿರುಗಿ ಕಂಡಿರಲಾರರು. ಒಮ್ಮೆ ರಾಮಣ್ಣ ಎಲೆ - ಅಡಿಕೆ ಸಂಚಿಯನ್ನು ಬಿಟ್ಟು ಹೋದ ಪ್ರಸಂಗದಲ್ಲಿ ಅವರಾಡಿದ ಮಾತುಗಳಿಂದ - ನಾಗಿಯ ವಿಚಾರ ಅವರಿಗೆ ಮರವೆಯಾಗಿಲ್ಲ - ಎಂಬ ನೆನಪು ಬಂದಿತು. ಅವರು ಅವಳನ್ನು ನೋಡಿ, ನಗುತ್ತ "ಚಿಂತೆಯಿಲ್ಲ, ನೀನು ನಿನ್ನ ಹಟವನ್ನು ಸಾಧಿಸಿದೆ. ಇವತ್ತು ನಿನಗೆ ನಮ್ಮ ಮನೆಗೆ ಬರುವ ಯೋಗ ಬಂತು. ಅದಾದರೆ ನಮ್ಮ ಮನೆಯ ಬಾವಿಯ ನೀರಿನ ಋಣ ನಿನಗಿದೆ ಎಂಬುದರಿಂದ" ಎಂದು ಹೇಳಿ ನಕ್ಕರು.

ನಾಗಿಗೆ ನಗು ಬಂದಿತೋ ಅಥವಾ ಅಳು ಬಂದಿತೋ ತಿಳಿಯೆ. ಅವಳು ಸ್ವಲ್ಪ ಹೊತ್ತು ಮೂಕಳಾಗಿಯೇ ಕುಳಿತು, ಅನಂತರ "ಒಡೆಯ, ಊಟಗೀಟ ಬೇಡ. ನಾವು ಹೋಗುತ್ತೇವೆ.ಹೋಗಿ ಕಟ್ಟೆಯಲ್ಲಿ ಮಲಗಿಕೊಳ್ಳುತ್ತೇವೆ" ಎಂದಳು.

ಅಜ್ಜಿ ಅದಕ್ಕೆ "ನಾಗಿ, ನಿನ್ನ ಡೌಲೆಲ್ಲ ಸಾಕು. ಮೂಕಜ್ಜಿ ಮನೆಯಲ್ಲಿ ಒಂದು ತುತ್ತು ಅನ್ನವನ್ನು ಉಂಡು ಹೋದರೆ ನಿನಗೇನೂ ಕೇಡು ಬರಲಾರದು" ಎಂದರು.

"ನನ್ನ ದೇವರು ಹೇಳಿದ ಮೇಲೆ..." ಎಂದಳು ಆಕೆ.

"ಹಾಗೆ ಹೇಳು ಮತ್ತೆ. ಯಾಕೋ, ಏನೋ ನನಗೆ ನಿನ್ನ ನೆನಪು ಸಣ್ಣದರಿಂದಲೂ ಉಳಿದುಕೊಂಡಿದೆ ಮನಸ್ಸಿನಲ್ಲಿ. ನೀನು ಬಂದದ್ದು ಭಾರೀ ಒಯಿನಾಯಿತು. ಈಗ ನಿನಗೆ ಯಾವುದನ್ನೂ ಹೇಳುವುದಿಲ್ಲ; ಅಂಗಳದಲ್ಲಿ ಕೂತಿರಿ. ಉಂಡು, ಹೊಟ್ಟೆ ತಂಪಾದ ಮೇಲೆ ನಿನಗೊಂದು ಮಾತು ಹೇಳುತ್ತೇನೆ" ಎಂದರು.

ನನಗೆ ಆಶ್ಚರ್ಯವಾಯಿತು - ಅವಳು ಇವರನ್ನು ಕಾಣದೆಯೇ, ಇವಳು ಅವರನ್ನು ಕಾಣದೆಯೇ ಇಪ್ಪತ್ತು ವರ್ಷಗಳಾದರೂ ಸಂದಿರಬೇಕು. ಅಲ್ಲದೆ, ಕುಲ, ಜಾತಿಗಳೆಂಬ ಯಾವ ಸಂಬಂಧವೂ ಇಲ್ಲ; ಅವಳಿಗೆ ಹೇಳಲಿರುವ ಮಾತಾದರೂ ಏನಿದ್ದೀತು - ಎನಿಸಿತು ನನಗೆ.

ಅಜ್ಜಿ ಹೊತ್ತು ಹೋಗದ್ದಕ್ಕೆ "ಇವು ನಿನ್ನೆರಡು ಮಕ್ಕಳಲ್ಲವೇ?" ಎಂದರು.

"ಹೌದು, ಒಡತಿ."

"ಗಟ್ಟಿ ಮುಟ್ಟಾಗಿದ್ದಾವೆ. ಅಬ್ಬೆಯ ಮೇಲೆ ಪ್ರೀತಿಯಿರುವ ಹಾಗಿದೆ."

"ಅವುಗಳಿಂದಲೇ ನಾನು ಜೀವ ಹಿಡಿದುಕೊಂಡಿರುವುದು."

"ಅಬ್ಬೆಯಾದವಳು ಹಾಗೆಯೇ ಇರಬೇಕು; ಮಕ್ಕಳಿಗೂ ಬೇಕು ಆ ನೆನಪು. ಆದರೆ ಎಷ್ಟು ಜನಕ್ಕಿರುತ್ತದೆ?"

"ಇವು ಉಳಿಸಿಕೊಂಡಿದ್ದಾವೆ, ಒಡತಿ. ನಾನೆಂದರೆ ಅವಕ್ಕೆ ಜೀವ. ಅವು ಮುಂದೆ ಬೆಳೆದು ಸಂಸಾರ ಮಾಡಿಕೊಂಡಿರುವುದನ್ನು ನಾನು ಕಂಡರೆ ಸಾಕು; ಮತ್ತೆ ನನ್ನನ್ನು ನರಿನಾಯಿ ತಿಂದರೂ ಅಡ್ಡಿಯಿಲ್ಲ."

ಅಜ್ಜಿ ನಕ್ಕರು! "ನರಿನಾಯಿ ತಿನ್ನುವುದೇತಕ್ಕೆ, ಈ ಮಕ್ಕಳಿರುವಾಗ?" ಎಂದರು.

"ಆ ಮಕ್ಕಳದ್ದೇ ಚಿಂತೆ, ಒಡತಿ. ನೀವು ಸಂಸಾರ ಗಿಂಸಾರ ಅನ್ನುತ್ತೀರಿ. ಅವುಗಳ ಹಣೆಯ ಮೇಲೆ ಏನೇನು ಬರೆದಿದೆಯೋ?" ಎನ್ನುತ್ತಲೇ ನಾಗಿಯ ದನಿ ದುಃಖಪೂರಿತವಾಗುತ್ತಾ ಬಂದಿತು.

"ಸಾಕು. ನೀನು ಅದನ್ನು ಹೇಳುವುದು ಬೇಡ; ನನಗೆ ತಿಳಿಯದ್ದು ಒಂದೂ ಇಲ್ಲ; ದೊದಲು ನಿನ್ನ ಊಟ ಮುಗಿಯಲಿ. ಆಮೇಲೆ ಒಂದು ಸಂಗತಿ ಹೇಳುತ್ತೇನೆ - ನಾಲ್ಕು ಹೊಟ್ಟೆ ತಂಪಾಗುವ ಮಾತನ್ನೇ ಹೇಳುತ್ತೇನೆ" ಎಂದಂದು, ತಮ್ಮ ಕೊಠಡಿಗೆ ಹೊರಟುಹೋದರು.

ಆಗ ನನ್ನ ಕುತೂಹಲ ಕೆರಳಿತು. ನಮ್ಮ ಅಜ್ಜಿ ಯಾರನ್ನಾದರೂ ಸರಿಯೆ, ತಾವಾಗಿ ಮಾತನಾಡಿಸುವುದೆಂದರೆ ಬಲು ದೊಡ್ಡ ಸಂಗತಿ. ಇನ್ನೋ! ಮಾತನಾಡುವಾಗ ತಮ್ಮ ಮನಸ್ಸನ್ನು ಬಿಚ್ಚಿ ಹೇಳಿ, ನೋಯಿಸುವ ಪ್ರಸಂಗವೇ ಹೆಚ್ಚು. ತಿಪ್ಪಜ್ಜಿಯೊಡನೆ ಅಷ್ಟು ಮಾತನಾಡಿದಂತೆ ಆತ್ಮೀಯತೆಯಿಂದ ಸಂಭಾಷಿಸುವುದು ನೂರಕ್ಕೆ ಒಬ್ಬರಲ್ಲಿ. ಈಕೆ ಯಾವಲ್ಲಿಂದಲೋ ಬಂದ ನಿರ್ಗತಿಕೆ. ಹಿಂದೆ ನಮ್ಮ ಊರಲ್ಲಿ ಹತ್ತು ದಿನ ಇದ್ದದ್ದು ನಿಜ. ಹಾಗೆ ಇದ್ದ ಕಾಲದ ಕತೆಯನ್ನು ಸ್ಮರಿಸಿಕೊಂಡರೆ ಸಾಮಾನ್ಯರು ಅವಳ ಮುಖದ ಮೇಲಕ್ಕೆ ಉಗುಳಿ ಮಾತನಾಡಿದರೂ ಹೆಚ್ಚಿನ ಆಶ್ಚರ್ಯವಿಲ್ಲ. ಅಂಥದರಲ್ಲಿ ನಮ್ಮ ಅಜ್ಜಿ, ಮನೆಗೆ ಅಪೂರ್ವಕ್ಕೆ ಬಂದ ಮೊಮ್ಮಗ್ಗಳನ್ನು ಕಂಡು ಮಾತನಾಡುವ ರೀತಿಯಲ್ಲಿ ನುಡಿಯುತ್ತಿರುವುದನ್ನು ಕಂಡು ಆಶ್ಚರ್ಯವಾಯಿತು.

ಅವರು ಅವಳಿಗೆ ಏನೆಂದಾರು - ಎಂದು ಕೇಳುವ ಕುತೂಹಲ, ಚಪಲ ನನಗೆ. ಹಾಗೆ ಅವರವರು ಮಾತನಾಡುವಾಗ ಕಿವಿಯನ್ನು ಕೊಡಬಾರದೆಂಬ ಬುದ್ಧಿಯೂ ಬರಲಿಲ್ಲ. ಒಂದು ಲೆಕ್ಕಕ್ಕೆ "ಅವರನ್ನು ಮನೆಗೆ ಬನ್ನಿ" ಎಂದು ಕರೆದು ತಂದವನು ನಾನಲ್ಲವೇ? ಅದೇ ಒಂದು ದೊಡ್ಡ ಕೆಲಸ. ನಮ್ಮ ಅಜ್ಜಿಯ ಬಯಕೆಯೊಂದನ್ನು ತಿಳಿಯದೆಯೂ ನಾನೂ ಪೂರೈಸಿದೆ - ಎಂಬ ಜಂಭವೂ ಮೂಡಿತು.

ಸೀತೆ ಅಡಿಗೆ ಕೆಲಸವನ್ನು ಮುಗಿಸಿ ನನ್ನನ್ನು ಊಟಕ್ಕೆ ಕರೆದಳು. ಮಕ್ಕಳೊಡನೆ ಕುಳಿತು, ಹರಟುತ್ತ ಊಟ ಮಾಡಿದೆ. ಅದೇ ವೇಳೆಗೆ ಅಜ್ಜಿ ಒಂದಿಷ್ಟು ಫಲಾಹಾರವನ್ನು ಮುಗಿಸಿ, ತಮ್ಮ ಕೊಠಡಿಯನ್ನು ಸೇರಿದರು. ನನ್ನವಳ ಅನುಜ್ಞೆಯಂತೆ - ಅಂಗಳದಲ್ಲೇ ಮೂರು ಅಡಿಕೆಯ ಹಾಳೆಗಳನ್ನು ಬಂದಂಥ ಅತಿಥಿಗಳಿಗೆ ಕೊಟ್ಟೆ. ನನ್ನ ಊಹೆ - ಸೀತೆ ಅವರಿಗಾಗಿ ಗಂಜಿ ಮಾಡಿರಬೇಕು. ಅದಕ್ಕೆ ಬಾಳೆಯ ಎಲೆಗಿಂತ ಹಾಳೆಯೇ ಲೇಸು - ಎಂದು. ಆದರೆ, ಅವಳು ಬಡಿಸಿದ್ದು ನನಗೆ ಬಡಿಸಿದುದನ್ನೇ. ಅನ್ನ, ಸಾರು, ಒಂದು ಪಲ್ಯ. ಅದರ ಬೆನ್ನಿಗೆ ಬೆರಸಿನ ಮಜ್ಜಿಗೆ. ಅವರು ಉಂಡಷ್ಟು ಬಡಿಸಿದಳು; ಒತ್ತಾಯವನ್ನೂ ಮಾಡಿದಳು. ಅದರ ಎಡೆಯಲ್ಲೇ "ನಿಮಗೆ ಯಾವ ಊರಾಯಿತು? ತುಂಬ ದೂರದಿಂದ ನಡೆದು ಬಂದಿರಬೇಕು. ಬೆತ್ತದ ಬೀಳು ಕೀಳುವುದೆಂದರೆ ಮುಳ್ಳಿನ ಪಂಜರ ಹೊಕ್ಕ ಹಾಗೆ?" ಎಂದು ಏನೇನೋ ಆಡಿದಳು. ಅವಳ ಹಿರಿಯ ಹುಡುಗನು "ಒಡತಿ, ಇನ್ನು ಒಂದು ಸ್ವಲ್ಪ ದಿನದಲ್ಲಿ ನಾನು ತಿರುಗಿ ಬಂದರೂ ಬಂದೆ. ಮಳೆ ಸುರಿಯತೊಡಗಿ ಬೇಸಾಯ ಶುರುವಾದರೆ ಆಗಲಾರದು. ಬರುವಾಗ, ಒಂದು ಚಂದದ ಪೆಟ್ಟಿಗೆ ಹೆಣೆದುಕೊಂಡು ತರುತ್ತೇನೆ. ಬೆತ್ತದ ಸಂದುಕ ನೂರು ವರ್ಷ ಬಾಳ್ತರ ಬರುತ್ತದೆ. ಅದಕ್ಕೆಲ್ಲ ನಮ್ಮ ಅಮ್ಮನ ಕೈಯೆಂದರೆ ಕೈ" ಎಂದು ಹೇಳಿದ.

ಸೀತೆ ಪೆಟ್ಟಿಗೆಯ ಆಸೆಯಿಂದ ಅನ್ನ ಮಾಡಿ ಬಡಿಸಿದಳೇನು! "ಛೀ, ಛೀ, ಅದರ ಆಸೆಯಿಂದ ನಾನೇನನ್ನೂ ಹೇಳಿದ್ದಲ್ಲ" ಎಂದು ನುಡಿದು, ಆಕೆ ಹೊರಟು ಹೋದಳು. ಅವರ ಊಟ ಮುಗಿಯಿತು. ನಾಗಿ ಹಾಳೆಗಳನ್ನು ದೂರಕ್ಕೆ ಎಸೆದು, ಸೆಗಣಿಯಿಂದ ನೆಲವನ್ನು ಸಾರಿಸಿ, ಚೊಕ್ಕಟ ಮಾಡಿ, ಕೈ ತೊಳೆದು ಬಂದಳು. ನಾನು ಮಾಮೂಲಿನಂತೆ ಮನೆಗೆ ಬಂದವರಿಗೆ ವೀಳೆಯದ ಎಲೆ, ಅಡಿಕೆ, ಸುಣ್ಣ, ಹೊಗೆಸೊಪ್ಪಿನ ಚೂರನ್ನು ಕೊಟ್ಟೆ. ಅನಂತರ, ಮಗ್ಗುಲ ಮನೆಯ ಚಾವಡಿಯನ್ನು ತೋರಿಸಿ "ಅಲ್ಲೇ ತೊಲೆಯ ಮೇಲೆ ಮುಂಡುಕನ ಓಲೆ ಚಾಪೆ ಇದೆ. ಹಾಸಿಕೊಂಡು ಮಲಗಿಕೊಳ್ಳಿ" ಎಂದು ಹೇಳಿದೆ. ಅಷ್ಟಕ್ಕೆ ನನ್ನ ಕಿಟ್ಟಣ್ಣನ ಪಿಟೀಲಿನ ಧ್ವನಿ ಕೇಳಿಸಿತು. "ಅಪ್ಪಯ್ಯ, ಮಲಗಲಿಕ್ಕೆ ಬಾ..." ಎಂಬ ರಾಗ. ಚಾವಡಿಯಲ್ಲೇ ಅವಕ್ಕೆ ಚಾಪೆ ಹಾಸಿ, ನಾನೂ ಮಲಗುವ ನೆಪ ಮಾಡಿದೆ. "ಕತೆ ಹೇಳು" ಎಂದಿತು ಸಣ್ಣ ಮಗು; "ಗ್ರಹಚಾರವೇ!" ಎಂದುಕೊಂಡು "ಒಂದು ಊರಲ್ಲಿ ಒಬ್ಬ ದೊಡ್ಡ ಅರಸ ಇದ್ದ" ಎನ್ನುತ್ತಲೇ, "ಅರಸ ಬೇಡ, ಚಂದದ ಆನೆಯ ಕತೆಯನ್ನು ಹೇಳು" ಎಂದ ಚಂದ್ರ. "ಆ ಅರಸನ ಹತ್ತಿರ ಒಂದು ಆನೆಯೂ ಇತ್ತು" ಎಂದೆ. "ಯಾವ ಅರಸನ ಹತ್ತಿರ?" ಎಂದು ಪ್ರಶ್ನಿಸಿದ ಕಿಟ್ಟಣ್ಣ.

ಕತೆಯನ್ನು ಹೇಳಿ ಮುಗಿಸುವಾಗ ಸಣ್ಣ ಮಗುವಿಗೆ ನಿದ್ದೆ ಬಂದಿತ್ತು. ದೊಡ್ಡದರ ಕಣ್ಣು ಬಾಡಿತ್ತು. ನನಗಂತು ಆ ಅತಿಥಿಗಳು ಮನೆಗೆ ಬಂದ ವಿಷಯವೇ ಮರವೆಯಾಗಿತ್ತು.

ದಿಂಬಿಗೆ ಒರಗಿ ನಾನೂ ತೂಕಡಿಸುತ್ತಿದ್ದೆ. ನನ್ನ ನಿದ್ರಾಭಂಗವಾಗುವುದಕ್ಕೆ ಸೀತೆ ಕಾರಣಳಾದಳು! "ಎಷ್ಟು ಹೊತ್ತು ನಿಮ್ಮ ಮಾತುಕತೆ! ಯಾವ ಊರಿನವಳೋ ಏನೋ. ಅವರನ್ನು ಮಾತನಾಡಿಸಿ ಮುಗಿಸಿದ ಹಾಗಿಲ್ಲ" ಎಂದು ಗೊಣಗಿದಳು ತನ್ನಷ್ಟಕ್ಕೆ.

"ಆಂ" ಎಂದೆ ನಾನು, ಆಗಷ್ಟೇ ನಿದ್ದೆಯಿಂದ ಎಚ್ಚರಗೊಂಡು 'ಏನು?' ಎಂದು ಕೇಳಿದೆ.

"ಅಲ್ಲ, ಮನೆಗೆ ಬಂದ ಯಾವುದೋ ಒಬ್ಬಳು ಹೆಂಗಸಿನ ಹತ್ತಿರ ಮಾತನಾಡುವುದಾದರೂ ಎಷ್ಟು?" ಎಂದಳು.

"ಯಾರು?" ಎಂದು ಕೇಳಿದೆ.

"ಅಜ್ಜಮ್ಮ" ಎಂದಳು.

ಥಟ್ಟನೆ ನನಗೆ ನೆನವರಿಕೆಯಾಯಿತು - ನಮ್ಮ ಅಜ್ಜಿ ನಾಗಿಯೊಡನೆ "ನಿನ್ನ ಹತ್ತಿರ ಮಾತನಾಡುವುದುಂಟು; ನಾಲ್ಕು ಹೊಟ್ಟೆಗಳು ತಂಪಾಗುವ ವಿಚಾರ" ಎಂದದ್ದು. ಮಕ್ಕಳಿಗೆ ಕತೆ ಹೇಳುತ್ತ ಮೈಮರೆತ ಬಗ್ಗೆ ತೀರ ಬೇಸರವಾಯಿತು. ಕುಳಿತ ಹಾಸಿಗೆಯಿಂದೆದ್ದು ಈಚೆಗೆ ಬಂದೆ. ಹೊರಗಡೆ ಬೆಳದಿಂಗಳು ಹಬ್ಬಿತ್ತು. ಅದರ ಬೆಳಕು ಚಪ್ಪರದ ಕೆಳಗೂ, ಆಚಿನ ಚಾವಡಿಯ ಮೇಲೆಯೂ ಸಾಕಷ್ಟು ಬಿದ್ದಿತ್ತು. ಚಾವಡಿಯಲ್ಲಿ ಒಬ್ಬರು ಮಲಗಿದ್ದೇನೋ ಕಾಣಿಸಿತು. ಕುತೂಹಲ ಹುಟ್ಟಿ ನಾನು ಅಜ್ಜಿಯ ಕೋಣೆಯ ಬಳಿಗೆ ಹೋದೆ. ಬಾಗಿಲು ತೆರೆದಿತ್ತು. ಒಳಗೆ ಅವರಿರಲಾರರು ಎನಿಸಿತು. ಕುತೂಹಲ ಹೆಚ್ಚಿ, ತಿರುಗಿ ಹೊರಕ್ಕೆ ಬಂದೆ. ಗಾಳಿ ಬೀಸಿತು. ಅದರ ಜೊತೆಗೆ ಗುಸುಗುಸು ಮಾತಿನ ಸೂಚನೆಯನ್ನು ಅದು ಹೊತ್ತು ತಂದಿತು. "ಓ! ಅಜ್ಜಿ ಮನೆಗೆ ಬಂದ ನಾಗಿಯನ್ನು ಕರೆದುಕೊಂಡು ಎಲ್ಲೋ ಕುಳಿತುಕೊಂಡು ಮಾತನಾಡುತ್ತಿದ್ದಾರೆ" ಎಂದು ತರ್ಕಿಸಿ, ಆಚೀಚೆ ಕಣ್ಣನ್ನು ಹೊರಳಿಸಿದೆ. ಕಿವಿ ಸದ್ದನ್ನು ಅನುಸರಿಸಿತು. ಕಾಲುಗಳು ಆ ಕಡೆ ಚಲಿಸಿದವು. ಅಶ್ವತ್ಥದ ಕಟ್ಟೆಯಿಂದ ಧ್ವನಿ ಬರುತ್ತಿರುವುದು ಸ್ಪಷ್ಟವಾಯಿತು. ಮೆಲ್ಲಗೆ ನಡೆದು ಸಮೀಪ ಹೋಗುವುದರೊಳಗಾಗಿ "ನೀನೇಕೆ ಬಂದೆ ಮಾಣಿ? ನೀನು ಸುಮ್ಮನೆ ಹೋಗಿ ಮಲಗಿಕೋ; ಹಾಗೆಲ್ಲ ಬೇರೆಯವರ ಮಾತಿಗೆ ಕಿವಿಯೊಡ್ಡಬಾರದು" ಎಂದು ಒರಟಾಗಿಯೇ ನುಡಿದುಬಿಟ್ಟರು.

ನನ್ನ ಕಪಾಳಕ್ಕೆರಡು ಏಟುಗಳನ್ನು ಬಡಿದ ಹಾಗಾಯಿತು. ನನ್ನದು ಮೂರ್ಖತನ ಎಂದು ಗೊತ್ತಾಯಿತು. ನಾಗಿಯೊಡನೆ ಅವರು ಯಾವ ಮಾತನ್ನೇ ಆಡುತ್ತಿರಲಿ, ಅದು ನನಗೇಕೆ ಬೇಕು? ಅವಳು ತನ್ನ ಸಂಸಾರದ ಸುಖ, ದುಃಖಗಳನ್ನೇನಾದರೂ ಹೇಳಿಕೊಳ್ಳುತ್ತಿರಬಹುದು. ಇವರು ಕೇಳುತ್ತಿರಲೂಬಹುದು. ಅವಳು ಪಾಪದ ಹೆಂಗಸು.

ಒಂದು ಕಾಲದಲ್ಲಿ ಕೆಟ್ಟ ಪ್ರಸಿದ್ಧಿ ಬಂದಿದ್ದರೇನಂತೆ? ಅವಳ ಹಳೆಯ ಕತೆ ಯಾವತ್ತು ಊರಿನ ಪುರಾಣವಾಗಬೇಕಿಲ್ಲವಲ್ಲ" ಎಂದು ನೊಂದು ಅಲ್ಲೇ ನಿಂತೆ. ನನಗೆ ತುಂಬ ಅವಮಾನವಾದ ಹಾಗಾಯಿತು. ಅಜ್ಜಿಯ ಮುಂದಕ್ಕೆ "ತಪ್ಪಾಯಿತು ಅಜ್ಜಿ, ನಾನು ಹೋಗುತ್ತೇನೆ" ಎನ್ನುವುದಕ್ಕೂ ಬಾಯಿ ಬರಲಿಲ್ಲ. ನಾಚಿಕೊಂಡು ಮಗುವಿನಂತೆ ಮನೆಗೆ ಬಂದು ಮಲಗಿಕೊಂಡೆ. ಆ ಸ್ಥಿತಿಯಲ್ಲಿ ನನಗೆ ನಿದ್ದೆ ಬರುವಂತಿರಲಿಲ್ಲ. ನನ್ನಂಥ ಮೂರ್ಖರು ಯಾರಿದ್ದಾರೆ - ಎಂಬ ಕೊರಗೇ ಕಾಡತೊಡಗಿತು. ಹಾಗೆಯೇ ಕಣ್ಣು ಬಾಡಿತೋ ಏನೋ! ಬೆಳಕು ಹರಿದಾಗ ಮಕ್ಕಳು ಮಾತ್ರ ನನ್ನ ಬಳಿಯಲ್ಲಿ ಮಲಗಿದ್ದು ಕಾಣಿಸಿತು. ನಿತ್ಯದಂತೆ ಸೀತೆ ಮನೆಯ ಕೆಲಸದಲ್ಲಿ ತೊಡಗಿದ್ದಳು. ಎದುರು ಚಾವಡಿಯಲ್ಲಿ ಮಲಗಿದವರು ಎಂದೋ ಎದ್ದು ಹೊರಟು ಹೋಗಿರಬೇಕು. ಎದ್ದು, ಈಚೆ ಕಡೆಗೆ ಬಂದು ನೋಡಿದರೆ ಯಾರೂ ಕಾಣಿಸಲಿಲ್ಲ. ಹೊರಗಣ ಗೋಡೆಗೆ ಒರಗಿಸಿದ್ದ ಬೆತ್ತದ ಹೊರೆಗಳೂ ಅಲ್ಲಿ ಇದ್ದಿರಲಿಲ್ಲ. ಬಂದವರು ನಸುಕಿಗೇ ಎದ್ದು ಹೊರಟಿರಬೇಕು - ಎಂಬುದು ಗೊತ್ತಾಯಿತು.

ನಾಗಿಯನ್ನೂ, ಅವಳ ಇಬ್ಬರು ಮಕ್ಕಳನ್ನೂ ನಾನು ನನ್ನ ಮನಸ್ಸಿನಲ್ಲಿ ತೊಡೆದು ಹಾಕಿದರೂ, ಅಜ್ಜಿ ನನ್ನನ್ನು ಉದ್ದೇಶಿಸಿ ಛೇಡಿಸಿದ್ದು ಮಾತ್ರ ಮರವೆಯಾಗಲಿಲ್ಲ. ಅವರು ಆಕೆಯೊಡನೆ ಅಷ್ಟೊಂದು ದೊಡ್ಡ ಸಂಭಾಷಣೆ ಯಾತಕ್ಕೆ ನಡೆಯಿಸಿದರು - ಎಂಬುದು ನನಗೆ ತಿಳಿಯಲಿಲ್ಲ. ನನ್ನ ಮನಸ್ಸಿನ ಕರಕರೆಯನ್ನು ಕಳೆದುಕೊಳ್ಳುವುದಕ್ಕಾಗಿಯೇ ಮುಖಮಜ್ಜನ, ಸ್ನಾನ, ದೇವರ ಪೂಜೆಗಳಲ್ಲಿಯೇ ಹೊತ್ತು ಕಳೆದೆ.

ನಮ್ಮ ಅಜ್ಜಿ ಬಚ್ಚಲಿಗೆ ಸ್ನಾನಕ್ಕೆ ಹೋದರು; ನಿತ್ಯದಂತೆ ಮಿಂದು ಬಂದರು. ಸೂರ್ಯ ಮುಂದಿನ ತೋಟದ ಅಡಿಕೆ ಮರಗಳ ಕುಡಿಗೆ ಏರಿದಾಗ ಅಜ್ಜಿ ಅಂಗಳದಲ್ಲಿ ತಿರುಗಾಡುತ್ತಿರುವುದು ಕಾಣಿಸಿತು. ನಾನಾಗಿ ಅವರನ್ನು ಮಾತನಾಡಿಸಲಿಲ್ಲ; ಅವರು ಸಹ ನನ್ನನ್ನು ಮಾತನಾಡಿಸಲಿಲ್ಲ. ನನ್ನೊಳಗೆ ಕುದಿಯುತ್ತಿದ್ದ ಸಂಕಟವನ್ನು ಸೀತೆಯೊಡನೆ ತೋಡಿಕೊಳ್ಳಬಹುದಿತ್ತು. ಅದಕ್ಕೂ ಕೂಡ ಅಂಜಿಕೆಯೇ, "ನಿಮಗೆ ಹಾಗೆಯೇ ಆಗಬೇಕು" ಎಂದು ಅವಳು ಅಂದರೇನು ಗತಿ?

ಇತ್ತೀಚೆಗೆ, ಯಾತಕ್ಕೋ ಏನೋ, ನನ್ನ ಅಜ್ಜಿಯನ್ನು ತಲೆಯ ಮೇಲೆ ಇರಿಸಿಕೊಂಡಿದ್ದೆ. ಅವರೊಬ್ಬರು ವಿಚಿತ್ರ ಜೀವಿಗಳು; ಎಲ್ಲರಂತಲ್ಲ! ಏನೋ ಒಂದು ಅದ್ಭುತವಾದ ಶಕ್ತಿ ಅವರಲ್ಲಿದೆ. ಹಿಂದುಮುಂದುಗಳನ್ನು ಇಣಿಕಿ ನೋಡುವ ಕಣ್ಣೂ ಇದ್ದ ಹಾಗಿದೆ. ಊರವರ ಪಾಲಿಗೆ ಅವರು ಒಂದು ಹಳೆಯ ಲಡ್ಡು - ಕೊರಡು - ಎನಿಸಿದ್ದರೂ, ನನಗೆ ಅವರು ಅಸಾಮಾನ್ಯರು ಅನಿಸುತ್ತಿತ್ತು. ಅವರಾಡುತ್ತಿದ್ದ ಮಾತುಗಳಲ್ಲಿ ಸತ್ಯವೆಷ್ಟು, ಸತ್ಯವಲ್ಲದ್ದೆಷ್ಟು ಎಂಬ ವಿಚಾರ ನನಗೆ ಗೊತ್ತಿಲ್ಲ. ಅವರೆಂದುದನ್ನು ನಂಬಬಾರದು, ಏನೋ ಕಗ್ಗ; ಮಂಕಿನ ಚಿಹ್ನೆ ಅವರದ್ದು; ತೀರ ಬುದ್ಧಿ ಸ್ಥಿರವಿಲ್ಲದವರ ಹಾಗೆ ಮಾತುಗಳು - ಎಂದೂ

ಕಾಣಿಸುತ್ತಿರಲಿಲ್ಲ. ಅದಕ್ಕೆ ನನ್ನ ಅಭಿಮಾನವೇ ಕಾರಣವಿದ್ದರೂ ಇದ್ದೀತು.

ಮಧ್ಯಾಹ್ನ ನನ್ನ ಊಟವನ್ನು ಮುಗಿಸಿ, ನಿದ್ರೆ ಮಾಡಿ, ಇನ್ನೇನು ಮಾಡಲಿ ಎಂದು ಯೋಚಿಸಿದೆ. ಘಟ್ಟದ ಬರೆಗೆ ತಿರುಗಿ ಹೋಗುವ ಆಸೆ ಹುದುಗಿಕೊಂಡಿತ್ತು; ನನ್ನ ಅಂತರಂಗದಲ್ಲಿ. ಹಿಂದೆ ನಾನು ಜನ್ನನನ್ನು ಕರೆದುಕೊಂಡು ಹೋಗಿದ್ದೆನಷ್ಟೆ. ದಾರಿ ತೋರಿಸಿದವರು ಮಲೆಕುಡಿಯರು. ಸಂಗಡ ಅವರಿಲ್ಲದೆಯೆ ಹೋದರೆ, ನಾನು ಒಬ್ಬನೇ ಆ ಕಾಡಿನ ವಠಾರಕ್ಕೆ ಹೋಗುವಂತಿರಲಿಲ್ಲ. ಎಷ್ಟೆಂದರೂ ಅದು ಕಾಡು; ಹುಲಿ, ಹಂದಿ, ಕಾಟಿಗಳ ಭಯವಿಲ್ಲ; ದಾರಿ ತಪ್ಪಿದರೆ ತಿರುಗಿ ಮನೆಯನ್ನು ಸೇರುವ ಬಗೆ ಹೇಗೆ ಎಂಬ ಭಯ. ಇನ್ನೊಮ್ಮೆ ನಾನು ಅಣ್ಣು ನಾಯ್ಕನ ಮನೆಯ ತನಕ ಹೋಗಿ "ಹೋಗೋಣವೇ ಬರುತ್ತೀಯಾ?" ಎಂದು ಕೇಳುವ ಆಸೆ. ಅದನ್ನು ಮುಂದುವರಿಸಲು ಮನಸ್ಸಾಗಲಿಲ್ಲ. ಆದರೆ, ಈಗಾಗಲೇ ಬಾನಿನಲ್ಲಿ ಮುಗಿಲುಗಳ ರಾಶಿ ಹೊರಳಿ, ಹೊರಳಿ ಮಾಯವಾಗುವುದನ್ನು ಕಂಡಾಗ "ಇನ್ನೇನು! ಇವತ್ತು ಗಡದ್ದಾಗಿ ಮಳೆ ಹೊಡೆದರೂ ಹೊಡೆಯಿತೇ, ನಾಳೆ ಹೊಡೆದರೂ ಹೊಡೆಯಿತೇ" ಎಂಬ ಯೋಚನೆಯಿಂದ ಹೊರಕ್ಕೆ ಬಂದೆ. ಆ ದಿವಸವೆಲ್ಲ ಎಷ್ಟು ಸೆಕೆ ಅನ್ನುತ್ತೀರಿ! ಅಂಗಳದ ನೆಲ ಕಾದು, ಅರಳು ಹುರಿಯುವ ಕಾವಲಿಯ ಹಾಗಾಗಿತ್ತು. ಬಾನೆಲ್ಲವೂ ಮುಗಿಲು ತುಂಬಿತ್ತು. "ಇವತ್ತಾದರೆ ಮಳೆ ಬರುತ್ತದೆ" ಎಂದುಕೊಂಡೆ.

ನನ್ನ ಇಂಗಿತವನ್ನು ತಿಳಿದುಕೊಂಡವರಂತೆ ಯಾರದೋ ಧ್ವನಿ ಕೇಳಿಸಿತು; "ಹೋ, ಇವತ್ತು ಮಳೆ, ಖಂಡಿತ ಮಳೆ; ಒಂದು ಗಳಿಗೆಯೊಳಗೆ"

"ಯಾರಪ್ಪ ಅದು? ನನ್ನ ಮನಸ್ಸಿನಲ್ಲಿರುವ ಹವಣಿಕೆಯನ್ನೇ ತೋಡಿಕೊಳ್ಳುವವರು!" ಎಂದು ಆಚೀಚೆ ಹಣಕಿದಾಗ, ಮಂಜುನಾಥ ಬಾವಿಕಟ್ಟೆಯಲ್ಲಿ ಕಾಲು ತೊಳೆದುಕೊಂಡು ಬರುವುದು ಕಾಣಿಸಿತು.

"ಮಂಜುನಾಥ ಬಂದದ್ದೋ..?" ಎಂದು ಉದ್ಗರಿಸಿದೆ. "ಮಳೆ ಬಂದೀತು ಅಂದವನು ನೀನೋ! ನನಗೂ ಹಾಗೆಯೇ ಕಾಣಿಸುತ್ತದೆ."

"ಇವತ್ತು, ಇವತ್ತೇನು? ಇನ್ನು ಕೇವಲ ಅರ್ಧ ಗಳಿಗೆಯೊಳಗೆ ಬಡಿಯಬೇಕು ಮಳೆ! ಅಬ್ಬಬ್ಬ ಉರಿಯೇ! ಒಂದೆರಡು ದಿವಸ ಬಿಟ್ಟಿದ್ದರೆ, ನನ್ನ ಕೆಲಸ ಮುಗಿಸಿ ಊರು ಬಿಡುತ್ತಿದ್ದೆ. ಇನ್ನೂ ಚಪ್ಪರವನ್ನು ಪೂರ್ಣ ಅಳಿದಿಲ್ಲ. ಊರಿನ ಸಾಲಜೇಡು ಮುಗಿಸಿಲ್ಲ. ಮಳೆ ಬೀಳುವುದರೊಳಗೆ ಮೈಸೂರಿಗೆ ಹೊರಡಬೇಕಲ್ಲ."

"ಅದೇನೂ ಇರಲಿ. ಮಂಜುನಾಥ, ನಿನ್ನ ಧೈರ್ಯ, ದೊಡ್ಡಸ್ತಿಕೆ ಎರಡೂನೂ ಹೆಚ್ಚು! ನೀನು ಅಮ್ಮನವರ ಪೂಜೆಯನ್ನು ಭಾರಿ ಗಡದ್ದಾಗಿ ಮಾಡಿಸಿದೆ. ಆ ಪಾಟಿ ಜನಗಳ

ಮುಖಗಳನ್ನು ನಾನು ಕಪಾಲೇಶ್ವರ ಜಾತ್ರೆಯಲ್ಲೂ ಕಂಡಿಲ್ಲ. ಎಲ್ಲೆಲ್ಲಿಂದ ಜನರು! ಅವರು ಹೇಗೆ ಬಂದರು; ನೀನು ಹೇಗೆ ಹೇಳಿಕೆ ಮಾಡಿದೆ?" ಎಂಬ ನನ್ನ ಆಶ್ಚರ್ಯವನ್ನು ಪ್ರಕಟಿಸಿದೆ.

ಅದಕ್ಕವನು "ಜನ ಕರೆಯಿಸಿದ್ದಕ್ಕೆ ಅನ್ನುತ್ತೀರೋ ನೀವು? ಅದು ಆ ಜಗದಂಬೆ ಕರೆಸಿದ್ದು. ನನ್ನ ಮಾಣಿ ಹೋಗಿ ಹೇಳಿಕೆ ಮಾಡಿ ಬಂದದ್ದು ನಿಜ. ಕಾಲ್ತೋಡು, ಹೆರಂಜಾಲು, ಬಿಜೂರು ಮತ್ತು ಬೈಂದೂರು - ಅಂತ ಬ್ರಾಹ್ಮಣರ ಮನೆಗಳನ್ನು ಕಂಡ ಕಂಡಲ್ಲಿ ಹೊಕ್ಕು, ಹೇಳಿದ್ದ. ದೇವರ ಸೇವೆ ಎಂದ ಮೇಲೆ ಜನರು ಬಾರದೆ ಇರುತ್ತಾರೆಯೇ?"

"ನಿನ್ನ ಕೈಯೂ ದೊಡ್ಡದೇ."

"ನನ್ನದೇನು ಕೈ! ಅವಳ ಕೈ ದೊಡ್ಡದು; ಅಮ್ಮನವರದ್ದು. ಅವಳು ಕೊಡಿಸಿದಳು; ತಲೆ ತಪ್ಪದೆ ಪಾವಲಿ ದಕ್ಷಿಣೆ ನನ್ನಿಂದ ಕೊಡಿಸಿದಳು. ಅವಳು 'ಕೊಡು' ಎಂದುದರಿಂದಲೇ ನಾನು ಅಷ್ಟೆಲ್ಲ ಕೊಟ್ಟೆ. ನನಗಂತು ತುಂಬ ಸಂತೋಷವಾಯಿತು. ಯಾವ ಕಸರೂ ಇಲ್ಲದೆ, ವಂಡಸೆಯವರು ಮತ್ತು ಶಂಕರನಾರಾಯಣದವರು ಸೇರಿ, ಅಡುಗೆ ದೊದಲಾದ ಪ್ರತಿಯೊಂದನ್ನೂ ವಹಿಸಿಕೊಂಡು, ದುಡಿದರು. ಅವರಿಗೂ ಕೈ ತುಂಬ ದುಡ್ಡು ಕೊಟ್ಟೆ."

"ನಿನ್ನ ಕೈಯೂ ದೊಡ್ಡದೇ!"

"ಈ ಕಾಲದಲ್ಲಿ ಮಂಜುನಾಥ, ದುಡ್ಡು ಬೇಕು. ದುಡ್ಡಿದ್ದರೆ ಜನ."

"ಒಂದಕ್ಕೆ ಆ ಮಾತು ನಿಜ; ಆದರೂ ಜನರಿಗೆ ದೇವರು ದಿಂಡರುಗಳ ವಿಚಾರದಲ್ಲಿ ನಂಬಿಕೆ, ಶ್ರದ್ಧೆ ಇದ್ದುದರಿಂದಲೇ ಬಂದರು. ಬರಿಯ ದಕ್ಷಿಣೆ ಆಸೆಗೆ ಬಂದದ್ದಲ್ಲ."

"ಅದಕ್ಕೆ ಅಷ್ಟೆಲ್ಲ ದೂರ ನಡೆದು ಬಂದಾರೆಯೇ? ಎಂದು ಹೊರಡುತ್ತೀ ನೀನು ಮೈಸೂರಿಗೆ?"

"ಇನ್ನೇನು, ಇಲ್ಲಿಂದ ಹೊರಡುವುದೇ. ಮಳೆ ಎರಡು ಮೂರು ದಿನ ಬಿಟ್ಟರೆ ಸಾಕು; ಚಪ್ಪರದ ಒತ್ತರೆಯಾಗುತ್ತದೆ. ಪಾತ್ರೆ ಪರಡಿಗಳನ್ನು ತಂದವರಿಗೆ ಮುಟ್ಟಿಸಿದರೆ, ಈ ವರ್ಷದ ಮಟ್ಟಿಗೆ ನನ್ನ ಜವಾಬ್ದಾರಿ ಮುಗಿಯಿತು. ಅದಲ್ಲ ನನ್ನ ಚಿಂತೆ; ಹಿಂಡುಗಾನ ಅಮ್ಮನಿಗೆ ಒಂದು ಚಂದವಾದ ಗುಡಿ, ಮುಖ ಮಂಟಪ, ಅಂಬಲ - ಇಷ್ಟು ಮಾಡುವ ತನಕವೂ ನನ್ನ ಮನಸ್ಸು ಕೇಳದು."

ಅವನ ಮಾತಿಗೆ ಪುಷ್ಟಿಕೊಡಲು ನನ್ನ ಸೀತೆಯೂ ಬಂದು ಸೇರಿದಳು.

ಮಂಜುನಾಥನಲ್ಲಿ ಅಮ್ಮನವರನ್ನು ಕುರಿತ ಶ್ರದ್ಧೆ ಕಡಿಮೆಯಿಲ್ಲ ಎಂದು ನನಗೆ ಗೊತ್ತಿದ್ದರೂ, ಕೈಯಲ್ಲಿ ದುಡ್ಡಿದೆ - ಎಂಬ ಜಂಭವೂ ಸೇರಿತ್ತು. ಅವನು ಕೊಡುವ ಪಾವಲಿ ದಕ್ಷಿಣೆಯ ಆಕರ್ಷಣೆಯೂ ಹಲವರನ್ನು ಬರಮಾಡಿಸಿಕೊಂಡಿರಬೇಕು. ಆದರೂ,

ದುಡ್ಡನ್ನು ಸಾರ್ಥಕವಾಗಿ ಖರ್ಚು ಮಾಡುವಂಥ ಬುದ್ಧಿ ಬರಬೇಕಲ್ಲ. ಅಷ್ಟೆಲ್ಲದರ ಬಳಿಕವೂ, ಆತನಿಗೆ ತಾನು ನಡೆಯಿಸಿದ ಉತ್ಸವವನ್ನು ಕುರಿತು ಹತ್ತು ಜನ ಆಡಿಕೊಂಡುದನ್ನು ಕೇಳುವ ಚಪಲವೂ ಇದ್ದ ಹಾಗೆ ಅನಿಸಿತು. ಅದನ್ನು ನಮ್ಮ ಅಜ್ಜಿಯ ಬಾಯಿಯಿಂದ ಕೇಳುವ ಬಯಕೆಯಿಂದಲೋ ಏನೋ, ಆತ "ಅಜ್ಜಮ್ಮ ಎಲ್ಲಿ?" ಎಂದು ವಿಚಾರಿಸಿದ. ಸೀತೆ ಅದಕ್ಕೆ "ಅಲ್ಲೆಲ್ಲಾದರೂ ಇದ್ದಾರು" ಎಂದಳು.

"ಮಾತನಾಡಿಸಿ ಹೋಗುವ ಎಂದು ಬಂದೆ" ಎಂದು ಎದ್ದು ನಿಂತ. ಸೀತೆ ಅವರ ಕೋಣೆಯನ್ನೂ, ಹಿಂದಿನ ಪಡಸಾಲೆಯನ್ನೂ ಹುಡುಕಿ ನೋಡಿ ಬಂದು "ಒಳಗಿಲ್ಲಪ್ಪ; ಇದ್ದರೆ ಅಶ್ವತ್ಥದ ಕಟ್ಟೆಯಲ್ಲಿ ಕೂತಿದ್ದಾರು. ಇಷ್ಟು ಹೊತ್ತಿನಲ್ಲಿ ಅದು ಅವರ ಮಾಮೂಲಿನ ಸ್ಥಳ" ಎನ್ನುತ್ತಿದ್ದಾಗ ಒಮ್ಮೆಲೇ ಚಿಟಿಚಿಟಿಲೆಂದು ಸಿಡಿಲಿನ ಆರ್ಭಟ ಕೇಳಿಸಿತು. ಅದೇ ಗಾಳಿಯನ್ನು ಹೊತ್ತು ತಂದಿತೋ, ಗಾಳಿ ಅದನ್ನು ಹೊತ್ತು ತಂದಿತೋ! ಕ್ಷಣ ಮಾತ್ರದಲ್ಲಿ ಬಿರುಗಾಳಿ ಬೀಸತೊಡಗಿತು. ತೋಟದ ಅಡಿಕೆಯ ಮರಗಳಿಗೆ ದರ್ಶನವೇ ಬಂದಿತು. ಮಾಡಿನ ಹುಲ್ಲು, ಚಪ್ಪರದ ಮಡಲುಗಳು ಆಚೀಚೆ ಹಾರಾಡತೊಡಗಿದವು. ಮನೆಯ ಕಿಟಿಕಿ ಬಾಗಿಲುಗಳು ಬಡಿದಾಡತೊಡಗಿದುವು. ನಾನು ತೀರ ಅವಸರಿಸಿ ಅಜ್ಜಿಯನ್ನು ಕರೆದುಕೊಂಡು ಬರುತ್ತೇನೆಂದು ಹೊರಕ್ಕೆ ಧಾವಿಸಿದೆ. ಆ ಗಾಳಿ, ಧೂಳುಗಳಲ್ಲಿ ನನ್ನ ಕಣ್ಣು, ಮುಖಗಳೆಲ್ಲವೂ ಮಣ್ಣೇ. ಯಾವ್ಯಾವ ಊರಿನ ಧೂಳೆಲ್ಲ ನನ್ನ ಮುಂದಕ್ಕೆ. ಮೇಲಿಂದ ಹನಿ ಪಟಪಟ ಬಡಿಯತೊಡಗಿತು. ಅಜ್ಜಿ ಅವಸರದಲ್ಲಿ ಆ ಗಾಳಿಗೆ ತೂರಾಡುತ್ತಾ ಇದಿರಾದರು. ಅವರ ತೋಳನ್ನು ಹಿಡಿದು ಒಳಕ್ಕೆ ಕರೆದುಕೊಂಡು ಹೊರಟೆ.

"ಬಿಡು ನನ್ನ ತೋಳನ್ನು, ನಾನೇನು ಮಗುವಲ್ಲ. ಬರಲಿ ಒಂದು ಗಡದ್ದು ಮಳೆ" ಎಂದರು ಅಜ್ಜಿ.

ಸಮೀಪದ ಮಾವಿನ ಮರದಿಂದ ದೊಡ್ಡ ಒಂದು ಎಗೆ ಬಿಚ್ಚಿ ಧೊಪ್ಪನೆ ಕೆಳಕ್ಕೆ ಬಿತ್ತು. ಆಚೀಚಿನ ಮರಗಳು ಕುಡಿದು ಸ್ವಯಗೆಟ್ಟವುಗಳಂತೆ ತಲೆದೂಗುತ್ತಿದ್ದವು. ನನ್ನ ಕಿಟ್ಟಣ್ಣ ಅದರಲ್ಲೇ ಹೊರಕ್ಕೋಡಿ ಬಂದು "ಅಪ್ಪಯ್ಯ, ಮಾವಿನಹಣ್ಣು" ಎಂದು ಆ ಮರದ ಕಡೆಗೆ ಧಾವಿಸುವುದನ್ನು ಕಂಡಾಗ ನನಗೆ ಗಾಬರಿಯಾಯಿತು. "ಮಾಣಿ, ನಡೆ ಒಳಗೆ, ಮಾವಿನಕಾಯಿ ಬಿದ್ದರೆ ಅಲ್ಲೇ ಇರುತ್ತದೆ. ತಲೆಯ ಮೇಲೆ ಗೆಲ್ಲು ಮುರಿದು ಬಿದ್ದರೆ ಸತ್ತೇ ಹೋದೀಯ" ಎಂದು ಅವನನ್ನು ಗದರಿಸಿದೆ. ಆ ಮರುಳು ಮಾಣಿ ಓಡಿ ಹೋಗಿಯೇ ಬಿಟ್ಟಿತು. ಅಜ್ಜಿಯನ್ನು ಅಲ್ಲಿಯೇ ಬಿಟ್ಟು, ಅದರ ಹಿಂದೆ ನಾನು ಓಡಬೇಕಾಯಿತು. ಗೆಲ್ಲು ಮುರಿದು ಬಿದ್ದುದರಿಂದಂತು, ಆಚೀಚೆ ನೂರಾರು ಮಾವಿನಕಾಯಿಗಳು ಬಿದ್ದಿದ್ದವು. ಕಿಟ್ಟಣ್ಣ 'ಹಣ್ಣು, ಹಣ್ಣು ಮೂರು, ನಾಲ್ಕು ಎಂಟು' ಎನ್ನುತ್ತ ಬೊಗಸೆಯಲ್ಲಿ ಹಿಡಿಯಲಾರದೆ, ಹೊಟ್ಟೆಗೆ ಅವನ್ನು ಅವುಚಿಕೊಳ್ಳುತ್ತಿದ್ದ. ಹೋಗಿ,

ಅವನನ್ನು ಎಳೆದು ತಂದು ಮನೆಯ ಚಾವಡಿಯಲ್ಲಿ ಸ್ಥಾಪಿಸಿದೆ. ಅಜ್ಜಿ ತಮ್ಮಷ್ಟಕ್ಕೆ ಚಾವಡಿಯ ಗೋಡೆಗೆ ಒರಗಿಕೊಂಡು ಕುಳಿತರು. ಮಳೆ, ಗಾಳಿ, ಗುಡುಗುಗಳ ಆರ್ಭಟೆ ಉಕ್ಕೇರಿತು. ಆ ಗದ್ದಲದಲ್ಲೇ ಮಂಜುನಾಥ ಅಜ್ಜಿಯನ್ನು ಮಾತನಾಡಿಸುವ ಪ್ರಯತ್ನದಲ್ಲಿದ್ದಂತೆ ಕಾಣಿಸಿತು. ನಾನು ಕೈಕಟ್ಟಿ ಕಂಬಕ್ಕೊರಗಿ ಕುಳಿತೆ. ಚಂದ್ರ ನನ್ನ ಮಗ್ಗುಲಲ್ಲಿ ಬಂದು ಕುಳಿತ. ಒಂದು ಗಂಟೆಯ ಕಾಲ, ದೆವ್ವ ಬಡಿದವರಂತೆ ಮಳೆಗೆ ಅಂಜಿ, ಅಂಜಿ ಕುಳಿತೆವು. ಮೇಘರಾಜನ ಈ ರೌದ್ರಾವತಾರವನ್ನು ಹಿಂದೆ ನಾನೆಂದೂ ಕಂಡ ನೆನಪಾಗಲಿಲ್ಲ. ಮಳೆಯೂ ಅಷ್ಟೇ; ಗಾಳಿಯೂ ಅಷ್ಟೇ. ನನ್ನ ಮನೆಯ ಅಂಗಳದ ಚಪ್ಪರ ಅರ್ಧಕ್ಕರ್ಧವಾಗಿತ್ತು. ತೋಟದಿಂದಲೂ ಅಡಿಕೆ, ಬಾಳೆಗಳು ಮುರಿದು ಬೀಳುವ ಸದ್ದು ಕೇಳಿಸುತ್ತಿತ್ತು. ಎಲ್ಲರೂ, "ಎಂಥದಿದು ವಿಪರೀತ ಮಳೆ! ಆಷಾಢ ಮಾಸದ ತಿಂಗಳ ಕಾಲದ ಮಳೆ ಒಂದೇ ಗಳಿಗೆಯಲ್ಲಿ ಬರುವ ಹಾಗಿದೆಯಲ್ಲ" ಎಂದುಕೊಂಡೆವು.

ಮತ್ತೊಂದು ಗಳಿಗೆಯ ಮೇಲೆ ಮಳೆ ಬಿಟ್ಟಿತು; ಗಾಳಿ ಸ್ತಬ್ಧವಾಯಿತು. ಬಾನು ತೆರವಾಗಿ ಸಂಜೆಯ ಬಿಸಿಲು ತೊಯ್ದ ನೆಲದ ಮೇಲೂ, ಮಿಂದು ನಿಂತ ಗಿಡಮರಗಳ ಮೇಲೂ ಹೊಂಬಣ್ಣವನ್ನು ಚೆಲ್ಲಿದಾಗ "ಯಾರಪ್ಪ ಇದು - ನಮ್ಮ ಊರಿಗೆ ಕನಕಾಭಿಷೇಕ ಮಾಡಿಸಿದವರು? ಈ ಒಂದೆರಡು ಗಳಿಗೆಯಲ್ಲಿ ಏನೆಲ್ಲ ಅದ್ಭುತ ನಡೆದುಹೋಯಿತು" ಎಂದು ಅಚ್ಚರಿ ಪಡುವಂತಾಯಿತು.

ಮಳೆಯ ಅಬ್ಬರಕ್ಕೆ ಹೆದರಿಯೋ ಏನೋ, ಇನ್ನಿಬ್ಬರು ಮಕ್ಕಳು ನನ್ನ ಮರೆಯಲ್ಲಿ ಅವಿತು ಕುಳಿತುಕೊಂಡ ಹಾಗೆಯೇ, ಮಂಜುನಾಥ ಒಂದು ಕಂಬಕ್ಕೆ ಒರಗಿ ಕುಳಿತಿದ್ದ. ಅವನ ಇದಿರಿನಲ್ಲಿ ಅಜ್ಜಿ ಗೋಡೆಗೆ ಒರಗಿ ಕುಳಿತಿದ್ದರು. ಅವರ ಬಾಯಿಯಿಂದ "ನಮ್ಮ ಅಹಂಕಾರ, ಠೇಂಕಾರ - ಇದರ ಮುಂದೇನು?" ಎಂಬ ಮಾತು ಉರುಳಿತು. ಮಂಜುನಾಥನ ಎದೆಯಲ್ಲಿ ತುಂಬಿಕೊಂಡಿದ್ದ ಹಿಗ್ಗು, ಠೀವಿಗಳನ್ನು ನೆನೆದು ಅವರು ಹೀಗೆಂದರೋ ನಾನರಿಯೆ. ಅವನ ಬಾಯಿಯಿಂದ ಒಂದು ಸೊಲ್ಲೂ ಹೊರಡಲಿಲ್ಲ. ಪ್ರಾಯಶಃ ಅವನ ನೆನಪು ಮನೆ ಚಪ್ಪರದ ಕಡೆಗೂ, ಗುಡಿಯ ಚಪ್ಪರದ ಕಡೆಗೂ ಹರಿದಿರಬಹುದು. ಆತ ಅವಸರಿಸಿ ಎದ್ದು, "ನಾನು ನನ್ನ ಮನೆಗೆ ಓಡುತ್ತೇನೆ. ಅಲ್ಲಿ ಏನೇನು ಅನಾಹುತವಾಗಿದೆಯೋ! ಆಗುವುದೇನು - ಚಪ್ಪರದ ಮಡಲೂ, ಬಿದಿರೂ ಚಪ್ಪನ್ನೈವತ್ತಾರು ದೇಶಕ್ಕೆ ಹೋಗಿ ಬಿದ್ದೀತು. ಮನೆಯ ಮಾಡು ಉಳಿದರೆ ಆಶ್ಚರ್ಯವೇ" ಎಂದ.

"ಹೌದು, ಮಾರಾಯ. ನಾನೂ ತೋಟಕ್ಕೆ ಹೋಗಿ ಬರುತ್ತೇನೆ" ಎಂದು ಹೊರಟೆ.

ನನ್ನ ಮಕ್ಕಳು ತಮ್ಮ ಅಮ್ಮನನ್ನು ಕರೆದು "ಅಮ್ಮ ಮಾವಿನ ಕಾಯಿ" ಎಂದು ರಾಗ ಮಾಡಿದವು. ಅವಳಾಗ ಒಂದು ಬೀಳಲು ಬುಟ್ಟಿಯನ್ನು ಹಿಡಿದುಕೊಂಡು

ಹೊರಟಳು. ನಾನು ಅಡಿಕೆ ತೋಟವನ್ನು ಹೊಕ್ಕು ನೋಡಿದೆ. ಹೊರ ಸಾಲಿನ ಆರೆಂಟು ಅಡಿಕೆ ಮರಗಳು ಮುರಿದಿದ್ದುವು. ಇಪ್ಪತ್ತೋ ಮೂವತ್ತೋ ಬಾಳೆಗಿಡಗಳು ನೆಲ ಅಳೆಯುತ್ತಿದ್ದವು. ಕಂಡು, ಕೊರಗಿ ಬಂದೆ; ನಾಳೆ ಅವನ್ನು ಕಡಿದರಾಯಿತು ಎಂದುಕೊಂಡೆ.

ಮನೆಗೆ ಬರುವಾಗ ಮಕ್ಕಳ ಹಿಗ್ಗೇ ಹಿಗ್ಗು! ಚಾವಡಿಯಲ್ಲಿ ನನ್ನವಳು ನಾಲ್ಕು ಹೆಡಿಗೆ ಮಾವಿನಕಾಯಿ ಹರವಿದ್ದಳು. ಎಳೆತು, ಬೆಳೆತು, ಮಿಡಿಕಾಯಿ, ಹಣ್ಣು! ಅವಳಿಂದ "ಒಂದೇ ಒಂದು ಮಿಡಿಯೂ ಮರದಲ್ಲಿ ಉಳಿದಿಲ್ಲ. ಇವುಗಳಲ್ಲಿ ಕೇವಲ ಐವತ್ತು ಕಾಯಿಗಳು ಬಲಿತಿದ್ದರೆ ದೊಡ್ಡದು" ಎಂಬ ಮಾತನ್ನು ಕೇಳಿದೆ.

"ಮತ್ತೆ ಯಾತಕ್ಕೆ ತಂದೆ?"

"ಅಲ್ಲಿಯೇ ಬಿಟ್ಟು ಏನು ಮಾಡುವುದಂತೆ! ನಾಳೆ ಬಿಸಿಲು ಬಿದ್ದರೆ, ಕೇದೆ ಕತ್ತರಿಸಿ ತೆಗೆದು ಒಣಗಿಸಬಹುದು; ಅದನ್ನು ಬೇಯಿಸಿ ಮಾವಿನ ಹಿಂಡಿ ಮಾಡಬಹುದು" ಎಂದಳು. ನನಗೆ ಮಾವಿನ ಹಿಂಡಿ ಇಷ್ಟವಾದ್ದರಿಂದ ನಾನು ಮಾತನಾಡಲಿಲ್ಲ. ಇನ್ನೂ ಎರಡು ಗಳಿಗೆ ಹೊತ್ತು ಒಳ್ಳೇ ಬಿಸಿಲು ಉಳಿದಿದ್ದುದರಿಂದ - ಊರಲ್ಲಿ ಏನೇನು ಅನಾಹುತವಾಗಿರಬಹುದೆಂದು ನೋಡಲು ಹೊರಟೆ. ನನಗೆ ದಾರಿಯಲ್ಲಿ ಪ್ರಥಮ ದರ್ಶನವಾದುದು ಎಣ್ಣೆ ಹಾಡವನ್ನು ಹೊತ್ತು ಬರುತ್ತಿದ್ದ ಗಾಣಿಗ ರಾಮಣ್ಣನದು. ಅವನ ಹಚ್ಚಡ ಒದ್ದೆಯಾಗಿತ್ತು. ಆತನಿಗೆ ಚೆನ್ನಾದ ಅಭಿಷೇಕವಾಗಿರಬೇಕು. ಅವನು ಹೊತ್ತ ಹಾಡದಲ್ಲಿ ಎಣ್ಣೆಯಿತ್ತೋ, ನೀರಿತ್ತೋ ತಿಳಿಯೆ. ಅವನನ್ನು ಕಂಡು "ಮಳೆ ಬರುವಾಗ ಎಲ್ಲಿದ್ದೆ ನೀನು? ಅದ್ಭುತ ಮಳೆಯಲ್ಲವೆ?" ಎಂದೆ ನಾನು.

"ಅದ್ಭುತವೇ? ನಾನು ಹುಟ್ಟಿದಾರಭ್ಯ ಇಂಥ ಜಡಿಮಳೆ ಕಂಡವನಲ್ಲ. ಅರ್ಧ ಹಾಡ ಎಣ್ಣೆ ನೀರಿಗೆ ಹೋಯಿತು."

"ಎಣ್ಣೆ ನೀರಿಗೆ ಹೋಯಿತೇ?"

"ಗಾಳಿ ಶುರುವಾಗುವಾಗ ನಾನು ಆಚೆಯ ಹಾಡಿಯಲ್ಲಿದ್ದೆ. ಅದರ ರಾಪು ಕಾಣುತ್ತಲೇ, ಬೀಸನೆ ಹೆಜ್ಜೆ ಹಾಕಿದೆ. ಎಲ್ಲಿಂದಲೋ ಒಂದು ಟೊಂಗೆ ರಪ್ಪನೆ ಮುರಿದು ಬಂದು, ಎಣ್ಣೆಯ ಹಾಡಕ್ಕೆ ಬಡಿಯಿತು, ಕೊಡ ಬಿತ್ತೇ; ಆದ ನಳ್ಳನ್ನು ನೋಡಿ, ಅಯ್ಯೋ ನನ್ನ ಹಣೆಬರಹವೇ - ಎಂದು, ಕೊಡವನ್ನು ಎತ್ತುವಷ್ಟರಲ್ಲಿ ಜಿರಾಪತಿ ಮಳೆಯೂ ಸುರಿಯಿತು. ಅಲ್ಲೇನು ಒಂದು ಮನೆಯೇ? ಮಠವೇ? ದಿಡುಗುಟ್ಟುತ್ತ ಓಡಿದೆ ದೇವಸ್ಥಾನದ ಅಂಬಲಕ್ಕೆ. ಅಂಬಲಕ್ಕೆ ಮೇಲೆ ಮಾಡಿದೆ ಎಂತ ಲೆಕ್ಕ; ಅಲ್ಲೂ ನೀರು ಬಡಿಯಿತು.; ಸಿವುರೂ ಬಡಿಯಿತು. ಚಳಿಗೆ ಮುದುರಿ ಕುಳಿತೆ. ಗಾಳಿಗೆ ಮಾಡಿನ ಓಡಲೆಲ್ಲ ಹಾರುತ್ತಿತ್ತು. ದೇವರ ಅಂಬಲದ ಮೇಲೂ ಮಳೆರಾಯ ರಿಯಾಯಿತಿ ತೋರಿಸಲಿಲ್ಲ. ಕಾಣುವುದಕ್ಕೇ ಹೆದರಿ,

ಕಣ್ಣುಮುಚ್ಚಿ ಕುಳಿತೆ. ಆಗ ಒಂದು ಘನ ಸಿಡಿಲು ಬಡಿಯಿತು. ಏನಂತೀರಿ! ದಿಡಿಲ್ ದಸಾಲ್ ಅಂತ - ಮೂರೇ ಮೂರು ಮಾರು ಹತ್ತಿರದಲ್ಲಿ ಬಡಿದ ಹಾಗಾಯಿತು."

"ಅಯ್ಯೋ? ಮಾಡಿಗೆ ಬಡಿಯಿತೋ, ಇನ್ನೇತಕ್ಕೋ! ನನಗೆ ಒಂದು ಧೈರ್ಯ - ದೇವರ ಅಂಬಲ ಅದಲ್ಲವೇ? ಬಡಿಯಲಾರದು ಅಂತ ಧೈರ್ಯ. ಅಂತು, ಅಲ್ಲಿ ಬಡಿಯಲಿಲ್ಲ. ಆದರೆ, ಗಾಳಿಯ ಅಬ್ಬರಕ್ಕೆ ದೇವಸ್ಥಾನದ ಪಾಗಾರದ ಹೊರಗಿನ ವಾಲ ಮಂಟಪ ಅಂಗಾತ ಮಗುಚಿ ಬಿತ್ತು. ಅದರ ಮಾಡು, ಓಡ್ಲು - ಎಲ್ಲವೂ ಪುಡಿ, ಪುಡಿ; ಪುಡಿ, ಪುಡಿ ಎಂದರೆ ಹಿಟ್ಟು ಹಿಟ್ಟು."

"ಓಲಗದ ಮಂಟಪ ಬಿತ್ತು ಅನ್ನುತ್ತೀಯಾ? ನಮ್ಮ ದೇವರದ್ದು? ಏನೂ ಆದೀತು ಆ ಗಾಳಿ ಮಳೆಗೆ."

"ನೀರನ್ನು ನೋಡಿದಿರೋ ಒಡೆಯ! ಆ ಮಂಟಪದ ಹತ್ತಿರದ ಓಕುಳಿ ಹೊಂಡದ ತುಂಬ ಕೆಂಪು ನೀರು ನೀರೇ! ಇವತ್ತಾದರೆ ಸಮ - ದೇವರಿಗೆ ಇನ್ನೊಂದು ಸಾರಿ ನಮ್ಮವರು ಓಕುಳಿ ಆಟವನ್ನು ಆಡಿ ತೋರಿಸಬಹುದು. ಸಾಕಾಯಿತು - ಅಷ್ಟೆಲ್ಲ ಕಂಡದ್ದು. ಮಳೆ ಬಿಟ್ಟಿತು; ಅಲ್ಲಿಂದ ಹೊರಟೆ. ನನ್ನ ಅರ್ಧ ಹಾಡ ಎಣ್ಣೆ ಹೋದದ್ದೇ. ಹೋದ ಎಣ್ಣೆ ಬರುತ್ತದೆಯೋ ಹೇಳಿ?"

"ಹಾಗೆಯೇ ಹಾಡಿಯ ದಾರಿಯಿಂದ ನಡೆದು ಬಂದು, ಬಯಲಿಗಿಳಿದೆ. ಬಯಲು, ತೋಡು ತುಂಬಿ, ನೆರೆ ಬಂದ ಹಾಗಾಗಿತ್ತು. ಒಂದೇ ಮಳೆಗೆ ಕಪ್ಪೆಗಳು, ಟ್ರೊಂಯ್ ಟ್ರೊಂಯ್ ಅನ್ನುತ್ತಿವೆ. ಬಯಲಿಗಿಳಿಯುವ ದೊದಲು ಅಲ್ಲೊಂದು ಕಲ್ಲು ಚಪ್ಪರ ಉಂಟಲ್ಲ; ಒಡೆಯ, ಅದೂ ಮಗುಚಿ ಬಿದ್ದದ್ದನ್ನು ಕಂಡೆ. ಯಾವ ರಾಯನ ಕಾಲದ್ದೋ ಏನೋ, ಗಾಳಿಗೆ ಬಿತ್ತು ಅನ್ನಲೇ? ಪುಣ್ಯಕ್ಕೆ ನಾನು ಅಂಬಲಕ್ಕೆ ಓಡಿಹೋಗುವ ಬದಲು, ಆ ಚಪ್ಪರದ ಕೆಳಗೆ ಎಲ್ಲಾದರೂ ನಿಂತಿದ್ದರೆ, ಈ ರಾಮಣ್ಣ ಅದರ ಅಡಿಗೆ ಬಿದ್ದು, ಸತ್ತು ಚಟ್ನಿಯಾದ ಸುದ್ದಿ, ನನ್ನ ಹೆಣ ಕೊಳೆತು ನಾತ ಹೊರಟ ಮೇಲೆಯೇ ಊರಿಗೆ ಹಬ್ಬುತ್ತಿತ್ತು."

ರಾಮಣ್ಣನ ಮನೋಹರವಾದ ಬಣ್ಣನೆಯನ್ನು ಬಲು ಮುಗ್ಧನಾಗಿ ನಾನು ಕೇಳುತ್ತ ನಿಂತೆ. ಅವನೆಂದದ್ದು ನಿಜವೇ. ಎಷ್ಟು ಹಾನಿಯಾಯಿತು; ಏನು ಹಾನಿಯಾಯಿತು - ಎಂದು ನೋಡುವ ಕುತೂಹಲದಿಂದ ಹೊರಟೆ. ಹೊರಟದ್ದನ್ನು ನೋಡಿ, ಆತ "ಈಗ ಎಲ್ಲಿಗೆ ಹೋಗುತ್ತೀರಿ?" ಎಂದು ಕೇಳಿದ. "ಅಲ್ಲಿ ಬಯಲಲ್ಲಿ ಏನೇನು ಆಗಿದೆ ಅಂತ ನೋಡಿಕೊಂಡು ಬರುವ ಎಂತ ಹೊರಟೆ" ಎಂದೆ.

"ಆಯಿತು, ಉಮೇದಾದರೆ ಹೋಗಿ ನೋಡಿಕೊಂಡು ಬನ್ನಿ" ಎಂದು ಆತ ಮುಂದುವರಿದ. ಇನ್ನು ಅವನು ಹೋದರೊ, ನಮ್ಮ ಮನೆಯ ಮುಂದಿನಿಂದಲೇ ಹಾದು,

ಎರಡು ಮೈಲು ದೂರವಿರುವ ತನ್ನ ಮನೆಯನ್ನು ಸೇರಬೇಕು. ಅದರ ಬದಲು, ದೇವಸ್ಥಾನದ ಅಂಬಲದಿಂದಲೇ ಹೊರಟಿದ್ದರೆ, ಮನೆಗೆ ಹೋಗುವುದು ಮತ್ತಷ್ಟು ಸುಲಭವಿತ್ತು. ಆದರೆ, ಆತ ಈ ಬಳಸುದಾರಿಯನ್ನೇತಕ್ಕೆ ಹಿಡಿದ - ಎಂಬುದು ನನಗೆ ಹೊಳೆಯಲಿಲ್ಲ. ನಾನು ಅವನನ್ನು ಅಲ್ಲಿಯೇ ಬಿಟ್ಟು, ಬಯಲಿನ ಕಡೆಗೆ ಹೊರಟೆ. ಬಯಲಲ್ಲಿ ಮೊಣಗಂಟು ಮುಳುಗುವಷ್ಟು ನೀರು ನಿಂತಿತ್ತು. ಆಚೀಚಿನ ತೋಡುಗಳಲ್ಲಿ ನೀರು ಉಕ್ಕಿ ಹರಿಯುತ್ತಿತ್ತು. ನಮ್ಮ ರಾಮಣ್ಣ ಹೇಳಿದ ಹಾಗೆ ಕಪ್ಪೆಗಳ ವಾದ್ಯ ಎಲ್ಲೆಲ್ಲೂ ಕೇಳಿಸುತ್ತಿತ್ತು.

ಬಯಲನ್ನಿಳಿದು ಮೊದಲು ಹೋದದ್ದು ಜನಾರ್ದನನ ಮನೆಗೆ. ಅವನು ಬಂದಿದ್ದಾನೆಯೇ - ಎಂಬುದನ್ನು ತಿಳಿದುಕೊಂಡ ಹಾಗೂ ಆಯಿತು; ಅವರಲ್ಲಿ ಗಾಳಿ, ಮಳೆ ಏನು ಅವಾಂತರ ನಡೆಸಿದೆ ಎಂಬುದನ್ನು ತಿಳಿದ ಹಾಗೂ ಆಯಿತು. ಆದರೆ ಯಾಕೋ, ಏನೋ, ಅವರ ಪಾಳೆಯದಲ್ಲಿ ಮಳೆ ಬಿದ್ದುದು ಕಡಮೆಯಲ್ಲವಾದರೂ ಗುಡುಗು, ಸಿಡಿಲುಗಳ ಆರ್ಭಟೆ ಬೇಕಷ್ಟು ಜೋರಿದ್ದರೂ, ನಮ್ಮ ಮನೆಯ ವಠಾರದಲ್ಲಿ ಸುಳಿದು ಹೋದ ಗಾಳಿಯ ಅವಾಂತರ ಅಷ್ಟಿರಲಿಲ್ಲ. ಜನ್ನನ ತಂದೆ ತಾಯಿಯರು ಅಂಗಳದಲ್ಲಿ ಚದುರಿ ಬಿದ್ದಿದ್ದ ಕಸ ಗುಡಿಸುತ್ತಿದ್ದರು. ಅವರೂ "ಏನು ಮಳೆ! ಇದೆಂಥ ಮಳೆ! ತಿಂಗಳ ನೀರು ಒಂದು ಗಳಿಗೆಗೇ ಬಂತು" ಎಂದಂದರು. ಜನಾರ್ದನ ಎಲ್ಲಿಗೆ ಹೋಗಿದ್ದಾನೆ, ಎಂದು ಬರುತ್ತಾನೆ ಎಂಬುದು ಅವರಿಗೆ ಗೊತ್ತಿರಲಿಲ್ಲ. ನನಗೂ ಅಷ್ಟೊಂದು ಬೇಕಿರಲಿಲ್ಲ. ನಾನು ರಾಮಣ್ಣನಿಂದ ಕೇಳಿದ ಅದ್ಭುತಗಳನ್ನೆಲ್ಲ ವರ್ಣಿಸಿ, ಮೆಲ್ಲನೆ ನನ್ನ ಮನೆಯ ಕಡೆ ಹೊರಳಿದೆ. "ಸಾಯಂಕಾಲದ ಒಂದು ವಾಕಿಂಗ್ ತುಂಬ ಚೆನ್ನಾಗಿಯೇ ಆಯಿತು" ಎಂದು, ಇಲ್ಲದ ಕಾರಣ ಕೊಟ್ಟು ಹಿಂದಿರುಗಿದೆ.

ಮನೆಗೆ ಹೋಗುವ ದೊದಲು ಅಶ್ವತ್ಥದ ಕಟ್ಟೆಯ ದರ್ಶನ ಆಗಿಯೇ ಆಗುತ್ತದೆಯಲ್ಲ. ಅದರ ಸಾವಿರಾರು ಹೊಸ ಚಿಗುರು ಸುಳಿಗಳು, ಎಲೆಗಳು ಸುತ್ತಮುತ್ತಣ ನೆಲವನ್ನು ಹೊಡೆದದ್ದನ್ನು ದೂರದಿಂದಲೇ ಕಂಡೆ. ಕಟ್ಟೆಯ ನೆನಪಿನೊಂದಿಗೆ ಅಜ್ಜಿಯ ನೆನಪೂ ಬಂದಿತು. ಆ ಮುಸ್ಸಂಜೆಯಲ್ಲಿ ಅವರು ಸಹ ಅಲ್ಲಿ ಕುಳಿತು ಮಾತಾಡುತ್ತಿದ್ದರು. ಇವತ್ತು ತಮ್ಮ ನಿತ್ಯದ ರಿವಾಜನ್ನು ತಪ್ಪಿಸಲೂ ಇಲ್ಲ. ಕಟ್ಟೆ ಒದ್ದೆಯಾಗಿ, ನೆಲವೂ ತಂಡಿಯಾಗಿದ್ದರೂ ಅದರ ಕಲ್ಲು ಮೆಟ್ಟಿಲಿನ ಮೇಲೆ ಕುಳಿತದ್ದು ಕಾಣಿಸಿತು. ಆಗ ಹಿಂದಣ ರಾತ್ರಿಯ ನೆನಪು ಬಂದು, ಆ ದಾರಿಯನ್ನು ಬಿಟ್ಟು, ಹತ್ತು ಮಾರಷ್ಟು ಮಗ್ಗುಲಿಗೆ ಸರಿದು, ಮನೆಯ ಕಡೆಗೆ ಹೊರಳಿದೆ. ನಾನು ಬಯಸದಿದ್ದರೂ, ಕಿವಿಗೆ ಒಂದೆರಡು ಮಾತು ಬಡಿಯಿತು; "ನೀನು ನನ್ನ ಮಾತನ್ನು ಕೇಳು; ನಳರಾಯನಿಗೆ ಶನಿ ಹಿಡಿದಾಗ ಹಾಗೆ ಏನೇನೋ ಆಯಿತಲ್ಲ; ಹಾಗೇ ಅಂತ ಎಣಿಸಿಕೋ, ನಿನ್ನ ಅಕ್ಕ ಸತ್ತಳು; ತಂಗಿ ಬಿಟ್ಟು ಹೋದಳೆನ್ನುತ್ತೀಯ. ಇನ್ನು ಯಾರು ನಿನಗಿದ್ದಾರೆ? ಯಾರ ಹಂಗೂ ನಿನಗಿಲ್ಲ. ಹೋದ ಬದುಕನ್ನು ದೇವರೇ ತಿರುಗಿ

ಕೊಡಿಸಿದ ಅಂತ ತಿಳಿ" ಎಂಬ ಮಾತು ಕೇಳಿಸಿತು.

ನಾನು ಮನೆಗೆ ಬಂದೆ. ನನಗೆ - ಅದೇನು ಸಂಭಾಷಣೆ, ಯಾವ ವಿಷಯ, ಯಾರೊಡನೆ - ಎಂಬುದು ಹೊಳೆಯಲಿಲ್ಲವಾದರೂ, ಊರಲ್ಲಿ ಹಲವರು ಅವರಿಗೆ ತಾಜಾ ಅರಳುಮರುಳು - ಎಂದು ತಿಳಿದುಕೊಂಡಿದ್ದರೂ, ಇನ್ನೂ ಅವರಿಂದಲೇ ನಾಲ್ಕು ಹಿತೋಕ್ತಿಗಳನ್ನು ಕೇಳುವ ಕೊರಡುಗಳು ಉಳಿದುಕೊಂಡಿವೆ ಎನಿಸಿತು. ಯಾರೋ ಅವರನ್ನು ಹುಡುಕಿಕೊಂಡು ಅಲ್ಲಿಗೆ ಬಂದಿರಬೇಕು - ಎಂದೂ ಅನಿಸಿತು.

ಮತ್ತೊಂದು ಗಳಿಗೆ ಸಮಯ ಸಂದ ಮೇಲೆ, ಅಜ್ಜಿ ತಾವೊಬ್ಬರೇ ಮನೆಗೆ ಬಂದರು. ನಾನು ಸೀತೆಗೆ ತುಸು ಬಿಡುವಾದುದನ್ನು ಕಂಡು "ಸೀತೆ, ದೇವಸ್ಥಾನದಲ್ಲಿ ಬಹಳ ಅನಾಹುತವಂತೆ. ವಾಲ ಮಂಟಪದ ಮಾಡು ತಲೆಕೆಳಗಾಗಿ ಬಿತ್ತಂತೆ. ನಡೂರು ಹಾದಿಯಲ್ಲಿರುವ ಕಲ್ಲುಮಂಟಪ ಕುಸಿದು ಬಿದ್ದಿದೆಯಂತೆ. ನಮ್ಮ ಬಯಲನ್ನು ನೋಡುವ ಹಾಗಿಲ್ಲ; ನೆರೆ ಬಂದ ಹಾಗೆ ನೀರು ತುಂಬಿಕೊಂಡಿದೆ. ಗೋಂಕರು ಕಪ್ಪೆಗಳ ಟ್ರೊಂಯ್ ಟ್ರೊಂಯ್ ಕೇಳಿದರೆ ಮಳೆಗಾಲ ಶುರುವಾಯಿತೆಂದೇ ಅನಿಸುತ್ತದೆ" ಎಂದೆ.

"ಅದು ಶುರುವಾಯಿತು ಅನ್ನುತ್ತೀರಾ? ಇಷ್ಟು ಮುಂಚೆಯೇ? ಒಂದೇ ಒಂದು ಮಳೆಗೆ ಅಷ್ಟೆಲ್ಲ ಆಯಿತೇ?"

"ಅಲ್ಲ, ಒಂದು ಲೆಕ್ಕಕ್ಕೆ ಈ ಮಳೆ ತೀರ ಬೇಕಿತ್ತು. ಹೂಡಬೇಡವೇ ಗದ್ದೆಗಳನ್ನು? ಬಿತ್ತು ಬಿತ್ತಿ, ಅಗೆಯನ್ನು ಮಾಡಬೇಡವೇ? ಆದರೆ ಅದು ಹೀಗೆ ಏಕಾಏಕಿ ಸುದ್ದಿ, ಸೂರಿಲ್ಲದೆ ಬಂದದ್ದು ಆಶ್ಚರ್ಯ."

"ಹೌದು, ಪ್ರತಿ ವರ್ಷವೂ ಅದು ಪ್ರತಿ ಮನೆಗೂ ಹೇಳಿಕೆಯನ್ನು ಮಾಡಿ 'ನಾನು ಬರುತ್ತೇನೆ' ಅಂತ ಹೇಳಿ ಬರುತ್ತಿತ್ತು. ಈ ವರ್ಷ ಮಾತ್ರ ಭೂರಿ ಬ್ರಾಹ್ಮಣರ ಹಾಗೆ ಹೇಳದೆ, ಕೇಳದೆ ಬಂತು; ಅಲ್ಲವೇ?" ಎಂದಳು ಸೀತೆ.

"ಯಾರು ಭೂರಿ ಬ್ರಾಹ್ಮಣರು?" ಎಂದು, ಮಾತು ಕಿವಿಗೆ ಬಿದ್ದ ಅಜ್ಜಿ ಪ್ರಶ್ನಿಸಿದರು.

"ನಾನಂದದ್ದು ಆ ಮಾತನ್ನು. ಈ ಮಳೆ ಹೇಳದೆ, ಕೇಳದೆ ಬಂತು ಎಂದದ್ದಕ್ಕೆ."

"ಅಷ್ಟೇಯೇ? ಈಗ ಬರುವ ಮಳೆ ಹಾಗಿನದ್ದೇ ಮಳೆ. ಒಂದಿಷ್ಟು ಗಾಳಿ ಹೆಚ್ಚು. ಅದಕ್ಕೇನಾಶ್ಚರ್ಯ? ಅದು ಬಂದದ್ದು ಯಾಕೆ ಎಂಬುದು ನನಗೆ ಗೊತ್ತಾಯಿತು; ನನ್ನ ಮಂಜುನಾಥ ಒಳ್ಳೆಯ ಕೆಲಸವನ್ನು ಮಾಡಿದ್ದು ನಿಜ. ಒಳಗಿಂದೊಳಗೆ ತನ್ನಂಥ ಕಾರುಭಾರಿ ಯಾರು - ಎಂಬ ಅಹಂಕಾರ ಬಂತು. ಅವನ ಒಣ ಅಬ್ಬರ ತಣಿಸಲಿಕ್ಕೇ ಆ ಮಳೆ ಬಂದದ್ದು. ಅವನು ಮಾತು ನಿಲ್ಲಿಸಿ, ಸಪ್ಪೆಯಾಗಿ ಮನೆಗೆ ಓಡಿದ್ದನ್ನು ಕಂಡೆಯಲ್ಲ."

ಸೀತೆಗೆ ಅಜ್ಜಿಯ ಈ ಟೀಕೆ ಹಿಡಿಸಲಿಲ್ಲ. ಅವರ ಇಂಥ ಮಾತುಗಳನ್ನು ಕೇಳಿಯೇ "ಅವರದ್ದು ತೀರ ಹರಕು ಬಾಯಿ" ಎನ್ನುವುದು ಅವಳು. ಅದು ಬರಿಯ ಒಂದು ಚೇಷ್ಟೆ ಮಾತು - ಎಂಬುದಾಗಿ ಯಾಕೆ ತಿಳಿಯಬಾರದು ಎಂದು ನನಗನಿಸಿತು. ಅದರ ಎಡೆಯಲ್ಲಿಯೇ ಆ ಸಂಜೆ ಅಜ್ಜಿಯೊಡನೆ ಮಾತನಾಡುತ್ತ ಕುಳಿತ ಮಹಾನುಭಾವನು ಯಾರು ಎಂದು ತಿಳಿಯುವ ಆತುರ ನನ್ನದಿತ್ತು.

ಕೇಳಿದೆ: "ಅಜ್ಜಿ, ಮಳೆ ಬಂದು ಕಟ್ಟೆಯಲ್ಲಿ ನೀರು ಇಂಗಿ ತಂಡಿ ಹಿಡಿದರೂ ನೀವು ನಿಮ್ಮ ನಿತ್ಯದ ಯಾತ್ರೆ ಬಿಡಲಿಲ್ಲ" ಎಂದೆ.

"ಅದು ನನ್ನ ತಾವಲ್ಲವೇ ಮಗು?"

"ಅಲ್ಲ, ಅಷ್ಟು ಹೊತ್ತಿಗೆ ಯಾರಪ್ಪ ನಿಮ್ಮನ್ನು ಮಾತನಾಡಿಸುತ್ತ ಕುಳಿತದ್ದು?"

"ಭೂತ ಗೀತವಲ್ಲ; ಅದು ಮನುಷ್ಯರೇ. ಮನುಷ್ಯರು ಮನುಷ್ಯರನ್ನು ಮಾತನಾಡಿಸಬೇಕಲ್ಲ, ಸುಖಕ್ಕಾಗಲೀ ದುಃಖಕ್ಕಾಗಲೀ" ಎಂದರು.

ನಾನು ನಾಚಿ ಸುಮ್ಮನಾದೆ. ಹೆಸರನ್ನು ಅವರಾಗಿ ತಿಳಿಸಲಿಲ್ಲ. ಕೇಳಿದರೆ, "ನಿನಗೇಕೆ ಮಾಣಿ, ಅಧಿಕಪ್ರಸಂಗ?" ಎಂದಾರೆಂಬ ಭೀತಿಯಾಯಿತು.

# ಅಧ್ಯಾಯ 11

ಮಂಜುನಾಥನ ಅವಸ್ಥೆ ಮಾತ್ರ ಏನಾಯಿತೋ ತಿಳಿಯೆ. ನನಗೇನೆ - ಮರುದಿನವೆಲ್ಲ ಮನೆಯ ಚಪ್ಪರ ಅಳಿದು, ಒದ್ದೆ ಮಡಲುಗಳನ್ನು ಒಣಗಹಾಕುವ ಕೆಲಸವಾಯಿತು. ಇರುವ ಸಣ್ಣ ತೋಟದಲ್ಲೂ ಮುರಿದು ಬಿದ್ದ ಕಂಗು, ಬಾಳೆಗಳನ್ನು ಸವರಿ, ಚೊಕ್ಕಟ ಮಾಡುವ ಕೆಲಸವಾಯಿತು. ಮಂಜುನಾಥನ ಪಾಲಿಗೆ ಇದರ ಹತ್ತು ಪಾಲಷ್ಟು ಕೆಲಸ, ಅವಾಂತರಗಳು ಉಂಟಾಗಿಯೇ ಇರಬೇಕು. ಮಳೆರಾಯ ಅವನ ಅಹಂಕಾರಕ್ಕೆ ತಕ್ಕ ಮದ್ದನ್ನರೆದ ಎಂದು ಅಜ್ಜಿ ಹೇಳಿದರೂ, ನಾನು ನನ್ನ ಕೆಲಸ ಮುಗಿಸಿದ ಮೇಲೆ, ಮರುದಿನವಲ್ಲ, ಅದರ ಮರುದಿನ, ಅವನನ್ನು ನೋಡಲು ಹೋಗಿದ್ದೆ. ಅವನ ಮನೆಗಿಂತ ದೊದಲು ಸಿಗುವುದು ಅಮ್ಮನವರ ಗುಡಿ. ಸುದೈವಕ್ಕೆ ಗುಡಿಗೆ ಹಾಕಿದ ಹೊಸ ಹುಲ್ಲು ಚಾವಣಿ ಹಾಗೆಯೇ ಉಳಿದಿತ್ತು. ಆದರೆ, ಉತ್ಸವಕ್ಕಾಗಿ ಮಾಡಿದ ದೊಡ್ಡ ಚಪ್ಪರ ಮಾತ್ರ ಬಹಳ ನಷ್ಟಕ್ಕೆ ಗುರಿಯಾಗಿತ್ತು. ಅದನ್ನು ಅಳಿದು, ಮಡಲನ್ನು ಒಣಗಿಸಿ ದಾಸ್ತಾನು ಮಾಡುವ ಕೆಲಸಕ್ಕೆ ಎರಡು ದಿನ ಹಿಡಿಯಿತಂತೆ. ಅಲ್ಲಿಂದ ಅವನ ಮನೆಗೆ ಹೋದೆ. ಅವನೂ ಅಲ್ಲಿರಲಿಲ್ಲ; ಅವನ ಮಕ್ಕಳೂ ಇರಲಿಲ್ಲ. ಆದರೇನು! ಅವನು ಕಾರುಭಾರಿ; ಸಮಾರಾಧನೆಗಾಗಿ ಕಟ್ಟಿದ ದೊಡ್ಡ ಚಪ್ಪರವನ್ನು ಅಳಿದು, ಒತ್ತರೆ ಮಾಡಿಬಿಟ್ಟಿದ್ದ. ಕೈತುಂಬ ದುಡ್ಡುಕೊಡಲು ಬಂದರೆ ಇದು ಯಾವುದೂ ಹೆಚ್ಚಿನ ಕೆಲಸಗಳಲ್ಲ. ಆಳುಗಳೂ ಬರುತ್ತಾರೆ, ಕೆಲಸವನ್ನೂ  ಮಾಡುತ್ತಾರೆ. ಅಲ್ಲದೆ, ಅವನ ಒಕ್ಕಲುಗಳೂ ಹಾಗಿನವರೇ. ಅವರಿಗೆ ನಾಲ್ಕು ಕಾಸು ಸಾಲ ಕೊಟ್ಟಿರುತ್ತಾನೆ. ಇಲ್ಲದೆ ಹೋದರೆ ಇಂಥ ಸಮಯದಲ್ಲಿ ಯಾರು ಬರುತ್ತಾರೆ? ಮಳೆ ಬಿತ್ತು - ಎಂದರೆ ಗಾರು ಬಡಿದ ಗದ್ದೆಗಳನ್ನು ಉತ್ತು, ಬಿತ್ತಬೇಕು, ಗೊಬ್ಬರವನ್ನು ಚೆಲ್ಲಬೇಕು. ನನ್ನ ಒಕ್ಕಲುಗಳಂತು "ಇನ್ನು ಮೂರು ದಿವಸ ನಮಗೆ ಯಾವ ಕೆಲಸವನ್ನೂ ಹೇಳಬೇಡಿ" ಅಂದಿದ್ದಾರೆ. ಅವನ ಸ್ಥಿತಿ ಮಾತ್ರ ನನ್ನದಕ್ಕಿಂತಲೂ ಬಹಳ ಉತ್ತಮವಾಗಿತ್ತು. ಅವನಿಗೆ ಸಾಕಷ್ಟು ಸಂಪಾದನೆಯೂ ಇದೆ. ಆತ ದುಡ್ಡಿಗೆ ಹೆದರುವವನೂ ಅಲ್ಲ. ಪೂಜೆ, ಸಮಾರಾಧನೆಗಳ ವಿಷಯಗಳಲ್ಲಿ ಒಂದಿಷ್ಟೂ ಕೈ ಹಿಂದೆ ಮಾಡಿದ್ದನ್ನು ಕಾಣೆ.

ಅವನು ಮನೆಯಲ್ಲಿಲ್ಲದಿದ್ದರೂ, ಅವನ ಮಡದಿಯಾದ - ಶ್ರೀದೇವಮ್ಮ ಬಾಯಿ ತುಂಬ ಉಪಚಾರ ಮಾಡಿದಳು. ತಿಂಡಿ, ಕಾಫಿಗಳನ್ನು ಕೊಟ್ಟಳು. ಅನಂತರವಲ್ಲ, ಆ

ದೊಡಲೇನೆ, ಮಳೆ ಮಾಡಿದ ಉಪದ್ವ್ಯಾಪವನ್ನು ಕುರಿತು ಬಣ್ಣಿಸಿದಳು. ಅಷ್ಟನ್ನು ಹೇಳುತ್ತ, ಅವೇ ಮಾತುಗಳ ಎಡೆಯಲ್ಲಿ "ನೀವು ಬೇಸರ ಮಾಡಬಾರದು. ನಮ್ಮವರಿಗೆ ನಿಮ್ಮ ಅಜ್ಜಿ ಒಂದು ಮಾತೆಂದರಂತೆ - ಅವರಿಗೆ ಬಹಳ ಠೇಂಕಾರ - ಅಂದರಂತೆ. ನಾವು ಏನು ಮಾಡಿದ್ದೇವೆ ಅಂಥ ಠೇಂಕಾರದ ಕೆಲಸ?" ಎಂದು ಪ್ರಶ್ನಿಸಿದಳು.

"ಹಾಗೆ ಹೇಳಿದಂತೆ ಇಲ್ಲವಲ್ಲ" ಎಂದೆ ನಾನು.

"ದೊನ್ನೆ ನಿಮ್ಮ ಮನೆಗೆ ಬಂದಿರಲಿಲ್ಲವೇ? ಆಗ ಅವರ ಮುಖಕ್ಕೇನೆ ಅಜ್ಜಿ ಹೇಳಿದರಂತೆ. ಮಳೆ ಗಾಳಿ ಬಂದಿದ್ದನ್ನು ನೋಡಿ ಹೇಳಿದರಂತಲ್ಲ. ಅಮ್ಮನವರ ಸೇವೆಯನ್ನು ನಾವು ಠೇಂಕಾರದಿಂದ ಮಾಡಿದ್ದೇ?" ಎಂದು ಪ್ರಶ್ನಿಸಿದಳು.

ನನ್ನ ಮನಸ್ಸಿನಲ್ಲಿಯೂ ಅಜ್ಜಿ ಹಾಗೇತಕ್ಕೆ ಮಾತನಾಡಿದರು - ಎಂದೇ ಅನಿಸಿತ್ತು. ಆದರೂ, ಅವರ ಪಕ್ಷವನ್ನು ಬಿಡುವುದಕ್ಕಾಗದೆ, "ಅವರು ಒಟ್ಟು ರಾಶಿ ಯೋಚನೆ ಮಾಡದೆ ಹೇಳಿರಬೇಕು. ಮಳೆ ಬಾರದೆ ಹೋದರೆ, ದೇವರಿಗೆ ಸಿಟ್ಟು ಬಂದಿದೆ, ಅನ್ನುವುದಿಲ್ಲವೇ - ನಾವು? ಹಾಗೆಯೇ ಆವತ್ತು ಗಾಳಿಯ ಪ್ರಕೋಪವನ್ನು ಕಂಡು, ಆ ಅರ್ಥದಲ್ಲಿ ಒಂದು ಮಾತು ಆಡಿದರು. ನಮ್ಮ ಮನೆಯ ಚಪ್ಪರ ಅದೇ ಮಳೆಗೆ ಹುಡಿಯಾಗಲಿಲ್ಲವೇ? ಹಾಗಿದ್ದರೆ ಅವರ ಮಾತು ನನಗೂ ನಾಟಬೇಕಲ್ಲಾ" ಎಂಬ ಸಮಾಧಾನವನ್ನು ಹೇಳಿದೆ ನಾನು. ಆಕೆಗೆ ಸಮಾಧಾನವಾಗಿರಲಾರದು.

ಆಕೆ "ಎಷ್ಟೆಂದರೂ ನಿಮ್ಮ ಅಜ್ಜಿಯ ಬಾಯಿ ಹೆಚ್ಚಪ್ಪ. ಯಾವುದನ್ನು ಆಡಬಾರದು, ಯಾವುದನ್ನು ಆಡಬಹುದು - ಎಂದು ಯೋಚಿಸದೆಯೇ ಹಿಂದು ಮುಂದು ನೋಡದೆಯೇ ಆಡಿಬಿಡುತ್ತಾರೆ. ನಮ್ಮ ಯಜಮಾನರು ಅಷ್ಟೊಂದು ಪ್ರೀತಿಯಿಂದ ಅವರನ್ನು ಕರೆದರೆ, ಇಲ್ಲಿಗೆ ಬಂದವರು, ಇಲ್ಲಿ ದೇವರ ಪ್ರಸಾದದ ಊಟ ಮಾಡದೆ ತಿಪ್ಪಜ್ಜಿ ಮನೆಗೆ ಹೋಗಿ ಉಂಡು ಬಂದರಲ್ಲ! ಇದಾದರೂ ಯಾವ ಚಂದ?" ಎಂದು ಕೇಳಿದಳು.

ಕರೆದುಕೊಂಡು ಹೋದದ್ದು ನಾನು; ಅವರು ಹಾಗೆ ಅಪೇಕ್ಷೆ ಮಾಡಿದರು ಎಂದು ಕರೆದುಕೊಂಡು ಹೋದೆ. ಅವರಿಗೆ ಹತ್ತು ಜನರ ಎಡೆಯಲ್ಲಿ ಕುಳಿತು ಊಟ ಮಾಡುವುದಕ್ಕೆ ಸರಿ ಹೋಗುವುದಿಲ್ಲ. ಗುರುತಿಲ್ಲದಿದ್ದರೂ, ಜನಗಳು ಹತ್ತಿರ ಬಂದರೂ, ಬಂದವರ ಸ್ವಭಾವ - ಎಂಬುದು ಅವರಿಗೆ ಗೊತ್ತಾಗುತ್ತದೆ. ಆಗ ಅವರು ಏನಾದರೂ ಮುಖಕ್ಕೆ ಅಂದುಬಿಟ್ಟರೆ? ಅಂಥ ಪ್ರಸಂಗವನ್ನು ತಪ್ಪಿಸಿದ ಹಾಗೂ ಆಯಿತು. ತಿಪ್ಪಜ್ಜಿ ಅವರ ಹಳೆಗಾಲದ ಸ್ನೇಹಿತೆ; ಕುರುಡಿ. ಎಷ್ಟೋ ವರ್ಷವಾಗಿತ್ತು ನೋಡದೆಯೆ. ಆದ್ದರಿಂದ ಅವಳನ್ನು ನೋಡಿ, ಮಾತಾಡಿ ಸಂತೋಷಪಡಲೆಂದು ಕರೆದುಕೊಂಡು ಹೋದೆ ನಾನು. ಆ ಹಿರಿಯಳ ಒತ್ತಾಯಕ್ಕೆ ನಾವಿಬ್ಬರೂ ಅಲ್ಲೇ ಊಟವನ್ನು ಮಾಡಿಯೂ ಮಾಡಿದೆವು.

ಅವರು ದೇವರ ಪ್ರಸಾದವನ್ನು ಮಾತ್ರ ತೆಗೆದುಕೊಂಡರು. ಇಷ್ಟು ಸಣ್ಣ ವಿಷಯ ಹೀಗೆ ದೊಡ್ಡದಾದೀತು - ಎಂದು ನಾನು ಎಣಿಸಿರಲಿಲ್ಲ. ಅದಕ್ಕಾಗಿಯೇ ನಾನೆಂದೆ -

"ಶ್ರೀದೇವಮ್ಮ, ಈ ವಯಸ್ಸಿನಲ್ಲಿ ನಮ್ಮ ಅಜ್ಜಿಯ ಬಾಯಿಗೆ ನಾನು ಲಗಾಮು ಹಾಕಬಲ್ಲೆನೇ? ಅವರಿಗೆ ಅರಳು ಮರುಳು - ಅಂತ ಲೋಕಕ್ಕೇ ಗೊತ್ತು. ಅವರು ಮನೆಯಿಂದ ಹೊರಗೆ ಹೊರಡುವವರೂ ಅಲ್ಲ. ಹೊರಟಿದ್ದು, ಹೊರಡಿಸಿದ್ದು ಮಂಜುನಾಥನ ಒತ್ತಾಯಕ್ಕೆಂಬುದು ನಿಜ. ಅವರು ಏನೂ ಅಂದಿರಬಹುದು; ಮಾಡಿರಬಹುದು. ನನ್ನನ್ನು ನೋಡಿ ಮರೆತುಬಿಡಿ. ಮಂಜುನಾಥ ಸಿಕ್ಕಿದರೆ ಅವನಿಗೂ ಅದೇ ಮಾತನ್ನು ನಾನು ಹೇಳುತ್ತೇನೆ; ಆಯಿತಲ್ಲ" ಎಂದೆ.

ಅವಳಿಗೆ ಸಮಾಧಾನವಾಯಿತೋ ಇಲ್ಲವೋ, ನನಗಂತು ತಿಳಿಯಲಿಲ್ಲ. ನಾನು ನಿರುತ್ಸಾಹದಿಂದಲೇ "ಇವತ್ತು ಬೆಳಗ್ಗೆ ಏಳುವಾಗ ನಾನು ಯಾರ ಮುಖ ನೋಡಿದ್ದೇನೋ?" ಎಂದುಕೊಂಡು ಮನೆಯ ಕಡೆಗೆ ಹೊರಟೆ. ಅಮ್ಮನವರ ಗುಡಿಯ ಕಾಡಿನ ಸಂದು ಕಳೆಯಿತು. ಮುಂದಣ ಹಾದಿ ಬಂತು. ನನ್ನ ತಲೆ ಎಲ್ಲೆಲ್ಲಿಯೋ ಸುತ್ತುತ್ತಿತ್ತು. ದಾರಿಯಲ್ಲಿ ಬರುತ್ತ ನನಗೆ ತಿರುಗಿ ಕಾಣಿಸಿದ್ದು ಆ ಹಾಳು ಅರೆ, ಹಾಸುಶಿಲೆ. ಅಲ್ಲಿಗೆ ಏತಕ್ಕೆ ನಾನು ಬಂದೆನೆಂದು ನನ್ನ ಬುದ್ಧಿಗೆ ಹೊಳೆಯಲಿಲ್ಲ. ನಿಂತೆ ಅಲ್ಲಿ; ನನ್ನ ಕಿವಿಗೂ "ಇಂದ್ರಾಯ ಸ್ವಾಹಾ ಇಂದ್ರಾ ಇದನ್ನಮಃ" ಎಂಬ ಮಂತ್ರ ಕೇಳಿದ ಹಾಗಾಯಿತು. ನಗು ಬಂತು; ಕಿವಿ ನಿಮಿರಿಸಿದೆ. ಆಗ ಮುಂದಣ ಮಂತ್ರಗಳೂ ಕೇಳಿಸಿದ ಹಾಗಾಯಿತು. ಆ ಮಂತ್ರದ ಮರುಳು ಬಿಡುವುದಕ್ಕೆ ಹತ್ತು ನಿಮಿಷ ಹಿಡಿಯಿತು. "ಇಲ್ಲ, ಖಂಡಿತಕ್ಕೂ ಇದೊಂದು ಕಾರಣಿಕದ್ದೇ ಸ್ಥಳ. ಏನೋ ಇದೆ ಇಲ್ಲಿ - ಪೂರ್ವಕಾಲದ ಅವಶೇಷ. ಇನ್ನೊಮ್ಮೆ ಇಲ್ಲಿಗೆ ನಾನು ಬರಲೇಬೇಕು. ಅಜ್ಜಿಯನ್ನು ಕರೆದುಕೊಂಡೇ ಬರಬೇಕು. ಅವರನ್ನು ಈ ವಠಾರದಲ್ಲಿ ತಿರುಗಾಡಿಸಬೇಕು. ಆ ತಗ್ಗಿನ ಗಿಡಮರಗಳ ಹೊದರಿಗೂ ಅವರನ್ನು ಕರೆದೊಯ್ಯಬೇಕು. ಅದಕ್ಕಿಂತ ಮುಂಚೆ, ನಾಲ್ಕು ಆಳುಗಳನ್ನು ಕರೆತಂದು ಅಲ್ಲಿರುವ ಬಲ್ಲೆಗಳನ್ನು ಸವರಿ, ಎಲ್ಲಿ ಏನಿದೆ - ಎಂದು ಶೋಧಿಸಿ ನೋಡಬೇಕು" ಎಂಬ ವಿಚಾರ ಹೊಳೆಯಿತು. ಸ್ವಲ್ಪ ದೂರ ನಡೆದು, ಆ ತಗ್ಗಿನ ತನಕ ಹೋದೆ. ಬಲ್ಲೆ ಬಲ್ಲೆಯೇ! ಅದರೊಳಕ್ಕೆ ಕಾಡುಗಿಡಗಳ ಜತೆಗೇ ಕೇದಗೆ, ಮುಂಡಕಗಳ ಗಿಡಗಳು ದಟ್ಟವಾಗಿ ಬೆಳೆದಿದ್ದವು. ಅಲ್ಲಿ ಹಳೆಗಾಲದ ಬಾವಿಯೊಂದಿದ್ದಿರಲೂಬಹುದು - ಎಂಬುದಾಗಿ ಮೊದಲೇ ತರ್ಕಿಸಿದೆ. ಅರೆಯ ಹತ್ತಿರವಿರುವ ನೀರು ಮರಿಗೆಗೆ ಅಲ್ಲಿಂದಲೇ ನೀರನ್ನು ಒಯ್ಯುತ್ತಿದ್ದರು - ಎಂಬುದಾಗಿ ತರ್ಕ ಮಾಡಿದೆ. "ಬರಿಯ ಬಾವಿಯೊಂದೇ ಇದ್ದೀತೇ? ಅಥವಾ ಇನ್ನೇನಾದರೂ ಹೆಚ್ಚಿಗೆ ಇದ್ದೀತೇ" ಎಂಬ ವಿಚಾರವೂ ಹೊಳೆಯಿತು. ಅಷ್ಟರಲ್ಲಿ, ಸರಕ್ಕನೆ ಏನೋ ಒಂದು ಪ್ರಾಣಿಯು ಸರಿದು ಹೋದ ಸದ್ದಾಯಿತು. ಕಿವಿಗೊಟ್ಟು

ಅದನ್ನಾಲಿಸಿದೆ. ತರಗೆಲೆಗಳ ಮೇಲೆ ಯಾವುದೋ ಸರಿದು ಹೋಗುವ ಸದ್ದು ಅದು. ಕಣ್ಣಿನ ಮೇಲೆ ಕಣ್ಣು ಹಾಕಿ, ನಿಂತಲ್ಲಿಯೇ ಆಚೀಚಿ ನೋಡಿದೆ. ಸರಿದ ಪ್ರಾಣಿಯನ್ನು ಕಂಡಾಗ ಎದೆ 'ಅಜಪ್' ಆಯಿತು. ಶುದ್ಧ ಹಳದಿ ಬಣ್ಣದ ನಾಗರ ಹಾವು! ಕೇದಗೆಯ ಬನಕ್ಕೂ ನಾಗರಹಾವಿಗೂ ನಂಟು - ಎಂಬುದು ಅನುಭವದ ಮಾತು. ಅದು ನಾಗರ ಹಾವಾಗಿರುವ ಬದಲು ಕಾಳಿಂಗನ ಹಾವಾಗಿದ್ದರೆ ಆ ದಿವಸ ನನಗೆ ಸುಳಿದಿಡಬೇಕಿತ್ತು. ಮಾರುದ್ದದ ಹಾವು; ಅಲ್ಲಿಂದ ತನ್ನಷ್ಟಕ್ಕೇ ಹೊರಟು ಹೋಯಿತು. ಆಗ ಆ ಹೊದರನ್ನು ಸವರುವ ವಿಷಯದಲ್ಲಿ ಅನುಮಾನ ಮೂಡಿತು ಮನಸ್ಸಿನಲ್ಲಿ. "ಇಲ್ಲಿ ಹಿಂದೊಂದು ನಾಗನ ಬನ ಇದ್ದಿತ್ತೇ" ಎಂಬ ಸಂಶಯ ಬಂತು. ಇನ್ನೊಂದು ವಿಚಾರವಿದೆ. ಇಲ್ಲಿ ನಾಗರ ಹಾವಿದೆ ಎಂದರೆ, ಯಾವೊಬ್ಬನೂ ಕೆಲಸಗಾರ ಬರಲಾರ. ಬನ ಸವರುವ ಉಸಾಬರಿಗೆ ಹೋಗಲಾರ. ಆಗ ನನ್ನ ಆಸೆ ಬರಿದೆ ಉಳಿದೀತು. ಆದುದರಿಂದ ಅದು ಕೆಲಸದವರೊಡನೆ ಹೇಳುವ ವಿಚಾರವಲ್ಲ - ಎಂದು ತೀರ್ಮಾನಿಸಿದೆ. ಮರುಕ್ಷಣಕ್ಕೆ ಮತ್ತೊಂದು ವಿಚಾರ ಮೂಡಿತು! ಸರ್ಪ ಇರುವಲ್ಲಿ ನಿಧಿ ಇರುತ್ತದೆ - ಅನ್ನುತ್ತಾರೆ ಜನರು. ಇಲ್ಲಿಯೂ ನಿಧಿ ಇದೆಯೋ ಏನೋ. ಕಲ್ಲು ಮಂಟಪದ ಕೆಳಗೆ ಅದು ಇದ್ದೇ ಇದೆ ಎಂಬುದನ್ನು ಕೇಳಿದ್ದೇನೆ. ಇಲ್ಲಿಯೂ ನಿಧಿ ಏತಕ್ಕೆ ಇರಬಾರದು? ಅಂದರೆ ನೋಡಿ, ನಮ್ಮ 'ಮೂಡೂರಿನಲ್ಲಿ ಮುನ್ನೂರು ಗುಡಿ' ಎಂಬ ಹಳೆಯ ಗಾದೆಯೊಂದಿದೆ. ಹಿಂದೆ ಇಲ್ಲಿ ಆಳಿದಂಥ ಪ್ರಸಿದ್ಧ ಅರಸರೂ ಇದ್ದರಂತೆ. ಗೆರಸೊಪ್ಪೆಯ ಹಾಗೆಯೇ ಇದು ಒಂದು ಕಾಲದಲ್ಲಿ ಬಹಳ ದೊಡ್ಡ ನಗರವಾಗಿದ್ದಿರಬೇಕು. ಅಲ್ಲಿ, ಇಲ್ಲಿ, ಎಲ್ಲಿ ನೋಡಿದರೂ ಗುಡಿಗಳ ತಳಪಾಯಗಳು ಕಾಣಸಿಗುತ್ತವೆ, ನಿಜ. ಹಾಗೆ ನಮ್ಮಲ್ಲಿ ಮುನ್ನೂರು ಗುಡಿಗಳೇ ಇಲ್ಲದಿರುವಾಗ, ಮೂರು ಸಾವಿರವೋ ಅಥವಾ ಮೂವತ್ತು ಸಾವಿರವೋ ಮನೆಗಳಿದ್ದಿರಬೇಕಲ್ಲ. ಮೂವತ್ತು ಸಾವಿರ ಅಂದರೆ ಸ್ವಲ್ಪ ಹೆಚ್ಚೇ ಆಯಿತೆನ್ನಿ. ಮೂರು ಸಾವಿರ ಕಡಿಮೆಯಾಯಿತು. ಅಂತು, ನಮ್ಮ ಊರು ಸಂಪತ್ಸಮೃದ್ಧ ದೊಡ್ಡ ನಗರವಾಗಿತ್ತು ಎಂಬುದರಲ್ಲಿ ಅನುಮಾನವಿಲ್ಲ. ಆ ಕಾಲದಲ್ಲಿ ಹಿಂಡುಗಾನ ಅಮ್ಮನವರು ಕೊಲ್ಲೂರು ಮೂಕಾಂಬಿಕೆಗಿಂತಲೂ ಪ್ರಸಿದ್ಧವಾಗಿರಲೂಬಹುದು - ಎಂದು ತೋರಿತು. ಆ ಯೋಚನೆಯ ಒಟ್ಟಿಗೇ ಕಲ್ಪನೆಯ ಕುಡಿಗಳು ಒಡೆಯುವುದು ಬೇಗ. ಸಂಪತ್ತು, ನಾಗ, ನಿಧಿ - ಈ ಮೂರು ಶಬ್ದಗಳು ಹೂತಿಟ್ಟ ಕೊಪ್ಪರಿಗೆಯೊಂದರ ಕಡೆಗೆ ಮನಸ್ಸನ್ನು ಸೆಳೆದುವು. 'ಈ ಸ್ಥಳದಲ್ಲಿ ನನಗೆ ಕೊಪ್ಪರಿಗೆಯೊಂದು ಸಿಕ್ಕಿ, ಕೈತುಂಬ ನಗನಾಣ್ಯ, ಮುತ್ತು ರತ್ನಗಳು ಸಿಕ್ಕಿದ್ದಾದರೆ' ಎಂಬ ಆಸೆಯೂ ಮೂಡಿತು. ಹಾಗೆಲ್ಲಾದರೂ ಆದರೆ, "ಮಂಜುನಾಥನನ್ನು ಮೀರಿಸುವ ಸಮಾರಾಧನೆ ಊಟವನ್ನು ಸಾವಿರ ಜನರಿಗೆ ಮಾಡಿಸುತ್ತೇನೆ" ಅಂದುಕೊಂಡೆ. ಅಲ್ಲಿಂದ ಹೊರಟು, ತಿರುಗಿ ಹಾಸುಗಲ್ಲಿದ್ದಲ್ಲಿಗೆ ಬಂದೆ. ಕಣ್ಣೆದುರಿಗೆ ನಿಂತ ಕಲ್ಲು ಕಾಣಿಸಿತು. ಕಲ್ಲಿನ ಬಾಣೆಯೂ ಕಾಣಿಸಿತು. ದೊನ್ನೆ ಬಿಸಿಲ ಜಳದಲ್ಲಿ ನಾಗಿಯು ಬೆತ್ತದ ಹೊರೆಯನ್ನು ಕಂಬಕ್ಕೊರಗಿಸಿ ಬೆವರನ್ನು ಹಿಂಡುತ್ತಿದ್ದ ಚಿತ್ರವೂ ಕಣ್ಣಿಗೆ ಕಾಣಿಸಿತು. ಅವಳ ಜತೆಯಲ್ಲಿದ್ದ

ಇಬ್ಬರು ಮಕ್ಕಳೇಕೋ ಕಾಣಿಸಲಿಲ್ಲ. ಅದರ ಬದಲು, ಇಬ್ಬರು ನಾಗಿಯರು ಕಾಣಿಸಿದರು. ಬಲು ಹಿಂದೆ ಒಂದು ಜಾತ್ರೆಯ ದಿವಸ ಕಾಸು ಕೊಡಲು ಹೋದಾಗ ನಾನು ಕಂಡ ಪ್ರಾಯದ ಚೆಲುವೆಯೊಬ್ಬಳು; ನಮ್ಮೂರ್ರ ವಠಾರವನ್ನೇ ಬಿಟ್ಟು ಪಡುವಣದ ಯಾವುದೋ ಒಂದು ಹಳ್ಳಿಗೆ ಹೋಗಿ, ದುಡಿದು, ಜೀವ ಹಿಡಿದುಕೊಂಡ ಕಷ್ಟಾಳುವಾದ ಬಡ ನಾಗಿ ಇನ್ನೊಬ್ಬಳು.

ಅವಳ ನೆನವರಿಕೆ ಬರುತ್ತಲೇ, ನಮ್ಮ ಅಜ್ಜಿ ಅವಳೊಡನೆಯೇ ಕುಳಿತು ದೀರ್ಘವಾದ ಸಂಭಾಷಣೆ ನಡೆಸುತ್ತಿದ್ದ ಚಿತ್ರ ಕಣ್ಣಿಗೆ ಕಟ್ಟಿತು. ಅವರ ಮಾತಿಗೆ ಕಿವಿಗೊಡಲು ಬಂದ ನನ್ನನ್ನು ಛೇಡಿಸಿ ಆಡಿದ ಮಾತುಗಳು ನೆನಪಿಗೆ ಬಂದುವು. ಮರುದಿವಸ ರಾಮಣ್ಣ ಮಳೆಯಲ್ಲಿ ನೆನೆದು, ನಮ್ಮ ಮನೆಗೆ ಬಂದಾಗ ಅಜ್ಜಿ ಅವನೊಡನೆ ದೀರ್ಘ ಸಂಭಾಷಣೆಯನ್ನು ನಡೆಸಿದ್ದೂ ನೆನಪಿಗೆ ಬಂತು. ಎಷ್ಟೆಂದರೂ ಆ ನಾಗಿ ಅವನನ್ನೊಮ್ಮೆ ಕೈಹಿಡಿದ ದೋಹದ ಹೆಂಡತಿ. ಮುಂದೆ ಮಾತ್ರ ಊರವರು ಅವಳನ್ನು ಜಾತಿಯಿಂದ ಹೊರಗೆ ಇರಿಸಿರಲೂ ಬಹುದು. ಅವಳು ಅಡ್ಡದಾರಿಯನ್ನು ಹಿಡಿದ ಮೇಲೆಯೂ ಈ ರಾಮಣ್ಣನಿಗೆ ಅವಳಲ್ಲಿನ ದೋಹ ಹೋಗಲಿಲ್ಲ - ಎಂದು ಎಲೆ ಅಡಿಕೆ ಸಂಚಿ ಹೇಳಿತು. ಆ ಸಂಚಿಯನ್ನು ನಮ್ಮ ಮನೆಯಲ್ಲಿ ಮರೆತು ಹೋದ ರಾಮಣ್ಣ, ಚಿನ್ನದ ಒಡವೆಯನ್ನು ಮರೆತು ಬಿಟ್ಟವನ ಹಾಗೆ ಗಾಬರಿಗೊಂಡು ಮರಳಿ ಬಂದು, ಅದನ್ನು ತೆಗೆದುಕೊಂಡು ಹೋದ ಕತೆ ನೆನಪಿಗೆ ಬಂದಿತು. ಅವನು ಅವಳನ್ನು ಎಂದೂ ಮರೆತಿರಲಿಲ್ಲ. ಅವಳ ನೆನಪಿಗೇನೇ ಆ ಸಂಚಿಯನ್ನಿರಿಸಿಕೊಂಡದ್ದು. ಆ ಪುಣ್ಯಾತ್ಗಿತ್ತಿ ಮಾತ್ರ ಏನೇನೋ ಆದಳು. ಅವಳು ಹಾದರಕ್ಕಿಳಿದಳು ಎಂದು ತಿಳಿದ ಮೇಲೆ ರಾಮಣ್ಣ ಅವಳನ್ನು ಮರೆಯಬಹುದಿತ್ತು. ಆದರೆ ಆತ ಇನ್ನೊಂದು ಹೆಣ್ಣಿನ ಮುಸುಡನ್ನೇ ನೋಡಲಿಲ್ಲ - ಎಂಬುದನ್ನು ನೆನೆಯುವಾಗ, 'ಅಯ್ಯೋ ಪಾಪ' ಎನಿಸಿತು ನನಗೆ. ನಮ್ಮ ಅಜ್ಜಿ ಅನ್ನುತ್ತಿರುವ ಹಾಗೆ ಗಂಡು ಹೆಣ್ಣಿನ ದೋಹ ದೊಡ್ಡದು. ಪುರಾಣಗಳು ಹೇಳುವ ಹಾಗೆಯೇ ಶಿವ-ಪಾರ್ವತಿ, ವಿಷ್ಣು-ಲಕ್ಷ್ಮಿಯರು ಮೇಲಿಂದ ಮೇಲೆ ಅವತಾರ ತಾಳಿದರೂ, ಪ್ರತಿ ಜನ್ಮದಲ್ಲೂ 'ಅವನೇ ಗಂಡ, ಅವಳೇ ಹೆಂಡತಿ' ಆಗಿ ಮದುವೆಯಾಗಿ ಬಾಳಿದರು, ಬನ್ನಪಟ್ಟು, ಆ ಮೇಲೆ ತಮ್ಮ ಅವತಾರ ಕಳಚಿದರು. ದೇಹ ಇದ್ದರೇನೆ ಆತ್ಮ. ಆತ್ಮಕ್ಕೆ ದೇಹದ ಮೂಲಕ ಮಾತ್ರ ಸುಖ, ಸಂತೋಷ, ದುಃಖವೂ ಇರುತ್ತದೆ ಅನ್ನಿ; ಸುಖ ಬೇಕಾದರೆ ಅದು ಕೂಡ ಇರಲೇಬೇಕಲ್ಲ, ದೇವರಿಗೆ ಮಾತ್ರ ಇದೆಲ್ಲ ಸಾಧ್ಯ. ಜನಕರಾಯನ ಮಗಳಾಗಿ ಲಕ್ಷ್ಮಿ ಹುಟ್ಟಬಹುದು. ದಶರಥರಾಯನ ಮಗನಾಗಿ ವಿಷ್ಣುವೂ ಹುಟ್ಟಬಹುದು. ಸೀತೆಗೆ ಒಂದು ಸ್ವಯಂವರ ನಿರ್ಣಯವಾದರೂ, ಅದಕ್ಕೆಂದೇ ನೂರಾರು ಜನ ಅರಸು ಮಕ್ಕಳು ಓಡಿ ಬಂದರೂ, ಖುದ್ದು ರಾವಣಾಸುರ ಬಂದರೂ, ಬಿಲ್ಲು ಹಿಡಿದರೂ, ಸೀತೆ ಮಾತ್ರ ರಾಮನದೇ ಹೆಂಡತಿಯಾಗುವುದು ಸಾಧ್ಯ. ಉಳಿದವರಿಗೆ ಸಾಧ್ಯವೇ?

ಇದನ್ನು ನೆನೆದಾಗ ನನಗೊಂದು ನಗುವೂ ಬಂತು. ನನ್ನ ಹೆಂಡತಿಯ ಹೆಸರೂ ಸೀತೆಯಷ್ಟೆ. ಇವಳೂ ಹೀಗೆಯೇ ಜನ್ಮ ಜನ್ಮಾಂತರದಿಂದಲೂ ನನ್ನನ್ನು ಬೆನ್ನಟ್ಟಿ ಬಂದವಳಿರಬಹುದೇ - ಎನಿಸಿತು. ಹಿಂದೆಯೂ ಇವಳು ನನ್ನನ್ನು ಸ್ವಲ್ಪ ಮಟ್ಟಿಗಾದರೂ ಹೆದರಿಸಿಕೊಂಡೇ, ನನ್ನವಳಾಗಿ ಮನೆಯನ್ನು ನಡೆಸಿದ್ದಾಳು - ಎಂದೂ ಅನಿಸಿತು. ಅಜ್ಜಿಯನ್ನು ಈ ವಿಚಾರದಲ್ಲಿ ಪ್ರಶ್ನಿಸಬೇಕು - ಎಂದು ನಿರ್ಧಾರ ಮಾಡಿದೆ. ಸಾವಿರಾರು ವರ್ಷಗಳ ಹಿಂದಿನ ಕತೆಯನ್ನು ಹೇಳುವಷ್ಟು ಅಂತರ್‌ದೃಷ್ಟಿಯುಳ್ಳವರು. ಅವರು ಸಹ ತಮ್ಮ ಪೂರ್ವಜನ್ಮದ ವಿಚಾರವನ್ನು ಯಾಕೆ ತಿಳಿದುಕೊಂಡಿರಬಾರದು - ಎನಿಸಿತು. ಅಂಥದೊಂದು ಇರುವುದಾದರೆ, ನಮ್ಮ ರಾಮಣ್ಣನಿಗೆ ಈ ಜನ್ಮದಲ್ಲಿ ಆ ನಾಗಿ ಸಿಗದೇ ಹೋದರೂ, ಇನ್ನೊಂದು ಜನ್ಮದಲ್ಲಾದರೂ ಅವನಿರಿಸಿದ ಪ್ರೀತಿಗೆ ಬಹುಮಾನವಾಗಿ, ದೇವರು ಅದೇ ನಾಗಿಯನ್ನು ಅವನಿಗೆ ಕೊಡಿಸಲಾರನೇ - ಎಂಬ ಬಯಕೆ ಉಂಟಾಯಿತು.

ಅದೇ ನಾಗಿಯನ್ನೇ? ತನ್ನ ಮೆಚ್ಚಿನ ಗಂಡನನ್ನು ಬಿಟ್ಟು, ಏಕಾಯೇಕಿ ಓಡಿಹೋದವಳನ್ನೇ? ಈಗೇನೋ ತುಂಬ ಪಾಪದವಳಾಗಿ ಕಾಣಿಸುತ್ತಿದ್ದಾಳೆ, ನಿಜ; ಆದರೆ ಅವಳೇ ಹೇಳಿದ ಹಾಗೆ 'ಎಂಜಲಾದವಳಲ್ಲವೇ?' ಎಂದು ಅನಿಸಿತು. ಅಷ್ಟಕ್ಕೆ ಇನ್ನೊಂದು ಪುರಾಣದ ಕತೆ ಅಡ್ಡ ಬಂದಿತು; ಅದೂ ರಾಮಾಯಣದ್ದೇ. ಗೌತಮನ ಹೆಂಡತಿ ಅಹಲ್ಯೆ ಏನು ಮಾಡಿದಳಂತೆ? ಉದ್ದೇಶಪಟ್ಟೋ, ಪಡದೆಯೋ ಅವಳು ಒಂದು ದಿನ 'ಇಂದ್ರಾಯ ಸ್ವಾಹಾ' ಆಗಲಿಲ್ಲವೇ? ಗೌತಮರು ಶಾಪ ಕೊಟ್ಟರು; ಇವಳು ಕಲ್ಲಾಗಿ ಬಿದ್ದಳು. ರಾಮನಿಂದ ತಿರುಗಿ ಹೆಣ್ಣಾದಳು. ಹಾಗೆ ಹೆಣ್ಣಾದ ಮೇಲೆ, ಅವಳು ಗೌತಮನನ್ನು ಸೇರಿದಳೋ, ಇಲ್ಲವೋ ಎಂದು ಆ ಕತೆ ಹೇಳುವುದಿಲ್ಲ. ಹೇಳಿದ್ದು ನನಗಂತು ತಿಳಿಯದೆ ಹೋದರೂ, ಅವಳು ಅದೇ ಗೌತಮರ ಬಳಿಗಲ್ಲದೆ ಇನ್ನೆಲ್ಲಿಗೆ ಹೋದಾಳು? ಆ ಅಹಲ್ಯೆ ಶಾಪದಿಂದ ಹಣ್ಣಾದಷ್ಟೇ ಈ ನಾಗಿಯೂ ಹಣ್ಣಾಗಿದ್ದಾಳೆ - ಎಂದು ನನಗನ್ನಿಸುತ್ತಿದೆ. ಇನ್ನೊಂದು ಜನ್ಮದಲ್ಲಿ ರಾಮಣ್ಣನಿಗೆ ಅವಳು ಸಿಕ್ಕಿಯೇ ಸಿಗುತ್ತಾಳೆ. 'ಸಿಗಲೇಬೇಕು' ಎಂಬುದು ನನ್ನ ಅಪೇಕ್ಷೆ. ಹಾಗಾದರೆ ಏನಾದ ಹಾಗಾಯಿತು? ಅವನಿಗೆ ಅವಳು ಸಿಕ್ಕಿದರೂ ಕೂಡ ಏನು ಪ್ರಯೋಜನ? ಇನ್ನೊಂದು ಜನ್ಮದಲ್ಲಿ ರಾಮಣ್ಣ ಗಾಣದ ರಾಮಣ್ಣನಾಗಿ ಹುಟ್ಟುತ್ತಾನೆಯೇ? ಅಥವಾ ನಾಗಿ ಅದೇ ನಾಗಿಯಾಗಿ ಹುಟ್ಟುತ್ತಾಳೆಯೇ? ಪೂರ್ವಜನ್ಮದ ಸ್ಮರಣೆಗಳು ಅವಳಿಗಿರುತ್ತವೆಯೇ; ಅಥವಾ ಇವನಿಗಿರುತ್ತವೆಯೇ? ತಿರುಗಿ ಅವರಿಬ್ಬರೂ ಗಂಡ ಹೆಂಡಿರಾಗಿ ಒಟ್ಟುಗೂಡುತ್ತಾರೆ... ಎಂಬ ಭರವಸೆಯಾದರೂ ಎಲ್ಲಿದೆ? ಖಂಡಿತಕ್ಕೂ ಇಲ್ಲ.

ಅದೇ ವಿಚಾರವನ್ನು ಮುಂದುವರಿಸಿದಾಗ, ನನಗೆ ನನ್ನ ಸೀತೆಯ ನೆನಪು ಬಂದಿತು. ನಾವು ಸಹ ನಮ್ಮ ಈ ಜೀವನದಲ್ಲಷ್ಟೇ ಗಂಡ ಹೆಂಡಿರಾದವರು; ಮುಂದಿನ ಜನ್ಮದಲ್ಲಿಯೂ

ಗಂಡ ಹೆಂಡಿರಾಗಿಯೇ ಹುಟ್ಟುತ್ತೇವೆ - ಎಂಬ ಖಾತ್ರಿ ಇದೆಯೇನು? ಒಮ್ಮೆ ಹಾಗೆ ಆದರೂ ಕೂಡ ಅದು ನಮಗೆ ತಿಳಿದಿರುವುದಿಲ್ಲ. ಆ ಪ್ರಶ್ನೆ ಅಲ್ಲಿರಲಿ; ಇಷ್ಟೆಲ್ಲ ಸಂಸಾರಗಳಿವೆಯಲ್ಲ - ಲೋಕದಲ್ಲಿ. ಹೆಂಗಸರೇ ಇರಲಿ, ಅವರು ಬೇಕಾದರೆ ಗಂಡಸರೇ ಇರಲಿ, ಮುಂದಿನ ಜನ್ಮಾಂತರಗಳಲ್ಲಿ ಅದೇ ದಾಂಪತ್ಯ ಸಂಬಂಧ ಉಳಿಯಬೇಕು. "ಇವನೇ ತಿರುಗಿ ನನ್ನ ಗಂಡನಾಗಬೇಕು", "ಇವಳೇ ತಿರುಗಿ ನನ್ನ ಹೆಂಡತಿಯಾಗಬೇಕು" ಎಂಬ ಅಪೇಕ್ಷೆ ಎಷ್ಟು ಜನರಲ್ಲಿ ಉಳಿದೀತು? ಸಂಸಾರದ ನೋವನ್ನು ತಿನ್ನುತ್ತಿರುವವರಿಗೆ ಅಂಥ ಆಸೆ ಉಳಿಯುವುದಕ್ಕೆ ಸಾಧ್ಯವೇನು? ಈಗ ನನಗೇ ಇರಲಿ - ಈ ಸೀತೆಗಿಂತಲೂ ಹೆಚ್ಚು ಒಳ್ಳೆಯ ಹೆಂಡತಿ ಸಿಕ್ಕಿದರೆ ಆಗದೇ - ಎಂಬ ಅಪೇಕ್ಷೆ ಮೂಡಬಹುದು. ಅವಳಿಗೂ ತನ್ನ ಈ ಜಡಭರಿತ ಸುಬ್ಬರಾಯನಿಗಿಂತ ಉತ್ತಮವಾದ ಒಬ್ಬ ಗಂಡ ಸಿಗಲಿ ಎಂಬ ಬಯಕೆಯೂ ಬಾರದಿದ್ದೀತೆ? ಒಮ್ಮೆ ಅಂಥವರು ಹುಟ್ಟದೆಯೂ ಇರಬಹುದು. ಆದರೂ, ತಮ್ಮನ್ನು ಹೊಂದಿಕೊಂಡವರಲ್ಲಿರುವ ಕುಂದುಕೊರತೆ ಹೋಗಲಿ, ಅವರ ಆಕಾರ ಮತ್ತು ರೂಪಗಳು ಇನ್ನಷ್ಟು ಚೆನ್ನಾಗಿ ಆಗಲಿ; ಸಂಪತ್ತು, ಸ್ಥಿತಿಗಳು ಒಳ್ಳೆಯದಾಗಲಿ - ಎಂಬ ಅಪೇಕ್ಷೆಯಾದರೂ ಬಂದೀತು. ಅಷ್ಟೆಲ್ಲ ಕುಂದುಕೊರತೆಗಳ ನಿವಾರಣೆಯಾಗಿ, ಸಮನಾಗಿ ರಿಪೇರಿಗೊಂಡು ಹುಟ್ಟುವ ಪುನರ್ಜನ್ಮದ ಆ ಗಂಡ, ಮೊದಲಿನ ಜನ್ಮದ ಗಂಡನ ಹಾಗೆಯೇ ಕಾಣಿಸಲಾರನಲ್ಲ! ಇದನ್ನೆಲ್ಲ ನೆನೆದು ನನಗೆ ಅನ್ನಿಸಿತು - ಪುನರ್ಜನ್ಮ ದೇವರಿಗೇ ಇರಲಿ; ಅಂದರೆ ಸೀತೆಗೂ, ರಾಮನಿಗೂ ಇರಲಿ, ನಮಗೂ ನಿಮಗೂ ಬೇಡ - ಎಂದು. ರಾಮಣ್ಣನ ವಿಚಾರದಲ್ಲಿ ಹೇಳುವುದಾದರೆ, ನಾಗಿ ಅವನ ಮುಂದಿನ ಜನ್ಮದ ಹೆಂಡತಿಯಾಗುವ ಬದಲು, ಎಷ್ಟೇ ಕೆಟ್ಟಿದ್ದರೂ, ಅವರಿಬ್ಬರಿಗೂ ಪ್ರೀತಿ ಇರುವುದರಿಂದ, ಈ ಜನ್ಮದಲ್ಲಿ ಒಬ್ಬರಿಗೊಬ್ಬರು ಸಿಕ್ಕಿದರೇ ಒಂದು ಲೆಕ್ಕ; ಇಲ್ಲದೆ ಹೋದರೆ, ಸಿಕ್ಕಿಯೂ ಸಿಕ್ಕದ ಹಾಗೆ - ಅನಿಸಿತು.

ಇಷ್ಟೆಲ್ಲ ವಿಚಾರ ನನ್ನ ತಲೆಯಲ್ಲಿ ಸುಳಿಯುತ್ತಿದ್ದಾಗ ಬಿಸಿಲು ನೆತ್ತಿಗೆ ಬಡಿಯುತ್ತಿದ್ದ ಅನುಭವವಾಯಿತು. ಮೇಲೆ ಕಣ್ಣೆತ್ತಿ ನೋಡಿದೆ. ಹೊತ್ತು ಮೀರಿತ್ತು. ಬೆಳಿಗ್ಗೆ ನಾನು ಮನೆಯನ್ನು ಬಿಟ್ಟಾಗಲೂ - ಎಲ್ಲಿಗೆ ಹೋಗುತ್ತೇನೆ - ಎಂದು ಹೇಳಿರಲಿಲ್ಲ. ಈಗ ಊಟದ ವೇಳೆಯಾದುದರಿಂದ, ನನಗಾಗಿ ಮನೆಯಲ್ಲಿ ಕಾದಿದ್ದು ಹೋದೊಡನೆಯೇ ಸೀತೆಯ ಗಂಟಲ ಧ್ವನಿ ಕೇಳಬೇಕಾದೀತು - ಎಂಬ ನೆನವರಿಕೆಯು ಬಂದುದರಿಂದ, ಹಿಂದಕ್ಕೆ ಹೊರಳಿ, ಮನೆಯ ಕವಲು ಹಾದಿಯನ್ನು ಹಿಡಿದೆ. ಬಾವಿ ಕಟ್ಟೆಯನ್ನು ಸೇರಿ, ಕಾಲು ತೊಳೆದುಕೊಂಡು ಚಾವಡಿಗೆ ಬರುವುದರೊಳಗಾಗಿಯೇ "ಸವಾರಿ ಎಲ್ಲಿಗೆ ಹೋದದ್ದೋ?" ಎಂಬ ಧ್ವನಿ ಕೇಳಿಸಿತು. "ಹೋದೆ; ಬಂದೆ" ಎಂದು ನನ್ನಷ್ಟಕ್ಕೆ ಉತ್ತರಿಸಿ, ಊಟದ ಮನೆಯನ್ನು ಹೊಕ್ಕೆ. ಅಜ್ಜಿ ತಮ್ಮ ಊಟವನ್ನು ಮುಗಿಸಿ ವಿಶ್ರಾಂತಿಗೆ

ಹೊರಟಿದ್ದರು. ಮಕ್ಕಳು ತಮ್ಮ ಊಟ ಮುಗಿಸಿ ಇನ್ನೆಲ್ಲಿಗೋ ಹೋಗಿದ್ದುವು. ಸೀತೆ ನನಗಾಗಿ ಕಾದು, ಕಾದು ಬೇಸರ ಬಂದು, ಅಡುಗೆ ಮನೆಯ ಗೋಡೆಯ ಮಗ್ಗುಲಲ್ಲಿ ಚಾಪೆ ಹಾಸಿ ಮಲಗಿಕೊಂಡಿದ್ದಳು. ಪ್ರಾಯಶಃ ಅಲ್ಲಿಂದಲೇ ಅವಳು ತನ್ನ ಧ್ವನಿ ಹೊರಡಿಸಿರಬೇಕು. ನಾನು ಊಟಕ್ಕೆ ಬರುವುದಕ್ಕೆ ತಡವಾದರೂ, ಊಟ ಮುಗಿಸಲು ತಡಮಾಡಬಾರದೆಂದು ತವಕಿಸಿ, ಊಟವನ್ನು ಮಾಡಿ ಹೊರಗೆ ಬಂದೆ. ಚಾವಡಿಯಲ್ಲಿ ಚಾಪೆ ಎಳೆದುಕೊಂಡು ದಿಂಬಿಗೆ ತಲೆಗೊಟ್ಟು ಒರಗಿದರೆ ನಾಗ ಕಾಣಿಸಿದ; ನಾಗಿಯೂ ಬಂದಳು; ರಾಮಣ್ಣನೂ ಬಂದ; ಅಲ್ಲಿ ನಿಧಿ ಮಾತ್ರ ಕಾಣಿಸಲಿಲ್ಲ. ನಿದ್ದೆಯಿಂದ ಎಚ್ಚರವಾದ ಮೇಲೆ ಅಂಗಳಕ್ಕಿಳಿದು ಅಲೆದಾಡಿ, ಹೊತ್ತು ಕಳೆಯಲು ದಾರಿಯನ್ನು ಹುಡುಕಿದೆ. ಸೀತೆ ಥಟ್ಟನೆ ಎದ್ದು ಬಂದು "ಹೂಟೆಗೆ ಯಾರಿಗೂ ಹೇಳುವುದು ಬೇಡವೆಂದು ಕಾಣುತ್ತದೆಯಲ್ಲವೇ. ಹೇಳಿಲ್ಲ, ಮಾಡಿಲ್ಲ. ನಮ್ಮ ಪುಣ್ಯಕ್ಕೆ ಒಂದು ಒಳ್ಳೆಯ ಮಳೆಯೂ ಬಂದಿದೆ. ಹೂಡುವ, ಮಾಡುವ ಯಾವತ್ತು ಕೆಲಸ ಎಷ್ಟೋ ಸುಲಭವಾದೀತು" ಎಂದು ತಕರಾರು ತೆಗೆದಳು. ಮುಂಚಿನ ದಿನ ನಾನು, ಹೂಡುವುದಕ್ಕೆ ಬರುವ ಒಕ್ಕಲು ಮಗ ವೆಂಕನನ್ನು ಕಂಡು, ಕೇಳಿಯೂ ಆಗಿತ್ತು. ಆತನು "ಯಾಕೆ ಅವಸರ! ಒಡೆಯ, ನನ್ನ ಕೆಲಸವನ್ನು ಬೇಗನೆ ಸಾಗಿಸಿ ನಿಮ್ಮದ್ದನ್ನು ಮುಗಿಸಿದರಾಯಿತಲ್ಲ. ಮಳೆ ಬೇಕಷ್ಟು ಬಿದ್ದಿದೆ. ಇನ್ನು ಎಂಟು ದಿವಸಗಳ ತನಕ ನೀರು ಆರಲಾರದು" ಎಂದಿದ್ದ. ಹೀಗಾಗಿ ಸೀತೆಗೆ ಸಮಾಧಾನ ಹೇಳುತ್ತ "ವೆಂಕನಿಗೆ ಹೇಳಿದ್ದೇನೆ; ಬರುತ್ತೇನೆ - ಎಂದಿದ್ದಾನೆ. ನಾಳೆ ನಾಡಿದ್ದರಲ್ಲಿ ಬಂದೇ ಬರುತ್ತಾನೆ. ಅವಸರವೇನು? ನಿನಗೆ ಅಷ್ಟೂ ಗೊತ್ತಾಗಬಾರದೇ?" ಎಂದೆ.

"ಹೌದು, ಗೊತ್ತಿದ್ದವರೇ ನೀವೆಲ್ಲ. ಈ ಮನೆಯಲ್ಲಿರುವ ಹೆಡ್ಡಿ ನಾನೊಬ್ಬಳೇ" ಎಂದಳು.

ಆಗ ನನಗೆ ಹೊಳೆಯಿತು: "ಇದೇ ಹೆಂಡತಿಯನ್ನು ಜನ್ಮ ಜನ್ಮಕ್ಕೂ ನಾನು ಪಡೆಯಬೇಕೇ" ಎಂದು. ಆದರೆ, ಮತ್ತೆ ಕೇವಲ ಎರಡು ಗಳಿಗೆಯ ನಂತರ ಅದೇ ಸೀತೆಯು ಮಕ್ಕಳ ತೊಡುವಿಗಾಗಿ ಹಾಲುಬಾಯಿ ಮಾಡಿ , ನನಗೆ ಒಂದು ದೊಡ್ಡ ಚೂರನ್ನು ತಂದುಕೊಟ್ಟಾಗ, ಅದನ್ನು ತಿಂದು, ಅದರ ರುಚಿಯನ್ನು ಸವಿದಾಗ, ಸೀತೆಯ ಬಾಯಿ ಹರುಕಾದರೂ ಅವಳು ಮಾಡುವ ಹಾಲುಬಾಯಿ ರುಚಿ ಅಷ್ಟೇನೂ ಕಡಿಮೆಯಿಲ್ಲ. ದೇವರಿಗೆ ಸರಿಯೆನಿಸಿದರೆ - ಇನ್ನೊಂದು ಜನ್ಮದಲ್ಲಿಯೂ, ಅವಳು ನಾನು ಹುಟ್ಟಿಯಾದ ಎಂಟೋ, ಹತ್ತೋ ವರ್ಷ ಕಳೆದ ಮೇಲೆ ಹುಟ್ಟಿದರೆ, ನಮ್ಮಿಬ್ಬರದೂ ಜಾತಕಗಳು ಕೂಡಿಬಂದರೆ, ಆ ಮದುವೆಗೆ ಒಪ್ಪಿದರೂ ಒಪ್ಪುವ - ಎಂದು ತೀರ್ಮಾನಿಸಿ ಹೊರಟೆ. ಸಾಮಾನ್ಯವಾಗಿ ಸಂಜೆ ನಾನು ಹೊತ್ತು ಕಳೆಯುವುದಿದ್ದರೆ ಅದು ಜನಾರ್ದನನ ಮನೆಗೆ ಹೋಗಿ. ಆ ಭೂಪತಿ ಎಲ್ಲಿಗೆ ಹೋಗಿದ್ದಾನೆಂಬುದು ಅವನ ತಾಯಿಗೂ ಗೊತ್ತಿರಲಿಲ್ಲ.

ಅಪ್ಪನಿಗೂ ಗೊತ್ತಿರಲಿಲ್ಲ. ಆ ಒಂದು ವಿಷಯದಲ್ಲಿ ಮೂಡೂರಿನಂತಹ ಹಳ್ಳಿಯಲ್ಲಿ ಪಿತ್ರಾರ್ಜಿತ ಮನೆಯಲ್ಲಿ ಹುಟ್ಟಿ, ಪಿತ್ರಾರ್ಜಿತ ಮನೆಯಲ್ಲಿ ಬಾಳುತ್ತ, ಒಂದಿಷ್ಟು ಇಂಗ್ಲೀಷ್ ಓದಿಕೊಂಡ ಮೇಲೆಯೂ ಮನೆಯನ್ನು ನಡೆಸುತ್ತೇನೆ ಎಂಬ ಜಂಭದಿಂದ ಅದೇ ಊರನ್ನು ಸೇರಿದ ನನ್ನ ವಿಚಾರದಲ್ಲಿಯೇ ನನಗೆ ಕನಿಕರವಾಯಿತು. ನನ್ನ ತಮ್ಮ ಎಷ್ಟಾದರೂ ಬುದ್ಧಿವಂತ; ನನಗಿಂತ ಬುದ್ಧಿವಂತ. ಅವನು ಸಂಪಾದಿಸಿದ ಹೊಸ ಹೆಂಡತಿ ಎಂಥವಳೋ ಏನೋ ನಾನು ತಿಳಿಯೆ; ಅವಳೂ ಓದಿದ್ದಾಳೆ; ಮಾಡಿದ್ದಾಳೆ. ನನ್ನ ಸೀತೆಯ ಹಾಗೆ ಸ್ಲೇಟಿನ ಮುಖ ಕಾಣದವಳಲ್ಲ. ರಜೆ ದೊರಕಿದಾಗಲೂ ಅವನು ಅರ್ಧದಷ್ಟು ಸಮಯವನ್ನು ಕಳೆಯುವುದು ಶಿವಮೊಗ್ಗೆಯಲ್ಲಿ. ಶಿವಮೊಗ್ಗೆ ಸಾವಿರಾರು ಮಂದಿಯಿರುವ ಪೇಟೆ. ನಮ್ಮ ಮೂಡೂರಿನ ಹಾಗಲ್ಲ. ಅಲ್ಲಿ ಮನೆಯಿಂದ ಹೊರಕ್ಕೆ ಕಾಲಿಟ್ಟರೆ ತಕ್ಷಣ ಮಾತನಾಡಿಸುವಂಥ ಜನರು ಸಿಗುತ್ತಾರೆ. ನಮ್ಮೂರು ಹಾಗಲ್ಲ; ಆದರೂ ಅದೇ ನಮ್ಮೂರನ್ನು ಹಳೆಗಾಲದ ಒಂದು ಮಹಾಮಹಾ ಪಟ್ಟಣವನ್ನಾಗಿ ಮಾಡಿಕೊಳ್ಳುವುದಕ್ಕೆ, ನಾನು ಮಾತ್ರ ಎಲ್ಲೆಲ್ಲೂ ತಡಕಾಡುತ್ತಿದ್ದೇನೆ; ಏನೇನೋ ಹುಡುಕಾಡುತ್ತಿದ್ದೇನೆ. ಈ ನನ್ನ ಆಸೆಯಿಂದಾಗಿ 'ನನ್ನ ಅಜ್ಜಿಯ ಬುದ್ಧಿ ನನಗಿದ್ದರಾಗುತ್ತಿತ್ತು' ಎಂಬ ಬಯಕೆಯೂ ಉಂಟಾಗುತ್ತದೆ. ಆದರೆ ಸದ್ಯಕ್ಕಂತು - ಪ್ರತಿಯೊಂದಕ್ಕೂ ಗತವೈಭವದ ಕಲ್ಪನೆಯನ್ನು ನನ್ನಲ್ಲಿ ಹುಟ್ಟಿಸುವುದಕ್ಕೆ ಅವರೇ ಬೇಕಾಗಿದೆ. ಅವರ ಬಾಯಿ ಹರಕು ಎನ್ನುತ್ತಾರೆ ಒಬ್ಬರು; ಅವರನ್ನು ಮೂಕಿ ಎಂದಿದ್ದರು ಈ ಊರಿನ ಜನರು. ಈ ಪ್ರಾಯದಲ್ಲಿ ಅವರ ಬುದ್ಧಿ ಅರಳು ಮರುಳು ಎಂದು ಸಾರ್ವಜನಿಕರಲ್ಲಿ ಅಭಿಪ್ರಾಯ ಬೇರೂರಿದೆ. ಆದರೆ ಅವರ ಅಂತಃದೃಷ್ಟಿಯ ವಿಚಾರದಲ್ಲಿ ನನಗೆ ಗಾಢ ನಂಬಿಕೆಯಿದೆ. ಅವರ ಕಣ್ಣನ್ನು ನನ್ನ ಹಣೆಯಲ್ಲಿ ನೆಟ್ಟುಕೊಂಡು, ಕನಸು ಕಾಣುವ ಸುಖವನ್ನಾದರೂ ಪಡೆಯಬೇಕೆಂಬ - ಚಪಲ ನನ್ನದು.

ರಾಮಣ್ಣ ದೊನ್ನೆ ಮಳೆ ಬಂದ ದಿವಸ ನಡೂರು ಹಾದಿಯಲ್ಲಿ ಬಿದ್ದ ಕಲ್ಲು ಮಂಟಪದ ವಾರ್ತೆಯನ್ನು ನನಗೆ ಕೊಟ್ಟಿದ್ದಾನೆ. ನಾನು ಅದನ್ನಿನ್ನೂ ಹೋಗಿ ನೋಡಿಲ್ಲ. ದೇವಸ್ಥಾನದ ಓಲಗ ಮಂಟಪದ ಮಾಡು ಹಾರಿ ಅಂಗಾತ ಬಿದ್ದಿದೆ ಎಂದು ತಿಳಿಸಿದ್ದಾನೆ. ಓಕುಳಿ ಹೊಂಡದಲ್ಲಿ ನೀರು ತುಂಬಿದೆ ಎಂದಿದ್ದಾನೆ. ಹಾಗೆ ಹೇಳಿ ದಿನಗಳು ಮೂರಾದವು. ನಾನು ಯಾವೊಂದರ ವಿಷಯದಲ್ಲಿಯೂ ಸ್ಥಳ ತನಿಖೆ ಮಾಡದೆಯೆ ಮನೆಯಲ್ಲಿ ತೆಪ್ಪಗೆ ಕುಳಿತಿದ್ದೇನಲ್ಲ - ಎನಿಸಿತು; ಹೊರಟೆ. ಆಚೆ ಈಚೆ ನೋಡಿ ಕಿಟ್ಟಣ್ಣನೂ ಚಂದ್ರನೂ ಬಾಗಿಲ ಬಳಿಯಲ್ಲಿಲ್ಲ ಎಂಬುದನ್ನು ಖಾತ್ರಿ ಮಾಡಿಕೊಂಡು ಮನೆಯಿಂದ ಹೊರಬಿದ್ದೆ. ಬಯಲಿಗೆ ಇಳಿದು, ಅದನ್ನು ಅಡ್ಡಕ್ಕೆ ದಾಟಿ ಗದ್ದೆ ಅಂಚಿನ ಮೇಲೆ ನೂರು ಗಜ ದೂರ ನಡೆದು, ಬಲಕ್ಕೆ ಹೊರಳಿ, ಅಲ್ಲಿರುವ ಕುರುಚಲು ಕಾಡನ್ನು ಹೊಕ್ಕೆ. ಆ ಕಾಡಿನಲ್ಲಿ ಆರಾರು ಕಾಲುದಾರಿಗಳು ಆಚೆ, ಈಚೆ ಸರಿಯುತ್ತವೆ. ನಾನು ದೇವಸ್ಥಾನಕ್ಕೆ ಹೋಗುವ ಕಾಲುದಾರಿ

ಹಿಡಿದು ಮುಂದುವರಿದೆ. ಅದಾದರೆ ನೋಡಬೇಕಾದ ಒಂದು ದೃಶ್ಯವೇ. ಆ ದಿನದ ಬಿರುಗಾಳಿಯೂ ಎಷ್ಟು ಮರಗಳಿಂದ ಹಸಿ ಎಲೆ, ರೆಂಬೆ, ಕೊಂಬೆಗಳನ್ನು ಉರುಳಿಸಿ ಧೂಳುದುಪ್ಪಟ ಮಾಡಿತ್ತೆಂದು ಹೆಜ್ಜೆಹೆಜ್ಜೆಗೂ ಕಾಣಿಸುತ್ತಿತ್ತು. ಅವನ್ನೆಲ್ಲ ತುಳಿದುಕೊಂಡು ಮಂಟಪವಿರುವ ಕಡೆಗೆ ಹೆಜ್ಜೆ ಹಾಕಿದೆ. ಅಲ್ಲಿ ಮಂಟಪವಿತ್ತೆಂದು ಯಾರು ಹೇಳುತ್ತಾರೆ? ಹಿಂದಿದ್ದ ಮಂಟಪದ ಕತೆಯನ್ನು ನೆನೆದುಕೊಂಡರೆ ಈಗಿನ ದೃಶ್ಯ ಏನೇನೂ ಅರ್ಥವಾಗದ್ದು. ಒಂದು ದೊಡ್ಡ ಕಲ್ಲು ಪಂಚಾಂಗವೇನೋ ಕಾಣಿಸಿತು. ನಾಲ್ಕು ಕಡೆಗಳಲ್ಲಿ ಮೆಟ್ಟಿಲುಗಳಿದ್ದವು. ಹಾಗೆ ನಾಲ್ಕು ಕಡೆಗಳಲ್ಲೂ ಮೆಟ್ಟಿಲು ಏತಕ್ಕಿದ್ದಿರಬೇಕು? ಅದು ನನಗೆ ಹೊಳೆಯಲಿಲ್ಲ. ಅದರ ನಾಲ್ಕು ಮಗ್ಗುಲುಗಳಲ್ಲೂ ಶಿಲೆಯಲ್ಲಿನ ನೀಳಕಂಬಗಳ ಸಾಲಿದ್ದವು. ಸುತ್ತ ಎರಡು ಮಾರು ಅಗಲದ ಚಾವಡಿಯ ಒಳಗೆ ಗೋಡೆಯಿದ್ದಿತ್ತು. ಅದರ ಯಾವುದೋ ಒಂದು ದಿಕ್ಕಿಗೆ ಬಾಗಿಲಿತ್ತು. ಅದಕ್ಕೆ ಒಂದೇ ಒಂದು ಬಾಗಿಲಿತ್ತು ಎಂದು ನನ್ನ ನೆನಪು. ಅದೊಂದು ಕೋಣೆಯ ಹಾಗಿತ್ತು. ಆ ಕೋಣೆಯ ಮೇಲೂ, ಸುತ್ತಣ ಕಲ್ಲುಗಳ ಮೇಲೂ, ಹಿಂದೆ ಹಾಸುಗಲ್ಲಿನ ಮಾಡನ್ನು ಹೊದೆಸಿದ್ದರು. ಅದರ ಮೇಲೆ ಇಟ್ಟಿಗೆಯೋ, ಮಣ್ಣಿನದೋ ಆಗಿ ಕಾಣಿಸುತ್ತಿದ್ದ ಒಂದು ದೊಡ್ಡ ದಿಣ್ಣೆಯಿತ್ತು. ಈಗ ಅದು ಇಟ್ಟಿಗೆಯದಿದ್ದಿರಬೇಕೆಂದು ತಿಳಿಯುತ್ತದೆ. ಹಿಂದೆ ಹುಲ್ಲು, ಹತ್ತಾರು ಕಾಟು ಗಿಡಗಳು ಬೆಳೆದು ಆ ಮಾಡನ್ನು ಅಲಂಕರಿಸುತ್ತಿದ್ದ ಕಾಲದಲ್ಲಿ, ಅದು ತೀರ ವಿಕಾರವಾಗಿ ಕಾಣಿಸುತ್ತಿತ್ತು. ಈ ಸ್ಥಳದಲ್ಲಿ ಹಿಂದೆ ಏನಿದ್ದಿತು; ಈ ಸುತ್ತಮುತ್ತಲೂ ಏನೆಲ್ಲ ಇದ್ದಿತು ಎಂದು ನಮ್ಮೂರಿನ ಯಾರೊಬ್ಬರೂ ಯೋಚಿಸಿದಂತಿಲ್ಲ; ಅದಕ್ಕೆ ನಾನು ಸಹ ಒಂದು ಆಕ್ಷೇಪವಲ್ಲ. ಹಾಗೆ ಕೇಳಿದರೆ - ಮೂಡೂರು, ನಡೂರು, ಪಡೂರು ಈ ಮೂರು ಊರು ಸೇರಿದ ಹಾಡಿ, ಕಾಡುಗಳಲ್ಲಿ ಇಂಥ ಹಲವಾರು ಗುಡಿಗಳಿವೆ - ಎಂದು ಹಿಂದೆಯೇ ಹೇಳಿದ್ದೆನಷ್ಟೆ. ಚಿಕ್ಕವನಿರುವಾಗ ಕುತೂಹಲದಿಂದ ಒಂದೆರಡು ಹಾಳು ದೇಗುಲಗಳ ತನಕವೂ ಹೋಗಿ, ಅವನ್ನು ನೋಡಿ ಬಂದವನು ನಾನು. ಆದರೆ ಯಾವೊಂದು ಗುಡಿಯಲ್ಲೂ ಲಿಂಗವಾಗಲೀ, ಮೂರ್ತಿಯಾಗಲೀ ಕಂಡ ನೆನಪಿಲ್ಲ ನನಗೆ. ಇದು ಮಾತ್ರ - ಹೇಳಿ, ಕೇಳಿ ಒಂದು ಮಂಟಪ. ದೇಗುಲವೂ ಅಲ್ಲ. ಅದರೊಳಕ್ಕೆ ಏನೆಲ್ಲ ಇರಲು ಸಾಧ್ಯ? ಅದರ ಒಳಕ್ಕೆ ಗರ್ಭಗುಡಿ ಇರುತ್ತಿದ್ದರೆ - ಎದುರಿಗೇ ನಂದಿಯ ಪ್ರತಿಮೆಯಾದರೂ ಇರುತ್ತಿತ್ತು. ಇಲ್ಲಿ ಅದು ಸಹ ಇದ್ದಂತಿಲ್ಲ. ನಾನು ಬಂದುದೇ ಸಂಶೋಧನೆಗೆ ಎಂಬುದರಿಂದ ಗಂಭೀರವಾಗಿ ನಿಂತು ಅಲ್ಲೆಲ್ಲಾ ನೋಡಿದೆ. ಉರುಳಿ ಬಿದ್ದ ಕಂಬಗಳನ್ನೂ, ಬಿದ್ದ ಭರಕ್ಕೆ ತುಂಡಾದ ಮಾಡಿನ ಹಾಸುಗಲ್ಲುಗಳನ್ನೂ, ಕುತೂಹಲದಿಂದ ನೋಡಿದೆ. ಅವು ಬೀಳುವುದಕ್ಕೆ ಮೊನ್ನೆ ಬಂದ ಮಳೆಯೇ ಕಾರಣವಾಗಿರಲಾರದು ಅನಿಸಿತು. ನೆಪಕ್ಕೆ, ಅದರ ಮಗ್ಗುಲಿಗೆ ಬೃಹತ್ತಾಗಿ ಬೆಳೆದಿದ್ದ ಒಂದು ಟೊಳ್ಳು ಧೂಪದ ಮರವೂ ಅದೇ ಗಾಳಿಗೆ ಮುರಿದಿತ್ತು. ಅದು ಮುರಿದು ಈ ಮಾಡಿನ ಮೇಲೆ ಬಿದ್ದುದರಿಂದ - ಕಂಬದ ಸಾಲು, ಮಾಡುಗಳು

ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಹಾಗೆ ಮಾಡು ಬಿದ್ದ ಮೇಲೆ, ಮಳೆಯೂ ಯದ್ವಾತದ್ವಾ ಸುರಿಯಿತು. ಈ ವಿದ್ಯಮಾನದ ಸಾಕ್ಷಿಗೆ, ರುಂಡ ಕಡಿದು ಬಿದ್ದ ರಾಕ್ಷಸನ ಹಾಗೆ, ಆ ಪೊಳ್ಳು ಧೂಪದ ಮರದ ಬುಡ ಬಾನನ್ನು ನೋಡುತ್ತ ನಿಂತದ್ದು ಕಾಣಿಸಿತು. "ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ" ಎಂದರೆ ಇದೇ - ಎಂದುಕೊಂಡೆ. ಬಿಸಿಲು ಕುಣಿದಾಡುತ್ತಿತ್ತು. ಈ ಯಾವತ್ತು ಶಾಪಗ್ರಸ್ತ ಶಿಲೆಗಳನ್ನು ಕಂಡು ಒಂದೊಂದರ ಬಳಿಗೂ ಹೋಗಿ ನೋಡಿದೆ. ಬಿದ್ದ ಕೆಲಕೆಲವು ಕಂಬಗಳಲ್ಲಿ ಚಿತ್ರ ಕೆಲಸಗಳು ಇವೆ. ಆರು ಅಂಗುಲಕ್ಕಿಂತ ದಪ್ಪನಾದ, ನೀಳವಾದ ಆ ಮಾಡಿನ ಹಾಸುಗಲ್ಲುಗಳಲ್ಲಿ ಹಲವು ಒಂದಕ್ಕೆರಡಾಗಿದ್ದುವು. ಮಂಟಪದ ಮಧ್ಯಭಾಗ ತೆರವಾಗಿತ್ತು. ಉರುಳಿದ ಆ ಕಲ್ಲುಗಳನ್ನೇರಿ ನಾನು ತನಿಖೆಗೆ ಹೊರಟೆ. ಮರ ಬಿದ್ದ ಏಟಿನ ಭರಕ್ಕೆ ಮಂಟಪದ ಹೆಂಟೆಗಳು ಕಾಣಿಸಿದುವು. ಮುಟ್ಟಿ ನೋಡಿದೆ; ಅಲ್ಲಿಂದ ಎದ್ದು ಕೆಳಕ್ಕೆ ಬಂದೆ. ಆ ಪ್ರದೇಶಕ್ಕೆ ಒಂದೆರಡು ಬಾರಿ ಸುತ್ತು ಬಂದೆ. ಆ ಗುಡಿಯನ್ನು ಯಾತಕ್ಕಾಗಿ ಇಲ್ಲಿ ಕಟ್ಟಿದರು - ಎಂಬ ಪ್ರಶ್ನೆ ನನ್ನ ಮನಸ್ಸಿನಲ್ಲಿ ದೊಳೆಯಿತು. ಏನೂ ಪ್ರತ್ಯುತ್ತರ ಹೊಳೆಯಲಿಲ್ಲ. ಆ ಕಾಲಕ್ಕೆ ನನ್ನಲ್ಲಿ ಮೂಡಿದ ಇನ್ನೊಂದು ಯೋಚನೆಯೆಂದರೆ "ಇದರೊಳಕ್ಕೆ ಹೂತಿಟ್ಟ ನಿಧಿ ಇದ್ದರೂ ಇರಬಹುದು; ಹಾಗೆ ಯಾಕಿರಬಾರದು?" ಎಂದು. ಆ ಯೋಚನೆಯೊಂದಿಗೆ ಆಶೆಯೂ ದೊಳೆಯಿತು. ಒಂದು ಕೋಲನ್ನು ತಂದು ನಡುವೆ ರಾಶಿ ಬಿದ್ದಿದ್ದ ಮಣ್ಣಿನ ಹೆಂಟೆಗಳನ್ನು ಕುತ್ತಿ, ಕೆದಕಲು ತೊಡಗಿದೆ. ಒಂದು ಹೆಂಟೆಯೊಡೆದು ಟಣ್ ಎಂಬ ಧ್ವನಿಯಾಯಿತು. "ಇದು ಕಲ್ಲಲ್ಲ, ಲೋಹದ ತುಂಡು" ಎಂಬ ಭಾವನೆ ಬಂತು. ನಿಜಕ್ಕೂ ಅದು ಲೋಹದ ತುಂಡೇ. ಅದರಿಂದ ಸಿಡಿದದ್ದು ಕಿಲುಬುಗೊಂಡ ಹಳೆಯ ದುಡ್ಡು; ಅದನ್ನು ಮೈಯ ಅರಿವೆಯಿಂದಲೇ ಉಜ್ಜಿ ನೋಡಿ, "ಇದು ಚಿನ್ನವಾಗಿರುತ್ತಿದ್ದರೆ?" ಎಂದು ಆಸೆ ಮಾಡಿದರೆ, ಅದು ಬರಿಯ ತಾಮ್ರದ್ದೆಂದು ಗೊತ್ತಾಯಿತು. ಹಾಗಿದ್ದರೂ ಈ ಒಟ್ಟು ಮಣ್ಣಿನ ರಾಶಿಯಲ್ಲಿ ಇನ್ನೂ ಅಂಥ ದುಡ್ಡುಗಳಿದ್ದು, ವಿಧಿ ನನ್ನ ಹಣೆಯಲ್ಲಿ ಬರೆದಿದ್ದರೆ, ಚಿನ್ನದ ನಾಣ್ಯಗಳು ಸಿಗಬಹುದು ಎಂಬ ಆಸೆ ಮೂಡಿತು. ಅದಕ್ಕೊಂದು ಕಾರಣವೂ ಇತ್ತು. ನಮ್ಮ ಊರಿನ ಹಾಡಿಗಳಲ್ಲಿ ಅನೇಕರಿಗೆ ಕೊಪ್ಪರಿಗೆ ಸಿಕ್ಕಿದೆ - ಎಂಬ ಸುದ್ದಿಯನ್ನು ನಾನು ಸಣ್ಣವನಿರುವಾಗ ಕೇಳಿದ್ದೆ. ಆ ಗಳಿಗೆಯಲ್ಲಿ ನಾನಂತು ನಾಚಿಕೆ ಬಿಟ್ಟೆ; ಸದ್ಯ ಯಾರೂ ನನ್ನನ್ನು ನೋಡುತ್ತಿರಲಾರರು - ಎಂಬ ಧೈರ್ಯದಿಂದಲೇ ಅಲ್ಲಿ ಕಾಣಿಸಿದ ಮಣ್ಣಿನ ರಾಶಿಯನ್ನು ಕುತ್ತಿ, ಕುತ್ತಿ ಅದರ ಹೆಂಟೆಗಳನ್ನು ಒಡೆಯತೊಡಗಿದೆ. ಇನ್ನೊಮ್ಮೆ 'ಟಣ್' ಎಂಬ ಧ್ವನಿ ಕೇಳಿಸಿತು. ಆ ಹೆಂಟೆಯನ್ನು ಎತ್ತಿದೆ. ಅದು ಭಾರವೆನಿಸಿತು. ಅದರ ಮಣ್ಣನ್ನು ಬೆರಳಿನಿಂದ ಕೆರೆದೆ. ನನ್ನ ಪುಣ್ಯಕ್ಕೆ ಕಂಚಿನ ಪ್ರತಿಮೆಯೊಂದು ಸಿಗಬೇಕೆ? ಅದು ಸಾಕಷ್ಟು ಭಾರವಾಗಿತ್ತು; ಅದು ಎಂಟಂಗುಲ ಎತ್ತರದ ಕಂಚಿನ ಮೂರ್ತಿ! ಅದಕ್ಕೆ ಮಾತ್ರ ಸಾಕಷ್ಟು ಮಣ್ಣು ಮೆತ್ತಿಕೊಂಡಿತ್ತು. ಪಂಚೆಯಿಂದ ಅದನ್ನು ಒರೆಸಲು ಇಚ್ಛೆಯಾಗಲಿಲ್ಲ. ಏನು ಮಾಡಲಿ - ಎಂದು ಯೋಚಿಸಿದೆ;

ಆಚೆ, ಈಚೆ ಕಣ್ಣು ಹಾಯಿಸಿ ಅಲೆದಾಡಿದೆ. ಒಂದೆಡೆ ಮಳೆ ನೀರು ಕಲೆತ ಹೊಂಡ ಕಾಣಿಸಿತು. ಅಲ್ಲಿಗೆ ಅದನ್ನೊಯ್ದು ತೊಳೆದು, ಮಣ್ಣನ್ನು ಬಿಡಿಸಿದೆ. ಸುಂದರವಾದ ಮನುಷ್ಯ ಆಕಾರದ ಮೂರ್ತಿ! ಅದರ ಒಂದೇ ಒಂದು ಕೊರತೆಯೆಂದರೆ - ಅದರ ಮೇಲೆ ಆಭರಣವಿದ್ದಿಲ್ಲ; ಅಲಂಕಾರವಿದ್ದಿಲ್ಲ. ಅದು ನಮ್ಮ ಯಾವ ದೇವರ ವಿಗ್ರಹವೂ ಅಲ್ಲ. ಬೋಳು ನಗ್ನ ಮೂರ್ತಿ! ಜಿನ ವಿಗ್ರಹವಿರಬೇಕು. ಜಿನ ವಿಗ್ರಹವಿರಲಿ, ಬೌದ್ಧ ವಿಗ್ರಹವೇ ಇರಲಿ, ದೇವರುಗಳು ಬಟ್ಟೆಯಿಲ್ಲದೆ ಕಣ್ಣಿಗೆ ಬೀಳುವುದು ನಮ್ಮ ಮಟ್ಟಿಗೆ ಸಂತೋಷದ ವಿಷಯವಲ್ಲ. ಆ ವಿಗ್ರಹವನ್ನು ಕಂಡಾಗ - ತಿಪ್ಪಜ್ಜಿ ಹೇಳಿದ ಮಾತೊಂದು ನೆನಪಾಯಿತು.

ಏನು ಮಾತದು? ಕೋಟಳ ದೇವಿಯ ಕತೆ. ಎರಡು, ಮೂರು ಜನರ ಬಾಯಿಯಿಂದಲೂ, ತೀರ ಕೊನೆಗೆ ತಿಪ್ಪಜ್ಜಿಯ ಬಾಯಿಯಿಂದಲೂ, ನಮ್ಮ ಹಿಂಡುಗಾನ ಅಮ್ಮನವರಿಗೆ 'ಕೋಟಳ ದೇವಿ' ಎಂಬ ಹೆಸರಿತ್ತೆಂದು ಅರಿತುಕೊಂಡ ನಾನು, ನನ್ನ ಮನಸ್ಸನ್ನೆಲ್ಲ ತಿಕ್ಕಿ, ತೀಡಿ, ಶಬ್ದದ ಅರ್ಥವನ್ನು ಹೊರಡಿಸಲು ಪ್ರಯತ್ನಿಸಿದ್ದೆ. ಕೋಟಲೆ, ಎಂಬುದು ನೀರುಕೋಟಲೆಗೆ ಸಂಬಂಧಪಟ್ಟದ್ದು - ಎಂದು ಒಮ್ಮೆ ತರ್ಕ ಮಾಡಿದೆ. ಮನೆಗೆ ಬಂದವನು ನನ್ನ ಹಳೆಯದೊಂದು ಅರ್ಥಕೋಶವನ್ನು ತೆರೆದು, ಆ ಶಬ್ದದ ಅರ್ಥವನ್ನು ಹುಡುಕಿದಾಗ 'ಕೋಟಲೆ, ಕೊಟ್ಟವಿ, ಕೊಟ್ಟಳಮ್ಮ, ನಗ್ನಸ್ತ್ರೀ, ದುರ್ಗಿ' ಇತ್ಯಾದಿ ಹೆಸರುಗಳನ್ನು ಓದಿ ತಬ್ಬಿಬ್ಬಾದೆ. ಆಗ ತಿಪ್ಪಜ್ಜಿ ಹೇಳಿದ, ಅಂಥ ನಮ್ಮಜ್ಜಿಯ ತಾರುಣ್ಯದ ಹಳೆಯ ಕತೆಯು ನನ್ನ ಮನಸ್ಸನ್ನು ಕೆದಕಿ, ಆಶ್ಚರ್ಯ, ಬೆರಗುಗಳಿಂದ ಕಂಗಾಲಾಗಿ ಮಾಡಿತು. ಅಷ್ಟೊಂದು ಹಿಂದಿನ ಕಾಲದ ಕಲ್ಪನೆ, ಮಾತೃ ದೇವಿಯ ನಗ್ನ ರೂಪಾರಾಧನೆ, ಆ ದಿನ ಅವರ ಮನಸ್ಸನ್ನು ಭ್ರಮೆಗೆ ಗುರಿ ಮಾಡದಿರುತ್ತಿದ್ದರೆ, ಅವರ ಮೇಲೆ ಅಮ್ಮನ ಆವೇಶ ಬರುತ್ತಿರಲಿಲ್ಲ. ಅಂದು ಅವರು ತಮ್ಮೆಲ್ಲ ಬಟ್ಟೆಗಳನ್ನು ಕಳಚಿ ಕುಣಿದಾಡುತ್ತಿರಲಿಲ್ಲ - ಎಂಬ ಭಾವನೆ ಬಂತು. ಅವರ ಅಂತರ್‌ದೃಷ್ಟಿಯನ್ನು ನೆನೆದಾಗ ಬೆರಗು ಇನ್ನಷ್ಟು ಹೆಚ್ಚಿತು. ಇದು ಮಾತ್ರ ನಮ್ಮವರ ಕಲ್ಪನೆಯಲ್ಲ; ಜೈನರದ್ದು. ಹಾಗಿದ್ದರೆ, ಈ ಕಲ್ಲು ಮಂಟಪ ಒಂದು ಕಾಲದಲ್ಲಿ ಜೈನರ ಬಸದಿಯಾಗಿತ್ತು - ಎಂಬ ವಿಚಾರ ಮೂಡಿತು. ಆ ವಿಚಾರದೊಂದಿಗೆ ನನ್ನ ಮನಸ್ಸಿನ ಕುತೂಹಲ ಹೆಚ್ಚುತ್ತ ಸರಿದು, ಆ ಮೂರ್ತಿಯನ್ನು ಅಜ್ಜಿಯ ಕೈಯಲ್ಲಿ ಇರಿಸಿ ಪ್ರಶ್ನೆ ಕೇಳಬೇಕೆಂಬ ಆಸೆ ಉಂಟಾಯಿತು.

ನನ್ನ ಕುತೂಹಲ ಅಲ್ಲಿಗೇ ಶಾಂತವಾಗಲಿಲ್ಲ. ಆ ಭಗ್ನ ಬಸದಿಯ ಸುತ್ತುಮುತ್ತಲಿನ ಮರಗಿಡಗಳ ಎಡೆಯಲ್ಲಿ ಅಲೆದಾಡತೊಡಗಿದೆ. ಗುಡಿಯ ಬಾಗಿಲಿತ್ತೆಂದು ತಿಳಿದ ದಿಕ್ಕಿನ ಅನತಿ ದೂರದಲ್ಲಿ ಅರ್ಧ ಹೂತ ಇನ್ನೊಂದು ಕಲ್ಲಿನ ಸ್ತಂಭ ಕಾಣಿಸಿತು. ಅದು ಕಾಲಗತಿಯಿಂದ ಆ ಮಂಟಪದಂತೆಯೇ ನೆಲ ಹಿಡಿದೊಂದು ಕಂಬ. ಅದಕ್ಕಿಂತ ತುಸು ದೂರದಲ್ಲಿ ಇನ್ನೂ ನಾಲ್ಕಾರು, ಮಣ್ಣಿನಲ್ಲಿ ಅರ್ಧಮರ್ಧ ಹೂತು ಹೋದ ಕಲ್ಲುಗಳಿದ್ದವು.

ಅಲ್ಲೊಂದು ಕಲ್ಲಿನ ಭಗ್ನಮೂರ್ತಿಯೂ ಕಾಣಿಸಿತು. ಮಧ್ಯದಲ್ಲಿ ತುಂಡಾದ ಹೆಣ್ಣು ದೇವತೆಯ ವಿಗ್ರಹವದು. ಇದು ನಮ್ಮ ಧರ್ಮದ್ದಿರಬೇಕು; ದುರ್ಗೆಯೋ, ಲಕ್ಷ್ಮಿಯೋ, ಇನ್ನೇನೋ ಆಗಿರಬೇಕು - ಎಂದುಕೊಂಡೆ. ಆ ಕಲ್ಲಿನ ತುಂಡುಗಳು ಸಾಕಷ್ಟು ಭಾರವಿದ್ದುದರಿಂದ ಅವನ್ನು ಹೊತ್ತು ಮನೆಗೊಯ್ಯುವ ಸಾಹಸ ಮಾಡಲಿಲ್ಲ. ಅಲ್ಲದೆ, ಆ ಹೊತ್ತಿಗೆ ಆ ಕಂಚಿನ ವಿಗ್ರಹವನ್ನು ಹೊತ್ತುಕೊಂಡು ಸಂಜೆಯ ದೊದಲು ಮನೆಯನ್ನು ಸೇರುವ ಧೈರ್ಯವೂ ಬರಲಿಲ್ಲ. ಸೀತೆಯೆಲ್ಲಾದರೂ ಇದಿರಾಗಿ "ಇದೆಲ್ಲಿನ ಬೆತ್ತಲೆ ಬೊಂಬೆ!" ಎಂದು ವಿಚಾರಿಸಿಯಾಳು - ಎಂಬ ಭಯ ನನ್ನದು. ಆದರೆ, ಅದನ್ನಂತು ಮನೆಗೆ ಒಯ್ಯಲೇಬೇಕು; ಸಮಯ ಕಾದು ಅಜ್ಜಿಯ ಕೈಗೆ ಕೊಟ್ಟು, ಅವರೇನು ಹೇಳುತ್ತಾರೆಂದು ಕೇಳುವ ತವಕ. ಅಲ್ಲಿಯ ತನಕ , ಆ ವಿಗ್ರಹವನ್ನು ಅಲ್ಲೆಲ್ಲಾದರೂ ಅಡಗಿಸಿಡುವ ಯೋಚನೆ ಮಾಡಿದೆ. ಒಂದು ಹೊದರಿನ ಕೆಳಗೆ ಅಡಗಿಸಿಟ್ಟು, ಮೇಲೆ ಸ್ವಲ್ಪ ಮಣ್ಣನ್ನು ಹಾಕಿ, ಮುಂದಿನ ಪಯಣ ಹೂಡಿ, ಊರಿನ ದೇವಸ್ಥಾನ, ಓಲಗ ಮಂಟಪ, ಓಕುಳಿ ಹೊಂಡಗಳನ್ನು ನೋಡುವುದಕ್ಕೆ ಹೊರಟು ಬಂದೆ. ಅಲ್ಲಿಗೆ ನಾಲ್ಕು ಫರ್ಲಾಂಗು ದೂರ ದಾರಿಯೂ ಇರಲಿಲ್ಲ. ಈ ತನಕ ನಿಮಗೆ ನಮ್ಮೂರಿನ ದೇವಾಲಯವನ್ನು ಕುರಿತು ನಾನು ಏನನ್ನೂ ಹೇಳಿಲ್ಲ ಅಲ್ಲವೇ? ನಮ್ಮದು ಸಾಕಷ್ಟು ದೊಡ್ಡ ದೇವಾಲಯ. ಅರ್ಧ ವರ್ತುಲಾಕಾರದ ತಾಮ್ರದ ಮಾಡುಳ್ಳ ಕಲ್ಲಿನ ಕಟ್ಟಡ. ಅದರ ಮೇಲುಪ್ಪರಿಗೆಯ ಮುಖಮಂಟಪ ಒಳ್ಳೆಯ ಚಿತ್ರ ಕೆಲಸಗಳ ರಚನೆ. ಕೆಳಭಾಗದಲ್ಲಿ ಗರ್ಭಗೃಹವಿದೆ. ಅದರ ಸುತ್ತಲೂ ಪ್ರದಕ್ಷಿಣಾ ಪಥವಿದೆ, ಅದರ ಮುಂದಕ್ಕೆ ನವರಂಗವಿದೆ. ಅನಂತರ, ಗೇಣುದ್ದದ ನಂದಿಗಾಗಿ ಅಂದಾಜಿಲ್ಲದೆ ಕಟ್ಟಿದ ಬಲು ದೊಡ್ಡದೊಂದು ಕಲ್ಲಿನ ಮಂಟಪವಿದೆ; ಅದನ್ನು ನಂದಿ ಮಂಟಪವೆಂದು ಕರೆಯುವುದಕ್ಕೆ ನಾನಂತು ಸಿದ್ಧನಿಲ್ಲ. ಊರವರು ಹಾಗೆ ಕರೆಯುತ್ತಾರೆ; ಕರೆದುಕೊಳ್ಳಲಿ. ಗರ್ಭಗೃಹದಲ್ಲಿರುವ ದೇವರು ಲಿಂಗರೂಪಿಯಾದ ಶಿವ, ನಾವು ಅವನನ್ನು ಕರೆಯುವುದು ಕಪಾಲೇಶ್ವರನೆಂದು. ಅದು ಏನರ್ಥವೋ ನಾನು ತಿಳಿಯೆ. ಕಾಪಾಲಿಗಳ ವಿಚಾರ ಕೇಳಿದ್ದೇನೆ. ಆ ಹೆಸರಿನ ಒಂದು ಪುರಾತನ ಮತವಿತ್ತಂತೆ. ನನಗೆ ಸಾಮಾನ್ಯವಾಗಿ ಇಲ್ಲಿನ ದೇವರು ಬರಿಯ ಶಿವ; ಪೀಠಸ್ಥ ಲಿಂಗವೊಂದನ್ನು ಬಿಟ್ಟರೆ ಬೇರಾವ ಚಿಹ್ನೆಯೂ ಅಲ್ಲಿಲ್ಲ. ರುಂಡಮಾಲಾ ಶಿವ ಅವನಲ್ಲ. ಅಲ್ಲಿನ ಉತ್ಸವ ಮೂರ್ತಿ ಕಂಚಿನದ್ದಿದೆ. ಅದು ಯಾವ ತೆರನ ವಿಗ್ರಹವೆಂಬ ವಿಚಾರ ದೇವಾಲಯದ ಅರ್ಚಕರಾದ ಸುಬ್ಬಣ್ಣ ಭಟ್ಟರಿಗಷ್ಟೇ ಗೊತ್ತಿರಬಹುದು. ಪ್ರತಿವರ್ಷದ ಜಾತ್ರೆಯಲ್ಲಿ ಅದರ ಹಿಂದೆ ರೇಶ್ಮೆ, ಬೆಳ್ಳಿಗಳ ಪ್ರಭಾವಳಿಗಳನ್ನು ಬಿಗಿದು, ತಲೆಯ ಮೇಲೆ ಹೊತ್ತುಕೊಳ್ಳುವ, ಏಳು ದಿವಸಗಳ ಕಾಲ ಉತ್ಸವ ನಡೆಯುತ್ತದೆ. ಬೆಳಗ್ಗಿನ ಬಲಿ, ಮಧ್ಯಾಹ್ನದ ಬಲಿ, ಬೈಗಿನ ಬಲಿ ಎಂದು ಮೂರು ಬಲಿಗಳೂ ವಿಧಿವತ್ತಾಗಿ ನಡೆಯುತ್ತವೆ. ಒಂದು ದೊಡ್ಡ ಜಾತ್ರೆಯೂ ಆಗುತ್ತದೆ. ಸುತ್ತಮುತ್ತಣ ಹಳ್ಳಿಯ ಜನರು, ವ್ಯಾಪಾರಿಗಳು,

ತಾಮ್ರದ ಅಂಗಡಿಗಳು, ಜವುಳಿ ಅಂಗಡಿಗಳು, ಮಿಠಾಯಿ ಅಂಗಡಿಗಳು, ಮಣಿ ಸರಕುಗಳು ಎಲ್ಲವೂ ಬರುತ್ತವೆ. ನಾನು ಎಳೆಯವನಾಗಿದ್ದಾಗ ಆ ಜಾತ್ರೆಗೆ ಹೋದಾಗ ದೊದಲ ಬಾರಿಗೆ ನಾಗಿಯನ್ನು ಕಂಡು, ಅವಳ ಮಕ್ಕಳನ್ನು ನೆನೆದು ಕನಿಕರಪಟ್ಟು, ದುಡ್ಡುಕೊಡಲು ಹೋಗಿ, ಅವಳಿಂದ ಮೂದಲಿಸಿಕೊಂಡ ನೆನಪು ಹೋಗಿಲ್ಲ. ಆಮೇಲೆ, ಕಾಲೇಜಿನ ಓದು ಪ್ರಾಪ್ತವಾದುದರಿಂದ ಸ್ವಲ್ಪ ಕಾಲ ಊರ ಜಾತ್ರೆಗೆ ಹೋದ ನೆನಪಿಲ್ಲ. ತಿರುಗಿ ಊರನ್ನು ಸೇರಿ ಗೃಹಸ್ಥನಾದ ಮೇಲೆ ಪ್ರತಿ ವರ್ಷವೂ ಮಕ್ಕಳನ್ನೆತ್ತಿಕೊಂಡು, ಸೀತೆಯನ್ನು ಕರೆದುಕೊಂಡು ಹೋಗುತ್ತಿದ್ದೇನೆ. ಈಗ ಬಹಳ ವರ್ಷಗಳಿಂದಲೂ ಅಲ್ಲಿಗೆ ಹೋಗದವರೆಂದರೆ ನಮ್ಮ ಅಜ್ಜಿ ಮಾತ್ರ; ಅವರು ಬರುತ್ತಿರಲಿಲ್ಲ. ನಾನೂ ಅವರನ್ನು ಒತ್ತಾಯಿಸುತ್ತಿರಲಿಲ್ಲ.

ನನ್ನ ಎಳೆತನದಲ್ಲಾದರೆ ಹಾಗಲ್ಲ. ನಾನೂ, ನನ್ನ ತಮ್ಮ ನಾರಾಯಣನೂ ಅವಳಿ ಜವಳಿಗಳ ಹಾಗೆ ಬೆಳೆದವರು; ಒಟ್ಟಿಗೆ ಶಾಲೆಗೆ ಹೋದವರು; ಬಂದವರು. ಜಾತ್ರೆಯ ಎಂಟು ದಿವಸವೂ ದೇವಸ್ಥಾನದ ವಠಾರವೇ ನಮ್ಮ ಬಿಡಾರದ ತಾವು. ಊಟಕ್ಕಷ್ಟೆ ಮನೆಗೆ ಹೋಗಿ ಬರುತ್ತಿದ್ದೆವು. ಹಾಗೆಂದು, ನಮ್ಮ ಜಾತ್ರೆಯಲ್ಲಿ ರಥೋತ್ಸವದ ಕ್ರಮ ಉಳಿದುಬಂದಿಲ್ಲ. ಅಜ್ಜಿಯ ಬಾಲ್ಯದಲ್ಲಿ ಅದು ಸಹ ಇತ್ತು. ನಮ್ಮ ಅಜ್ಜ ತೀರಿಕೊಂಡ ವರ್ಷ ಕೊನೆಯ ಬಾರಿಗೆ ತೇರನ್ನು ಎಳೆದಿದ್ದರಂತೆ. ಆ ತೇರು ಯಾವ ರಾಯನ ಕಾಲದ್ದೋ! ದೊಡ್ಡ ಮರದ ತೇರು. ಆ ರಥ ಕುಂಬಾಗಿ ಅದರ ಅಚ್ಚುಮರ, ಗಾಲಿಗಳು ಮುರಿದು ನಲ್ವತ್ತು, ಐವತ್ತು ವರ್ಷಗಳಷ್ಟು ಹಿಂದೆಯೇ ಮೂಲೆ ಸೇರಿತು. ಮುರಿದುಹೋದ ಮೇಲೆ ಅದಕ್ಕೆ ಮಳೆಗಾಲದಲ್ಲಿ ಅಭಿಷೇಕವಾಗತೊಡಗಿತು. ಅದರ ಮರಮಟ್ಟೆಲ್ಲ ಲಡ್ಡಾಗಿ ಪುಡಿಯಾಯಿತು. ಅಲ್ಲೇ ಇದ್ದ ಅದು ಬಿದ್ದು ರಾಶಿಯಾಗಿ, ಗೊಬ್ಬರವಾಗಿ, ಅದರ ಲಾಯದ ಗೋಡೆಯು ಮಣ್ಣಿನೊಂದಿಗೆ ಸೇರಿ ಒಂದು ದಿಣ್ಣೆಯಾಯಿತು. ಆ ಕಪಾಲೇಶ್ವರ ತನ್ನ ವೈಭವದ ಕಾಲವನ್ನು ನೆನೆಯುವ ಒಂದು ಸಮಾಧಿಯೇ ಆಯಿತು. ಮತ, ಧರ್ಮ, ದೇವರು, ದಿಂಡರು, ಸಂಪತ್ತು, ವೈಭವ - ಎಲ್ಲವೂ ಹಾಗೆಯೇ ಅಲ್ಲವೇ?

ಕಪಾಲೇಶ್ವರ ದೇವಾಲಯದ ವಠಾರವನ್ನು ಸೇರಿದಾಗ ನನ್ನ ದೃಷ್ಟಿಯನ್ನು ಸೆಳೆದದ್ದು ಅದರ ಮುಂದಿನ ಓಕುಳಿ ಹೊಂಡ. ನದಿಯ ಸೌಕರ್ಯ ಇರುವ ಊರುಗಳಲ್ಲಿ ದೇವರನ್ನು ಅವಭೃತ ಸ್ನಾನಕ್ಕೆ ಅಲ್ಲಿಗೇ ಒಯ್ಯುವ ರೂಢಿಯಿದೆ. ನಮ್ಮ ಊರಿನ ಬಳಿಯಲ್ಲಿ ಅಂಥ ನದಿ ಯಾವುದೂ ಇಲ್ಲ. ಒಂದೆರಡು ತೋಡುಗಳಿವೆ. ಜಾತ್ರೆಯ ವೇಳೆಯಲ್ಲಿ ಅವುಗಳಲ್ಲಿ ನೀರಿದ್ದರೆ ಉಂಟು; ಇಲ್ಲವಾದರಿಲ್ಲ. ಹೀಗಾಗಿ, ಕಲ್ಲಿಂದ ಕಟ್ಟಿದ ಕಿರು ಪುಷ್ಕರಿಣಿಯಂತೆ ಇರುವ ಓಕುಳಿ ಹೊಂಡಕ್ಕೆ ನೀರನ್ನು ತಂದು ತುಂಬಿಸುತ್ತಾರೆ. ಅದರಲ್ಲಿ ದೇವರನ್ನು ಮುಳುಗಿಸುತ್ತಾರೋ ಇಲ್ಲವೋ! ನಾನು ಕಂಡವನಲ್ಲ. ಕಂಡ ನೆನಪೂ ಇಲ್ಲ. ದೇವರ ಅವಭೃತಕ್ಕೆ ಒಂದು ಚೆಂಬು ನೀರಿದ್ದರೆ ಸಾಕು. ಶೂದ್ರರು ತಂದು ತುಂಬಿಸಿದ ಮೈಲಿಗೆ

ನೀರಿನಲ್ಲಿ ಅವನನ್ನು ಮೀಯಿಸಲಾರರು. ಹಾಗಿದ್ದರೂ, ಈ ಓಕುಳಿ ಹೊಂಡ ಯಾತಕ್ಕಿತ್ತು? ಕೃಷ್ಣದೇವರಾದರೆ ಓಕುಳಿ ಆಟ ಆಡಿಯಾರು. ನಮ್ಮೂರಿನ ಓಕುಳಿ ಅಂಥದೂ ಅಲ್ಲ. ಅದಕ್ಕೆ ಅರಸಿನ ಬಣ್ಣ ಹಾಕುವುದೂ ಇಲ್ಲ. ಹಬ್ಬದ ಕೊನೆಯ ರಾತ್ರಿ ಇದೇ ಓಲಗ ಮಂಟಪದಲ್ಲಿ ಉತ್ಸವ ಮೂರ್ತಿಯನ್ನು ಕುಳ್ಳಿರಿಸಿ, ಕರ್ಕಶ ವಾದ್ಯದಿಂದ ಅವನ ಕಿವಿ ಕೊರೆಯುತ್ತಾರೆ. ಅವನ ಎದುರಿಗೆ ಈ ಹೊಂಡಕ್ಕೆ ಜನ ಧುಮುಕುತ್ತಾರೆ. ಹೊಂಡದ ಮೇಲುಗಡೆ, ಎತ್ತರದಲ್ಲೊಂದು ಬಾಳೆಹಣ್ಣಿನ ಗೊನೆಯನ್ನು ಕಟ್ಟಿ, ರಾಟೆ ಮತ್ತು ಹಗ್ಗದಿಂದ ಅದನ್ನು ಕೆಳಕ್ಕೆ, ಮೇಲಕ್ಕೆ ಜಗ್ಗುತ್ತಾರೆ; ಅದು ಯಾರ ಕೈಗೂ ಸಿಗದ ಹಾಗೆ ಆಡಿಸುತ್ತಾರೆ. ಜನರು ಹಾರಿ ಅದನ್ನು ಹಿಡಿಯಲು ಪ್ರಯತ್ನಿಸುತ್ತಾರೆ. ಅದು ಕೈಗೆ ಸಿಗಲಿ, ಸಿಗದೇ ಹೋಗಲಿ, ಹಾರಿದವರು ಹೊಂಡದ ನೀರಿಗೆ ಬಿದ್ದೇಳುತ್ತಾರೆ. ಈ ವಿನೋದಕ್ಕಾಗಿ, ನಮ್ಮ ಊರಿನ ಒಂದು ಜನವರ್ಗಕ್ಕೆ ಹಬ್ಬದ ವೇಳೆ ತಾಡವಾಲೆಯಲ್ಲಿ ರಾಯಸ ಬರೆದು ಕಳುಹಿಸಿ, ಅವರನ್ನು ಕರೆಸಿಕೊಳ್ಳುತ್ತಾರೆ. ವಾದ್ಯ ಸಮೇತರಾಗಿ ಅವರು "ಹೌಂದ ರಾಯನ ಓಲಗವೋ" ಎಂದು ಘೋಷಿಸುತ್ತಾರೆ. ಪ್ರಾಯಶಃ ಒಂದಾನೊಂದು ಕಾಲದಲ್ಲಿ ಮೂಡು, ನಡು, ಪಡೂರುಗಳ ದೊರೆಯಾದ ಯಾವನೋ ಒಬ್ಬ ಹೌಂದರಾಯ ಎಂಬಾತ ಹಿಂದೆ ಅವರಿಗೆ ಹೀಗೆ ಆಮಂತ್ರಣ ಕಳುಹಿಸುತ್ತಿದ್ದಿರಬೇಕು. ಆ ಆಮಂತ್ರಣಕ್ಕೆ ಮನ್ನಣೆ ಕೊಟ್ಟು ಆಮಂತ್ರಿತರು ವಾದ್ಯಘೋಷದೊಡನೆ ಇಲ್ಲಿಗೆ ಬಂದು ಕಪಾಲೇಶ್ವರನ ಸನ್ನಿಧಿಯಲ್ಲಿ ಜಲಕ್ರೀಡೆಯಾಡುತ್ತಿರಬೇಕು. ದಿನ, ರಾತ್ರಿಯೆಲ್ಲವೂ ಸುಡುಗಾಡಿನಲ್ಲೇ ವಾಸಿಸುತ್ತಿರುವ ಕಪಾಲಿಯಾದ ಶಿವನಿಗೆ ಈ ಓಕುಳಿಯ ಸಂಭ್ರಮ ಯಾಕೋ, ಏನೋ! ಬೇರೆ ಯಾವ ದೇವರಿಗಾಗಿಯೋ ಮಾಡಿಟ್ಟ ಈ ಪೂಜಾವಿಧಿ, ಅನುಕರಣೆಯಿಂದ ನಮ್ಮ ಊರಿನ ಶಿವನಿಗೂ ಪ್ರಾಪ್ತವಾಗಿರಬೇಕು. ಈ ವಿಚಾರದಲ್ಲಿ ನಾನಂತು ಯೋಚಿಸಿಲ್ಲ. ನಮ್ಮೂರ ಹಿರಿಯರು ನನ್ನಷ್ಟೇ ಬುದ್ಧಿವಂತರು. ಮಕ್ಕಳಾಗಿದ್ದಾಗ ನಮಗೆ ಅದು ಪರಮಾನಂದ ಕೊಡುತ್ತಿತ್ತು. ಹೊಂಡದ ಮೇಲೆ ತೂಗಿದ ಬಾಳೆಹಣ್ಣು ನಮ್ಮ ಊರಿನ ಯಾವ ವೀರನ ಕೈಗೆ ಸಿಕ್ಕಿತು - ಎಂಬುದು ಕುತೂಹಲದ ವಿಷಯವಾಗುತ್ತಿತ್ತು. ಈಗಲಾದರೆ "ಅದನ್ನೆಲ್ಲ ನೋಡುವುದೇನು!" ಅನ್ನುತ್ತಿದ್ದೆ. ಮೊನ್ನೆಯ ಗಾಳಿಗೆ ಮಾಡನ್ನು ಕಳೆದುಕೊಂಡ ಓಲಗ ಮಂಟಪವನ್ನು ಕಂಡಾಗ ನನ್ನ ಮನಸ್ಸು ಖಿನ್ನವಾಯಿತು. ಆ ಹಾಳು ಗಾಳಿ ದೇವರ ಓಲಗಮಂಟಪವನ್ನೂ ಬಿಡಲಿಲ್ಲ ಎಂಬ ಬೇಸರವೂ ಆಯಿತು. ಅದನ್ನೆಲ್ಲ ಕಂಡು, ಮನೆಗೆ ಹೋದರೆ ಮನೆಯ ಹೊಸ್ತಿಲಲ್ಲೇ ನನ್ನನ್ನು ತಡವಿದ ಕಿಟ್ಟಣ್ಣ ಕೇಳಿದ ಮೊದಲಿನ ಪ್ರಶ್ನೆಯೆಂದರೆ: "ಎಲ್ಲಿಗೆ ಹೋಗಿದ್ದೆ?" ಎಂದು.

"ದೇವಸ್ಥಾನಕ್ಕೆ."

"ನನ್ನನ್ನು ಯಾಕೆ ಬಿಟ್ಟು ಹೋದೆ?"

"ಜಾತ್ರೆ ಕಳೆಯಿತಲ್ಲ."

"ನೀನು ಯಾಕೆ ಹೋದದ್ದು?"

"ಓಲಗ ಮಂಟಪ ಬಿದ್ದಿತ್ತೆಂದು ಕೇಳಿ."

"ಯಾಕೆ ಬಿತ್ತು? ಅದನ್ನು ಯಾರು ಕೆಡವಿದ್ದು?"

"ಮೊನ್ನೆಯ ಗಾಳಿ ಮಳೆಗೆ."

"ಹಾಗಾದರೆ, ಬರುವ ವರ್ಷ ಓಕುಳಿಯಾಟ ಇಲ್ಲವೋ?"

ಆ ಮಾತನ್ನು ಕೇಳಿ, ನನ್ನ ಮಕ್ಕಳಾಟಿಕೆಯ ದಿನಗಳ ನೆನಪು ಚೆನ್ನಾಗಿ ಬಂದಿತು. ಸಣ್ಣದರಲ್ಲಿ ರಥೋತ್ಸವ ನಿಂತು ಹೋದ ಕಥೆಯನ್ನು ಕೇಳಿ ಬೇಸರಿಸಿದ ನಾನು, ಆ ಮಗುವಿಗೆ ಒಂದಿಷ್ಟು ಸಮಾಧಾನವನ್ನು ಹೇಳಿದೆ. "ಓಲಗ ಮಂಟಪ ಬಿದ್ದು ಹೋದರೆ ಅದನ್ನು ತಿರುಗಿ ಕಟ್ಟದೆ ಇರುತ್ತಾರೆಯೇ? ಅದಿಲ್ಲದಿದ್ದರೂ ಓಕುಳಿ ಹೊಂಡ ಉಳಿದಿದೆಯಲ್ಲ" ಎಂದು ನುಡಿದು, ಬಾವಿಕಟ್ಟೆಗೆ ಹೊರಟಾಗ "ಎಲಾ, ಎಂಥ ತಪ್ಪು ಕೆಲಸ ಮಾಡಿದೆ? ಬರುತ್ತಾ, ಹಾದಿಯಲ್ಲಿ ಬಿದ್ದ ಕಲ್ಲುಮಂಟಪದ ದಾರಿಯಾಗಿ ಬರದೆ ಹೋದೆನೆ? ಯಾವ ದಾರಿಯಿಂದ ಹಿಂದಕ್ಕೆ ಬಂದೆ? ಆ ಕಂಚಿನ ಮೂರ್ತಿಯನ್ನು ಅಲ್ಲೇ ಯಾತಕ್ಕೆ ಮರೆತು ಬಿಟ್ಟೆ. ಹಿಂದೆ ಬರುತ್ತ ಅದನ್ನು ಹುಡುಕಿ ತೆಗೆದುಕೊಂಡು ಬರಬಹುದಿತ್ತಲ್ಲ" ಎಂದೆಲ್ಲ ಯೋಚನೆಗಳಾದವು.

# ಅಧ್ಯಾಯ 12

ಮರುದಿನ ಮುಸ್ಸಂಜೆಯ ವೇಳೆಗೆ ನನ್ನ ಅಜ್ಜಿ ಅಶ್ವತ್ಥದ ಕಟ್ಟೆಯ ಮೇಲೆ ಕುಳಿತು ತಮ್ಮಷ್ಟಕ್ಕೆ ಏನೇನೋ ಗೊಣಗುತ್ತಿರುವುದನ್ನು ಕಂಡು, ಅವರೊಡನೆ ಸಂಭಾಷಣೆಗೆ ಇದೇ ತಕ್ಕ ವೇಳೆ - ಎಂದು ಯೋಚಿಸಿ, ಮೆಲ್ಲಗೆ ಅವರ ಸಮೀಪ ಹೋದೆ. ಅವರ ಸ್ವಭಾವದಲ್ಲಿ ಒಂದು ಗುಣವನ್ನು ನಾನು ಚೆನ್ನಾಗಿ ಪರೀಕ್ಷಿಸಿದ್ದೇನೆ. ಅವರಿಗೆ ಆಯಾಸ, ದಣಿವುಗಳಾದರೆ ಎಲ್ಲಾದರಲ್ಲಿ ವಿಶ್ರಮಿಸಿ ಮಲಗಿಕೊಳ್ಳುತ್ತಾರೆ. ಮಲಗಿರುವ ಬದಲು, ಅವರು ಎಲ್ಲಾದರೂ ಕುಳಿತಿದ್ದಾರಾದರೆ ದೇಹ, ಬುದ್ಧಿಗಳೆರಡೂ ಚುರುಕಾಗಿಯೇ ಇವೆ ಎಂದರ್ಥ. ಕಣ್ಣು ತೆರೆದಿರುತ್ತದೆ; ಮನಸ್ಸು ಯಾವ್ಯಾವ ಊರಿಗೋ ಸುತ್ತಿ ಸುಳಿಯುತ್ತಿರುತ್ತದೆ. ಅಂಥ ವೇಳೆಗಳಲ್ಲಿ ತುಟಿ ಅಲುಗಾಡುವುದುಂಟು; ಧ್ವನಿ ಹೊರಡುವುದುಂಟು; ಹುಬ್ಬು ಗಂಟಿಕ್ಕುವುದುಂಟು. ಎರಡೂ ತುಟಿಯ ಕುಡಿಗಳು ಕುಣಿಯುವುದೂ ಉಂಟು. ಅವರ ಮನಸ್ಸಿನ ಸಮಾಧಾನ, ಅಸಮಾಧಾನಗಳು ಚಿಂತನೆಗೆ ಗುರಿಯಾದ ವಿಷಯಗಳಲ್ಲಿ ಕೇವಲ ಅವರ ಹುಬ್ಬು, ತುಟಿಗಳಿಂದಲೇ ಪ್ರಕಟಗೊಳ್ಳುತ್ತವೆ. ಯಾವ ವಿಷಯದಲ್ಲಿ ಅಂಥ ಅಸಮಾಧಾನ? ಯಾವ ವಿಷಯದಲ್ಲಿ ಕೋಪ, ತಾಪ - ಎಂದು ನನ್ನನ್ನು ಪ್ರಶ್ನಿಸಿದರೆ ಉತ್ತರಿಸಲಾರೆ. ಮನೆಯಲ್ಲಿ ಅವರೇ ಮುಖ್ಯ. ಅವರಿಗೆ ಆಗದ ಕೆಲಸವನ್ನು ನಾನಾಗಲೀ, ಸೀತೆಯಾಗಲೀ, ಕಿರಿಯ ಮಕ್ಕಳಾಗಲೀ ಮಾಡಿ ಅವರನ್ನು ನೋಯಿಸಿದ್ದಿಲ್ಲ. ಬಾಳಿನ ಈ ಸಂಜೆಯಲ್ಲಿ ಅವರಲ್ಲಿ ಯಾವೊಂದು ಬಗೆಯ ಸ್ವಂತ ಅಪೇಕ್ಷೆಯೂ ಉಳಿದಂತೆ ಕಾಣಿಸುವುದಿಲ್ಲ. ನನಗೆ ಬುದ್ಧಿ ಬಂದಾಗಿನಿಂದಲೂ ಅವರ ವಿಷಯದಲ್ಲಿ ನಾನು ಆಸಕ್ತಿ ತಾಳಿದಂದಿನಿಂದಲೂ, ಅವರು ಯಾವುದಕ್ಕೂ ಯಾರನ್ನೂ ಬೇಡಿದವರಲ್ಲ. “ಅದನ್ನು ಕೊಡು, ಇದನ್ನು ಕೊಡು” ಎಂದು ಗೊಣಗಿದವರಲ್ಲ. ಹಾಗೆ ಹೇಳಹೋದರೆ ಆ ದೇವರನ್ನೂ ಬೇಡಿದವರಲ್ಲ. ಬಾಲ್ಯದಲ್ಲಿ ವೈಧವ್ಯ ಬಂದ ಕಾಲದಲ್ಲಿ, ರೂಢಿಗೆ ಕಟ್ಟುಬಿದ್ದು ಅವರು ವಿಧಿಯನ್ನು ನಿಂದಿಸಿರಲೂಬಹುದು; ತಮಗೆ ಬಂದ ಹೆಣ್ಣುಜನ್ಮವನ್ನು ಹಳಿದಿರಲೂಬಹುದು. ಅಂಥ ಕಾಲವನ್ನು ನಾನು ಕಂಡವನಲ್ಲ. ಆಮೇಲೆ ಸಾಕಷ್ಟು ದೊಡ್ಡವರಾಗಿ ಲೋಕಾನುಭವ ಪಡೆದು, ಬಲಿತ ಮೇಲೆ ಹೇಗೆ ಅವರು ಬೆಳೆದರೋ! ಬಾಳಿನ ಮಧ್ಯಾಹ್ನ ಕಳೆದ ಅನಂತರವೇ ನನಗೆ ಅವರನ್ನು ಕಾಣುವ, ಒಂದಿಷ್ಟು ತಿಳಿಯುವ ಅವಕಾಶ ಬಂದುದು - ಎನ್ನಬಹುದು. ಅವರ ಬಾಯಿಯಿಂದ - ದೇವರು, ಬ್ರಹ್ಮ

ವಿಧಿ, ಪರಮಾತ್ಮ - ಎಂಬ ಮಾತುಗಳು ಕೆಲವೊಮ್ಮೆ ಬರುತ್ತವೆಯಾದರೂ ನಾವು, ನೀವೂ ಅವೇ ಶಬ್ದಗಳ ವಿಷಯದಲ್ಲಿ ಕಟ್ಟಿಕೊಳ್ಳುವ ಅರ್ಥ ಅವಕ್ಕೆ ಇದ್ದಿರಲಾರದು. ತಮಗೆ ತಿಳಿಯಲಸಾಧ್ಯವಾದ ಯಾವುವೋ ಒಂದನ್ನು ಕುರಿತು ಅವರು ಹಾಗೆ ಕರೆಯುತ್ತಿರಬೇಕು. ಅಂಥ ವಸ್ತುವಿನೊಡನೆ ದೀನ ಮಾತುಗಳನ್ನಾಗಲಿ, ಹೆಮ್ಮೆಯ ಮಾತುಗಳನ್ನಾಗಲೀ ಆಡಿದವರಲ್ಲ.

ಅವರ ಬಾಯಿಯ ಗೊಣಗು, ಇಲ್ಲವೆ ಮೆಲು ಮಾತುಗಳು, ಒಂದು ರೀತಿಯಿಂದ ಅವರ ಆತ್ಮಗ್ರತಗಳು. ಅವರು ಬಹಿರಂಗವಾಗಿ ವಿಚಾರ ಮಾಡುವ ಚಿಂತನೆಗಳು. ನಾನು ಹೋದಾಗ, ಅವರು ಯಾವುದೋ ಒಂದು ವಿಚಾರದಲ್ಲಿ ಚಿಂತಿಸುತ್ತಿದ್ದುದರಿಂದ ಕಾದು ಕುಳಿತುಕೊಂಡೆ. ಚಿಂತನೆ ಮುಗಿದು ಅವರ ದೃಷ್ಟಿ ನನ್ನ ಕಡೆಗೆ ಬಿದ್ದಿತಾದರೆ - ಅವರು ಹೇಗೂ ಸಮೀಪಕ್ಕೆ ಕರೆಯುತ್ತಾರೆ; ಮಾತನಾಡಿಸುತ್ತಾರೆ ಎಂಬ ವಿಷಯ ಚೆನ್ನಾಗಿ ಗೊತ್ತು. ನಾನಂತು, ಎರಡೆರಡು ವಿಷಯಗಳನ್ನು ಕುರಿತು ಮನಸ್ಸಿನಲ್ಲೇ ಅರ್ಜಿ ಬರೆದುಕೊಂಡು ಅವರ ಕಛೇರಿಯಲ್ಲಿ ಹಾಜರು ಮಾಡಲು ಹೋಗಿದ್ದೆ. ಒಂದಿಷ್ಟು ಹೊತ್ತು ಕಳೆಯಿತು; ಅವರು ನನ್ನನ್ನು ಕಂಡರು, "ಮಾಣಿಯೋ?" ಎಂದರು. ಕೆಲವು ಸಾರಿ "ದೊಡ್ಡ ಮಾಣಿ" ಎಂದು ಕರೆಯುವುದುಂಟು. ಹಾಗೆ ವಿಶೇಷಣ ಹಚ್ಚದೆ ಹೋದರೂ, ಅದು ನಾನೇ. ಈಗಂತೂ ನಾನೇ; ನಾರಾಯಣ ಮನೆಯಲ್ಲಿಲ್ಲವಲ್ಲ. ನಾರಾಯಣನಿದ್ದರೆ ಅವನು "ಸಣ್ಣ ಮಾಣಿ." ಪೀಠಿಕೆಯಾಗಿ "ಹೌದು, ಏನೋ ಕೇಳುವ ಅಂತ ಕಂಡಿತು; ಬಂದೆ. ಪುರುಸೊತ್ತೇ?" ಎಂದು ಕೇಳಿದೆ.

"ಪುರುಸೊತ್ತೇ? ಎಲ್ಲಿಗೆ ಹೋಗಬೇಕಾಗಿದೆ ನಾನು? ಅವನೂ ಕರೆಯಲಿಲ್ಲ. ಸದ್ಯಕ್ಕೆ ನಾನೂ ಹೋಗುವುದಿಲ್ಲ."

"ಅಜ್ಜಿ, ಒಂದು ಯೋಚನೆ ಬಂದಿತು. ನಿಮ್ಮನ್ನು ಕೇಳುವ ಅಂತ ಅನಿಸುತ್ತದೆ."

"ಏನು, ಹೇಳು."

"ರಾಮಾಯಣದಲ್ಲಿ ರಾಮ ಮತ್ತು ಸೀತೆ, ಮಹಾಭಾರತದಲ್ಲಿ ಕೃಷ್ಣ, ರುಕ್ಮಿಣಿ, ಸತ್ಯಭಾಮೆ - ಇನ್ನು ಹಾಗೆಯೇ ಶಿವ ಮತ್ತು ಪಾರ್ವತಿ - ಇವರೆಲ್ಲ ದೇವರುಗಳಿದ್ದಾರಲ್ಲ. ಅವರು ಆಗಾಗ ಅವತಾರ ತೆಗೆದುಕೊಳ್ಳುತ್ತಾರಲ್ಲ; ಅವತಾರ ತೆಕ್ಕೊಂಡು ಭೂಮಿಯ ಮೇಲೆ ಮನುಷ್ಯರಾಗಿ ಹುಟ್ಟುತ್ತಾರೆ ಅಲ್ಲಿ ಇಲ್ಲಿ; ದುಷ್ಟರ ಶಿಕ್ಷೆಗೆ, ಶಿಷ್ಟರ ಪರಿಪಾಲನೆಗೆ ಅದು - ಅನ್ನುತ್ತಾರೆ."

"ಅನ್ನುತ್ತಾರೆ ನಿಜ; ಭಾಗವತ, ರಾಮಾಯಣ ಮತ್ತು ಮಹಾಭಾರತ ಹಾಗೆನ್ನುತ್ತವೆ, ನಿಜ. ಅವು ಕೂಡ ಹದಿನೆಂಟು ಪುರಾಣಗಳ ಬದನೆಕಾಯಿಯೇ ಇದ್ದೀತು. ಯಾಕೆ

ಎನ್ನುತ್ತೀಯಾ? ಎಲ್ಲೆಲ್ಲೂ ಇರುವ ದೇವರಿಗೆ, ಅಲ್ಲಿ ಇಲ್ಲಿ, ಏನಾದರೂ ಕಸಕಡ್ಡಿ ಜಮೆಯಾದುದನ್ನು ಕಂಡರೆ, ಹಿಡಿಸೂಡಿ ಹಿಡಿದುಕೊಂಡು ಗುಡಿಸುವುದಕ್ಕೆ ತಾನೊಂದು ಅವತಾರ ತಾಳಬೇಕೇ? ಕಸಕಡ್ಡಿ ಅಂತ ಅಲ್ಲ! ದುಷ್ಟರು, ದುಷ್ಟತನ ಅಂತಲೇ ಇರಲಿ; ರಾವಣ, ಹಿರಣ್ಯಕಶಿಪುಗಳಂಥ ದುಷ್ಟರೇ ಅವರಿರಲಿ. ಆತ ಚಟ್ಟನೆ ಒಂದು ಸಿಡಿಲು ಬಡಿದರೆ ಸಾಯಬಹುದಾದ ಈ ಹುಳುಗಳಿಗಾಗಿ ಅವತಾರ ಎತ್ತಬೇಕಾಗುತ್ತದೆಯೇ? ನಮ್ಮದಾದರೆ - ಒಂದು ಅವತಾರ. ಹೆಣ್ಣು, ಗಂಡು ಹುಳ, ಕುಟ್ಟೆ, ಹಸು, ಹಕ್ಕಿ ಇವೆಲ್ಲ ಅವತಾರಗಳೇ!"

"ನಾನು ಯಾಕೆ ಕೇಳಿದೆನೆಂದರೆ - ವಿಷ್ಣು ಲಕ್ಷ್ಮಿಯರು ಅವತಾರ ಮಾಡಿ ಸೀತೆ ರಾಮರಾಗಿ ಭೂಮಿಯ ಮೇಲೆ ಹುಟ್ಟಿದರು. ಇಲ್ಲಿಯೂ ತಿರುಗಿ ಗಂಡ ಹೆಂಡಿರಾದರು. ಈಗ ನಾನು, ನನ್ನ ಸೀತೆ - ಇಬ್ಬರೂ ಸತ್ತ ಮೇಲೆ, ತಿರುಗಿ ಮುಂದಿನ ಜನ್ಮದಲ್ಲಿಯೂ ಹೀಗೆ ಗಂಡ, ಹೆಂಡಿರಾಗುವುದು ಸಾಧ್ಯವೇ? ದೇವರ ಆತ್ಮಕ್ಕೆ ಅದು ಸಾಧ್ಯವಾದರೆ, ನಮ್ಮ ಆತ್ಮಕ್ಕೆ ಯಾಕೆ ಸಾಧ್ಯವಿಲ್ಲ? ಎಂದು ಹೊಳೆದು ಕೇಳಿದೆ."

"ಸತ್ತ ಮೇಲೆ ಯಾರಿಗೆ ಏನಾಗುತ್ತದೋ; ನನಗಂತು ಗೊತ್ತಿಲ್ಲ. ನನಗೆ ನಾನು ಹಿಂದೆ ಇದ್ದದ್ದೂ ಗೊತ್ತಿಲ್ಲ; ಮುಂದಿರುವುದೂ ಗೊತ್ತಿಲ್ಲ. ಅನ್ನುತ್ತಾರೆ - ನೂರಾರು ಜನ್ಮ ಆತ್ಮನಿಗುಂಟು ಎಂತ. ಎಷ್ಟು ನಿಜವೋ, ಎಷ್ಟು ಸುಳ್ಳೋ. ದೇವರು ಅಂದರೆ ಪರಮಾತ್ಮ; ಆ ಪರಮಾತ್ಮನಿಗೂ ಸಹ ಜನ್ಮವುಂಟು - ಎಂದರೆ, ನನಗೆ ಏನೇನೂ ಅರ್ಥ ಆಗುವುದಿಲ್ಲ. ಅವನು ಇಡೀ; ಹೋಳಲ್ಲ, ತುಂಡಲ್ಲ, ಚೂರಲ್ಲ. ಇಡೀ ಎಂಬುದು ಒಂದು ಕಡಿಯಾಗಿ ಹುಟ್ಟಿತು - ಅಂದರೆ ಅದು ಕತೆ. ನಮಗೆ ಬೇಕಲ್ಲ - ಏನಾದರೂ ಒಂದು ಸಮಾಧಾನ. ದುಷ್ಟರು ಸಾಯಲೇಬೇಕು; ಶಿಷ್ಟರು ಉಳಿಯಲೇಬೇಕು ಎಂಬ ಸಮಾಧಾನ ಬೇಕು. ಅದಕ್ಕಾಗಿ ನೂರಾರು ದೇವರನ್ನು ಹುಟ್ಟಿಸಿದೆವು. ಸಾವಿರಾರು ದುಷ್ಟರನ್ನು ಕೊಲ್ಲಿಸಿದೆವು. ಹಾಗೆಯೇ ಇಂದ್ರ, ವರುಣರನ್ನು ತಂದಿಟ್ಟರು; ತೆಗೆದರು. ಅಮ್ಮ ದುರ್ಗಿ, ಕೋಟಳೆ, ಕಾಳಿ, ಚಂಡಿ, ಚಾಮುಂಡಿ - ಎಂತ ಇಟ್ಟರು; ತೆಗೆದರು. ಅವರನ್ನು ಪೂಜೆ ಮಾಡಿದರು; ಆಮೇಲೆ ಮರೆತರು. ನಮ್ಮ ಹಾಗೆಯೇ ಚುಟುಕಿನ ಆಯುಷ್ಯವನ್ನು ಆ ದೇವರಿಗೂ ಕೊಟ್ಟರು - ಎಂದು ಕಾಣಿಸುತ್ತದೆ. ಹಾಗಾಗಿ ಇವತ್ತು ಇಂದ್ರ, ವರುಣ, ಮರುತ್ತು - ಯಾವ್ಯಾವುದೂ ಉಳಿದುಕೊಂಡಿಲ್ಲ ಜೀವಂತವಾಗಿ."

"ಹಾಗಿದ್ದರೆ ಪುನರ್ಜನ್ಮ ಇಲ್ಲ ಅನ್ನುತ್ತೀರಾ?"

"ಉಂಟು ಅನ್ನುವವರುಂಟು; ಇಲ್ಲ ಅನ್ನುವವರುಂಟು. ಸ್ವರ್ಗ, ನರಕಗಳಿದ್ದರೆ ಬೇಕಿಲ್ಲ ಎಂದು ಕಾಣಿಸುತ್ತದೆ ನನಗೆ."

"ಸ್ವರ್ಗ, ನರಕಗಳಾದರೂ ಉಂಟು ಅನ್ನುತ್ತೀರಾ? ಯಮ, ಚಿತ್ರಗುಪ್ತ ಇವೆಲ್ಲ ನಿಜವೇ?"

"ಸಣ್ಣ ಮಕ್ಕಳಿಗೆ ಕತ್ತಲೆ ಆದಾಗ ಹೊರಗೆ ಹೋಗಬಾರದು ಎಂದು ಹೆದರಿಸಲಿಕ್ಕೆ 'ಗುಮ್ಮ' ಇದ್ದಾನೆ ಅನ್ನುವುದಿಲ್ಲವೇ? ಗುಮ್ಮನನ್ನು ನಾನು ಕಂಡಿದ್ದೇನೊ ಅಥವಾ ನೀನು ಕಂಡಿದ್ದೀಯಾ? ಆದರೂ ನಿನ್ನ ಕಿಟ್ಟಣ್ಣ ಹಟ ಮಾಡಿದರೆ - 'ಗುಮ್ಮ ಬರುತ್ತೆ' ಎಂದು ನೀನೇ ಹೇಳುತ್ತೀ. ನೀನು ಹಟ ಮಾಡಿದಾಗ ನಿನ್ನನ್ನು ಹೆದರಿಸಲಿಕ್ಕೆ ನಾನೂ ಹಾಗೆ ಹೇಳಿದ್ದೆ. ಹೇಳಿದ್ದೆಲ್ಲವೂ ನಿಜವಾದರೆ ಹೇಗಾದೀತು? ಯಾಕಾಗಿ ನಿನಗೆ ಈ ಯೋಚನೆ? ಅದನ್ನು ಮೊದಲು ಹೇಳು. ನನಗೆ ಸಾಯುವ ಹೆದರಿಕೆಯಿಲ್ಲ. ಸತ್ತ ಮೇಲೆ ನನಗೆ ಏನೂ ಆಗುವುದಿಲ್ಲ. ನಿನಗೇಕೀಗ ಸಾವಿನ ಭಯ?"

"ಆ ಹೆದರಿಕೆಯಿಂದಲ್ಲ ನಾನು ಹೇಳಿದ್ದು. ಸಾವು ಬಂದರೆ ಬರುತ್ತದಪ್ಪ; ಯಾರ್‍ಯಾರೂ ಅದನ್ನು ತಡೆದವರಿಲ್ಲ. ನಾವು ಯಾರನ್ನೂ ಕೇಳದೆಯೇ ಹುಟ್ಟಿದೆವು; ಕೇಳದೆಯೇ ಸಾಯುತ್ತೇವೆ. ನನಗಾಗಿ ಈ ವಿಚಾರ ಮನಸ್ಸಿಗೆ ಬಂದದ್ದಲ್ಲ. ಪಾಪ, ದೊನ್ನೆ ನಮ್ಮ ಮನೆಗೆ ಆ ನಾಗಿ ಬಂದಿದ್ದಳಷ್ಟೆ. ಅವಳನ್ನು ಕಂಡಾಗ ತುಂಬ ಕನಿಕರ ಕಾಣಿಸಿತು. ಅವಳು ಎಂದೋ ಒಂದು ತಪ್ಪು ಮಾಡಿದಳು; ನಿಜ. ರಾಮಣ್ಣ ಏನೂ ತಪ್ಪು ಮಾಡಲಿಲ್ಲವಲ್ಲ. ಅವಳು ಕೊಟ್ಟ ಸಂಚಿಯನ್ನು ಅವನು ಮರೆತೇ ಇಲ್ಲ. ರಾಮ, ಸೀತೆಯರ ಹಾಗೆ ಇವರೂ ಮುಂದಿನ ಜನ್ಮದಲ್ಲಿ ಗಂಡಹೆಂಡಿರಾಗಿ ಬದುಕಲು ಬರುತ್ತಿದ್ದರೆ ಆಗುತ್ತಿತ್ತು - ಎಂಬ ಯೋಚನೆ ಬಂದಿತು."

"ಹಾಗೋ! ಗಂಡಹೆಂಡಿರಾಗಿ ಬದುಕುವುದಾದರೆ ಇಂದೇ ಬದುಕಿದರೆ ಪಸಂದ. ಮುಂದಿನ ಜನ್ಮವಿದ್ದರೂ, ಆಗ ಅವನೆಲ್ಲೋ; ಇವಳೆಲ್ಲೋ. ಅವನು ಕಾಗೆ, ಇವಳು ಗುಬ್ಬಚ್ಚಿಯಾದರೂ ಆದರೇ. ಇವಳು ಕಾಗೆ, ಅವನು ಗುಬ್ಬಚ್ಚಿಯಾದರೂ ಆದರೇ."

ನನಗೆ ಅಜ್ಜಿಯ ಈ ಮಾತನ್ನು ಕೇಳಿ ನಗು ಬಂದಿತು. ನನ್ನ ಮನಸ್ಸಿನ ವಿಚಾರ ಸರಣಿಯ ಪ್ರತಿಧ್ವನಿ ಅವರಲ್ಲಿಯೂ ಮೂಡಿತ್ತೆಂದು ಸ್ಪಷ್ಟವಾಯಿತು. ಆ ವಿಷಯದಲ್ಲಿ ಅವರೇನನ್ನಾದರೂ ಹೇಳಬಹುದು ಎಂಬ ಆಸೆ ಉಂಟಾಯಿತಾದರೂ, ಕೇಳುವುದಕ್ಕೆ ಹೋಗಲಿಲ್ಲ. ನನ್ನ ಇನ್ನೊಂದು ಪ್ರಶ್ನೆ ಇದೆಯಲ್ಲ, ಅದೆಂದರೆ - ಕಲ್ಲು ಮಂಟಪದಿಂದ ಹೊತ್ತು ತಂದ ಕಂಚಿನ ಪ್ರತಿಮೆಯ ವಿಚಾರ. ಅರಿವೆಯಲ್ಲಿ ಸುತ್ತಿಟ್ಟ ಅದನ್ನು ಮೆಲ್ಲಗೆ ಹೊರಕ್ಕೆ ತೆಗೆದೆ.

"ಅಜ್ಜಿ, ನೀವು ಇದೊಂದನ್ನು ನೋಡಿ" ಎಂದು ಅವರೆದುರಿಗೆ ಒಡ್ಡಿದೆ. ಅವರು ಅದನ್ನು ಹಿಡಿದುಕೊಂಡರು. ವಾಡಿಕೆಯಂತೆ ನಾಲ್ಕು ನಿಮಿಷಗಳ ಕಾಲ ಏನೂ

ಮಾತಾಡಲಿಲ್ಲ. ನಾನೇ ಅದಕ್ಕೆ ಪೀಠಿಕೆಯನ್ನು ಹೇಳಿದೆ. "ಮಳೆ ಬಂದ ಮರುದಿನವೇ ಕಲ್ಲುಮಂಟಪ ಬಿದ್ದದ್ದನ್ನು ನೋಡಲು ಹೋಗಿದ್ದೆ. ಅಲ್ಲಿ ಸಿಕ್ಕಿತು ಇದು" ಎಂದೆ.

"ಭಾರವಿದೆ. ಕಂಚಿನ ಮೂರ್ತಿ ಇದ್ದ ಹಾಗೆ ಕಾಣುತ್ತೆ" ಎಂದು, ಅರಿವೆ ಸಹಿತವಾಗಿಯೇ ಅದನ್ನು ಕಳಚಿ ನೋಡಿದರು. ಅನಂತರ "ಇದೂ ಒಂದು ದೇವರೇ! ನನ್ನ, ನಿನ್ನ ದೇವರಲ್ಲ. ಒಂದು ಜಾತಿಯ ದೇವರು. ದೇವರ ಹಾಗೋ, ದೇವತೆಯ ಹಾಗೋ, ಋಷಿಗಳ ಹಾಗೋ ಇದ್ದ ಹಾಗಿನವರು. ಪೂಜೆಗೀಜೆ ಮಾಡಿದ್ದಾರೆ ಇದಕ್ಕೂ. ನೂರಿನ್ನೂರು ವರ್ಷಕಾಲ ಸ್ಥಾಪನೆ ಮಾಡಿ, ಪೂಜೆ ಮಾಡಿದ್ದರೂ ಮಾಡಿದ್ದರೇ. ಯಾವ್ಯಾವ ಕೈಗಳಲ್ಲಿ ಇದನ್ನು ಮುಟ್ಟಿದ ಹಾಗಿದೆ. ಅವುಗಳಲ್ಲಿ ಒಂದು ಕೈ ಮಾತ್ರ ತೀರ ದುಷ್ಟ ಕೈ. ದುಷ್ಟ - ಅಂದರೆ ಏನು? ಒಂದಿಷ್ಟೂ ಸಹನೆಯಿಲ್ಲದ್ದು. ಹೌದು, ಹೌದು. ಇದು ಬಂದದ್ದೇ ಅದರಿಂದ. ಇದನ್ನು ಅಲ್ಲಿ ನಿಲ್ಲಿಸಿದ್ದು. ಅದರಿಂದಲೇ ಇಂದ್ರನನ್ನು ಓಡಿಸಿ ಸೂರ್ಯನನ್ನು ತಂದರು ಎಂದೆನಲ್ಲ. ಸೂರ್ಯನನ್ನು ಓಡಿಸಿ ವಿಷ್ಣುವನ್ನೂ ಓಡಿಸಿ ನಾರಾಯಣನನ್ನು ತಂದರು. ಅದರ ಹಾಗೆಯೇ ಇದರದ್ದೂ ಒಂದು ತೆರನಾದ ಕತೆ. ಒಂದು ಕಾಲದಲ್ಲಿ ಜನಾರ್ದನನೋ, ವಿಷ್ಣುವೋ ಆಗಿದ್ದ ಈ ಮೂರ್ತಿಯನ್ನು ಕಾಯಿಸಿ, ಕರಗಿಸಿ, ಈ ದೋಣು ಗೊಂಬೆಯನ್ನು ಮಾಡಿದರು. ನನಗೆ ಅನಿಸುತ್ತದೆ - ಗರುಡ ವಾಹನ ವಿಷ್ಣು - ಇದಕ್ಕೆ, ಹಿಂದಿನ ಆಕಾರ. ಇದನ್ನು ನೆಟ್ಟ ತಾವಿನಲ್ಲೇ ಹಿಂದೆ ವಿಷ್ಣು ಮೂರ್ತಿಯನ್ನು ಸ್ಥಾಪನೆ ಮಾಡಿದ್ದರು. ಇನ್ನೂ ಏನೇನೋ ತಬ್ದಿಲು ಮಾಡಿರಬೇಕು. ಕಲ್ಲು ಮಂಟಪದಲ್ಲಿ ಇದು ಸಿಕ್ಕಿತು ಅಂದೆಯಾ? ಹಾಗಿದ್ದರೆ ಅಲ್ಲಿ ದೇವಸ್ಥಾನವಿದ್ದುದು ಮುಂದೆ ಬಸ್ತಿಯಾಯಿತು; ಬಸ್ತಿಯಿದ್ದದ್ದು ಮಂಟಪವಾಯಿತು" ಇಷ್ಟು ಮಾತುಗಳನ್ನು ಹೇಳಿ - ಅವರು ಸುಮ್ಮನೆ ಕುಳಿತುಬಿಟ್ಟರು. ಸ್ವಲ್ಪಹೊತ್ತು ನಾನು ಅವರ ಮುಖವನ್ನೇ ನೋಡುತ್ತಿದ್ದರೂ, ಕತ್ತಲಾದುದರಿಂದ, ಅವರ ಅರೆಮಸುಕು ಮುಖದಲ್ಲಿ ಯಾವ ಭಾವ ಹೊಮ್ಮಿದ್ದನ್ನೂ ಕಾಣೆ. ಅವರೇನೇನು ಚಿಂತಿಸುತ್ತಿದ್ದರೋ; ಅವರಿಗೆ ಏನೇನು ಕಾಣಿಸುತ್ತಿತ್ತೋ.

"ಬಹಳ, ಬಹಳ ರಕ್ತಪಾತ ಇದಿದ್ದ ತಾವಿನಲ್ಲಿ ನಡೆಯಿತಪ್ಪಾ. ಇದರ ವಠಾರದಲ್ಲಿಯೇ ಈ ಊರಿನ ಜನರು ಕತ್ತಿ, ಕೋಲು ಹಿಡಿದುಕೊಂಡು ಜಗಳವಾಡಿದರು. ಈ ಗೊಂಬೆಯನ್ನು ಪೂಜಿಸುತ್ತಿದ್ದ ಒಬ್ಬ ಅರಸ, ಅರಸ ಏನು, ತುಂಡು ಪಾಳೆಯಗಾರ, ಈ ಊರನ್ನು ಮುತ್ತಿದ; ಸೂರೆ, ಸುಲಿಗೆ ಮಾಡಿದ; ರಾಜ್ಯವನ್ನು ಗೆದ್ದ. ನೋಡು, ಅವನ ಜಾತಿಯೇ ಬೇರೆ; ಈ ಊರಿನವರ ಜಾತಿಯೇ ಬೇರೆ. ಅವನದ್ದೊಂದು ದೇವರು; ಈ ಊರವರದ್ದು ಇನ್ನೊಂದೇ ದೇವರು. ಅಂತು ಅವನು ಗೆದ್ದ. ಮೆರೆದ; ಹತ್ತು ವರ್ಷಗಳು ಕಳೆದ ಮೇಲೆ, ಸೋತವರು ಹೆದರಿಯೇ ತೆಪ್ಪಗಾದರು. ಅವನ ಕಾರುಭಾರ ಮೆರೆಯಿತು; ಅವನ ರಾಜ್ಯ ದೊಡ್ಡದಾಯಿತು. ಅವನು ಬಂದ ಊರಿಂದ ನೂರಾರು ಜನಗಳು ಬಂದು

ಇಲ್ಲಿ ಸೇರಿಕೊಂಡರು. ಅಧಿಕಾರ ಮಾಡಿದರು. ಊರಿಗೆ ಅವರು ಧನಿಗಳಾದರು; ಊರವರು ಒಕ್ಕಲಾದರು.ದೊಡ್ಡವರ ಬಾಲ ಹಿಡಿಯುವ ವಾಡಿಕೆ ಈಗಲೂ ಎಲ್ಲೆಲ್ಲೂ ಇದ್ದೇ ಇರುತ್ತದೆ. ನಮ್ಮೂರಿನ ಸುತ್ತುಮುತ್ತಿನವರೂ ಹಾಗೆಯೇ ಮಾಡಿದರು - ಎಂದು ಕಾಣಿಸುತ್ತದೆ. ಊರಿನ ಸಣ್ಣಪುಟ್ಟ ಜನರು ಬಗ್ಗಿ ಕುಲಗೆಟ್ಟರೆ ಹೆಚ್ಚಲ್ಲ. ಇದು ಹಾಗಲ್ಲ; ಈ ಊರಿನ ಯಜಮಾನನ ಹಾಗಿದ್ದವನು ಇವನ ಜಾತಿಗೆ ಸೇರಿದನೋ, ಆ ಅರಸನಿಗೆ ತನ್ನ ಮಗಳನ್ನು ಕೊಟ್ಟನೋ, ಇನ್ನೇನು ಮಾಡಿದನೋ! ಅಂತು, ಆತ ಜಾತಿಯನ್ನು ಬಿಟ್ಟ. ಅವನ ಹಿಂದೆ ಹತ್ತಾರು ಮಂದಿಯೂ ಹಾಗೆ ಮಾಡಿದರು. ಅದರಿಂದ ಊರಲ್ಲಿ ದಂಗೆಯಾಗಲಿಲ್ಲ, ಮತ್ತೊಂದಾಗಲಿಲ್ಲ. ಆದರೆ, ಊರಿನ ಜನರಿದ್ದಾರಷ್ಟೆ ಸಾವಿರ ಮಂದಿ; ಅವರ ಮನಸ್ಸು ಮಾತ್ರ ಕುದಿಯಿತು.ಈ ಹೊರಗಿನವರು ಶಿವನನ್ನು, ಅಂಬೆಯನ್ನು ಕೊಳಕು ಮಾತುಗಳಿಂದ ಕರೆಯತೊಡಗಿದರು. ಊರಿನ ಜನರು ನೊಂದುಕೊಂಡರು. ಹಿಂದಿನ ಕಾಲದಲ್ಲಿ ಬ್ರಾಹ್ಮಣರೂ ಹಾಗೆಂದವರೇ; ಶಿವಲಿಂಗವನ್ನು ಕಂಡು ಏನೇನೋ ಹೇಳಿದರು. ಇವರೂ ಹಾಗೆಯೇ; ಏನೇನೋ ಕೆಟ್ಟ ಮಾತು ಅಂದರು. ಕೆಲವರಂತು ತಮ್ಮ ಮತವನ್ನು ಬಿಟ್ಟು ಹೊಸ ಮತವನ್ನು ಸೇರಿದರು. ಹಾಗಾಗಿ, ನೂರಾರು ಸಂಸಾರಗಳು ಮನಸ್ಸಿನಲ್ಲೇ ಕುದಿದು ತಮ್ಮ ಸಂಕಟವನ್ನು ನುಂಗಿಕೊಂಡು ಬಾಳಿದವು. ಅಂಥ ಕಾಲದಲ್ಲಿ ಹುಟ್ಟಿಕೊಂಡ ಬೊಂಬೆಯಿದು."

"ಮುಂದೆ ಇದರ ಕಥೆಯೂ ಸ್ವಾರಸ್ಯವಿಲ್ಲ. ಜೀವ ಶಾಶ್ವತವೇ? ಮನುಷ್ಯ ಶಾಶ್ವತನೇ? ಹಾಗಿದ್ದ ಮೇಲೆ ಅವರು ಕಟ್ಟಿಕೊಂಡ ದೇವರು ಶಾಶ್ವತ ಆದಾನೆಯೇ? ಮೂಲದಲ್ಲಿ ದೇವರ ಪ್ರೇರಣೆ ಯಾವುದೇ ಇದ್ದರೂ, ಅದನ್ನು ಕಟ್ಟಿಕೊಂಡ ಜನರು ಬದಲಾಗಿಯೇ ಆಗುತ್ತಾರೆ. 'ಆ ದೇವರು ಹೀಗೆ' ಅಂದರೆ, 'ಈ ದೇವರು ಹಾಗೆ' ಅನ್ನುತ್ತಾರೆ."

"ಎಷ್ಟೋ ಕಾಲ ಕಳೆದ ಮೇಲೆ ಈ ಬೊಂಬೆಯನ್ನು ಸ್ಥಾಪನೆ ಮಾಡಿದ ಅರಸನು ಸತ್ತು ಮಣ್ಣಾದ ಮೇಲೆ, ಅವನ ಮೊಮ್ಮಕ್ಕಳ ಕಾಲಕ್ಕೆ ಅವರ ಅರಸುಪಟ್ಟ ಕೂಡ ಹೊರಟು ಹೋಯಿತು! ಇನ್ನಾರೋ ಇನ್ನೆಲ್ಲಿಂದಲೋ ಇಲ್ಲಿಗೆ ಬಂದರು, ಊರನ್ನು ಆಳಿದರು. ಇವನ ಜಾತಿಯವರು, ಪರಿವಾರದವರು, ಒಂದೆರಡು ತಲೆಮಾರುಗಳಿಂದ ಇಲ್ಲಿದ್ದವರು ಗಂಟು ಕಟ್ಟಿದರು. ಇವರ ಮತವನ್ನು ಹಿಡಿದವರಲ್ಲಿ ಎಷ್ಟೋ ಮಂದಿ ತಿರುಗಿ ತಮ್ಮ ಹಿರಿಯರ ಮತವನ್ನೇ ಸೇರಿಕೊಂಡರು. ಅದೇ ಕಾಲಕ್ಕೆ ಹೊರಗಿನಿಂದ ಬೇರೆ ಯಾರೋ ಬಂದರು - ಮೈತುಂಬ ಬೂದಿ ಬಳಿದುಕೊಂಡು, ಕೈಯಲ್ಲಿ ಕಮಂಡಲು ಹಿಡಿದು ತಿರುಗಾಡುವ ಜನರಪ್ಪ, ಅವರ ದಿಬ್ಬಣ ಯಾಕೆ ಬಂತು? ನೋಡಲಿಕ್ಕೆ ಭೈರಾಗಿಗಳ ಹಾಗೆಯೇ ಇದ್ದವರು; ಅವರೂ ಶಿವಭಕ್ತರಿರಬೇಕು. ಹಣೆ ತುಂಬ ಬೂದಿ, ಕೊರಳಲ್ಲಿ ರುದ್ರಾಕ್ಷಿಸರ; ಉಗ್ರಸ್ವಭಾವದ ಜನರು. ಹಾಗೆಂತ ಜನರಿಗೆ ಪೀಡೆ ಕೊಟ್ಟವರಲ್ಲ; ಇಲ್ಲಿ

ಅರಸುತನ ಮಾಡಿದವರೂ ಅಲ್ಲ. ಹಿಂಡುಗಾನ ಅಮ್ಮನವರ ಗುಡಿಯ ಮುಂದೆ ಅವರು ಅಗ್ಗಿಷ್ಟಿಕೆ ಹಾಕಿ ಕುಳಿತದ್ದು ಕಾಣಿಸುತ್ತದೆ ನನಗೆ. ಹಗಲೆಲ್ಲ ನಿದ್ರೆ ಅವರಿಗೆ; ರಾತ್ರಿ ಅಗ್ಗಿಷ್ಟಿಕೆ ಮುಂದೆ ಕುಳಿತು ಏನೇನೋ ತಪಸ್ಸು. ಅವರನ್ನು ನೋಡುವುದಕ್ಕೆ ಅದೆಷ್ಟು ಮಂದಿ ಬರುವುದು! ಏನು ಕತೆ! ಅವರು ಬಂದ ಕಾಲದಲ್ಲಿ ಅಂತ ಕಾಣುತ್ತದೆ - ಪೂಜೆ ಮಾಡುವವರಿಲ್ಲದೆಯೇ, ನೀನು ಕೊಟ್ಟೆಯಲ್ಲ ಈ ಪ್ರತಿಮೆ, ಗತಿಗೋತ್ರ ಇಲ್ಲದೆ, ಮೂಲೆಯನ್ನು ಸೇರಿತು. ಇದರ ಗುಡಿ ಬಾವಲಿಗಳ ಗುಡಿಯಾಯಿತು. ಇದನ್ನು ಯಾರೋ ಒಬ್ಬನು ಅದೇ ಗುಡಿಯಲ್ಲಿ ಹೂತ ಹಾಗೆ ಕಾಣಿಸುತ್ತದೆ. ಜನರ ಕೈಗೆ ಸಿಕ್ಕಿದ್ದರೆ ಅದನ್ನು ಕರಗಿಸಿ ಕಂಚಿನ ಉರುಳಿ ಮಾಡಿಸುತ್ತಿದ್ದರು. ಇಷ್ಟೊಂದು ಕಂಚನ್ನು ಸುಮ್ಮನೆ ಬಿಟ್ಟಾರೆಯೇ? ಆಮೇಲೆ ಇದರ ಗುಡಿಯ ಸುತ್ತಲೂ ಮುಳ್ಳು, ಬಲ್ಲೆ ಬೆಳೆದು ಇದು ಇತ್ತೋ ಇಲ್ಲವೋ ಎಂಬುದೇ ಗೊತ್ತಾಗದ ಹಾಗಾಯಿತು."

"ಅಲ್ಲ ಮಾಣಿ, ನಾನು ನಮ್ಮೂರಿನ ಇಷ್ಟೆಲ್ಲ ಗುಡಿಗಳನ್ನು ನೋಡಿದ್ದೇನೆ. ಎಲ್ಲಿ ಹೋಗಿ ಕುಳಿತರೂ, ನನಗೆ ಹೀಗೆಯೇ ವಿಚಿತ್ರ, ವಿಚಿತ್ರವಾಗಿ ಕಾಣಿಸುತ್ತದೆಯಪ್ಪ."

"ಅಂದರೆ?"

"ಗುಡಿಯೂ ಶಾಶ್ವತವಲ್ಲ; ಅಲ್ಲಿನ ದೇವರೂ ಶಾಶ್ವತವಲ್ಲ. ಒಬ್ಬ ಶಾಶ್ವತವಾದ ದೇವರು ಇದ್ದಾನೆಂದರೂ, ಅವನು ಎಂಥವನೆಂದು ನಮ್ಮ ಎಟುಕಿಗೆ ಸಿಕ್ಕಿದ್ದಿಲ್ಲ. ನಾವು ನಮ್ಮ ನಮ್ಮ ಬುದ್ಧಿಗೆ ಸಮನಾಗಿ, ನೂರು, ಸಾವಿರಗಟ್ಟಲೆ ದೇವರನ್ನು ಮಾಡಿಕೊಂಡು 'ಇದೇ ನಿಜ' 'ಅದೇ ನಿಜ' ಎಂತ ಮರುಳು ಮಾತನಾಡಿದವರು. ಸಂಕಟ ಬಂದಾಗಲೆಲ್ಲ ಅಂಥ ದೇವರ ಹತ್ತಿರ ಹೋಗಿ 'ಅದನ್ನು ಕೊಡು, ಇದನ್ನು ಕೊಡು' ಎಂದು ಬೇಡಿದವರು. ಬೇಡದೆ ಏನು ಮಾಡಿಯಾರು ನಮ್ಮ ಜನ? ಸಂಸಾರದಲ್ಲಿ ಸೋತು ಕಂಗಾಲಾಗುವಾಗ ಯಾರಿಗಾದರೂ ಕಣ್ಣೀರಿಟ್ಟು ಮೊರೆ ಹೋಗಬೇಕಲ್ಲ. ಬದುಕಿಗೆ ಏನಾದರೂ ಒಂದು ಸಮಾಧಾನ ಸಿಗಬೇಕಲ್ಲ. ಸಮಾಧಾನ ಬಂದರೆ, ಆಗ 'ಅವನು ಕೊಟ್ಟ' ಅನ್ನುವುದು. ಅಂದರೇನು? ನಮ್ಮ ಭಕ್ತಿ ಅಂಥದು! ಒಲಿದುಬಿಟ್ಟ ಪರಮಾತ್ಮ ಅಂದ ಹಾಗೆಯೇ ಅದು. ಸಮಾಧಾನ ಸಿಗದೆ ಹೋದರೆ - ಇದ್ದೇ ಇದೆ - ಇನ್ನೊಂದು ತೆರನ ಸಮಾಧಾನ; ಅದು ಅವನ ಮನಸ್ಸಿಗೆ ಬರಲಿಲ್ಲ. ಅವನು ಕೊಡಲಿಲ್ಲ ಅನ್ನುವುದು. ನಮಗೆ ಕೊಟ್ಟಿದ್ದರ ಮೇಲಿಂದ, ಬಿಟ್ಟಿದ್ದರ ಮೇಲಿಂದ ಅವನನ್ನು ಅಳೆಯುವವರು ನಾವು. ನಾವು ಅವನನ್ನು ಕಟ್ಟಿಕೊಂಡು ಪೂಜೆ ಮಾಡತೊಡಗಿದ ಮೇಲೆ ಎಂದೂ ಆ ಪರಮಾತ್ಮನನ್ನು ಅವನಷ್ಟಕ್ಕೇ ಬಿಟ್ಟಿದ್ದೇ ಇಲ್ಲ. 'ಅದನ್ನು ಕೊಡು, ಇದನ್ನು ಕೊಡು' ಎಂದು ನಿರಂತರವೂ ಕಾಡಿದವರೇ. ಕೆಲಕೆಲವರು ಬುದ್ಧಿವಂತರು ಮಾತ್ರ ಹಾಗೆ ಮಾಡಲಿಲ್ಲವೆಂದೆನಿಸಿದರೂ, ಅವರು ಅವನಿಗೊಪ್ಪಿಸಿದ ಚಾಕರಿ ಮಾತ್ರ ಹಾಗೆ 'ದುಷ್ಟಶಿಕ್ಷಣ, ಶಿಷ್ಟಪರಿಪಾಲನೆಯ' ಕೆಲಸ. ಆಗ ಏನೆಂದ ಹಾಗಾಯಿತು?"

"ಹಾಗೆ ಬೇಡುವುದು, ಅದರಲ್ಲಿಯೂ ದೇವರನ್ನು ಬೇಡುವುದು ತಪ್ಪು ಅನ್ನುತ್ತೀರಾ?"

"ನನಗೆ ಹಾಗೆ ಕಾಣಿಸುತ್ತದೆ; ಯಾರನ್ನು ಯಾವುದಕ್ಕೂ ಬೇಡದಿದ್ದರೇ ಚಂದ. ನಾವೇನೂ ಮಕ್ಕಳಲ್ಲವಷ್ಟೆ; ಸಣ್ಣವರಾದರೆ ಒಂದು ಲೆಕ್ಕ; ಬುದ್ಧಿ ಬಂದ ಮೇಲೆಯೂ ಸಣ್ಣ ಮಕ್ಕಳ ಹಾಗೆ 'ಅಮ್ಮ ತೊಡುವಾಗುತ್ತದೆ, ಬೆಲ್ಲ ಕೊಡು, ಚಾಚಿ ಮಾಡಿದೆ, ಮುಕುಳಿ ತೊಳೆಸು' ಎಂದರೆ ಹ್ಯಾಗಾದೀತು?"

"ಹುಟ್ಟಿ ಬಂದಿದ್ದೇವೆ. ಕೈ, ಮೂಗು, ಬಾಯಿ, ಪಡೆದು. ಅವೆಲ್ಲ ಇರುವುದು ಯಾತಕ್ಕೆ? ಕಚ್ಚಲಿಕ್ಕೆ ಹುಲಿಯ 'ಬಾಯಿ ಕೊಡು', ಹೊರಲಿಕ್ಕೆ ಆನೆಯ 'ಮೈ ಕೊಡು', ನುಸುಳಲಿಕ್ಕೆ ನುಸಿಯ 'ಶರೀರ ಕೊಡು' ಅಂದರೆ ಹೇಗಾದೀತು? ಎಲ್ಲರಿಗೆ ಎಲ್ಲವೂ ಬೇಕಾದರೆ ಅವನು ಕೊಡುವುದಾದರೂ ಎಲ್ಲಿಂದ? ಅವನೇ ನಮ್ಮನ್ನು ಹುಟ್ಟಿಸಿದ್ದಾನೆ ಎಂತ ತಿಳಿಯುವುದಾದರೆ, ಕೊಡುವಷ್ಟನ್ನು ಕೊಟ್ಟೇ ಹುಟ್ಟಿಸಿದ್ದಾನೆ - ಎಂತ ತಿಳಿಯಬೇಕು. ನನಗಂತು ಮಗು, ಯಾರನ್ನು ಯಾವುದಕ್ಕೂ ಬೇಡುವುದು ಪಸಂದ ಅಂತ ಕಾಣಿಸುವುದಿಲ್ಲ. ನಮ್ಮ ಹಾಗೆಯೇ ಸಾವಿರ, ಸಾವಿರ ಅಲ್ಲ, ಕೋಟಿ, ಕೋಟಿ ಪ್ರಾಣಿಗಳಿವೆ. ಅವು ಯಾವುದಾದರೂ, ಯಾರನ್ನಾದರೂ ಬೇಡುವುದನ್ನು ಕಂಡಿದ್ದೀಯಾ? ಮತ್ತೆಲ್ಲ ಬಿಡು - ಅವು ತಮ್ಮ ಅನ್ನವನ್ನು ಬೇಡುವುದಿಲ್ಲ; ಮಲಗಲು ತಾವನ್ನೂ ಬೇಡುವುದಿಲ್ಲ; ಹುಲ್ಲೆಯೆದುರಿಗೆ ಹುಲಿ ಬಂದರೆ 'ಸಹಾಯ ಮಾಡು' ಎಂತಲೂ ಬೇಡುವುದಿಲ್ಲ. ಬುದ್ಧಿ ಬಂದ ಮನುಷ್ಯ ಅದಕ್ಕಿಂತಲೂ ಕಳಪೆಯಾದರೆ ಹೇಗೆ ಮಾಣಿ?"

"ಅದಾದರೆ ಹೌದು ಅಜ್ಜಿ. ನನಗೂ ನಿಮ್ಮ ಪಯಿಂಟು ಸಮನೆಂದೇ ಕಾಣಿಸುತ್ತದೆ. ಆದರೆ ಇನ್ನೊಂದು ಸಂಗತಿಯಿದೆ ಅಜ್ಜಿ..."

"ಏನು ಹೇಳು?"

"ನಿಮಗೆ ಭಕ್ತರ ಕಥೆಗಳು ಗೊತ್ತಿವೆಯಲ್ಲ. ನಾರದಾದಿ ಮುನಿಗಳು ಅನ್ನುತ್ತಾರಲ್ಲ. ಅದು ಪುರಾಣದ ಕತೆ, ಬಿಡುವ; ಪುರಂದರ ದಾಸರನ್ನು ಕೇಳಿದ್ದೀರಲ್ಲ. 'ಕಂಡು ಕಂಡು... ಕೈ ಬಿಡುವರೇ ರಂಗ' ಎಂದಿದ್ದಾರೆ ಅವರು. ಅವರು ಮಾತ್ರ ದೇವರನ್ನು ನೀವು ಹೇಳುವ ಹಾಗೆ, 'ಹೊಟ್ಟೆಗೆ ಅನ್ನ ಕೊಡು, ಮೈಗೆ ಬಟ್ಟೆ ಕೊಡು' ಎಂದು ಬೇಡಿದವರೇ ಅಲ್ಲ. ವೈರಾಗ್ಯ ಜೀವನ ಅವರದ್ದು. ಅವರು ಕೇಳಿದ್ದೇನು? 'ಏ ವಿಠಲ, ನನ್ನನ್ನು ನಿನ್ನ ಹತ್ತಿರ ಕರೆದುಕೋ' ಎಂತ. ಅಲ್ಲವೇ?"

"ಸಣ್ಣ ಮಗು ತನ್ನ ಅಮ್ಮನ ಹತ್ತಿರ ಕರೆದುಕೋ - ಎಂದ ಹಾಗೆ. ಆ ಅಮ್ಮನಿಗೆ ಬದಲು ಕೆಲಸವಿಲ್ಲ - ಎಂದ ಹಾಗೂ ಆಯಿತು. ಒಂದು ಲೆಕ್ಕಕ್ಕೆ ಕರೆದುಕೊಳ್ಳುವವ ಅವನಾದರೆ, ಹೊತ್ತು ಬಂದಾಗ ಅವನೇ ಕರೆಯುತ್ತಾನೆ. ಹಾಗೆ ಯಾರೂ ಕರೆಯಲಿಲ್ಲ ಅಂತಲೇ ನಾನಿಲ್ಲಿ ಇರುವುದು. ನೀನೂ ಇಲ್ಲಿರುವುದು ಅದಕ್ಕೇ."

"ಅಲ್ಲ ಅಜ್ಜಿ, ಅದರಲ್ಲಿ ಇನ್ನೊಂದು ಲೆಕ್ಕಾಚಾರವೂ ಸೇರಿದೆಯಷ್ಟೆ. ಸಂಸಾರವೆಲ್ಲವೂ ದುಃಖಮಯ; ಅದೊಂದು ಬಂಧನ. ನನಗೆ ನೀನೊಬ್ಬನೇ ಬೇಕು, ಇನ್ನೇನೂ ಬೇಡ - ಎಂಬ ಭಾವನೆ ಅವರಿಗಿದ್ದಿತ್ತಷ್ಟೆ. ಮನುಷ್ಯ ದೇಹವನ್ನು ನೆನೆದರೇನೆ ಅವರಿಗೆ ಜಿಗುಪ್ಸೆ ಬರುತ್ತಿತ್ತು. 'ಒಂಬತ್ತು ತೂತಿನ ದೇಹ' ಅಂದಿದ್ದರಲ್ಲ ಅವರು? ಆ ವಿಚಾರದಲ್ಲಿ ನೀವು ಏನು ಸಮಾಧಾನ ಹೇಳುತ್ತೀರಿ?"

ಅಜ್ಜಿ ಆ ಮಾತಿಗೆ ನಕ್ಕರು. "ನಿನ್ನ ದಾಸರಿಗೆ - ದೇಹದ ತೂತುಗಳನ್ನು ಕಂಡು ಬೇಸರ ಬಂದಿತ್ತಾದರೆ, ಮಲ ಮೂತ್ರಗಳನ್ನು ನೆನೆದು ಬೇಸರ ಬಂದಿತ್ತಾದರೆ, 'ದೇವರೇ ಇನ್ನೊಂದು ಜನ್ಮದಲ್ಲಿ ತೂತೆಲ್ಲ ಹೊಲಿದು, ಬರಿಯ ಒಂದು ಚೀಲದ ಹಾಗೆ ಮಾಡಿ ನನ್ನನ್ನು ಹುಟ್ಟಿಸು' ಎಂದು ಬೇಡಲಿ! ದೇವರ ಹತ್ತಿರ ಹೋಗಿ ಅಲ್ಲೇ ಇದ್ದು ಬಿಡುವ ಪಂಚಾತಿಕೆ ಮಾತ್ರ ನನಗೆ ಏನೇನೂ ಅರ್ಥವಾಗುವುದಿಲ್ಲ. ಮಗು, ಸಹಜಕ್ಕೂ ನಾನು ಹೇಳುತ್ತೇನೆ - ಈ ಭೂಮಿಯ ಮೇಲೆ ಅವನಿಲ್ಲ; ಸಂಸಾರದೊಳಗೆ ಅವನಿಲ್ಲ - ಎಂದ ಹಾಗೆಯೇ ಅದು. ಎಲ್ಲೆಲ್ಲಿಯೂ ಅವನಿದ್ದಾನೆ ಎನ್ನುವ ಬಾಯಿಯಿಂದಲೇ, ಬೆಕ್ಕಿಗೊಂದು ಬೇರೆಯೇ ಬಿಡಾರವಿದ್ದ ಹಾಗೆ, ಅವನದ್ದೂ ಒಂದು ಬೇರೆಯೇ ಬಿಡಾರವಿದೆ - ಎಂದು ತಿಳಿದುಕೊಳ್ಳುವಂಥ ರೀತಿ. ಎಲ್ಲೆಲ್ಲಿಯೂ ಇರುವ ದೇವರು ಅವನಾದರೆ, ಸಂಸಾರದಲ್ಲಿಯೂ ಅವನು ಇದ್ದೇ ಇರುತ್ತಾನೆ. ನ್ಯಾಯವಾಗಿ ನಾವು ಹಾಗೆ ತಿಳಿದುಕೊಂಡರೆ ಇಲ್ಲಿಂದ ತಪ್ಪಿಸಿಕೊಂಡು ಹೋಗುವ ಮಾತೇ ಬರಲಾರದು. ಅದನ್ನು ತಿಳಿಯದೇ ಆ ದೇವರಿಗೆ ಬೇರೆಯ ಒಂದು ಮನೆಯನ್ನು ಕಟ್ಟಿ ಕುಳ್ಳಿರಿಸಿದರೆ ಮಾತ್ರ, ಅಲ್ಲಿಗೆ ಹೋಗುವ ಎಂಬ ದೃಷ್ಟಿ ಬಂದೀತು."

"ಹಾಗಿದ್ದರೆ ವೈಕುಂಠ, ಕೈಲಾಸ ಅನ್ನುತ್ತಾರಲ್ಲ ಅದೆಲ್ಲ..."

"ಅನ್ನುತ್ತಾರೆ, ಅನ್ನುತ್ತಾರೆ! ಯಾಕೆ ಅಂದರು? ಆ ದೇವರಿಗೆ ನಮ್ಮ ಹಾಗೆಯೇ ಕೈ, ಕಾಲು, ಕಣ್ಣು, ಬಾಯಿಗಳನ್ನು ಕೊಟ್ಟ ಮೇಲೆ, ಒಂದು ಬಿಡಾರವನ್ನೂ ಮಾಡಿಕೊಡಲೇ ಬೇಕಾಯಿತು. ವೈಕುಂಠ, ಕೈಲಾಸ, ದೇವರ ಬಿಡಾರವಾಯಿತು. ಭೂಮಿ ನಮ್ಮ ಬಿಡಾರವಾಯಿತು. ಅಲ್ಲಿಗೆ ಅವನು ನಮ್ಮನ್ನು ಕರೆಯಿಸುವುದಾಯಿತು; ನಾವು ಮಾತ್ರ ಅಲ್ಲಿಗೆ ಬೇಡಿ, ಬೇಡಿ ಹೋಗುವುದಾಯಿತು. ಇವೆಲ್ಲ ಜಂಬರಕ್ಕೆ ಬಾರದ ಮಾತುಗಳು. ನಾವು ನಾವೇ ಕಲ್ಪಿಸಿಕೊಂಡ ಇನ್ನೊಂದೇ ವ್ಯಾಮೋಹ. ಭೂಮಿಯ ಮೇಲಿನ ಮೋಹ ಬೇಡ; ವೈಕುಂಠದ ಮೇಲಣ ದೋಹ ಬೇಕು - ಅಂದ ಹಾಗಿದು. ನನಗೆ ಯಾಕೋ ಇದು ಪಸಂದ ಕಾಣಿಸುವುದಿಲ್ಲ."

"ಇಲ್ಲಿಂದ ಅಲ್ಲಿಗೆ ಹೋಗಿ ಇರುವುದೇ 'ಮುಕ್ತಿ' ಅನ್ನುತ್ತಾರಲ್ಲ. ಜೀವನ್ಮುಕ್ತಿ ಅಂದರೇನು? ಮುಂದೆ ಜನ್ಮ ಬರುವುದಿಲ್ಲವೇ? ಇಲ್ಲಿನ ಜನ್ಮ ಬೇಡವೇ ಬೇಡ - ಅಂತ ಭಕ್ತರು ಹೆಣಗಾಡಿದರು."

"ಅಂದರೆ - ಏನು ಅಂದ ಹಾಗಾಯಿತು? ಜನ್ಮ ಕೊಟ್ಟವನನ್ನು ದೂರಿದ ಹಾಗಾಯಿತು. ನಾನಂತು ದೂರುವವಳಲ್ಲ. ಒಂದು ಕಾಲದಲ್ಲಿ ನನಗೂ ಹಾಗೆ ಅನಿಸಿತ್ತು, ನಿಜ. ನನ್ನ ಸಣ್ಣ ಯಜಮಾನರನ್ನು ತೆಗೆದುಕೊಂಡು ಹೋಗಿ, ನನ್ನ ಮಾಂಗಲ್ಯ ನಷ್ಟವಾದಾಗ, ವೈಧವ್ಯ ಏನು, ಎಂಥದು ಎಂಬುದನ್ನು ನಾನು ನೆನೆದಾಗಲೆಲ್ಲ ಒಂದು ನಾಲ್ಕು ದಿನ ನನಗೂ ಹಾಗೆ ಕಾಣಿಸಿದ್ದು ನಿಜ. ಆಮೇಲೆ ನಾನು ನನ್ನಷ್ಟಕ್ಕೆ ಯೋಚಿಸಿದೆ. 'ಅವರೇ ಸಾಯಲಿಲ್ಲ, ನಾನೇ ಸತ್ತೆ; ಆಗ ಏನು ಆದ ಹಾಗಾಯಿತು? ಎರಡು ದಿವಸ ಹೆಚ್ಚು ಕಡಿಮೆ ಯಾರಿಗಾದರೂ ಸಾವು ತಪ್ಪಿದ್ದೇ' ಎಂತ ತೋರಿತು. ಆಮೇಲೆ ನಾನು ನನಗೆ ಬೇಗ ಸಾವು ಬರಲಿ - ಎಂದು ಯಾರನ್ನೂ ಬೇಡಲಿಕ್ಕೆ ಹೋದವಳಲ್ಲ; ಹೋಗುವುದೂ ಇಲ್ಲ."

"ಪುನರ್ಜನ್ಮದ ಕಲ್ಪನೆ ಬಂದರೆ ಹಾಗೆ ಕಾಣಿಸುತ್ತದೆ. ಮೇಲಿಂದ ಮೇಲೆ ಈ ಭೂಮಿಯಲ್ಲಿ ನಾವು ಹುಟ್ಟಿ ಕಷ್ಟಪಡಬೇಕಾದೀತಲ್ಲ - ಎಂಬ ಚಿಂತೆ ಬರುವುದರಿಂದ, ಅದರಿಂದ ತಪ್ಪಿಸಿಕೊಳ್ಳಲು, ಮುಕ್ತಿ ಬೇಕು ಎಂದು ಅನೇಕರಿಗೆ ಅನಿಸಿರಬೇಕು. ಜೈನರು ಅನ್ನುತ್ತಾರೆ, ಈಗ ಬೊಂಬೆ ತಂದು ತೋರಿಸಿದೆಯಲ್ಲ ಆ ಪಂಗಡದವರು - ಅವರಲ್ಲಿ ಆತ್ಮದ ಹಿಂದೆ ಕರ್ಮ, ಕರ್ಮದ ಬೆನ್ನಿಗೆ ಜನ್ಮ ತಪ್ಪಿದ್ದಲ್ಲ - ಎಂಬ ನಂಬಿಕೆ ಇದೆಯಂತೆ. ಅವರು ಅದನ್ನು ಹೇಗೆ ಹೇಳುತ್ತಾರೋ ತಿಳಿಯೆ. ಒಟ್ಟು ತಾತ್ಪರ್ಯವೇನೋ ಅದು."

"ಕರ್ಮ ಎಂಬುದು ನನಗೆ ಗೊತ್ತಿದ್ದ ಮಟ್ಟಿಗೆ ನಾವು ಮಾಡುತ್ತಿರುವ ಒಳ್ಳೆಯದೋ, ಕೆಟ್ಟದ್ದೋ ಕೆಲಸ. ಒಳ್ಳೆಯದರಿಂದ ಒಳ್ಳೆಯ ಜನ್ಮ ಬರುತ್ತದೆ, ಕೆಟ್ಟದ್ದರಿಂದ ಕೆಟ್ಟ ಜನ್ಮ ಬರುತ್ತದೆ - ಎಂಬ ನಂಬಿಕೆ ಜನರಲ್ಲುಂಟು, ನಿಜ. ಆದರೆ ಮೊದಲಿನ ಸಾರಿಗೇ - ಜೀವ ಎನ್ನುವುದು ಭೂಮಿಯ ಮೇಲೆ ಕಾಣಿಸಬೇಕೇಕೆ? ತೀರ ಮೊದಲಿನ ಸಾರಿಗೇ - ಅಂದೆ. ಎಲ್ಲಿಂದಾದರೂ ಅದು ತೊಡಗಬೇಕಲ್ಲ? ಯಾವ ಕರ್ಮ ಹುಟ್ಟುವುದಕ್ಕೂ, ಒಂದು ಜೀವವೋ ಆತ್ಮವೋ ಹುಟ್ಟಿರಬೇಕಾಯಿತು. ಹುಟ್ಟುವ ಮೊದಲೇನೇ ಅದಕ್ಕೆ ಕರ್ಮ ಅಂಟುವುದೆಲ್ಲಿಂದ? ಜೀವ ಕಾಣಿಸಿದ ಮೇಲೆಯೇ ಕರ್ಮ. ಅದರ ಮೊದಲು 'ಕರ್ಮ' ಎಂದರೆ, ಅದು ನಮ್ಮ ಕರ್ಮವಲ್ಲ, ಆ 'ದೇವರ ಕರ್ಮ' ಅನಿಸೀತು. ಜೀವ ದೇಹವನ್ನು ತೊಟ್ಟು ಬರುವುದೇ ಕರ್ಮ ಮಾಡುವುದಕ್ಕೆ, ಕರ್ಮ ಮಾಡದಂಥ ಜೀವ ಜೀವವೇ ಅಲ್ಲ. ಒಂದು ಕಲ್ಲಿಗಾದರೆ ಕರ್ಮವೇ ಇಲ್ಲ. ನಾನೂ ನೀನೂ ಜೀವಿಗಳು. ನನಗೂ ನಿನಗೂ ಅದುಂಟು. ಕರ್ಮ ಬಿಟ್ಟು ಜೀವಗಳೇ ಇಲ್ಲ. ನಾವು ಉಸಿರನ್ನಾದರೂ ಎಳೆದುಕೊಂಡಿರಬೇಕಲ್ಲ ಮಗು! ನಿತ್ಯವೂ ಹೊಟ್ಟೆಗೊಂದಿಷ್ಟು ಅನ್ನ ಮತ್ತು ನೀರು ಹಾಕಿಕೊಂಡಿರಬೇಕಷ್ಟೆ, ಜೀವಕ್ಕೆ ಬಂದವರು."

"ಹಾಗಿದ್ದರೆ, ನೀವು ಹೇಳುವುದೇನು?"

"ನನ್ನ ಲೆಕ್ಕಾಚಾರ ಇದು - ಹುಟ್ಟಿದ್ದೇನೆ, ನಾವು ಬದುಕಿದ್ದೇವೆ. ಯಾಕೆ ಅಂತ ನಮಗೆ ಗೊತ್ತಿಲ್ಲ. ಇರುವಷ್ಟು ದಿವಸ ನಮಗೂ ಹಿತವಾಗಿ, ನಾಲ್ಕು ಜನರಿಗೂ ಹಿತವಾಗುವ ಹಾಗೆ ಬಾಳುವುದಪ್ಪ. ಜನರಿಗೆ ಅಂದರೆ - ಬರಿ ಮನುಷ್ಯರಿಗಷ್ಟೇ ಅಲ್ಲ, ಆಚೀಚಿನ ಎಲ್ಲ ಜೀವಿಗಳಿಗೂ ಹಿತವಾಗುವ ಹಾಗೆ ಇರಬೇಕು. ಹಾಗೆ ಇರುವುದು ಕಷ್ಟವಾಗಬಹುದು. ಇನ್ನೊಬ್ಬರಿಗೆ ಹಿತ ಮಾಡಲು ನಮ್ಮಲ್ಲಿ ತ್ರಾಣವಿಲ್ಲದೆ ಹೋಗಬಹುದು. ನೂರಾರು ಜನರಿಗೆ ತಮ್ಮ ಹೊಟ್ಟೆಯನ್ನು ನಿತ್ಯ ತುಂಬಿಸಿಕೊಳ್ಳುವುದೇ ದೊಡ್ಡ ಕೆಲಸವಾಗುತ್ತದೆ. ಅಂಥದ್ದರಲ್ಲಿ ಹೊರಗಿನವರ ಹಿತದ ಮಾತೇನು ಬಂತು? ಆಗ ಇಷ್ಟನ್ನಾದರೂ ಮಾಡಬಹುದು."

"ಇಷ್ಟನ್ನು - ಎಂದರೆ?"

"ಇನ್ನೊಬ್ಬರಿಗೆ ಅನ್ಯಾಯವಾಗದ ರೀತಿಯಲ್ಲಿ ಬದುಕುವುದು. ಪರರಿಗೆ ಸುಖ ಕೊಡಲು ಬಾರದೆ ಹೋದರೆ, ದುಃಖ ಕೊಡದೆ ಇರುವುದಪ್ಪ."

ಅಜ್ಜಿಯ ಮಾತನ್ನು ನಾನು ಮೆಲುಕಾಡುತ್ತಾ "ಅದಾದರೆ ವಾಜಿಮಿ ಮಾತು. ನನಗೂ ಅದು ಸರಿ - ಅಂತ ಕಾಣಿಸುತ್ತದೆ. ನೋಡಿ ಅಜ್ಜಿ, ನಾವೀಗ ಏನೆಲ್ಲ ನಂಬಿಕೊಂಡು, ಬಾಯಿಂದ ಹೇಳಿಕೊಂಡು ಬಂದಿದ್ದೇವೋ, ಅದೆಲ್ಲವೂ ಹಳೆಗಾಲದಿಂದ ನೂರಾರು ಜನರು ಹೇಳಿಕೊಂಡು ಬಂದ ಮಾತುಗಳೇ. ಅವುಗಳಲ್ಲಿ ಒಂದಕ್ಕೊಂದು ಹೊಂದಿಕೆಯಿಲ್ಲದ್ದು ಎಷ್ಟೆಷ್ಟೋ ಇವೆ. ನೀವೇ ಅಂದಿರಲ್ಲ - ಎಲ್ಲೆಲ್ಲೂ ಪರಮಾತ್ಮನಿದ್ದಾನೆ - ಎಂಬ ಮಾತಿಗೂ, ಈ ಸಂಸಾರದಿಂದ ನನ್ನನ್ನು ಬೇಗ ತೆಗೆದುಕೊಂಡು ಹೋಗಿ ನಿನ್ನ ಹತ್ತಿರ ಇರಿಸಿಕೋ- ಎಂಬ ಮಾತಿಗೂ ಇರುವ ಅಪಾರ ವ್ಯತ್ಯಾಸವನ್ನು! ಇದೇ ರೀತಿ, ಸಾವಿರಾರು ವಿಚಿತ್ರ ಕಲ್ಪನೆಗಳು ಬಂದುವು; ಹೋದುವು. ನಾವು ಬ್ರಾಹ್ಮಣರು ಎಂಬವರು ನಂಬಿಕೊಂಡು ಬಂದಿರುವ ವಿಚಾರಗಳು ಹಿಂದೆ ಆರ್ಯರು ಎಂಬವರಿಂದ ಬಂದುವು ಎನ್ನುತ್ತಾರೆ. ವೇದಗಳು ಅವಕ್ಕೆಲ್ಲ ಮೂಲ ಎನ್ನುತ್ತಾರೆ. ಇಂದ್ರ, ರುದ್ರ, ಮರುತ್ತರ ಕತೆಯನ್ನು ನೀವೇ ಹೇಳಿದಿರಲ್ಲ; ಆ ಕಾಲದ ಬಳಿಕ ಯಾಗ, ಯಜ್ಞ, ಅಜಮೇಧ, ಗೋಮೇಧ, ಬೇಕಾದರೆ ನರಮೇಧವನ್ನು ಮಾಡುವುದೂ ಹೆಚ್ಚಾಯಿತು - ಎನ್ನುತ್ತಾರೆ. ಅದರಲ್ಲಿ ಆಗುವ ಹಿಂಸೆಯನ್ನು ಕಂಡು, ಅನಂತರ ಹುಟ್ಟಿದ ಒಬ್ಬ ದೊರೆಯ ಮಗ 'ಬುದ್ಧ' ಎಂಬವನು ಕೂಡ ಹಾಗೆಯೇ ವಿರೋಧ ತೋರಿಸಿದ ಇನ್ನೊಂದು ಪಂಗಡದವ. ಬುದ್ಧನಿದ್ದ ಕಾಲದಲ್ಲಿ ಆತ ಪೂರ್ವಜನ್ಮದ ಮಾತನ್ನು ಎತ್ತಿದವನಲ್ಲ. ಆದರೂ ಸಂಸಾರವೆಂಬುದು ಬಂಧನ ಎಂಬುದನ್ನು ಅವನೂ ಹೇಳಿದ. ಆದರೆ, ದೇವರ ಹತ್ತಿರಕ್ಕೆ ಹೋಗುವ ಮಾತಿರಲಿಲ್ಲ. ಅವನ ಶಿಷ್ಯರು ಮಾತ್ರ ಅದೇ ಬುದ್ಧನ ಪುರಾಣಗಳನ್ನು ಬರೆಯುವಾಗ ಅವನಿಗೆ ಒಂದಲ್ಲ, ಹತ್ತಾರು ಜನ್ಮ ಕೊಟ್ಟರು. ಆತ ಆ ಜನ್ಮದಲ್ಲಿ ಹಾಗೆ ಮಾಡಿದ; ಈ ಜನ್ಮದಲ್ಲಿ ಹೀಗೆ ಮಾಡಿದ - ಎಂದು ಬರೆದರು."

"ನಮ್ಮ ವಿಷ್ಣು, ಶಿವರಿಗೆ ಅವತಾರ ಕೊಡಿಸಿದ ಹಾಗೆಯೇ."

"ಹೌದು; ಹಾಗೆಯೇ. ಜೈನರೂ ಆ ಕಾಲಕ್ಕೆ ಬ್ರಾಹ್ಮಣರನ್ನು ವಿರೋಧಿಸಲು ಹೊರಟವರು. ಹೀಗೆ ಬೌದ್ಧರು, ಜೈನರು, ಬ್ರಾಹ್ಮಣರು - ದೇವರ ವಿಷಯದಲ್ಲಿ, ಧರ್ಮದ ವಿಷಯದಲ್ಲಿ ಪೈಪೋಟಿ ಶುರು ಮಾಡಿದರು. ಆ ಕಾಲದಲ್ಲಿ ಶಾಕ್ತರದ್ದು ಮತ್ತೊಂದೇ ಪಂಥವಿತ್ತಂತೆ, ಶಾಕ್ತರೆಂದರೆ ಗೊತ್ತಾಯಿತಲ್ಲ, 'ಅಮ್ಮ'ನವರ ಪೂಜೆ ತೊಡಗಿದ್ದು ಅವರಿಂದ."

"ಅದು ಅತಿಗೆ ಹೋಗಿತ್ತು. ಆ ಅಮ್ಮನವರಿಗೆ ಸಾವಿರ ಘೋರ ರೂಪ ಕೊಟ್ಟರು. ರಕ್ತ ಬಲಿ ಕೊಟ್ಟರು; ಕುಡಿದರು; ಕುಣಿದರು. ಸೃಷ್ಟಿಗೆ ಯೋನಿ, ಲಿಂಗ ಎಂಬ ಸಂಕೇತಗಳನ್ನು ಕೊಟ್ಟು ಅವನ್ನು ಪೂಜೆ ಮಾಡಿದರು. ಆಮೇಲೆ ಭೋಗವೇ ಸರ್ವಸ್ವ - ಎಂದು ಹೇಳುತ್ತ ಕುಡಿದರು, ಕುಣಿದರು."

"ತಂತಮ್ಮ ಮತವೇ ಮೇಲು, ಇನ್ನೊಬ್ಬರದು ಕಡಿಮೆ ಎಂದು ತೋರಿಸುವುದಕ್ಕೆ ಪ್ರತಿಯೊಬ್ಬರೂ ಪುರಾಣಗಳನ್ನು ಬರೆದವರೇ. ಜೈನರೂ ಬರೆದರು; ಬೌದ್ಧರೂ ಬರೆದರು; ಬ್ರಾಹ್ಮಣರೂ ಬೇಕಷ್ಟು ಬರೆದರು. ತಮ್ಮ ದೇವರುಗಳಿಂದ ಬೇಕುಬೇಕಾದ ಕೆಲಸಗಳನ್ನು ಮಾಡಿಸಿದರು; ಬೇಡದಿದ್ದ ಕೆಲಸಗಳನ್ನೂ ಮಾಡಿಸಿದರು. ತಮ್ಮ ದೇವರನ್ನು ಮೇಲಕ್ಕೆ ಎತ್ತಿದರು; ಇನ್ನೊಬ್ಬರ ದೇವರನ್ನು ಕೆಳಕ್ಕೆ ನೂಕಿದರು. ಅದು ಸಾಧ್ಯವಾಗದಾದಾಗ ತಮ್ಮ ದೇವರುಗಳ ಬಾಗಿಲನ್ನು ಕಾಯುವ ಯಕ್ಷ, ಯಕ್ಷಿಯರನ್ನಾಗಿ ಮಾಡಿದರು. ಅದನ್ನೆಲ್ಲ ಓದಿದರಂತು - ನಂಬುವುದು ಯಾವುದನ್ನು, ಬಿಡುವುದು ಯಾವುದನ್ನು - ಎಂಬುದೇ ಗೊತ್ತಾಗುವುದಿಲ್ಲ."

"ಆ ಮಾತನ್ನಾದರೆ ಹೇಳು. ನಾನೂ ಅಂಥ ಸಂಕಟ ಪಟ್ಟವಳೇ. ಎಷ್ಟು ಕತೆ, ಎಷ್ಟು ಪುರಾಣಗಳು? ಎಷ್ಟು ದೇವರು, ಎಷ್ಟು ಅವತಾರಗಳು? ಎಷ್ಟು ಕಲ್ಪನೆ; ಎಷ್ಟು ವಿಕಲ್ಪನೆ? ಅವುಗಳಲ್ಲಿ ಕಸ ಯಾವುದು, ರಸ ಯಾವುದು; ಸತ್ಯ ಯಾವುದು, ಸುಳ್ಳು ಯಾವುದು ಎಂಬುದನ್ನೇ ತಿಳಿಯುವುದು ಕಷ್ಟ."

ಅಷ್ಟು ಹೊತ್ತಿಗೆ ನನ್ನ ಕಿಟ್ಟಣ್ಣನ ಧ್ವನಿ ಕೇಳಿಸಿತು. 'ಅಪ್ಪಯ್ಯ ಊಟಕ್ಕೆ ಆಯಿತು' ಎಂಬ ಕರೆ ಬಂದಿತು. "ಅಜ್ಜಿ, ಮಾತಿನಲ್ಲಿ ಹೊತ್ತು ಹೋದದ್ದೇ ಗೊತ್ತಾಗಲಿಲ್ಲ; ಹೊರಡಿ, ಮಾಣಿ ಊಟಕ್ಕೆ ಕರೆಯುತ್ತಾ ಇದೆ; ಹೋಗುವ ಮನೆಗೆ" ಎಂದು ಹೇಳಿ ಆ ಕಂಚಿನ ಪ್ರತಿಮೆಯ ಗಂಟನ್ನು ಹಿಡಿದುಕೊಂಡು ಅವರೊಡನೆ ನಡೆದು ಬಂದೆ. ಅವರನ್ನು ಚಾವಡಿಯ ಬಳಿ ಬಿಟ್ಟವನೇ, ಹಟ್ಟಿಗೆ ಹೋಗಿ, ಅಂದಾಜಿನ ಮೇಲೆ ಗೋಡೆಯನ್ನು ತಡವಿ, ಅದನ್ನು ಅಲ್ಲಿರಿಸಿದೆ. ಹಿಂದೆ ಗುಹೆಯಿಂದ ತಂದ ಸರಕು ಅಲ್ಲಿಯೇ ಇದ್ದುವು. ಈ ಗೊಂಬೆ ಅಂಥ ಮೈಲಿಗೆ ವಸ್ತುವಲ್ಲವಾದರೂ, ಅದನ್ನು ಸೀತೆಯ ಕಣ್ಣಿಗೆ ಬೀಳಿಸುವುದಕ್ಕೆ ಇಷ್ಟವಿರಲಿಲ್ಲ.

ಕಿಟ್ಟಣ್ಣ ಅದನ್ನು ಕಂಡರೆ, ಚಂದನದ ಗೊಂಬೆಯ ಹಾಗೆ ಅದನ್ನು ಕಾಡಿ ಬೇಡಿಕೊಂಡು, ಹೊತ್ತು ಅಲೆಯುತ್ತಿದ್ದ. ಕಾಲಿನ ಬೆರಳ ಮೇಲೆ ಹಾಕಿಕೊಂಡು ರಂಪವೂ ಆಗುತ್ತಿತ್ತು. ಆ ಪ್ರತಿಮೆಯನ್ನು ಸೀತೆ ಕಂಡುದಾದರೆ "ಇಶೀ, ಇದನ್ನು ಎಲ್ಲಿಂದ ತಂದಿರಿ?" ಎಂದು ಕೇಳಿಯೇ ಕೇಳಿಯಾಳು. ಅವಳ ಜಗತ್ತಿನ ಚತುರ್ಗಡಿಯೆಂದರೆ - ಪೂರ್ವದಲ್ಲಿ ಹಿಂಡುಗಾನು, ಬಡಗಿನಲ್ಲಿ ಕೊಲ್ಲೂರು, ಪಡುವಣದಲ್ಲಿ ಬೈಂದೂರು, ದಕ್ಷಿಣದಲ್ಲಿ ಕುಂದಾಪುರ - ಇವಕ್ಕಿಂತ ಆಚೆ ಸರಿದದ್ದಲ್ಲ.

ನನಗಂತು ಅಜ್ಜಿಯೊಡನೆ ಹೊಟ್ಟೆ ತುಂಬ ಮಾತನಾಡಿ, ಚರ್ಚಿಸಿ ತುಂಬಿಸಿಕೊಂಡ ಆ ಜ್ಞಾನಕ್ಕೆ, ಅರ್ಧಮರ್ಧ ಓದಿಕೊಂಡ ತಿಳಿವೂ ಸೇರಿ, ಹೊಸ ಕಳೆಯೇ ಬಂದಂತಿತ್ತು. ಅಜ್ಜಿ ಫಲಾಹಾರ ಮಾಡಿ ತಮ್ಮ ಕೋಣೆಗೆ ಹೋದರು. ನಾನು ತಲೆಯಲ್ಲಿ ಏನನ್ನೆಲ್ಲ ತುಂಬಿಸಿಕೊಂಡು, ಊಟ ಮಾಡತೊಡಗಿದೆ. ಊಟದ ನಡುವೆ "ಸಾರು ಮಾಡಿಲ್ಲ ಅಂತ ಕಾಣುತ್ತೆ" ಎಂದೆ.

"ನೀವು ಮೊದಲು ಉಂಡದ್ದೇನು? ಸಾರಿನಲ್ಲೂ ಊಟ ಮಾಡಿದಿರಿ; ಸಾಸಿವೆಯಲ್ಲೂ ಊಟ ಮಾಡಿದಿರಿ" ಎಂದಳು ಸೀತೆ.

"ಈಗ ಎರಡನ್ನೂ ನಾನು ಉಂಡೆನೇ? ಎಂಥದ್ದರ ಸಾರು? ಯಾವುದರ ಸಾಸಿವೆ?" ಎಂದು ವಿಚಾರಿಸಿದೆ.

"ಓಟೆಹುಳಿಯ ಸಾರು, ವೈನಾಗಿ ಅರ್ಧ ಸಿದ್ದೆ ಅನ್ನಕ್ಕೆ ಕಲಸಿಕೊಂಡು ಉಂಡಿರಿ. ಎರಡೆರಡು ಸಾರಿ ನಾನು ಮಾಡಿದ ಕಾಟು ಮಾವಿನ ಹಣ್ಣಿನ ಸಾಸಿವೆ ಹಾಕಿಸಿಕೊಂಡು ತಿಂದಿರಿ. ನೀವು ಯಾವ ಊರಿನಲ್ಲಿದ್ದಿರೋ ನಿಮಗೇ ಗೊತ್ತು! ನಿಮ್ಮನ್ನು ಯಾವ ಬ್ರಹ್ಮ ಸೃಷ್ಟಿಸಿದನೋ ಕಾಣೆ" ಎಂದಳು.

ಉಂಡುದರಿಂದ ಹಸಿವೆ ಕಡಿಮೆಯಾದಂತೆ ಕಾಣಿಸುತ್ತದೆ ನಿಜ. ಎಲೆಯ ಮೇಲೆ ಕೈಯಾಡಿಸಿದ ಗುರುತೂ ಇತ್ತು. ಆದರೆ, ಅಷ್ಟನ್ನೆಲ್ಲ ನಾನು ತಿಂದೆನೇ ಅಥವಾ ನನ್ನ ಬುದ್ಧಿ ಎಲ್ಲೆಲ್ಲೋ ಸಂಚರಿಸುತ್ತಿದ್ದುದನ್ನು ಕಂಡು ಸೀತೆ ತಮಾಷೆಗೆ ಹೀಗೆ ಹೇಳುತ್ತಿದ್ದಾಳೆಯೇ - ಎಂಬುದು ಹೊಳೆಯದಾಯಿತು. ಅವಳು ನನ್ನನ್ನು ಬಯ್ಯುವುದನ್ನು ಬಿಟ್ಟು, ನನ್ನನ್ನು ಸೃಷ್ಟಿಸಿದಂಥ ನಾಲ್ಮೊಗದ ಬ್ರಹ್ಮನನ್ನು ಬೈದದ್ದೆಂಬುದು ಪಿತೃಲೋಕದಲ್ಲಿರುವ ನನ್ನ ಅಪ್ಪ ಅಮ್ಮಂದಿರನ್ನೇ ಬೈದಂತಾಯಿತು. ಅದಕ್ಕೆ ನಾನು ಬಾಯಿ ಮುಚ್ಚಿಕೊಂಡು ಸುಮ್ಮನಿರಲಾರದೆಯೆ "ನಿನ್ನ ಅತ್ತೆ ಮಾವಂದಿರನ್ನೇ ಬಯ್ಯುತ್ತಿದ್ದಿಯಲ್ಲ" ಎಂದೆ.

ಆಕೆ ಚಕಿತಳಾದಳು. "ಅಯ್ಯೋ ನಾನೆಲ್ಲಿ ಬೈದೆ?" ಎಂದು ನನ್ನನ್ನು ಪ್ರಶ್ನಿಸಿದಳು. "ಬ್ರಹ್ಮನನ್ನು ಬಯ್ಯುವುದೆಂದರೆ - ಹಾಗೆಯೇ ಅಲ್ಲವೇ? ಆ ಬ್ರಹ್ಮ ಯಾರ್ಯಾರನ್ನೆಲ್ಲ ಸೃಷ್ಟಿಸಿದ

ಎಂದು ನಿನಗೆ ಹೇಗೆ ಗೊತ್ತು? ಇದ್ದರೆ, ಒಬ್ಬನೇ ಬ್ರಹ್ಮ ಇರುವುದು. ನಿನ್ನನ್ನು ಸೃಷ್ಟಿಸಿದ ಆ ಬ್ರಹ್ಮನೇ ನನ್ನನ್ನೂ ಸೃಷ್ಟಿಸಿದ."

"ಹೌದಪ್ಪ, ಅವನೇಯೇ ನಿಮ್ಮನ್ನು ನನಗೆ ಗಂಟುಹಾಕಿದ್ದು. ಹೋಗಲಿ ಬಿಡಿ, ಅಜ್ಜಮ್ಮನಿಂದ ನೀವೂ ಬೇಡದ ಮಾತನ್ನು ಕಲಿತಿದ್ದೀರಿ. ಪ್ರಾಯಶಃ ನೀವು ಅಶ್ವತ್ಥದ ಕಟ್ಟೆಯಲ್ಲಿ ಕುಳಿತು ಮಾತನಾಡುತ್ತಿದ್ದುದು ಇಂಥವೇ ಅಸಂಬದ್ಧ ಮಾತಿರಬೇಕು. ಈಗ ನಿಮಗೇನು ಬೇಕು ಹೇಳಿ; ಸಾರನ್ನು ತರಲೋ, ಸಾಸಿವೆ ತರಲೋ?" ಎಂದು ಕೇಳಿದಳು.

"ತರುವುದಾದರೆ ಎರಡನ್ನೂ ತಾ; ನಿನಗೆ ಒಂದಿಷ್ಟು ಉಳಿಸಿಕೊಂಡೇ ತಾ; ಸಾರು, ಸಾಸಿವೆಗಳನ್ನು ನಾನು ಊಟ ಮಾಡಿದ್ದೇನೆ ಅನ್ನುತ್ತೀ. ಓಟೆಹುಳಿ, ಮಾವಿನ ಹಣ್ಣಿನ ರುಚಿ ಬಾಯಿಗೆ ತಿಳಿಯದೆ ಹೋದರೂ ಹೋಗಲಿ; ಮೂಗಿದೆ. ಅದರ ವಾಸನೆಯಾದರೂ ಬಾರದೆ ಹೋಗುತ್ತದೆಯೇ" ಎಂದೆ. ಅವಳು ಒಳಗಿನಿಂದ ಕೈಮರಿಗೆಯಲ್ಲಿ ಒಂದಿಷ್ಟು ಅನ್ನ ತಂದು ಬಡಿಸಿದಳು. ಅನಂತರ ಸಾರನ್ನು ಬಡಿಸಿದಳು. ಆಗ ಮಾತ್ರ ಅದರ ಪರಿಮಳ ಬಂತು. ಒಂದು ತುತ್ತನ್ನು ಕಲಸಿ ಬಾಯಿಗೆ ಹಾಕಿದರೆ, ಆದಕ್ಕೆ ಓಟೆಹುಳಿಯ ರುಚಿಯೂ ಇದ್ದಿತ್ತು. ಓಟೆಹುಳಿಯ ಸಾರು ದೇಹಕ್ಕೆ ಬಹಳ ತಂಪಂತೆ. ಅದನ್ನು ಚೆನ್ನಾಗಿಯೇ ಊಟ ಮಾಡಿದೆ. ಅನಂತರ ಸೀತೆ ಮಾವಿನ ಹಣ್ಣಿನ ಸಾಸಿವೆಯನ್ನು ಬಡಿಸಿದಳು. ಊಟವನ್ನು ಮಾಡಿದೆ. ಅದರ ಜತೆಗೆ ಬಡಿಸಿದ ಮೂರು ಗೊರಟುಗಳನ್ನೂ ಊಜಿದೆ. ಆಮೇಲೆ ಸಂತೋಷದಿಂದ "ನೋಡು, ನೀನು ಮಾಡಿದ್ದೇ ತಪ್ಪು ಕೆಲಸ; ಮೊದಲೇ ಈ ಮೂರು ಗೊರಟುಗಳನ್ನು ಬಡಿಸುತ್ತಿದ್ದರೆ, ಸಾಸಿವೆಯನ್ನು ಬಡಿಸಲೇ ಇಲ್ಲ ಅನ್ನುವುದಕ್ಕಿತ್ತೇ? ನನಗೆ ಗೊರಟು ಬಹಳ ಪ್ರೀತಿ - ಎಂಬುದು ನಿನಗೆ ಗೊತ್ತು. ಗೊತ್ತಿದ್ದೂ ಅದನ್ನು ನೀನು ಬಡಿಸಿರಲಿಲ್ಲ. ಸಾಸಿವೆಯೇನೋ ತುಂಬ ರುಚಿಯಾಗಿದೆ. ಓಟೆಹುಳಿಯ ಸಾರೂ ಚೆನ್ನಾಗಿದೆ" ಎಂದೆ. "ಮೊದಲೇ ಗೊರಟು ಹಾಕಿದ್ದರೂ ಹೀಗೆಯೇ ಆಗುತ್ತಿತ್ತು. ನಿಮ್ಮ ಅರೆ ನಿದ್ದೆ ಕಣ್ಣಲ್ಲಿ ಅದನ್ನು ನುಂಗಿ ಬಿಟ್ಟು, ಗೊರಟನ್ನು ಬಡಿಸಲಿಲ್ಲ - ಅನ್ನುವವರು ನೀವು. ಅಂತೂ ಎರಡನೇ ಸಾರಿ ಬಡಿಸಿದ್ದಕ್ಕೆ ನಿಮ್ಮ ಕೈಯಲ್ಲಿ ನನಗೊಂದು ಸರ್ಟಿಫೀಟ್ ಸಿಕ್ಕಿತು."

ಸೀತೆ ಆಡಿದ ಇಂಗ್ಲೀಷ್ ಮಾತನ್ನು ಕೇಳಿ, ನಕ್ಕು, ನಕ್ಕು ಹೊಟ್ಟೆ ಹುಣ್ಣಾಯಿತು. ನಾನು ನಕ್ಕಿದ್ದು ಏತಕ್ಕೆ - ಎಂಬುದು ಮಾತ್ರ ಅವಳಿಗೆ ತಿಳಿಯದೆ ಹೋಯಿತು. ಆದುದರಿಂದ ಅವಳು "ನಾನೇನು ಮಾಡಿದೆ ಅಂಥ ಕೆಲಸ?"

"ಮಹಾರಾಯಿತಿ, ನಿನ್ನ ಬಾಯಲ್ಲಿ 'ಸರ್ಟಿಫಿಕೇಟ್' ಶಬ್ದ ಬಂದದ್ದನ್ನು ಕೇಳಿ ನಕ್ಕೆ. ಸರ್ಟಿಫಿಕೇಟು ಎಂಬ ಇಂಗ್ಲೀಷ್ ಶಬ್ದ ಸರ್ಟಿಫೀಟಾದುದನ್ನು ಕೇಳಿ ನಕ್ಕೆ."

"ನಿಮ್ಮ ಹಾಗೆ ನಾನು ದುಡ್ಡು ದಂಡ ಮಾಡಿ ಇಂಗ್ಲೀಷ್ ಕಲಿತವಳಲ್ಲ."

"ಅದಾದರೆ ಹೌದು."

ಊಟ ಮುಗಿಸಿ, ಈಚೆಗೆ ಬರುತ್ತ ನನಗನಿಸಿತು - ಬಹಳ ಕಾಲದಿಂದ ಸಂಸಾರ ಮಾಡಿಕೊಂಡಿದ್ದ ನಾವು, ಇಂಥ ಒಂದು ಸಂಭಾಷಣೆ ನಡೆಸಿ ಸಂತೋಷಪಟ್ಟದ್ದುಂಟೇ ಎಂದು. ಸೀತೆಯ ಪ್ರತಿ ಮಾತೂ ಕಟುವಾಗಿಯೇ ಕೇಳಿಸುತ್ತಿತ್ತು ನನ್ನ ಕಿವಿಗೆ. ಅವಳಲ್ಲಿಯೂ ಹಾಸ್ಯದ ಬುದ್ಧಿ ಇದೆ, ನನ್ನ ಮಂಕುತನದ ಹುಳುಕು ಅವಳಿಗೂ ಗೊತ್ತಾಗುತ್ತದೆ, ನಮ್ಮಿಬ್ಬರೊಳಗೆ ಬುದ್ಧಿಶಕ್ತಿಯ ತಾರತಮ್ಯವೇನಿಲ್ಲ ಎಂಬ ಅಭಿಪ್ರಾಯ ಮೂಡಿತು. ಅದರಿಂದಾಗಿ ಮುಂದೊಂದು ಅವಿವೇಕವೂ ನಡೆಯಿತು.

ರಾತ್ರೆ ನಾನು ಚಾವಡಿಯಲ್ಲಿ ಮಲಗಿಕೊಂಡಾಗ, ಎರಡು ಮಾರು ದೂರದಲ್ಲಿ ಮಲಗಿದ್ದ ಅವಳು, ಹತ್ತಿರ, ಹತ್ತಿರ ಸಮೀಪಿಸಿ 'ನಿದ್ದೆ ಬಂತೆ?' ಎಂದು ಕೇಳಿದಳು.

ನನಗೆಲ್ಲಿಂದ ನಿದ್ದೆ ಬರಬೇಕು? ಅಜ್ಜಿ ಸೂಚಿಸಿದ ಬೈರಾಗಿಗಳ ತಂಡದ ಹಿಂದೆ ನಾನು ಕುಣಿಯುತ್ತಿದ್ದೆ. ಯಾವ ಬೈರಾಗಿಗಳು? ಏತಕ್ಕೆ ಬಂದರು? ಎಲ್ಲಿಂದ ಬಂದರು? ಹಿಂಡುಗಾನ ಅಮ್ಮನವರ ಪೂಜೆ ಹೇಗೆ ಮಾಡಿದರು? ಕಲ್ಲು ಮಂಟಪದ ಗೊಂಬೆಯನ್ನು ಯಾಕೆ ಹೂತರು - ಇವೇ ವಿಚಾರಗಳು ನನ್ನ ತಲೆಯಲ್ಲಿ ಆಗಾಗ ಸುಳಿದಾಡುತ್ತಿದ್ದುವು. ಅಂಥ ವೇಳೆಯಲ್ಲಿಯೇ "ನಿದ್ದೆ ಬಂದಿತೇ?" ಎಂದು ಕೇಳಿದಳು ಸೀತೆ. ಅದು ಬಂದಿರಲಿಲ್ಲವಾದ್ದರಿಂದ "ಇಲ್ಲ" ಎಂದೆ. ಊಟ ಮಾಡುವಾಗ ಎಚ್ಚರವಿಲ್ಲದಿದ್ದ ನಾನು, ಕನಸನ್ನು ಹೆಣೆಯುತ್ತಿದ್ದಾಗ ಅಂಥ ಎಚ್ಚರ ತೋರಿಸಿದ್ದು ಆಶ್ಚರ್ಯವೇ. ಅವಳೆಂದಳು "ಆ ಅಶ್ವತ್ಥದ ಕಟ್ಟೆಯಲ್ಲಿ ಅಷ್ಟು ಹೊತ್ತು ಕುಳಿತು ಏನು ಮಾತನಾಡಿದ್ದು? ಹೊತ್ತು ಕಂತಿರಲಿಲ್ಲ. ಹೋದವರು ಬರುವಾಗ ಜಾವ ರಾತ್ರಿ. ಅಷ್ಟು ಮಾತುಕತೆ ಯಾವ ವಿಷಯದಲ್ಲಿ?" ಎಂದು ಕೇಳಿದಳು. ಪ್ರಶ್ನೆಯಲ್ಲಿ ಕೆಣಕಿನ ಧ್ವನಿಯಿರಲಿಲ್ಲ; ಕುತೂಹಲದ ಧ್ವನಿಯೇ ಕಾಣಿಸಿತು. ಅವಳ ವಿಷಯದಲ್ಲಿ ಆ ವೇಳೆಗೆ ನಾನೂ ಪ್ರಸನ್ನನಾಗಿದ್ದ ವೇಳೆಯಾದುದರಿಂದ, ಹಿಂದು ಮುಂದು ಯೋಚಿಸದೆ, ಒಂದೇ ಉಸಿರಿಗೆ ನಡೆದ ಕತೆಗಳನ್ನೂ ಹೇಳಿದೆ. ಗೊಂಬೆಯ ಕತೆ, ಅದರ ಹಿಂದಿನ ಕತೆ, ಅದರ ಮುಂದಿನ ಕತೆ, ಪುರಂದರದಾಸರ ಕತೆ, ಪುನರ್ಜನ್ಮದ ಕತೆ, ಅಜ್ಜಿ ಹೇಳಿದ್ದನ್ನೆಲ್ಲ ಹೇಳಿದೆ. ನಾನು ಹೇಳಿದ್ದನ್ನೂ ಹೇಳಿದೆ. ಚಾಚೂ ತಪ್ಪದೆಯೇ ಎಲ್ಲವನ್ನೂ ಕೇಳಿದಳು. ಕೇಳಿ ಆಮೇಲೆ ಅವಳು ಹೇಳಿದ್ದು ಗೊತ್ತೇ?

"ಅವರಿಗೆ ಬುದ್ಧಿ ಸಮನಿಲ್ಲ - ಎಂಬುದು ಲೋಕಕ್ಕೆ ಗೊತ್ತು. ಅದಿನ್ನು ಸಮನಾಗುವ ಕಾಲವೂ ಇಲ್ಲ. ಒನಕೆ ಚಿಗುರಬೇಕು ಅದು ಸಮನಾಗಲಿಕ್ಕೆ. ನೀವೂ ಅವರ ಮಾತಿಗೆ ಕಿವಿಗೊಡಲಿಕ್ಕೆ ಶುರು ಮಾಡಿದಿರಾ? ನಮ್ಮ ಹಿರಿಯರು ನಂಬಿ ಬಂದದ್ದು - ಭಾಗವತ, ಪುರಾಣಗಳು ಹೇಳಿದ್ದು ಎಲ್ಲವೂ ಕಣ್ಣುಕಟ್ಟು, ದೇವರೂ ಸುಳ್ಳು; ದೇವರ ಅವತಾರವೂ ಸುಳ್ಳು - ಎನ್ನಲಿಕ್ಕೆ ಶುರುಮಾಡಿದರೆ ಹೇಗಾದೀತು? ಕೇಳಿದವರು ಏನೆಂದಾರು? ಅವರು

ಹೇಳುವುದು ಹಾಗೆಯೇ ಎಂಬುದು ಗೊತ್ತಿದೆ ನನಗೆ. ಅವರಿಗೆ ಅದಕ್ಕೇನೆ ಬುದ್ಧಿ ಸ್ವಯವಿಲ್ಲ ಎನ್ನುವುದು. ನಿಮಗೆ ಅದನ್ನು ಕೇಳಬೇಕಂತೇನಿದೆ? ಆಚೆಯ ಕಿವಿಯಿಂದ ಕೇಳಿದ; ಈಚೆಯ ಕಿವಿಯಿಂದ ಅದನ್ನು ಬಿಟ್ಟ" ಎಂದಳು. ಆಗ ಮಾತ್ರ ಅವಳ ಧ್ವನಿ ತುಂಬ ಬೇಸರದಿಂದ ಕೂಡಿತ್ತು. ಅವಳ ನಂಬಿಕೆಯ ದಾರಿಯೇ ಬೇರೆ ಎಂಬುದು ನನಗೆ ಮೊದಲೇ ತಿಳಿದಿತ್ತು. ಆದರೂ ಆ ಗಳಿಗೆಯಲ್ಲಿ ಅವಳನ್ನು ನೋಯಿಸಬಾರದೆಂದು "ಇನ್ನು ಮುಂದೆ ಹಾಗೆಯೇ ಮಾಡುತ್ತೇನೆ; ಇನ್ನು ಮುಂದೆ ಯಾರು ಏನು ಹೇಳಿದರೂ - ಆಚೆ ಕಿವಿಯಿಂದ ಕೇಳುತ್ತೇನೆ; ಈಚೆ ಕಿವಿಯಿಂದ ಬಿಡುತ್ತೇನೆ" ಎಂದೆ. ನನಗೆ ಒಳಗಿಂದೊಳಗೆ ನಗು ಬರುತ್ತಿತ್ತು. ಸೀತೆಗೂ ಕೂಡ ಅದೇ ಪ್ರತ್ಯುತ್ತರ ಲಗಾವಾಗದಿದ್ದೀತೆ? ಅಲ್ಲದೆ ಹೋದರೆ, ಅವಳಿಗೆ ಈ ಗಾದೆ ಮಾತಿನ ಅರ್ಥವಾಗುವ ಹಾಗಿಲ್ಲ. ಆಚೆ ಕಿವಿಯಿಂದ ಕೇಳಿದ್ದು, ಮಿದುಳ ರಾಶಿಯನ್ನು ಸೇರಿ, ಈಚೆ ಕಿವಿಯಿಂದ ಹೊರಡುವಾಗಲೂ ಇದ್ದಕ್ಕಿದ್ದ ಹಾಗೆ ಹೊರಕ್ಕೆ ಬರುವುದುಂಟೇ? ಮಿದುಳು ತಾನು ಕೇಳಿದ ವಿಚಾರಗಳನ್ನು ಚೆನ್ನಾಗಿ ಸೋಸುತ್ತದೆ. ಅದು ತನಗೆ ಒಪ್ಪಿದ್ದನ್ನು ಮಾತ್ರ ಬಚ್ಚಿಟ್ಟುಕೊಳ್ಳುತ್ತದೆ; ಬೇಡದ್ದನ್ನು ಬಿಡುತ್ತದೆ. ಪ್ರಿಯವಾದುದನ್ನು ಕದ್ದಿಡುತ್ತದೆ; ಅಪ್ರಿಯವಾದುದನ್ನು ಹೊರಗೆ ನೂಕುತ್ತದೆ. ತಲೆಯಲ್ಲಿ ಆ ಮಿದುಳೆಂಬ ಒಂದು ಪದಾರ್ಥ ಇಲ್ಲದೆ ಹೋಗಿದ್ದರೆ ಮನುಷ್ಯ ಸುಖಿಯಾಗಿರುತ್ತಿದ್ದ - ಎನಿಸಿತು.

# ಅಧ್ಯಾಯ 13

ನನ್ನ ಅಜ್ಜಿಗೆ ಪ್ರಾಯ ತುಂಬ ಆಯಿತು. ದೇಹವೇನೋ ಗಟ್ಟಿಮುಟ್ಟಾಗಿದೆ, ಕಾಯಿಲೆ ಕಸಾರೆಗಳಿಲ್ಲ. ಆದರೂ ವಯಸ್ಸಾಯಿತು ಎಂದ ಮೇಲೆ ಇನ್ನೆಷ್ಟು ದಿನ ಅವರ ಋಣ ನಮಗಿರುತ್ತದೆ - ಎಂಬೊಂದು ಅನುಮಾನ ಬಂದೇ ಬರುತ್ತದೆ. ಹೀಗಾಗಿ, ಅವರಿಂದ ತಿಳಿಯಬಹುದಾದ್ದನ್ನು ಆದಷ್ಟು ಬೇಗನೆ ಕೇಳಿ ತಿಳಿಯಬೇಕೆಂಬ ಹಂಬಲ ನನ್ನದು. ನಾನಂತು ಅವರ ಪರಮಭಕ್ತ. ನನ್ನೊಡನೆ ಅವರು ಬೇಕೆಂದೇ ಠಕ್ಕನ್ನು ಹೇಳಲಾರರು. ಅವರ ಒಳಗಣ್ಣಿಗೆ ಕಾಣಿಸುವ ಚಿತ್ರಗಳು ಅಕ್ಷರಶಃ ನಿಜವೆಂದು ನಂಬಬೇಕಿಲ್ಲವಾದರೂ, ಆ ಕನಸುಗಳಲ್ಲಿ ಕಂಡುಬರುವ ಧಾಟಿ ಬಹುಮಟ್ಟಿಗೆ ಸತ್ಯವೆಂದೇ ನನಗೆ ಹೊಳೆಯುತ್ತಿತ್ತು. ಪರೀಕ್ಷೆ ಪಾಸಾಗುವುದಕ್ಕಾಗಿ ಒಂದಷ್ಟು ಚರಿತ್ರೆಯನ್ನು ಓದಿಕೊಂಡ ನನಗೆ, ನಮ್ಮ ದೇಶದಲ್ಲಿ ಹಬ್ಬಿ ಹರಡಿರುವ ವಿವಿಧ ಜನಾಂಗಗಳ ವಿಚಾರ, ಅವರ ಸಂಸ್ಕೃತಿ, ಧರ್ಮಗಳ ವಿಚಾರ ಗಾಢವಾಗಿ ಅಲ್ಲವಾದರೂ ಸ್ಥೂಲವಾಗಿ ತಿಳಿದಿತ್ತು. ಅಜ್ಜಿಯ ಒಳದೃಷ್ಟಿಗೂ ಈ ಸ್ಥೂಲ ಕಲ್ಪನೆಗೂ ತುಂಬ ಹೋಲಿಕೆ ಕಾಣಿಸುತ್ತಿತ್ತು. ನನ್ನಲ್ಲಿ ಅನೇಕ ಪೌರಾಣಿಕ ಕಲ್ಪನೆಗಳನ್ನು ಕುರಿತು ಪರಂಪರೆಯಿಂದ ಬಂದ ನಂಬಿಕೆ ಸ್ವಲ್ಪ ಹೆಚ್ಚಿಗೆ ಇತ್ತಾದುದರಿಂದ, ಅವರು ಹೇಳುತ್ತಿದ್ದ ನಿರ್ಭೀತಿಯ ಕೆಲವು ವಿಚಾರಸರಣಿಗಳನ್ನು ಥಟ್ಟನೆ ಒಪ್ಪಲು ಮನಸ್ಸು ಹಿಂಜರಿಯುತ್ತಿತ್ತು. ಅವರೊಡನೆ ನಾನು ನಡೆಯಿಸಿದ ಸಂಭಾಷಣೆಗಳಲ್ಲಿ, ಹೊರಗೆ ಜಡಿಮಳೆ ಬಡಿಯುತ್ತಿರುವಾಗ ಒಂದೆಡೆ ಹಾಯಾಗಿ ಕುಳಿತು ಎಸಗುತ್ತಿದ್ದ ತರ್ಕಗಳಲ್ಲಿ - ಅನೇಕ ಬಾರಿ ವಿಚಾರಗಳ ತುಮುಲವೂ ಉಂಟಾಗುತ್ತಿತ್ತು. ಅವನ್ನೆಲ್ಲ 'ತರ್ಕ' ಎನ್ನುವ ಮಾತು ತಪ್ಪೋ ಏನೋ! ನಾನು ಬರಿಯ ಪ್ರಶ್ನೆಗಳನ್ನು ಕೇಳುವವನು. ಅವರು ಅದಕ್ಕೆ ಉತ್ತರ ಹೇಳುವವರು; ವಿಷಯ ವಿವರಿಸುವವರು. "ಅದು ಹೇಗೆ? ಇದು ಹೇಗೆ?" ಎಂದು ನಾನು ಕೆಣಕಿ ಕೇಳಿದವನಲ್ಲ. ಊರ ವಾಡಿಕೆಗೂ, ಸುತ್ತಮುತ್ತಲಿನ ಜನರಂತೆ ನಾನು ನಂಬಿ ಬಂದದ್ದಕ್ಕೂ ವಿರೋಧವಾದ ವಿಚಾರಸರಣಿ ಮೂಡಿಬಂದಾಗ ಇದು ನಿಜವೇ? ಹೀಗೆ ಹೇಳುತ್ತಾರಲ್ಲ ಅವರು? ಪುರಾಣೋಕ್ತಿ, ಶಾಸ್ತ್ರೋಕ್ತ ಋಷ್ಯೋಕ್ತಿ ಮೊದಲಾದವುಗಳಿಗಿಂತಲೂ ಇದು ಭಿನ್ನವಾಗಿದೆಯಲ್ಲ - ಎಂಬ ತಳಮಳ ನನ್ನಲ್ಲಿ ಹುಟ್ಟಿಯೇ ಹುಟ್ಟುತ್ತದೆ.

ಅವರಲ್ಲಿ ನಾನು ಗುರುತಿಸಿದ ಒಂದು ದೊಡ್ಡ ಗುಣವೆಂದರೆ - ತಮ್ಮ ಕಣ್ಣಿಗೆ ಕಾಣಿಸುತ್ತಿರುವ ಯಾವತ್ತು ದೃಶ್ಯಗಳನ್ನು ಮುಚ್ಚುಮರೆ, ಅಳುಕು, ಅಂಜಿಕೆಗಳಾವುವೂ ಇಲ್ಲದೆಯೇ ಥಟ್ಟನೆ ಹೇಳಿಬಿಡುವಂಥದು. ಯಾವ ವಿಷಯದಲ್ಲಿಯೂ ಸಾಮಾಜಿಕ ಆವರಣದಿಂದ ಬಂದ ಕಟ್ಟುಪಾಡು ಅವರ ಮನಸ್ಸನ್ನು ಬಾಧಿಸುತ್ತಿರಲಿಲ್ಲ. ವಿಚಾರ ಮತ್ತು ತರ್ಕಗಳಿಂದ ಅವರು ಯಾವೊಂದು ಹೊಸ ನೆಲೆಯನ್ನೂ ಹುಡುಕಿದವರಲ್ಲ. ಆದುದರಿಂದ "ನನಗೆ ಹೀಗೆ ಕಾಣಿಸುತ್ತದೆ" ಎಂದು ಹೇಳಿ ಮುಗಿಸುತ್ತಾರೆ.

ಎಷ್ಟು ಅಂತರ ನನಗೂ ಮತ್ತು ಅವರಿಗೂ! ನಾನು ಹುಟ್ಟಿ ಬೆಳೆದ ಜಾತಿ, ಮತ, ಸಮಾಜದ ನಂಬಿಕೆ, ವಿಚಾರಗಳ ಕಸ, ರಸ, ಹೊಟ್ಟು, ತಿರುಳು, ಕಲಸುಮೇಲೋಗರವಾಗಿ ನನ್ನಲ್ಲಿ ತುಂಬಿಕೊಂಡಿವೆ. ನನಗೆ ಹೊರಗಣ ಗಾಳಿಯು ಬೀಸಿ ಸಂಶಯಚಿತ್ತನಾಗುವುದಕ್ಕೆ ಬೇಕಷ್ಟು ಅನುಕೂಲತೆಗಳಿವೆ. ಆಗಿದ್ದೇನೆ - ಎಂದು ಹೇಳುವ ಧೈರ್ಯ ಮಾತ್ರ ನನಗಿಲ್ಲ. ಅವರು ಹುಟ್ಟಿ ಬೆಳೆದಂದಿನಿಂದ ಇಂದಿನ ತನಕವೂ ಅನ್ಯ ಮತಗಳ ಗಾಳಿಯಾಗಲೀ, ಪ್ರಭಾವಗಳಾಗಲೀ ಅವರ ಮೇಲೆ ಬೀಸಿದ್ದಿಲ್ಲ. ಆದರೂ, ಅವರ ವಿಚಾರ ಸರಣಿ ನನಗಿಂತ ಹತ್ತು ಹೆಜ್ಜೆ ಮುಂದಕ್ಕಿರುತ್ತದೆ. ತಮ್ಮ ಮನಸ್ಸಿಗೆ ಅಂಟಿದ ಸಂಸ್ಕೃತಿಯ ಹೊಟ್ಟನ್ನು ಅವರು ಹೇಗೆ ಕಳಚಿಕೊಂಡರು - ಎಂಬುದು ನನಗೆ ಹೊಳೆಯದ ವಿಷಯವಾಗಿದೆ.

ಆ ಬೇಸಿಗೆಯಲ್ಲಿ ಸಂಶೋಧನೆಯ ಹೊಸ ಹುಮ್ಮಸ್ಸನ್ನು ಕಾರ್ಯಗತ ಮಾಡಬೇಕೆಂದು ನಾನು ಅವಸರಪಟ್ಟೆ. ಕೇದಗೆ ಬನವನ್ನು ಅಗೆಯಿಸಬೇಕು; ಘಟ್ಟದ ಬರೆಗೆ ಹೋಗಬೇಕು; ಅಜ್ಜಿಯನ್ನು ನಮ್ಮೂರಿನ ಹಾಡಿ, ಹಕ್ಕಲುಗಳಲ್ಲಿ ಸುತ್ತಿಸಿ ಅವರ ಬಾಯಿಯಿಂದ ಏನೇನು ಬರುತ್ತದೆ ಎಂದು ಕೇಳಬೇಕು - ಎಂಬೆಲ್ಲ ಚಪಲಗಳು ಅತೀವವಾಗಿದ್ದುವು. ಇನ್ನೂ ಒಂದು ಮಳೆಗಾಲ ಕಳೆದರೆ ಅವರ ಜೀವ ಅಷ್ಟೇ ಗಟ್ಟಿಯಾಗಿ ಉಳಿದೀತೆಂಬ ನಂಬಿಕೆ ನನಗಿರಲಿಲ್ಲ. ಆ ಸಂಶಯಕ್ಕಿಂತಲೂ ಹೆಚ್ಚಾಗಿ, ಬಕಾಸುರನ ಹಸಿವಿನಿಂದ ಹತ್ತಾರು ತಿನಿಸುಗಳನ್ನು ಒಮ್ಮೆಗೇ ನುಂಗಿ ಮುಗಿಸುವ ಚಪಲ ನನ್ನದೆಂದರೆ ತಪ್ಪಿಲ್ಲ. ಅದಕ್ಕೆ ಮಾತ್ರ ಹತ್ತಾರು ವಿಘ್ನಗಳು ಅಡ್ಡ ಬಂದುವು. ತಿಂಗಳು ತಿಂಗಳುಗಳಲ್ಲೂ ವಿಘ್ನವೇ. ಮಳೆ ಮೇಲಿಂದ ಮೇಲೆ ಬರತೊಡಗಿತು. ಆಳುಗಳನ್ನು ಪುಸಲಾಯಿಸಿ ಊರಿನ ಆ ನಾಗನ ಬನವನ್ನು ಸವರಿಸುವ ಬದಲು - ಮನೆಯ ಹೊಲಗದ್ದೆಗಳ ಹೂಟೆ, ಬಿತ್ತನೆ, ಮತ್ತೊಂದು - ಎಂದು ಮನೆ ಬೇಸಾಯವನ್ನು ಕುರಿತು ಚಿಂತಿಸಬೇಕಾಯಿತು. ಆಷಾಢ ಮಾಸಕ್ಕಿಂತ ಮೊದಲು ತೊಡಗಿದ ಮಳೆ, ಎರಡು ತಿಂಗಳುಗಳ ಕಾಲ ಗರಹಿಡಿದಂತೆ ಬಡಿಯಿತು. ಮತ್ತೊಂದು ತಿಂಗಳು ಹೇಳದೆ ಕೇಳದೆ ಸರಿಯಿತು. ಆದರೆ, ಆ ಬಿಡುವು ಪ್ರಯೋಜನದ್ದಲ್ಲ. ಬಾವಿ ಅಗೆಯಿಸುವುದಕ್ಕಂತು ಆಗಲಾರದ ಸಮಯವದು. ಅದು ಕಾಡನ್ನು ಸವರುವುದಕ್ಕೂ ಆಗದ ಸಮಯ. ಯಾರೂ ಕಾಣದಂತೆ ಊರಿನ ಕಲ್ಲುಮಂಟಪದ

ಬಳಿಗೆ ಹೋಗಿ, ಅಲ್ಲಿ ಹೂತಿಟ್ಟ ನಾಟಗಳೇನಾದರೂ ಇವೆಯೋ - ಎಂಬ ಚಪಲವನ್ನು ಸಹ ತೀರಿಸಿಕೊಳ್ಳಲಾರದ ವ್ಯರ್ಥ ಕಾಲವಾಗಿತ್ತು. ಆ ಸಮಯದಲ್ಲಿ ನಾನು ಮಾಡಿದ್ದೊಂದು ಭರ್ಜರಿ ಕೆಲಸವೆಂದರೆ - ಮನೆಯ ಅಶ್ವತ್ಥಕಟ್ಟೆಯ ಮೇಲೆ ಅಜ್ಜಿಯೊಡನೆ ಕುಳಿತು ನಡೆಯಿಸಿದ ಸಂಭಾಷಣೆಗಳು. ಅನಂತರ ಚಿರಿಚಿರಿ ಮಳೆ ಮತ್ತೂ ಸ್ವಲ್ಪ ಸಮಯದವರೆಗೆ ಮುಂದುವರಿಯಿತು. ನನ್ನ ಸಂಶೋಧನೆಯ ಚಟವೇನಿದ್ದರೂ ಅದನ್ನು ತೀರಿಸಿಕೊಳ್ಳಬೇಕಾದದ್ದು ತುಲಾ ಅಥವಾ ಮಕರ ಸಂಕ್ರಾಂತಿ ಕಳೆದ ಮೇಲೆಯೇ. ಈ ಅವಧಿಯಲ್ಲಿ ನಡೆದ ಒಂದೆರಡು ಚಿಕ್ಕ ಘಟನೆಗಳನ್ನು ನಿಮಗೆ ತಿಳಿಸಿದರೆ ತಪ್ಪಾಗದು.

ಮಳೆಗಾಲದಲ್ಲಿ ಒಂದು ದಿವಸ, ಅನಿರೀಕ್ಷಿತವಾಗಿಯೇ ನಾಗಿಯೇ ನಮ್ಮ ಮನೆಯ ಮುಂದೆ ಕಾಣಿಸಿಕೊಂಡಳು. ಒಳ್ಳೆಯದೊಂದು ಬೆತ್ತದ ಪೆಟ್ಟಿಗೆಯನ್ನು ಹೆಣೆದುಕೊಂಡು ನಮ್ಮ ಮನೆಯ ಚಾವಡಿಯ ಮೇಲಿರಿಸಿ ಸಣ್ಣೊಡತಿಯನ್ನು ಕರೆದಳು. ಕೇವಲ ಹತ್ತು ಮಾರು ಆಚೆ, ಬೆಳಗ್ಗಿನ ಎಳೆ ಬಿಸಿಲಲ್ಲಿ ಕುಳಿತು, ಹಸಿ ತೆಂಗಿನ ಸೋಗೆಯನ್ನು ಹಿಡಿದು, ನಾನು ಮಡಲನ್ನು ಹೆಣೆಯುತ್ತಿದ್ದೆ. ಬಂದದ್ದು ನಾಗಿ ಎಂಬುದು ನನ್ನ ಗಮನಕ್ಕೂ ಬಂದಿರಲಿಲ್ಲ, 'ಸಣ್ಣೊಡತಿ' ಎಂದು ಆಕೆ ಕೂಗಿದಾಗ ನನ್ನ ತಲೆಯನ್ನೆತ್ತಿದೆ; ಅನಂತರ ತಲೆ ತಗ್ಗಿಸಿದೆ. ಅನಂತರ ನನ್ನವಳ ಧ್ವನಿ ಕೇಳಿಸತೊಡಗಿತು. ಅವಳು ಬಂದವಳು,

"ಇದಕ್ಕೆ ಎಷ್ಟು ಹಾನೆ ಅಕ್ಕಿ ಕೊಡಲಿ?" ಎಂದು ಪ್ರಶ್ನಿಸಿದಳು.

"ನಿಮಗೆ ಚಂದ ಕಾಣಿಸುತ್ತದೆಯೋ, ಇಲ್ಲವೋ? ಬೆತ್ತದ್ದು; ಗಟ್ಟಿಮುಟ್ಟಾಗಿದೆ, ಸೀರೆಗೀರೆ ಹಾಕಿಡಲು ಒಯಿನಾಗಿದೆ. ಒಳಗೆ ತೆಗೆದಿರಿಸಿ."

"ನೀನು ಕ್ರಯ ಹೇಳಲಿಲ್ಲವಲ್ಲ. ಯಾರಾದರೂ ಇಂಥದೊಂದು ಮಾಡಿಕೊಟ್ಟರೆ ಆಗುತ್ತಿತ್ತು - ಎಂದು ನನಗೆ ಬಹಳ ದಿನಗಳಿಂದ ಆಸೆಯಿದ್ದಿತ್ತು. ವಾಜಿಮಿ ಕ್ರಯ ಹೇಳಿದರೆ, ಇನ್ನೂ ಸ್ವಲ್ಪ ಸಾಮಾನು ಬೇಕಾಗಿದೆ; ಒಂದೆರಡು ಬುಟ್ಟಿ, ಒಂದೆರಡು ಸಿಬ್ಬಲು, ಇರಿಕೆಗಳು ಬೇಕು."

"ನೀವು ದೊದಲು ಇದನ್ನು ತೆಗೆದಿರಿಸಿ, ಒಡತಿ. ಅದನ್ನು ಮಾರಾಟಕ್ಕೆ ತಂದವಳಲ್ಲ; ಆ ದಿನ ಮುಸ್ಸಂಜೆ ಹೊತ್ತಿಗೆ ಒಂದಿಷ್ಟು ಆಸರು ಕೇಳಲಿಕ್ಕೆ ಬಂದವಳಿಗೆ ನೀವು ಅನ್ನ ಬೇಯಿಸಿ ಹಾಕಿದ್ದನ್ನು ನಾನು ಮರೆತೇನೆಯೇ? ಒಬ್ಬಳಿಗಲ್ಲ - ಮೂರು ಜನಕ್ಕೆ ಗಡದ್ದಾಗಿ ಊಟ ಹಾಕಿದಿರಿ. ಆ ಋಣವನ್ನು ನಾನು ಎಂದು ತೀರಿಸುವುದು?"

"ಇದು ಧರ್ಮಕ್ಕಾದರೆ ಬೇಡವೇ ಬೇಡ. ಅನ್ನ ಹಾಕಿದೆವು. ನಾವು ಮನೆ ಕಟ್ಟಿಕೊಂಡದ್ದು ಯಾತಕ್ಕೆ ಎಂದು ಹೇಳು? ಹಸಿದು ಮನೆಯ ಬಾಗಿಲಿಗೆ ಬಂದವರಿಗೆ ಒಂದು ತುತ್ತು ಅನ್ನ ಹಾಕದೆ ಹೋದರೆ ನಾವಿದ್ದು ಫಲವೇನು ಹೇಳು?"

ನನ್ನ ಮಡದಿಯ ಬಾಯಿಯಿಂದ ಈ ಮಾತುಗಳು ಬಂದಾಗ, ನಾನು ಕೆಲಸ ಬಿಟ್ಟು, ಕಣ್ಣೆತ್ತಿ ನೋಡಿದೆ. ಆಗಲಾರದೆ - ಬಂದದ್ದು ನಾಗಿ ಎಂಬುದು ಗೊತ್ತಾಯಿತು. ಎದ್ದು ಅಲ್ಲಿಗೂ ಹೋದೆ. ಪೆಟ್ಟಿಗೆಯನ್ನೆತ್ತಿ ನೋಡಿದೆ. ಅದು ಬರಿಯ ಬೋಳು ಪೆಟ್ಟಿಗೆಯಾಗಿರಲಿಲ್ಲ. ಒಳ್ಳೆಯ ಹೆಣಿಗೆಯ ಕೆಲಸದ್ದು. ನಯ ನಾಜೂಕು ಎಲ್ಲವೂ ಅದರಲ್ಲಿ ಕಾಣಿಸುತ್ತಿತ್ತು. ಆಗ ನನ್ನ ನೆನಪಿಗೆ ಬಂದಿತು - ರಾಮಣ್ಣನ ಕೈಯಲ್ಲಿದ್ದ ಎಲೆ ಅಡಿಕೆಯ ಸಂಚಿಯ ಚಿತ್ರ! ನಾನು ಅವರೊಡನೆ ಸಂಭಾಷಣೆಗೆ ಸೇರಿಕೊಂಡೆ. ಸೀತೆ ನಡೆದ ಕತೆಯನ್ನು ತಿಳಿಸಿದಳು. ನಾನೂ "ಇಷ್ಟು ಒಳ್ಳೆಯ ಪೆಟ್ಟಿಗೆಗೆ ಹದಿನೈದು ದಿನಗಳ ಕೆಲಸವಾದರೂ ಹಿಡಿದಿರಬಹುದು. ಘಟ್ಟದ ಬರೆಯಿಂದ ಬೆತ್ತವನ್ನು ಕಡಿದು, ಹೊತ್ತು ತಂದು... ಆ ದಿನ ಉಸಿರು ಬಿಡುತ್ತ ಬಂದ ನಿನ್ನನ್ನು ಕಂಡೇ ನನಗೆ ಕನಿಕರವಾಗಿತ್ತು. ದಾಕ್ಷಿಣ್ಯ ಮಾಡಬೇಡ, ಎಷ್ಟು ಹಾನೆ ಅಕ್ಕಿ, ಹೇಳು" ಎಂದು ಕೇಳಿದೆ.

"ಅಯ್ಯ, ನೀವು ಅದೊಂದು ಸುದ್ದಿಯನ್ನು ಮಾತನಾಡಬೇಡಿ. ನಾನು ಇದಕ್ಕೆಂದೇ ಇಲ್ಲಿಗೆ ಬಂದವಳೂ ಅಲ್ಲ. ನಿಮ್ಮ ಅಜ್ಜಮ್ಮನನ್ನು ಮಾತನಾಡಿಸಿ ಹೋಗೋಣ - ಎಂದು ಬಂದೆ. ಬರಿಗೈಯಲ್ಲಿ ದೊಡ್ಡವರನ್ನು ಕಾಣಬಾರದು ಎಂಬುದರಿಂದ ಇದನ್ನು ತಂದೆ. ಬೆತ್ತಕ್ಕೂ ದುಡ್ಡು ಕೊಟ್ಟವಳಲ್ಲ; ಇದಕ್ಕೂ ಕೇಳುವವಳಲ್ಲ. ಈ ಬುಟ್ಟಿಯಿರುವ ತನಕ 'ನಾಗಿ' ಎಂಬವಳು ಒಬ್ಬಳು ಇದ್ದಳು ಎಂಬ ನೆನಪು ಉಳಿದರೆ ಮಸ್ತಾಯಿತು ನನಗೆ."

ಅಷ್ಟರಲ್ಲಿ, ಒಳ ಕೋಣೆಯಿಂದ ನಮ್ಮ ಅಜ್ಜಿಯ ಧ್ವನಿ ಕೇಳಿತು. ಆ ಧ್ವನಿಗೆ ನಾಗಿಯ ಮುಖ ಥಟ್ಟನೆ ಅರಳಿತು. ಅಜ್ಜಿಯು ಒಳಗಿಂದಲೇ "ಮಗು, ಕೊಟ್ಟಿದ್ದನ್ನು ತೆಗೆದಿಡು. ನಾಗಿಯಲ್ಲವೇ ಅದನ್ನು ತಂದದ್ದು? ಅವಳು ನನ್ನದೊಂದು ತಬ್ಬಲಿ ಕರುವಿದ್ದ ಹಾಗೆ" ಎಂದರು. ಕೊನೆಯ ಮಾತನ್ನು ಕೇಳಿದಾಗ ಸೀತೆಗೆ ಏನನ್ನಿಸಿತೋ, ನಾನು ತಿಳಿಯೆ. ಅವಳು ಪೆಟ್ಟಿಗೆಯನ್ನು ಆಚೆಗೆ ತೆಗೆದಿರಿಸಿದಳು. ಅವಳ ಮುಂದೆ ಎಲೆ ಅಡಿಕೆ ತಂದಿಟ್ಟಳು. ಒಂದಷ್ಟು ಬೆಲ್ಲ, ಅವಲಕ್ಕಿ, ಮತ್ತಿಷ್ಟು ನೀರನ್ನು ಅವಳ ಮುಂದಿಟ್ಟು "ಇನ್ನು ಮೇಲೆ ನನ್ನ ಮಾತಿಲ್ಲ; ದೊಡ್ಡವರೇ ಹೇಳಿಯಾಯಿತು. ಹಿಂದೆ ಹೋಗುತ್ತ ಹೇಳಿ ಹೋಗು. ಮಧ್ಯಾಹ್ನ ಉಂಡು ಹೋಗು. ಬರಿದೆ ಹೋಗಬೇಡ. ಒಂದು ಹಳೆಯ ಸೀರೆ ಚೂರಿದ್ದರೆ ಹುಡುಕಿ ಕೊಡುತ್ತೇನೆ" ಎಂದಳು. ನಾಗಿಯ ಮುಖವು ಇನ್ನಷ್ಟು ಅಗಲವಾಯಿತು. ಸೀತೆ ಒಳಕ್ಕೆ ಹೊರಟುಹೋದಳು.

ಅವಳು ತನ್ನ ಹಳೆಯ ಸೀರೆ ದಾನ ಮಾಡುವುದೆಂದರೆ ನನಗೆ ಆಶ್ಚರ್ಯವೇ ಆಯಿತು. ಸೀರೆ ಹಳತಾಗಿ ಸಿಂಬು, ಸಿಂಬಾದರೂ ಅದನ್ನು ಇಚ್ಚಿಡಿ ಮಾಡಿ ಉಟ್ಟಾಳೇ ವಿನಾ, "ಮೊನ್ನೆ ತಂದದ್ದು ಉಡಬಾರದೇಕೆ? ಇದನ್ನೇನು ಉಡುತ್ತೀಯ?" ಎಂದರೂ ಕೇಳಿದವಳಲ್ಲ.

ಅಜ್ಜಿಯು ಹೊರಕ್ಕೆ ಬಂದು ಆ ನಾಗಿಯೊಡನೆ "ನಿನಗೆ ಅಂತಹ ಅವಸರವಿಲ್ಲವಲ್ಲ, ಉಂಡು ಹೋಗುತ್ತೀಯಲ್ಲ" ಎಂದಂದು, ತಿರುಗಿ ತಮ್ಮ ಕೊಠಡಿಗೆ ಹೋದರು. ನಾನು ತೋಟಕ್ಕೆ ಹೊರಟು ಹೋದೆ. ಊಟದ ಸಮಯವಾಗುತ್ತಲೇ ಮನೆಗೆ ಮರಳಿ ಬಂದು, ಊಟವನ್ನು ಮುಗಿಸಿ, ವಿರಾಮವಾಗಿ ಮಲಗಿಕೊಂಡೆ. ಎಲ್ಲರ ಊಟ ಮುಗಿದ ಮೇಲೆ, ಸೀತೆ ನಾಗಿಗೂ ಒಂದಿಷ್ಟು ಅನ್ನವನ್ನು ಬಡಿಸಿ ಉಪಚಾರ ಮಾಡಿದಳು. ನಾಗಿಯ ಪೂರ್ವ ಕತೆ ಅವಳಿಗೆಷ್ಟು ಗೊತ್ತಿತ್ತೋ - ನಾನು ತಿಳಿಯೆ. ಪ್ರಾಯಶಃ ಅವಳಿಗೆ ಅದೇನೂ ತಿಳಿದಿರಲಾರದು. ತಿಳಿದಿದ್ದರೆ, ಅಂತಹ ಪ್ರಸನ್ನತೆ ಬರುತ್ತಿತ್ತೋ ಇಲ್ಲವೋ. ನಾಗಿಗೆ ಇನ್ನೊಮ್ಮೆ ಎಲೆಯಡಿಕೆಯನ್ನು ಕೊಟ್ಟಳು. ಅವಳು ಉಂಡು, ಎಂಜಲು ಎಲೆಯನ್ನು ತೆಗೆದು, ಸಾರಿಸಿಯಾದ ಮೇಲೆ ನಮ್ಮ ಅಜ್ಜಿಯ ಬರವನ್ನು ಕಾಯುತ್ತ ಕುಳಿತಳು. ನನಗೆ ತೂಕಡಿಕೆ ಬಂದ ಆ ವೇಳೆಯಲ್ಲಿ ಸೀತೆ ಅವಳಿಗೆ ಹಳೆಯ ಸೀರೆಯೊಂದನ್ನು ಕೊಟ್ಟಿರಬೇಕು. ನನ್ನ ನಿಡು ನಿದ್ದೆ ಮುಗಿದು ಎಚ್ಚರವಾದಾಗ ಅವಳು ಚಾವಡಿಯಲ್ಲಿರಲಿಲ್ಲ. ಹೊರಕ್ಕೆ ಹೋಗಿ ನೋಡಿದರೆ - ಅಶ್ವತ್ಥದ ಕಟ್ಟೆಯ ಮೇಲೆ ಅಜ್ಜಮ್ಮ ಕುಳಿತದ್ದು ಅವಳ ಮುಂದಕ್ಕೆ ತಗ್ಗಿನಲ್ಲಿ ಆಕೆ ಕುಳಿತಿದ್ದು ಕಾಣಿಸಿತು. ಬಣ್ಣದ ಮಾಸಿದ ಸೀರೆಯೊಂದು ಅವಳ ಮೈ ಮೇಲಿತ್ತು. ಪ್ರಾಯಶಃ ಸೀತೆ ಕೊಟ್ಟ ಸೀರೆಯನ್ನು ಉಟ್ಟು ಅವಳಿಗೆ ಅದನ್ನು ಹಿಗ್ಗಿನಿಂದ ತೋರಿಸಿ, ಅಪ್ಪಣೆ ಪಡೆದು ಆಕೆ ಹೊರಕ್ಕೆ ಹೋಗಿರಬೇಕು. ಅಷ್ಟೊಂದು ಚಿತ್ರವನ್ನು ನಾನು ನೆನೆದಾಗ ನಾಗಿಯ ಜೀವನ ಬದಲಾಗಿದೆ ಎಂಬ ಭಾವನೆ ನನಗೆ ಬಂದೇ ಬಂದಿತ್ತು. ಅದೇನು ಎಂದು ತಿಳಿಯುವ ಕುತೂಹಲ ಕುತ್ತಿಗೆಯ ತನಕವೂ ಬಂದಿತ್ತು. ನನ್ನ ಒಳ ಜೀವವೂ, ಕಾಲುಗಳೂ ಅಶ್ವತ್ಥದ ಕಟ್ಟೆ ಕಡೆಗೇ ನನ್ನನ್ನು ಎಳೆಯುತ್ತಿದ್ದುವು. ಆದರೆ ಸಮೀಪ ಹೋಗುವುದಕ್ಕೇ ಭಯ. ಹಿಂದಿನಂತೆ ಅವರು "ನಿನಗೇನೂ ಬುದ್ಧಿಯಿಲ್ಲ" ಅಂದರೆ? ಹಳೆಯ ನೆನಪು ಇನ್ನೂ ಹೋಗಿರಲಿಲ್ಲ. ಅತ್ತ, ಮನಸ್ಸಿನ ಚಪಲವೂ ಬಿಡಲಿಲ್ಲ. ಅಜ್ಜಿಯೇ ನನ್ನನ್ನು ಕರೆದರೆ ಆಗುತ್ತಿತ್ತು - ಎಂಬಾಸೆ ನನ್ನಲ್ಲಿ ಹುಟ್ಟಿಕೊಂಡಿತು. ಮನೆಯಲ್ಲೇ ಆಚೆ, ಈಚೆ ಸುಳಿದಾಡತೊಡಗಿದೆ. 'ಧ್ಯಾನ' ಒಂದು ಕಡೆ, ನನ್ನ ಕೆಲಸ ಒಂದು ಕಡೆ. ಆಗಾಗ ಅದರ ಎಡೆ ಎಡೆಯಲ್ಲಿ - ನಾಗಿ ಹೋದಳೇ, ಇದ್ದಾಳೆಯೇ - ಎಂದು ಬಾಗಿಲಿನಿಂದ ಹೊರಕ್ಕೆ ಬಂದು - ಹಣಿಕಿ ನೋಡುವ ಕೆಲಸ.

ಒಂದು ಜಾವ ಹೊತ್ತಿನ ಮೇಲೆ ಕಟ್ಟೆಯಲ್ಲಿ ಅಜ್ಜಿಯೊಬ್ಬರೇ ಕುಳಿತದ್ದು ಕಾಣಿಸಿತು. ಹಾಗಿದ್ದರೆ, ಅವಳನ್ನು ಕಳುಹಿಸಿಕೊಟ್ಟಿರಬೇಕು. ನಾಗಿ ಅವರನ್ನು ಕಾಣುವುದಕ್ಕೆ ಬಂದಿದ್ದೇನೆ ಎಂದ ಹಾಗಿತ್ತಲ್ಲವೇ? ಏನಪ್ಪ ಅಂಥ ಗುಟ್ಟು - ಎಂದೂ ತೋರಿತು. ಹಾಗೆಯೇ ಅಶ್ವತ್ಥದ ಕಟ್ಟೆಯ ಬಳಿಗೆ ಸರಿದೆ. ಅದನ್ನು ಸಮೀಪಿಸಿದಾಗ 'ಮಾಣಿ ಬಾ' ಎಂದು ಅವರಾಗಿಯೇ ನನ್ನನ್ನು ಕರೆದರು. ಗೆಲುವೊಡೆಯಿತು ನನ್ನ ಮನಸ್ಸು. ಹೋಗಿ ಅವರ ಬಳಿಯಲ್ಲಿ ಕುಳಿತುಕೊಂಡೆ. ಪೀಠಿಕೆಯಾಗಿ "ನಾಗಿ ಬಂದವಳು ಹೋದಳೆಂದು ಕಾಣಿಸುತ್ತದೆ" ಎಂದೆ.

"ಅವಳು ನನ್ನನ್ನು ಕಾಣುವುದಕ್ಕೇನೆ ಬಂದಿದ್ದಳು. ಮಾತು ಮುಗಿಸಿ ಹೊರಟು ಹೋದಳು."

"ಏನು ಮಾತು?" ಎಂದು ನಾನು ಕೇಳಲಿಲ್ಲ. ಕೇಳುವ ಕುತೂಹಲವನ್ನು ಅದುಮಿ ಹಿಡಿದು ಕುಳಿತೆ. ಅವರೇ ಅಂದರು:

"ಮಾಣಿ, ನಾನು ಒಂದು ಕೆಲಸವನ್ನು ಮಾಡಿದೆ. ತಪ್ಪೋ, ಒಪ್ಪೋ, ಅದು ಮಾತ್ರ ಆ ದೇವರಿಗೇ ಗೊತ್ತು. ಯಾರಾದರೂ ಕೇಳಿದರೆ ಏನೆಂದಾರು - ಎಂದೂ ಯೋಚಿಸಲಿಲ್ಲ. ನನ್ನ ಅಂತರಂಗಕ್ಕೆ ಅದು ಸಮ ಎಂದು ಕಾಣಿಸಿತು. ಅಂದು ನಾನು ಈ ನಾಗಿಗೆ ಏನನ್ನೋ ಹೇಳಿದ್ದೆ. ಮತ್ತೆರಡು ದಿನಗಳಲ್ಲಿ ಈ ಮನೆಗೆ ರಾಮಣ್ಣ ಬಂದಿದ್ದನಲ್ಲ. ಅವನಿಗೂ ನಾನು ಹಾಗೆಯೇ ಏನನ್ನೋ ಹೇಳಿದೆ. ಹಾಗೆ ನನ್ನ ಮಾತು ನಡೆದೀತು ಎಂಬುದಕ್ಕೆ ಹೇಳಿದ್ದಲ್ಲ. ನಡೆದಿದ್ದರೆ ಆಗುತ್ತಿತ್ತು - ಎಂದೆನಿಸಿ ಹೇಳಿದ್ದು."

"ಏನದು ಅಜ್ಜಿ?"

"ನಿನಗೂ ನಗು ಬಂದೀತು - ಅದನ್ನು ಕೇಳಿದರೆ; ನಿನಗೆ ಗೊತ್ತುಂಟಲ್ಲ ಈ ನಾಗಿಯ ಕತೆ. ನಾನವಳನ್ನು ಮರೆತಿರಲಿಲ್ಲ. ಅವಳೂ, ರಾಮಣ್ಣನೂ ಚೆನ್ನಾಗಿದ್ದುದನ್ನು ಕಂಡವಳು ನಾನಲ್ಲವೇ? ನಡುವೆ ನಿನ್ನ ಸೋದರಮಾವ, ಆ ಕಪಿರಾಯ, ಮಂಕುಬೂದಿ ಚೆಲ್ಲಿ ಅವಳನ್ನು ಸಾಗಿಸಿ, ಕೆಡಿಸಿದ. ಅಷ್ಟಾದ ಮೇಲೂ ರಾಮಣ್ಣ ಮಾತ್ರ ಅವಳ ಮೇಲಿನ ದೋಹ ಬಿಟ್ಟವನಲ್ಲ. ಎಷ್ಟು ವರ್ಷವಾಯಿತು ಹೇಳು, ಏನು ಕತೆ! ಅವನೂ ಒಂಟಿಯೇ. ಮೊನ್ನೆಯ ತನಕ ಅಕ್ಕನೋ, ತಂಗಿಯೋ ಅವನ ಹತ್ತಿರ ಇರುತ್ತಿದ್ದರಂತೆ; ಈಗ ಅವರೂ ಬಿಟ್ಟು ಹೊರಟು ಹೋದರು. ಈಗ ಅವನ ಎಣ್ಣೆಯ ಗಾಣಕ್ಕೆ ಅವನೇ ಎತ್ತು. ಅವಳನ್ನು ಕರೆದುಕೊಳ್ಳುವುದಕ್ಕೆ ಅವನು ಸಿದ್ಧನಿದ್ದ ಹಾಗೆ ಕಾಣಿಸಿತು. ಅವಳು ಕೆಟ್ಟು, ಎರಡು ಮಕ್ಕಳಾಗಿ, ಅವುಗಳನ್ನು ಸಾಕುವ ಹಟತೊಟ್ಟು, ಊರನ್ನು ಬಿಟ್ಟಳು. ಅದೆಂಥದೋ ಹಳ್ಳಿ - ಎಂದಳಪ್ಪ. ಅಲ್ಲಿಗೆ ಹೋಗಿ ಆ ಮಕ್ಕಳನ್ನು ಸಾಕಿ ದೊಡ್ಡದು ಮಾಡಿದಳು. ಅವು ದೊಡ್ಡದಾದುವು. ಕಳೆದ ಸಾರಿ ಬಂದಾಗ ನೀನೇ ಕರೆದುಕೊಂಡು ಬಂದಿದ್ದೆಯಲ್ಲ? ಆಗ ಬಂದವಳು ಕಣ್ಣೀರಿಟ್ಟು ತನ್ನ ಮಕ್ಕಳ ಕತೆಯನ್ನು ಹೇಳಿದಳು. ಇಷ್ಟೆಲ್ಲ ಮಾಡಿದೆ ನಾನು. ಕೆಟ್ಟದ್ದು ನಿಜ. ಆಮೇಲೆ ಮನುಷ್ಯರ ಮುಖವನ್ನು ಕಂಡವಳಲ್ಲ. ಎರಡು ಮಕ್ಕಳನ್ನು ಕಟ್ಟಿಕೊಂಡು, ಕತ್ತೆಯ ಹಾಗೆ ದುಡಿದು, ಅವನ್ನು ಬೆಳೆಯಿಸಿದೆ. ಅವಕ್ಕೆ ಈಗ ಪ್ರಾಯ ಬಂದಿದೆ. ನನ್ನ ಗತಿ ಹಾಗಾಯಿತು ನಿಜ. ಇವಾದರೂ ಮುಂದೆ ಸಂಸಾರ ಮಾಡಿಕೊಂಡಿರಬೇಡವೇ? ಅವಕ್ಕೆ ಯಾರು ಹೆಣ್ಣು ಕೊಡುವವರು - ಹೇಳಿ, ಜಾತಿಗೆಟ್ಟವಳ ಮಕ್ಕಳಿಗೆ" - ಎಂದು ಮರುಗಿದಳು ಅಷ್ಟಿಷ್ಟಲ್ಲ. ಕೇಳಿ, ನನಗೆ ಏನು ಹೇಳುವುದಕ್ಕೂ ಬಾಯಿ ಬರಲಿಲ್ಲ. "ನೋಡು ನಾಗಿ, ನಿನ್ನ ಹತ್ತಿರವೇ ಇದ್ದು, ಅವು ಬೆಳೆದರೆ ಅವಕ್ಕೆ ಹೆಣ್ಣು ಸಿಗುವುದು ಕಷ್ಟ" ಎಂದೆ. ಅವಳು ಹೊರಟು

ಹೋದಳು ಆ ದಿವಸ. ಮತ್ತೊಂದು ಎರಡೇ ಎರಡು ದಿನಗಳಲ್ಲಿ ಏಕಾಏಕಿ ನಿನ್ನ ರಾಮಣ್ಣನೂ ಬಂದ.

ನಾನು ಚೇಷ್ಟೆಗೆ 'ನನ್ನ ರಾಮಣ್ಣನೇ?' ಎಂದೆ.

"ಹೋಗಲಿ ಬಿಡು, ಅವನೂ ನನ್ನ ಮಗುವೇ; ಇವಳೂ ಮಗುವೇ, ನನಗೆ ಮತ್ಯಾರು ಮಕ್ಕಳು? ನಾಗಿಯ ಮುಖವನ್ನು ನೋಡಿದಾಗ ಅವಳು ಇನ್ನೂ ಒಳ್ಳೆಯ ಹೆಣ್ಣಾಗಿಯೇ ಉಳಿದಿದ್ದಾಳೆ - ಅನಿಸಿತು. ಆ ಎರಡು ಮಕ್ಕಳಿಲ್ಲವಾದರೆ ಅವಳೇ ರಾಮಣ್ಣನಿಗೆ ಡೊಗ್ಗಾಲು ಹಾಕಿ, ಬೇಡಿ, ಸಂಸಾರ ಮಾಡುತ್ತಿದ್ದಳು - ಎಂದು ಅನಿಸುತ್ತಿತ್ತು. ಒಂಟಿ ಕೊರಡಾಗಿ ಬಾಳುತ್ತಿರುವ ಇವನೂ ಅವಳನ್ನು ಚಂದವಾಗಿಯೇ ನೋಡಿಕೊಳ್ಳುತ್ತಿದ್ದ. ಅವಳೂ ಅವನನ್ನು ನೋಡಿಕೊಳ್ಳುತ್ತಿದ್ದಳು - ಎಂದು ಅನಿಸಿತು. ಆ ಮಕ್ಕಳದ್ದೇ ಕಷ್ಟ. ಅದರ ಯೋಚನೆ ಬಂದದ್ದರಿಂದ ನಾನೆಂದೆ. ಮಕ್ಕಳಿಂದ ನಿನಗೇನೂ ಅಪಚಾರವಾಗಲಿಕ್ಕಿಲ್ಲ. ಅವು ನಿನಗಂತೂ ಹುಟ್ಟಿದ್ದಲ್ಲ - ಎಂಬುದು ನಿಜ. ಅವಳಿಗೆ ಮಾತ್ರ ಅವು ಮಕ್ಕಳು. ನೀನು ಅವನ್ನು ನಿನ್ನದೇ ಮಕ್ಕಳೆಂದರೆ ನಿನ್ನ ದೊಡ್ಡಸ್ತಿಕೆಗೇನೂ ಕುಂದು ಬರಲಾರದು. ಅವು ಯಾರಿಗೆ ಹುಟ್ಟಿದ್ದೆಂದು ಅವುಗಳ ಅಬ್ಬೆ ಅವಕ್ಕೂ ಹೇಳಿರಲಾರಳು. ಹೇಳುವುದಾದರೂ ಹೇಗೆ? ಇದು ನೋಡು, ಮಾಣಿ, ನಿನ್ನ ಆ ಮಾವಯ್ಯ ಮಾಡಿದ ಪಾಪವನ್ನು ನಾನು ತೊಳೆಯಲಿಕ್ಕೆ ಹೋದ ಹಾಗಾಗಿದೆ. ರಾಮಣ್ಣನಿಗೆ ನಾನೆಂದೆ: ಅವು ದೊಡ್ಡದಾದುವು. ಅವಕ್ಕೆ ದುಡಿಯುವ ತ್ರಾಣ ಉಂಟು. ಅವು ಹತ್ತಿರವಿದ್ದು ನಿನಗೆ ಹೊಟ್ಟೆ ಸಂಕಟವಾಗುವುದಾದರೆ, ಅವು ಬಡಾಘಟ್ಟಕ್ಕೆ ಹೋಗಿ ಅಲ್ಲಿ ಎಲ್ಲಾದರೂ ದುಡಿದುಕೊಂಡಿರಲಿ. ಹೇಳುವುದಕ್ಕೊಂದು ಅಪ್ಪನ ಹೆಸರಿದ್ದರೆ, ನಿನಗೆ ಅದು ನಾಚಿಕೆ ಎಂದು ಕಾಣಿಸದಿದ್ದರೆ, ಅವುಗಳ ಹಣೆಯ ಮೇಲೆ ಸಂಸಾರದ ಋಣ ಬರೆದಿದ್ದರೆ, ಯಾರಾದರೂ ಅವಕ್ಕೆ ಹೆಣ್ಣು ಕೊಟ್ಟಾರು" ಎಂದೆ.

"ನೀವು ಹಣೆಯ ಬರಹ, ಗಿರಹ ಇದನ್ನೆಲ್ಲ ನಂಬುತ್ತೀರೋ?" ಎಂದು ಕೇಳಿದೆ.

"ಹೇಳಿದೆ ಅಪ್ಪ - ಒಂದು ಮಾತಿಗೆ. ಆ ಅಮ್ಮ - ಗಂಡು ಅಂತ ಆ ಮಕ್ಕಳನ್ನು ಹುಟ್ಟಿಸಿದ್ದಕ್ಕೆ, ಅವಕ್ಕೆ ಬೇಕಾದ ಹೆಣ್ಣುಗಳನ್ನು ಇನ್ನೆಲ್ಲಾದರೂ ಹುಟ್ಟಿಸಿಯೇ ಹುಟ್ಟಿಸಿರುತ್ತಾಳೆ ಎಂದು ತೋರುತ್ತದೆ ನನಗೆ. ಅದು 'ಅವಳ' ಜಂಬರ. 'ಅವಳಿಗೆ ಬುದ್ಧಿ ಇದ್ದೀತು. ತಾನು ಯಾತಕ್ಕೆ ಈ ಸೃಷ್ಟಿಯನ್ನು ಮಾಡಿದೆ, ಅದರಲ್ಲಿ ಗಂಡು ಮತ್ತು ಹೆಣ್ಣು ಎಂಬ ಭೇದ ಕಲ್ಪಿಸಿದೆ' ಎಂಬುದನ್ನು ಅವಳು ತಿಳಿದುಕೊಂಡಿದ್ದಾಳು" ಎಂದರು.

"ಹೋ, ನೀವು ಇಷ್ಟೆಲ್ಲ ಪಂಚಾತಿಕೆ ಮಾಡಿದ್ದೀರಿ. ಮತ್ತೇನಾಯಿತು?"

"ಮತ್ತೊಂದು ದಿವಸ ನಾನು ಎಣಿಸಿದ ಹಾಗೆಯೇ, ಈ ರಾಮಣ್ಣ ಅದೇ ನಾಗಿಯ ಆಸೆಗೆ 'ಹರಿ ಹರೀ' ಅಂತ ಅವಳ ಮನೆಯ ಬಾಗಿಲಿಗೇ ಹೋದನಂತೆ. ದೊದಲೂ ಅವನು

ಹತ್ತು ಸಾರಿ ಹೇಳಿ ಕಳುಹಿಸಿದ್ದನಂತೆ. ಈಗ ತಾನಾಗಿಯೇ ಹೋದ. ಎಂದೋ ಮಾಡಬಹುದಾಗಿದ್ದ ಕೆಲಸವದು. ಇಂದು ಮಾಡಿದನು - ಅನ್ನು. ಅದರಲ್ಲಿ ನನಗೇನೂ ತಪ್ಪು ಕಾಣಿಸುವುದಿಲ್ಲ."

"ತಪ್ಪು ಕಾಣಿಸುವುದಿಲ್ಲವೇ?"

"ಮರುಳ! ನಿನ್ನ ಮಾವ ಮಾಡಿದ ತಪ್ಪನ್ನು ಕಂಡು ಈ ಊರಿನ ಒಬ್ಬರೇ ಒಬ್ಬರು ಅವನೆದುರಿಗೆ ಹೇಳಿದ್ದುಂಟೇ! ಆ ಕಾಲಕ್ಕೆ ಅವನ ಹತ್ತಿರ ದುಡ್ಡಿದೆ ಅಂತ ಎಲ್ಲರೂ ಬಾಯಿಮುಚ್ಚಿಕೊಂಡು ಕುಳಿತರು. ನಾಗಿಯ ಸಂಸಾರವನ್ನು ಒಡೆದದ್ದೇ ಅವನು. ಒಡೆಯುವುದು ಸಮನಾದ ಕೆಲಸವೋ, ಒಡೆದ ಸಂಸಾರವನ್ನು ಕೂಡಿಸುವುದು ಸಮನಾದ ಕೆಲಸವೋ?"

"ರಾಮಣ್ಣ ಮೊದಲು ಕರೆದಾಗ ಅವಳಾಗಿಯೇ - ತಾನು ಎಂಜಲಾದೆ - ಎಂದು ಹೇಳಿರಲಿಲ್ಲವೇ?"

"ಅದು ಅವಳ ದೊಡ್ಡಸ್ತಿಕೆ! ಆದರೆ ನೋಡು - ಗಂಡು ಹೆಣ್ಣಿಗೂ - ಎಂಜಲು ಮುಸುರೆಗೂ ಜೋಡಿಯಲ್ಲ. ಇಲ್ಲಿ ಇಬ್ಬರೊಳಗೂ ಒಂದೊಂದು ಜೀವ ಕುದಿಯುತ್ತಿರುತ್ತದೆ. ಅದರ ಸಂಕಟ ಏನು, ಎಂಥದು, ಅಂತ ನಮಗೇನು ಗೊತ್ತಾಗುತ್ತದೆ? ಈ ಊರಿನಲ್ಲಿ ಅಂಥ ಹತ್ತಾರು ಸಂಸಾರಗಳನ್ನು ನಾನೂ ಕಂಡವಳು; ಆಡುವ ನಾಲಿಗೆ ಏನೇನೋ ಆಡುತ್ತ ಇರುತ್ತದೆ. ಒಳಗಿನ ಅಂತರಂಗ ಇನ್ನೇನನ್ನೋ ಹೇಳುತ್ತಿರುತ್ತದೆ. ಎಲ್ಲವೂ ಕಪಟ ನಾಟಕ. ರಾಮಾಯಣದ ಕತೆ ಹೇಳುತ್ತದಲ್ಲ ನಿನಗೆ! ರಾಮ ಸೀತೆಯನ್ನು ಪರೀಕ್ಷೆ ಮಾಡಿದ - ಎಂತ. ಅವಳು 'ಎಂಜಲಲ್ಲ' ಎಂದು ಗೊತ್ತಾದ ಮೇಲೆಯೂ, ಅವನು ಮಾಡಿದ್ದೇನಂತೆ? ಗೌತಮ ಅಹಲ್ಯೆಯರ ಕತೆ ಅದಕ್ಕೆ ತದ್ವಿರುದ್ಧ."

"ಅದು ನಿಜವಿದ್ದೀತೆ ಅಜ್ಜಿ? ಮನುಷ್ಯರು ಶಾಪದಿಂದ ಕಲ್ಲಾಗುವುದು; ಮತ್ತೊಂದು. ಆ ಕಲ್ಲು ಸಾವಿರ ವರ್ಷದ ಮೇಲೆ ತಿರುಗಿ ಹೆಣ್ಣಾಗುವುದು ಸಾಧ್ಯವೇ?"

"ಕಲ್ಲಾಗುವುದು ನಮ್ಮ ಮನಸ್ಸು. ಅಷ್ಟು ವರ್ಷವೂ ಕಲ್ಲಾಗಿ ಅಹಲ್ಯೆ ಬಿದ್ದಿದ್ದರೆ, ಅಷ್ಟರೊಳಗೆ ಗೌತಮ ಹೊಗೆಯಾಗಿ ಹೋಗುತ್ತಿದ್ದ."

"ಈಗ ಒಂದು ಮಾತಿಗೆ ಕೇಳುತ್ತೇನೆ - ಮಹಾಭಾರತ, ರಾಮಾಯಣ ಅನ್ನುತ್ತಾರಲ್ಲ ಅದೆಲ್ಲ ನಿಜವೇ? ಅವತಾರ, ಗಿವತಾರ?"

"ನಿನಗೆ ಎಷ್ಟು ಸಾರಿ ಹೇಳುವುದು. ಮಾಣಿ? ದೇವರಿಗೆ ಅವತಾರ ಕೊಟ್ಟವರು ನಾವು, ನಮ್ಮ ಬುದ್ಧಿ. ಈ ಜಗತ್ತನ್ನು ಸೃಷ್ಟಿ ಮಾಡುವುದಕ್ಕೆ ಅವನಿಗೊಂದು ಅವತಾರ ಬೇಕೇ? ಅದಕ್ಕೆ ಬೇಡವಾದರೆ, ಅದನ್ನು ಸಾಕುವುದಕ್ಕೂ ಬೇಡ; ಸಾಯಿಸುವುದಕ್ಕೂ ಅವತಾರ ಬೇಡ."

"ಅದು ಹೌದೆಂದು ಕಾಣಿಸುತ್ತದೆ. ರಾಮನ ಕತೆ ಅಲ್ಲಿರಲಿ; ರಾಮಣ್ಣನ ಕತೆಯನ್ನು ಹೇಳಿ ನೀವು."

"ಕತೆಯೇನಿಲ್ಲ. ನಾಗಿ ಬಂದವಳು ಹೇಳಿದಳು 'ನಾವು ಚಂದವಾಗಿದ್ದೇವೆ. ಎರಡೂ ಗಂಡು ಮಕ್ಕಳನ್ನೂ ಬಡಾಘಟ್ಟಕ್ಕೆ ಕಳುಹಿಸಿದ್ದೇವೆ. ಮಕ್ಕಳನ್ನು ಬಿಟ್ಟಿರುವುದಕ್ಕೆ ಕಷ್ಟವಾಗುತ್ತದೆ. ನಾನು ಅವುಗಳೊಟ್ಟಿಗೆ ಹೋದರೆ ಇವರಿಗೆ ಇರಲು ಕಷ್ಟವಾಗುತ್ತದೆ. ಎಲ್ಲರೂ ಇದೇ ಊರಲ್ಲೇ ಇದ್ದರೆ, ಯಾರಾದರೂ ಏನಾದರೂ ಅಂದದ್ದು ಕೇಳಿ, ಅವಕ್ಕೆ ಹೆಣ್ಣು ಸಿಗದೆ ಹೋದೀತು' ಎಂದು ತನ್ನ ಗೋಳು ತೋಡಿಕೊಳ್ಳುವುದಕ್ಕೆ ಅವಳು ಬಂದಿದ್ದಳು."

"ನೀವೇನು ಹೇಳಿದಿರಿ ಅವಳಿಗೆ ಸಮಾಧಾನ?"

"ಸಮಾಧಾನ ಏನು? ಹೋಗಿದ್ದಾವೆ ಎನ್ನುತ್ತೀ; ದೊಡ್ಡವರಾಗಲಿಲ್ಲವೇ ಅವರು? ಅಲ್ಲೇನಾದರೂ ಕೆಲಸ ಮಾಡಿಕೊಂಡು ಅವು ಇರುತ್ತವೆ. ಅವು ಅಬ್ಬೆಯ ನೆನಪಾದಾಗ ಬಂದು ನೋಡುತ್ತವೆ. ಅವಕ್ಕೆ ನೀನೆನ್ನು 'ನಿಮಗೆ ಹೆಣ್ಣು ಹುಡುಕುವ ತ್ರಾಣವಿದ್ದರೆ ಹುಡುಕಿ' ಎಂತ. ಅವಕ್ಕೆ ದುಡಿಯುವ ತ್ರಾಣವಿದ್ದರೆ, ಅವಾಗಿ ಎಲ್ಲಾದರೂ ತಮಗೆ ಒಗ್ಗುವ ಹೆಣ್ಣುಗಳನ್ನು ಹುಡುಕಿಕೊಳ್ಳುತ್ತವೆ. ಒಂದು ಜಾತಿಯಲ್ಲಲ್ಲ, ಮತ್ತೊಂದು ಜಾತಿಯಲ್ಲಿ."

"ಅದು ಸಮವೇ?"

"ಯಾವುದು?"

"ಜಾತಿ ಬಿಟ್ಟು, ಜಾತಿಯ ಹೊರಗಿನಿಂದ ಮದುವೆಯಾಗುವುದು?"

"ನೀನು ಮರುಳ! ದೇವರು ಮಾಡಿಟ್ಟ ಜಾತಿ ಎರಡೇ ಎರಡು. ಗಂಡು, ಹೆಣ್ಣು. ನಾವು, ನೀವು ಮಾಡಿಕೊಂಡಿದ್ದು ನೂರು, ಸಾವಿರ. ಈ ಪಾಟಿ ಜಾತಿಗಳು ಯಾವ ಯಾವ ಜೀವಿಗಳಲ್ಲೂ ಇಲ್ಲ. ಆದರೆ ನೋಡು, ಗಂಡು ಗಂಡನ್ನು ಮದುವೆಯಾಗುವುದಿಲ್ಲ. ಹೆಣ್ಣು ಹೆಣ್ಣನ್ನು ಮದುವೆಯಾಗುವುದಿಲ್ಲ. ಆ ಎರಡು ಜಾತಿಗಳ ಕೂಡಿಕೆ, ಹುಟ್ಟಿಸಿದ ದೇವರಿಗೇ ಇಷ್ಟದ್ದೇ. ಉಳಿದವರಿಷ್ಟ, ಊರವರಿಷ್ಟ, ದೇವರಿಷ್ಟಕ್ಕೆ ಅಡ್ಡ ಬಂದರೆ ಯಾರೇನು ಮಾಡುತ್ತಾರೆ?"

"ಅದು ಹೋಗಲಿ ಅಜ್ಜಿ. ಆ ವಿಷಯದಲ್ಲಿ ಒಂದೊಂದು ಕಾಲದಲ್ಲಿ, ಒಂದೊಂದು ದೇಶದಲ್ಲಿ, ಒಂದೊಂದು ರೀತಿಯ ನೀತಿ, ರಿವಾಜುಗಳು ಇದ್ದಿರಬೇಕು. ಹಾಗಾಗಿ, ಒಂದು ಕಾಲಕ್ಕೆ ಸರಿಯಾಗಿ ಕಂಡದ್ದು ಇನ್ನೊಂದು ಕಾಲಕ್ಕೆ ಸಮವೆನಿಸಲಾರದು. ಒಂದು ಗುಂಪಿಗೆ ಸಮ ಕಂಡದ್ದು ಇನ್ನೊಂದು ಗುಂಪಿಗೂ ಸರಿ ಕಾಣಿಸಲಾರದು. ಜಾತಿಯ ಕಟ್ಟುಕಟ್ಟಲೆ ಅನ್ನುವುದೆಲ್ಲ ಅಂಥವೇ ಅಲ್ಲವೇ? ನನಗೆ ಈ ರಾಮಾಯಣದಂಥ ಕತೆಗಳಲ್ಲಿ ನಂಬಲು ಸಾಧ್ಯವಾಗದ ಒಂದು ಸಂಗತಿಯೆಂದರೆ ಅದು ಇದು..."

"ಯಾವುದು?"

"ದಶರಥರಾಯ ಪಟ್ಟವನ್ನು ಬಿಡುವಾಗ ಅವನಿಗೆ ಹತ್ತು ಸಾವಿರ ವರ್ಷವಾಯಿತು, ಎಂಬ ಲೆಕ್ಕಾಚಾರ. ದೇವರು ಹಿಂದಿನವರಿಗೆ ಅಷ್ಟೆಲ್ಲ ಆಯುಷ್ಯ ಕೊಟ್ಟು, ನಮಗೆ ನೂರು ವರ್ಷ ಪೂರ ಕೊಡದಿರುವುದು ಯಾತಕ್ಕೆ - ಎಂಬ ಸಂಗತಿ."

"ನಿನಗೆ ಅಷ್ಟು ಕೊಟ್ಟನೆಂದೇ ತಿಳಿ; ಬದುಕುತ್ತೀಯಾ? ಬದುಕಿ ಏನು ಮಾಡುವವನು ನೀನು? ಹೇಳು ಅದೇ ಕೆಲಸ - ಬಿತ್ತು ಬಿತ್ತಿಸುವುದು, ಕೊಯಿಲು ಕೊಯಿಸುವುದು, ಬೆಳೆದ ಬತ್ತ ತರುವುದು, ಅನ್ನ ಬೇಯಿಸಿ ತಿನ್ನುವುದು. ದಿನ ದಿನವೂ ಅದೇನೇ, ವರ್ಷ ವರ್ಷವೂ ಅದೇ. ನಾನು ನೋಡು - ಇಷ್ಟರವರೆಗೂ ಮಾಡಿದ್ದು ಅದೊಂದೇ; ನೀನು ಮಾಡಿದ್ದೂ ಅದೇ ಅನ್ನು. ಯಾಕೆ ನಮಗೆ ಅಂಥ ದೊಡ್ಡ ಆಯುಷ್ಯ? ಅದನ್ನು ತಕ್ಕೊಂಡು ನಾವು ಏನು ಮಾಡಬೇಕು? ಅವನ ಸೃಷ್ಟಿಯಲ್ಲಿ ಯಾವುದೇ ಪ್ರಾಣಿಗೂ ಕೊಡದಿರುವ ದೀರ್ಘ ಆಯುಷ್ಯ ನಮಗೆ ಯಾತಕ್ಕೆ ಬೇಕು? ಈ ಅಶ್ವತ್ಥದ ಮರಕ್ಕೂ ಅಷ್ಟು ಆಯುಷ್ಯವನ್ನು ಅವನು ಕೊಟ್ಟಿರಲಾರ."

"ದಶರಥನಿಗಾಗಿತ್ತಂತಲ್ಲ!"

"ಮರುಳು! ಅವನ ಸೊಸೆಗೆ ಎಂಟು ವರ್ಷ ಪ್ರಾಯವಾಗುವಾಗ ಮದುವೆಯಾಯಿತಂತೆ! ಸೀತೆ ಕಾಡಿಗೆ ಹೋಗದಿರುತ್ತಿದ್ದರೆ, ಹದಿನಾಲ್ಕು ವರ್ಷದಲ್ಲಿ ಅವಳಿಗೆ ಬಾಣಂತನವಾಗುತ್ತಿತ್ತೋ ಏನೋ. ಹಾಗೆಯೇ, ಅದೇ ಲೆಕ್ಕಾಚಾರದಲ್ಲಿ ಆ ದಶರಥರಾಯನ ಮೂರು ಮಂದಿ ಹೆಂಡಿರಿಗೂ ಮಕ್ಕಳು ಹುಟ್ಟುತ್ತಾ ಹೋಗಿದ್ದರೆ, ಭೂಮಿಯ ಮೇಲೆ ದಶರಥನೊಬ್ಬನ ಮಕ್ಕಳಿಗೇನೇ ಈ ನೆಲ ಸಾಕಾಗದೆ ಹೋಗಲೂ ಬಹುದು. ಮತ್ತೇನು ಕೊಡುವುದಾದರೂ ಕಷ್ಟ, ಆಯುಷ್ಯ ಕೊಡುವುದೊಂದು ಸುಲಭ ಎಂದು ಕಂಡಿರಬೇಕು, ಕೊಟ್ಟ - ಅದನ್ನು ಹಣೆಯ ಮೇಲೆ ಬರೆದವ. ಆ ಬರೆದವನ ಮನಸ್ಸಿನಲ್ಲಿರಬಹುದು - ತಾನು ಬರೆದ ಕತೆ; ಅಷ್ಟು ವರ್ಷಗಳ ಕಾಲ ಜನರು ಬದುಕಿಕೊಂಡಿರಲಿ ಅಂತ. ದಶರಥರಾಯನು ಸಹ ಅಷ್ಟು ಪ್ರಾಯವನ್ನು ಒಪ್ಪಿಕೊಂಡಿರಲಾರ. ಆ ಮಾತನ್ನು ಬಿಡು. ಹಾಗೆ ವರ್ಷಾನುಗಟ್ಟಲೆ ಯಾವುದೇ ಗಂಡು ಮತ್ತು ಹೆಣ್ಣು ಬದುಕುವುದಾಗಿದ್ದರೆ - ಮದುವೆಯನ್ನೇ ಮಾಡಿಕೊಳ್ಳುತ್ತಿತ್ತೋ ಇಲ್ಲವೋ! ಹಾಗೆ ಆ ಖುಷಿ ಇಲ್ಲದ್ದನ್ನು ಬರೆಯಲಿಕ್ಕೆ ಹೋಗಿಯೇ, ಇದ್ದ ಒಂದು ಚೂರು ಪಾರು ಸತ್ಯವನ್ನೂ ನಾವು ನಂಬುವುದು ಕಷ್ಟವಾಗುತ್ತದೆ."

"ಹಾಗಾದರೆ ನೀವು ರಾಮಾಯಣ, ಭಾರತ, ರಾಮ, ಕೃಷ್ಣ - ಇವನ್ನೆಲ್ಲ ನಂಬುವುದಿಲ್ಲವೇ?"

"ನಾನು ನಂಬುವುದು ಅದರಲ್ಲಿರುವ ನಾಲ್ಕು ಒಳ್ಳೆಯ ಮಾತನ್ನು. ರಾಮಕೃಷ್ಣರ ಹಾಗಿನ ಎಷ್ಟೆಲ್ಲ ದೇವರುಗಳನ್ನು ಹುಟ್ಟಿಸಿದರು, ಏನು ಕತೆ? ಜನರಿಗಿಂತ ದೇವರೇ ಹೆಚ್ಚಾಯಿತು - ಅನಿಸುತ್ತದೆ ನನಗೆ. ನಾನು ನಿತ್ಯ ಹೇಳುತ್ತಲಿಲ್ಲವೇ? ದೇವರಿಗೆ ನಿಜವಾದ ತ್ರಾಣವಿದ್ದರೆ, ಯಾವ ಅವತಾರದ ನಾಟಕವೂ ಬೇಡ ಅಂತ, ಕೂತಲ್ಲೇ ಕೆಲಸ ಮಾಡಲಿಕ್ಕೆ ಬಂದೀತು. ಇವೆಲ್ಲ ನಾನು ಹೇಳುವ ಹಾಗೆ, ಮಕ್ಕಳಿಗೆ ಗುಮ್ಮನನ್ನು ತೋರಿಸಿ ಹೆದರಿಸುವ ಪುರಾಣ. ಒಂದು ದಿನ ಆ ಮಕ್ಕಳು ಬೆಳೆದು ದೊಡ್ಡವರನ್ನು ಕೇಳುತ್ತವೆ: 'ಎಲ್ಲಿ ಗುಮ್ಮನನ್ನು ತೋರಿಸು; ಮಾತನಾಡಿಸುತ್ತೇನೆ ನಾನು' ಅನ್ನುತ್ತವೆ. ನಾವು ಅಲ್ಲಿಯ ತನಕ ಅಂದದ್ದು ಠಕ್ಕು ಎಂಬುದು ಅವಕ್ಕೂ ಗೊತ್ತಾಗುತ್ತದೆ."

ಆ ದಿವಸ ಅಜ್ಜಿಯೊಡನೆ ಹೀಗೆ ಮಾತುಕತೆಗಳನ್ನಾಡುತ್ತಾ ನಾನು ಎಷ್ಟೊಂದು ಸಂತೋಷಪಟ್ಟೆ ಎನ್ನುವುದಕ್ಕಿಲ್ಲ. ಅದನ್ನು ನನ್ನ ಸೀತೆ ಕಂಡರೆ ಏನಾದರೂ ಹೇಳಿಯಾಳು ಎಂಬ ಭಯವೂ ಆಯಿತು. ಅಜ್ಜಿಗೆ ತಲೆ ಕೆಟ್ಟ ಹಾಗೆ - ನನಗೂ ತಲೆ ಕೆಟ್ಟಿದೆ - ಎಂದು ಅವಳು ತಿಳಿದರೂ ತಿಳಿದಳೇ! ಆ ಸಂಶಯ ಬಂದು ಅವರನ್ನು ಕೇಳಿದೆ: "ಅಜ್ಜಮ್ಮ ನನಗೆ ನೀವು ಹೇಳುವುದರಲ್ಲಿ ಏನೋ ಇದೆ ಎಂದು ಕಾಣಿಸುತ್ತದೆ. ಆದರೆ, ಇಷ್ಟು ಮಾತನ್ನು ನನ್ನ ಸೀತೆಯ ಮುಂದೆ ಅಂದದ್ದಾದರೆ ಅವಳು ಚೂರು ನಂಬುವ ಜಾತಿಯಲ್ಲ."

ಅಜ್ಜಮ್ಮ ನಕ್ಕರು: "ಮಾಣಿ, ನಿನ್ನ ಸೀತೆಯ ಮನಸ್ಸಿನಲ್ಲಿರುವುದು ನನಗೆ ಗೊತ್ತಿಲ್ಲವೇ? ಅವಳು ನಮ್ಮ ಮನೆಯ ಹೊಸ್ತಿಲು ದಾಟುವ ಎಷ್ಟೆಷ್ಟೋ ದೊದಲು ನಾನು ಹುಟ್ಟಿದವಳು. ಆಚೀಚಿನ ಜನಗಳ ಹಾಗೆ ಅವಳೂ ಒಬ್ಬಳು. ಈ ಅಜ್ಜಿಗೆ ಒಂದಿಷ್ಟು ತಲೆ ದುರಸ್ತಿಯಿಲ್ಲ ಅಂತ ಊರವರು ಹೇಳುವುದನ್ನು ಅವಳು ಕೇಳಿರಲಿಕ್ಕೂ ಸಾಕು. ನಾನಾದರೂ 'ನನ್ನ ತಲೆ ತೀರ ಸಮ ಇದೆ' ಅಂತ ಕಂಡವರ ಮುಂದೆ ಹೇಳುತ್ತ ಹೋಗಬೇಕೇ? ಆ ಮಾತು ಹೇಳಿದ ಕ್ಷಣಕ್ಕೆ ಈ ಅಜ್ಜಿಗೆ ಬುದ್ಧಿ ಸಮವಿಲ್ಲ - ಎಂತಲೇ ತಿಳಿಯುತ್ತಾರೆ. ಏನು ಮಾಡಬೇಕು ಅನ್ನುತ್ತೀಯ? ಲೋಕದ ಕಣ್ಣಿಗೆ ಒಪ್ಪಿದ್ದು ನಮ್ಮ ಕಣ್ಣಿಗೆ ಒಪ್ಪಲಿಲ್ಲ ಎಂದ ಕ್ಷಣಕ್ಕೆ, ಒಬ್ಬನಿಗೆ ತಲೆ ಸರಿಯಿಲ್ಲ ಅನ್ನುತ್ತಾರೆ. ಏನು ಬಾಧಕ ಅದರಿಂದ? ತಲೆ ಸರಿಯಿದ್ದದ್ದು ಯಾವುದು, ಇಲ್ಲದ್ದು ಯಾವುದು - ಎಂತ ಯಾರು ಅಳೆಯುವವರು? ಆದರೂ, ಒಂದು ನೋಡು, ಸೀತೆ ನನ್ನ ಹತ್ತಿರ ಯಾವ ಚರ್ಚೆಗೂ ಬರುವುದಿಲ್ಲ. ಒಂದು ಅನಾದರದ ಮಾತನ್ನು ಆಡಿಲ್ಲ. ಕೆಟ್ಟ ಮಾತನ್ನಂತು ಎಂದೂ ಆಡಿದವಳಲ್ಲ. ನಾನು ತಾಜಾ ಮರುಳಿ ಅಂತ ಅವಳು ತಿಳಿದುಕೊಂಡಿರಲಿ; ಹಾಗೆ ತಿಳಿದುಕೊಂಡಿದ್ದರೂ 'ನಿಮಗೇನು ಗೊತ್ತು? ಹಾಕಿದ್ದನ್ನು ಇಷ್ಟು ತಿಂದುಕೊಂಡು ಬಿದ್ದಿರಿ' ಎಂದವಳಲ್ಲ. ದೊಡ್ಡ ಮನಸ್ಸು ಅವಳದ್ದು. ನನಗೆ ಮಾತುಕತೆ ಸ್ವಲ್ಪ ಹೆಚ್ಚೇ - ಎಂದು ಅವಳಿಗೆ ತೋರಬಹುದು. ಹತ್ತು ವರ್ಷಗಳ ಕಾಲ, ನನ್ನ ಅಪ್ಪ ಅಮ್ಮ ಹೆಸರಿಟ್ಟಿದ್ದಕ್ಕೆ ಸಮನಾಗಿ ಬಾಯಿ ಮುಚ್ಚಿಕೊಂಡು ಮೂಕಾಂಬಿಕೆಯ ಹಾಗೆಯೇ

ನಾನು ಇದ್ದವಳೇ, ಅಪ್ಪ ಅಮ್ಮನ ದಾಕ್ಷಿಣ್ಯಕ್ಕೆ. ಅವರಿಬ್ಬರೂ ಕಣ್ಣು ಮುಚ್ಚಿದ ಮೇಲೆ 'ಯಾರ ಹಂಗು ನನಗೇನು' ಎಂದು ಕಾಣಿಸತೊಡಗಿತು. ಆಗ ಬಾಯಿಯನ್ನು ತೆರೆಯಲಿಕ್ಕೆ ಶುರುಮಾಡಿದೆ. ಬಾಯಿ ಮುಚ್ಚಿಕೊಂಡಿದ್ದಾಗಲೂ ನನ್ನನ್ನು ಬೈದರು. ತೆರೆದ ಮೇಲಂತೂ ಕೇಳುವುದೇ ಬೇಡ. ನಾನಾಗಿ ಯಾರು ಯಾರನ್ನಾದರೂ ಎಳೆದು, ಹಿಡಿದು ಮಾತನಾಡಿಸುತ್ತೇನೆಯೇ?"

"ಒಂದೋ ಎರಡೋ ಸಲ ಜನ್ನನಿಗೆ, ಅನಂತರಾಯನಿಗೆ ನೀವು ಎದುರೆದುರಿಗೇ..."

"ಹೌದು, ಕಂಡ ಕೂಡಲೇ ಅವರ ಮುಖಕ್ಕೆ ಏನೋ ಹೇಳಿದ್ದೆ, ನಿಜ. ಅವರ ಮನಸ್ಸಿನ ಒಳಗೆ ಏನಿತ್ತು - ಎಂಬುದು ನನಗೆ ಗೊತ್ತಾಯಿತು. ಹೊರಗಿನ ನಾಟಕ ಬೇರೆ; ಒಳಗಿನ ಕತೆ ಬೇರೆ - ಎಂಬುದು ತಿಳಿಯಿತು. ನನ್ನ ಹತ್ತಿರ ನಾಟಕ ಬೇಡ - ಅಂತ ತೋರಿಸುವುದಕ್ಕೆ ಹೇಳಿದೆ. ಅಂಥವರಿಗೆ ಒಬ್ಬರಾದರೂ ಹೇಳುವವರು ಬೇಕು ಅಂತ ಕಾಣಿಸಿತು."

ಅಜ್ಜಿಯ ಮಾತುಗಳಿಂದಲೇ ಸಾಕಷ್ಟು ಧೈರ್ಯವನ್ನು ಕಟ್ಟಿಕೊಂಡು, ಹೊತ್ತು ಮುಳುಗಿದ ಮೇಲೆ ಅವರನ್ನು ಜೊತೆಗೆ ಕರೆದುಕೊಂಡು, ಮನೆಗೆ ಹೋದೆ. ಹೋದವನು, ಕಿಟ್ಟಣ್ಣನಿಗೆ ಒಂದೆರಡು ಕತೆಗಳನ್ನು ಹೇಳಿದೆ. ಕತೆ ಹೇಳುವಾಗಲೇ, ಯಾಕೋ, ಗಂಟಲನ್ನು ಹಿಸುಕಿದ ಹಾಗಾಯಿತು. "ಒಂದು ಊರಿನಲ್ಲಿ ಒಬ್ಬ ಬ್ರಹ್ಮರಾಕ್ಷಸನಿದ್ದ" ಎಂದು ಕತೆಯನ್ನು ತೊಡಗಿದೆ. "ಹೇಗಿದ್ದ ಅವನು?" ಎಂದು ಕೇಳಿದ. ಮುಂದಿನ ಎಣಿಕೆಯಿಲ್ಲದ ನಾನು ಕಾಣದ ಬ್ರಹ್ಮರಾಕ್ಷಸನನ್ನು ಬಣ್ಣಿಸಬೇಕಾಯಿತು. ಅವನ ಆಕಾರ, ಆರ್ಭಟೆ, ಲೊಟ್ಟೆ, ಲಸ್ಕುಗಳನ್ನು ಕೂಡಿಸಿ, ರಂಗು ಮಾಡಿ, ಏನೇನೋ ಹೇಳಿದೆ. ಆಗ ಕೇಳಿದ: "ನಿನಗೆ ಅದನ್ನು ಕಂಡು ಹೆದರಿಕೆಯಾಗಲಿಲ್ಲವೇ?" ಎಂತ. ಅವನ ಎರಡನೆಯ ಪ್ರಶ್ನೆ "ಆ ಬ್ರಹ್ಮರಾಕ್ಷಸ ಯಾವ ಮರದಲ್ಲಿರುವುದು?" ಎಂದು.

"ಕಪಾಲೇಶ್ವರನ ಗುಡಿಯ ಹತ್ತಿರದ ಒಂದು ಗೋಳಿ ಮರದಲ್ಲಿ" ಎಂದೆ.

"ನನಗೆ ತೋರಿಸುತ್ತೀಯಾ?" ಎಂದು ಕೇಳಿದ.

"ನಿನಗೆ ಕಂಡರೆ ಹೆದರಿಕೆಯಾದೀತು" ಎಂದೆ.

"ನಿನಗೆ ಆಗದಿದ್ದರೆ ನನಗೂ ಆಗುವುದಿಲ್ಲ" ಎಂದ. ಅಷ್ಟಕ್ಕೂ ಬಿಡದೆ "ಯಾವಾಗ ತೋರಿಸುತ್ತೀ?" ಎಂದ.

"ನಾಳೆಗೆ."

"ಅಷ್ಟು ಅವಸರ ಯಾಕೆ?"

"ನೀನು ಹೇಳಿದ್ದೀ ಇದೇ ಕತೆಯನ್ನು. ಮತ್ತೆ ಅವನಿಗೂ, ಆ ಬ್ರಾಹ್ಮಣ ಹುಡುಗನಿಗೂ ರಾಜಿಯಾಗಿ ಅವನಿಗೆ ಮಂತ್ರಿಸಿದ ಮೂರು ಕಲ್ಲುಗಳನ್ನು ಕೊಟ್ಟ ಅಂತ. ಬೇಕಾದಂಥ ತಿಂಡಿ ಕೊಡುವ ಕಲ್ಲು, ಬೇಕಾದಂಥ ವಸ್ತು ಕೊಡುವ ಕಲ್ಲು, ಬೇಕಾದಲ್ಲಿಗೆ ಕರೆದುಕೊಂಡು ಹೋಗುವ ಕಲ್ಲು. ನಾನು ಸಹ ಆ ಬ್ರಹ್ಮರಾಕ್ಷಸನ ಹತ್ತಿರಕ್ಕೆ ಹೋಗಿ, ಹಟ ಹಿಡಿದು, ಆ ಮೂರು ಕಲ್ಲುಗಳನ್ನು ಬೇಡಿಕೊಂಡು ಬಂದು..."

"ಬೇಡಿಕೊಂಡು ಬಂದು..."

"ಮತ್ತೋ! ಯಾರು ಯಾರಿಗೂ ನಾನು ಹೆದರುವ ಹಾಗಿಲ್ಲ. ಆಮೇಲೆ ನಾನು ಅಮ್ಮನನ್ನು ತಿಂಡಿಗೂ ಕಾಡುವುದಿಲ್ಲ. ಒಂದು ಕಲ್ಲು ತಿಂಡಿ ಕೊಡುತ್ತದೆ; ಇನ್ನೊಂದು ಕಲ್ಲು ಕಾಣದ ಹಾಗೆ ಮಾಡುತ್ತದೆ. ಮೂರನೆಯ ಕಲ್ಲನ್ನು ಹಿಡಿದುಕೊಂಡು ಹೊರಟೆನೆಂದರೆ ಹದಿನಾಲ್ಕು ಲೋಕವನ್ನು ಸುತ್ತಿ, ಸುತ್ತಿ, ಒಂದು ಸಾವಿರ ವರ್ಷವಾದರೂ ಮನೆಗೆ ಬರುವುದಿಲ್ಲ."

"ಆಮೇಲಾದರೂ ಬರುತ್ತೀಯಲ್ಲ? ನೀನು ಬರುವಾಗ ನಾನೂ, ನಿನ್ನಮ್ಮನೂ ಹಳೆಯ ಜಬ್ಬುಗಳಾಗಿರುತ್ತೇವೆ. ಯಾತಕ್ಕೂ ಬೇಡದ ಜಬ್ಬುಗಳು. ನಿನಗೆ ನಮ್ಮ ಗುರುತೇ ಸಿಗುವುದಿಲ್ಲ."

"ಹಾಗಿದ್ದರೆ ಅಷ್ಟು ತಡ ಮಾಡುವುದಿಲ್ಲ; ನಾಳೆಗೇ ಬರುತ್ತೇನೆ; ನಾನು ಮನೆ ಬಿಟ್ಟು ಹೋದರೆ ನಿಮಗೂ ಅಮ್ಮನಿಗೂ ತುಂಬ ಬೇಜಾರಾದೀತು ಅಲ್ಲವೇ?"

ಸೀತೆಯ ಕಿವಿಗೆ ಬಿದ್ದಿರಬೇಕು ನನ್ನ ಆ ಕತೆ. ಅವಳು ಗದರಿಸಿದಳು; "ಮಕ್ಕಳಿಗೆ ಅಂಥೆಲ್ಲ ಕತೆಗಳನ್ನು ಯಾಕೆ ಹೇಳುವುದು? ಸುಳ್ಳು, ಸುಳ್ಳು ಕತೆಗಳನ್ನು ಅವು ನಿಜವೆಂದೇ ತಿಳಿಯುತ್ತವೆ."

ಕಿಟ್ಟಣ್ಣ ಅದಕ್ಕೆ "ಇದು ಸುಳ್ಳು, ಸುಳ್ಳು ಕತೆಯೇನು? ಹಾಗಾದರೆ ನನಗೆ ಅಂಥದು ಬೇಡವೇ ಬೇಡ" ಎಂದ.

"ಹೌದು ಮಗು, ಅದು ಬರಿಯ ಸುಳ್ಳು ಕತೆ. ಮೂರು ಕಲ್ಲಲ್ಲ; ಮತ್ತೇನಲ್ಲವೇ! ಮೂರು ಕಲ್ಲು ಒಲೆಗುಪ್ಪೆ ಮಾಡಲಿಕ್ಕೆ."

ನನಗಾಗ - ತೀರ ಸೋತ ಹಾಗೆಯೇ ಅನಿಸಿತು. ನನಗೆ ಬುದ್ಧಿ ಹೇಳಲು ಬಂದ ಅವಳಿಗೂ ಬುದ್ಧಿಯನ್ನು ಕಲಿಸುವ ಯೋಚನೆಯಿಂದ "ನಿನ್ನ ಹತ್ತು ಸಾವಿರ ವರ್ಷ ಪ್ರಾಯದ ದಶರಥರಾಯರು ಮಾತ್ರ ನಿಜವಂತೆ; ನನ್ನ ಮೂರು ಕಲ್ಲಿನ ಬ್ರಹ್ಮರಾಕ್ಷಸ ಸುಳ್ಳು ಅಲ್ಲವೇ?" ಎಂದೆ.

"ಆಹಾ ನಿಮ್ಮ ಬುದ್ಧಿಯೇ! ಇವತ್ತು ಕಟ್ಟೆಯ ಮೇಲೆ ಕೂತು ಅಷ್ಟು ಹೊತ್ತು ಆಡಿದ ಪಟ್ಟಾಂಗ ಅಂಥದ್ದೇ ಇರಬೇಕು" ಎಂದಳು.

ನನಗಾಗ ನಗು ಬಂದಿತು; "ಇನ್ನು ಮುಂದಕ್ಕೆ ಬಯ್ಯಬೇಡ; ಅಜ್ಜಿಗೆ ತಲೆ ಸಮವಿಲ್ಲ ಅಂತ. ಅವರಿಗೆಲ್ಲವೂ ಗೊತ್ತಾಗುತ್ತದೆ, ನಿನ್ನ ಮನಸ್ಸಿನಲ್ಲಿರುವುದು. ಆದರೆ, ಅವರು ನಿನ್ನ ವಿಷಯದಲ್ಲಿ ಹೇಳಿದ್ದೇನು ಗೊತ್ತೇ - ಬಾಯಿಬಿಟ್ಟು ಒಂದಿಷ್ಟೂ ವಂಚನೆಯಿಲ್ಲದೆ ಹೊಗಳಿದರು; 'ನನ್ನ ಸೀತೆ ಅಂದರೆ ಚಿನ್ನ, ಬಂಗಾರ, ಮುತ್ತು, ಹವಳ' ಅಂತ ಹೊಗಳಿದ್ದೇ ಹೊಗಳಿದ್ದು." ಎಂದು ಕತೆಯನ್ನು ನಿಲ್ಲಿಸಿ, ಅಜ್ಜಿ ಹೇಳಿದ ಮಾತುಗಳನ್ನು ಅವಳಿಗೆ ಒಪ್ಪಿಸಿದೆ. ಅವಳ ಮುಖ ಸ್ವಲ್ಪ ಸಪ್ಪಗಾಯಿತು; "ಏನು ಮಾಡಲಿ ನಾನು? ಅವರು ಏನೇನೋ ಅನ್ನುತ್ತಾರೆ. ನನಗೆ ನಂಬುವುದು ಕಷ್ಟ. ನಾನು ನಂಬಿದ್ದೊಂದು; ಅವರು ಹೇಳುವುದೊಂದು. ಅವರ ತಲೆಗೆ ಏನೋ ಆಗಿದೆ - ಅಂತ ಯೋಚನೆ ಬರುವುದು ನಿಜ. ಆದರೆ, ಅವರು ಅದೊಂದನ್ನೂ ಮನಸ್ಸಿಗೆ ಹಾಕಿಕೊಳ್ಳದೆ, ನನ್ನನ್ನು ನಡೆಯಿಸಿಕೊಂಡು ಹೋಗುವ ರೀತಿ ನೋಡಿದರೆ, ಈ ಮನೆಗೆ ಅವರು ಒಬ್ಬರು ದೇವರು ಅಂತಲೂ ಕಾಣಿಸುತ್ತದೆ ಒಮ್ಮೊಮ್ಮೆ" ಎಂದಳು ಸೀತೆ.

"ಮನೆ ಮನೆಗೆ ನೂರಾರು ದೇವರು ಬೇಡ - ಅಂತ ಹೇಳುವುದು ನಮ್ಮ ಅಜ್ಜಿ. ಲೋಕಕ್ಕೆ ಒಬ್ಬರೇ ಒಬ್ಬರು ದೇವರಿದ್ದರೆ ಧಾರಾಳ ಸಾಕಂತೆ."

"ದೇವರು ಎಂಬುದು ಆ ಒಬ್ಬನನ್ನೇ. ನಾವ್ಯಾರೂ ದೇವರನ್ನು ಕಂಡವರಲ್ಲ. ಕಂಡವರು ಯಾರೆಂದು ನನಗೂ ಗೊತ್ತಿಲ್ಲ. ಒಳ್ಳೆಯದನ್ನು ಕಂಡಾಗಲೆಲ್ಲ ಅದೇ ದೇವರು ಅನ್ನುವುದಪ್ಪ; ಅದರಲ್ಲಿ ತಪ್ಪಿಲ್ಲವಲ್ಲ."

"ಎಲ್ಲವೂ ಅವನೇ ಎಂದಾದ ಮೇಲೆ, ಒಳ್ಳೆಯದೂ ಅವನೇ, ಕೆಟ್ಟದ್ದೂ ಅವನೇ ಎನ್ನುವುದು ಅಜ್ಜಿಯ ಮಾತು. ಅದನ್ನು ತಿಳಿದುಕೊಳ್ಳುವುದು ಕಷ್ಟ. ಹಾಗೆ ಮಾಡುವುದಂತು ಮತ್ತೂ ಕಷ್ಟ. ಅವರ ತ್ರಾಣ, ದಿಟ್ಟತನ ನಮಗೆಲ್ಲಿ ಬಂದೀತು, ಹೇಳು."

ಅಂತು, ಸೀತೆಯೊಡನೆ ನಡೆಯಿಸಿದ ಅಂದಿನ ಸಂಭಾಷಣೆಯಿಂದಾಗಿ, ಮುಂದೆ ಅಜ್ಜಮ್ಮನೊಡನೆ ಹರಟೆಯಲ್ಲಿ ಹೊತ್ತು ಕಳೆದರೆ ನನ್ನ ವಿಷಯದಲ್ಲಿ ಅವಳಿಗೆ ಇನ್ನು ಮುಂದಕ್ಕೆ ಅನುಮಾನ ಬರಲಾರದು - ಎನಿಸಿತು. ಸೀತೆಗೆ ಮಾತ್ರ ಆ ವಿಷಯವನ್ನು ಮುಂದುವರಿಸುವುದು ಬೇಡ ಎನಿಸಿತೋ ಏನೋ, ಅವಳು ಅಡ್ಡ ಪ್ರಸ್ತಾಪವೊಂದನ್ನು ತೆಗೆಯುತ್ತ "ನಿಮ್ಮ ದೋಸ್ತಿ ಜನಾರ್ದನನ ಕತೆಯೇನಾಯಿತಂತೆ? ಅವನು ಮನೆಗೇನೂ ಕಾಗದ ಬರೆದಿಲ್ಲವಂತೆ. ಅಪ್ಪ, ಅಮ್ಮನ ನೆನಪನ್ನು ಅಷ್ಟು ಸುಲಭದಲ್ಲಿ ಹೇಗೆ ಮರೆಯುತ್ತಾರಪ್ಪ, ಇವರು?" ಎಂದಳು.

"ಕಾಗದವೂ ಇಲ್ಲ, ಮಣ್ಣೂ ಇಲ್ಲ! ಬಂದೇ ಬರುತ್ತಾನೆ - ಒಂದು ದಿವಸ. ಮೈಸೂರಿನಲ್ಲಿ ಚಾಕರಿ. ಮುಂದಿನ ಬೇಸಿಗೆಯ ರಜೆಗೆ ಬಂದಾನು."

"ಮದುವೆ ಗಿದುವೆಯ ಯೋಚನೆಯಿಲ್ಲ ಅಂತ ಕಾಣಿಸುತ್ತದೆ."

"ಅವನ ಬುದ್ಧಿ ಅವನಿಗೇ ಗೊತ್ತು. ಅವನು ಏನೇ ಮಾಡಿಕೊಳ್ಳಲಿ; ಮದುವೆ ಮಾಡಿಕೊಳ್ಳದಿದ್ದರೇ ವಾಸಿ. ಮಾಡಿಕೊಂಡರೆ ಮಾಡಿಕೊಂಡವಳ ಗತಿಯೇನಾಗುತ್ತದೋ, ಯಾರು ಬಲ್ಲರು?"

"ಅದು ಅಷ್ಟೇ ಅನ್ನಿ. ನೀವು ಇನ್ನು ಊಟಕ್ಕೆ ಹೊರಡಿ. ಅನ್ನ ತಣಿಯುತ್ತದೆ" ಎಂದು ನುಡಿದು, ಅವಳು ಒಳಕ್ಕೆ ಹೋದಳು. ಕಿಟ್ಟಣ್ಣ ತಾನು ಊಟ ಮಾಡುವುದಿಲ್ಲ ಎಂದ. "ಈ ಅಮ್ಮ ಯಾಕೆ ಬಂದಳೋ, ಲಾಯಕು ಒಂದು ಕತೆ ಕೆಡಿಸಿ, ನಡುವೆ ಬಾಯಿ ಹಾಕಿ, ಹಾಳು ಮಾಡಿದಳು" ಎಂಬ ಮಾತು ಅವನ ಬಾಯಿಯಿಂದ ಬಂದಿತು.

"ನಿನಗೆ ನಾಳೆ ಇದಕ್ಕಿಂತಲೂ ಚಂದವಾದ ಕತೆಯನ್ನು ಹೇಳುತ್ತೇನೆ. ಕತೆಗೇನು ಬರಗಾಲ?"

"ಕತೆಯ ಹಾಗೆ ನಿಜಕ್ಕೂ ಇರುವುದಿಲ್ಲ ಅಲ್ಲವೇ?"

"ಕತೆ ಅನ್ನುವುದೇ ಅದಕ್ಕೆ. ಕತೆ, ಕತೆಯೇ."

ಕಿಟ್ಟಣ್ಣ "ಕತೆ ಕತೆಯೇ!" ಎಂದು ಕುಣಿಯುತ್ತ ನನ್ನ ಹಿಂದೆಯೇ ಊಟಕ್ಕೆ ಹೊರಟ.

ಊಟ ಮುಗಿಯಿತು. ನನ್ನ ಬುದ್ಧಿ ನನ್ನ ಸ್ವಾಧೀನವೇ ಇತ್ತು. ಓಟೆಹುಳಿ ಸಾರು, ಮಾವಿನ ಹಣ್ಣಿನ ಸಾಸಿವೆ ಮಾಡಿರಲಿಲ್ಲವಾದುದರಿಂದಲೋ ಏನೋ, ಬುದ್ಧಿ ಸ್ವಾಧೀನ ಇರಿಸಿಕೊಂಡೇ ಊಟ ಮಾಡಿದೆ. ಚಾವಡಿಗೆ ಬಂದು, ಎಲೆಯಡಿಕೆ ತಿಂದು ಚಾಪೆಯನ್ನು ಬಿಡಿಸಿ ಮಲಗಿಕೊಂಡೆ. ಸುಖದ ರಾತ್ರಿ ಕಳೆದು, ಬೆಳಗಾಯಿತು; ಹೊತ್ತು ಮೂಡಿತು. ಮುಖ ತೊಳೆದು, ಬಾವಿಕಟ್ಟೆಯಲ್ಲಿ ಮಿಂದು, ದೇವರ ಕೋಣೆಗೆ ಹೋಗಿ, ಅವನ ನಾಮಾವಳಿ ಹೇಳಿ, ಘಂಟೆ ಬಾರಿಸಿ ಈಚೆಗೆ ಬಂದೆ. ಚಾವಡಿಯಲ್ಲಿ ನಮ್ಮ ಅಜ್ಜಿ ನಿಂತಿದ್ದರು. 'ಮಾಣಿ' ಎಂದು ಕರೆದರು; ಸಮೀಪಕ್ಕೆ ಹೋದೆ.

"ಮಗು, ಯಾಕೋ ನನ್ನ ಮನಸ್ಸಿಗೆ ಇವತ್ತು ಒಂದು ಥರ ಕಾಣುತ್ತದೆ. ಒಂದು ಕ್ಷಣದೊಳಗೆ ನಾನು ಮಿಂದು ಬರುತ್ತೇನೆ. ತಿಪ್ಪಕ್ಕನನ್ನು ಕಂಡು ಬರಬೇಕು - ಅಂತ ಯಾಕೋ ಅನಿಸುತ್ತದೆ, ನನ್ನ ಮನಸ್ಸಿಗೆ. ಕರೆದುಕೊಂಡು ಹೋಗುತ್ತೀಯ" ಎಂದಂದು, ಅವರು ಸ್ನಾನಕ್ಕೆ ಹೋದರು. ನಾನು ದಿಗ್ಭ್ರಾಂತನಾದೆ. ಮೂವತ್ತು ವರ್ಷಗಳ ಕಾಲ ಅವಳ ಹತ್ತಿರ ಸುಳಿದಿರಲೂ ಇಲ್ಲ. ದೊನ್ನೆ ಮೊನ್ನೆಯಷ್ಟೆ ಕಂಡು ಬಂದು, ಮೂರು ತಿಂಗಳು ಆಯಿತೋ ಏನೋ. ಯಾವ ಆಪ್ತರ ಬಳಿಗೂ, ನೆಂಟರಿಷ್ಟರ ಬಳಿಗೂ ಅವರು 'ನನ್ನನ್ನು

ಕರೆದುಕೊಂಡು ಹೋಗು' ಎಂದು ಈ ತನಕವೂ ಹೇಳಿದವರಲ್ಲ. ಇವತ್ತು ಯಾಕೆ ಹೇಳುತ್ತಿದ್ದಾರೆ ಹೀಗೆ? ಅವರಿಗೆ ಏನು ಕಾಣಿಸಿತು! ಅವಳಿಗೆ ಪ್ರಾಯ ಸಂದಿತು; ಹೆಚ್ಚು ದಿವಸ ಬದುಕಿ ಉಳಿಯಲಾರಳು - ಅನಿಸಿತೇ - ಎಂದು ತೋಚಿ, ಸೀತೆಯ ಬಳಿಗೆ ಹೋಗಿ, ನಡೆದ ಸಂಗತಿಯನ್ನು ಹೇಳಿದೆ. "ಅವರ ಮನಸ್ಸು ಅವರಿಗೇ ಗೊತ್ತು; ಕರೆದುಕೊಂಡು ಹೋಗಿ. ಅವರ ಚಾಕರಿ ಮಾಡುವುದಕ್ಕಲ್ಲವೇ ನಾವಿರುವುದು? ಎಷ್ಟು ಕಾಲ ಈ ಸೇವೆಯ ಭಾಗ್ಯ ನಮಗೆ ಉಳಿಯುತ್ತದೋ! ಇದ್ದಷ್ಟು ಕಾಲ ಚಂದವಾಗಿ ಮಾಡುವುದು" ಎಂದಳು.

ಅಜ್ಜಿ ಸ್ನಾನ ಮಾಡಿ ಬಂದರು; ಸೀತೆ ಅವರ ಬಳಿಗೆ ಹೋಗಿ "ಒಂದಿಷ್ಟು ಫಲಾಹಾರ ಮಾಡಿಕೊಂಡು ಹೋಗಿ, ಸ್ವಲ್ಪ ನಡೆಯಲಿಕ್ಕೆ ಉಂಟಲ್ಲ. ಬರಿ ಹೊಟ್ಟೆಯಲ್ಲಿ ಹೋಗಬೇಡಿ" ಎಂದು ವಿನಂತಿ ಮಾಡಿದಳು.

"ನಿನ್ನ ಗಂಡನಿಗೆ ಬೇಕಾದರೆ, ಏನಾದರೂ ಕೊಡು. ನಾನು ಒಂದನ್ನೂ ಮುಟ್ಟುವುದಿಲ್ಲ. ನನ್ನ ತಿಪ್ಪಿಯನ್ನು ಕಾಣುವ ತನಕ ನನಗೆ ಯಾವುದೂ ಬೇಡ" ಎಂದರು. ಮರು ಮಾತಾಡಲಿಲ್ಲ. ನಾನು ವಾಡಿಕೆಯಂತೆ ಒಂದಿಷ್ಟು ನೆನೆಯಿಸಿದ ಅವಲಕ್ಕಿಯನ್ನು ಬೆಲ್ಲದೊಡನೆ ಕಲಸಿ, ತಿಂದು, ಅವರನ್ನು ಕರೆದುಕೊಂಡು ಹೊರಟೆ. ಮೆಲ್ಲಗೆ ಹೆಜ್ಜೆ ಹಾಕುತ್ತ ಕಾಡಿನ ದಾರಿಯನ್ನು ಹಿಡಿದು ಹಿಂಡುಗಾನ ಅಮ್ಮನವರ ಗುಡಿಯ ತನಕವೂ ಬಂದೆವು. ಅವರು ಗುಡಿಯ ಮುಂದಕ್ಕೆ ನಿಲ್ಲುವ ಅಪೇಕ್ಷೆಯನ್ನು ತೋರಿಸಲಿಲ್ಲ. ಅಲ್ಲಿಂದ ಸಾಗಿ, ಮಂಜುನಾಥನ ಮನೆಯ ಅಂಗಳವನ್ನಿಳಿದು, ಬಯಲಿನ ಹಾದಿಯಾಗಿ ತಿಪ್ಪಜ್ಜಿಯ ಮನೆಯನ್ನು ಹೋಗಿ ಸೇರುವಾಗ ಹೊತ್ತು ಸಾಕಷ್ಟಾಗಿತ್ತು. ಮನೆಯ ಚಾವಡಿಯಲ್ಲಿ ಯಾರೋ ಮಲಗಿದಂತಿತ್ತು. ಅವರ ಸೊಸೆ ತನ್ನೆರಡೂ ಮಕ್ಕಳನ್ನು ಹತ್ತಿರಕ್ಕೆ ಕುಳ್ಳಿರಿಸಿಕೊಂಡು, ಒಂದು ಕಂಬಕ್ಕೊರಗಿ ಧ್ಯಾನ ಮಾಡುತ್ತಿದ್ದಳು.

ಅಜ್ಜಿಯ ಬಾಯಿಂದ "ಬೆಳಗ್ಗಿನ ಜಾವದಲ್ಲಿ ನಾನು ಇದನ್ನೇ ಕಂಡದ್ದು" ಎಂಬ ಮಾತು ಹೊರಟಿತು. ಆಗ ನನ್ನ ಮನಸ್ಸಿಗೆ ದಿಗಿಲಾಯಿತು. ಅಷ್ಟಕ್ಕೆ ಆ ಹೆಂಗಸು ಯಾರೂ ಇಲ್ಲದ ತಬ್ಬಲಿಯಂತೆ ನಮ್ಮ ಬಳಿಗೆ ಓಡಿ ಬಂದು "ದೇವರೇ ನಿಮ್ಮನ್ನು ಕಳುಹಿಸಿಕೊಟ್ಟಿದ್ದು! ಎರಡು ದಿನವಾಯಿತು - ಅನ್ನ ನೀರು ಬಿಟ್ಟು. ಅವಳ ಋಣ ಬಹಳ ಹೊತ್ತು ಉಳಿಯುವ ರೀತಿ ಕಾಣೆ. ನನಗೋ! ಈ ಸಣ್ಣ ಮಕ್ಕಳನ್ನು ಬಿಟ್ಟು, ಆಚೀಚೆ ಕದಲುವ ಹಾಗಿಲ್ಲ. ಯಜಮಾನರು ಬೇಡ ಎಂದರೂ, ಕೇಳದೆಯೇ ಹನ್ನಾರಿಗೆ ಹೊರಟು ಹೋಗಿದ್ದಾರೆ. ಅವರು ಬರುವ ತನಕ ಇವರು ಉಳಿದರಾಯಿತು; ನಡುವೆ ಏನಾದರೂ ಆದರೆ..." ಎಂದು ದುಃಖಿಸಿದಳು.

ಅಜ್ಜಿ ಆ ಬಡವೆಯು ಮುಖವನ್ನು ಮೆಲ್ಲನೆ ಸವರುತ್ತ "ನೀನೇನೂ ಗಾಬರಿಯಾಗಬೇಡ. ಏನು ಆಗಬೇಕಾದ್ದಿದೆಯೋ ಅದನ್ನು ಮಾಡುವ ಅಂತೆ. ಈ ಮನೆಯ ನೀರಿನ ಋಣವಿರುವಷ್ಟು ದಿನ ಉಳಿದಾಳು; ಅದು ಮುಗಿದರೆ ಇಲ್ಲ. ತಡೆಯುವವರು ಯಾರು? ನಾನೋ, ನೀನೋ?" ಎಂದರು.

"ನಿನ್ನೆಯಿಂದ ಮಾತುಕತೆ ಯಾವುದೂ ಇಲ್ಲ. ಒಂದೊಂದು ಸಾರಿ ಕಣ್ಣು ತೆರೆಯುತ್ತಾರೆ; ಕಣ್ಣೇನು? ಬರಿಯ ರೆಪ್ಪೆ ಕಾಣಿಸುತ್ತದೆ."

"ಅವಳ ಕಿವಿಯಲ್ಲಿ ಹೇಳಿದರೆ ಏನಾದರೂ ಗೊತ್ತಾಗುತ್ತದೆಯೇ! ಕೈಕಾಲು ಅಲ್ಲಾಡಿಸುತ್ತಾಳೆಯೇ! ಬೇಡ, ಸುಮ್ಮಗಿರು. ಕಂಗಾಲಾದ ನಿನ್ನನ್ನು ಏನು ಕೇಳುವುದು? ಧೈರ್ಯಗೆಡಬೇಡ" ಎಂದು ಹೇಳಿ, ಆಕೆ ತಂದುಕೊಟ್ಟ ನೀರಲ್ಲಿ ಕಾಲನ್ನು ತೊಳೆದು, ಚಾವಡಿಯನ್ನೇರಿದರು. ಚಾವಡಿಯ ಒಂದು ತುದಿಯಲ್ಲಿ ಚಾಪೆಯ ಮೇಲೆ ಮಲಗಿಸಿದ್ದ ತಿಪ್ಪಕ್ಕನ ಬಳಿಗೆ ಹೋಗಿ ಕುಳಿತರು. ತಕ್ಷಣ ಅವರ ಎರಡೂ ಕೈಗಳನ್ನು ತಡವಿಕೊಂಡರು. ಮೈ ಉಷ್ಣವಾಗಿಯೇ ಇದ್ದಿರಬೇಕು. ನಾನು ಭೂತ ಬಡಿದವನ ಹಾಗೆ ಅದನ್ನು ಕಾಣುತ್ತ ಸಮೀಪ ನಿಂತುಕೊಂಡೆ. ಅವರು ಆಕೆಯ ಕಿವಿಯಲ್ಲಿ "ನಾನು ಬಂದಿದ್ದೇನೆ - ಮೂಕಿ. ಸ್ವರ ಗೊತ್ತಾಗುತ್ತದೆಯೋ! 'ನಾನೂ' ಅಂದೆ. ನಿನ್ನ ಮೂಕಿ ಬಂದಿದ್ದಾಳೆ. ಏನು ಕಾಣಿಸುತ್ತದೆ ನಿನಗೆ" ಎಂದು ಕೇಳಿದರು.

ಆಕೆಯ ತುಟಿಗಳು ಅಲುಗಾಡಿದಾಗ, ನೋಡುತ್ತಿದ್ದ ನಮಗೆ ಉಂಟಾದ ಸಂತೋಷ ಅಷ್ಟಿಷ್ಟಲ್ಲ. ಅಜ್ಜಿ "ಮಗು, ಒಂದು ಸೌಟು ತೀರ್ಥವನ್ನು ತಂದು ಅವಳ ಬಾಯಿಗೆ ಹಾಕು. ಇಲ್ಲ ನನಗೆ ಕೊಡು, ನಾನು ಬಾಯಿಗೆ ಹಾಕುತ್ತೇನೆ" ಎಂದರು. ಪ್ರಾಯಶಃ ಆಕೆ ಓಡಿ ಹೋಗಿ, ಒಳಗಿಂದ ಮಿಳ್ಳೆಯಿಂದ ಒಂದು ಸೌಟು ಗಂಗಾಜಲವನ್ನು ತಂದು ಕೊಟ್ಟಿರಬೇಕು. ನಮ್ಮಜ್ಜಿ ಗಟ್ಟಿ ಸ್ವರದಿಂದ ಅವರ ಕಿವಿಯಲ್ಲಿ "ಭಾಗೀರಥಿ ಜಲ; ಕುಡಿ" ಎಂದರು. ಆಕೆ ಅದನ್ನು ಕುಡಿದು ತುಟಿ ಅಲುಗಿಸಿದರು. ಮೆಲ್ಲಗಿನ ಧ್ವನಿಯಿಂದ ಏನೋ ಅಂದರು.

ನಮ್ಮ ಅಜ್ಜಿ ಗಟ್ಟಿಯಾದ ಧ್ವನಿಯಿಂದಲೇ "ತಿಪ್ಪಕ್ಕ, ನಿನ್ನಂಥವಳಿಗೆ ಆ ಹೆದರಿಕೆ ಯಾಕೆ? ನೀನು ಯಾರಿಗೆ ಏನು ಅನ್ಯಾಯ ಮಾಡಿದ್ದೀಯಂತೆ, ಯಮರಾಯನು ಬಂದು ನಿನ್ನನ್ನು ಹಿಡಿದುಕೊಂಡು ಹೋಗಲಿಕ್ಕೆ! ಯಾರೂ ಬರುವುದಿಲ್ಲ. ನಿನ್ನ ಅಮ್ಮನೇ ಬಾ ಎಂದು ಕರೆಯುತ್ತಿದ್ದಾಳೆ. ಹೋಗಿ ಬಾ. ಅಮ್ಮನ ಹತ್ತಿರ ಹೋಗುವುದಕ್ಕೆ ಹೊಟ್ಟೆಯ ಮಕ್ಕಳಿಗೆ ಹೆದರಿಕೆಯೇ? ನಿನಗೆ ಅವಳು ನಾಲ್ಕು ದಿನ ಕುಣಿದುಕೊಂಡಿರು - ಅಂದಳು. ಕುಣಿದೆ; ಚಂದವಾಗಿಯೇ ಕುಣಿದೆ. ಅವಳಿಗೆ ಒಪ್ಪುವ ಹಾಗೆಯೇ ಕುಣಿದೆ. ಕುಣಿದು,

ಕುಣಿದು ದೇಹ ಸುಕ್ಕುಗಟ್ಟಿತಲ್ಲ. ಕೈ ಬಚ್ಚಿತು; ಕಾಲೂ ಬಚ್ಚಿತು. ಇನ್ನೂ, ಇನ್ನೂ ಕುಣಿ ಅನ್ನಲಿಕ್ಕೆ ಅವಳಿಗೇನು ಮರುಳಲ್ಲ. ಅದಕ್ಕೇನೆ 'ಬಾ'ಯೆಂದು ಕರೆಯುತ್ತಿದ್ದಾಳೆ."

ಅವರೇ ತಿರುಗಿ ಏನೇನೋ ಅಂದರು. ಆ ಮಾತುಗಳು ನನಗಂತು ಕೇಳಿಸಲಿಲ್ಲ. ಅಜ್ಜಿ ಮಾತನಾಡಿದ್ದು ತಿಳಿಯುವ ಮಾತಂತಿರಲಿ; ಆಡುವ ಮನಸ್ಸನ್ನು ತಿಳಿಯಬಲ್ಲವರಿಗೆ, ತಿಪ್ಪಕ್ಕನ ಮಾತಿನ ಪ್ರತಿಯೊಂದು ಚೂರೂ ಗೊತ್ತಾಗಿರಬೇಕು. "ಯಾವ ಯೋಚನೆಯನ್ನೂ ಮಾಡಬೇಡ, ಹೆದರಬೇಕು ಯಾಕೆ - ಅಮ್ಮನ ಹತ್ತಿರ ಹೋಗಲಿಕ್ಕೆ? ಕರೆಯುತ್ತಿರುವವಳು ಅವಳೇ; ಇನ್ನೊಬ್ಬರು ಅಲ್ಲ. ಹೌದು, ಅಷ್ಟು ಧೈರ್ಯ ಹೇಳಲಿಕ್ಕೇ ಬಂದೆ. ಅಂದೊಮ್ಮೆ ನೀನು ನನಗೆ ಧೈರ್ಯ ಹೇಳಿದ್ದೆ. ಇಂದು ನಿನಗೆ ಧೈರ್ಯ ನಾನು ಹೇಳುತ್ತಿದ್ದೇನೆ." ಆಕೆ 'ಬನ್ನಿ ಮಕ್ಕಳೇ' ಎಂದು ಮನೆಯಾಕೆಯನ್ನೂ, ಆ ಎರಡು ಮಕ್ಕಳನ್ನೂ ಸಮೀಪಕ್ಕೆ ಕರೆಯಿಸಿಕೊಂಡರು. ಇನ್ನೂ ಬೆಚ್ಚಗಿರುವ ಅವರ ಹಸ್ತವನ್ನು ಅಭಿವಾದಿಸಿ ಅವರೆಲ್ಲರ ತಲೆಯ ಮೇಲಿರಿಸಿದರು. ಅವರನ್ನು ಕಂಡು "ನೀವೇನೂ ಹೆದರಬೇಡಿ, ಈ ತಿಪ್ಪಜ್ಜಿಯ ಆಶೀರ್ವಾದ ಈ ಮನೆಯ ನಿಮ್ಮೆಲ್ಲರನ್ನು ಕಾಯುತ್ತದೆ" ಎಂದು ಹೇಳಿದಾಗ, ಆ ಕಿರಿಯೆ 'ಗೋಳೋ' ಎಂದು ಅತ್ತಳು. ಆಗ ಅಜ್ಜಿ ಅವಳನ್ನು ಗದರಿಸುತ್ತ "ಅತ್ತರೆ ನೋಡಿಕೋ; ದೊಡ್ಡವರನ್ನು ಕಳುಹಿಸಿಕೊಡುವುದು ಹೀಗೇನು? ಸುಮ್ಮನಿರು. ಎಷ್ಟು ದಿನ ಇರಬೇಕು ಅವರಿಲ್ಲಿ? ನಿಮಗೆ ಕೊಡುವಷ್ಟನ್ನೆಲ್ಲ ಕೊಟ್ಟಿದ್ದಾರೆ. ಈಗ ಅವರೇ ನಿಮ್ಮ ತಲೆಯ ಮೇಲೆ ಕೈಯಿಟ್ಟಿದ್ದಾರೆ. ಇದಕ್ಕಿಂತಲೂ ದೊಡ್ಡ ಭಾಗ್ಯವುಂಟೇ?" ಎಂದು, ದುಃಖಿನಿಗೆ ಸಮಾಧಾನ ಹೇಳಿದರು.

ಅಜ್ಜಿಗೆ ಮತ್ತೇನು ತೋರಿತೋ, ಏನೋ? ತಿಪ್ಪಕ್ಕನ ತಲೆಯನ್ನು ತಮ್ಮ ತೊಡೆಯ ಮೇಲಕ್ಕೆ ಇರಿಸಿಕೊಂಡು, ಮಕ್ಕಳಿಗೆ ಜೋಗುಳ ಹೇಳುವ ಹಾಗೆ ಹಾಡಿದರು. ಅದು ಯಾವ ಯುಗದಲ್ಲಿ ಕಲಿತಿದ್ದ ಹಾಡೋ ಏನೋ. ಯಾವ ಸಮಯದಲ್ಲಿ ಅದರ ಬಳಕೆಯೋ! ನನಗಂತು ದಿಗಿಲು; ಹಾಡಿನ ಆರೋ ಎಂಟೋ ಸೊಲ್ಲುಗಳನ್ನು ಹೇಳಿ, ತಿರುಗಿ ಅವರ ಮುಖವನ್ನೇ ನೋಡುತ್ತ ಕುಳಿತರು. ಹಾಗೆ, ತಿಪ್ಪಜ್ಜಿಯ ಕೊನೆಯುಸಿರು ಆರುವ ತನಕವೂ ಕಾದಿದ್ದು, ಅನಂತರ ಅವರ ತಲೆಯನ್ನು ಮಿದುವಾಗಿ ಕೆಳಕ್ಕಿರಿಸಿ, ನನ್ನನ್ನು ಕರೆದೆಂದರು; "ನೀನೀಗ ಅವರಿಗೆ ಒಬ್ಬ ಮೊಮ್ಮಗ, ಆಚೀಚೆ ಯಾರಿದ್ದಾರೆ ನೋಡು, ನಾಲ್ಕು ಮಂದಿ ಗಂಡಸರನ್ನು ಬರಲಿಕ್ಕೆ ಹೇಳು. ಅವಳ ಮಗ ಬರುತ್ತಾನೆಂತ ಕಾದರೆ, ಹೆಣ ಕೊಳೆಯುವ ಹಾಗಾದೀತು" ಎಂದು ನನ್ನನ್ನು ಕಳುಹಿಸಿಕೊಟ್ಟರು. ತಾವು, ದುಃಖಿಸುವ ಗೃಹಿಣಿಗೂ, ಏನೆಂದೂ ತಿಳಿಯದೆ ಅಳುತ್ತಿರುವ ಮಕ್ಕಳಿಗೂ ಸಮಾಧಾನವನ್ನು ಹೇಳುತ್ತ ಕುಳಿತರು.

ಅವರು ನನ್ನನ್ನು ಇಲ್ಲಿಗೆ ಕರೆದುಕೊಂಡು ಬಂದದ್ದು ಇದಕ್ಕಾಗಿಯೇ - ಎಂಬುದನ್ನು ತಿಳಿದಾಗ ಅತ್ಯಂತ ಆಶ್ಚರ್ಯವಾಯಿತು. ಅಲ್ಲಿಂದ ಓಡಿ, ಓಡಿ ಮಂಜುನಾಥನ ಮನೆಗೆ ಧಾವಿಸಿದೆ. ಅಲ್ಲಿಂದ ಮಂಜುನಾಥನ ಬಳಗದ ಮಾಣಿಯೊಂದನ್ನು ಕರೆದುಕೊಂಡು, ಆಸುಪಾಸಿನ ನಾಲ್ಕಾರು ಮನೆಗಳಿಗೆ ಹೋಗಿ ಊರಿನ ನಾಲ್ಕಾರು ಮಂದಿಯನ್ನು ಕರೆದುಕೊಂಡು ಬಂದೆ. ಸಾವಿನ ಮನೆಯಲ್ಲವೇ? ಮತ್ತೆಲ್ಲವೂ ಸಾಕಷ್ಟು ಮೌನದಲ್ಲಿಯೇ ಇತ್ತು. ಚಿತೆಯ ಏರ್ಪಾಟೂ ಮುಗಿದ ಸುದ್ದಿ ಬಂತು. ತಿಪ್ಪಜ್ಜಿಯ ಶವಕ್ಕೆ ಕೊಗೊಟ್ಟು ಹೊರಡಬೇಕೆನ್ನುವಾಗ - ಕಿಚ್ಚು ಹಿಡಿಯುವವರಾರೆಂಬ ಪ್ರಶ್ನೆ ಥಟ್ಟನೆ ಬಂತು. ಅಲ್ಲಿದ್ದವರು ಮುಖ, ಮುಖ ನೋಡಿದರು. "ಮಾಣಿ ನಿನಗೇನು ಕೆಲಸ?" ಎಂದರು ಅಜ್ಜಿ ನನ್ನನ್ನು ನೋಡುತ್ತ. "ಏನಿಲ್ಲ" ಎಂದೆ ನಾನು. ಅದೇ ಗಳಿಗೆಗೆ ಹನ್ನಾರಿನ ಪಯಣ ಮುಗಿಸಿ ತಿಪ್ಪಿಯ ಹಿರಿಯ ಮಗ ನಾರಾಯಣ ಬೆವರನ್ನು ಸುರಿಸುತ್ತ ಮನೆಯ ಅಂಗಳಕ್ಕೆ ಕಾಲಿರಿಸಿದ. ಅವನ ರೋದನ, ಪ್ರಲಾಪಗಳನ್ನು ಕೇಳುವುದಕ್ಕಿರಲಿಲ್ಲ! ನಮ್ಮ ಅಜ್ಜಿ ಅವನಿಗೂ ಬೈದರು; ಬಳಿಕ ಸಮಾಧಾನವನ್ನೂ ಹೇಳಿದರು. ಅನಂತರ, ತಿಪ್ಪಜ್ಜಿಯ ಶರೀರವನ್ನು ಮುಗಿಸಿ ಬರಲು ಎಲ್ಲರೂ ಹೊರಟೆವು. ಅದಕ್ಕೆ ನಮ್ಮ ಅಜ್ಜಿ ಸಹ ಆಕ್ಷೇಪವಾಗಲಿಲ್ಲ. ಅಷ್ಟೆಲ್ಲವನ್ನು ಮುಗಿಸಿ, ನಾನೂ ಅಜ್ಜಿಯೂ ನಮ್ಮ ಮನೆಯನ್ನು ಸೇರುವಾಗ ಪಡುವಣ ಬಾನಿನಲ್ಲಿ ಸೂರ್ಯ ಮುಳುಗುತ್ತಿದ್ದ.

# ಅಧ್ಯಾಯ 14

ಅದೇನೇ ಇರಲಿ, ಸೀತೆಯ ಮನೋಭಾವದಲ್ಲಿ ವಿಶೇಷವಾದ ಒಂದು ಬದಲಾವಣೆ, ನನ್ನ ಅಜ್ಜಿಯ ವಿಚಾರದಲ್ಲಿ ಕಂಡುಬಂತು. ನನ್ನ ಮತ್ತು ಅಜ್ಜಿಯ ಅಶ್ವತ್ಥಕಟ್ಟೆಯ ಹರಟೆಗಳು, ಅವಳ ಮನಸ್ಸನ್ನು ಆಮೇಲೆ ಕೆರಳಿಸದಾದವು. ಹಾಗೆಯೇ ಅವರಿಗೆ ಅರೆಮರುಳು ಎಂಬ ಭಾವನೆ ಹೋಗುತ್ತ ಬಂದಿರಲೂಬಹುದು. ಅವರ ಸಲ್ಲಾಪಗಳು ಬೇಡದ ಅಪಲಾಪಗಳೆನಿಸುವ ಬದಲು "ವಯಸ್ಸಾಗಿದೆ, ಬಹಳ ಕಾಲ ಒಂಟಿಯಾಗಿ ನರಳಿದವರು, ಕಣ್ಮುಂದೆ ಮೊಮ್ಮಗನೊಬ್ಬ ಬದುಕಿದ್ದಾನೆ. ಅವನೊಡನೆ, ತಮ್ಮದೇ ಯೋಚನೆಗಳನ್ನು ಕಂಡಕಂಡ ಹಾಗೆ ತೋಡಿಕೊಳ್ಳಬೇಕೆಂದು ಅವರಿಗೆ ಅನಿಸುತ್ತಿರಬಹುದು. ಯಾರಿಗಾದರೂ ಸರಿಯೇ - ಮಾತನಾಡುವುದಕ್ಕೆ ಒಂದು ಕಂಬವಾದರೂ ಬೇಕಷ್ಟೆ" ಎಂದು ಅನಿಸಿದ್ದಿರಬೇಕು. ಅವಳಾಗಿಯೇ "ಇಂದೇನು ಹೇಳಿದರು ನಿಮ್ಮಜ್ಜಿ; ಅಷ್ಟು ಹೊತ್ತು ಏನೇನು ಮಾತನಾಡುತ್ತಿದ್ದಿರಿ?" ಎಂದು ನನ್ನನ್ನು ಕೇಳುವುದನ್ನು ಬಿಟ್ಟಳು. ನಾನೇ ಒಮ್ಮೊಮ್ಮೆ ನನ್ನ ನಾಲಿಗೆಯ ತುರಿಕೆಯಿಂದ, 'ಅಜ್ಜಮ್ಮ ಹೀಗೆ ಹೇಳುತ್ತಾರೆ, ನೀನೇನು ಹೇಳುತ್ತೀಯ?' ಎಂದರೆ "ಅವರೇನೂ ಹೇಳಲಿ, ಒಬ್ಬೊಬ್ಬರಿಗೆ ಒಂದೊಂದು ತೆರ ಕಾಣಿಸೀತು. ನನಗೆ ನನ್ನ ಹಿರಿಯರು ಅಂದದ್ದು ಗೊತ್ತು; ನನ್ನ ಮನಸ್ಸು ನನ್ನದು; ನನ್ನ ನಂಬಿಕೆ ನನ್ನದು. ಅವರು ಹಾಗೆಲ್ಲ ಅಂದದ್ದರಿಂದ ನನಗೇನೂ ಬಾಧಕವಿಲ್ಲ" ಎಂದು ವಾದಿಸುತ್ತಾಳೆ.

"ಅವರು ಅಂದದ್ದರಲ್ಲಿ ಸತ್ಯವಿಲ್ಲ - ಅನ್ನುತ್ತೀಯಾ?" ಎಂದು ಕೇಳಿದರೆ, "ಸತ್ಯವೋ, ಸುಳ್ಳೋ, ಯಾರಿಗೆ ಗೊತ್ತು? ನಾನು ಯಾತಕ್ಕೆ ಹೇಳಬೇಕು ಅದನ್ನು? ನನಗೆ ನಾನು ನಂಬಿದ್ದು ಸತ್ಯ. ಅವರಿಗೆ ಅವರು ನಂಬಿದ್ದು ಸತ್ಯ - ಎಂತ ಇಟ್ಟುಕೊಳ್ಳುವ" ಎಂದು ವಾದವನ್ನು ಮುಗಿಸಿಬಿಡುತ್ತಾಳೆ.

ಅವಳಲ್ಲಿನ ಇಂತಹ ಬದಲಾವಣೆಗೆ ಏನು ಕಾರಣ - ಎಂದು ನಾನೂ ಯೋಚಿಸಬೇಕಾಯಿತು. ಅಜ್ಜಿಯನ್ನು ನೂರಕ್ಕೆ ನೂರರಷ್ಟು ಒಪ್ಪುವ ಬುದ್ಧಿ ನನ್ನಲ್ಲಿಲ್ಲವಾದರೂ, ಒಪ್ಪಿದರೇನೆ ಒಂದು ಅಪರಾಧವೆಂದು ನನಗೆ ಎಂದೂ ಅನಿಸುತ್ತಿರಲಿಲ್ಲ. ಆ ವಿಚಾರ ಬೇರೆಯೇ; ಸೀತೆಯ ಮನಸ್ಸು ಸ್ವಲ್ಪವಾದರೂ ತಿರುಗಿದ್ದರಿಂದ ನನ್ನ ಮನಸ್ಸಿಗೂ ಒಂದು ನೆಮ್ಮದಿಯುಂಟು. ಅದು ತೊಡಗಿದ ಕಾಲವನ್ನು ಎಣಿಸಿಕೊಂಡರೆ - ಇಂಥ

ದಿನವೇ ಬದಲಿಸಿತು ಎಂದು ಹೇಳಬಲ್ಲೆ. ಅವರು ತಿಪ್ಪಜ್ಜಿಯ ಸಾವನ್ನು ಒಳಗಣ್ಣಿನಿಂದಲೇ ಕಂಡುಕೊಂಡು ಆ ದಿವಸ ಅಲ್ಲಿಗೆ ಹೋಗಿ ಏನೆಲ್ಲ ಮಾಡಿದರು, ಮೃತ್ಯುಶಯ್ಯೆಯಲ್ಲಿದ್ದ ಆಕೆಗೆ ಯಾವೆಲ್ಲ ಸಮಾಧಾನ ಹೇಳಿದರು ಎಂಬುದನ್ನು, ನಾನು ಮನೆಗೆ ಬಂದೊಡನೆಯೇ ಅವಳಿಗೆ ವಿವರಿಸಿ ಹೇಳಿದ್ದೆ. ಅವರ ಒಂದು ಮಾತನ್ನು "ಅಮ್ಮನ ಹತ್ತಿರ ಹೋಗಲಿಕ್ಕೆ ಮಗುವಿಕೆ ಹೆದರಿಕೆಯೇ?" ಎಂಬ ವಾದವನ್ನು ಕೇಳಿ, ಸೀತೆ ಆ ದಿನ ಕಣ್ತುಂಬ ಅತ್ತಳು. ಅವರು ಜೋಗುಳವನ್ನು ಹಾಡಿದ ಕತೆಯನ್ನು ನಾನು ಹೇಳಿದಾಗ ಅವಳ ಬಾಯಿಯಿಂದ "ಅವರು ಅಜ್ಜಮ್ಮನೋ, ಸ್ವತಃ ಅದೇ ಅಮ್ಮನೋ ಅನಿಸುತ್ತದೆ" ಎಂದಿದ್ದಳು. ನನ್ನಲ್ಲಿಯೂ ಅಂಥದೇ ಭಾವನೆ ಮೂಡಿತ್ತು. ನಾವು ಗುರುತಿಸಲಾರದ ಯಾವುದೋ ಒಂದು ದೊಡ್ಡಸ್ತಿಕೆ, ಗುಣ, ಅವರಲ್ಲಿ ಬೆಳೆದು ಬಂದದ್ದು ಸ್ಪಷ್ಟವಾಗಿ ಗೋಚರಿಸುತ್ತಿತ್ತು. ಇದರಿಂದಾಗಿ, ಇನ್ನೂ ಒಂದು ಮಾನಸಿಕ ಪರಿವರ್ತನೆ ಸೀತೆಯಲ್ಲಿ ಉಂಟಾದಂತೆ ಕಾಣಿಸುತ್ತದೆ. ಪ್ರತಿ ಸೋಮವಾರ ಸಾಯಂಕಾಲವೂ, ತನ್ನ ಮಕ್ಕಳನ್ನು ಕಟ್ಟಿಕೊಂಡು - ಕಪಾಲೇಶ್ವರನ ಗುಡಿಗೆ ಹೋಗಿ ಬರುತ್ತಿದ್ದ ಅವಳು, ಶುಕ್ರವಾರಕ್ಕೆ ಬೇರೊಂದು ಹೊಸ ದೇವರನ್ನು ಕಟ್ಟಿಕೊಂಡಳು. ದೂರವಿದ್ದರೂ, ಹಿಂಡುಗಾನಿನ ಅಮ್ಮನೇ - ಎಂದು ಅವಳಿಗೆ ಅನಿಸಿರಬೇಕು. ಆದರೆ, ಅಜ್ಜಿಯ ಮನಸ್ಸಿನಲ್ಲಿ ನಟ್ಟು, ಬೇರೂರಿ ಬೆಳೆದಂಥ ಆ ಅಮ್ಮ ಮಾತ್ರ, ಮಂಜುನಾಥನ ಜಗದಂಬೆಗಿಂತ ದೊಡ್ಡವಳು. ಅವಳು ಯಾವತ್ತು ಸೃಷ್ಟಿಗೆ ಕಾರಣಳಾದ ಅಮ್ಮ; ಜಗತ್ತಿಗೂ, ವ್ಯಕ್ತಿಗೂ ಸಂಬಂಧವನ್ನು ಕೊಡುವ, ಹತ್ತಿರದ ಮತ್ತು ಬಲವಾದೊಬ್ಬ ನಂಟಳು - ಎಂಬ ಭಾವನೆ ಅವಳಿಗೆ ಬಂದಿರಲಾರದು. ಒಂದು ಬಾರಿ ಸೀತೆ ಮನೆಗೆ ಬಂದವರೊಡನೆ "ಮಗುವಿಗೆ ಮೂರು ದಿವಸ ಜ್ವರ ಹಿಡಿದದ್ದು ಬಿಡಲಿಲ್ಲ; ಅಮ್ಮನ ಹತ್ತಿರ ಹೋಗಿ ಬೇಡಿದೆ; ಮನೆಗೆ ಬರುವಾಗ ಜ್ವರ ಠಮ್ಮನೆ ಇಳಿದಿತ್ತು" ಎಂದುದನ್ನು ನಾನು ಕೇಳಿದ್ದೆ. ಆದರೆ ನಮ್ಮ ಅಜ್ಜಿಗೆ ದೇವರಲ್ಲಿ "ಅದನ್ನು ಕೊಡು, ಇದನ್ನು ಕೊಡು" ಎಂದು ಬೇಡುವ ಜನಗಳ ಮೇಲೆಯೇ ಗೌರವವಿರಲಿಲ್ಲ. ಅಂಥ ಕಲ್ಪನೆಗೂ ಗೌರವವಿರಲಿಲ್ಲ. ಒಂದು ಬಾರಿ ನಾನು ಅವರೊಡನೆ ಪುರಂದರದಾಸರ ಮಾತನ್ನೆತ್ತಿದಾಗ, ಅವರೆಂದ ವಾದ ನೆನಪಿಗೆ ಬರುತ್ತದೆ. ಇನ್ನೊಮ್ಮೆ ಹೀಗೆ ಅಂದಿದ್ದರು: "ಹೌದು, ಹೌದು, ಅವಳಿಗೆ ಗೊತ್ತಿಲ್ಲ - ಯಾರ ಕಷ್ಟ ಎಷ್ಟೆಷ್ಟು ಎಂತ, ನೀನು ಹೋಗಿ ಅರ್ಜಿ ಹಾಕಿಕೊಳ್ಳಬೇಕು; ಅದರ ಮೇಲೆಯೇ ಅವಳಿಗೆ ಗೊತ್ತಾಗಬೇಕು ಅದು - ಅಲ್ಲವೇ?" ಎಂದು.

ನಾನು ವಾದಕ್ಕಾಗಿ "ಅಲ್ಲ ಅಜ್ಜಿ, ನಾವು ಕೇಳದೆಯೇ ಅವಳು ಏತಕ್ಕೆ ಕೊಟ್ಟಾಳು" ಎಂದದ್ದಕ್ಕೆ "ಕೇಳಿದವರಿಗೆ ಅವಳು ಕೊಡಬೇಕಂತಲೇ ಇಲ್ಲ. ಮಕ್ಕಳ ಹಿತಕ್ಕೆ ಯಾವುದು ಒಳ್ಳೆಯದಂತ ಅವಳಿಗೆ ಗೊತ್ತಿದ್ದೀತು. ಅವಳು ಅದನ್ನು ಈ ತನಕವೂ ಕೊಟ್ಟಿಲ್ಲವಾದರೆ, ಅದಕ್ಕೆ ಕಾರಣವೂ ಅವಳಿಗೆ ಗೊತ್ತು. ಅದು ಕೊಡುವ ವಸ್ತುವಾದರೆ ಅದನ್ನು ಅವಳು

ಕೇಳದೆಯೂ ಕೊಟ್ಟಾಳು; ಹಾಗೆ ಕೊಟ್ಟೇ ಹುಟ್ಟಿಸಿರುತ್ತಾಳೆ ಅನ್ನು" ಎಂದಿದ್ದಳು. ನಾನು ಆ ವಿಚಾರವನ್ನು ಬಹಳ ಹೊತ್ತು ಯೋಚಿಸಿ, ತಲೆಕೆಡಿಸಿಕೊಂಡಿದ್ದೆ.

ಹಿಂದೆ, ಯೌವನದಲ್ಲಿ ವೈಧವ್ಯದ ದುಃಖ ಬಾಧಿಸುತ್ತಿದ್ದಿರಬಹುದಾದ ಕಾಲದಲ್ಲಿ, ಅವರು ಊರಿನ ಗುಡಿಗಳಿಗೆ ಹೋದವರೇ. ಹೋಗಿ ಏನು ಮಾಡಿದರು, ಏನು ಕೇಳಿಕೊಂಡರು - ಇವಾವುದೂ ನನಗೆ ತಿಳಿಯದ ಮಾತು. ಆ ಮೇಲೆ ಮಾತ್ರ ಹೋಗುವ ಬಯಕೆಯನ್ನೇ ತೋರಿಸಿದವರಲ್ಲ. ಒಮ್ಮೆ ಹಿಂಡುಗಾನಕ್ಕೆ ಹೋದಾಗ ನಡೆದ ಕತೆಯನ್ನು ತಿಪ್ಪಜ್ಜಿ ಹೇಳಿದ್ದಾರಷ್ಟೆ. ಹೋದಾಗಿನ ಸಂತೋಷಕ್ಕಿಂತಲೂ ಮುಂದಾದ ಅವಾಂತರ ಯಾರಿಗೆ ಬೇಕು?

ಅಂತು, ಈ ಬಾರಿ ಬಂದ ಮಳೆಗಾಲ ಕಳೆಯಿತು. ಗದ್ದೆಯ ಬತ್ತ ಚಾವಡಿಗೆ ಬಂದು ಬಿದ್ದಿತು. ಮತ್ತೊಂದು ತಿಂಗಳ ಮೇಲೆ, ಆಳುಗಳು ಬಂದು, ಅದನ್ನು ಬೇಯಿಸಿ, ಅಂಗಳದಲ್ಲಿ ಹರವಿ, ಅಲ್ಲಿರುವ ಮೂರು ಒರಳುಗಳಲ್ಲಿ ಕುಚ್ಚಿಲಕ್ಕಿ ಕುಟ್ಟುವ ಸಂಗೀತವೂ ಕೇಳಿಸತೊಡಗಿತು. ಹತ್ತು ದಿನಗಳಲ್ಲಿ ಆ ಕೆಲಸ ಮುಗಿಯಿತು. ಕೆಲವು ಸಾರಿ, ಅಜ್ಜಮ್ಮ ಬತ್ತ ಕುಟ್ಟುವವರು ಹಾಡುತ್ತಿದ್ದ ಆ ಒನಕೆ ಹಾಡುಗಳನ್ನೂ ಕೇಳುತ್ತಿದ್ದರು. ಅಲ್ಲಿಯೂ ಊರಿನ ಕತೆ ಬರುತ್ತದೆ. ಬಡತನದ ಕತೆ ಬರುತ್ತದೆ; ಲಕ್ಷ್ಮಣ ಸೀತೆಯನ್ನು ಕಾಡಿನಲ್ಲಿ ಬಿಟ್ಟು ಬಂದ ಕತೆಯೂ ಬರುತ್ತದೆ. ಅವೆಲ್ಲವನ್ನೂ ಕೇಳುತ್ತಾರೆ. ಆಮೇಲೆ ತಮ್ಮ ಮನಸ್ಸಿನಲ್ಲೇ ಏನೇನೋ ಮಣ, ಮಣ ಅಂದುಕೊಳ್ಳುತ್ತಾರೆ. ನಾನು ತೋಟದ ಕೆಲಸದಲ್ಲೋ, ಎರಡನೆಯ ಬೆಳೆಗೆ ಉದ್ದು, ಹುರುಳಿ, ಬಿತ್ತಿಸುವುದರಲ್ಲಿಯೋ ಸಮಯ ಕಳೆಯುತ್ತಿದ್ದೆ. ಆಮೇಲೆ - ಹುರುಳಿಯೂ ಮನೆಗೆ ಬಂದಿತು. ಉದ್ದಿನ ಗಿಡವೂ ಮನೆಗೆ ಬಂದಿತು. ಕಾಳನ್ನು ಬೇರೆ ಮಾಡಿ, ಕೊಣ್ಣೆಯನ್ನು ಪುಡಿ ಮಾಡಿ, ಬೆಳೆದ ಧಾನ್ಯದ ಮುಡಿಯನ್ನು ಕಟ್ಟಿಸಿದ್ದಾಯಿತು. ಒಂದು ದೃಷ್ಟಿಯಿಂದ - ನಮ್ಮೂರಿನ ಜೀವನ ಬರಡು ಜೀವನ. ವರ್ಷ ವರ್ಷವೂ ಮಾಡಿದ್ದನ್ನೇ ಮಾಡುವುದು; ತೀಡಿದ್ದನ್ನೇ ತೀಡುವುದು. ಆ ನಡುವೆ ಹಬ್ಬ ಹರಿದಿನಗಳು ಬಾರದೆ ಹೋದರೆ, ನಮ್ಮ ಈ ಗ್ರಾಮ ಜೀವನದಲ್ಲಿ ಏನು ಚೆಲುವಿದೆ? ಏನು ಗೆಲವಿದೆ? ವೈಶಾಖ ಮಾಸ ಬಂದಿತಾದರೆ - ಹತ್ತು ಮನೆಗಳಲ್ಲಿ ಮದುವೆಯೋ, ಮುಂಜಿಯೋ ಮೆತ್ತಗೆ ಆಗತೊಡಗುತ್ತದೆ. ಬೇಸಾಯದ ಯಾವತ್ತು ಕೆಲಸ ಮುಗಿದಿರುತ್ತದೆ. ನಾಲ್ಕು ಮನೆಗಳಿಗೆ ಹೋಗಿ ಬರುತ್ತಿದ್ದು, ಉಂಡು, ತಿಂದು ಹೊತ್ತನ್ನು ಕಳೆಯಬಹುದು. ವಿನಾಯಕನ ಚೌತಿ, ನವರಾತ್ರೆ, ಕೊನೆಗೆ ಅನಂತ ಚತುರ್ದಶಿ- ಇಷ್ಟು ಕಳೆದವೆಂದರೆ - ಮುಂದಿನ ವರ್ಷ ಹಬ್ಬ ಬರುವ ತನಕ ತಾಪತ್ರಯವೇ. ಮಳೆ ಬಿಟ್ಟ ಮೇಲೆ ಕಪ್ಪೆಗಳು ಕೆಸರಲ್ಲಿ ಹುದುಗಿ ಮಲಗಿಕೊಳ್ಳುವ ಹಾಗೆ, ನಾವು ಯಾವತ್ತು ಚಿಂತೆಗಳನ್ನು ಮರೆಯಬೇಕಾಗಿತ್ತು. ಆಗ ನನ್ನ ಮನಸ್ಸು ಜಡಭರತನ ಮನಸ್ಸಾಗುತ್ತಿತ್ತು. ಮುಂದೆ

ಚಳಿಗಾಲವೂ ಮುಗಿದು, ಹುಚ್ಚು ಗಾಳಿ ಬೀಸತೊಡಗಿದಾಗ "ಹಾ, ಬಂತೊಂದು ಹಬ್ಬ; ಬೇಸರ ಕಳೆಯುವುದಕ್ಕೆ ಶಿವರಾತ್ರಿಯಾದರೂ ಬಂದುಬಿಟ್ಟಿತು" ಎಂಬ ಎಚ್ಚರವಾಯಿತು. ಶಿವರಾತ್ರಿಯ ದಿವಸ ನಮ್ಮೆಲ್ಲರಿಗೂ ಉಪವಾಸವೆಂದು ಲೆಕ್ಕ. ಅಂದರೇನು? ಅವಲಕ್ಕಿ, ಉಪ್ಪಿಟ್ಟು, ಉಪಾಹಾರಗಳನ್ನು ಎರಡು ಹೊತ್ತು ಅನ್ನದ ಬದಲಿಗೆ ತಿನ್ನಬೇಕು. ನಮ್ಮ ಅಜ್ಜಿಗೂ ಅದೇ; ಕಿಟ್ಟಣ್ಣನಿಗೂ ಅದೇ. ಆ ದಿವಸ ಸಾಯಂಕಾಲ, ನಾವೆಲ್ಲರೂ ಕಪಾಲೇಶ್ವರನ ಗುಡಿಗೆ ಹೋಗಿ ಬರುತ್ತೇವೆ. ಅಲ್ಲಿ ದೇವರಿಗೆ ಅನರ್ಘ್ಯವಾಗಿ ಅಭಿಷೇಕವಾಗುತ್ತದೆ. ರುದ್ರ ಜಪಿಸುತ್ತಾರೆ, ಮಂತ್ರಘೋಷ ಮಾಡುತ್ತಾರೆ. ಆರತಿ ಆಗುತ್ತದೆ. ರಾತ್ರೆ ಪೂಜೆ ಕಳೆದು, ಗಂಧ, ಬಿಲ್ವಪತ್ರೆಗಳನ್ನು ಹಿಡಿದುಕೊಂಡು ಎಲ್ಲರೂ ಮನೆಗೆ ಬರುತ್ತಾರೆ. ನಮ್ಮ ಮನೆಯಲ್ಲಿ ಯಾಕೋ, ಹಳೆಗಾಲದಿಂದಲೂ ಬಂದ ರಿವಾಜು ಸ್ವಲ್ಪ ತಾಪತ್ರಯದ್ದು. ಬಂದ ಮೇಲೆಯೇ ಅಡುಗೆ ಅಟ್ಟು, ಊಟ ಮಾಡಬೇಕು. ಅದೂ ಮುಂಡುಕನ ಓಲೆ ಕೊಟ್ಟೆಗಳಲ್ಲಿ ಹಿಟ್ಟನ್ನು ಸುರಿದು, ಕಡುಬು ಬೇಯಿಸಿ, ಕಾಯಿಹಾಲಿನೊಡನೆ ಊಟ ಮಾಡಿದರೇ ಶಿವರಾಯನಿಗೆ ಸಂತೋಷ ಎಂದು ಲೆಕ್ಕ. ರಾತ್ರಿ ಜಾಗರಣೆ ಮಾಡುವ ಬದಲು, ಕಡುಬು ಎಲೆಗೆ ಬೀಳುವ ತನಕವೂ ಕಣ್ಣಿನಲ್ಲಿ ನಿದ್ದೆಯ ಅಮಲು ತೂಗಿಕೊಂಡಿರುತ್ತದೆ. ಶಿವರಾತ್ರಿಯ ದಿವಸ, ಬೆಳಿಗ್ಗೆ ಮೀಯುವಾಗಲೇ ನನಗೆ ಈ ಎಲ್ಲ ಕಾರ್ಯಾಚರಣೆಗಳು ನೆನಪಿಗೆ ಬಂದುವು. "ಒಂದು ಮಸಲ ಮಾಡುವ" ಎಂದು ಯೋಚಿಸಿದೆ. ಮಸಲ ಮತ್ತೇನಲ್ಲ; ಅಜ್ಜಿಯನ್ನು ಪುಸಲಾಯಿಸಿ ಕಪಾಲೇಶ್ವರನ ದೇವಸ್ಥಾನಕ್ಕೆ ಕರೆದುಕೊಂಡು ಹೋಗಬೇಕೆಂಬ ಆಸೆ.

ಸಾಯಂಕಾಲ ಹೊತ್ತಿರುವಾಗಲೇ ಸೀತೆ ಮಕ್ಕಳನ್ನು ಕರೆದುಕೊಂಡು ಸ್ನೇಹಿತರ ಮನೆಗೆ ಹೋಗಿ, ಅಲ್ಲಿಂದ ಅವರ ಮನೆಯ ದಿಬ್ಬಣವನ್ನು ಹೊರಡಿಸಿ ದೇವಸ್ಥಾನಕ್ಕೆ ಹೋಗುವವಳು. ಅವಳು ಹೊರಟು ಹೋದಳು ಹಾಗೆಯೇ. ಸಂಜೆ ಸಮೀಪಿಸುತ್ತಲೇ ನಾನು ಅಜ್ಜಮ್ಮನೊಡನೆ "ಅಜ್ಜಿ, ಬಹಳ ದಿವಸ ಆಯಿತು ನೀವು ದೇವಸ್ಥಾನಕ್ಕೆ ಹೋಗದೆ, ನನಗೆ ನಿಮ್ಮ ಜತೆಗೆ ಅಲ್ಲಿಯ ತನಕವೂ ಹೋಗಿ ಒಂದು ಗಳಿಗೆ ದೇವರ ಪೂಜೆ ನೋಡಿಕೊಂಡು ಬರುವ ಆಸೆ" ಎಂದೆ.

"ಅದಕ್ಕೇನಂತೆ?" ಎಂದರು ಅವರು.

ಅಲ್ಲಿನ ಓಲಗ ಮಂಟಪ ಬಿದ್ದು ಹೋದುದನ್ನು ಇನ್ನೂ ಸರಿಮಾಡಲಿಲ್ಲ ಊರವರು. ಈಗ ಶಂಕರಯ್ಯ ದೇವಸ್ಥಾನದ ಮೊಕ್ತೇಸರರು; ಇನ್ನೆರಡು ತಿಂಗಳಿಗೆ ವರ್ಷದ ಜಾತ್ರೆಯೂ ಬರುತ್ತದೆ. ಅಷ್ಟರೊಳಗಾಗಿ ಬಿದ್ದ ಮಂಟಪವನ್ನು ಕಟ್ಟಿಸಬೇಡವೇ? ಕುಸಿದುಬಿದ್ದ ಮಂಟಪವನ್ನು ಹಾಗೆಯೇ ಬಿಡಬಾರದು - ಎಂದು ಅವರಿಗೆ ಕಾಣಿಸಲಿಲ್ಲ. ಕೇಳಿದ್ದರೆ, ನನ್ನ ಪಾಲಿನ ವಂತಿಗೆಯನ್ನು ನಾನು ಕೊಡುತ್ತಿದ್ದೆ - ಎಂದು ಪೀಠಿಕೆ ಹಾಕಿ, ಅಜ್ಜಿಯನ್ನು

ಕರೆದುಕೊಂಡು, ಮೆಲ್ಲನೆ ಬಯಲಿಗೆ ಇಳಿದೆ. ಮುಂದೆ ಅರ್ಧ ಮೈಲು ದೂರ ಹಾಡಿಯ ದಾರಿಯಲ್ಲಿ ಹೆಜ್ಜೆ ಹಾಕುತ್ತ ಕಪಾಲೇಶ್ವರನ ಪ್ರಾಕಾರವನ್ನು ಸಮೀಪಿಸುವಾಗ ಕತ್ತಲಾಯಿತು. ಅವರ ಕೈ ಹಿಡಿದುಕೊಂಡು "ಇದು ಏರು; ಇದು ತಗ್ಗು" ಎಂದು ಆಗಾಗ ಹೇಳುತ್ತ ಕರೆದು ತಂದೆ. ದೇವಸ್ಥಾನದ ಮುಂದೆಯೂ, ಒಳಗೂ ಸಾಕಷ್ಟು ಜನ ನೆರೆದಿತ್ತು. ಆದುದರಿಂದ, ನಾನು ತುಸು ಯೋಚನೆ ಮಾಡಬೇಕಾಯಿತು. ನಾನು ಅವರನ್ನು ಕರೆದುತಂದ ಉದ್ದೇಶವೇ ಹರಟೆ ಹೊಡೆಯುವುದು. ಜನಜಂಗುಳಿ ಅವರಿಗೂ ಬೇಡ; ನನಗೂ ಬೇಡ. ಅಜ್ಜಿಯನ್ನು ಮಾತನಾಡಿಸಲು ಒಳ್ಳೆಯ ಶಾಂತವಾದ ಮೂಲೆ ಸಿಗುತ್ತದೆಯೇ - ಎಂದು ಹವಣಿಸಿ, ದೇವಾಲಯಕ್ಕೆ ಮೂರು ಬಾರಿ ಸುತ್ತು ಬಂದು, ಜನರ ನಿಗ್ಗನ್ನು ಕಂಡು "ಅಜ್ಜಮ್ಮ, ಒಳಗೆ ತುಂಬ ಜನ" ಎಂದು ಮುಂಬಾಗಿಲಲ್ಲಿ ನಿಂತೇ ನಮಸ್ಕರಿಸಿ, ಈಚೆಗೆ ಬಂದೆ. ನನ್ನ ದೃಷ್ಟಿ ಮಾಡಿಲ್ಲದ ಓಲಗ ಮಂಟಪದ ಕಡೆಗೆ ಹರಿಯಿತು.

"ಪೂಜೆ ಮುಗಿಯುವ ತನಕವೂ ಓ ಅಲ್ಲಿ ಹೋಗಿ ಕೂತಿರುವ" ಎಂದು ಅವರನ್ನು ಕರೆದುಕೊಂಡು ಬಂದು, ಆ ದಿವಂಗತ ಮಂಟಪದ ಚಾವಡಿಯಲ್ಲಿ ಕುಳ್ಳಿರಿಸಿ, ನಾನೂ ಅವರ ಬಳಿ ಕುಳಿತುಕೊಂಡೆ. ಆಗಾಗ ಭಕ್ತ ಜನಗಳ ಮಾತುಕತೆ, ಬಾರಿಸುತ್ತಿದ್ದ ಘಂಟೆಗಳ ಡೊಂಯ್ ಡೊಂಯ್ ಧ್ವನಿ ಕೇಳಿಸುತ್ತಿತ್ತು. ಆದರೂ, ನಾವು ಕುಳಿತ ಸ್ಥಳದಲ್ಲಿ ಯಾವ ಭಕ್ತರೂ ಸುಳಿದಾಡುತ್ತಿರಲಿಲ್ಲ. ಅಜ್ಜಿ ಸುಮ್ಮನೆ ಕುಳಿತರು; ನಾನೂ ಸುಮ್ಮನೆ ಕುಳಿತುಕೊಂಡೆ. ಹಾಗೆಯೇ ಕಳೆದಿರಬೇಕು ಒಂದು ಘಂಟೆ ಸಮಯ. ಘಂಟೆಗಳ ಡೊಂಯ್, ಢಣ, ಢಣ ಕೇಳುತ್ತ ಅಜ್ಜಿಯೇ ನನ್ನ ಕೈಯನ್ನು ತಡವಿ ಹಿಡಿದು "ಮಗು, ನನಗೆ ಯಾಕೋ ಒಂದು ನಮೂನೆ ಆಗುತ್ತದೆ. ಏನೇನೋ ಕೇಳಿಸುತ್ತದೆ, ಏನೇನೋ ಕಾಣಿಸುತ್ತದೆ" ಎಂದರು.

ತುಸು ಹೊತ್ತಿನ ಮೇಲೆ "ಎಲ್ಲವೂ ವಿಚಿತ್ರ! ಅತ್ತೆಗೊಂದು ಕಾಲ; ಸೊಸೆಗೊಂದು ಕಾಲ - ಎಂಬ ಗಾದೆಯ ಹಾಗಿದೆ. ಇಲ್ಲಿರುವುದು ಶಿವಲಿಂಗ; ಶಿವಲಿಂಗವೇ ಅದು. ಅದನ್ನು ಯಾರೋ ನಾಲ್ಕು ಮಂದಿ ಬ್ರಾಹ್ಮಣರು ತಲೆಮಾರಿನಿಂದ ಪೂಜಿಸಿಕೊಂಡು ಬಂದಿದ್ದರು. ಹಿಂದೆ ಆ ದೇವರ ಗುಡಿ ಇಷ್ಟೆಲ್ಲ ದೊಡ್ಡದಿರಲಿಲ್ಲ. ಹಿಂಡುಗಾನ ಅಮ್ಮನ ಗುಡಿಯ ಹಾಗೆ ಸಣ್ಣ ಒಂದು ಹುಲ್ಲು ಚಾವಣಿಯ ಗುಡಿಯಾಗಿತ್ತು. ಇವತ್ತು ಇದು ಎಷ್ಟೆಷ್ಟೋ ಬೆಳೆದಿದೆ. ಹೊರಗೆ ನಂದಿ ಏನು! ಅಂಬಲ ಏನು! ಪಾಗಾರದ ಗೋಡೆ ಏನು! ಇವೊಂದೂ ಹಿಂದೆ ಇದ್ದಿರಲಿಲ್ಲ. ಮುಂವೊಂದು ದಿವಸ ಈ ಊರಿನ ಅರಸುತನ ಬದಲಾಯಿತು. ಆ ದಿನ ಕಲ್ಲು ಮಂಟಪದ ಒಂದು ಗೊಂಬೆಯನ್ನು ತೋರಿಸಿದೆಯಲ್ಲ. ಅದನ್ನು ನಟ್ಟ ಮೊರೆಯ ರಾಜ್ಯಭಾರ ಶುರುವಾಯಿತು. ಆ ಕಾಲಕ್ಕೆ - ಈ ದೇವರನ್ನು ಕಂಡು ನಗುವಂಥ ಮಂದಿಯೂ ಹೆಚ್ಚಿದರು. ಊರಿನ ಬಹಳ ಮಂದಿ ತಮ್ಮ ಜಾತಿ ಬಿಟ್ಟರು; ಇನ್ನೊಂದು ಜಾತಿ ಹಿಡಿದರು. ಕೆಲವರು 'ಅದೂ ನಿಜ; ಇದೂ ನಿಜ' ಎಂದರು.

ಕೇವಲ ಮೂರು ನಾಲ್ಕು ತಲೆಮಾರಿನೊಳಗೆ ಏನೇನಲ್ಲ ಆಯಿತು, ಹೋಯಿತು. ಈ ಶಿವನಿಗೆ ಹೊತ್ತು ಹೊತ್ತಿಗೆ ಪೂಜೆ ಮಾಡುವ ಬ್ರಾಹ್ಮಣರೇ ಇಲ್ಲದೆ ಹೋದರು. ದೇವರಿಗೆ ಯಾವ ಪೂಜೆಯೂ ಬೇಕಿಲ್ಲ ಎಂಬುದು ನಿಜ. ನಾವು ಹೊಗಳಿ, ಅವನನ್ನು ಮರುಳುಗೊಳಿಸುವ ಕಾಲ ಅಷ್ಟರಲ್ಲೇ ಇದೆ" ಎಂದರು; ಸುಮ್ಮನಾದರು.

ಮುಂದೆ ಮಾತು ಬಾರದ್ದನ್ನು ಕಂಡು "ಹಾಗಾದರೆ, ಮುಂದೆ ಇಷ್ಟೆಲ್ಲ ದೊಡ್ಡ ಗುಡಿ ಆಯಿತು ಹೇಗೆ? ಸದ್ಯ ಅದನ್ನು ನೋಡಿಕೊಳ್ಳುವವರಿಗೆ ದಿಕ್ಕಿಲ್ಲ. ಆದರೂ ನೀವು ಹೇಳಿದ್ದು ನಿಜವಾದರೆ, ಹಳೆಯ ಗುಡಿಯ ಪಂಚಾಂಗವೊಂದು ಉಳಿಯುತ್ತಿತ್ತೋ ಏನೋ" ಎಂಬ ಸಂಶಯವನ್ನು ಸೂಚಿಸಿದೆ. ಮಾತನಾಡಲಿಲ್ಲ ಅವರು; ನನ್ನ ಪ್ರಶ್ನೆಗೆ ಉತ್ತರವನ್ನೂ ಹೇಳಲಿಲ್ಲ. ಅನಂತರ "ಇಲ್ಲೆಲ್ಲೋ ಒಂದು ವಾಲ ಮಂಟಪ ಇದೆಯಲ್ಲ" ಎಂದರು.

"ಅಜ್ಜಿ, ನೀವು ಕೂತದ್ದೇ ಅದರ ಕಟ್ಟೆಯಲ್ಲಿ. ಅದರ ಮಾಡು ಬಿದ್ದು ಹೋಯಿತು ಅಂದೆನಲ್ಲ. ಅದೇ ಓಲಗದ ಮಂಟಪವೇ ಇದು, ನಾವು ಕೂತದ್ದು" ಎಂದೆ.

"ಹಾಗೆ ಹೇಳು; ಈಗಲಾದರೆ ಒಂದಕ್ಕೊಂದು ಹೊಂದಿಕೆ ಕಾಣಿಸುತ್ತದೆ. ಇದರದ್ದೇ ಒಂದು ಕತೆಯಿದೆ. ಶಿವನ ಗುಡಿ ಹಾಳುಬಿದ್ದ ಆ ಕಾಲಕ್ಕೆ - ಇಲ್ಲಿನ ದೊರೆ, ಅದೆಂಥಮೋ ಜಾತಿಯೆಂದೆಯಲ್ಲ ನೀನು, ಆ ಜಾತಿಯವ ಬಂದ. ಅವನ ಊರು ಇಲ್ಲಿಂದ ತೆಂಕು ಮೂಡಿನ ದೂರದ ಊರಪ್ಪ; ಯಾವ ಸುಟ್ಟ ಹೆಸರೋ ಅದರದ್ದು. ಅವನ ಹಿರಿಯರೇ, ನಾವು ಬರುತ್ತ ಕಂಡೆವಲ್ಲ, ಆ ಹಾಡಿಯಲ್ಲಿನ ವಿಷ್ಣುಮೂರ್ತಿಯನ್ನು ಕಿತ್ತು, ಇನ್ನೊಂದು ದೇವರನ್ನು ನಟ್ಟವರು. ಆ ಅರಸು ಆಗಾಗ ಇಲ್ಲಿಗೂ ಬಂದು ಹೋಗುತ್ತಿದ್ದ. ಒಂದು ದಿವಸ ನೋಡು - ಅದೇ ಅರಸನ ಎರಡನೆಯ ಹೆಂಡತಿಗೆ ಕಠಿಣ ಅಂದರೆ ಕಠಿಣ ಕಾಯಿಲೆಯಾಯಿತು. ಅಂತಿಂಥ ಕಾಯಿಲೆಯಲ್ಲ. ಕಾಣಿಸುತ್ತಿದೆ, ನನಗವಳ ಮುಖ. ಈಗಲೋ, ಇನ್ನೊಂದು ಗಳಿಗೆಗೋ ಅನ್ನುವ ಹಾಗಿದ್ದಾಳೆ. ಮದ್ದು, ಮಾಟ ಮಾಡಿ, ಮಾಡಿ ಬೇಸತ್ತರು. ಅವಳು ಅವನ ಎರಡನೇ ಹೆಂಡತಿ; ಆದರೆ ತುಂಬ ಮೆಚ್ಚಿನವಳು. ಅವಳಿಗೇ ಬಂತು ಕಾಯಿಲೆ. ಅವಳು ತುಂಬ ಚಂದ; ಒಳ್ಳೆಯ ಪ್ರಾಯ. ಕಾಯಿಲೆ ಬರುತ್ತಲೇ ಅರಸು ಕಂಗಾಲಾದ. ಈ ಗಳಿಗೆಯಲ್ಲಿ ಯಾರೋ ಆಪ್ತರು ಬಂದು ಅವನ ಕಿವಿಗೆ ಹಾಕಿದರೆಂದು ಕಾಣುತ್ತದೆ - ಹಿಂಡುಗಾನದ ಆಸುಪಾಸಿನಲ್ಲಿಯೇ ಒಬ್ಬರು ಭಾರೀ ದೊಡ್ಡ ಋಷಿಗಳಿದ್ದಾರೆ, ಸತ್ತವರನ್ನು ಬದುಕಿಸುವ ತ್ರಾಣ ಅವರಿಗಿದೆ ಎಂತ, ಸುದ್ದಿಯನ್ನು ಕೇಳಿ ಅರಸ ಕುದುರೆಯ ಮೇಲೆ ಕೂತುಕೊಂಡು, ಈ ಊರಿಗೆ ಬಂದು, ಮುಂದೆ ಇದೇ ದಾರಿಯಾಗಿ ಹಿಂಡುಗಾನಿಗೂ ಹೋದ. ಆಗ ಏನನ್ನುತ್ತೀಯ! ನಾನು ಒಂದು ದಿನ ಹೇಳಿದೆನಲ್ಲ... ಅಲ್ಲಿ ನೂರಾರು ಬೈರಾಗಿಗಳು ಇರುತ್ತಿದ್ದರು. ಅವರ ಮೈ ಬೂದಿ; ತಲೆ ತುಂಬ ಜಡೆ. ಅವರಿಗೆ ಅರಿವೆ ಇದ್ದರುಂಟು; ಇಲ್ಲದಿದ್ದರಿಲ್ಲ. ಅವರು ಭೈರವನ ಭಕ್ತರು.

ಹಗಲಲ್ಲಿ ನಿದ್ರೆ ಅವರಿಗೆ; ರಾತ್ರಿಗೆ ಪೂಜೆ, ಸ್ಮಶಾನ ಎಂದರೆ ಮನೆಯಿದ್ದ ಹಾಗೆ. ಅವರ ಗುರು ಕಾಣಿಸುತ್ತಿದ್ದಾನೆ ನನ್ನ ಕಣ್ಣಿಗೆ; ಕರ್ರಗಿನ ಠೊಣೆಯ; ಅವನೂ ಬೂದಿ ಬಡುಕನೇ; ಅವನನ್ನು ಸಣ್ಣ ಮಕ್ಕಳು ಕಂಡರೆ ಕಿರುಚಿ ಓಡಬೇಕು. ಆ ಗುರುವಿನ ಕೈಯಲ್ಲಿ ದೊಡ್ಡದೊಂದು ಕಬ್ಬಿಣದ ತ್ರಿಶೂಲವಿದೆ. ಕುಡಿಯುವ ನೀರಿಗೆ ಅವನು ಹಿಡಿಯುತ್ತಿರುವ ಪಾತ್ರೆ ಗೊತ್ತೇ - ನರಮನುಷ್ಯನ ತಲೆಯೋಡು!"

"ಕಪಾಲಿಕರ ಗುರುವೇ? ಕಪಾಲಿಕರು ಅಂತಿದ್ದರಂತೆ - ಹಿಂದೆ. ಕಾಳ ಭೈರವನ ಭಕ್ತರು."

"ಭಕ್ತರು ಗಿಕ್ತರು - ಅದೆಲ್ಲವೂ ಸಮವೇ. ಆದರೆ ನೋಡು, ಅವರ ಪೂಜೆಯ ಬಗೆ ಒಂದು ಚೂರೂ ನನಗೆ ಅರ್ಥವಾಗುವುದಿಲ್ಲ. ತಪಸ್ಸು, ಅಷ್ಟಸಿದ್ಧಿ ಅನ್ನುತ್ತಾರೆ ನಿಜ. ಅದಕ್ಕೆ ರಾತ್ರಿಯೇ ಯಾತಕ್ಕೆ ಬೇಕು? ರಾತ್ರಿಯಲ್ಲೇ ಎಲ್ಲ, ಏನೇನೋ ಮಂಡಲವನ್ನು ಬರೆಯುತ್ತಾರೆ; ಹೋಮ ಮಾಡುತ್ತಾರೆ; ಹ್ರಾಂ ಹ್ರೀಂ ಅನ್ನುತ್ತಾರೆ; ಕಣ್ಣುಮುಚ್ಚಿ ಧ್ಯಾನ ಮಾಡುತ್ತಾರೆ. ಅದರ ಮೇಲೆ ಆ ಕಪಾಲದಲ್ಲಿ ಹೆಂಡ ತುಂಬಿಸಿಕೊಂಡು ಕುಡಿಯುತ್ತಾರೆ. ಹೆಣ್ಣುಗಳೂ, ಗಂಡುಗಳೂ ಕೂಡಿಯೇ ಭೈರವನ ಪೂಜೆ ಮಾಡುತ್ತಾರೆ. ಅವರೆಲ್ಲ ಶಿವನಿಗೆ ಶಿವ ಎನ್ನುವುದು ಕಡಿಮೆ. ಕಾಳಭೈರವನಂತೆ ಅವನು. ಜನರೇ ಶಿವನನ್ನು ಹಾಗೆ ಕರೆದ ಮೇಲೆ, ಅವನು ಒಪ್ಪಿಕೊಳ್ಳದೆ ಏನು ಮಾಡಿಯಾನು?"

"ಅವರು ಮಾಡುವ ಪೂಜೆ ಎಂಥಾದ್ದು? ಯಾತಕ್ಕೆ?"

"ಯಾಕೆನ್ನಲಿ? ಅವರು ದೇವರನ್ನು ಕಾಣುವ ದೃಷ್ಟಿಯೇ ಒಂದು ತೆರ. ನನಗೆ ಯಾಕೋ ಅದು ಏನೇನೂ ಒಗ್ಗುವುದಿಲ್ಲ. ಆ ಶಿವ ಉಮೆಯನ್ನು ಹೆಂಡತಿಯನ್ನಾಗಿ ಮಾಡಿಕೊಂಡ. ಲೆಕ್ಕಾಚಾರದಲ್ಲಿ ಅವನು ವಿರಕ್ತ - ಅಂತ. ಆದರೆ ಇವರ ಲೆಕ್ಕ ಬೇರೆಯೇ ಇದೆ. ಇವರ ಆಸೆ - ಉಮೆಯಂಥ ಒಂದು ಚೆಂದದ ಹೆಣ್ಣಿನೊಡನೆ ತಮಗೆ ಯಾವತ್ತು ಕಾಲವೂ ಸುಖ ಭೋಗ ಸಿಗಬೇಕು - ಎಂದಿದೆ. ಅಯ್ಯೋ ಕರ್ಮವೇ! ಅದಕ್ಕೆ ಇಷ್ಟೆಲ್ಲ ಬೇಕೇ ಅನಿಸುತ್ತದೆ. ನನ್ನ ಅಂದಾಜು ಇಷ್ಟೆಲ್ಲ ಮಂತ್ರಸಿದ್ಧಿ, ಮಾಯ, ಮಾಟ ಮತ್ತೊಂದು ಮಾಡಿ, ಶಿವನ ಹಾಗೆಯೇ ತಾವು ಒಂದು ದಿನ ಆಧಿಪತ್ಯ ಮಾಡುವುದಕ್ಕೆ. ಆ ಆಧಿಪತ್ಯ ಯಾರ ಮೇಲೋ? ಯಾಕಾಗಿಯೋ?"

ಅವರು ಹೇಳತೊಡಗಿದ ಕತೆಯು ಸರಣಿ ತಪ್ಪಿತೆಂದು ತೋರಿದ್ದರಿಂದ ನಾನು "ಅಲ್ಲ ಅಜ್ಜಿ, ನೀವು ಆ ಜೈನ ಅರಸು ಏನು ಮಾಡಿದ ಎಂಬುದನ್ನು ಹೇಳಲಿಲ್ಲ. ಹಿಂದೆ ನಮ್ಮ ಹೆಮ್ಮಾಡಿಯಲ್ಲಿ ಜೈನ ಅರಸರು ಇದ್ದರಂತೆ. ಹುಂಬಚ್ಚದಿಂದ ಅವರು ಅಲ್ಲಿಗೆ ಬಂದರು ಅನ್ನುತ್ತಾರೆ."

"ಹೆಮ್ಮಾಡಿಯೋ, ಗುಡ್ಡಮ್ಮಾಡಿಯೋ ನನಗೆ ಅದೊಂದೂ ತಿಳಿಯದು. ಅವನು ಅರಸು. ಅವನು ಒಟ್ಟಾರೆ ಪರಿವಾರ ಸಮೇತ ಕಾಪಾಲಿಕರ ಗುರುವಿನ ಹತ್ತಿರ ಬಂದು ಅತ್ತ. 'ನಿಮಗೆ ಅಡ್ಡಬಿದ್ದೆ' ಎಂದು ಬೇಡಿದ. ಆ ಗುರು ಒಂದಷ್ಟು ಮಂತ್ರಿಸಿದ ಬೂದಿಯನ್ನು ಕೊಟ್ಟ; ಮತ್ತೇನೇನೋ ಹೇಳಿದನಪ್ಪ. ಅದನ್ನು ಹಾಗೆಯೇ ತೆಗೆದುಕೊಂಡು ಬಂದ ಅರಸು ತನ್ನ ಊರಿಗೆ ಹೊರಟುಹೋದ."

"ಹಾಗೆ ಹೋದ ಮೇಲೆ ಏನಾಯಿತು ಎಂಬುದು ಗೊತ್ತಾಗುವುದಿಲ್ಲ. ಆದರೆ ನೋಡು, ಇದೇ ತಾವಿನಲ್ಲಿ, ಇದೇ ಅಂದರೇನು? ಇದೇ ಸ್ಥಳ, ಆ ವಾಲ ಮಂಟಪ ಕಟ್ಟಿದ್ದೇ ಆ ಗುರುವನ್ನು ಕೂಡ್ರಿಸಿಕೊಂಡು, ಅವನ ಕಾಲು ತೊಳೆದು, ತೀರ್ಥ ತೆಗೆದುಕೊಳ್ಳಲಿಕ್ಕೆ! ಅದಕ್ಕೆ ಸೇರಿದ ಜನ ಕಾಣಿಸುತ್ತಾರೆ ನನ್ನ ಕಣ್ಣಿಗೆ. ಯಾವ ಅರಸನಿಗೂ ಅಷ್ಟು ಮರ್ಯಾದೆ ಸಿಕ್ಕಿರಲಾರದು. ಪ್ರಾಯಶಃ ಅವನು ಕೊಟ್ಟ ಬೂದಿಯಿಂದ, ಅವನ ಹೆಂಡತಿಯ ಜೀವ ಬಚಾವಾಗಿರಬೇಕು. ಅದನ್ನು ಕಂಡು ಅವನ ಮನಸ್ಸೂ ತಿರುಗಿತೇ! ಬಹಳ ಹಿಂದಿನ ಅವನ ಹಿರಿಯರು - ಬ್ರಹ್ಮ ವಿಷ್ಣು, ಶಿವರನ್ನು ನಂಬಿ ಬಂದವರು. ಆ ನಡುವಿನ ತಲೆಮಾರಿನವರು ನಾಲ್ಕು ದಿನಕ್ಕೆ ತಮ್ಮ ದೇವರನ್ನು ಬದಲಿಸಿದರು. ಈಗ ತಿರುಗಿ ಬದಲಿಸುವ ಹಾಗಿದೆ. ಅಂಗಿ ಕಳಚಿದಷ್ಟು ಸುಲಭ, ಜನಕ್ಕೆ ಮತ ಕಳಚಿಕೊಳ್ಳುವ ಚಟ. ಮೊಡ್ಡವರು ಮಾಡಿದ್ದನ್ನು ಕಂಡು ಉಳಿದವರೂ ಮಾಡುತ್ತಾರೆ. ಅಷ್ಟು ಸುಲಭದಲ್ಲಿ ನಂಬಿಕೆ ಕಳಚಿಕೊಳ್ಳಲಾರದವರ ಸಂಕಟ ಮಾತ್ರ ಹೇಳತೀರದ್ದು. ಅಲ್ಲವಾದರೆ ಏನಂತೆ? ನಾವು - ತಿಳಿದು ಮಾಡಿದ್ದು ಅವನಿಗೇ; ತಿಳಿಯದೇ ಮಾಡಿದ್ದೂ ಅವನಿಗೇ ಅಲ್ಲವೇ? ಅದು ಅವನಿಗೆ ಅಂದರೂ ಸರಿಯೇ; ಅವಳಿಗೆ ಅಂದರೂ ಸರಿಯೇ."

"ಮತ್ತೊಂದು ನೂರು ವರ್ಷಗಳ ಕಾಲ ಇಲ್ಲಿ ಎಷ್ಟೆಲ್ಲ ಕಾರುಭಾರು ನಡೆಯಿತು - ಅನ್ನುತ್ತೀಯಾ! ನೂರಾರು ಜನರು ಕೆಲಸ ಮಾಡಿದರು. ಹಳೆಯ ದೇವರ ಗುಡಿ ಜೀರ್ಣೋದ್ಧಾರ ಮಾಡಿದರು. ಶಿವ ಎಂಬ ಹೆಸರನ್ನು ಬಿಟ್ಟು ಭೈರವ ಅಂತ ಇಲ್ಲಿನ ದೇವರನ್ನು ಕರೆದರು. ಇದರ ಆಚೀಚೆ ಸಣ್ಣ ಸಣ್ಣ ದುರ್ಗಿ, ವೀರಭದ್ರರ ಗುಡಿಗಳೂ ಆದವು. ಈ ದೇವಸ್ಥಾನವೂ ಬಡಾಯಿಸಿತು. ಮಂಟಪ, ಅಂಬಲ, ಪಾಗಾರ, ಹಬ್ಬ, ಬೇಕು ಬೇಕಾದ್ದನ್ನು ಮಾಡಿಸಿದರು. ಭೈರಾಗಿಗಳ ತಂಡವೇ ಇಲ್ಲಿ ತುಂಬಿಕೊಂಡಿತು. ಅವರೂ ಮಾಡಿದ ಕೆಲಸ ಅದೇನೆ. ಚಾವಡಿ ತುಂಬ ಅವರೇ. ಮದ್ಯ, ಮಾಂಸ, ಭಂಗಿ, ಮತ್ತೊಂದು - ಯಾವಾಗ ನೋಡಿದರೂ ಅದೇ. ಹೀಗೂ ಒಂದು ಇದೆಯೇ? ನಂಬುವುದಕ್ಕೆ ಬರುವುದಿಲ್ಲಪ್ಪ. ಇಲ್ಲಿ ನಡೆದ ಒಂಮೊಂದು ಸಂಗತಿಯೂ ಕಾಣಿಸುತ್ತದೆ. ಇಲ್ಲಿ ಕುರಿ, ಕೋಣ ಕಡಿದದ್ದೂ ಉಂಟು; ಮುಂದೆ ಏನಾಯಿತೆಂದು ಗೊತ್ತಾಗುವುದಿಲ್ಲ. ಅವರ ಪಾಲಿನ ಗುರು ಹತ್ತು ಮಂದಿ ಶಿಷ್ಯರನ್ನು ಈ ಊರಲ್ಲಿ ಬಿಟ್ಟು, ತಾನು ದಿಗ್ವಿಜಯಕ್ಕೆ

ಹೊರಟ ಅಂತ ಕಾಣಿಸುತ್ತದೆ. ಆದರೆ ಹೋದವನು ಹಿಂದಕ್ಕೆ ಬರಲೇ ಇಲ್ಲ. ಅವನ ಶಿಷ್ಯರು ಮುಂದೆ ಐವತ್ತು, ನೂರು ವರ್ಷ, ಇಲ್ಲಿ ಭಂಗಿ ಕುಡಿದುಕೊಂಡು ದಿವಸ ಕಳೆದರು. ಮಂತ್ರ, ಮಾಟ ಮಾಡಿದರು. ಊರಿನ ಹೆಣ್ಣುಗಳ ಮೇಲೆ ಕಣ್ಣಿಟ್ಟರು. ಕ್ರಮೇಣ ಹಳೇ ಗುರು ಬಂದು ಬಿತ್ತಿದ ಮತದ ಮಾಯಕ ತನ್ನಂತೆಯೇ ಹೋಯಿತು. ಇಲ್ಲಿ ಸೇರಿದ ಜೋಗಿಗಳ ಉಚ್ಚಾಟನೆಯಾಯಿತು. ಅವರಿಗಾಗಿ ಅರಸು ಬಿಟ್ಟ ಉಂಬಳಿ, ಉತ್ತಾರ ತುಂಬಾ ಇದ್ದಿತ್ತು. ಅದಕ್ಕೊಂದು ಗತಿಯಾಗಬೇಕಲ್ಲ? ಕಡಲಿನ ಬದಿಯಿಂದ ಆರೇಳು ಬ್ರಾಹ್ಮಣರ ಕುಟುಂಬಗಳು ಇಲ್ಲಿಗೆ ಬಂದು, ಆಶ್ರಯ ಪಡೆದವು. ಇಲ್ಲಿದ್ದ ಬಳಿಕ, ಶಿವನ ಗುಡಿಗೆ ಪ್ರೋಕ್ಷಣೆ ಮಾಡಿ, ಶುದ್ಧ ಮಾಡಿ, ಅವರು ಪೂಜೆ ತೊಡಗಿದರು. ಶಿವನೇ ಮೊದಲು ಈಶ್ವರ ಅನಿಸಿದ್ದ, ಆಮೇಲೆ ಅವನು ಕಪಾಲೇಶ್ವರನಾದ. 'ಕಪಾಲ' ಎಂದರೆ ಏನು ಎಂದು ನಿನಗೆ ಗೊತ್ತಾಯಿತಲ್ಲ. ಆ ಗುರುವಿನ ಕೈಯಲ್ಲಿದ್ದ ತಲೆಯೋಡು, ಶಿವನಿಗೂ ಉಂಟಪ್ಪ ಅಂಥ ಬಿರುದು. 'ರುಂಡಮಾಲಿ' ಅನ್ನುತ್ತಾರಲ್ಲ ಅವನನ್ನು."

"ಆಮೇಲೆ ಒಂದೇ ರೀತಿ ನಡೆದುಕೊಂಡು ಬಂದಿತು. ಬಂದ ಭೈರಾಗಿಗಳ ಹಿಂಡು ಹೋಯಿತು. ಅವರಿಗೆ ಜೋಗಿಗಳೋ ಗೀಗಿಗಳೋ ಎಂದು ಹೆಸರಿದ್ದಿರಬೇಕು. ಅವರೆಲ್ಲರೂ ಹಟಯೋಗಿಗಳು. 'ಯೋಗಿ'ಯೇ ಹೋಗಿ ಜೋಗಿಯಾಯಿತೋ ಏನೋ. ಅವರೆಲ್ಲರೂ ಹೊರಗಿನಿಂದ ಬಂದವರು. ಆಮೇಲೆ ಇದೇ ಊರಿನಲ್ಲಿ ಉಳಿದವರೆಂದರೆ ಈ ಊರಿನ ಜೋಗಿಗಳು. ನಮ್ಮಲ್ಲಿ ಇವತ್ತು ಮಾತ್ರ ಅವುಗಳ ಕುಲ ಮದ್ದಿಗೂ ಸಿಗಲಾರದು."

ಅಷ್ಟರಲ್ಲಿ, ದೇವರ ಗುಡಿಯಿಂದ ಘಂಟಾನಾದ ಒಂದೇ ಸಮನೆ ಕೇಳಿಸತೊಡಗಿದ್ದರಿಂದ, ನಾನು ಅವರನ್ನು ಕರೆದುಕೊಂಡು, ಗುಡಿಯ ಬಾಗಿಲ ಬಳಿಗೆ ಹೋಗಿ, ಕೈಜೋಡಿಸಿ ನಿಂತೆ. ಅಜ್ಜಿ ನನ್ನ ಜತೆಗೆ ಬರಿದೆ ನಿಂತಿದ್ದರು. ಅವರ ತುಟಿ ಒಂದೇ ಸಮನೆ ಗೊಣಗುತ್ತಿತ್ತು. ಇನ್ನೂ ಅವರು ತಮ್ಮ ಮನಸ್ಸಿನಲ್ಲಿ ಯಾವ್ಯಾವುದೋ ದೃಶ್ಯಗಳನ್ನು ಕಾಣುತ್ತಿರಬೇಕು - ಎಂದು ಅನಿಸಿತು. ಅದರಿಂದ ಹೊಸ ಪ್ರಮಾದವೇನಾದರೂ ಉಂಟಾದರೆ - ಎಂಬ ಭಯವಾಗಿ "ಅಜ್ಜಿ, ನಿಮಗೆ ನಿಂತು ನಿಂತು ದಣಿವಾದೀತು; ಸೀತೆ ಬರುತ್ತ ಪ್ರಸಾದ ತಂದಾಳು. ನಾವು ಸ್ವಲ್ಪ ಆ ಕಡೆ ಹೋಗಿ ಕುಳಿತುಕೊಳ್ಳುವ" ಎಂದು ಅವರನ್ನು ಅಂಬಲಕ್ಕೆ ಕರೆದುಕೊಂಡು ಬಂದೆ. ನಾವು ಹಾಗೆ ಬಂದು ಹೋದುದನ್ನು ಸೀತೆಯೂ ಕಂಡಿದ್ದಳು. ದೇವರಿಗೆ ಮಂಗಳಾರತಿ ಮುಗಿದು, ಬಂದ ಎಲ್ಲರಿಗೂ ಪ್ರಸಾದವನ್ನು ಕೊಟ್ಟಾದ ಮೇಲೆ, ಅವಳೂ ಹೊರಕ್ಕೆ ಬಂದು ನಮ್ಮನ್ನು ಕೂಡಿಕೊಂಡಳು. ನಾವೆಲ್ಲರೂ ಮನೆಯ ಕಡೆಗೆ ಹೊರಟೆವು. ದಾರಿಯಲ್ಲಿ ಬರುತ್ತ ನನ್ನ ಕಿಟ್ಟಣ್ಣ "ಅಪ್ಪ, ಓಕುಳಿ ಹೊಂಡಕ್ಕೆ ನೀರು ತುಂಬಿಸುವುದು ಯಾವಾಗ?" ಎಂದು ಪ್ರಶ್ನೆ ಮಾಡಿದ.

"ಓಕುಳಿ ಹೊಂಡವೇ? ಅದರದ್ದೇ ಒಂದು ತಮಾಷೆ" ಎಂದರು ನಮ್ಮ ಅಜ್ಜಿ. ಸೀತೆಯ ಕಿವಿಗೂ ಆ ಮಾತು ಬಿತ್ತೋ ಏನೋ; ಅವಳು "ಬೇಗನೆ ಹೋಗುವ, ಹೋಗಿ ಇನ್ನು ಅಡಿಗೆಯಾಗಬೇಡವೆ" ಎಂದುದರಿಂದ ತುಸು ಚುರುಕಿನಿಂದಲೇ ಮನೆಯ ಕಡೆಗೆ ಹೊರಟೆವು. ಸೀತೆ ಮನೆಗೆ ಬಂದು, ಕಡುಬು, ಪಾಯಸಗಳನ್ನು ಮಾಡಿ ಬಡಿಸಿದ ಮೇಲೆ ನನ್ನ ಶಿವರಾತ್ರಿಯ ಜಾಗರಣೆ ಪೂರ್ಣವಾಯಿತು. ಅಂದರೆ, ನಮ್ಮ ಹಳ್ಳಿಯಲ್ಲಿ ಶಿವರಾತ್ರಿಯಲ್ಲಿ ಇತರರ ಮನೆಗೆ ಕಲ್ಲೆಸೆಯುವ ವಾಡಿಕೆಯೂ ಇಲ್ಲ. ಬೈಂದೂರು, ಕುಂದಾಪುರ ಪೇಟೆಗಳಲ್ಲಾದರೆ ನಾಲ್ಕು ಮಕ್ಕಳು ಅಷ್ಟು ಕೆಲಸ ಮಾಡುತ್ತವೆ. ಶಿವರಾತ್ರಿಯ ದಿನ ನಿದ್ದೆ ಹೋಗಿ ಮೈಮರೆಯುವವರನ್ನು ಮನೆಯ ಮಾಡಿಗೆ ಕಲ್ಲೆಸೆದೇ ಎಚ್ಚರಿಸುತ್ತಾರೆ. ಆ ಭಾಗ್ಯ ನನಗೆ ಸಿಗಲಿಲ್ಲವಾದರೂ, ಹಗಲೆಲ್ಲ ಸಾಕಷ್ಟು ತಿಂದು, ಉಪವಾಸ ಮಾಡಿ, ರಾತ್ರಿ ಹೊಟ್ಟೆ ತುಂಬ ಕಡುಬು, ಪಾಯಸ ತಿಂದದ್ದಾದರೆ ಮತ್ತೇನಾಗಬೇಕು? ಹೊಟ್ಟೆಯಲ್ಲಿ ಮೊಡ್ಡ ಶಿವಲಿಂಗವೇ ಸ್ಥಾಪನೆಯಾದ ಹಾಗಿರುತ್ತದೆ. ರಾತ್ರಿ ಮಲಗಿಕೊಂಡರೆ ಬೆಳಗ್ಗಿನ ತನಕ ದುಃಸ್ವಪ್ನಗಳೇ. ಅಜ್ಜಿಯ ಕಣ್ಣಿಗೆ ಹತ್ತು ಕಾಪಾಲಿಕರು ಕಾಣಿಸಿದ್ದರೆ ನನ್ನ ಕಣ್ಣಿಗೆ ಸಾವಿರ ಜನ ಕಾಣಿಸಿದರು. ಅವರು ಕುಡಿದರು, ಕುಣಿದರು, ಬೆಂಕಿ ಒಟ್ಟಿದರು. ಮಂಡಲವನ್ನು ಬರೆದರು, ಮಂತ್ರ ಹೇಳಿದರು, ಆರ್ಭಟೆ ಮಾಡಿದರು. ಬುದ್ಧಿ ಸ್ವಯವಿಲ್ಲದವರ ಹಾಗೆ ಏನೇನೆಲ್ಲ ಮಾಡಿದರು! ಗಂಡು, ಗಂಡು ಎಂಬ ವಿವೇಕವನ್ನು, ಹೆಣ್ಣು, ಹೆಣ್ಣು ಎಂಬ ವಿವೇಕವನ್ನು ಕಳೆದುಕೊಂಡವರಂತೆ ವರ್ತಿಸಿದರು. ಆಮೇಲೆ ನಮ್ಮ ಮನೆಯನ್ನು ಸುತ್ತುವರಿದು, ಕಿರಿಚಿ, ಬೊಬ್ಬಿರಿದು, ಬಾಗಿಲನ್ನು ಮುರಿದು ಮನೆಯ ಒಳಕ್ಕೆ ಹೊಕ್ಕು, ಮಲಗಿದ ನನ್ನನ್ನು ದರದರನೆ ಎಳೆದುಕೊಂಡು ಹೋದರು - ಕಪಾಲೇಶ್ವರನ ಗುಡಿಯ ತನಕ. ಓಲಗ ಮಂಟಪ ಇದ್ದಲ್ಲಿಯೇ ಒಂದು ಬಲಿಪೀಠವಿತ್ತು. ಅದರಲ್ಲಿ ಒಂದು ಕಂಬಕ್ಕೆ ನನ್ನನ್ನು ಬಿಗಿದು, ನನ್ನ ತಲೆಯನ್ನು ಚಂಡಾಡುವುದಕ್ಕೆ ಸಿದ್ಧರಾದಂತೆ ಕಾಣಿಸಿತು. ನಾನು ಭಯಗೊಂಡು "ಅಜ್ಜೀ, ಅಜ್ಜೀ" ಎಂದು ಬೊಬ್ಬಿಟ್ಟೆ. ಅಡುಗೆ ಮನೆಯನ್ನು ಹೊಕ್ಕ ಸೀತೆ ನನ್ನ ಧ್ವನಿ ಕೇಳಿ ಧಾವಿಸಿ ಬಂದಳು. ತಮ್ಮ ಕೋಣೆಯಿಂದ ಅಜ್ಜಿಯೂ ಅವಸರಿಸಿ ಓಡಿ ಬಂದರು. "ಎಂಥದು ಮಾಣಿ, ಯಾಕೆ ಕಿರಿಚುತ್ತೀಯ?" ಎಂದರು. ನಾನಿನ್ನೂ ಕಿರಿಚುತ್ತಲಿದ್ದೆ. ಆದರೆ, ಒಮ್ಮೆಗೇ ಸ್ವರ ಹೊರಡಿಸಲಿಕ್ಕೆ ತ್ರಾಣವಿರಲಿಲ್ಲ. ನನ್ನನ್ನು ಬಿಗಿದು ಕಟ್ಟಿದ್ದಾರೆ. ಸೀತೆ ನನ್ನ ಬಳಿಗೆ ಬಂದು, ನನ್ನನ್ನು ಮುಟ್ಟಿ ಅಲುಗಾಡಿಸಿ "ಬೆಳಗಾದದ್ದು ಗೊತ್ತಾಗುವುದಿಲ್ಲವೇ?" ಎಂದು ಕೇಳಿದ ಮೇಲೆಯೇ ನನಗೆ ಪುನರ್ಜನ್ಮ ಬಂದುದು. ಅದನ್ನೆಲ್ಲ ನೆನೆದುಕೊಂಡರೆ ಆ ಹಾಳು ಕಾಪಾಲಿಕರ ರಾಜ್ಯದಲ್ಲಿ ನನ್ನ ಹಿರಿಯರಲ್ಲಿ ಯಾರಾದರೂ ಬದುಕಿ ಉಳಿಯುತ್ತಿದ್ದರೆ ಅವರಿಗೆ ಏನಾಗುತ್ತಿತ್ತೋ - ಎಂಬ ಯೋಚನೆಯೂ ಬಂದಿತು. ಮರುದಿವಸ ಮಧ್ಯಾಹ್ನ ಊಟ ಮಾಡಿದವನು ಒಂದಷ್ಟು ನಿದ್ದೆ ಮಾಡಿ ಮುಗಿಸಿದ ಮೇಲೆಯೇ ನಾನು ನಾನಾದದ್ದು. ಅಲ್ಲಿಯ ತನಕವೂ,

ಹಗಲಿನಲ್ಲಿಯೂ ಕೂಡ ಕಾಪಾಲಿಕರ ಭಯ ಅಂಟಿತ್ತು. ರುಂಡಮಾಲೆ, ತಲೆಯೋಡು, ಮಸಣ, ವಿಭೂತಿ ಇವೇ ಹಗಲುಗನಸುಗಳು ಕಾಡಿದವು. ಇವುಗಳ ಜತೆಗೆ ಓಕುಳಿ ಹೊಂಡದ ನೆನಪೂ ಬರುತ್ತಿತ್ತು. ಅಜ್ಜಿಯು ಅಶ್ವತ್ಥದ ಕಟ್ಟೆಯ ಕಡೆಗೆ ಸರಿದದ್ದನ್ನು ಕಂಡು, ಅವರ ಬಳಿಗೆ ಹೋಗಿ "ಇನ್ನು ನಿಮ್ಮನ್ನು ಬಹಳ ಕಾಡುವುದಿಲ್ಲ; ಆ ಓಕುಳಿ ಹೊಂಡದ ಕತೆಯೊಂದನ್ನು ಹೇಳಿ ಮುಗಿಸಿ" ಎಂದು ಕೇಳಿದೆ.

ಅವರು "ನಾನು ಹೇಳಿದ್ದೆಲ್ಲವೂ ಕತೆಯೆಂಬ ಲೆಕ್ಕವೋ ನಿನಗೆ? ಕತೆಯಾಗಿ ಕಂಡೀತು ನಿಜ; ಹೇಳುತ್ತೇನೆ; ಬಾ ಕುಳಿತುಕೋ" ಎಂದರು. ಅನಂತರ ಹೇಳತೊಡಗಿದರು.

"ನಿನ್ನೆಯೇ ಹಾಗೆ ಕಾಣಿಸಿದ್ದು ನನಗೆ - ಓಕುಳಿ ಹೊಂಡದ ಮುಂದೆ ಕುಳಿತಾಗ, ಓಲಗದ ಚಾವಡಿಯಲ್ಲಿ ಅಂತ ತಿಳಿಯಬೇಡ. ಹಿಂದೆ ಎರಡು, ಮೂರು ಸಾರಿ ಅಲ್ಲಿಗೆ ಹೋದಾಗ ಅಂಥದೇ ಚಿತ್ರ ಕಾಣಿಸಿತ್ತು. ಅದೇ ನಿಜ ಇರಬೇಕು. ನೋಡು ಮಗು, ನಮ್ಮೂರಿನಲ್ಲಿರುವ ನಮ್ಮ ಬಡೆಯ, ಕಿಟ್ಟ, ಗೋವಿಂದ - ಇವರೆಲ್ಲರೂ ಯಾವ ಜಾತಿಯವರು ಹೇಳು?" ಎಂದು ಪ್ರಶ್ನಿಸಿದರು.

"ಮೊಗೇರರಲ್ಲವೇ?"

"ಮೊಗೇರರಿಗೆ ಈ ಊರಿನಲ್ಲೇನು ಕಸುಬು? ಅವರ ಹುಟ್ಟು ಕಸುಬು ಬೇಸಾಯವಲ್ಲ. ಅವರು ಕೆಲವು ತಲೆಮಾರುಗಳಿಂದಲೂ ಇಲ್ಲಿಗೆ ಬಂದು ನಟ್ಟು, ಬೇಸಾಯ ಮಾಡುತ್ತಿದ್ದಾರೆ ನಿಜ. ಅವರ ಹಿರಿಯರು ಇಲ್ಲಿನವರಲ್ಲ. ಅವರು ಪಡುವಣ ಬೈಂದೂರು ಕಡೆಯವರು. ಅವರೆಲ್ಲರೂ ಕಡಲ ಬದಿಯವರು. ಮೊದಲಿನಿಂದಲೂ ಅವರ ಕೆಲಸ ಮೀನು ಹಿಡಿಯುವುದು. ಭೂದೇವಿ ಅವರ ದೇವರಲ್ಲ; ಕಡಲದೇವಿ ಅವರ ದೇವರು. ಅವರಿಗೆ ಅನ್ನ ಕೊಡುವವಳು ಅವಳಲ್ಲವೇ? ದೇವರೆಂಬ ಮಾತು ಅಷ್ಟಕ್ಕೇ ಬರುತ್ತದೆ ಅನ್ನು. ಹುಟ್ಟಿಸಿದವನು ದೇವರು; ಹೊಟ್ಟೆಗೆ ಹಾಕುವವನೂ ದೇವರು. ಯಾವುದೋ ಒಂದು ದಿವಸ ಅವರ ಊರಿನ ಸುತ್ತುಮುತ್ತಲೂ ಮೈಲಿಗೆ ರೋಗ ಹಬ್ಬಿಕೊಂಡಿತು. ಅದು ಕುಲದ ಒಂದೇ ಒಂದು ಪಿಳ್ಳೆ ಇಲ್ಲದ ಹಾಗೆಯೂ ಮಾಡಿತು. ಆಗ ಎಷ್ಟು ಜನರು ಸತ್ತರು ಮೈಲಿಗೆಯಿಂದ, ಅನ್ನುವುದಕ್ಕಿಲ್ಲ. ಊರಿನ ಅಮ್ಮನವರಿಗೆ ಕುರಿ, ಕೋಳಿ, ಹೇಳಿಕೊಂಡರು. ಶಿರ್ಸಿಯ ಅಮ್ಮನಿಗೂ ಹರಕೆ ಹೊತ್ತರು. ವರ್ಷ ಕಳೆದರೂ ಊರಲ್ಲಿ ಬೇನೆ ಕಳೆಯಲಿಲ್ಲ. ಆ ಕಾಲದಲ್ಲಿ ಬೇರೆ ಉಪಾಯವೇ ಕಾಣದೆ, ಅಳಿದುಳಿದ ಗಂಡಸರೂ, ಹೆಂಗಸರೂ ಮೂಡಿನ ಊರಿಗೆ ಹೊರಟು ಬಂದರು. ಆ ಕಾಲಕ್ಕೆ ನಮ್ಮ ಈ ಊರು ಮೊಡ್ಡ ಪಟ್ಟಣ; ಸಾವಿರಾರು ಮನೆಗಳಿದ್ದ ಒಂದು ಮೊಡ್ಡ ಊರಾಗಿತ್ತು. ಅದೇ ಕಾಲಕ್ಕೆ ಹಿಂಡುಗಾನ ಅಮ್ಮ ಸಹ ಕೊಲ್ಲೂರು ಮೂಕಾಂಬಿಕೆಯಷ್ಟೇ ಪ್ರಸಿದ್ಧಿಯಾದವಳು. ಅಂತು, ಅವರೆಲ್ಲ ಈ ಊರಿಗೆ ಓಡಿ ಬಂದರು. ಇಲ್ಲೊಬ್ಬ ಪಾಳೆಯಗಾರನಿದ್ದ. ಯಾವುದೋ

ಅರಸನ ಕೆಳಗೆ. ಆಗಿನ ಕಾಲಕ್ಕೆ ನೋಡು ಮಾಣಿ, ನಾಲ್ಕು, ಎಂಟು ಗ್ರಾಮಗಳಿಗೆ ಒಬ್ಬ ಅರಸು ಅನ್ನು. ಇಡಿಯ ಅರಸು; ತುಂಡರಸು. ಮೂಡೂರಿನ ಅರಸು ಒಬ್ಬ ತುಂಡರಸು. ಅವನ ದಂಡಿಗೆ ಸೇರುವ ಜನರು ಬೇಕಾಗಿತ್ತು. ಅವನ ದಂಡನ್ನು ಹೊರಗಿಂದ ಬಂದ ಈ ಗಟ್ಟಿಮುಟ್ಟಿನ ಜನ ಸೇರಿಕೊಂಡರು. ಹಾಗೆಯೇ ವರ್ಷಗಳು ಕಳೆದವು. ಅವರೆಲ್ಲ ಸ್ವಂತ ಊರನ್ನು ಬಿಟ್ಟು ಬಂದರೂ ತಮ್ಮ ಊರಿನ ದೇವರನ್ನು ಮರೆಯಲಾಗಲಿಲ್ಲ. ಕಡಲ ದೇವರನ್ನು ಹೇಗೆ ಮರೆತಾರು? ಈ ಕಪಾಲೇಶ್ವರನ ಗುಡಿ ಆಗ ಭೈರವನ ಗುಡಿಯೂ ಆಗಿರಲಿಲ್ಲ. ಬರಿ ಒಬ್ಬ ಈಶ್ವರನ ಗುಡಿಯಾಗಿ ಹಾಳು ಬಿದ್ದಿತ್ತು. ಅದರ ಸುತ್ತುಮುತ್ತೆಲ್ಲ ಈ ದಂಡಿನವರ ಕುಲದ ಜನರ ಬಿಡಾರ. ಇಲ್ಲಿಗೆ ಬಂದವರು ಕಡಲ ದೇವರಿಗೂ ಒಂದು ಆಕಾರ ಕೊಟ್ಟರು. ನಾವು ಸಮುದ್ರಕ್ಕೆ ವರುಣನೇ ದೇವರು ಅನ್ನುವುದಿಲ್ಲವೇ? ಹಾಗೆಯೇ ಇವರು ಸಹ ಒಂದು ಮರದ ಬೊಂಬೆಯನ್ನು ಮಾಡಿ - ಮಾಣಿ, ಜಟ್ಟಿಗರ ಬೊಂಬೆಗಳನ್ನು ನೆಡುವ ಹಾಗೆ, ಆ ದೇವಸ್ಥಾನದ ಹೊರಗಿನ ಮೂಲೆಯಲ್ಲಿ ತಂದು ನೆಟ್ಟರು. ಅದರ ಎದುರಿಗೆ ಒಂದು ಮೊಡ್ಡ ಹೊಂಡವನ್ನು ಅಗೆದರು. ವರ್ಷದಲ್ಲಿ ಒಂದು ದಿವಸ ಅದಕ್ಕೆ ನೀರನ್ನು ಹೊತ್ತು ತಂದು, ತುಂಬಿಸಿ, ಅದಕ್ಕೆ ಪೂಜೆ ಮಾಡಿ, ಹಾಡಿ, ಕುಣಿದು, ಆಡಿದರು. ಓಕುಳಿ ಹೊಂಡದ ಮೂಲ ಅದು. ಅವರ ದೇವರ ಹೆಸರು 'ಹೌಂದ್ರಾಯ' ಅಂತ. ಅವರ ಹಿಂದಿನವರು ಸಮುದ್ರ ದೇವರ ಪೂಜೆ ಮಾಡಿ, ಮಳೆಗಾಲದ ಕೊನೆಯಲ್ಲಿ ಬಲೆ ಬೀಸಲಿಕ್ಕೆ ಕಡಲಿಗೆ ಹೋಗುತ್ತಿದ್ದರು. ಇಲ್ಲಿ ಕಡಲು ಹತ್ತಿರದಲ್ಲಿ ಇಲ್ಲವಲ್ಲ. ಇಲ್ಲೇ ಒಂದು ಹೊಂಡ ಮಾಡಿ ಅವರು ಅದನ್ನೇ ಸಮುದ್ರ ಎಂದು ಕರೆದರು. 'ಹೌಂದ್ರಾಯ' ಅವರಿಗೆ ಒಬ್ಬ ದೇವರಾದ."

ಇದನ್ನು ಕೇಳಿ ನನಗೆ ನಗು ಬಂತು.

"ಯಾಕೆ ನಗುತ್ತೀಯಾ?" ಎಂದು ಕೇಳಿದರು ಅಜ್ಜಿ. ಅದಕ್ಕೆ ನಾನಂದೆ "ಹೌಂದ್ರಾಯ ಅರಸನೂ ಅಲ್ಲ, ಮಣ್ಣೂ ಅಲ್ಲ; ಬೈಂದೂರು ಕಡೆಯವರು ಸಮುದ್ರವನ್ನು 'ಸೌಂದ್ರ' ಅನ್ನುತ್ತಾರೆ. ಅದೇ 'ಸೌಂದ್ರ, ಹೌಂದ್ರ' ಆಯಿತು. ಓಕುಳಿ ಆಟ ಅವರ ಪಾಲಿಗೆ ಸಮುದ್ರರಾಯನ ಓಲಗ. ಓಕುಳಿ ಹೊಂಡ ಹಾರುವವನು 'ಹೌಂದ್ರಾಯನ ವಾಲಗವೊ' ಎಂದು ಕೂಗುವುದು ಅದಕ್ಕಾಗಿ. ಇರಲಿ; ಆ ಹೌಂದ್ರಾಯನ ವಿಗ್ರಹ ಏನಾಯಿತೆಂದು ಹೇಳಿ."

"ಅದೊಂದು ಮರದ ಬೊಂಬೆಯಲ್ಲವೇ; ಒಂದು ದಿನ ಹಾಳಾಯಿತು. ಕಾಲ ಸಂದು, ಮರೆತುಹೋಯಿತು. ಊರಲ್ಲಿ ಜಟ್ಟಿಗ, ಬೊಬ್ಬರ್ಯಗಳ ಗೊಂಬೆ ಇಡುತ್ತಾರಲ್ಲ, ಅವು ಮರದ್ದೇ ಗೊಂಬೆಗಳು. ಮಾರಣಕಟ್ಟೆಯಲ್ಲಿ ಅಂಥವೂ ಉಂಟಂತೆ. ನಮ್ಮಲ್ಲಿ ಯಾವುದಾದರೂ ಕಲ್ಲನ್ನು ತೋರಿಸಿ - ಇದು ಬೊಬ್ಬರ್ಯನ ಕಲ್ಲು, ಜಟ್ಟಿಗನ ಕಲ್ಲು -

ಎನ್ನುವುದಿಲ್ಲವೆ. ಈಗ ನಮ್ಮ ಮೂಡೂರಿನಲ್ಲಿ ಹತ್ತಿಪ್ಪತ್ತು ಮನೆ ದೊಗೇರರದ್ದಿದೆ. ಜನವಸತಿ ಇದ್ದರಲ್ಲವೆ ದೇವರು ಉಳಿದುಕೊಳ್ಳುವುದು? ಅವರ ಜನಸಂಖ್ಯೆ ಕಡಿಮೆಯಾಯಿತು; ಗುಡಿ ಹಾಳಾಯಿತು; ಗೊಂಬೆಯೂ ಹೊರಟುಹೋಯಿತು. ಅಲ್ಲಿಂದ ಮುಂದಕ್ಕೆ - ಇಲ್ಲಿರುವ ಭೈರವ ಹೋಗಿ, ಕಪಾಲೇಶ್ವರನಾದ; ತಿರುಗಿ ಇಲ್ಲಿಗೆ ಬ್ರಾಹ್ಮಣರು ಬಂದು ದೇವಸ್ಥಾನದ ಪೂಜೆ ತೊಡಗಿದರು. ಹೊರಗಿನಿಂದ ಬಂದ ಜನರು ಇದೇ ಓಕುಳಿ ಹೊಂಡದಲ್ಲಿ ಹೌಂದ್ರಾಯನ ಓಲಗವನ್ನು ನಡೆಸಿದರು. ಆ 'ಓಕುಳಿ' ಯಾವ ಲೆಕ್ಕದಿಂದ ಬಂತೋ ತಿಳಿಯದು."

ನನ್ನ ಅಜ್ಜಿ ಹೀಗೆ ನಮ್ಮ ಮಾತುಕತೆಗಳಲ್ಲಿ ಬಿತ್ತಿದ ವಿಷಯಗಳು, ಅಲ್ಪಸ್ವಲ್ಪವಾದರೂ ಚರಿತ್ರೆಯನ್ನು ಓದಿಕೊಂಡ ನನ್ನ ತಲೆಯಲ್ಲಿ ಅವು ಸದಾ ನಲಿಯತೊಡಗಿದವು. ಇಂಥ ವಿಷಯಗಳಲ್ಲಿ ನಾವು ತೀರ ಅಜ್ಞರಾದರೆ ಪ್ರಯೋಜನವಿಲ್ಲ- ಎಂದು ನನಗೆ ತೋರಿತು. ನಮ್ಮ ನಾರಾಯಣನಿಗೆ 'ನಿಮ್ಮ ಊರಿನ ವಾಚನಾಲಯಗಳಲ್ಲಿ ಎಲ್ಲಾದರೂ ಇಂತಿಂಥ ವಿಷಯಗಳಲ್ಲಿ ಪುಸ್ತಕ ಸಿಕ್ಕಿದರೆ ನಾಲ್ಕು ಪುಸ್ತಕ ತೆಗೆದುಕೊಂಡು ಬಾ" ಎಂದು ಪತ್ರ ಬರೆದೆ. ಇನ್ನೇನು? ಎರಡು, ಮೂರು ತಿಂಗಳಲ್ಲಿ ಆತ ಮಡದಿಯೊಡನೆ ನಮ್ಮ ಊರಿಗೆ ಬಂದೇ ಬರುತ್ತಾನೆ. ಅಜ್ಜಿಯನ್ನು ನೋಡುವುದಕ್ಕಾದರೂ ಒಂದೆರಡು ದಿನ ಬಂದು, ಇಲ್ಲಿ ಇದ್ದು ಹೋಗಬೇಕಲ್ಲ. ಒಮ್ಮೆ ನೀನು ಬರುವುದು ತಡವಾದರೂ, ಪುಸ್ತಕಗಳನ್ನು ಯಾರಾದರೂ ಬರುವವರ ಹತ್ತಿರ ಕಳುಹಿಸಿಕೊಡು- ಎಂದು ಬರೆದಿದ್ದೆ. ಆತ ಅವನ್ನು ತರುತ್ತಾನೆಯೋ ಅಥವಾ ಅಂಚೆಯಲ್ಲಿ ಕಳುಹಿಸಿ ಕೊಡುತ್ತಾನೋ ಎಂಬುದು ತಿಳಿಯಲಾರದ ವಿಷಯ. ನನ್ನ ಇನ್ನೆರಡು ಹರಕೆಗಳು ಬಾಕಿ ಉಳಿದಿವೆ. ಈ ವರ್ಷವಾದರೂ ತಿರುಗಿ ಮಳೆ ಬೀಳುವುದಕ್ಕಿಂತ ಮೊದಲು ಅವನ್ನು ತೀರಿಸಿಕೊಳ್ಳಬೇಕಾಗಿದೆ. ಅವುಗಳಲ್ಲಿ ಒಂದು- ನಾಗನ ಬನದ ವಠಾರವನ್ನು ಸವರಿ, ಅಲ್ಲಿ ಬಾವಿ, ಗೀವಿ ಏನಾದರೂ ಉಂಟೇ- ಎಂದು ನೋಡುವುದು. ಇನ್ನೊಂದು- ಕುಡುಬಿ ಅಣ್ಣುವನ್ನು ಕರೆದುಕೊಂಡು, ಘಟ್ಟದ ಬರೆಗೆ ಹೋಗಿ ಬರುವುದು. ಹಿಂದೆ ಹೋದಾಗ ಜನಾರ್ದನ ನಮ್ಮ ಜತೆಗಿದ್ದ. ಈ ಸಾರಿ ಬೇಸಿಗೆಯಲ್ಲಿ ಇನ್ನೊಮ್ಮೆ ಹೋಗುವುದಾದರೆ, ನನ್ನ ತಮ್ಮ ನಾರಾಯಣನನ್ನು ಕರೆದುಕೊಂಡು ಹೋಗಿ, ಒಂದಿಷ್ಟು ಹೆಚ್ಚಿಗೆ ಸಮಯವನ್ನು ಅಲ್ಲಿ ಕಳೆಯಬೇಕು. ಹೊಸತೇನೂ ಸಿಗದೆ ಹೋದರೂ ನಮ್ಮ ಮೂಡೂರು ಸಾಮ್ರಾಜ್ಯದ ಗತವೈಭವ ಹೇಗಿತ್ತು- ಎಂದಾದರೂ ತಿಳಿಯಬಹುದು! 'ತಿಳಿದೇನು ಮಾಡಬೇಕು?' ಎಂದು ಯಾರಾದರೂ ಪ್ರಶ್ನಿಸಿದರೆ 'ಆ ವಿಚಾರವೇ ಬೇರೆ' ಎಂದು ಹೇಳಿ, ಸುಮ್ಮನಿದ್ದರಾಯಿತು.

ಇದಾದ ಒಂದು ನಾಲ್ಕು ದಿನಗಳಲ್ಲಿಯೇ ಒಂದು ಮಧ್ಯಾಹ್ನದ ವೇಳೆ, ಜನಾರ್ದನನ ತಾಯಿ ನಮ್ಮ ಮನೆಗೆ ಧಾವಿಸಿ ಬಂದರು. ನಾನು ಅವರ ಮನೆಗೆ ಈ ಮೊದಲು ನೂರು

ಸಾರಿ ಹೋಗಿದ್ದೇನೆ; ಅವರು ಮಾತ್ರ ಹಾಗೆಂದೂ ತಮ್ಮ ಮನೆ ಬಿಟ್ಟು ನಮ್ಮಲ್ಲಿಗೆ ಬಂದವರಲ್ಲ. ಬಂದೇ ಬಂದರು ಒಂದು ದಿನ. ಬಂದವರು ಮನೆಯೊಳಕ್ಕೆ ಹೋಗಿ, ನನ್ನ ಸೀತೆಯೊಡನೆ ತುಂಬ ಹೊತ್ತು ಸುಖದುಃಖಗಳನ್ನು ತೋಡಿಕೊಂಡ ಹಾಗೆ ಕಾಣುತ್ತದೆ. ನಾನು ಅದನ್ನು ಅಷ್ಟೊಂದು ಮನಸ್ಸಿಗೆ ಹಾಕಿಕೊಳ್ಳಲೂ ಇಲ್ಲ. ಆದರೆ, ಆ ರಾತ್ರಿ ಸೀತೆಯಿಂದ ನನಗೆ ಯಾವತ್ತು ಸಮಾಚಾರ ತಿಳಿದಾಗ ಮಾತ್ರ ತುಂಬ ಬೇಸರವಾಯಿತು. ಜನಾರ್ದನನ ತಂದೆಗೆ ಅಷ್ಟೊಂದು ಆರೋಗ್ಯವಿಲ್ಲ; ಅವರು ಸದಾ ವಾತದ ಪ್ರಕೃತಿಯವರು. ಮನೆಯ ಸುತ್ತಮುತ್ತಷ್ಟೆ ಅಲೆದಾಡಿಕೊಂಡಿರುತ್ತಾರೆ. ತಮ್ಮ ಮಾತನ್ನು ಕೇಳದ ಜನಾರ್ದನನ ವಿಷಯದಲ್ಲಿ ಅವರಿಗೆ ನಿತ್ಯವೂ ಚಿಂತೆಯೇ. ಅವನನ್ನು ಹೆತ್ತ ತಾಯಿಗೂ ಅಂಥ ಚಿಂತೆ ಇರಬೇಕಾದುದು ಸಹಜವೇ. ಕಳೆದ ಬಾರಿ ಆತ ರಜೆಗೆ ಮನೆಗೆ ಬಂದವನು ಇದ್ದಕ್ಕಿದ್ದಂತೆಯೇ ಮೈಸೂರಿಗೆ ಹೊರಟು ಹೋದ. ಆಮೇಲೆ ಮನೆಗೆ ಒಂದು ಕಾಗದವನ್ನು ಸಹ ಬರೆಯಲಿಲ್ಲವಂತೆ. ಮದುವೆಗೆ ಅವನ ತಾಯಿತಂದೆಯರು ಒತ್ತಾಯಿಸುತ್ತಿದ್ದಾರೆ ಎಂಬುದರಿಂದ ಓಡಿಹೋದನೆಂದು ನಾನು ತರ್ಕಿಸುವಂತಾಯಿತು. ಕನ್ಯಾನ್ವೇಷಣೆಯ ಅವನ ರೀತಿಯನ್ನು ಕುರಿತು ಮಂಜುನಾಥ ಸಾಕಷ್ಟು ಹೇಳಿದ್ದ. ಶಿವಮೊಗ್ಗೆಯ ನಮ್ಮ ಬೀಗರ ಮನೆಯಲ್ಲಿ ಏನಾಯಿತೆಂದು ನನಗೂ ಗೊತ್ತಿದೆ. ಆತ ನನಗೆ ಅಷ್ಟೊಂದು ಬೇಕಾದವನಾಗಿದ್ದರೂ, ತಾನಾಗಿ ಹೆಣ್ಣು ನೋಡಲು ಹೋದ ಮನೆಯವರಿಂದ ಎಲ್ಲ ಉಪಚಾರಗಳನ್ನು ದಕ್ಕಿಸಿಕೊಂಡು, ಅವರಲ್ಲಿ ಸಲ್ಲದ ಆಸೆ ಹುಟ್ಟಿಸಿ, ಆ ಮನೆಯ ಹೊಸ್ತಿಲನ್ನು ಇಳಿಯುವುದರೊಳಗಾಗಿಯೆ, ಕೈ ಬೀಸಿ ಹೊರಡುವ ಅವನ ನಡವಳಿಕೆಯನ್ನು ಕುರಿತು ಕೇಳಿದಾಗ, ನನಗೆ ಅವನ ಮೇಲಿರುತ್ತಿದ್ದ ಅಭಿಮಾನ ಎಂದೋ ಕಳಚಿಹೋಗಿತ್ತು. ಅವನು ಬುದ್ಧಿವಂತನೇನೋ ನಿಜ. ಇಂಗ್ಲಿಷ್ ಕಾವ್ಯಗಳನ್ನು ಓದಿಕೊಂಡು ಲವ್, ಶೃಂಗಾರ, ಪೊಯಟ್ರಿ, ಕಾವ್ಯ ಎಂದು ಏನೇನೋ ಕಗ್ಗ ಹೊಸೆಯಬಲ್ಲ. ಇಂಗ್ಲಿಷ್ ಕವಿಗಳ ಮಾತುಗಳನ್ನು, ನಮ್ಮ ಪುರೋಹಿತರುಗಳು ಮಂತ್ರ ಉರುಳಿಸುವುದಕ್ಕಿಂತಲೂ ಚೆನ್ನಾಗಿ ಉರುಳಿಸುತ್ತಾನೆ. ಒಂದು ದಿನ ನನ್ನ ಇದಿರಿಗೇನೆ ಆತ ಅಂಥ ಒಂದು ಬಾಣವನ್ನು ಬಿಟ್ಟಿದ್ದ; 'beauty is truth, truth is beauty' ಎಂದುಬಿಟ್ಟ. ಆಗ ನಾನು ನಗುತ್ತ ಹೇಳಿದೆ: ಬ್ಯೂಟಿ ಯಾವುದಂತ ನಿನಗೆ ಗೊತ್ತಿರಬಹುದು; ಆದರೆ ಟ್ರುತ್ತಿನ ಗಂಧಗಾಳಿಯೂ ನಿನಗಿರುವ ಹಾಗಿಲ್ಲ. ಅವೆರಡೂ ನಿನ್ನ ಪಾಲಿಗೆ ಗಂಡಾಂತರದವು- ಎಂದೆ. ಆದರೂ ಆತ ಒಂದು ಗಂಟೆಯ ಕಾಲ ತನ್ನ ಉಪನ್ಯಾಸವನ್ನು ಬಿಗಿದ- ಆ ವಿಷಯವನ್ನು ಕುರಿತು. ನಾನು ಅದಕ್ಕೆ "ಜನ್ನ, ನೀನು ಕಾವ್ಯದ ಬದಲು, ಫಿಲಾಸಫಿ ತೆಗೆದುಕೊಂಡಿದ್ದರೆ ಇನ್ನೂ ಚೆನ್ನಾಗಿತ್ತು" ಎಂದೆ. ಅದಕ್ಕೆ- ಕಾರಣವಿಷ್ಟೆ-ಅವನಿಗೆ ಬೇಕಾದದ್ದು ಮಾತು. ವಾಗ್ವಾದದಲ್ಲಿ ಗೆಲುವು. ಜೀವನಕ್ಕೆ ಇವೆಲ್ಲ ಸಂಬಂಧಿಸುವ ವಿಷಯಗಳು; ಸಂಬಂಧಿಸಬೇಕು- ಎಂಬ ಯಾವ

ಯೋಚನೆಯೂ ಅವನಿಗಿದ್ದಂತಿಲ್ಲ. ಸದ್ಯಕ್ಕೆ ನಮ್ಮ ಮನೆಗೆ ಬಂದ ಅವನ ಅಮ್ಮನ ಗೋಳನ್ನು ನಿಮಗೆ ತಿಳಿಸುತ್ತೇನೆ.

ಒಂದು ತಿಂಗಳಿನ ಹಿಂದೆ ಆತ ಮನೆಗೊಂದು ಕಾಗದ ಬರೆದಿದ್ದನಂತೆ; 'ಮೂರು ಸಾವಿರ ರೂಪಾಯಿ ನಗದನ್ನು ಹೇಗಾದರೂ ಮಾಡಿ ಕಳುಹಿಸಿ; ಇಲ್ಲವಾದರೆ ಮರ್ಯಾದೆ ಹೋಗುವ ಪ್ರಸಂಗ; ಇಲ್ಲಿ ಮನೆಯನ್ನು ಕಟ್ಟುವುದಕ್ಕೆ ನಾನೊಂದು ಜಾಗ ತೆಗೆದುಕೊಂಡು 500 ರೂ. ಮುಂಗಡ ಕೊಟ್ಟಿದ್ದೇನೆ. ಉಳಿದ ಮೂರು ಸಾವಿರ ಕೊಡದೆ ಹೋದರೆ, ಕೊಟ್ಟ ಐನೂರು ಹೋಗುತ್ತದೆ' ಎಂದು ಬರೆದಿದ್ದನಂತೆ. ಆತ ಎಷ್ಟೆಂದರೂ ಮಗ; ಅವನಿಗೆ ಮೈಸೂರಿನಲ್ಲಿಯೇ ಕೆಲಸ. ಅಲ್ಲಿಯೇ ಒಂದು ಮನೆಯನ್ನು ಕಟ್ಟಿಕೊಳ್ಳುವ ಆಸೆಯಾದರೆ ತಪ್ಪೇನಲ್ಲ. ಆದರೆ- ಅವನ ತಂದೆಯಲ್ಲಿ ಮುನ್ನೂರು ನಗದು ಇದ್ದರಲ್ಲವೆ ಮೂರು ಸಾವಿರ ಕಳುಹಿಸುವುದು? ಅವರಾದರೂ ಎಲ್ಲಿಂದ ಅಷ್ಟು ಸಾಲ ಮಾಡಲಿ? ಆ ಕಾರಣದಿಂದ ಅವರು ಯೋಚಿಸಿ, ಯೋಚಿಸಿ ಕಂಗಾಲಾಗಿ, ಜಗದಂಬಾ ಹೋಟೆಲಿನ ಮಂಜುನಾಥನಿಗೆ ಒಂದು ಕಾಗದ ಬರೆದರಂತೆ. "ನಮ್ಮ ಮನೆ ಆಸ್ತಿ ಜವಾಬ್ದಾರಿ ಕೊಡುತ್ತೇನೆ. ಅವನು ಮನೆ ಕಟ್ಟಿಸುವುದು, ಜಾಗ ತಕ್ಕೊಳ್ಳುವುದು ನಿಜವಾದರೆ ನೀನು ಅವನಿಗೆ 3000 ರೂ. ಕೊಡುತ್ತೀಯಾ?" ಎಂದು ಕೇಳಿದರಂತೆ. ಆ ಮಂಜುನಾಥನಿಂದ ಮಾರುತ್ತರವೂ ಬಂದಿತು. ಅವನು ಊರಲ್ಲಿ ವಿಚಾರಿಸಿದ್ದ ಮೇಲೆ- ಅದು ಸುಳ್ಳು ಸಂಗತಿ- ಎಂಬುದು ತಿಳಿಯಿತು. ಹಾಗಾಗಿ ಜನಾರ್ದನನನ್ನು ಕಂಡು 'ಜಾಗ ತೋರಿಸು' ಎಂದು ಕೇಳಿದಾಗ, ಕರೆದುಕೊಂಡು ಹೋಗಿ ಯಾರದ್ದೋ ಒಂದು ಸ್ಥಳವನ್ನು ಅವನು ತೋರಿಸಿದನಂತೆ. ಆ ಮಂಜುನಾಥ ಅದರ ಮಾಲಿಕರನ್ನು ವಿಚಾರಿಸಿದಾಗ, ಜನಾರ್ದನ ಅವರ ಹತ್ತಿರ ಇಲ್ಲ-ಎಂಬುದು ತಿಳಿಯಿತು. ಅದು ಮಾರಾಟದ ಜಾಗವೂ ಅಲ್ಲ- ಎಂದು ತಿಳಿಯಿತು. ಆ ಸಂಗತಿಯನ್ನು ಮಂಜುನಾಥ ಅವನ ತಂದೆಗೆ ತಿಳಿಸಿದನಂತೆ. ಆಗ ತಾಯಿಗೂ ಗಾಬರಿಯೇ, ತಂದೆಗೂ ಗಾಬರಿಯೇ. ಇದ್ದ ಒಬ್ಬ ಮಗ, ತಂದೆತಾಯಿಯರ ಹತ್ತಿರ ತಾಜಾ ಸುಳ್ಳು ಹೇಳಿ, ಹಣವನ್ನು ತರಿಸಿಕೊಳ್ಳುವ ಪ್ರಯತ್ನ ಗಾಬರಿ ಹುಟ್ಟಿಸದಿದ್ದೀತೆ? ಇವರು ಕಾಗದಕ್ಕೆ ಉತ್ತರವಾಗಿ "ನನಗೆ ಬಹಳ ಕಾಯಿಲೆ; ನಾನಿನ್ನು ಎಷ್ಟು ದಿನ ಬದುಕುತ್ತೇನೋ. ನೀನು ಒಂದು ಸಾರಿ ಮನೆಗೆ ಬಂದು ಹೋಗು" ಎಂದು ಬರೆದರಂತೆ. ಅವನೆಂದಾದರೂ ಬಂದಾನೆಯೇ?

ಆತನ ತಾಯಿ ನಮ್ಮ ಮನೆಗೆ ಬಂದದ್ದು ಅದಕ್ಕಾಗಿಯೇ. ಸೀತೆಯೊಡನೆ ತಮ್ಮ ಯಾವತ್ತು ಗೋಳನ್ನು ತೋಡಿಕೊಂಡಳು: "ಅವರು ಮನೆಯನ್ನು ಬಿಟ್ಟು ಹೊರಡಲಾರರು. ನಿನ್ನ ಯಜಮಾನ ಅವನ ದೋಸ್ತಿ. ಹಾಗಾಗಿ, ಒಂದು ದೊಡ್ಡ ಮನಸ್ಸು ಮಾಡಿ ಮೈಸೂರು ತನಕ ಹೋಗಿ, ಅವನನ್ನು ಕಂಡು, ಜತೆಗೆ ಮಂಜುನಾಥನನ್ನೂ ಕಂಡು, ನನ್ನ ಮಗನ

ನಿಜವಾದ ಕತೆ ಏನು ಎಂದಾದರೂ ತಿಳಿದುಕೊಂಡು ಬಂದಿದ್ದರೆ ಆಗುತ್ತಿತ್ತು" ಎಂದು ಕೇಳಲು ಬಂದಿದ್ದಳು. ಅದಕ್ಕೆ ಸೀತೆ "ಹೇಳಿ ನೋಡುತ್ತೇನಪ್ಪ" ಎಂದಳಂತೆ. ಅವಳಿಂದ ನಾನು ಎಲ್ಲ ವಿಷಯಗಳನ್ನು ಕೇಳಿದೆ. ಅದರಿಂದ ಅವರ ದುಃಖದ ಭಾರವನ್ನು ನನ್ನ ಕೊರಳಿಗೆ ಕಟ್ಟಿದ ಹಾಗಾಯಿತು. ನನ್ನ ಬಾಲ್ಯಸ್ನೇಹಿತ ಜನ್ನ ಇಂಥೊಬ್ಬ ವಿಚಿತ್ರ ವ್ಯಕ್ತಿಯಾಗಿ ಬೆಳೆದನೆಂದರೆ ವ್ಯಥೆಯಾಗದೆ ಇದ್ದೀತೆ!

ಅವರ ಸಲುವಾಗಿಯೇ ನಾನು ಮೈಸೂರಿಗೆ ಹೊರಡುವ ತಯಾರಿ ಮಾಡಿದೆ. ಅವರ ಮನೆಗೆ ಹೋಗಿ, ಅವರಿಗೆ ಧೈರ್ಯವನ್ನು ಹೇಳಿ ಬಂದೆ. ಹೊರಡುವ ದಿವಸ ನಿಶ್ಚಯ ಮಾಡಿದೆ. ಹೊರಡುವ ಮುಂಚಿನ ದಿನ ಅಜ್ಜಿಯೊಡನೆ "ಅಜ್ಜಿ, ನಾನು ಒಂದು ಕೆಲಸಕ್ಕೆ ಹೊರಡುತ್ತಿದ್ದೇನೆ. ಹೆಣ್ಣೋ, ಗಂಡೋ ಹೇಳಿ" ಎಂದೆ. ಅವರ ಬಾಯಿಯಿಂದ 'ಗೋಟು' ಎಂಬ ಶಬ್ದ ಬಂದಿತು. ಅವರು ನಕ್ಕೇ ಆ ಮಾತನ್ನು ಹೇಳಿದರು. ನಾನು ಕೇಳಿದೆ; ನಕ್ಕೆ ಹೊರಟೆ. ನಾವು ಅಡಿಕೆ ಬೆಳೆಯವರಿಗೆ- ಗೋಟು, ಬೆಟ್ಟೆ ಅಡಿಕೆಗಳ ಅರ್ಥ ತಿಳಿಯುತ್ತದೆ. ಅಜ್ಜಿ ಹೇಳಿದ 'ಗೋಟು' ಆ ಅರ್ಥದ್ದಲ್ಲ. ಅದು 'ಗೊಡ್ಡು' ಎಂಬ ಅರ್ಥದ್ದು. ಹೇಗೂ ಇರಲಿ. ನಾನು ಹೋಗಿ ಬರುತ್ತೇನೆಂದು ಅವರಿಗೆ ತಿಳಿಸಿದ ಬಳಿಕ, ಹೊರಟೇ ಬಿಟ್ಟೆ. ಶಿವಮೊಗ್ಗೆ ಮುಟ್ಟುವುದರಲ್ಲಿ ಒಂದು ದಿವಸ ಕಳೆಯಿತು. ಬೀಗರ ಮನೆಯಲ್ಲಿ ಉಳಿದುಕೊಂಡರೆ, ಅದೇ ರಾತ್ರಿ ಹೊರಡುವುದಕ್ಕಾಗುವುದಿಲ್ಲವೆಂದು ಯೋಚಿಸಿ ಹೆದರಿ, ಅಲ್ಲಿಗೂ ಹೋಗದೆ ರೈಲ್ವೆಸ್ಟೇಶನಿಗೂ ಧಾವಿಸಿದೆ. ಮೂರನೇ ಕ್ಲಾಸಿನ ಬಂಡಿಯಲ್ಲಿ ಮೊದಲೇ ತುಂಬಿಕೊಂಡಿದ್ದ ಪ್ರಯಾಣಿಕ ಕುರಿಗಳೊಡನೆ ನಾನೂ ಒಬ್ಬ ಸೇರಿಕೊಂಡೆ. ಮಧ್ಯರಾತ್ರಿ ಕಳೆದ ಮೇಲೆ ಅರಸಿಕೆರೆಯಲ್ಲಿಳಿದು, ಮೈಸೂರಿಗೆ ಹೋಗುವ ರೈಲನ್ನು ಹತ್ತಿ ಕುಳಿತೆ. ಎಷ್ಟೋ ಹೊತ್ತಿನ ತರುವಾಯ ಆ ದರಿದ್ರ ಗಾಡಿ ಹೊರಟಿತು- ಎಮ್ಮೆ ಕರುವಿನ ಹಾಗೆ. ಮೈಸೂರನ್ನು ಸೇರುವಾಗ ಬೆಳಗ್ಗಿನ ಹತ್ತು ಗಂಟೆಯಾಗಿತ್ತು. ರೈಲ್ವೆ ನಿಲ್ದಾಣದಿಂದ ಶಿವರಾಮಪೇಟೆಗೆ ಬಹಳ ದೂರವಿದ್ದಿರಲಿಲ್ಲ. ಅಲ್ಲಿಯೇ ಮಂಜುನಾಥನ ಜಗದಂಬಾ ಹೋಟೆಲು ಇದ್ದುದರಿಂದ, ನಾನು ವಸತಿಗೆ ಯಾವ ಬೇರೆ ಯೋಚನೆಯನ್ನೂ ಮಾಡಬೇಕಾಗಿರಲಿಲ್ಲ. ಹೋದೊಡನೆಯೇ ಆತನೇ ನನ್ನನ್ನು ಸ್ವಾಗತಿಸಿದ. ಬಹಳ, ಬಹಳ ಉಪಚಾರ ಮಾಡಿದ. ಅಂತೂ "ಮೈಸೂರಿಗೆ ಬನ್ನಿ ಅಂತ ನಾನು ಅಷ್ಟೆಲ್ಲ ಉಪಚಾರ ಮಾಡಿದ್ದಕ್ಕೆ ನೀವು ಇವತ್ತು ಬಂದಿರಿ" ಎಂದ. "ಬಾರದಿರಲಿಕ್ಕಾಗುತ್ತದೆಯೇ?" ಎಂದೆ ನಾನು. ಅವರ ಮನೆಯಲ್ಲಿ ಮಧ್ಯಾಹ್ನದ ಊಟ, ಉಪಚಾರ. ಭರ್ಜರಿಯಾಗಿ ನಡೆಯಿತು. ನಾಲ್ಕು ಬಗೆಯ ಸಿಹಿ ತಿಂಡಿಗಳು! ಎಲ್ಲ ಹೊಸವೇ. ಜಿಲೇಬಿಯಂಥದ್ದನ್ನು ತೋರಿಸಿ 'ಜಾಂಗೀರು' ಅಂದ. ಉಳಿದವಕ್ಕೆ ಒಂಮೊಂದಾಗಿ ನಾನೇ ಹೆಸರಿಟ್ಟೆ. 'ಶಾಅಲಮ್',' 'ಮಿರ್ಜಾಫರ್', 'ಅವರಂಗಜೇಬ್' ಎಂದು ಪರಿಹಾಸ್ಯ ಮಾಡಿದೆ. ಊಟ ಮುಗಿದ

ಮೇಲೆ- ತಿಪ್ಪಜ್ಜಿ ತೀರಿಕೊಂಡ ವಿಷಯವನ್ನು ಬಣ್ಣಿಸಿದೆ. ಆತನಿಗೆ ಅವಳು ಸತ್ತ ವಿಷಯ ಗೊತ್ತಿತ್ತು; ಆದರೆ ವಿವರ ತಿಳಿದಿರಲಿಲ್ಲ. ಅವನು ಆ ಗತಿಸಿದ ಪುಣ್ಯಜೀವಿಯನ್ನು ಕುರಿತು ಬಾಯಿ ತುಂಬ ಹೊಗಳಿದ. ಪರ್ಯಾಯವಾಗಿ, ನನ್ನ ಅಜ್ಜಿಗೂ ಅಗ್ಗದ ಶಿಫಾರಸ್ಸು ದೊರೆಯಿತು.

ಸಾಯಂಕಾಲ ನಾಲ್ಕು ಗಂಟೆಯ ಹೊತ್ತಿಗೆ "ಎಷ್ಟು ದಿವಸ ಇರುತ್ತೀರಿ? ನಂಜನಗೂಡು, ಶ್ರೀರಂಗಪಟ್ಟಣ, ಮೈಸೂರು ಇವನ್ನೆಲ್ಲ ನೋಡಲಿಕ್ಕೆ ಕನಿಷ್ಠ ಒಂದು ವಾರವಾದರೂ ಬೇಕು. ಹೋಲ್ ಇಂಡಿಯಾದಿಂದ ಪ್ರವಾಸಿ ಜನಗಳು ಬರುತ್ತಾರೆ- ಇವನ್ನು ನೋಡುವುದಕ್ಕೆ" ಎಂದು ಗಾಬರಿ ಹುಟ್ಟಿಸಿದ.

"ಮಂಜುನಾಥ, ವಾರ ಗೀರ ಕುಳಿತುಕೊಳ್ಳಲು ಸಾಧ್ಯವಿಲ್ಲ. ತಲೆಯ ಮೇಲೆ, ಅಂದರೆ ಕೇವಲ ಮೂರು ದಿನ ಇದ್ದೇನು. ಅದೂ ನಿನ್ನ ದಾಕ್ಷಿಣ್ಯಕ್ಕೆ ಇರುವುದು. ನೀನು ಜಹಾಂಗೀರು, ಶಹಜಾನ್ ಕೊಟ್ಟು, ಕೊಟ್ಟು ನನ್ನನ್ನು ಕೊಲ್ಲದೆ ಇದ್ದರೆ, ನಿನ್ನ ಸಹಾಯವಿದ್ದರೆ ನಾನು ಬಂದ ಕೆಲಸ ಮಾತ್ರ ಒಂದೇ ದಿವಸದಲ್ಲಿ ಮುಗಿದೀತು. ಆಮೇಲೆ ಎರಡು ದಿವಸ ನಿನಗಾಗಿ ಇರುತ್ತೇನೆ. ಒಂದು ರಾತ್ರಿ ಪ್ರಯಾಣ; ಮುಂದಿನ ಒಂದು ಹಗಲು ಶಿವಮೊಗ್ಗೆಯ ಬೀಗರ ಮನೆಯಲ್ಲಿ. ಅದರ ಮರುದಿವಸ ಅಲ್ಲಿಂದ ಗಾಡಿ ಕಟ್ಟುತ್ತೇನೆ" ಎಂದು ತಿಳಿಸಿದೆ. "ಕೆಲಸದ ಮೇಲೆ ಬಂದದ್ದೋ! ಆಗಲಿ. ನನ್ನಿಂದಾಗುವುದನ್ನು ಮಾಡಲಿಕ್ಕೇನು ತೊಂದರೆ; ಹೇಳಿ ಸಂಗತಿ" ಎಂದ ಆತ. ಕೇಳಿದೆ- ನನಗೆ ತಿಳಿದ ಯಾವತ್ತೂ ವಿಚಾರಗಳನ್ನು. ಆಗ ಮಂಜುನಾಥ ಮುಖವನ್ನು ಸಪ್ಪಗೆ ಮಾಡಿಕೊಂಡು ನನ್ನನ್ನು ನೋಡಿ "ಸುಬ್ಬ ರಾಯರೇ, ನಾನು ಹೊಟ್ಟೆಕಿಚ್ಚಿನವನಲ್ಲ. ಎಂದೂ ಸುಳ್ಳು ಮಾತು ಹೇಳುವವನಲ್ಲ ಎಂಬ ನಂಬಿಕೆ ನಿಮಗಂಟೇ ಎಂದು ಪ್ರಶ್ನಿಸಿದ. "ಹಾಗಿಲ್ಲದೆ ಹೋಗಿದ್ದರೆ ಮಂಜುನಾಥ, ನಿನ್ನಲ್ಲಿಗೇ ನಾನು ಯಾತಕ್ಕೆ ಬರುತ್ತೇನೆ?"

"ಹಾಗಿದ್ದರೆ, ಅದು ಮುಗಿದ ಕತೆ. ಮುಗಿದದ್ದೆಂದರೆ ತೀರ ಮುಗಿದದ್ದೇ" ಎಂದ.

"ನಾನು ಹೊರಡುತ್ತ, ನಮ್ಮ ಅಜ್ಜಿಯನ್ನು-ಹೋದ ಕೆಲಸ ಏನಾದೀತು-ಎಂದು ಕೇಳಿದ್ದಕ್ಕೆ ಅವರು 'ಗೊಡ್ಡು' ಅಂದರು; ಈಗ ನೀನು ಸಹ ಅಷ್ಟೇ ಅನ್ನುತ್ತೀಯ?"

"ನೋಡಿ, ನಿಮ್ಮ ಜನಾರ್ದನ ಬಹಳ, ಬಹಳ ಹುಷಾರಿನ ಜನ. ಕೆಲವು ಹೆಣ್ಣುಮಕ್ಕಳ ತಂದೆ, ತಾಯಂದಿರಿಗೆ ಆಸೆ ಹುಟ್ಟಿಸಿ, ಅವರಲ್ಲಿ ಉಂಡು, ತಿಂದು ಮೆರೆದವನು. ಒಂದೆರಡು ಕಡೆ-ಮದುವೆ ಮಾಡಿಕೊಳ್ಳುತ್ತೇನೆಂದು ಭರವಸೆ ಹೇಳಿ, ನಂಬಿಸಿ, ಆ ಹೆಣ್ಣು ಮಕ್ಕಳ ಜತೆಗೆ ತಿರುಗಾಡಿ, ಮಂಕುಬೂದಿ ಎರಚಿದ್ದೂ ಉಂಟು. ಎಷ್ಟು ದಿವಸ ನಡೆದೀತು ಇಂಥ ಆಟ? ಹೀಗೆಯೇ ಮಾಡಿ ಒಂದು ಕಡೆ ಹಿಂದುಮುಂದೆ ನೋಡದೆ ಸಿಕ್ಕಿಬಿದ್ದ. ಅವಳು ಬಸುರಾದಳು. ಅವಳ ತಂದೆ ತಾಯಿಗಳು ಮದುವೆಗೆ

ಒತ್ತಾಯಿಸಿದರು. ಈತ ಅವರಿಗೆ ದುಡ್ಡು ಕೊಟ್ಟು ಪಾರಾಗಬಹುದು- ಅಂತ ತಿಳಿದ. ಆದರೆ ಅವನ ಆಟ ನಡೆಯಲಿಲ್ಲ. ದೊನ್ನೆ ಚರ್ಚಿನಲ್ಲಿ ಅವರ ಮದುವೆ ಆಯಿತು ಎಂದು ಕೇಳಿದೆ. 'ಬೇಕಾದರೆ ಹೇಳಿ. ಅವರ ವಸತಿ ಎಲ್ಲಿ, ಏನು- ಎಂಬುದನ್ನು ವಿಚಾರಿಸಿ, ಆ ನವದಂಪತಿಗಳ ಮನೆಯನ್ನು ಹುಡುಕಿಕೊಂಡು ಹೋಗುವ. ನೀವು ಉಡುಗೊರೆಗೆ ಏನಾದರೂ ಜರತಾರಿ ಹಿಡಿದುಕೊಂಡೇ ಹೊರಡಿ, ಇದು ವಾಸ್ತವದ ಕತೆ. ನಾನು ಯಾವ ಬಣ್ಣವನ್ನೂ ಹಚ್ಚಿ ಹೇಳುತ್ತಲಿಲ್ಲ- ಎಂದ. ಮುಂದೆ ಅವನಿಗೂ ಮಾತನಾಡಲು ಬಾಯಿ ಬರಲಿಲ್ಲ; ನನಗೂ ಬಾಯಿ ಬರಲಿಲ್ಲ. ನಾನು ಮೂರು ದಿನಗಳ ಕಾಲ, ಅಲ್ಲಿಗೆ ಬಂದುದಕ್ಕೆ ಮಂಜುನಾಥನ ಜತೆಯಲ್ಲಿ ಮೈಸೂರನ್ನು ನೋಡಿದೆ. ನನ್ನ ಬುದ್ಧಿ ಕೆಟ್ಟಿತ್ತು. ಅದು ನನ್ನ ಸ್ವಂತಕ್ಕೆ ಬಂದ ಆಪತ್ತಲ್ಲವಾದರೂ, ಈ ಎಲ್ಲ ಸಂಗತಿಗಳನ್ನು ಜನ್ನನ ತಾಯಿ ಮತ್ತು ತಂದೆಯರಿಗೆ ತಿಳಿಸಬೇಕಲ್ಲ- ಎಂಬ ವ್ಯಥೆ ನನ್ನನ್ನು ಕಾಡತೊಡಗಿತು. ಒಂದು ದಿನ ಮಂಜುನಾಥನ ಹೋಟೆಲಿಗೆ ಕಾಫಿ ಕುಡಿಯಲು ಬಂದಿದ್ದ ಜನ್ನನ ಕೆಲವರು ಮಿತ್ರರು ಸಿಕ್ಕಿದರು. ಅವರು ಅವನ ವಿಷಯದಲ್ಲಿ ಇನ್ನಷ್ಟು ಕತೆ ಹೇಳಿದರು. ನಾನು ತಲೆತಗ್ಗಿಸಿಕೊಂಡು ಮೈಸೂರಿಂದ ಹೊರಟೆ. ದುಃಖಭಾರದಿಂದ ಶಿವಮೊಗ್ಗೆಯಲ್ಲೂ ನಿಲ್ಲದೆ, ಊರನ್ನು ಸೇರಿದೆ. ಬಂದವನು ಆ ಎಲ್ಲ ಸಮಾಚಾರ ಹೇಳಿದ್ದು ನಮ್ಮ ಅಜ್ಜಿಗೆ. "ಅವರು ಅದೇ ನನಗೆ ಕಾಣಿಸಿದ್ದು! ಹಿಂದೆ ಅವನನ್ನು ಕಂಡಾಗಲೂ ನನಗೆ ಹಾಗೆಯೇ ಕಾಣಿಸಿತ್ತು! ಆಗುವಂತೆಯೇ ಆಯಿತು; ಹೊಸತೇನೂ ಆಗಲಿಲ್ಲ" ಎಂದರು.

# ಅಧ್ಯಾಯ 15

ನಾಲ್ಕು ದಿನಗಳ ಕಾಲ ನನ್ನ ಪರಮ ಮಿತ್ರನ ವಿಚಾರವೇ ನನ್ನನ್ನು ಬಾಧಿಸುತ್ತಿದ್ದುದು ನಿಜ. ಜನ್ನನನ್ನು ಹಡೆದ ತಂದೆತಾಯಿಗಳಿಗೆ ನನಗಿಂತಲೂ ನೂರುಪಾಲು ಹೆಚ್ಚು ಅಸಮಾಧಾನವಾಗಿರಬೇಕು. ಅವನನ್ನು ಹೆತ್ತವರು, ಹೊರೆದವರು ಅವರಷ್ಟೇ; ಅವರಷ್ಟು ವ್ಯಥೆ ನನಗೆ ಆಗದಿದ್ದರೂ, ಮನಸ್ಸಿಗೆ ಮರೆಯುವಂಥ ಒಂದು ಗುಣ ಇದೆಯಲ್ಲ. ದುಃಖದ ಸ್ಮರಣೆಗಳಿಂದ ಜೀವನ ಜೀವಂತ ನರಕವಾಗಬಾರದು ಎಂಬುದಕ್ಕೇ ಮರವೆ ಎಂಬುದನ್ನು ಅನುಗ್ರಹ ಮಾಡಿದೆ ನಿಸರ್ಗ. ಮರೆತೆ; ಜನ್ನನನ್ನು ಮರೆತೆನೆಂದು ನನ್ನ ಹುಚ್ಚು ಹಂಬಲಗಳನ್ನು ಮಾತ್ರ ನಾನು ಮರೆತಿರಲಿಲ್ಲ. ಮನೆಯ ಮೂಡಣ ಹಾಡಿ ಬಂತೆಂದರೆ ಅವುಗಳ ನೆನವರಿಕೆ ಸದಾ ಆಗಿಯೇ ಆಗುತ್ತದೆ. ಆ ಹಟದಿಂದಲೇ ಇನ್ನೊಮ್ಮೆ ಕಲ್ಲು ಪಾರೆಯ ಬಳಿಗೆ ಹೋದೆ. ಆ ಪಾರೆಯ ಸಮೀಪದ ಬನವನ್ನು ಅವಲೋಕಿಸಿದೆ. ಅಲ್ಲಿಂದ ನೆಟ್ಟಗೆ ನಮ್ಮ ಒಕ್ಕಲು ಗೋವಿಂದನ ಮನೆಗೆ ಹೋದೆ. ಗೋವಿಂದ ನನಗೆ ಒದಗುವ ನಾಲ್ಕೆಂಟು ಆಳುಗಳಲ್ಲಿ ಹೆಚ್ಚಿನ ವಿಶ್ವಾಸದವ. ಅವನನ್ನು ಕರೆದು 'ಬಾ ನೋಡುವ, ಒಂದು ಕತ್ತಿ ಹಿಡಿದುಕೊಂಡು' ಎಂದು ಆಜ್ಞೆ ಮಾಡಿ, ಅಲ್ಲಿಯ ತನಕವೂ ಕರೆದುಕೊಂಡು ಬಂದೆ. " ನೋಡು ಗೋವಿಂದ, ಇಲ್ಲಿ ಒಂದಿಷ್ಟು ಬಲ್ಲೆ ಬೆಳೆದು ಬಿಟ್ಟಿದೆ, ನಾಲ್ಕು ಸುತ್ತಲೂ. ನನಗೆ, ಅದನ್ನು ಕಡಿದು, ಸವರಿ, ಈ ವಠಾರ ಹೇಗಿದೆ- ಅಂತ ನೋಡಬೇಕೆಂಬಾಸೆ. ನೀನು ಬಾಯಿ ರಂಪ ಮಾಡದೆ, ಒಂದೆರಡು ದಿವಸ ಹೆಚ್ಚು ಶ್ರಮತಾಗಿತಾದರೂ ಮೊಡ್ಡದಲ್ಲ, ಇದನ್ನೆಲ್ಲ ಕಡಿದು, ಒತ್ತರೆ ಮಾಡಬೇಕು. ಯಾಕೆ, ಏನು-ಅಂತ ಕೇಳಬಾರದು; ಇನ್ನೊಬ್ಬರಿಗೆ ಹೇಳಬೇಡ" ಎಂದೆ.

ಗೋವಿಂದ ಅದಕ್ಕೆ "ನನಗೆ ಅಂದಾಜಾಯಿತು ಒಡೆಯ, ಒಳ್ಳೆಯ ನೀರು ಗೀರು ಇಲ್ಲಿದ್ದರೆ, ಇಲ್ಲೇ ಆಚೆಗೆ ಪಸಂದಾದ ಜಾಗವಿದೆ. ಮೂರು ಎಕ್ರೆ ಅಡಿಕೆ ತೋಟ ಮಾಡಬಹುದು. ಇದೆಲ್ಲ ಸರಕಾರಿ ಜಾಗ ಅಂತ ಕಾಣುತ್ತದೆ. ಶ್ಯಾನುಭಾಗರನ್ನು ಮಾತನಾಡಿಸಿದ್ದೀರಾ?" ಎಂದು ಕೇಳಿದೆ.

"ನೀನು ಗೋವಿಂದ, ಬಹಳ ಸೂಕ್ಷ್ಮದವನು; 'ಸೂ' ಎಂದ ಕೂಡಲೇ ಸುಕ್ಕಿನುಂಡೆ- ಎಂದು ತೀರ್ಮಾನ ಮಾಡಬಲ್ಲವ. ನಿನ್ನ ನದರು ಸಮ. ಆದರೆ ನೋಡು, ಈ ಗ್ರಾಮದ ಶ್ಯಾನುಭಾಗರು ಇರುವುದು ವಂಡಸೆಯಲ್ಲಿ. ಗ್ರಾಮಕ್ಕೆ ಬೆಂಕಿ ಬಿದ್ದರೂ ಇಲ್ಲಿಗೆ ಬರುವವರಲ್ಲ. ನೀನು ಹೇಳಿದ ಹಾಗೆ ಇಲ್ಲಿ ನೀರು ಗೀರು ಇದೆಯೆಂದಾದರೆ ಮಾತ್ರ ಮುಂದಿನ ಅಂದಾಜು. ಅದಕ್ಕೆ ನಿನ್ನನ್ನು ಕರೆದದ್ದು. ರಟ್ಟೆ ಗಟ್ಟಿಯಾದ ಪುಟ್ಟ ಇದ್ದಾನೆ; ತಿಮ್ಮ ಇದ್ದಾನೆ. ಆದರೆ ಸುದ್ದಿ

ತಿಳಿಸಿದ್ದಾದರೆ ಅವರ ಬಾಯಿಗೆ ಬೆಣೆ ಹಾಕುವವರು ಯಾರು? ನಾನು ಅಂದಾಜು ಮಾಡುವುದರೊಳಗೇ ಅವರು ಊರಿಗೆ ಸುದ್ದಿ ಹಬ್ಬಿಸಿದರೆ ನನ್ನ ನದರು ತಲೆಕೆಳಗೆ ಆದ ಹಾಗೆಯೇ. ಅದಕ್ಕೇ ನಿನಗೆ ಹೇಳಿದ್ದು ನಾನು. ನಿನ್ನಲ್ಲಿ ನನಗೆ ಅಷ್ಟು ನಂಬಿಕೆ ಇಲ್ಲದಿದ್ದರೆ ನಿನ್ನನ್ನು ಮಾತನಾಡಿಸುತ್ತಿದ್ದೆನೇ?" ಎಂದು ಪುಸಲಾಯಿಸಿದೆ. ಅಟ್ಟದ ಮೇಲಿಟ್ಟರೆ ದೇವರಿಗೂ ಸಹ ಅಮಲೇರುತ್ತದಂತೆ. ಮತ್ತೆ ಗೋವಿಂದನ ಕತೆಯೇನು?

"ಬಿಡಿ, ನನಗೆ ಆ ಕೆಲಸವನ್ನು."

"ನೆಲ ಸಾಧಾರಣ ಒತ್ತರೆಯಾದ ಕೂಡಲೇ ನನಗೆ ಬಂದು ಹೇಳು. ಗಾರ್ಡರು, ಗೀರ್ಡರು ಈ ಬದಿಯಲ್ಲಿ ಹಾದರೆ, ಕೆಲಸವನ್ನು ನಿಲ್ಲಿಸು."

"ಹೂಂ" ಎಂದು ನಕ್ಕ.

"ಯಾಕೆ ನಕ್ಕೆ?" ಎಂದು ಕೇಳಿದೆ.

"ಅಯ್ಯಾ, ಎರಡೇ ಎರಡು ಕೋಳಿ ಮರಿ ಇದ್ದರೆ ಸಾಕು, ಎಂಥ ಗಾರ್ಡರ ಬಾಯಿಯನ್ನೂ ಕಟ್ಟಬಹುದು" ಎಂದಂದ. ಅಲ್ಲಿಂದಲೇ ಹಳುವಿನ ಸುತ್ತಲಿನ ಅಡರುಗಳನ್ನು ಸವರತೊಡಗಿದ. "ನಾನು ಇನ್ನೆರಡು ದಿನ ಈ ಕಡೆಗೇ ಸುಳಿಯುವುದಿಲ್ಲ" ಎಂದೆ. ನನಗೆ ಪುಕ್ಕು, ಈ ಜಾಗ ಸರಕಾರದ್ದು; ಫಾರೆಸ್ಟಿನದ್ದು. ಅಲ್ಲ, ಹಾಗೇನಾದರೂ ಮಾಡುತ್ತಿರುವ ಸುದ್ದಿ ಊರಿಗೆ ಹಬ್ಬಿದ್ದಾದರೆ, ಇವನಿಗೆ ಏನಾದರೂ ಕೊಪ್ಪರಿಗೆಯ ಮೇಲೆ ಕಣ್ಣಾಯಿತೇ- ಎಂದು ತಿಳಿದಾರು. ಯಾತಕ್ಕೆ ಅಷ್ಟೆಲ್ಲ- ಎಂದು ಸುಮ್ಮನಾದೆ.

ಎರಡು ದಿನ ಕಳೆದ ಮೇಲೆ, ಅದೇ ಸ್ಥಳಕ್ಕೆ ತಿರುಗಿ ಹೋದೆ. ಗೋವಿಂದ ಒಯಿನಾದ ಕೆಲಸ ಮಾಡಿಟ್ಟಿದ್ದ. ಅಲ್ಲಿನ ಸಣ್ಣಪುಟ್ಟ ಕೊಂಬೆ, ಕುತ್ತಿ, ಮುಂಡಕನ ಹಳು-ಇವೆಲ್ಲವನ್ನೂ ಚೆನ್ನಾಗಿ ಸವರಿ, ಎರಡು ದಿನ ಬಿಟ್ಟು, ಅನಂತರ ಕಿಚ್ಚೊಟ್ಟಿದ್ದ ಹಾಗೆ ಕಾಣುತ್ತದೆ. ಆಚೀಚಿನ ತರಗೆಲೆ, ಈ ಅರ್ಧ ಹಸಿ ಎಲೆಗಳಿಗೆ ಬೆಂಕಿ ಹೊತ್ತಿ, ಒಂದು ನೂರು ಚದರ ಗಜ ಜಾಗ ಸುಟ್ಟು ಹೋಗಿ, ಎಡೆಯ ಗಿಡಗಳ ಕಾಂಡವಷ್ಟೇ ಕಾಣಿಸುತ್ತಿತ್ತು. ಅವನ ಬುದ್ಧಿವಂತಿಕೆ ಕಂಡು ಸಂತೋಷವಾಯಿತು. ತರಗೆಲೆಗಳ ಬೂದಿಯನ್ನು ಮೆಟ್ಟಿಕೊಂಡು, ಅಲ್ಲೆಲ್ಲ ತುಳಿದಾಡಿದೆ. ನಿಜಕ್ಕೂ ಅಲ್ಲಿ ಸಪುರವಾದ ಒಂದು ಬಾವಿಯಿತ್ತು; ಮುರಕಲ್ಲಿನಲ್ಲಿ ಕೊರೆದದ್ದು. ಮರದ ಬೀಳಲು, ಬೇರುಗಳೆಲ್ಲ ಅದರೊಳಕ್ಕೆ ಇಳಿದಿದ್ದುವು. ಮೇಲಿನ ನೆರಳಿನಿಂದಾಗಿ ಒಳಗೆ ನೀರಿತ್ತೋ ಇಲ್ಲವೋ ಎಂದು ಕಾಣಿಸಲಿಲ್ಲವಾದರೂ, ಬಾವಿ ಆಳವಾಗಿದ್ದಿತು. ದೊಡ್ಡ ಕಲ್ಲೊಂದನ್ನು ಎಸೆದಾಗ ಅದು ಕೆಸರಿಗೆ ಬಿದ್ದ ಧ್ವನಿ ಕೇಳಿ ಬಂದಿತು. ಆಮೇಲೆ ಹೊಳೆಯಿತು ಗೋವಿಂದನ ಅಗ್ನಿಪೂಜೆಗೆ ಕಾರಣ. ಅಷ್ಟೆಲ್ಲ ಮುಂಡಕ, ಕೇದಗೆ ಬೆಳೆದಿರುವ ಸ್ಥಳದಲ್ಲಿ, ಕತ್ತಿಯ ಕೆಲಸ ವ್ಯರ್ಥವಾದ್ದು ಮಾತ್ರವಲ್ಲ, ಹಾವುಗಳ ಬಿಡಾರವೂ

ಇರಬಹುದು. ಇದ್ದದ್ದೂ ನನಗೆ ಮರವೆಯಾಗಿತ್ತು. 'ಇದೆ' ಎಂದು ಹೇಳಿದ್ದರೆ, ಅವನು ಹಿಂದೆಮುಂದೆ ನೋಡುತ್ತಿದ್ದ. ಈಗ ಬಾವಿ ಇದೆ ಎಂದಂತಾಯಿತು. ಹಿಂದಿನ ಕಾಲದವರು ಕಲ್ಲು ಮರಿಗೆಗೆ ನೀರನ್ನು ಒಯ್ಯುತ್ತಿದ್ದುದು ಅಲ್ಲಿಂದ. ಅದಕ್ಕಾಗಿಯೇ ಯಾರಾದರೂ ಆ ಸ್ಥಳದಲ್ಲಿ ಬಾವಿ ತೋಡುತ್ತಾರೆಯೇ? ಹಿಂದೆ ಅಲ್ಲಿ ಕೆಲವು ಮನೆ, ಮಠಗಳೂ ಇದ್ದು, ಬಾವಿಯೂ ಇದ್ದುದರಿಂದ, ಪರೋಪಕಾರ ಮಾಡುವ ಬುದ್ಧಿ ಬಂದುದರಿಂದ, ಅರವಟ್ಟಿಗೆಯನ್ನು ಇಟ್ಟಿರಲೂ ಬಹುದು. ನೀರಿನ ತೊಟ್ಟಿ ಇದ್ದೇ ಇದೆ. ಅದಕ್ಕಾಗಿ ಆ ನೆಲದಲ್ಲಿ ತುಂಬ ಸುತ್ತಾಡಿದೆ. ನೂರಾರು ವರ್ಷಕಾಲ ಎಲೆಗಳು ಬಿದ್ದು ಕೊಳೆತು, ನೆಲದ ಮಣ್ಣಿನೊಂದಿಗೆ ಸೇರಿ ಹೋಗಿತ್ತು. ಆದರೂ ಅಲ್ಲಿ, ಇಲ್ಲಿ, ಮನೆಗಳ ಪಂಚಾಂಗಗಳಂತೆ ಕೆಲವು ಪಾಯಗಳೂ ಕಾಣಿಸಿದವು. ಒಂದು ಕಡೆ ಕಾಟು ಕಲ್ಲುಗಳಿಂದ ಕಟ್ಟಿದ ಚಿಕ್ಕ ಕಟ್ಟೆ ಕಾಣಿಸಿತು. ತುಂಬ ಸಂತೋಷಗೊಂಡು ಗೋವಿಂದನ ಮನೆಗೆ ಹೋದೆ. ಗೋವಿಂದನನ್ನು ಹೊರಕ್ಕೆ ಕರೆದು ಅದೇ ಸ್ಥಳಕ್ಕೆ ತಿರುಗಿ ಕರೆದುಕೊಂಡು ಬಂದೆ. ಅವನೊಡನೆ ಮಾತನಾಡುತ್ತ "ಇಲ್ಲೊಂದು ಬಾವಿ ಇದೆ, ನೋಡಿದೆಯಾ" ಎಂದೆ.

"ಅದನ್ನು ನಾನು ಕಂಡಿದ್ದೆ" ಎಂದ ಅವನು.

"ಎಷ್ಟು ಆಳು ಆಳ ಇದ್ದೀತು?"

"ಮೂರು ನಾಲ್ಕು ಆಳಾದರೂ ಇದ್ದೀತು"

"ಕೆರೆಗಿರೆ ಮಾಡುವ ಬಾಬಲ್ಲ."

"ತೋಟದ ಅಂದಾಜಿಗೋ. ಇಲ್ಲೇತಕ್ಕೆ ಕೆರೆ? ಹತ್ತು ಮಾರು ಆಚೆ ಸರಿದರೆ ಇನ್ನಷ್ಟು ತಗ್ಗಿದೆಯಲ್ಲ. ಅಲ್ಲಿ ಒಂದು ಹೊಂಡವನ್ನು ತೆಗೆದು ನೋಡಬಹುದು. ಒಳ್ಳೆಯ ನೀರಿನ ಸೆಲೆ ಸಿಕ್ಕಿತು" ಎಂದ.

ಅವನೇ ಕೊಟ್ಟ ಸಲಹೆಯಿಂದ ಅವನನ್ನೂ ಅಡ್ಡದಾರಿಗೆ ಎಳೆಯುವ ಯೋಚನೆ ನನ್ನದು. ಅವನ ಜೊತೆಯಲ್ಲಿ ಕೆಳಕ್ಕಿಳಿದು ಹೋದೆ. ಆಚೀಚಿನ ಸ್ಥಳಗಳನ್ನು ತೋರಿಸಿ, "ಈ ಸ್ಥಳವಾದರೆ ತೋಟಕ್ಕೆ ಹೇಗೆ? ಕೊಟ್ಟಾರೋ ಇಲ್ಲವೋ, ಆ ಮಾತು ಬೇರೆ. ತೀರ ಮರಗೊಡಲು ಜಾಗ; ಪ್ರಯೋಜನಕ್ಕೆ ಬರುತ್ತದೆ ಎನ್ನಲಾರೆ" ಎಂದೆ.

"ಅದೂ ಹೌದು" ಎಂದ ಗೋವಿಂದ.

ಆಮೇಲೆ ಅವನನ್ನು ತಿರುಗಿ ಬಾವಿಯ ಬಳಿಗೆ ಕರೆದುಕೊಂಡು ಬಂದು, "ದೊದಲು ಇಲ್ಲಿ ನೀರಿನ ಅಂದಾಜು ಮಾಡಿದರಾಗಬಹುದು. ಎಷ್ಟು ಕಂತದಲ್ಲಿ ನೀರಿದೆ- ಎಂತ. ಈಗ ಕೆಸರು ತುಂಬಿರಬೇಕು. ಅದಕ್ಕೆ ಎಷ್ಟು ಆಳು ಕೆಲಸ ಹಿಡಿದೀತು? ಈ ಬಾವಿ ಇರುವ ಜಾಗ ನಮ್ಮ ಕುಮ್ಕಿಯ ಒಳಗಿದ್ದರೂ ಇದ್ದೀತು- ಎಂದು ನನ್ನ ಅಂದಾಜು. ಬಾವಿ

ಚೆನ್ನಾಗಿದ್ದರೆ, ಯಾಕೆ ಇಲ್ಲೇ ನಾನು ಒಂದು ಒಕ್ಕಲು ಮನೆಯನ್ನು ಕಟ್ಟಬಾರದು?" ಎಂದು ಹುರಿದುಂಬಿಸಿದೆ. ಮರುದಿನ ಗೋವಿಂದ ತನ್ನ ಜತೆಗೆ ನಾಲ್ಕು ಆಳುಗಳನ್ನು ಕರೆದುಕೊಂಡು ಒಡೆಯರ ಮನೆಯ ಕುಮ್ಕಿಯಲ್ಲಿದ್ದ ಹಾಳು ಬಾವಿಯನ್ನು ಚೊಕ್ಕ ಮಾಡುವುದಕ್ಕೆ ಹೊರಟ. ನಾನು ಆ ದಿನ ಬೆಳಗ್ಗಿನಿಂದ ಸಂಜೆಯ ತನಕವೂ ಅಲ್ಲೇ ಕಾದು ಕೂತಿದ್ದೆ.

ಗೋವಿಂದ ಚಿಂತೆಯಿಲ್ಲ, ಬುದ್ಧಿವಂತ. ಆಳ ನೋಡುವುದಕ್ಕೆ ಒಂದು ಗುಂಡುಕಲ್ಲನ್ನು ತಂದು, ಹಗ್ಗ ಕಟ್ಟಿ ಕೆಳಕ್ಕಿಳಿಸಿದ. "ಇಳಿಯುತ್ತೀಯಾ?" ಎಂದು ಕೇಳಿದೆ. "ತಡೆಯಿರಿ" ಅಂದ. ಬಳಿಕ ಮನೆಗೆ ಓಡಿಹೋಗಿ, ಒಂದು ಎಣ್ಣೆಯ ದೊಂದಿಯನ್ನು ಮಾಡಿಕೊಂಡು ಬಂದ. ಅದನ್ನೊಂದು ಕೊಕ್ಕೆಗೆ ಕಟ್ಟಿ, ಬಾವಿಯೊಳಕ್ಕೆ ಇಳಿಸಿದ. ನಾನು ಬಳಿಗೆ ಹೋಗಿ ಇಣಿಕಿ ನೋಡಿದೆ. ದೊಂದಿ ಕೆಳಗಿನ ತನಕ ಹೋಯಿತು! ನಂದಲಿಲ್ಲ. ಆದರೂ, ಅದು ನೆಲವನ್ನು ಬೆಳಗಿದ ಹಾಗೆ ಕಾಣಿಸಲಿಲ್ಲ. ಅದರಿಂದೇನು ಗೊತ್ತಾಗುತ್ತದೆ- ಎಂದುಕೊಂಡೆ. ಆತ ದೊಂದಿಯನ್ನು ತೆಗೆದ ಮೇಲೆ, ಒಂದು ಮರಕ್ಕೆ ಹಗ್ಗವನ್ನು ಬಿಗಿದು ಅದನ್ನು ಬಾವಿಗೆ ಇಳಿಸತೊಡಗಿದ. ಇಳಿದು, ನೆಲವನ್ನು ಕೋಲಿಂದ ಕುತ್ತಿ, ಬಾವಿಯ ಎಲ್ಲ ಮಗ್ಗುಲುಗಳೂ ಸರಿಯಾಗಿವೆಯೇ, ಆಚೀಚೆ ಪೊಟರೆಗಳಿವೆಯೇ- ಎಂದು ತನಿಖೆ ಮಾಡಿ, ಮೇಲಕ್ಕೆ ಬಂದ. ಬಂದವನು ಹೇಳಿದ: "ಅಯ್ಯಾ, ದೊಂದಿಯನ್ನು ಬಾವಿಯ ತಳ ನೋಡಲಿಕ್ಕೆ ಒಯ್ದುದ್ದಲ್ಲ, ಮೊಂದಿ ಉರಿಯುತ್ತಮೋ ಇಲ್ಲವೋ ಎಂದು ನೋಡಲಿಕ್ಕೆ ಕೆಳಗಿಳಿಸಿದ್ದು. "ಇಸಗಾಳಿ" ಉಂಟೋ ಅಂತ ನೋಡಲಿಕ್ಕೆ ಇಳಿಸಿದ್ದು. ನನ್ನ ಸೋದರಮಾವ ಒಬ್ಬ ಹಿಂದುಮುಂದು ನೋಡದೆಯೇ ಒಂದು ಬಾವಿಗಿಳಿದು ಮತ್ತೆ ಮೇಲಕ್ಕೆ ಬರಲಿಲ್ಲ. ಅವನನ್ನು ತೆಗೆಯಲು ಹೋದ ಅವನ ಇಬ್ಬರು ಮಕ್ಕಳೂ ಮೇಲೆ ಬಾರದಿದ್ದ ಮೇಲೆ, ಅದು ಇಸಗಾಳಿ ಉಪದ್ರ ಎಂತ ಗೊತ್ತಾಯಿತು" ಎಂದ.

"ಇಸಗಾಳಿ ಅಂದರೆ ಹಾಯ್ಗುಳಿ, ಗೀಯ್ಗುಳಿ ಭೂತ ಅನ್ನುತ್ತಾರಲ್ಲ! ಬಾವಿಯೊಳಗಿರುತ್ತದೆಯೇ ಅಂಥ ಭೂತ?" ಎಂದು ಕೇಳಿದೆ.

"ಅಯ್ಯೋ, ಇಸಗಾಳಿ ಏನೆಂದು ನಿಮಗೆ ಗೊತ್ತಾಗಲಿಲ್ಲವೇ 'ಇಸಗಾಳಿ' ಭೂತವಲ್ಲ, ಮೂಗಿಗೆ ಬಡಿಯುವ ಇಸಗಾಳಿ" ಎಂದು ಹೇಳಿದ.

ಆಗ ನನ್ನ ಸೂಕ್ಷ್ಮಬುದ್ಧಿಗೆ ಗೋವಿಂದ ಹೊರಟದ್ದು "ವಿಷಗಾಳಿಯ" ಪರೀಕ್ಷೆಗೆ ಎಂಬುದು-ಗೊತ್ತಾಯಿತು. ಕೆಲಸ ತೊಡಗಿತು; ಆತ ಕೆಳಕ್ಕಿಳಿದ. ಅವನ ಮನೆಯ ಹೆಂಗಸರು ಬಂದು ಅವನು ಬುಟ್ಟಿಗಳಲ್ಲಿ ತುಂಬಿಸಿಕೊಟ್ಟ ಕೆಸರನ್ನು ಮೇಲಕ್ಕೆ ಎಳೆದು, ಎಳೆದು ರಾಶಿ ಹಾಕಿದರು. ಒಂದು ಇಡೀ ದಿವಸ ಹಾಗೆಯೇ ಕೆಲಸ ಮಾಡಿದರು. ಅಷ್ಟೊಂದು ಕೆಸರು ಅದರಲ್ಲಿ ಹೇಗೆ ತುಂಬಿಕೊಂಡಿತೋ! ಆಮೇಲೆ ಅವನ ಹಾರೆಯ ಬಾಯಿಗೆ ಠಣಕ್ ಅಂತ ಏನೋ ಬಡಿಯಿತಂತೆ. ಅಷ್ಟಕ್ಕೆ, ಕೆಲಸ ಬಿಟ್ಟು ಆತ ಮೇಲಕ್ಕೆ ಬಂದ. ಆಗ ಹೊತ್ತು

ಬೈಯ್ಯಾಗಿತ್ತು. "ಕೊಚ್ಚಿನ ಲೆಕ್ಕ ನಾಳೆಗೆ" ಎಂದು ಹೇಳಿ ನಾನು ಅವರಿಗೆ ಒಂದೊಂದು ರೂಪಾಯಿ ನಗದು ಇನಾಮು ಕೊಟ್ಟು ಕಳುಹಿಸಿದೆ.

ಮರುದಿನ ಅದೇ ಕೆಲಸವನ್ನು ಮುಂದುವರಿಸಿದೆ. ಕೆಸರಿನ ಬದಲು ಮಿದುವಾದ ಜೇಡಿಮಣ್ಣು ಮೇಲೆ ಬರತೊಡಗಿತು. ಕೆಲಸದ ಹೆಂಗಸರು ಎತ್ತಿ ರಾಶಿಯೊಟ್ಟಿದ ಮಣ್ಣಿನ ಮೇಲೆಯೇ ನನ್ನ ಕಣ್ಣಿತ್ತು. ಅವರಿಗೆ ಅದರ ಯೋಚನೆಯಿರಲಿಲ್ಲ. ನಾನು ಆಟಕ್ಕೆ ಕುಳಿತವನಂತೆ, ಒಂದು ಕೋಲನ್ನು ಹಿಡಿದು, ಅದನ್ನು ಕುತ್ತಿ, ಸದ್ದನ್ನು ಕೇಳುತ್ತ ಹೊತ್ತು ಕಳೆದೆ. "ಕಳ್ಳನ ಮನಸ್ಸು ಹುಳ್ಳ ಹುಳ್ಳಗೆ" ಎಂಬಂತೆ, ನನ್ನ ಗುಟ್ಟು ಎಲ್ಲಾದರೂ ರಟ್ಟಾಗುತ್ತದೆಯೇ- ಎಂಬ ಭಯ ನನಗೆ. ಆ ಸಂಜೆಯ ತನಕವೂ ಅದೇ ಕೆಲಸ ಮುಂದುವರಿಯಿತು; ಸಂಜೆ ಇಳಿಹೊತ್ತಿಗೆ ಗೋವಿಂದ ಮೇಲಕ್ಕೆ ಬಂದ: "ಅಯ್ಯಾ, ಮೂಡುದಿಕ್ಕಿನಲ್ಲಿ ನಾಲ್ಕು ಬೆರಳು ದಪ್ಪಕ್ಕೆ ನೀರಿನ ಸೆಲೆ ಉಂಟು; ಎಂಥಾ ನೀರು ಅನ್ನುತ್ತೀರಿ! ಬಾವಿಗೆ ಒಯಿನಾದ ಜಾಗ. ಆದರೆ ಬಾವಿಯ ಮಗ್ಗುಲು ಕುಸಿದರೂ ಕುಸಿಯಬಹುದು. ಬರಿ ಜೇಡಿಮಣ್ಣು. ನಾಳೆ ಬಂದು ನೋಡಿ; ಮೊಣಕಾಲು ಗಂಟಿನ ತನಕವೂ ಅದರಲ್ಲಿ ನೀರು ತುಂಬದೆ ಹೋದರೆ ನನ್ನ ಹೆಸರು ಗೋವಿಂದ ಎಂಬುದು ಸುಳ್ಳು" ಎಂದು ಭವಿಷ್ಯ ನುಡಿದ.

ಮರುದಿನ ಅದೇ ಗೋವಿಂದನನ್ನು ನನ್ನ ಮನೆಗೆ ಕರೆದೆ; ಸೀತೆ ಅಡುಗೆ ಮನೆಯಲ್ಲಿದ್ದ ವೇಳೆಯನ್ನು ನೋಡಿಕೊಂಡೇ, ಅವರಿಗೆ ಸಲ್ಲಬೇಕಾದ ಕೊಚ್ಚನ್ನು ಕೊಟ್ಟು ಕಳುಹಿಸಿಕೊಟ್ಟೆ. ಕೊಡುತ್ತ "ಮೊದಲು ಶ್ಯಾನುಭಾಗರಿಗೆ ನಕ್ಷೆ ತೋರಿಸಿ, ಆ ಜಾಗ ನನ್ನದು ಹೌದೇ ಅಲ್ಲವೋ ಎಂಬುದನ್ನು ಖಾತ್ರಿ ಮಾಡಿಕೊಳ್ಳುತ್ತೇನೆ. ನನ್ನ ಕುಮ್ಕಿಯ ಗಡಿಯ ಆಚೆಗೆ ಇದ್ದುದಾದರೆ, ನಾವು ಮಾಡಿದ ಕೆಲಸ ವ್ಯರ್ಥವಾದೀತು. ಅದು ನನ್ನದೇ ಆದರೂ ಆ ಕಲ್ಲು ಕಟ್ಟಿಸುವುದಕ್ಕೇ ಒಂದು ಮಳೆಗಾಲ ಬಿಡುವುದು ಲೇಸು" ಎಂದೆ.

ಆತ ಕೊಚ್ಚನ್ನು ಕಟ್ಟಿಕೊಂಡು ಈಚೆಗೆ ಬರುತ್ತ, "ಒಡೆಯ, ಅದರಲ್ಲಿ ಒಂದು ವಿಚಿತ್ರ ಕಂಡೆ ನಾನು" ಎಂದ.

"ಏನು ವಿಚಿತ್ರ?" ಎಂದು ಪ್ರಶ್ನಿಸಿದೆ.

"ನಿಮಗೆ ಅದನ್ನು ಹೇಳಲಿಲ್ಲ ನಾನು. ನೀವೂ ಸಹ ಕಂಡಿರಲಾರಿರಿ. ಹೆಂಗಸರಿದ್ದರು ಅಂತ ನಾನೂ ಹೇಳಲಿಲ್ಲ. ನೆಲ ಕೊಚ್ಚುವಾಗ ಒಂದು ಎಲುಬಿನ ಗೂಡು ಪುಡಿಪುಡಿಯಾಯಿತು. ಯಾವ ರಾಯನ ಕಾಲದಲ್ಲೋ ಯಾರೋ, ಯಾರನ್ನೋ ಅಲ್ಲಿ ಕೊಂದು ಹಾಕಿದರೋ ಅಥವಾ ಯಾರೋ ಬಾವಿಗೆ ಬಿದ್ದು ಪ್ರಾಣ ಕಳೆದುಕೊಂಡರೋ- ಏನೋ, ಎಲುಬೆಲ್ಲ ತುಂಡು, ತುಂಡು. ನನ್ನ ಹಾರೆಯ ಪೆಟ್ಟಿಗೂ ಒಂದಿಷ್ಟು ಪುಡಿಯಾಯಿತು."

"ಯಾವುದಾದರೂ ದನ, ಗಿನ ಕಾಣದೆ ಬಿದ್ದು ಸತ್ತುಹೋಯಿತೋ, ಏನೋ" ಎಂದೆ ನಾನು.

"ಇಲ್ಲ ಒಡೆಯ, ಕಡೆಯ ಒಂದು ಕೆಸರಿನ ಬುಟ್ಟಿಯಲ್ಲಿ ನಾನು ಕೈಗೆ ಬಂದ ತಲೆಯೋಡನ್ನೂ ತುಂಬಿಸಿ ಕಳುಹಿಸಿದ್ದೆ. ನನಗೆ ಎದೆ ನಡುಗಿ ಕಂಗಾಲು. ಯಾರನ್ನು ಕೊಂದಿದ್ದರೂ ಸಮವೇ; ಪ್ರಾಣ ತಕ್ಕೊಂಡರೂ ಸಮವೇ. ಆ ಸತ್ತ ಜೀವ ಪ್ರೇತವಾಗಿ ಉಳಿದರೇನು ಗತಿ!"

"ನಿನಗೆ ಮರುಳು! ಯಾವ ರಾಯನ ಕಾಲದಲ್ಲಿ ಆದದ್ದೋ, ಏನೋ" ಎಂದು ಹೇಳಿ, ಅವನನ್ನು ಕಳುಹಿಸಿಕೊಟ್ಟೆ. ಆತ ಹೊರಟು ಹೋದ ಮೇಲೆ ನನ್ನನ್ನು ಕುತೂಹಲ ವಿಪರೀತವಾಗಿ ಕಾಡತೊಡಗಿತು. ಆ ಮಧ್ಯಾಹ್ನ ಊಟ ಮಾಡಿದವ, ಕೈಯಲ್ಲಿ ಒಂದು ಕತ್ತಿಯನ್ನು ಹಿಡಿದುಕೊಂಡು, ನನ್ನ ಪಾಲಿನ ಕೊಪ್ಪರಿಗೆಯನ್ನು ಹುಡುಕಲು ಹೊರಟೆ. ಕೈಯಲ್ಲೊಂದು ಗೋಣಿಯ ಚೀಲವನ್ನು ಹಿಡಿದುಕೊಂಡೆ. ಬರಿಯ ಎರಡು ದಿನಗಳೊಳಗೇನೆ ಅಲ್ಲಿ ಹರವಿ ಬಿದ್ದ ಯಾವತ್ತು ಕೆಸರು, ಮಣ್ಣು, ಆ ನೆರಳಿರುವ ಜಾಗದಲ್ಲಿ ಒಣಗುವ ಸಂಭವವಿರಲಿಲ್ಲ. ಅಲ್ಲಿಗೆ ಹೋಗಿ ಕೆಸರಿನ ಭಾಗವನ್ನು ಕೈಹಾಕಿ ಕೆದಕುತ್ತ ನೋಡಿದೆ. ಮಣ್ಣು, ಕೆಸರು ಸೇರಿದ ಹೆಂಟೆಗಳನ್ನು ನನ್ನ ಕತ್ತಿಯ ಪರೀಕ್ಷೆಗೆ ಗುರಿ ಮಾಡಿದೆ. ಅವುಗಳೊಳಕ್ಕೆ ಸೇರಿದ ಗಡಿಗೆ, ಮಡಿಕೆಗಳ ಚೂರುಗಳು ಒಂದೆರಡಲ್ಲ! ಅವು ಕೂಡ, ಜನರು ಬಳಸುತ್ತಿದ್ದ ಬಾವಿ ಅದು ಎಂದು ಹೇಳುತ್ತಿದ್ದವು. ಒಂದೆರಡು ತಾಮ್ರದ ಸಟ್ಟುಗದ ಹಾಗಿದ್ದ ವಸ್ತುಗಳೂ ಸಿಕ್ಕಿದುವು. ಮಣ್ಣು ಮತ್ತು ಕೆಸರು ಬೆರೆತು ಒಂದಾದ ರಾಶಿಗಳನ್ನು ಕೆದಕಿದಾಗ- ಗೋವಿಂದ ಹೇಳಿದ ಸುದ್ದಿ ತೀರ ನಿಜ ಎಂಬುದು ಕಾಣಿಸಿತು. ಮನುಷ್ಯರ ಕಾಲು, ಕೈಗಳ ಮೂಳೆಗಳೂ ಹಲವಾರು ಪಕ್ಕೆಲುಬಿನ ತುಂಡುಗಳೂ ಸಿಕ್ಕಿದುವು. ಮತ್ತೂ ಮತ್ತೂ ಹರಡಲೇ, ಬೇಡವೇ- ಎಂಬ ಭಯವೂ ಉಂಟಾಯಿತು. ಕುತೂಹಲ ಹೆಚ್ಚಿ ಭಯವನ್ನು ಮರೆತೆ. ಕೆಸರು ಮೆತ್ತಿದ ಕರಟದ ಚಿಪ್ಪಿನಂತಿರುವ ಒಂದು ತಲೆಯೋಡು ಕಾಣಸಿಕ್ಕಿತು. ಅದಕ್ಕೆ ಕೆಳಗಿನ ದವಡೆಯಿರಲಿಲ್ಲ; ಮೇಲಿನ ದವಡೆ ಭದ್ರವಾಗಿತ್ತು. ಕಣ್ಣುಕುಳಿ ಕಾಣಿಸುತ್ತಿತ್ತು. ಅದರ ಹಲ್ಲುಗಳು ಬಿದ್ದಿರಲಿಲ್ಲ. ಮುಟ್ಟಿದೆ, ಹಿಡಿದೆ, ಬಿಟ್ಟೆ. ಅಷ್ಟೆಲ್ಲವನ್ನು ನೋಡಿ, ಒಂದು ಕೋಲಿನ ತುದಿಗೆ ಅದನ್ನು ಸಿಕ್ಕಿಸಿ, ಎತ್ತಿ, ಈಚೆ ಕಡೆ ಇರಿಸಿದೆ. ಅಜ್ಜಿ ಹೇಳಿದ ಕಾಪಾಲಿಕರ ನೆನಪು ಬಂತು. ಮನಸ್ಸಿಗೆ ಸ್ವಲ್ಪ ಭಯವೋ, ಅಳುಕೋ, ಇನ್ನೇನೋ ಉಂಟಾಗಿ, ತುಸು ಹೊತ್ತು ದಿಗ್ಭ್ರಾಂತನಾಗಿ ಕುಳಿತೆ. ಹುಡುಕುವ ಕೆಲಸವನ್ನೆಲ್ಲ ಇಂದೇ ಮುಗಿಸಬೇಕೆಂಬ ಹಟ ಮನಸ್ಸಿನಲ್ಲಿ ಮೂಡಿತು. ಮತ್ತಷ್ಟು ಅನ್ವೇಷಣೆ ನಡೆಸಿದೆ. ನನ್ನ ಶ್ರಮಕ್ಕೆ ಆರ್ಥಿಕ ಬಹುಮಾನವೂ ದೊರೆಯಿತು. ಕೆಸರಿಂದಾವೃತವಾದ, ಭಾರವಾದ ಒಂದು ಸರ ಸಿಕ್ಕಿತು. ಗೋಣಿ ಅರಿವೆಯಲ್ಲಿ ಅದನ್ನು ತೀಡಿದೆ. ಅದು ಚಿನ್ನದ್ದೆಂಬುದು

ಗೋಚರವಾಯಿತು. ಅದೊಂದು ಕೊರಳ ಸರ. ನಾನು ತೆಗೆದಿರಿಸಿದ ಕಪಾಲಧಾರಿ ಹೆಣ್ಣಿನದೇ ಕೊರಳಿನದ್ದಿರಬೇಕು. ಇನ್ನಿನ್ನೂ ಹುಡುಕಿದರೆ ನನಗೆ ಬಳೆಗಳು, ಕಾಲುಂಗರ, ಅಥವಾ ಬೆಂಡೋಲೆಗಳು ಸಿಕ್ಕಿಯೇ ಸಿಗಬೇಕು- ಎನಿಸಿತು. ಹೋಗಲಿ, ಕೊಪ್ಪರಿಗೆ ಚಿನ್ನ ಸಿಗದೆ ಹೋದರೂ ಅದರ ಮರಿಯಾದರೂ ಸಿಕ್ಕಿತಲ್ಲ; ಕೊಟ್ಟ ಕೊಚ್ಚಿನ ಖರ್ಚುವೆಚ್ಚ ಹಿಂದಕ್ಕೆ ಬಂದಿತಲ್ಲ- ಎಂಬ ಪುಟ್ಟ ಸಂತೋಷವೂ ಆಯಿತು. ಆ ಭ್ರಮೆಯಿಂದ, ಅಲ್ಲಿ ಮತ್ತೂ ಒಂದೆರಡು ಗಂಟೆಗಳ ಕಾಲವನ್ನು ಕಳೆದರೆ, ಹೆಚ್ಚಿಗೇನೂ ದೊರೆಯಲಿಲ್ಲ. ಚಿನ್ನದ ಸರದಲ್ಲಿ ಕೆಸರಿದ್ದರೂ, ನನ್ನ ಹೆಗಲ ಶಾಲಿನಲ್ಲಿಯೇ ಅದನ್ನು ಗಂಟಕ್ಕಿಕೊಂಡೆ. ತಾಮ್ರದ ತುಣುಕುಗಳನ್ನು ಹೆಕ್ಕಿ ತಂದು ಚೀಲಕ್ಕೆ ಹಾಕಿದೆ. 'ರುಂಡವನ್ನೇನು ಮಾಡಲಿ?' ಎಂಬ ಚಿಂತೆ ಬಂತು. ಈಗಾಗಲೇ ಮಾಟೆಯಿಂದ ತಂದೊಂದು ಎಲುಬಿನ ಚೂರನ್ನು ಹಟ್ಟಿಯ ಅಟ್ಟದಲ್ಲಿ ಇರಿಸಿದ್ದುಂಟು; ಅದರ ಜತೆಗೆ ಇದು; ಒಯ್ಯುತ್ತೇನೆ. ಅಜ್ಜಿ ಬೈದರೂ ಚಿಂತೆಯಿಲ್ಲ. ಸಮಯವನ್ನು ಸಾಧಿಸಿ, ಅದನ್ನು ಅವರಿಗೆ ತೋರಿಸಿಯೇ ಬಿಡುತ್ತೇನೆ. ಕಪಾಲವನ್ನು ತೋರಿಸುವುದಕ್ಕೆ ಆಗದೆ ಹೋದರೂ ಈ ಒಂದೆರಡು ಚೂರು ಪಕ್ಕೆಲುಬುಗಳನ್ನಾದರೂ ತೋರಿಸುತ್ತೇನೆ- ಎಂದು ಅದನ್ನು ಗೋಣಿ ಚೀಲಕ್ಕೆ ತುಂಬಿಸಿ ಕಳ್ಳನ ಹಾಗೆ ಮನೆ ಕಡೆಗೆ ಹೊರಟೆ. ತೋಟವನ್ನು ಹೊಕ್ಕು, ತೋಟದಿಂದಲೇ ಹಟ್ಟಿಯ ಹಿಂಬಾಗಿಲನ್ನು ಸೇರಿ, ಹಟ್ಟಿಯ ಅಟ್ಟದಲ್ಲಿ ಚೀಲವನ್ನಿರಿಸಿ, ಬಾವಿಕಟ್ಟೆಗೆ ಹೋಗಿ ದಳದಳನೆ ಸ್ನಾನ ಮಾಡಿ ಮುಗಿಸುವ ತನಕವೂ ಸೀತೆ ಕೆಸರು ಮೆತ್ತಿದ ನನ್ನ ಅವತಾರವನ್ನು ಕಂಡು ಮಂಗಳಾರತಿ ಮಾಡದಿದ್ದರೆ ಸಾಕು- ಎಂದು ಅನಿಸುತ್ತಿತ್ತು. ಕೊಳೆಯನ್ನೆಲ್ಲ ತೊಳೆದುಕೊಂಡು, ಯಾವ ಕ್ಷಣಕ್ಕೆ ನನ್ನ ಕಳ್ಳತನದ ಕುರುಹುಗಳು ಮಾಯುವಾದುವೋ, ಆಗ ನನಗೆ ಬಂದ ಧೈರ್ಯದಿಂದಲೋ ಏನೋ, ನನ್ನ ಬಾಯಿಂದ ಹೊರಡುತ್ತಿದ್ದ ಸಂಧ್ಯಾವಂದನೆಯ ಮಂತ್ರ ಸೀತೆಯ ಕಿವಿಗೆ ನಾಟಿತು.

ಅವಳು ಹೊರಕ್ಕೆ ಬಂದವಳು ಅಷ್ಟು ಗಟ್ಟಿ ಸಂಧ್ಯಾವಂದನೆ ಯಾಕೆ? ಶೂದ್ರರು, ಪಾದ್ರರು ಕೇಳಲಿಕ್ಕೋ? ಎಂದಳು. ಆಗ ನನ್ನ ಗಂಟಲು ಕಟ್ಟಿತು. ಮೆಲ್ಲನೆ ಸಂಧ್ಯಾವಂದನೆಯನ್ನು ಮುಗಿಸಿದೆ. ಈಚೆ ಬರುತ್ತ ಮನಸ್ಸಿಗೆ ಅನಿಸಿತು; ನನ್ನ ಸೀತೆ ಹುಟ್ಟಬೇಕಾದ್ದು ಇವತ್ತಲ್ಲ; ಆ ಮನು ಯಾವಾಗ ಸ್ಮೃತಿಯನ್ನು ಬರೆದನೋ ಆ ಕಾಲದಲ್ಲಿ. ಸಾಧ್ಯವಾದರೆ ಅವನ ಮನೆ, ಅವನ ಮನೆತನದಲ್ಲೇ ಹುಟ್ಟಿದ್ದರೆ ಒಳ್ಳೆಯದಿತ್ತು. ನನ್ನಂಥವನು ಇನ್ನೂ ಸಂಧ್ಯಾವಂದನೆ ಮಾಡುತ್ತಿದ್ದಾನಲ್ಲ- ಎಂದು ಸಂತೋಷ ಪಡುವ ಬದಲು, ನಾನು ಅದನ್ನು ಮಾಡಿದ್ದೇ ಗಟ್ಟಿಯಾಯಿತು- ಎಂದ ಅವಳ ಪುರಾತನ ಬುದ್ಧಿಯನ್ನು ನೆನೆದು ನಗು ಬಂದಿತು. ನನ್ನ ನಗು ಒಂದು ಕ್ಷಣದ್ದು. ಅಷ್ಟಕ್ಕೆ ಕಿಟ್ಟಣ್ಣ ನನ್ನನ್ನು ನೋಡಿದ. 'ಅಪ್ಪಯ್ಯ, ನೀನು ನನ್ನನ್ನು ಬಿಟ್ಟು ಹೋದದ್ದು ಎಲ್ಲಿಗೆ?' ಎಂದು ಪ್ರಶ್ನೆ ಮಾಡಿದ. 'ಇನ್ನು ಎಲ್ಲೆಲ್ಲಿಗೂ

ನಿನ್ನನ್ನು ಬಿಟ್ಟು ಹೋಗುವುದಿಲ್ಲ' ಎಂದು ಅವನಿಗೆ ಸಮಾಧಾನ ಹೇಳಿ, ಜತೆಗೆ ಕರೆದುಕೊಂಡು ಬಂದು ಮನೆ ಚಾವಡಿಯಲ್ಲಿ ಕುಳಿತೆ. ಊಟ ಮುಗಿಯುವ ತನಕ ನನ್ನ ಆತುರ ಹೇಳತೀರದು.

ರಾತ್ರೆ ಊಟವನ್ನು ಮುಗಿಸಿದವನು "ಅಜ್ಜಮ್ಮ, ಅಶ್ವತ್ಥದ ಕಟ್ಟೆಗೆ ಹೋಗೋಣವೇ?" ಎಂದು ಕೇಳಿದೆ. 'ಆಯಿತು ಹೋಗುವ' ಎಂದರು ಅವರು. ಅವಸರಿಸಿ ಹಟ್ಟಿಗೆ ಹೋಗಿ, ಎರಡು ತಾಮ್ರದ ತುಣುಕುಗಳನ್ನು ಹಿಡಿದುಕೊಂಡು ಅವರ ಜತೆಗೆ ಹೋಗಿ ಕುಳಿತೆ. ಅಷ್ಟಮಿಯ ಬೆಳದಿಂಗಳು ಆ ಸುತ್ತಲೂ ಹಾಸಿ, ಅಲ್ಲಿನ ಶಾಂತಿಗೆ ಸೊಬಗನ್ನು ತಂದೊಡ್ಡಿತ್ತು. ಅಜ್ಜಿ ತಾವಾಗಿಯೇ ಮಾತನ್ನು ತೊಡಗಿದರು. 'ಏನೋ ಹುಡುಕುತ್ತ ಇದ್ದೀ-ಈ ಎರಡು ಮೂರು ದಿನಗಳಿಂದಲೂ; ಏನು ಗಂಟು ಹುಡುಕಿದೆ?" ಎಂದು ಕೇಳಿದರು.

"ಮನೆಯಲ್ಲಿ ಕಾಣದ್ದಕ್ಕೆ ಹೇಳುತ್ತೀರಾ?"

"ಅಲ್ಲದಿದ್ದರೂ ಗೊತ್ತಾಗುತ್ತದೆ ನನಗೆ; ಹುಡುಕಿ, ಹುಡುಕಿ, ಏನನ್ನೋ ಸಂಪಾದಿಸಿದ್ದೀಯ; ತಾಮ್ರ, ಚಿನ್ನ, ಮಣ್ಣು, ಮಸಣ. ಏನು ಚಪಲವೋ ನಿನ್ನದು!"

ಇವತ್ತೇಕೆ ಅವರು ಇಷ್ಟು ಅಪ್ರಸನ್ನರಾಗಿದ್ದಾರೆ, ನನ್ನ ಅಧಿಕಪ್ರಸಂಗಕ್ಕೆ ಬಯ್ಯುತ್ತಿದ್ದಾರೆ. ಬಯ್ಯಲಿ, ಹಿರಿಯರಲ್ಲವೇ-ಎಂದು ಯೋಚಿಸಿ, ಮುಂದಿನ ಬೈಗಳನ್ನು ನಿರೀಕ್ಷಿಸಿದೆ. ಅವರು ಆ ಕೈಯಲ್ಲಿದ್ದದ್ದನ್ನು ಕೊಡು; ತಾಮ್ರದ ತುಂಡು ತಂದಿದ್ದೀಯ, ಅಷ್ಟೇ ಅಲ್ಲವೇ? ಚಿನ್ನ ಅಡಗಿಸಿಟ್ಟಿದ್ದೀ" ಎಂದರು.

"ಅಡಗಿಸಿಡಲಿಲ್ಲ ಅಜ್ಜಿ; ನೀವು ಬಯ್ಯದಿದ್ದರೆ ಹೇಳುತ್ತೇನೆ- ಆ ಕಲ್ಲು ಮರಿಗೆಯಲ್ಲಿದ್ದ ಹಾಡಿಯಲ್ಲಿ, ನೀವು ಆ ದಿವಸ ನಿಂತಿರಲ್ಲ, ಆ ಅರೆಯ ಹತ್ತಿರ ಒಂದು ಹಾಳು ಬಾವಿಯಿದ್ದಿತು. ನಾನು ಅದನ್ನು ಅಗೆಯಿಸಿದೆ. ಏನೇನೋ ಸಿಕ್ಕಿತು; ಚಿನ್ನವೂ ಸಿಕ್ಕಿತು. ತಾಮ್ರವೂ ಸಿಕ್ಕಿತು; ಮನುಷ್ಯರ ತಲೆಯ ಓಡು ಸಿಗಬೇಕೇ ಅದರಲ್ಲಿ! ಅದನ್ನೂ ತಂದಿದ್ದೇನೆ- ಅದರಿಂದಲೇ ಹೆದರಿಕೆಯಾಯಿತು ನಿಮ್ಮನ್ನು ಮಾತನಾಡಿಸುವುದಕ್ಕೆ. ಯಾವ ರಾಯನ ಕಾಲದಲ್ಲಿ ಅಲ್ಲಿ ಯಾರೇನು ಮಾಡಿದ್ದರೋ! ಹೆಂಗಸೊಬ್ಬಳ ಹೆಣ ಹಾಗೆ ಬಾವಿಯಲ್ಲೇ ಉಳಿಯಬೇಕಾದರೆ; ಸರ ಅವಳದ್ದೇಯೋ ಏನೋ" ಎಂದೆ.

"ತೆಗೆದುಕೊಂಡು ಬಾ. ತಲೆಯೋಡಾದರೆ ಏನಂತೆ? ನಾಳೆ ನಾವು ಸತ್ತ ಮೇಲೆ, ನಮ್ಮನ್ನು ಸುಡದಿದ್ದರೆ, ನಮ್ಮ ಓಡೂ ಒಂದು ಕಡೆ ಹಾಗೆಯೇ ಬಿದ್ದುಕೊಂಡಿರುತ್ತದೆ. ಯಾರ ಕಾಲಿಂದಾದರೂ ನಾವು ತುಳಿಸಿಕೊಳ್ಳುತ್ತೇವೆ; ತುಳಿಸಿಕೊಂಡರೇನಂತೆ? ಆಗ ನಾವು ನಾವಾಗಿರುವುದಿಲ್ಲವಲ್ಲ; ಓಡು ನಮ್ಮದಾಗಿರುವುದು ನಮ್ಮ ದೇಹದಲ್ಲಿ ಉಸಿರಾಡುವಷ್ಟು ಕಾಲ; ಉಸಿರು ಹೊರಟು ಹೋದ ಮೇಲೆ, ದೊದಲೂ ಸಹ, ಅದು ಉಂಟು ಮಾಡಿದವನ ಸೊತ್ತಲ್ಲವೇ?" ಎಂದರು.

ಅವರ ಮಾತನ್ನು ಕೇಳಿ, ತುಂಬ ಧೈರ್ಯವಾಗಿ, ನಾನು ಹಟ್ಟಿಯ ಕಡೆಗೆ ಧಾವಿಸಿದೆ. ಅಲ್ಲಿಂದ ನಾನು ಆ ದಿನ ಒಟ್ಟುಗೂಡಿಸಿ ತಂದ ಚೀಲವನ್ನೇ ಅವರ ಮುಂದಕ್ಕಿಟ್ಟೆ. ಚೀಲದಲ್ಲಿ ಕೈ ತುರುಕಿದರು. ಎಲ್ಲವನ್ನೂ ಮುಟ್ಟಿ ನೋಡಿರಬೇಕು. ನಾನು ದೊದಲು ಕೊಟ್ಟ ತಾಮ್ರದ ತುಣುಕುಗಳನ್ನು ಅದರ ಮೇಲಿಟ್ಟು ಆ ಚೀಲವನ್ನು ತಮ್ಮ ತೊಡೆಯ ಸಮೀಪಕ್ಕಿರಿಸಿಕೊಂಡು, ಬಹಳ ಹೊತ್ತು ಮೌನವಾಗಿ ಕುಳಿತರು. 'ಇದಾದರೆ ಒಂದು ವಿಚಿತ್ರ' ಎಂಬ ಮಾತು ಅವರ ಬಾಯಿಯಿಂದ ಹೊರಟಿತು. ನಾನು ಮೂಕ ಮೌನದಿಂದ ಅವರನ್ನು ಕೇಳತೊಡಗಿದೆ.

"ಇದಾಗಿ ನೂರು ವರ್ಷ ಸಂದಿತೋ, ಸಾವಿರ ವರ್ಷವೋ, ನನಗೆ ಲೆಕ್ಕಾಚಾರ ತಿಳಿಯದು. ಬಹಳ ಕಾಲದ ಹಿಂದೆ ನಡೆದ ಕತೆ. ಹಿಂಡುಗಾನಿಂದ ಬರುತ್ತ, ಕಲ್ಲು ಹಾಸಿನ ಹತ್ತಿರ ನಿಂತಾಗ ಮಂತ್ರಧ್ವನಿ ಕೇಳಿಸುತ್ತದೆ- ಅಂದೆನಲ್ಲ. ಅಲ್ಲಿ ಕೇಳಿಸುತ್ತದೆ ಈಗಲೂ, ಇಂದ್ರಾಯ ಸ್ವಾಹಾ, ಇಂದ್ರಾ ಇದನ್ನಮಃ ಅಂದ ಜನವೇ ಅದು. ಇಂದ್ರ, ವರುಣ, ಮಿತ್ರ- ಎಂದು ದೇವರನ್ನು ಕಲ್ಪಿಸಿಕೊಂಡ ಹಳೆಗಾಲದವರು. ಈಚಿನ ಬ್ರಾಹ್ಮಣರಲ್ಲ. ಅವರಿಗಿಂತ ಪ್ರಾಕಿನವರು, ಅವರಿಗೆ ನಿತ್ಯವೂ ಅಗ್ನಿಹೋತ್ರ ತಪ್ಪಿದ್ದಲ್ಲ. ಆಗಾಗ ಯಜ್ಞ, ಯಾಗ ಮಾಡುವುದು ಇತ್ತು. ಇದ್ದರು ಅಂಥ ಋಷಿಗಳು ನಮ್ಮ ಊರಲ್ಲಿಯೂ ಹಿಂದಕ್ಕೆ ಎಂದ ಹಾಗಾಯಿತು. ದನಕರುಗಳನ್ನು ಸಾಕಿಕೊಂಡು, ಬೇಸಾಯ ಮಾಡಿಕೊಂಡು ಪೇಟೆ ಪಟ್ಟಣದ ಮೋಹವಿಲ್ಲದೆ ಇದ್ದ ಜನರು. ಅವರಿಗೆ ಇಹವೂ ಬೇಕಿತ್ತು; ಪರವೂ ಬೇಕಿತ್ತು; ಇಹ ಇದ್ದರೇನೇ ಪರವುಂಟು. ಇಹವಿಲ್ಲದೆ ಪರವಿದೆಯೇ? ಆದರೆ ಅವರೇನು ಮಾಡಿಯಾರು. ಬಹಳ ಕಾಲ ಅವರ ಬದುಕು ಸಾಗಲಿಲ್ಲ ಅಂತ ಕಾಣಿಸುತ್ತದೆ. ಸುತ್ತಲಿನ ಜನ ಅವರ ಮಾತನ್ನು ಕೇಳಲಿಲ್ಲ- ಅಂತ ಕಾಣುತ್ತದೆ. ಅವರ ಮಂತ್ರಗಳಲ್ಲಿ, ಅವರ ಮಾತುಗಳಲ್ಲಿ, ರಾಮ, ಕೃಷ್ಣರು ಯಾರೂ ಇರಲಿಲ್ಲ. ನನಗೆ ನೋಡು- ರುದ್ರ, ಇಂದ್ರ, ಮರುತ್ತು, ವರುಣ ಅಂದರೆ ಗೊತ್ತಾಗುತ್ತದಪ್ಪ. ಮಿತ್ರ ಎಂಬವ ಯಾರೆಂದು ಅಂದಾಜಾಗುವುದಿಲ್ಲ. ಮತ್ತೆ ನೋಡು- ಈ ವಠಾರಕ್ಕೆ ಬೇರೆಯೇ ಒಂದು ಜನತೆ ಬಂದ ಹಾಗೆ ಕಾಣಿಸುತ್ತದೆ. ಅವರು ಇವೊಂದನ್ನೂ ನಂಬದಿದ್ದವರು. ಯಜ್ಞ, ಯಾಗ ಸುಳ್ಳು, ವ್ಯರ್ಥ ಅಂದರು. ಅವರು ಮೊದಲು ಬಂದ ಜನರಿಗೆ ತುಂಬ, ತುಂಬ ಉಪದ್ರ ಕೊಟ್ಟರು. ಹವ್ಯಕವ್ಯ ಎರೆಯುವ ಸಟ್ಟುಗಗಳನ್ನು ಕಿತ್ತು ಬಾವಿಗೆ ಎಸೆದು ಕಂಗಾಲುಗೊಳಿಸಿದರು. ಕಾಲಗತಿ ಬದಲಿಸಿತು. ಜನಕ್ಕೆ ಇಂದ್ರ, ವರುಣರು ಬೇಡವಾದರು. ಆಗಿರಬೇಕು ಹಾಗೆಯೇ- ಎಂದು ನನ್ನ ಅಂದಾಜು. ಇನ್ನಾರೋ ಒಬ್ಬನ ಹೆಸರನ್ನು ಹೇಳಿಕೊಂಡು ತಿರುಗಾಡುವ ಹೊಸ ಜನರು ಈ ಭಾಗದಲ್ಲೆಲ್ಲ ಸುತ್ತಾಡಿದ ಹಾಗೆ ಕಾಣಿಸುತ್ತದೆ. ಕಾವಿ ಶಾಟೆಯ ಹಾಗಿದ್ದ ಅರಿವೆಯನ್ನು ತೊಟ್ಟು, ತಲೆ ಬೋಳಿಸಿಕೊಂಡು,

ಭಿಕ್ಷಾಪಾತ್ರೆಯನ್ನು ಹಿಡಿದುಕೊಂಡು ತಿರುಗಾಡಿದರು. ಅದು ನಿಜವಾದ ಕಾವಿಶಾಟಿಯ ಬಣ್ಣವಲ್ಲ, ಅರಿಸಿನ ಬಣ್ಣ- ಕಾಣಿಸುತ್ತದೆ ಕಣ್ಣಿಗೆ. ಅವರೂ ಏನೇನೋ ಮಂತ್ರ ಹೇಳುತ್ತಾರೆ; ಅದರ ಭಾಷೆಯೇ ತಿಳಿಯುವುದಿಲ್ಲ. ಎಲ್ಲಿಂದ ಬಂದರೋ, ಬಂದರು; ಬಹಳ ದಿನ ಇಲ್ಲಿದ್ದರು. ಊರೂರೇ ಅವರಿಗೆ ಮರುಳಾಯಿತು. ಅಂದರೇನು? ಈ ಊರವರು- ಇಂದ್ರ, ವರುಣರನ್ನು ಮೂಲೆಗೆ ಹಾಕಿ, ಅವರು ಹೇಳಿದ ಹೊಸ ದೇವರುಗಳನ್ನು ನಂಬಿದರು. ಅವರು ಸಹ 'ಕರ್ಮ' ಅಂದರು; ಅದರದೇ ಏನೋ ಒಂದು ಚಕ್ರ-ಎಂದರು. ಧರ್ಮದ್ದು ಸಹ ಒಂದು ಚಕ್ರ ಅಂದ ಹಾಗೆಯೂ ಕಾಣುತ್ತದೆ. ಅವರು ದೇವರಿದ್ದರು ಅಂದರೆ; ಇಲ್ಲ ಅಂದರೆ? ತಿಳಿಯುವುದಿಲ್ಲ. ಆದರೂ ಕೂತುಕೊಂಡು ಧ್ಯಾನ ಮಾಡುವ ಯಾವನನ್ನೋ ಇರಿಸಿಕೊಂಡು ಪೂಜೆ ಮಾಡುವ ಹಾಗೆ ಕಾಣುತ್ತದೆ. ನನಗೆ ಅಂದಾಜಾಗದ ಯಾವುದೋ ಒಂದು ದೇವರು ಅದು."

"ಬುದ್ಧನೇ?"

"ನಿನಗೆ ಹೇಗೆ ಗೊತ್ತು, ಮಗು?"

"ಅಲ್ಲ, ಹಿಂದೆ ಬುದ್ಧ ಅಂತ ಒಬ್ಬ ಮಹಾವ್ಯಕ್ತಿಯಿದ್ದ. ಅವನು ತನ್ನದೇ ಆದೊಂದು ಮತವನ್ನು ಬೋಧನೆ ಮಾಡಿದ. ಅವನಿಗೂ ಆ ಕಾಲದ ಬ್ರಾಹ್ಮಣರಿಗೂ ಅಷ್ಟಕ್ಕಷ್ಟೆ."

"ಹಾಂ, ಹಾಗಿದ್ದರೆ ಸರಿ. ಬುದ್ಧಂ ಶರಣಂ ಗಚ್ಛಾಮಿ. ಸಂಘಂ ಗಚ್ಛಾಮಿ ಎನ್ನುವ ಮಂತ್ರ ಕೇಳಿಸುತ್ತದೆ. ಗಚ್ಛಾಮಿ ಅಂದರೇನು?"

"ಬುದ್ಧನಿಗೆ ಶರಣು ಹೋಗುತ್ತೇನೆ; ಸಂಘಕ್ಕೆ ಶರಣು ಹೋಗುತ್ತೇನೆ ಎಂಬುದು ಅವರ ಮಂತ್ರ."

"ಹೋ ಬೌದ್ಧಾವತಾರ-ಎಂಬುದು ಅದನ್ನೋ! ಬತ್ತಲೆ ಬೌದ್ಧನಿಗೇ... ಎಂದು ಮಂಗಳ ಪದ ಹೇಳುತ್ತಾರಲ್ಲ. ಆದರೆ ಅವನು ಬತ್ತಲೆ ದೇವರಲ್ಲ; ಅವನ ಮೈಮೇಲೆ ವಸ್ತ್ರವಿದೆ; ಆ ಮೇಲಿನ ಕತೆ ಕಷ್ಟದ್ದು. ಆಮೇಲೆ ನಡೆದದ್ದು ಏನು ಅನ್ನುತ್ತೀಯಾ? ಏನೇನೂ ಸ್ವಾರಸ್ಯವಿಲ್ಲದ ಕತೆ. ಕಲ್ಲು ಮಂಟಪದ್ದೇ ಕತೆ ಅದು. ಜನ ಮರುಳೋ, ಜಾತ್ರೆ ಮರುಳೋ ಅಂತ ಮಾತಿಗೆನ್ನುತ್ತಾರೆ. ಎರಡೂ ಮರುಳೇ. ಈ ಊರಿನ ಅರಸನಿಗೆ, ಹಳೆಯ ಅರಿವೆಯ ಮೇಲೆ ಬೇಸರ ಬಂದು ಹೊಸ ಬಟ್ಟೆ ಖರೀದಿ ಮಾಡಿದ. ಇದ್ದಕ್ಕಿದ್ದ ಹಾಗೆಯೇ ಅವನು ಯಜ್ಞ, ಯಾಗ ಮಾಡುವುದನ್ನು ಬಿಟ್ಟು, ಊರಿನ ಬ್ರಾಹ್ಮಣರನ್ನು ಬಯ್ಯಲಿಕ್ಕೆ ಶುರು ಮಾಡಿದ; ಅದರ ಬದಲಿಗೆ ಹೊಸ ಸನ್ಯಾಸಿಗಳನ್ನು ಸಾಕಿದ. ಊರಿನ ನೂರು ಮಂದಿ ಸಹ ಅರಸನ ದಾರಿ ಹಿಡಿದರು. ಹಿಡಿಯಲಿ; ನನಗೆ ಅದರಲ್ಲೇನೂ ಬೇಸರವಿಲ್ಲ. ದೇವರು ಹೇಗಿದ್ದಾನೆ-ಅಂತ ಯಾರಿಗೆ ಗೊತ್ತು? ಒಂದು ದೇವರನ್ನು ಬಿಟ್ಟರು; ಇನ್ನೊಂದು ದೇವರನ್ನು

ಹಿಡಿದರು! ಅಂತು, ದೇವರನ್ನೇ ಬಿಟ್ಟ ಹಾಗೆ ಕಂಡರೂ, ಬಿಡಲಿಲ್ಲ. ಅದರಿಂದ ಬಂದ ಒಂದು ಮೋಸ ಏನು ಗೊತ್ತೇ? ಅದನ್ನು ನೆನೆದರೆ ಮಾತ್ರ ತುಂಬ ಸಂಕಟವಾಗುತ್ತದೆ. ಈ ಕಪಾಲದ ಓಡನ್ನು ಹೊತ್ತ ಹೆಣ್ಣು ಒಬ್ಬ ಮರ್ಯಾದಾವಂತ ಅಗ್ನಿಹೋತ್ರಿಯ ಮಗಳು; ತುಂಬ ಲಕ್ಷಣವಂತ ಹೆಣ್ಣು. ಅವಳಿಗೆ ಪ್ರಾಯ ಇಪ್ಪತ್ತಿತ್ತೋ ಇಲ್ಲವೋ? ಅವಳನ್ನು ಕುಲವಂತನಿಗೆ ಕೊಟ್ಟು, ಮದುವೆ ಮಾಡಿದ್ದರು. ಅವನು ಮಾತ್ರ ಈ ಹೊಸ ಭೈರಾಗಿಗಳ ಹಿಂದೆ ತಿರುಗಾಡಲಿಕ್ಕೆ ಶುರು ಮಾಡಿದ. ಹೆಣ್ಣು ಕೊಟ್ಟ ಮಾವನನ್ನು ಬಯ್ಯಲಿಕ್ಕೆ ತೊಡಗಿದ. ಕೊನೆಗೆ ಒಂದು ದಿವಸ-ಅವನೂ ತಲೆಬೋಳಿಸಿ ಸನ್ಯಾಸಿಯಾದ. ಈ ಹೆಣ್ಣು ಮಗಳು ಬದುಕನ್ನು ಸಹಿಸಲಾರದೆ, ಬಾವಿಗೆ ಹಾರಿಕೊಂಡಳು. ಅವಳೇನು ಮಾಡಿಯಾಳು? ತಾನು ನಂಬಿದ್ದನ್ನು ಮರೆಯಲಾರಳು; ಹೊಸ ಸೀರೆ ಬಂತೆಂದು ಹಳೆಯದನ್ನು ಎಸೆಯಲಾರಳು. ಗಂಡನೇನೇನೋ ಅವಳಿಗೆ ಬೋಧಿಸಿದ್ದ! ನಾವಿಬ್ಬರೂ ಸನ್ಯಾಸಿಗಳಾಗುವ ಎಂದಿದ್ದ. ಅವಳಿಗೆ ಇದ್ದ ಮತ ಬಿಡಲು ಹೇಗೆ ಮನಸ್ಸು ಬಂದೀತು?"

ಅಮೊಂದು ಮಾತ್ರ-ಮಗು, ನನಗೇನೂ ಪಸಂದ ಕಾಣುವುದಿಲ್ಲ. ಹೆಣ್ಣು ಸನ್ಯಾಸ ತಕ್ಕೊಳ್ಳಬಾರದು-ಎಂದು ನಾನೆಂಬವಳಲ್ಲ. ವೈರಾಗ್ಯ ಬರುತ್ತದೆ; ಕೆಲವರಿಗೆ ಅದು ತಾನಾಗಿಯೇ ಬರುತ್ತದೆ. ನಾನು ಬಯಸದೆಯೂ ಅದು ಬರಲಿಲ್ಲವೇ? ಹಾಗೆ ಅದು ಬರಬಾರದು ಅಂತಿಲ್ಲ. ಆದರೆ, ಇವರ ಲೆಕ್ಕಾಚಾರದ ಸನ್ಯಾಸ ಏನು? ಹೆಣ್ಣಿಂದ ದೂರವಿರಬೇಕು, ಅದೇ ಒಂದು ಬಂಧನ ಎಂಬ ಭಾವನೆಯಲ್ಲವೇ? ಹೆಣ್ಣು, ಗಂಡು ಎರಡೂ ಸನ್ಯಾಸ ಹಿಡಿದ ಮೇಲೆ ಹತ್ತಿರ, ಹತ್ತಿರ ಬದುಕಿಕೊಂಡಿದ್ದರೆ ಏನು ಕಥೆಯಾದೀತು ಎಂದು ನೀನೇ ಯೋಚಿಸು. ಅವಳು ಬಾವಿಗೆ ಹಾರಿ ಪ್ರಾಣ ಕಳಕೊಳ್ಳುವ ಬದಲು, ಕಾವಿಬಟ್ಟೆ ತೊಟ್ಟು ಸನ್ಯಾಸಿನಿಯಾಗಿದ್ದರೆ ಠಕ್ಕು ಸನ್ಯಾಸಿನಿ ಆಗುತ್ತಿದ್ದಳು, ಅಷ್ಟೇ! ಆಡುವುದೊಂದು, ಮಾಡುವುದೊಂದು ಆಗುತ್ತಿತ್ತು. ಅದಕ್ಕಿಂತ ಸಾಯುವುದೊಳ್ಳೆಯದಲ್ಲವೇ?'

"ನನಗೆ ತಮಾಷೆ ಕಾಣುವುದು ಅದಲ್ಲ-ಇವಳು ಸತ್ತು ಹೋದಳು. ಪುಣ್ಯಾತ್ಗಿತ್ತಿ; ಸತ್ತ ಮೇಲೆ ಪಾಪದ ಯಾವ ಲೇಪವೂ ಇಲ್ಲ. ಪಾಪವೂ ಇಲ್ಲ; ಪುಣ್ಯವೂ ಇಲ್ಲ; ಮುಗಿಯಿತು, ಒಂದು ಜೀವನದ ಕತೆ."

"ಅಷ್ಟೇಯೇ?"

"ಅಷ್ಟೇ ಅಂತ ನನಗೆ ಅನಿಸುವುದು, ನಾನು ನಂಬುವುದು ಅಷ್ಟನ್ನೇ."

"ಇರಲಿ-ಮುಂದೇನು ಆಯಿತು, ಹೇಳಿ."

"ಮುಂದೆ ಇನ್ನೊಂದು ಹಗಲು ವೇಷ ಬಂದಿತು. ಈ ಊರಿನಲ್ಲಿ ಒಬ್ಬಾನೊಬ್ಬ ಕೂಡ ಈ ಹೊಸ ಮತದವನು ಉಳಿಯಲಿಲ್ಲ. ಎಲ್ಲರೂ ಹೋದರೇ. ಆಗ ಊರಿನ

ಜನರೂ ತಮ್ಮ ವೇಷ ಬದಲಿಸಿದರು. ಮತ್ತೆ ತೆಗೆದುಕೊಳ್ಳಿ-ಒಂದಲ್ಲ ನಾಲ್ಕು ದೇವರುಗಳು ಬಂದರು-ದುರ್ಗೆ, ಶಿವ, ವಿಷ್ಣು, ನಾರಾಯಣ, ಜನಾರ್ದನ ಅಂತ ನಾಲ್ಕಲ್ಲ ಹತ್ತು, ಹತ್ತಲ್ಲ ನೂರು ದೇವರುಗಳು."

"ದುರ್ಗೆ ಹಳೆಯವಳಲ್ಲವೇ?"

"ಅಮ್ಮ ಹಳೆಯವಳು. ಎಲ್ಲಕ್ಕಿಂತಲೂ ಮೊದಲಿನವಳು. ಅಮ್ಮ ಲಿಂಗ, ಇವೆಲ್ಲವೂ ಮೊದಲಿಗೆ ಹುಟ್ಟಿದ್ದು. ಅವೇ ಹಳೆಯ ದೇವರಿಗೆ ಹೊಸ ಪುರಾಣವನ್ನು ಬರೆದರು; ಹೊಸ ಹೆಸರನ್ನು ಕೊಟ್ಟರು. ಹೊಸ, ಹೊಸ ಅವತಾರಗಳನ್ನು ಮನುಷ್ಯರೇ ಹೊರಿಸಿದರು. ಜನಕ್ಕೆ ಬೇಕು ಬೇಕಾದ ತೆರನ ದೇವರು ಬಂದರು. ಅವರಿಗೆ ಗುಡಿ ಕಟ್ಟಿದರು, ಗೋಪುರ ಕಟ್ಟಿದರು. ಒಬ್ಬರು ಕಟ್ಟಿದ್ದನ್ನು ಇನ್ನೊಬ್ಬರು ಎಳೆದು ಹಾಕಿದರು. ಮತ್ತೊಬ್ಬರು ಮತ್ತೊಂದನ್ನೇ ಕಟ್ಟಿದರು. ದೇವರು ಗೀವರು ಇರುವುದೆಲ್ಲ ಸಮ. ಅವರು ಒಂದಕ್ಕೆ ಸಾವಿರವಾಗಿ, ಸಾವಿರ ಬಣ್ಣ ಕಟ್ಟಿದ್ದರಿಂದ ಆಯಿತೇನು? 'ಒಬ್ಬ ಪರಮಾತ್ಮನ ಮಕ್ಕಳು ನಾವು' ಎಂಬುವ ಬದಲು, ಹತ್ತು ಹೋಳು ಮಾಡಿದರು; ನೂರಾಗಿ ಒಡೆದರು. ಐನೂರು ಪುರಾಣ ಬರೆದರು; ವಾದ ಮಾಡಿದರು. ಒಂದು ಜೀವಕ್ಕೆ ಇನ್ನೊಂದು ಜೀವ ಹೊಂದಿಕೆಯಾಗಿ ಬದುಕಿರುವಷ್ಟು ಕಾಲ ಅವಕ್ಕೂ ಸುಖವಿದೆ; ನಮಗೂ ಸುಖವಿದೆ. ಹಾಗೆ ಬದುಕಿಕೊಂಡಿದ್ದು, ಕಾಲ ಬರುತ್ತಲೇ ಕಣ್ಣು ಮುಚ್ಚುವ ಬದಲು, 'ದೇವರು ಕೊಟ್ಟದ್ದನ್ನು ಕಾಲಲ್ಲಿ ತುಳಿ' ಎಂಬ ಜನರೂ ಬಂದರು. 'ನನ್ನದೇ ಸರಿ. ದೇವರು ನನ್ನ ಪಕ್ಷ' ಎಂದು ಕಾದಾಡಿದರು. ಐಲು ಎಂದರೆ ಐಲು! ಭ್ರಮೆ ಎಂದರೆ ಭ್ರಮೆ! ನನಗೆ ಗೊತ್ತು-ನೀನು ಇದನ್ನೆಲ್ಲ ಸೀತೆಗೆ ಹೇಳುತ್ತೀ! ಅವಳು ಅಜ್ಜಿಗೆ ತಲೆ ದುರಸ್ತಿಯಿಲ್ಲ ಅನ್ನುತ್ತಾಳೆ- ಎಂತ. ಅಂದುಕೊಳ್ಳಲಿ, ಮಗು; ಅವಳಿಗೆ ಕಾಣಿಸುವ ರೀತಿ ಬೇರೆ; ನನಗೆ ಕಾಣಿಸುವುದೇ ಬೇರೆ. ನಾನೇನು ಮಾಡಲಿ" ಎಂದು ಹೇಳಿ ಮುಗಿಸಿದರು.

ಮತ್ತೂ ನಾಲ್ಕು ದಿನ ಬಾವಿಯಿರುವಲ್ಲಿಗೆ ನಾನು ಆಗಾಗ ಹೋಗಿ ಬರುತ್ತಿದ್ದೆ. ಅಲ್ಲಿ ಎತ್ತಿ ಹಾಕಿದ ಮಣ್ಣನ್ನು ಕೆದಕಿ ನೋಡುವುದೇ ಕೆಲಸ; ಕೈಗೆ ಎಲುಬಿನ ತುಣುಕುಗಳು ಸಿಕ್ಕಿದಾಗಲೆಲ್ಲ ಆ ಕಪಾಲಧಾರಿಣಿಯ ಕತೆ ನನಗೆ ನೆನಪಾಗಿ, ದುಃಖವಾಗುತ್ತಿತ್ತು. ಒಂದು ಬಡ ಜೀವಿ, ಮಾನಸಿಕ ತೊಳಲಾಟಕ್ಕೆ ಸಿಲುಕಿ, ಹೀಗೆ ಸಾಯಬೇಕಾಯಿತೇ- ಎಂಬ ವ್ಯಥೆ ಕಾಣಿಸಿತು. ಹಾಗಿದ್ದರೆ, ನಮ್ಮೊಂದು ಊರಿನಲ್ಲೇ ದೇವಾಲಯ, ಬಸದಿ, ಗವಿ, ಮಂಟಪಗಳು ಇದ್ದುದು, ಬಿದ್ದುದನ್ನು ನೆನೆದಾಗ ಸಾಕಷ್ಟು ಕುಟುಂಬಗಳು ಕಾಲಕಾಲಕ್ಕೆ ಇಂಥ ಧರ್ಮ ಸಂಕಟಕ್ಕೆ ಗುರಿಯಾಗಿದ್ದಾವೆಯೇ- ಎಂದು ಅನಿಸಿತ್ತು. ಅಂತಹ ಹಿನ್ನೆನಪು ನಮ್ಮಲ್ಲಿ ಉಳಿದಿಲ್ಲವೆಂದೇ ನಾವು ಪಾರಾಗಿದ್ದೇವೆ; ವ್ಯಕ್ತಿಗಿರುವ ಮರೆವಿನಂತೆ ಚಾರಿತ್ರಿಕ ಮರೆವು ನಮ್ಮನ್ನು ಉಳಿಸಿಕೊಂಡಿದೆ; ಅದರ ಜತೆಯಲ್ಲಿ ನಮಗೇ ತಿಳಿಯದಂತೆ ನೂರಾರು

ಅಸಂಗತ, ಪರಸ್ಪರ ವಿರುದ್ಧ ಕಲ್ಪನೆಗಳು ಆಗಿ ಏನೇನೂ ವ್ಯತ್ಯಾಸ ಬಂದಿಲ್ಲ ಎಂಬ ರೀತಿಯಲ್ಲಿ ಹುದುಗಿದ್ದು, ಹರಡಿದ್ದು ಹೊಳೆಯುತ್ತಿತ್ತು.

ನಾನಿನ್ನೂ ನನಗೆ ದೊರಕಿದ 'ಚಿನ್ನದ ಸರ' ಎಂಥದೆಂದು ತೊಳೆದು ನೋಡಿರಲಿಲ್ಲ, ಅದು ಚಿನ್ನದ್ದು ಎಂಬುದು ಗೊತ್ತಿತ್ತು. ತಿಕ್ಕಿದಾಗ ಹಳದಿ ಬಣ್ಣ ಕಾಣಿಸುತ್ತಿತ್ತು. ಅದರ ಅಕ್ಕಸಾಲಿ ಕೆಲಸ ಯಾವ ತೆರನದ್ದು ಎಂದು ಪರಿಶೀಲಿಸಲಿಲ್ಲ. ಬೇರೆಯೇ ಸಂದರ್ಭವಾಗಿದ್ದರೆ ಅದನ್ನು ನನ್ನವಳಿಗೆ ಹಿಗ್ಗಿನಿಂದ ಒಯ್ದು, ತೋರಿಸಿ, ಬಳಿಕ ಅಕ್ಕಸಾಲಿಯಿಂದ ಮುರಿಸಿ, ಏನಾದರೂ ಒಡವೆ ಮಾಡಿಸುತ್ತಿದ್ದೆ; ಅಜ್ಜಿ ಕಪಾಲದ ಕತೆ ಹೇಳಿದ್ದನ್ನು ಕೇಳಿದ ಮೇಲೆ-ಅದನ್ನು ನಾನು ಮುಟ್ಟುವುದೇ ಬೇಡ-ಅನಿಸಿತು. ಅದು ಇನ್ನೊಂದು ರೂಪದಲ್ಲಿ, ಲಿಂಗ ಶಿವನಾದಂತೆ, ಶಿವ ಕಪಾಲಿಯಾದಂತೆ, ಭೈರವನಾದಂತೆ ಸೀತೆಯ ಕೊರಳಲ್ಲಿ ಮೆರೆಯುವುದನ್ನು ನೆನೆದರೇ ಮನಸ್ಸು ಕಲ್ಲಾಬಿಲ್ಲಿಯಾದೀತು.

ಅಜ್ಜಿ-ದೇವಾಲಯ, ಗುಡಿಗೋಪುರಗಳಿಗೆ ಹೊಕ್ಕುದಾದರೆ ತನಗೆ ಏನೆಲ್ಲ ಕಾಣಿಸುತ್ತದೆ- ಎಂದುದರ ಅರ್ಥ ನನಗೀಗ ತಿಳಿಯುತ್ತದೆ. ಅವರ ಹಾಗೆ ನನಗೂ ಅನಿಸಲು ತೊಡಗಿದೆ. ನಮ್ಮ ಪುರಾತನ ದೇವರುಗಳನ್ನು ಹೇಗೆಲ್ಲ ತಿಪ್ಪಿ, ತಿರುವಿ, ಹಣಿದು, ಬಡಿದು, ಮಾಡಿದ ಆಕಾರಗಳೋ, ವಿಕಾರಗಳೋ ಮನಸ್ಸಿಗೆ ಹೊಳೆದುವೆಂದರೆ, ನನಗೂ ಅಜ್ಜಿಯ ಹಾಗೆ 'ಅಮ್ಮ' ಎಂದು ಬಾಯಿ ತುಂಬ ಹೇಳಬಲ್ಲ ಒಬ್ಬಳೇ ಒಬ್ಬಳು ದೇವರಿದ್ದರೆ ಸಾಕು-ಅನಿಸುವುದುಂಟು.

ಈ ಚಿಂತನೆಯಲ್ಲಿ ಮನೆ ಕೆಲಸಗಳಲ್ಲಿ ನಾಲ್ಕು ದಿನಗಳು ಸರಿದುವು; ಒಂದು ದಿನ ನನ್ನ ತಮ್ಮ ಕಾಗದ ಹಾಕದೆಯೇ, ಸಪರಿವಾರ ಸಮೇತವಾಗಿ ಮನೆಗೆ ಬಂದ. ಅವನು, ಅವನ ಬಸುರಿ ಹೆಂಡತಿ, ಅವನ ಭಾವ ಅನಂತರಾಯ; ಆ ಅನಂತರಾಯನ ಕಾಲೇಜಿನ ಶಿಷ್ಯನೆಂಬ ಇನ್ನೊಬ್ಬ ಹುಡುಗ- ರಾಮದಾಸ- ಇಷ್ಟು ಮಂದಿ ಬಂದರು. ಹೊಸ ನಂಟರು ಬಂದುದೆಂಬುದು ಸೀತೆಗೆ ಹಿಡಿಸಲಾರದಷ್ಟು ಸಂತೋಷ. ನಾನು ಅದೇ ಅವಕಾಶದಲ್ಲಿ, ಬಂದ ಗಂಡಸರು ಮೂವರನ್ನೂ ಕರೆದುಕೊಂಡು ಅಣ್ಣುವನ್ನೂ ಕರೆದುಕೊಂಡು ಇನ್ನೊಮ್ಮೆ ಘಟ್ಟದ ಬರೆಗೆ ಹೋದೆ. ಮೊದಲು ಹೋದ ತಾವನ್ನು ಅವರಿಗೆ ಉತ್ಸಾಹದಿಂದ ತೋರಿಸಿದೆ. ನನ್ನ ತಮ್ಮ 'ಇದರಲ್ಲೇನು ವಿಶೇಷ?' ಎಂದ. ಅನಂತ ರಾಯರು ಆ ಮಾಟೆಗಳನ್ನು ಕಂಡು "ಹಳೆಯ ಗುಹೆ, ಹಿಂದಿನ ಕಾಲದ ಹುಂಬರು ಬಿಡಾರ ಮಾಡಿಕೊಂಡಿದ್ದ ಸ್ಥಳ" ಎಂದರು. ಅವರು ಅಲ್ಲೇ ಕುಳಿತರು. ಅವರಿಗೆ ಕಂಡದ್ದು ಸಾಕು-ಎಂದೆನಿಸಿತೋ ಏನೋ. ಜತೆಗೆ ಬಂದ ರಾಮದಾಸ ಚಿಕ್ಕವನು, ಕಾಡನ್ನು ಕಂಡವನಲ್ಲ; ಅವನಿಗೆ ನೋಡಲು ತುಂಬ ಉತ್ಸಾಹವಿತ್ತು. "ಮತ್ತೇನಾದರೂ ಇದ್ದೀತು ತೋರಿಸಿ" ಎಂದ. ನಾವಿಬ್ಬರೂ ಕೂಡಿ ಹೊರಟೆವು. ಮುಂದೊಂದು ಅರ್ಧ ಮೈಲು

ದೂರದಲ್ಲಿ ಬಂಡೆಗಳ ಗೋಡೆಯೊಂದು ನಮಗೆ ಕಾಣಿಸಿತು. ಮುಂದಕ್ಕೆ ಚಾಚಿದ ಒಂದು ಬಂಡೆ, ಒಳಕ್ಕೆ ಹೊಳ್ಳಾದ ಗುಹೆಯಂತಹ ಭಾಗ; ಅಲ್ಲಿ, ಇಲ್ಲಿ ಹರವಿ ಬಿದ್ದ ಬೂದಿ... ಅಂಥ ಒಂದು ಮಾಟೆಯಲ್ಲಿ ಕಲ್ಲು ಕೊರೆದು ಮಾಡಿದ ಚಿಕ್ಕೊಂದು ಕೋಣೆಯೂ ಇತ್ತು. 'ಇದಾದರೆ ಆಶ್ಚರ್ಯ!" ಎಂದ ರಾಮದಾಸ.

"ಹೌದು, ಸಾವಿರಾರು ವರ್ಷಗಳ ಹಿಂದೆಯೇ ಇಷ್ಟನ್ನೆಲ್ಲ ಕಲ್ಲಿನಲ್ಲಿ ಕೊರೆದದ್ದು ಆಶ್ಚರ್ಯ" ಅಂದೆ ನಾನು.

"ಯಾವ ಕಾಲವ್ದೋ" ಎಂದ ಅವನು.

"ತಿಳಿಸುವ ಕುರುಹಗಳೇ ಇಲ್ಲವಲ್ಲ" ಎಂದೆ ನಾನು. ಹಾಗೆಯೇ ಆಚೆ, ಈಚೆ ಅಡ್ಡಾಡುತ್ತಿದ್ದ ವೇಳೆ, ಒಂದು ಮರದ ಪೊಟರೆಯ ಕೆಳಗೆ ಬಳಪದಲ್ಲಿ ಕೊರೆದ ಒಂದು ಗೊಂಬೆ ಕಾಣಸಿಕ್ಕಿತು. ಅದು ಎರಡಡಿ ಎತ್ತರದ ರುಂಡವಿಲ್ಲದ ವಿಗ್ರಹ; ಕುಳಿತ ವಿಗ್ರಹ. ಆಕಾರ ನೋಡಿದರೆ ಧ್ಯಾನಿ ಬುದ್ಧನದು- ಎಂದು ಅನಿಸಿತು.

ರಾಮದಾಸ "ಇದು ಬುದ್ಧನದ್ದು; ಖಂಡಿತಕ್ಕೂ. ಅದರ ತಲೆಯಿರುತ್ತಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು! ಈ ಘಟ್ಟದ ಮೂಲೆಯಲ್ಲೂ ಬೌದ್ಧರು ಬಂದಿದ್ದರೇ?" ಎಂದ.

"ಬಂದಿರಬೇಕು; ಇದೇ ಗುಹೆಯಲ್ಲಿ ಬುದ್ಧ ಭಿಕ್ಷುಗಳು ಬಿಡಾರ ಮಾಡಿರಲೂ ಬಹುದು. ಮೊದಲು ಮೂಡೂರಿನ ತನಕವೂ ಅಲ್ಲಲ್ಲಿ ಜನವಸತಿ ಇದ್ದಿತ್ತು ಅನ್ನುತ್ತಾರೆ; ಇವತ್ತೆಲ್ಲ ಬರಿಯ ಕಾಡಾಗಿದೆ" ಎಂದೆ.

ಕುಡುಬಿ ಅಣ್ಣು ಹೊತ್ತಾದುದನ್ನು ನೆನಪು ತಂದುಕೊಟ್ಟಿದ್ದರಿಂದ ಹಿಂದೆ ಬಿಟ್ಟವರನ್ನು ಕೂಡಿಕೊಳ್ಳಲು ಹೋದೆವು. ಅನಂತ, ನಾರಾಯಣರ ಧ್ವನಿ ಕೇಳಿಸುತ್ತಿತ್ತು. 'ಹೋಗುವ' ಎನ್ನುತ್ತಲೇ ಅವರೂ ಎದ್ದರು. ಅನಂತರ ಅಲ್ಲಿದ್ದ ಮನೆಯನ್ನು ಸೇರುವ ತನಕವೂ ನನ್ನ ಕಿವಿಗೆ ತೀರ ಗಟ್ಟಿಯಾಗಿ ಕೇಳಿಸುತ್ತಿತ್ತು, ಭಗವದ್ಗೀತೆಯ ಉದ್ಧರಣೆ; ಪಾರಮಾರ್ಥ ತತ್ವ ವಿಚಾರವೇ ವಿಷಯ.

ಮನೆಗೆ ಬರುವುದರೊಳಗಾಗಿ ನನಗಂತು ಅನಿಸಿತು; "ನನ್ನ ತಮ್ಮನಿಗೆ ಕಳೆದ ವರ್ಷವೇ ಇಷ್ಟೆಲ್ಲ ಬೋಧನೆ ಮಾಡಿದ್ದರೆ, ಒಂದು ಮದುವೆಯ ಖರ್ಚು ಉಳಿಯುತ್ತಿತ್ತು" ಎಂದು. ಅದನ್ನು ನೆನೆದಾಗ ಇನ್ನೂ ಒಂದು ಭಯವಾಯಿತು. "ನಾರಾಯಣನಿಗೆ ಹೇಗೂ ಮದುವೆಯಾಯಿತು; ಹೆಂಡತಿ ಗರ್ಭಿಣಿಯೂ ಆಗಿದ್ದಾಳೆ. ಇನ್ನು ಮೇಲೆ ಈ ಭಾವರಾಯರ ಉಪದೇಶವನ್ನು ಕೇಳಿ, ಅವನು ವೈರಾಗ್ಯ ತಾಳಿದರೆ ಅವಳ ಗತಿಯೇನು?" ಎಂದು.

ಆದರೆ, ಸಾಮಾನ್ಯವಾಗಿ ನಮ್ಮ ಜನರ ಸ್ವಭಾವ ನನಗೆ ತಿಳಿದದ್ದೇ. ಉಪನಿಷತ್ತೇ ಇರಲಿ, ಭಗವದ್ಗೀತೆಯೇ ಇರಲಿ, ರಾಮಾಯಣವೇ ಇರಲಿ, ಭಾಗವತವೇ ಇರಲಿ-ಅವೆಲ್ಲ

ಇನ್ನೊಬ್ಬರ ಮುಂದೆ ಹೇಳುವುದಕ್ಕಿರುವ ವಿಷಯಗಳು. ಜಗತ್ತು ಹೀಗೆಯೇ ಇರಬೇಕೆಂಬುದು ಹೇಳುವವರ ತಾತ್ಪರ್ಯ; ಹಾಗೆ ಹೇಳುವವರು ಮಾತ್ರ ಆ ಜಗತ್ತಿಗಿಂತಲೂ ಸಾಕಷ್ಟು ಎತ್ತರದಲ್ಲಿಯೋ, ದೂರದಲ್ಲಿಯೋ ಇರುತ್ತಾರೆ. ಉಟೋಪಚಾರಗಳಲ್ಲಿ ಅನಂತರಾಯರಲ್ಲಿ ಯಾವ ವಿರಕ್ತಿಯನ್ನೂ ಕಂಡಿಲ್ಲವಾದ್ದರಿಂದ, ಅವರದೂ ಅಷ್ಟೇ ಅನಿಸಿತ್ತು.

ಮುಂದೆ ಹತ್ತಿಪ್ಪತ್ತು ದಿನಗಳ ಕಾಲ, ಬಂದವರು ತಮ್ಮ ಊರಿಗೆ ಹೊರಡುವ ತನಕವೂ, ನಮ್ಮ ಮನೆ ಒಂದು ಮಠವೇ ಆಯಿತು. ಅನಂತರಾಯರಿಗೆ ಅದರ ಆಚಾರ್ಯ ಪಟ್ಟ ಸಂದಿತ್ತು. ಈ ತನಕ ಹೆಡ್ಡಿ ಎಂದು ತಿಳಿದುಕೊಂಡಿದ್ದ ಸೀತೆಯೂ ಆಗಾಗ ಬಂದು, ಅವರ ಮಾತಿಗೆ ಕಿವಿಯೊಡ್ಡುತ್ತಿದ್ದಳು. ನಾರಾಯಣ ವೈರಾಗ್ಯ ತತ್ಪರನಂತೆ 'ಅದು ಹೇಗೆ' 'ಇದು ಹೇಗೆ' ಎಂದು ಪ್ರಶ್ನಿಸುತ್ತಿದ್ದ. ರಾಮದಾಸ ಇವರನ್ನು ಕೇಳಿ, ಕೇಳಿ ಬೇಸರ ಬಂದರೆ, ಮೆಲ್ಲಗೆ ಕಣ್ಣು ತಪ್ಪಿಸಿಕೊಂಡು ಹೊರಗೆಲ್ಲಾದರೂ ಸುತ್ತಾಡಿ ಬರುತ್ತಿದ್ದ; ಇಲ್ಲವೆ ನನ್ನೊಡನೆ ಹರಟೆಗೆ ಸೇರುತ್ತಿದ್ದ.

ನಾನು ಅಜ್ಜಿಯ ಶಿಷ್ಯ; ಅನಂತರಾಯನ ಶಿಷ್ಯನಾಗಲು ಇಷ್ಟಪಡಲಿಲ್ಲ. ಅವರು ಓದಿ ಕಂಠಪಾಠ ಮಾಡಿದ...

ಯದಾಯದಾಹಿ ಧರ್ಮಸ್ಯ...

ನೈನಂ ಛಿಂದಂತಿ ಶಸ್ತ್ರಾಣಿ... ಇತ್ಯಾದಿಗಳು ನನಗೆ ಹೊಸತಲ್ಲ. ಕೇಳಿದ್ದೇನೆ ಹಲವಾರು ಬಾರಿ; ಅದರಲ್ಲಿ ನನಗೆ ಅರ್ಥವಾದ ಅಂಶ ಉಂಟು; ಆಗದ್ದೂ ಉಂಟು; ಹೊಂದಿಕೆ ಕಾಣಿಸಿದ ವಾದಗಳೂ ಉಂಟು; ಕಾಣಿಸದ್ದೂ ಉಂಟು... ಈ ಹಿಂದೆಯೇ ಒಂಮೋ ಎರಡೋ ಸಾರಿ ನಾನು ನಮ್ಮ ಅಜ್ಜಿಯೊಡನೆ ಅಂಥವನ್ನು ಕುರಿತು ತರ್ಕಿಸಿದ್ದುಂಟು.

ನಿತ್ಯ ಜೀವನದಲ್ಲಿ ನಮ್ಮ ಮನೆಯಲ್ಲಿ ಮಾತಿನ ಆರ್ಭಟೆ, ವಾಗ್ವಾದ, ಕಸಿವಿಸಿ ಮೊದಲಾದವುಗಳಿಗೆ ಅವಕಾಶ ಕಡಿಮೆ. ಮನೆಗೆ ಬಂದು ಹೋಗುವವರು ಕಡಿಮೆ. ಬರುವವರು ಯಾರಾದರೂ ಇದ್ದರೆ, ಅವರು ಬಂದು ತಮ್ಮ ಸುಖ-ದುಃಖಗಳನ್ನು ತೋಡಿಕೊಳ್ಳುತ್ತಾರೆ. ನಮ್ಮದನ್ನು ನಾವು ಹೇಳುತ್ತೇವೆ. ಚರ್ಚೆಯ ವಿಷಯಗಳಿದ್ದರೆ- ಅದು ನಾವಿಬ್ಬರು ಗಂಡಹೆಂಡಿರಿಬ್ಬರಲ್ಲೇ. ಅದು ಕೂಡ- ಅನುಭವದಿಂದ ನಮ್ಮೊಳಗೆ ಒಂದು ಪರಿಪಾಠ ಬೆಳೆದುಬಂದಿದೆ- ಸೀತೆ ತನ್ನ ಬಾಯಿಯನ್ನು ಮೊಡ್ಡದು ಮಾಡಿದರೆ, ನಾನು ಸಣ್ಣದು ಮಾಡುತ್ತೇನೆ. ನಾನು ಬಾಯಬ್ಬರ ಹೆಚ್ಚು ಮಾಡಿದರೆ, ಅವಳು ತನ್ನ ಧ್ವನಿಯನ್ನು ನುಂಗಿಕೊಂಡು, ಮುಂದೆ ಅವಕಾಶ ಮೊರಕಿದಾಗ ಒಂದೆರಡು ವಾಕ್ ಬಾಣಗಳನ್ನು ಎಸೆಯುತ್ತಾಳೆ. ಈ ಬಾರಿ ಹಾಗಲ್ಲ; ನಾರಾಯಣ, ಅನಂತರಾಯರು ನಮ್ಮ ಮನೆಗೆ ಬಂದದ್ದೆಂಬುದು ಮನೆಯ ಅಂಗಣ, ಹೊರಾಂಗಣಗಳಷ್ಟೇ ಅಲ್ಲ, ಸುತ್ತಮುತ್ತಲಿನ ಬಯಲು, ಹಾಡಿಗಳ ತನಕವೂ ಮಾತಿನ ಕೋಲಾಹಲ ಕೇಳಿಸತೊಡಗಿದೆ. ಯಾಕೋ,

ನಾರಾಯಣನಿಗೆ ಈ ಅನಂತರಾಯರು ಹೇಳಿದ್ದು ವೇದವಾಕ್ಯ. ಹಿಂದಿನ ಬಾರಿ ಬರಿದಾಗ ಅವರು ಸಾಕಷ್ಟು ದಾಕ್ಷಿಣ್ಯವಂತರಾಗಿಯೇ ಕಾಣಿಸಿದ್ದರು. ಈ ಬಾರಿ ಮಾತ್ರ ಅವರ ತಂಗಿ ಬಂದುದರಿಂದಲೋ ಏನೋ, ಬೀಗತನ ಬೆಳೆದಿದ್ದರಿಂದಲೋ ಏನೋ ಧ್ವನಿ ಮತ್ತಷ್ಟು ಗಟ್ಟಿ; ಮಾತಿನ ವಿಸ್ತಾರ ಹೆಚ್ಚು. ವಿಸ್ತಾರ ಹೆಚ್ಚಾದರೂ, ವಿಷಯ ಒಂದೇನೆ-ತತ್ವಜ್ಞಾನ. ನಮ್ಮ ಮನೆಯ ಚಾವಡಿಯ ಮೇಲೆ ಕುಳಿತುಕೊಂಡು ಅವರು ಭಗವದ್ಗೀತೆಯನ್ನು ಕೊಚ್ಚಿ, ಕೊಚ್ಚಿ, ಹಂಚಿ ಚೆಲ್ಲಿದ್ದಕ್ಕೆ ಮಿತಿಯಿಲ್ಲ. ನನ್ನ ಸೀತೆಗಂತು ಅನಂತರಾಯರು ಪ್ರತ್ಯಕ್ಷ ಸಾಯಣರೋ, ಶಂಕರರೋ ಆಗಿ ಕಾಣಿಸುತ್ತಿರಬೇಕು. ಅವರ ಸಭೆಗೆ ಅವಳು ಸದಾ ಹಾಜರು. ಅಲ್ಲಿ ತಾನು ಕೇಳಿಕೊಂಡು ಕಲಿತದ್ದನ್ನು ನನ್ನ ಕಿವಿಗೆ ಮುಟ್ಟಿಸಿ, ಇದಕ್ಕೆಲ್ಲ ನಿಮ್ಮ ಅಜ್ಜಿ ಏನು ಹೇಳುತ್ತಾರಂತೆ?- ಎಂದು ಪಾಠ ಒಪ್ಪಿಸುವುದುಂಟು.

ಅದಕ್ಕೆ ನಾನು "ಅಯ್ಯೋ, ಮಹಾರಾಯಿತಿ, ಅವರು ಅಷ್ಟು ಬಲ್ಲವರಾದರೆ ನಮ್ಮ ಅಜ್ಜಿಯನ್ನೇ ಹೋಗಿ ಕೇಳಲಿ. ಅವರೇ ಏನಾದರೂ ಹೇಳಿಯಾರು" ಎನ್ನುತ್ತ ನಾನು ಮಾತಿಂದ ತಪ್ಪಿಸಿಕೊಂಡರೂ, ಆ ವಿಚಾರ ಸರಣಿಗಳು ನನ್ನನ್ನು ಆಗಾಗ ಕಾಡುತ್ತಿದ್ದವು. ಚಾವಡಿಯಲ್ಲಿ ಚರ್ಚೆಗಳು ನಡೆಯುತ್ತಿದ್ದಾಗ ಕೇಳಿದ ನಾಲ್ಕು ಮಾತುಗಳನ್ನು ನಾನು ಕಿವಿಯ ಮೇಲೆ ಹಾಕಿಕೊಂಡು, ಅಶ್ವತ್ಥಕಟ್ಟೆಗೆ ಹೋಗಿ, ಅಜ್ಜಿಯ ಕೋರ್ಟಿನಲ್ಲಿ "ಹೀಗೆನ್ನುತ್ತಾರಲ್ಲ, ಇದರ ಅರ್ಥ ಏನು?" ಎಂದು ಕೇಳಿ, ತಿಳಿಯುವ ಪ್ರಯತ್ನ ಮಾಡಿದ್ದುಂಟು. ಅವರೂ ತಮಗೆ ತೋಚಿದ ಉತ್ತರಗಳನ್ನು ಹೇಳಿದ್ದುಂಟು. ಆ ಉತ್ತರಗಳಿಂದಾಗಿ, ನನ್ನ ಮನಸ್ಸಿಗೆ ನಮ್ಮ ಅಜ್ಜಿ ಅಂಥ ಮೊದ್ದು ಹೆಂಗಸಲ್ಲವೆಂದೇ ಅನಿಸತೊಡಗಿತು. ಒಮ್ಮೆ ಅವರೇ ಅಂದರು: "ನಿನ್ನ ನಾರಾಯಣ ಹೇಳುವ ಪುರಾಣ, ಭಗವದ್ಗೀತೆ ನನಗೇನೂ ಹೊಸತಲ್ಲ. ನಿನ್ನ ಅಪ್ಪ , ನೋಡು, ಅಂಥದಕ್ಕೆ ಕೈ ಹಾಕಿದವನಲ್ಲ. ಆದರೆ, ನಿನ್ನ ಅಜ್ಜ ಸಾಮಾನ್ಯ ಅಂತ ತಿಳಿಯಬೇಡ; ಸಂಸ್ಕೃತ ಬಲ್ಲವರು; ಹಿಂದಿನದ್ದೆಲ್ಲ ಚೆನ್ನಾಗಿ ಓದಿಕೊಂಡವರು. ನನಗೆ ವೈಧವ್ಯ ಬಂದು, ನಾನು ಮನೆಯಲ್ಲಿ ಮೂಲೆಯನ್ನು ಹಿಡಿದ ಮೇಲೆ, ನನ್ನ ಮನಸ್ಸಿಗೆ ಒಂದಿಷ್ಟು ಸಮಾಧಾನ ಸಿಗಲಿ- ಎಂದು ನೂರಾರು ವಿಷಯಗಳನ್ನು ಓದಿ ಹೇಳಿದ್ದಾನೆ- ನಿನ್ನ ಅಜ್ಜ, ಅಂದರೆ ನನ್ನ ಅಣ್ಣ.

"ಅವನಿಂದ ಹತ್ತಾರು ವಿಷಯಗಳಲ್ಲಿ ಏನು, ಎಂಥದು-ಎಂಬುದನ್ನು ಕೇಳಿ ತಿಳಿದಿದ್ದೇನೆ, ಒಂದಕ್ಕೊಂದು ಹೊಂದಿಕೆ ಬಾರದ ಮಾತನ್ನು ಕೇಳಿ "ಇದೇನು? ನಿನ್ನ ಕೃಷ್ಣ ಪರಮಾತ್ಮ-ಆಗ ಹಾಗೆ ಹೇಳಿದ; ಈಗ ಹೀಗೆ ಹೇಳುತ್ತಾನೆ" ಎಂದು ಕೇಳಿದ್ದುಂಟು. ಈಗ ಇಮೊಂದು ವಿಷಯ ತೆಗೆದುಕೋ. ಅರ್ಜುನನಿಗೆ- ಕೃಷ್ಣ ಪರಮಾತ್ಮ ಅಷ್ಟು ಮೊಡ್ಡ ಭಗವದ್ಗೀತೆ ಹೇಳಿದ ಅನ್ನುತ್ತಾರೆ; ಹೇಳಿದ್ದೆಲ್ಲಿ? ಕುರುಕ್ಷೇತ್ರದಲ್ಲಿ; ಧರ್ಮರಾಜ, ಕೌರವ, ಯುಯುಧಾನ, ಸಾತ್ಯಕಿಗಳು ಅವರವರ ಶಂಖಗಳನ್ನು ಅವರವರು ಊದಿದ ಮೇಲೆ,

ಇನ್ನೇನು? ಯುದ್ಧ ತೊಡಗಿತು- ಅನ್ನುವಾಗ, ಅಲ್ಲಿ ಶ್ರೀಕೃಷ್ಣ ಮೂರು ದಿನಗಳ ಹರಿಕಥೆಯನ್ನು ಒಬ್ಬ ಅರ್ಜುನನ ಮುಂದೆ ನಡೆಸಿದ ಅಂದರೆ, ಆಗ ಉಳಿದವರೆಲ್ಲರೂ ಏನು ಮಾಡಿದರು? ನಿದ್ದೆ ಮಾಡಿದರೋ? ಯುದ್ಧವನ್ನು ಬಿಟ್ಟು ಮನೆಗೆ ಹೋಗಿ, ತಿರುಗಿ ಅಲ್ಲಿಗೆ ಬಂದರೋ, ಎಂದು ಕಾಣಿಸುತ್ತಿತ್ತು ನನಗೆ. 'ಆತ್ಮಕ್ಕೆ ಸಾವಿಲ್ಲ' ಅಂದಿದ್ದ ಕೃಷ್ಣ 'ಅದೇನೇ ನಿಜ; ಈ ದೇಹವಲ್ಲ' ಅಂದ. 'ನೀನು ಕೊಲ್ಲುವುದಲ್ಲ, ಮಾಡುವುದಲ್ಲ' ಅಂದ. 'ನೀನು ನಿನ್ನ ಕರ್ಮ ಮಾಡು; ಅದರ ಫಲವನ್ನು ಅಪೇಕ್ಷಿಸಬೇಡ' ಅಂದ. ಹೌದು, ಅದೆಲ್ಲ ಲೆಕ್ಕಾಚಾರ ಸಮವೇ. ನೀನು ಯುದ್ಧದಲ್ಲಿ ಕೊಂದು, ಸತ್ತರೆ ನಿನಗೆ ಸ್ವರ್ಗ ಸಿಗುತ್ತದೆ- 'ಅಂದ ಅವನೇ, 'ಸ್ವರ್ಗದ ಅಪೇಕ್ಷೆ ಮಾಡುವುದು ತಪ್ಪು' ಎಂದದ್ದೂ ಅವನೇನೆ. 'ಕಾಮ, ಕ್ರೋಧಗಳು ಕೆಟ್ಟದು' ಎಂದವನು ಅವನೇ; 'ಕೋಪಕ್ಕೆ ಬಲಿಯಾಗಿ ಬಾಣ ಬಿಡು' ಎಂದವ ಅವನೇ. "ದೇಹ ಮುಖ್ಯವಲ್ಲ" ಅಂದವನು ಅವನೇ; "ಕೌರವನ ದೇಹವನ್ನು ಕೊಲ್ಲು" ಎಂದ ಅವನೇ, "ಆತ್ಮಕ್ಕೆ ಕಲಂಕವಿಲ್ಲ" ಎಂದವನು ಅವನೇ. "ನೀನು ಯುದ್ಧ ಮಾಡದೆ ಬಿಟ್ಟರೆ ನಿನ್ನ ಕುಲಕ್ಕೆ ಅಪಕೀರ್ತಿ ಬರುತ್ತದೆ" ಎಂದವನು ಅವನೇ. ಒಂದೇ ಗಂಟಲಲ್ಲಿ ಇವನ್ನೆಲ್ಲ ನುಂಗುವುದು ತುಂಬ ಕಷ್ಟವಲ್ಲವೇ ಮಗು? ಅವು ಮಾತಿನ ಚಮತ್ಕಾರಗಳೇನೋ ಹೌದು. ಅದರಲ್ಲಿ ನಂಬಿಕೆ ಹುಟ್ಟುವುದಿಲ್ಲ ನನಗೆ."

"ಶ್ರೀಕೃಷ್ಣ ಪರಮಾತ್ಮ ಹೌದೋ ಅಲ್ಲವೋ, ಅವನು?"

"ಕೃಷ್ಣ, ರಾಮ ಮೊನ್ನೆ, ಮೊನ್ನಿನ ಮಕ್ಕಳು ಅನ್ನುತ್ತೇನೆ ನಾನು. ನಮ್ಮವರು ಯಾರ್‍ಯಾರೂ "ಇದು ನನ್ನ ಬುದ್ಧಿಗೆ ತೋಚಿದ್ದು; ನನಗೆ ಹೀಗೆ ಕಾಣುತ್ತದೆ" ಅಂದವರೇ ಅಲ್ಲ. ಬದಲು, ತಮಗೆ ತೋರಿದ್ದನ್ನೆಲ್ಲ ದೇವರ ಗಂಟಲಲ್ಲಿ ತುರುಕಿ, ಜಗತ್ತಿನ ಮೇಲೆ ಅವನಿಂದಲೇ ಉಗುಳಿಸಿದರು. ಕಾಪಾಲಿಗಳು ಏನೇನೋ ಮಾಡುತ್ತಿದ್ದರು, ನಮಗೆ ಅಸಹ್ಯ ಕಾಣಿಸುವ ಕೆಲಸವನ್ನು. ಅದನ್ನೂ ಅಣ್ಣ ಯಾವುದರಿಂದಲೋ ಒಮ್ಮೆ ಓದಿ ಹೇಳಿದ್ದ. ಶಿವ ಪಾರ್ವತಿಗೆ ಹೇಳಿದ್ದಂತೆ ಅದೆಲ್ಲ. ನನಗೆ ನೋಡು, ಈ ಅವತಾರ ಎಂಬುದರಲ್ಲೇ ನಂಬಿಕೆಯಿಲ್ಲ. ಯಾರು ಅವತಾರ ಅಲ್ಲ? ನಾನಲ್ಲವೇ? ನೀನಲ್ಲವೇ? ನಾವೂ ಆ ಅಮ್ಮನ ಮಕ್ಕಳು ಅಲ್ಲವೇ? ನರ ನಾರಾಯಣರು ಇಬ್ಬರೇ ಅಲ್ಲ; ಹುಳುಹುಪ್ಪಟೆ, ಕಲ್ಲುಕಸ, ಎಲ್ಲವೂ ಅವನದ್ದೇ ಸೃಷ್ಟಿ; ಅವನದ್ದೇ ಅಂಶ."

"ನಿನಗೆ ಒಂದು ನಿದರ್ಶನ ಹೇಳುತ್ತೇನೆ. ಹೆಂಗಸಾದ್ದರಿಂದ ನನಗೆ ಕಾಣಿಸುತ್ತದೆ ಅದು. ಗೀತೆಯಲ್ಲಿ ಒಂದು ಮಾತು ಬರುತ್ತದೆ. ಹೆಂಗಸರು ದುಷ್ಟರಾದರೆ ವರ್ಣಸಂಕರವಾಗುತ್ತದೆ ಅನ್ನುತ್ತಾನೆ ಒಬ್ಬ! ಹೆಣ್ಣು, ಗಂಡು ಸೃಷ್ಟಿ ಮಾಡಿದ ದೇವರಿಗೆ, ವರ್ಣಸಂಕರ ಆಗುವುದಕ್ಕೆ ಹೆಣ್ಣು ಮಾತ್ರ ಕೆಟ್ಟರೆ ಸಾಲದು, ಗಂಡೂ ತಪ್ಪಬೇಕು- ಅಂತ ತಿಳಿಯದೇನು? ಅವರ ಬಾಯಲ್ಲಿ ಆ ಮಾತನ್ನು ತುಂಬಿದ ಬುದ್ಧಿವಂತನಿಗೆ, ಗಂಡು

ನಿರಪರಾಧಿ ಅನಿಸಿರಬೇಕು. ನಾನೆನ್ನುತ್ತೇನೆ-ಒಬ್ಬರಲ್ಲ, ಹತ್ತು ಮಂದಿ ತಮಗೆ ಕಂಡ ಮಾತನ್ನೆಲ್ಲ ಶ್ರೀಕೃಷ್ಣನ ಬಾಯಲ್ಲಿ ತುರುಕಿದರು. ಪರಮಾತ್ಮನೇ ಹೇಳಿದ ಅಂದರೆ- ನಾವು ಅವರೆದುರಿಗೆ ಚಕಾರ ಎತ್ತಲಾರೆವಲ್ಲ!"

"ಹೋಗಲಿ ಬಿಡು, ನೀನು 'ಅಮ್ಮ ಅಮ್ಮ ಅನ್ನುತ್ತೀಯಲ್ಲ, ಅವಳಾದರೂ ನಿಜವೇ?"

"ಅದು ನಾನು, ನೀನೂ ನಿಜವಿದ್ದಷ್ಟೇ. ಹಾಗೆ ನಾನಿದ್ದಷ್ಟು ಕಾಲ ನಮ್ಮ ಪಾಲಿಗೆ ಮಾತ್ರ ಅದು ನಿಜ. ನಮಗಿಂತಲೂ ದೊಡ್ಡದು ಒಂದು ಇದ್ದೇ ಇರಬೇಕಲ್ಲವೇ? ಅದು ಎಷ್ಟು ದೊಡ್ಡದು, ಹೇಗಿದೆ-ಎಂಬುದು ನಮಗೇನಾದರೂ ಗೊತ್ತಾಗುತ್ತದೆಯೇ? ಗೊತ್ತಾಗದಿದ್ದರೂ ಸಹ, ಈ ಸೃಷ್ಟಿಯನ್ನು ಕಾಣುವಾಗ ಅದರ ಹಿಂದಕ್ಕೆ ಏನೋ ಇದೆ- ಎಂಬ ಭಾವನೆ ಬರುತ್ತದೆ. ಅದಕ್ಕೇನೆ ಹಳಬರು ಕೊಟ್ಟ ಹೆಸರು 'ಅಮ್ಮ' ಅಂತ. ಮಕ್ಕಳಿಗೆ 'ಅಮ್ಮ' ಅಂದರೆ, ದೊಡ್ಡ ವಸ್ತು. ಅವಳಿಂದಲೇ ನಾವು ಹುಟ್ಟಿ ಬಂದದ್ದು. ಆ ವಸ್ತು ಏನೆಂಬುದು ತಿಳಿಯದಿದ್ದರೂ, ಅದು ಇದೆ ಎಂದು ನಂಬಿ, ಅದರ ಕಡೆಗೆ ಮುಖ ಮಾಡುತ್ತೇವೆ. 'ಅಮ್ಮಾ' ಅನ್ನುತ್ತೇವೆ; ಪೂಜೆ ಮಾಡುತ್ತೇವೆ. ನನಗೆ ತಪ್ಪು ಕಾಣಿಸುವುದಿಲ್ಲ ಅದರಲ್ಲಿ. ಆದರೆ, ನಮ್ಮ ಯಾವತ್ತು ಪೂಜೆ-ಆರತಿ ಮಾಡುವುದರಲ್ಲೂ, ಕಾಯಿ ಒಡೆಯುವುದರಲ್ಲೂ, ಅದನ್ನು ಕೊಡು, ಇದನ್ನು ಕೊಡು ಎಂದು ಬೇಡುವುದರಲ್ಲೂ ಮುಗಿಯುತ್ತದೆ. ಆ ಅಮ್ಮನಿಗೆ ಇನ್ನೂ ಕೋಟಿ, ಕೋಟಿ ಮಕ್ಕಳಿಲ್ಲವೋ! ಅವಳು ಕೊಟ್ಟ ಆಯುಷ್ಯವನ್ನು ಇದ್ದಷ್ಟು ಕಾಲ ಉಳಿದ ಮಕ್ಕಳ ಜೊತೆಗೆ ಬಾಳಿ ಬದುಕುವುದೇ ಪೂಜೆ-ಎಂಬ ಬುದ್ಧಿ ಯಾಕೆ ಬರಬಾರದು? ನಾವು ತಿಳಿದುಕೊಂಡದ್ದೇ ಸತ್ಯ; ಇನ್ನೊಬ್ಬರದ್ದು ಸುಳ್ಳು. ನಮ್ಮ ದೇವರೇ ದೊಡ್ಡವನು, ಇನ್ನೊಬ್ಬರದು ಕೀಳು... ಎಂದು ಕಚ್ಚಾಡುವುದರಲ್ಲಿ ಜನರ ಆಯುಷ್ಯ ಕಳೆಯಿತು. ಯಾವ ಮಗುವಿನ ಕಣ್ಣೀರನ್ನೂ ಆ ಅಮ್ಮ ಸಹಿಸಲಾರಳು. 'ನೋಡು, ಬಾವಿಗೆ ಹಾರಿಕೊಂಡ ಆ ಬ್ರಾಹ್ಮಣಿಯ ಗತಿ ಏನಾಯಿತು? ಯಾಕೆ ಹಾಗಾಯಿತು?"

ಹೀಗೆ ಒಂದಲ್ಲ, ನಾಲ್ಕು ಬಾರಿ... ಅಜ್ಜಿಯೊಡನೆ ಬೇರೆ, ಬೇರೆ ವಿಷಯಗಳನ್ನು ಕುರಿತು ನಾನು ಚರ್ಚಿಸಿದ್ದುಂಟು. ಒಂದೆರಡು ಬಾರಿ ನಮ್ಮ ಸಭೆಗೆ ಶಿವಮೊಗ್ಗೆಯ ಹುಡುಗ ರಾಮದಾಸನೂ ಬಂದು ಕುಳಿತು, ಕೇಳಿದ್ದುಂಟು. ಪ್ರಾಯಶಃ ಆ ಹುಡುಗ ಇಲ್ಲಿ ಕೇಳಿದ್ದನ್ನು, ಅನಂತ ರಾಯರ ಕಿವಿಗೆ ಮುಟ್ಟಿಸಿರಬೇಕು... ಎಂದು ಕಾಣಿಸುತ್ತದೆ. ಅವರು ನಾಲ್ಕಾರು ಬಾರಿ ಅಜ್ಜಮ್ಮನನ್ನು ತಮ್ಮೊಡನೆ ಚರ್ಚೆಗೆ ಎಳೆಯುವುದಕ್ಕೆ ಹವಣಿಸಿಯೋ ಏನೋ, "ಹೇಗಿದ್ದೀರಿ ಅಜ್ಜಮ್ಮ?" ಎಂದು ಮಾತನಾಡಿಸಿದ್ದುಂಟು. ಅಜ್ಜಿ ಅದಕ್ಕೆ "ಇದ್ದೇನೆ ಹೀಗೆ; ಇನ್ನೊಂದು ನಾಲ್ಕು ದಿನ..." ಎಂದರು ಒಮ್ಮೆ.

"ನಾಲ್ಕು ದಿನ ಎಂದರೇನು? ನಲ್ವತ್ತು ವರ್ಷಕಾಲ ಇರಬೇಕು ನೀವು" ಎಂದರು ಅವರು.

"ಇದ್ದೇನು ಮಾಡಬೇಕು.... ಎಂದು ನೀನು ನನಗೆ ಹೇಳಿದರೆ, ನಾನು ಯೋಚನೆ ಮಾಡುತ್ತೇನೆ" ಎಂದು ಹೇಳಿ ನಕ್ಕರು.

ಇನ್ನೊಮ್ಮೆ ನಾನೂ ಅಜ್ಜಿಯೂ ಕಟ್ಟೆಯಲ್ಲಿ ಕುಳಿತಾಗ, ನಾರಾಯಣ, ರಾಮದಾಸ, ಅನಂತ ರಾಯರೊಡನೆ ಬಂದು ಕುಳಿತರು. ಬಂದುದೇಕೆಂದು ಅವರಿಗೆ ಗೊತ್ತು. ಅಜ್ಜಿ ಅವರನ್ನು ಮಾತನಾಡಿಸುವುದಕ್ಕೇ ಹೋಗಲಿಲ್ಲ. ನಾನು ಇವರೊಡನೆ ನಡೆಸುತ್ತಿದ್ದ ಒಂದು ಸಂಭಾಷಣೆ ಅಲ್ಲಿಗೇ ನಿಂತಿತು. ನಾರಾಯಣ ಮನೆಯ ಚಾವಡಿಯಲ್ಲೇ ಕುಳಿತು ಮಾತನಾಡಬಹುದಾಗಿದ್ದ ಚರ್ಚೆಯನ್ನು ಅಲ್ಲಿಯ ತನಕವೂ ತಂದ. ತನ್ನ ಸ್ನೇಹಿತನೊಡನೆ "ಈಗ ನಿನ್ನ ಅಭಿಪ್ರಾಯದಲ್ಲಿ... ಗೃಹಸ್ಥ ಜೀವನಕ್ಕಿಂತಲೂ ಸನ್ಯಾಸ ಮೇಲು ಎಂದಲ್ಲವೇ, ಸಂಸಾರ ಒಂದು ಬಂಧನ ಅಂತಲ್ಲವೇ, ನನಗೂ ಹಾಗೆಯೇ ಕಾಣಿಸುತ್ತದೆ" ಎಂದ.

ನಾನು ಬಾಯಿ ತುರಿಕೆಗೆ "ನಿನಗೆ ಕಳೆದ ವರ್ಷವೇ ಅದು ಗೊತ್ತಾಗಿದ್ದರೆ ಒಂದು ಮದುವೆ ಖರ್ಚಾದರೂ ಉಳಿಯುತ್ತಿತ್ತು" ಎಂದೆ. ಕೇಳಿ, ಸುಮ್ಮನೆ ಕುಳಿತಿರಬಹುದಾಗಿದ್ದ ಆ ಅನಂತರಾಯರು, ನಮ್ಮ ಅಜ್ಜಿಯನ್ನು ಕೆಣಕಬೇಕೆಂತಲೇ "ಏನು ಅಜ್ಜಮ್ಮ, ನಿಮಗೆ ಹೇಗೆ ಕಾಣಿಸುತ್ತದೆ? ನೀವು ಪ್ರಾಯ, ಅನುಭವ ಇದ್ದವರು, ಬಲ್ಲವರು" ಎಂದು ಚುಚ್ಚಿದ.

ಅಜ್ಜಿ ಅದನ್ನು ಕೇಳಿ ಥಟ್ಟನೆ ನಕ್ಕರು "ನಾನೂ ಒಬ್ಬಳು ಬಲ್ಲವಳಾದರೆ ಇನ್ನೇನಂತೆ? ವಯಸ್ಸಾಗಿದೆ, ನಿಜ. ನೋಡು, ಈ ಅಶ್ವತ್ಥ ಮರಕ್ಕೆ ನನ್ನ ನಾಲ್ಕು ಪಾಲು ಪ್ರಾಯವಾಗಿದೆ. ಅದು ಮಾತನಾಡುವುದಿಲ್ಲ; ನಾನು ಮಾತನಾಡುತ್ತೇನೆ; ಇಷ್ಟೇ ವ್ಯತ್ಯಾಸ" ಎಂದರು.

"ಅದಕ್ಕೇ ಬಂದೆವು, ನಿಮ್ಮನ್ನು ಮಾತನಾಡಿಸಿ ಹೋಗುವ ಎಂದು."

"ಯಾವ ವಿಷಯದಲ್ಲಿ?"

ಈಗ ಮಾತನಾಡುತ್ತಿದ್ದ ವಿಷಯವೇ- ಸಂಸಾರ, ಸತ್ಯ, ಮಾಯೆ, ಧರ್ಮ-ಇಂಥ ಯಾವುದಾದರೂ ಸರಿಯೆ.

"ಯಾರಿಗೆ ಬೇಕಾಗಿ?"

"ನನಗೆ ಅಂತಲೇ ತಿಳಿದುಕೊಳ್ಳಿ" ಎಂದರು ಅನಂತ ರಾಯರು.

"ನೀನು ತಿಳಿದುಕೊಂಡಿದ್ದೀ ಅಂತ ನಿನ್ನ ತಲೆಯಲ್ಲಿದೆ."

"ಹಾಗೇನಿಲ್ಲ, ಅಜ್ಜಿ."

“ಇದೆ- ಎಂಬುದು ನನಗೆ ಗೊತ್ತು. ಈ ಸಂಸಾರ ಹಾಗೆ, ಹೀಗೆ. ಹೆಣ್ಣು, ಗಂಡು ಅಸಹ್ಯ ಅಂತ ನೀನು ತಿಳಿದುಕೊಂಡಿದ್ದೀಯ. ಹಾಗೆ ತಿಳಿದುಕೊಂಡವರು ಹಲವರುಂಟು. ಹಿಂದಿನವರೂ ತಿಳಿದುಕೊಂಡಿದ್ದರು. ಅದೇ ನಿಜವೆಂದು ನಂಬಿ, ನಾವೂ ಹಾಗೆ ತಿಳಿದುಕೊಳ್ಳುತ್ತೇವೆ. ಆದರೆ ಮಾತ್ರ ಅದರಲ್ಲಿ ಒಂದು ಪ್ರಾಮಾಣಿಕತನ ಇರಬೇಕು. ನಂಬಿದ್ದನ್ನು ತಿಳಿದುಕೊಂಡು, ಅದರಂತೆ ಬಾಳುವಂಥ ಬುದ್ಧಿ ಇರಬೇಕು. ಆ ಬುದ್ಧಿಯೇ ಇಲ್ಲದೆ, ಬರಿದೆ ಮಾತಾಡಿದರೆ ಏನು ಚಂದ? ನಿನಗೆ ‘ಹೆಣ್ಣು ಅಸಹ್ಯ’ ಎಂತ ಕಾಣಿಸಬಹುದು. ಅದು ಬೇಡವಾದರೆ ಬಿಡು. ಆದರೆ, ಹೆಣ್ಣಿನೊಡನೆ ಆಡುವ ಆಟವನ್ನು ಗಂಡಿನೊಡನೆ ಆಡುವವರಿಗೆ ಅಷ್ಟೆಲ್ಲ ಅಧಿಕಪ್ರಸಂಗ ಯಾತಕ್ಕೆ-ಅಂತ ಕಾಣಿಸುತ್ತದೆ ನನಗೆ. ಈ ಅಜ್ಜಿ ಕುರುಡಿಯೇನಲ್ಲ. ಅವಳಿಗೂ ಹೊರಗಣ್ಣು ಕಾಣಿಸುತ್ತದೆ. ಒಳಗಣ್ಣೂ ಏನೇನೋ ಹೇಳುತ್ತದೆ. ಶಿವಮೊಗ್ಗೆಯಿಂದ ಒಂದು ಮಾಣಿಯನ್ನು ಇಲ್ಲಿಯ ತನಕ ಕಟ್ಟಿಕೊಂಡು ಬಂದ ನೀನು, ಇಷ್ಟೆಲ್ಲ ಕುಂಬಳಕಾಯಿ ಮಾತನಾಡುತ್ತ ಯಾವ ದೇವರನ್ನು ಒಲಿಸಲಿಕ್ಕೆ ಹೊರಟಿದ್ದೀಯೋ ಕಾಣೆ.

“ಹೆಣ್ಣು, ಗಂಡು-ಕಾಮ-ಮತ್ತೊಂದು ಇವೆಲ್ಲ ಅಸಹ್ಯ ಕೆಲಸಗಳಾದರೆ, ಕೊಟ್ಟವನಿಗೆ ಅದನ್ನು ತಾನೇಕೆ ಕೊಟ್ಟೆ, ತನ್ನ ಯಾವ ಇಚ್ಛೆಯನ್ನು ಪೂರೈಸುವುದಕ್ಕೆ ಕೊಟ್ಟೆ-ಅಂತ ಗೊತ್ತಿದ್ದೀತು. ಅದು ಅಷ್ಟು ಅಸಹ್ಯವಾಗಿದ್ದರೆ ಹೆಣ್ಣು, ಗಂಡು ಹೂವನ್ನು ಸಹ ಅವನು ಸೃಷ್ಟಿ ಮಾಡುತ್ತಿರಲಿಲ್ಲ.... ಅವನೇ ಸೃಷ್ಟಿ ಮಾಡಿದ್ದು ನಿಜವಾಗಿದ್ದರೆ, ಸಾಕು, ಬಿಡು; ನನ್ನನ್ನು ನೀನು ಪರೀಕ್ಷೆ ಮಾಡುವುದು ಬೇಡ. ನಿನ್ನ ನಡತೆಯನ್ನು ಮೊದಲು ಸರಿಮಾಡಿಕೊಂಡ ಮೇಲೆ ಮತ್ತೆಲ್ಲ ಮಾತು-” ಎಂದರು.

ನನ್ನ ಮಗ್ಗುಲಲ್ಲಿಯೇ ಕುಳಿತಿದ್ದ ರಾಮದಾಸ, ನಾಚಿಕೆಯಿಂದ ಅಲ್ಲೇ ತಲೆತಗ್ಗಿಸಿದ. ಅವನಿಗೆ ಕಣ್ಣೀರು ಬಂದದ್ದಕ್ಕೆಂದು ಕಾಣಿಸುತ್ತದೆ, ಅಲ್ಲಿಂದ ಹೊರಟೇ ಹೋದ.

ಸುದೈವಕ್ಕೆ, ಮುಂದೆ ಬರಬಹುದಾಗಿದ್ದ ಅವಾಂತರವನ್ನು ನನ್ನ ಕಿಟ್ಟಣ್ಣನ ಧ್ವನಿ ತಪ್ಪಿಸಿತು; “ಅಪ್ಪಯ್ಯಾ, ಊಟಕ್ಕಾಯಿತು; ಬರಬೇಕಂತೆ” ಎಂಬ ಕರೆ ಕೇಳಿಸುತ್ತಲೇ, ನಾನು ಅಲ್ಲಿಂದೆದ್ದು ಹೊರಟುಬಿಟ್ಟೆ.